UNIVERSAL LIBRARY
OU_202218
UNIVERSAL LIBRARY

ಹೊಸ ಪೋಷಕರ ಉಪಕಾರ ಸ್ಮರಣ

೧೦೧ ರೂ. ಶ್ರೀ ಶ್ರೀ ಪರಮಹಂಸಾದಿ ಅನೇಕ ಬಿರುದಾಂಕಿತ ಶ್ರೀ ಶ್ರೀ ಲಕ್ಷ್ಮೀಶತೀರ್ಥ ಶ್ರೀಪಾದಂಗಳವರು ಕುಂಭಕೋಣ ವ್ಯಾಸರಾಜ ಮಠಾಧೀಶರು, ಹಿಂದಿನಂತೆ ಈಗ ಪುನಃ ಉಳಿದ ಹಣ ಸಹಾಯಮಾಡಿ ಪೋಷಕರಾಗಿ ಮಂಡಲದ ಕಾರ್ಯ ಸುಗಳಿತವಾಗಿ ನಡೆಯಲೆಂದು ಆಶೀರ್ವದಿಸಿ ಫಲಮಂತ್ರಾಕ್ಷತೆ ಕೊಟ್ಟವರಲ್ಲಿ ದೀರ್ಘದಂಡವತ್ತು ಅನೇಕ ವಿಜ್ಞಾಪನೆಗಳನ್ನರ್ಪಿಸುತ್ತೇವೆ.

೧೦೧ ರೂ. ಶ್ರೀಮಾನ್, ಭೀಮರಾಯರು ದೇಸಾಯಿ ಗುಮ್ಮಗೇರಿ ವಕೀಲ ಕುಷ್ಟಗಿಯವರು ಈಗ ಉಳಿದ ೭೫ ರೂ. ಸಹಾಯಮಾಡಿ ಪೋಷಕರಾಗಿ ಮಂಡಲವನ್ನು ಉತ್ತೇಜನಗೈದವರಲ್ಲಿ ನಮನಗಳು.

೧೦೧ ರೂ. ಶ್ರೀಮಾನ್, ಕೃಷ್ಣಪ್ಪನಾಯಕರು ಹರಪನಹಳ್ಳಿ ಮುಳಗುಂದ ಈ ಮಹನಿಯರು ಮೊದಲಿಗೆ ೭೫ ರೂ. ಸಹಾಯಮಾಡಿ ಈಗ ಉಳಿದ ೨೬ ರೂ. ಶ್ರೀಮಾನ್ ಶ್ರೀನಿವಾಸರಾಯರು ನವಲಗುಂದ ಇವರದ್ವಾರಾ ಸಲ್ಲಿಸಿ ಮಂಡಲಕ್ಕೆ ಚಿರಪೋಷಕರಾಗಿರುತ್ತಾರೆ ಉಭಯರ ಉಪಕಾರ ಸ್ಮರಿಸಿ ಅಭಿನಂದನೆಗಳನ್ನರ್ಪಿಸುತ್ತೇವೆ.

೨೫ ರೂ. ಮೊದಲಿಗೆ ನಮ್ಮ ಮಂಡಲದ ಪೋಷಕರಾಗಿ, ಈಗ ಪುನಃ ಮಂಡಲ ಹರಿದಾಸ ಸಾಹಿತ್ಯಮಾಲೆಗೆ ೨೫ ರೂ. ಸಹಾಯ ಮಾಡಿದ ಶ್ರೀಮಾನ್, ಗೋಪಾಲರಾವ ಕುಲಕರ್ಣಿ ಯರದಿಹಾಳ ವಕೀಲ ಚಿಂಚೋಳಿ ಇವರ ಹೆಚ್ಚಿನ ಉಪಕಾರವು.

ಶ್ರೀಮಾನ್, ರಾಘವೇಂದ್ರರಾಯರು ದೇಸಾಯಿ ಬೆದವಟ್ಟಿ ತಾ. ಯಲಬುರ್ಗಿ ಇವರು ಮಂಡಲದ ಈ ಮಹತ್ಕಾರ್ಯವನ್ನು ಅರಿತು ಪೋಷಕರಾಗುವೆವೆಂದು ಶ್ರೀ ಮಂತ್ರಾಲಯ ಪ್ರಭುಗಳ ಸನ್ನಿಧಿ ಮಂಡಲಾಧ್ಯಕ್ಷರನ್ನು ಸಂಚಾಲಕರನ್ನು ಉತ್ತೇಜನಗೈಸಿದವರ ಉಪಕಾರ ಸ್ಮರಿಸಿ, ಪೂರೈಸೆ ಶ್ರೀ ಗುರುರಾಜರನ್ನು ಪ್ರಾರ್ಥಿಸುತ್ತೇವೆ.

ಇದರಂತೆಯೇ ಸರ್ವ ಜನರು ಸಹಾಯಮಾಡಿ ಮುಂದಿನ ಮಹತ್ಕಾರ್ಯವನ್ನು ನೆರವೇರಿಸಬೇಕಾಗಿ ಪ್ರಾರ್ಥನೆ.

— ಸಂಚಾಲಕ

|| ಶ್ರೀ ಹರಿಃ ||

|| ಶ್ರೀ ಲಕ್ಷ್ಮೀ ವೆಂಕಟೇಶಾತ್ಮಕ ಶ್ರೀ ಲಕ್ಷ್ಮೀನರಸಿಂಹ ಪ್ರಸನ್ನ ||

|| ಶ್ರೀ ಗುರುರಾಜೋ ವಿಜಯತೇ ||

ಶ್ರೀ ವಿಜಯ ದಾಸಾರ್ಯಾದಿಗಳ

ಉಪಾಸನಾಭಾಗ

ಸುಳಾದಿಗಳು ೫೪ ಪದಗಳು ೨೧

ಮತ್ತು

ಶ್ರೀ ವಾಮನಪುರಾಣೋಕ್ತ ಮಾನಸಿಕ ಸ್ನಾನಸ್ತೋತ್ರ ೨. ಪಂಚರಾತ್ರಾಗಮೋಕ್ತ ಭಗವದ್ಧ್ಯಾನ ೩. ಶ್ರೀ ವ್ಯಾಸರಾಜ ಅನುಭವಕೃತ ಮಾನಸಿಕಧ್ಯಾನ
೪. ಶ್ರೀ ರಾಘವೇಂದ್ರತೀರ್ಥ ವಿರಚಿತ ಭಗವಧ್ಯಾನ
೫. ಶ್ರೀ ವ್ಯಾಸತತ್ವಜ್ಞ ವಿರಚಿತ ಕನ್ನಡಗದ್ಯ ಮಾನಸ ಸ್ಮೃತಿ

ಪ್ರಕಾಶಕ: ಶ್ರೀ ವರದೇಂದ್ರ ಸಾಹಿತ್ಯಮಂಡಲ
ಕೇಂದ್ರ ಲಿಂಗಸೂರ

ಪ್ರಕಟನೆ ೧೦ ಶಕೆ ೧೮೭೪ ಆಶ್ವಿನ ವದಿ ೭

ಶ್ರೀ ವಸುಧೇಂದ್ರ ಶ್ರೀಪಾದಂಗಳವರ ನೆನಹು.

ಬೆಲೆ : ೨—೮—೦

ಮುದ್ರಕರು: ಎಚ್. ಎಸ್. ಹೊಂಬಾಳಿ, ಹೊಂಬಾಳಿ ಪ್ರಿಂಟರ್ಸ ಗದಗ

ಹೊಸ ಪೋಷಕರ ಮಹದುಪಕಾರ

೫೦ ರೂ. ಶ್ರೀಪರಮಹಂಸೇತ್ಯಾದಿ ಬಿರುದಾಂಕಿತ ಉಡುಪಿ ಶ್ರೀ. **ಪೇಜಾವರ** ಮಠದ **ಶ್ರೀ. ವಿಶ್ವೇಶತೀರ್ಥ ಶ್ರೀಪಾದಂಗಳವರು** "ನಮ್ಮ ಮಂಡಲದ ಮಹತ್ಕಾರ್ಯಕ್ಕೆ ಪರಮ ಸಂತುಷ್ಟರಾಗಿ ಎಲ್ಲ ಗ್ರಂಥಗಳನ್ನು ಸ್ವೀಕರಿಸಿ ಚನ್ನಾಗಿ ಅವಲೋಕಿಸಿ, ಪೋಷಕರಾಗಿ ೧೦೦ರೂ. ದಲ್ಲಿ ಈಗ ೫೦ ರೂ. ಫಲಮಂತ್ರಾಕ್ಷತೆಯನಿತ್ತು ಮುಂದಿನಕಾರ್ಯ ಸಾಂಗವಾಗಿ ಜರುಗಲು ಆಶೀರ್ವದಿಸಿಧವರಲ್ಲಿ ಅನಂತ ದೀರ್ಘದಂಡವತು ಪ್ರಣಾಮಗಳನ್ನರ್ಪಿಸಿ ಮಹದುಪಕಾರ ಸ್ಮರಿಸುತ್ತೇವೆ.

೫೧ ರೂ. ಶ್ರೀಮಾನ್, **ಪಂಡಿತ ಕೋಲಾರ ರಾಮರಾಯರು ಬಿ. ಎ ಬಿ. ಎಲ್.** ಅಡ್ವಕೇಟ್ ಬಳ್ಳಾರಿ, ತರುಣರು ಲೌಕಿಕ ಧುರಂಧರರೂ ವಿದ್ಯಾವಿನಯಸಂಪನ್ನರೂ ಪರಮ ಉದಾರಿಗಳೂ, ಹರಿಭಕ್ತರೂ, ಹಿಂದೆ ನಮ್ಮ ಮಂಡಲಕ್ಕೆ ೨೫ ರೂ. ಸಹಾಯ ಮಾಡಿರುವರಲ್ಲದೆ ಈಗ ಪುನಃ ೧೦೦ ರೂ. ಕೊಡುವ ವಚನವಿತ್ತು ೫೦ ರೂ. ಕೊಟ್ಟು ಸಹಾಯಮಾಡಿರುವರಲ್ಲದೆ, ಪ್ರಚಾರಕಾರ್ಯದಲ್ಲಿ ಸ್ವತಃ ಶ್ರಮ ತೆಗೆದುಕೊಂಡು ನಮ್ಮ ಮಾಲೆಗೆ ೧೫ ಜನ ಚಂದಾದಾರರನ್ನೂ, ಮತ್ತು ಕೆಳಗಂಡ ಮಹನೀಯರನ್ನು ಪೋಷಕರನ್ನಾಗಿ ಮಾಡಿ ನಾನಾವಿಧ ಸಹಾಯವಿತ್ತವರ ಚಿರಋಣಿಯಾಗಿ ಮಹದುಪಕಾರ ಸ್ಮರಿಸುತ್ತದೆ.

೨೫ ರೂ. **ಶ್ರೀ ಕೆ. ಶ್ರೀನಿವಾಸಾಚಾರ್ಯರು** ಪ್ರೊಪ್ರೈಟರ್ ಮೀನಾಕ್ಷಿ ಭವನ ಬಳ್ಳಾರಿ, ಶ್ರೀ ಉಡುಪಿ ಪೇಜಾವರ ಮಠದ ಶಿಷ್ಯರೂ ಹರಿಭಕ್ತರೂ ತಾವು ಸಂತೋಷದಿಂದ ನಮ್ಮ ಮಂಡಲಕ್ಕೆ ಪೋಷಕರಾಗಿ ೧೦೦ ರೂ. ಕೊಡುವ ವಚನವಿತ್ತು ಸದ್ಯ ೨೫ ರೂ ಕೊಟ್ಟಿರುವ ಮಹದುಪಕಾರ ಸ್ಮರಿಸುತ್ತದೆ.

೨೫ ರೂ **ಶ್ರೀ. ಗೋಪಾಲಕೃಷ್ಣಾರ್ಯರು** ಉಡುಪಿ ಪ್ರೊಪ್ರೈಟರ್ ಆರೋಗ್ಯ ಭವನ ಬಳ್ಳಾರಿ ಇವರು ಈ ಮಹತ್ಕಾರ್ಯದಲ್ಲಿ ೨೫ ರೂಪಾಯಿ ಸಹಾಯವಿತ್ತಿರುವರು. ಮತ್ತು ಈ ಮಹತ್ಕಾರ್ಯದಲ್ಲಿ ಎಲ್ಲ ರೀತಿಯಿಂದಲೂ ನೆರವಾದ, ದಾಸವರ್ಯರ ಅಂತರಂಗಭಕ್ತರಾದ **ಶ್ರೀ. ಮೋಕಾ ಸುಬ್ಬಣಾಚಾರ್ಯರು ಪಾಪ್ಯುಲರ್‌ಗಿರಿ ಸ್ಟೋರ** ಬಳ್ಳಾರಿ ಇವರ ಮಹದುಪಕಾರವನ್ನು ಮರೆಯುವಂತಿಲ್ಲ.

— **ಸಂಚಾಲಕಮಂಡಲ**

॥ ಶ್ರೀ ಗುರುರಾಜೋ ವಿಜಯತೇ ॥

ಧ್ಯಾನೋಪಾಸನೆ ಕುರಿತು

ಭಗವತ್ ಸಾಧಕನು ಭಗವಂತನ ಸೃಷ್ಟಿ ಅರಿತು, ತಾರತಮ್ಯ ಪಂಚ ಭೇದವನ್ನು ಚನ್ನಾಗಿ ತಿಳಿದು, ತೀರ್ಥ ಕ್ಷೇತ್ರಾದಿಗಳಲ್ಲಿ ಮಿಂದು ಕ್ಷೇತ್ರ ಮೂರ್ತಿಗಳ ಸಂದರ್ಶನಮಾಡುತ್ತ, ಬಾಹ್ಯಮಲವನ್ನು ಕಳೆದು, ಸಜ್ಜನ ಸಮಾಗಮವೆಂಬ ಸಾಧನದಿಂದ ನಾನಾವಿಧವಾದ ಜ್ಞಾನಸಂಪಾದಿಸಿ ಮನೋ ನಿರ್ಮಲವಾಗಲು ಸಾಧನೆಗೈದು, ಗುರುಗಳ ಕರುಣದಿಂದ ಧ್ಯಾನೋಪಾಸನೆ ಮಾಡುತ್ತ ಆತ್ಮಸಾಕ್ಷಾತ್ಕಾರ ರೂಪ ಅಪರೋಕ್ಷ ಹೊಂದಿ, ಆ ಕರುಣಾಳು ವಾದ ಬಿಂಬನ ಸಾಕ್ಷಾತ್ ಪ್ರಸಾದದಿಂದ ಮೋಕ್ಷ ಹೊಂದುವದು. ಆದರೆ ಇದು ಸಾಧಿಸುವದು ದುರ್ಲಭ.

ಹೀನಾಶ್ರಯ ಕಾಮಕ್ರೋಧಾದಿ ವರ್ಜನ

ಏಕೆಂದರೆ " ತಮೋಗುಣವೆಂಬ ಹೀನಾಶ್ರಯದಿಂದ ಕಾಮವೆಂಬು ವಂಥ ಗಹನ ಅರಣ್ಯದಿ ಬಿಟ್ಟು, ಆ ಮಹಾ ಕ್ರೋಧವೆಂಬ ವ್ಯಾಘ್ರ ಬಾಧಿಸು ತಿರಲು, ವ್ಯಾಮೋಹವೆಂಬುವಂಥ ವರಹ ಬೆನ್ನಟ್ಟಿ, ನೇಮದಿಂದ ಲೋಭ ಸರ್ಪ ನುಂಗುತಲಿದೆ. ಆ ಮದವೆಂಬುವಂಥ ಅಷ್ಟಗಜಂಗಳು, ಪ್ರೇಮವ ಲಂಘಿಸಿದರೂ ಬಿಡದೆ ಬೆನ್ನಟ್ಟುತಲಾಗಿ, ಕಮಾತ್ಸರ್ಯದ ಕಂಟಕಗಳು ನಟ್ಟು ಭೀಮರೂಪವಾದ ಮಾಯಾಂಧಕಾರದೊಳಗೆ ಈ ಮನವೆಂಬುವ ವೃಶ್ಚಿಕ ಸ್ಪರಿಶದಿ, ದಾಮರೂಪವಾದ ಅಜ್ಞಾನಪಾಶದಿ, ಸಮಸ್ತ ಕರಚರಣಾದಿ ದೇಹವಕಟ್ಟಿ, ಸ್ತ್ರೀಮ ವೈರಿಗಳೆಲ್ಲ ಬಾಧ ಬಡಿಸುತ್ತಿರಲು, ಈ ಮಹಾಪ್ರತಿಬಂಧ ತೊಲಗಿಪರಾರೋ? ಪ್ರೇಮದಿ ನೀನೆ ಎಂದು ಎಷ್ಟು ಕೂಗಿದರು ಸಾಮಜರಕ್ಷಕ ಸುಮ್ಮನಿರುವದು, ಭೂಮಂಡಲದಲ್ಲಿ ಧರ್ಮ ಪದ್ಧತಿ ಏನೋ ? ತಾಮರಸನಯ್ಯಾ ಗುರು ವಿಜಯವಿಠಲರೇಯ ಧಾಮ ಸೇರಿಪ ಭಾರ ನಿನ್ನದಯ್ಯಾ. "

ಹೀಗೆ ಮೊದಲಕಲ್ಲ ದಾಸಾರ್ಯರು ಅಪ್ಪಣೆಕೊಡಿಸಿದಂತೆ ತನ್ನ ಆಧ್ಯಾತ್ಮ ಕಾಮಾದಿ ಅರಿಷಡ್ವರ್ಗಗಳನ್ನು ಮೊದಲು ಗೆಲ್ಲಬೇಕು. ಮತ್ತು

ದುಷ್ಟಜನರ ಸಂಗದಿಂದ ತಮೋಗುಣವರ್ಧಿಷ್ಣುವು ವಿಷಯವಾಸನಾಬಿಡದ ನಾವು ಅಪರೋಕ್ಷಿಗಳು ಅಪರೋಕ್ಷವನ್ನು ಕೊಡುವೆವೆಂದು ಅನೇಕ ಬಗೆಯಿಂದ ದ್ರವ್ಯಾದಿಗಳನ್ನು ಹರಣಮಾಡುವರು. ಕೆಲವರು ಮೇಲೆ ದಾಸ ಆಭಾಸ ಆಚಾರ್ಯರ ವೇಷವನ್ನು ಹಾಕಿ ಆಶೆಯನ್ನು ನೀಗದೇ ಸ್ತ್ರೀಯಾದಿಗಳ ಗುಂಪು ಸೇರಿಸಿಕೊಂಡು ತನು–ಮನ–ಧನ ಎನಗೊಪ್ಪಿಸಿರೆಂಬೋ ಗುರುಬೋಧನೆಯನ್ನು ಉಪದೇಶಿಸುತ್ತ ಮೋಸಮಾಡುವರು ಹಲಬರು. ಇನ್ನು ಜಿಂಹಾ ಚಾಪಲ್ಯವಿಷಯಕ್ಕೆ ಒಳ್ಳೇ ಉತ್ತಮವಾದ ಸಜ್ಜಿಗೆ ತುಪ್ಪ ಸಕ್ಕರಿ ಕೂಡಿದ ಪ್ರಸಾದ ಭಕ್ಷಣನೆವದಿಂದ ಅನೇಕ ಕಾಮುಕ ವೃತಾಚರಣೆಯ ಡಂಭಾಚಾರಯುತರಾಗಿ ಜ್ಞಾನಶೂನ್ಯರಾದಾಗ್ಯೂ ಜ್ಞಾನಿಗಳಂತೆ ನಟನೆ ಮಾಡುವ ದುಷ್ಟ ಸಹವಾಸದಿಂದ ತಮೋ ಪ್ರವರ್ತಕವಾದ ಕೆಟ್ಟಮಾರ್ಗವೇ! ಇಂಥ ತಮೋಗುಣಾಶ್ರಯದಿಂದ, ದುಷ್ಟ ಕಾಮಾದಿಗಳು ಉತ್ಪನ್ನವಾಗುವವು. ಇದೇ ಮಹಾ ಅರಣ್ಯ, ಕಾಮದಿಂದ ಕ್ರೋಧ, ಯಾವ ಶಿಷ್ಯನು ಹಣ ಇತರ ಬಯಕೆ ಪೂರೈಸದಿದ್ದರೆ ಅವನ ಮೇಲೆ ವ್ಯಾಘ್ರದಂತೆ ಕೋಪ ಇಂಥ ಕ್ರೋಧದಿಂದ ಗ್ರಸನವಾಗುವದು. ಮತ್ತು ಸಂಸಾರದಲ್ಲಿ ದಾರಾಪುತ್ರಾದಿಗಳಿಂದ ಸುಖವಿಲ್ಲ. ಹೇಯವೆಂದು ತಿಳಿದರೂ, ತುಚ್ಛ ಕಶ್ಮಲವಾದ ಮಲದಲ್ಲಿ ಮನತೆಗೆಯದ ವರಾಹವೆಂಬ ವ್ಯಾಮೋಹವು ಬೆನ್ನುಹತ್ತಿರುವದು. ದಾರಾಪುತ್ರಾದಿ ಈಷಣತ್ರಯದಲ್ಲಿ ಮನಸ್ಸಿಡಬಾರದು. ಇನ್ನು ಸರ್ಪವು ದ್ರವ್ಯವನ್ನು ತಾನು ಉಪಯೋಗಿಸದೇ ಮತ್ತೊಬ್ಬರಿಗೆ ಕೊಡದೇ ಧನ ಸಂರಕ್ಷಿಸುವಂತೆ ಲುಬ್ಧನಾಗಲು ಆಲೋಭವೆಂಬ ಸರ್ಪವು ಅರಣ್ಯದಲ್ಲಿ ನುಂಗೇ ಬಿಡುತ್ತದೆ. ಇಂಥ ಲೋಭವನ್ನು ಬಿಡಬೇಕು. ಆ ಮಹಾ ಅಡವಿಯಲ್ಲಿಪ್ಪ ಗಜಗಳಂತೆ ಧನಾದಿ ಅಷ್ಟಮದಗಳು ಮದ್ದಾನೆಯಂತೆ ಬೆನ್ನು ಹತ್ತಿರುತ್ತವೆ. ಇಂಥ ದುಷ್ಟ ಮದಾದಿಗಳನ್ನು ಬಿಟ್ಟು, ಸಜ್ಜನರಲ್ಲಿ ವಿನೀತನಾಗುವದು. ಅರಣ್ಯದಲ್ಲಿ ವ್ಯಾಘ್ರ, ವರಾಹ, ಕಾಡಾನೆಗಳ ಭಯದಿಂದ ಗತಿತಪ್ಪಿ ಚರಿಸುವಾಗ್ಗೆ ಕಾಲಿಗೆ ಮುಳ್ಳು ನಡುವ ಭಯ, ಮಧದಿಂದ ಮಾತ್ಸರ್ಯ, ಉತ್ತಮರಲ್ಲಿ ಹೊಟ್ಟೆಕಿಚ್ಚು, ಗರ್ವ ಅಹಂಕಾರವೆಂಬ ಕಂಟಕಮುಳ್ಳು ನಡುವದು, ಕಾರಣ ಮಾತ್ಸರ್ಯಾದಿಗಳನ್ನು ಬಿಡಬೇಕು. ಕಾಮ, ಲೋಭ, ಮದ ಮಾತ್ಸರ್ಯ ಗ್ರಸಿತವಾದ ವಿಹ್ವಲ ಮನಸ್ಸೆಂಬ ಚೇಳು ಕಡಿತದಿ ಅರಣ್ಯದಲ್ಲಿ

ಅಜ್ಞಾನವೆಂಬುವಂಥ ಪಾಶಬಂಧನೆಗೆ ಕಾರಣವಾಗಿ ಕೈಕಾಲು ಮುಸುಗೆ ಕಟ್ಟಿರಲು ಅರಣ್ಯದಲ್ಲಿ ಕೇಳುವರಾರು. ಸ್ವಾಮಿ ನೀನೇ ರಕ್ಷಿಸೆಂದು ಮೊರೆ ಇಡುವದು.

ಇದು ತಮೋಗುಣಾಶ್ರಯಕ್ಕೆ ಕಾರಣವಾದ ದಾಸವೇಷವನ್ನು ಹಾಕಿ ಮೋಸಗೈವರ ಪಾಶಕ್ಕೆ ಸಿಲುಕದೆ, ಕಾಮಕ್ರೋಧಾದಿಗಳನ್ನು ದೂರಟ್ಟಬೇಕು. ಮಾತ್ಸರ್ಯಾದಿಗಳನ್ನು ಬಿಡಬೇಕು.

“ ಮತ್ಸರವನು ಅಳಿದು ವೆಂಕಟೇಶನ ಯಾತ್ರೆ । ಉತ್ಸಹದಲೆ ಮಾಡೆ ವಿಜಯವಿಠ್ಠಲ ಪೊರೆವಾ ” ಎಂಬ ವಿಜಯದಾಸರ ಉಕ್ತಿಯಂತೆ.

ಸಂಸಾರವೆಂಬ ಮಹಾ ಅಡವಿಯನ್ನು ಬಹು ಎಚ್ಚರಿಕೆಯಿಂದ ದಾಟಿ ಸಜ್ಜನ ಸಮಾಗಮವೆಂಬ ಉದ್ಯಾನವನ್ನು ಪ್ರವೇಶ ಮಾಡುವದು.

ಸಜ್ಜನ ಸಮಾಗಮ

ವೈಶಾಖಮಾಸ ಬೇಸಿಗೆಯ ಬಿಸಿಲು, ಮಹಾರಣ್ಯದಲ್ಲಿ ಸಿಗಬಿದ್ದು, ಹುಲಿ, ಕಾಡಹಂದಿ, ಕಾಡಾನೆ, ಸರ್ಪ, ಚೇಳು ದಂಶ, ಕಾಲಿನಲ್ಲಿ ಮುಳ್ಳು ನಟ್ಟು ದುಃಖದಿಂದ ಬಳಲಿ, ಆ ಕಾಡಿನಲ್ಲಿ ಒಂದು ಉದ್ಯಾನವನ ದೊರೆಯೆ ಎಷ್ಟು ಆನಂದ! ಅಲ್ಲಿ ಗಗನ ಚುಂಬಿತವಾದ ಫಲಯುಕ್ತ ಅನೇಕ ವೃಕ್ಷ, ಮನೋಹರವಾದ ಕಾಸಾರ, ಮಲ್ಲಿಕಾ, ಜಾಜಿ, ಕುಸುಮಾದಿಗಳ ಪರಿಮಳ ಗಂಧ ಮೆಲ್ಲನೆಬೀಸುವ ತಂಗಾಳಿ, ಕುಸುಮಗಳ ರಸವನ್ನು ಸವಿದು ಝೇಂಕರಿಸುವ ಷಟ್ಪದಗಳು ಫಲರಸವನ್ನೀಂಟಿದ ಶುಕ, ಪಿಕ, ಹಂಸ, ಕೋಕಿಲಾದಿಗಳ ಮಂಜುಳ ಕುಕಿಲರವದಿಂದ ಮನೋನೈರ್ಮಲ್ಯವಾಗುತ್ತ, ಅರಣ್ಯದಿಂದ ಬೇಸತ್ತು ಬಂದು ಸಜ್ಜನ ಸಮಾಗಮವೆಂಬ, ಉದ್ಯಾನವನ ಕಾಸಾರದಲ್ಲಿ ಸ್ನಾನಪಾನ, ಫಲಗಳ ಭಕ್ಷಣ ಅಪರೋಕ್ಷಜ್ಞಾನಿಗಳಾದ ಭಗವದ್ಭಕ್ತರ ಶುಕ, ಪಿಕ, ಹಂಸ, ಕೋಕಿಲ ವಾಣಿಯಂತಿರುವ ಮಂಜುಳರವವಾದ ದಾಸರ ವಾಕ್ಯಗಳೆಂಬ ಅಮೃತಪಾನದಿಂದ, ತೃಪ್ತನಾಗಿ, ಅದರಲ್ಲಿ ಶ್ರೀ ವಿಜಯದಾಸರೆಂಬ ಕೋಕಿಲದ ಉಚ್ಚ ಮಂಜುಳ ಕೂಗು ಕಿವಿಗೆಬೀಳುತ್ತ ಆ ಕೋಕಿಲಾರವವನ್ನು ಪುನಃಪುನಃ ಕೇಳುತ್ತ ಮನನಮಾಡಿ ಸವಿಯುವ ಸಾಧಕನಿಗೆ

ಈ ಧ್ಯಾನೋಪಾಸನೆಯು ಕೋಕಿಲೆ ಮಂಜುಳ ಸುಸ್ವರವು ಶ್ರವಣ ಮನನ ಧ್ಯಾನಕ್ಕೆ ಉಚಿತವು.

ಸದ್‌ಗುರು ಅನುಗ್ರಹ

“ ಗುರುವಿನೊಲುಮೆಯಾಗದ ತನಕ ದೊರೆಯದಣ್ಣ ಮುಕುತಿ ” ಬ್ರಹ್ಮವಿದ್ಯಾಕ್ಕೆ ಎಂಥ ಗುರು ಬೇಕೆಂಬುದನ್ನು ದಾಸರ ಸುಳಾದಿ ೩೯–೪೦ ರಲ್ಲಿ ಬಹುಚನ್ನಾಗಿ ವಿವರಿಸಿರುವಂತೆ ಸದ್ಗುರುವಿನ ಮೊರೆಹೊಕ್ಕು ಸೇವಾ ಮಾಡಿದರೆ ಸದ್ಬುದ್ಧಿ ಹುಟ್ಟುತ್ತದೆ ಎಂಬ ವಾಯುಪುರಾಣ ವಚನಾನುಸಾರ ಹರಿಭಕ್ತರೂ ವಿಷಯದಲ್ಲಿ ವಿರಕ್ತರಾದ ಗುರುಗಳು ಮುಖ್ಯವಾಗಿ ಬೇಕು. ಗುರುವಿಲ್ಲದೆ ವಿದ್ಯಾ ಪುಸ್ತಕಗಳ ಮೇಲಿಂದ ತಿಳಿಯುವನೆಂಬುವದು, ಬಟ್ಟೆನಿಂದ ಮಕ್ಕಳ ಪುಟ್ಟಿಸುವನೆಂಬ ಯತ್ನದಂತೆಯೆ. ಮತ್ತು ನೀರಿನಲ್ಲಿ ಬೆರಳೆದ್ದಿ ಚೀಪಿದಂತೆ ನಿರರ್ಥಕ.

ಧ್ಯಾನ ಸಾಧನದ ಬಗೆ ಅದರ ಕ್ರಮ

ಏನೂ ಅರಿಯದೆ ಧ್ಯಾನಮಾಡುವೆನೆಂದು ಕಣ್ಣುಮುಚ್ಚಿ ಕುಳಿತರೆ ಬಕ ಧ್ಯಾನ. ಶ್ರೀ ವಿಜಯದಾಸರು ಪದ (೫) ಪುಟ ೧೮೬ ರಲ್ಲಿ “ ಅರ್ಚನೆ ಬಗೆ ಕೇಳಿ ಲೋಕ ಕಣ್ಣುಮುಚ್ಚಿ ಕುಳಿತರೆ ಕೊಡ ಹರಿ ಮುಕ್ತಲೋಕ ” ವೆಂದು ಚನ್ನಾಗಿ ಹೇಳಿರುವರು. ಗುರುಪ್ರಸಾದ ಮೊದಲಿಗೆ ಬೇಕು. ನಂತರ ವಿಷಯಾದಿಗಳಿಂದ ದೂರನಾಗಿ ಕುಕರ್ಮಾಚರಣೆ ಸರ್ವಥಾ ಬಿಡಬೇಕು. ವಿಹಿತಾಚರಣೆಯಿಂದ ಶ್ರವಣ ಮನನ ನಿಜ ಧ್ಯಾನರೂಪ ಸಕಲ ಶಾಸ್ತ್ರ ವಿಮರ್ಶಪೂರ್ವಕ, ಶ್ರುತಿ, ಸ್ಮೃತಿ ವಾಕ್ಯಗಳಲ್ಲಿಪ್ಪ ವಿರೋಧ ವಾಕ್ಯಗಳನ್ನು ಪರಿಹರಿಸಿ ಹರಿಯೇ ಪರನೆಂಬ ನಿಶ್ಚಯಜ್ಞಾನ ಸಂಪಾದನೆ ಬೇಕು. ಒಂದಲ್ಲ ಎರಡಲ್ಲ ಅನೇಕ ಜನ್ಮಗಳಲ್ಲಿ ಈ ಬಗೆ ಸಾಧನೆಗೈಯುತ್ತ ಗುರುಗಳಾದ ವಾಯುದೇವರು ಕೈಪಿಡಿದು ಸಾಧನ ಮಾಡಿಸಲು ಪ್ರಾರಂಭಿಸಿದರೆ, ಪುನಃ ಸಾವಿರದಾ ಹದಿಮೂರು ಜನುಮ, ನಿರಂಶಗಳಿಗೆ. ಸಾಂಶರಾದ ದೇವಗಂಧರ್ವರಿಂದ ಶತಸ್ಥರವರೆಗೆ ಹತ್ತು ಸಾವಿರದಾ ನಾಲ್ಕುನೂರು ಜನುಮಗಳಲ್ಲಿ ಸಾಧನನಂತರ ಬಿಂಬಾಪರೋಕ್ಷವೆಂದು ಶ್ರೀ ಪೂಜ್ಯ ಜಗನ್ನಾಥದಾಸಾರ್ಯರು

ಶ್ರೀ ಹರಿಕಥಾಮೃತ ಸಾರ ಕಲ್ಪಸಾಧನಸಂಧಿ. ಪದ್ಯ ೫ ರಿಂದ ೯ ರ ವರೆಗೆ ಸವಿಸ್ತರ ಅಪ್ಪಣೆ ಕೊಡಿಸಿರುವರು. ಹೀಗೆ ಸಾಧನಕಾಲ ಮರ್ಯಾದೆ. ಇದನ್ನೆಲ್ಲ ಬಿಟ್ಟು ಕಣ್ಣುಮುಚ್ಚಿ ಸ್ತ್ರೀಯರ ಕೂದಲು, ವೈಬಂಣಗಳನ್ನು ಅರಿಗಣ್ಣಿನಿಂದ ನೋಡುತ್ತ ವಿಷಯಾದಿಗಳಲ್ಲಿ ಬಿದ್ದರೆ ಹೇಳುವದೇನು ? ಅವರಿಗೆಂಥ ಅಪರೋಕ್ಷ, ಕಪಾಳ ಮೋಕ್ಷ! "ಗೇಣು ಮುಂದಕೆ, ಸಾಗೆ ನೂರ್ಗಾವುದ ಹಿಂಧಾಕುತಿದೆ ಏನು ಹೇಳಲಿ ಎನ್ನ ಕರ್ಮ" ಎಂಬ ಬಾದರಾಯಣ ವಿಠಲರ ವಚನ. ವಿಷಯದಿಂದ ದೂರನಾದ ಹರಿಯನ್ನು ವಿಷಯ ತ್ಯಜಿಸಿ ಭಜಿಸಲು ವಶನಾಗುವನು. ಕಾಮಾದಿ ವಿಷಯಗಳಲ್ಲಿ ಮುಳುಗಿದವನಿಗೆ ಅಪರೋಕ್ಷ, ವಿಷಯುವೇ ವಿಷಸಮಾನ.

ಈ ಗ್ರಂಥಸಂಕಲನ ಕ್ರಮ

ಶ್ರೀ ವಿಜಯದಾಸರು ಸಾಧಕರಾದ ಭಕ್ತರ ಮೇಲೆ ಪರಮಾನುಗ್ರಹ ಮಾಡಿರುವರು. ಉಪಾಸನೆಗೆ ಅನುಕೂಲವಾದ ಕೆಲ ಸುಳಾದಿಗಳನ್ನು, ತಾರತಮ್ಯ ಸುಳಾದಿಯಲ್ಲಿ ಕೆಲ ಸುಳಾದಿಗಳನ್ನು ಸೃಷ್ಟಿಪ್ರಕರಣ ಸುಳಾದಿಯಲ್ಲಿ ಮೊದಲಿಗೆ ಕೊಟ್ಟಿದೆ. ಈ ಉಪಾಸನಾಭಾಗ ಸುಳಾದಿಯಲ್ಲಿ ಶ್ರೀ ವಿಜಯದಾಸರ ಸುಳಾದಿ (೪೫) ಶ್ರೀ ಗೋಪಾಲದಾಸರವು (೬) ಸುಳಾದಿ, ರಾಮಚಂದ್ರ ವಿಠ್ಠಲರದು (೧) ಶ್ರೀ ಪ್ರಾಣೇಶ ವಿಠ್ಠಲರದು (೧) ಹೀಗೆ ೫೪ ಸುಳಾದಿಗಳನ್ನು ೨೧ ಪದಗಳನ್ನು ಮತ್ತು ಈ ಸುಳಾದಿಗಳಿಗೆ ಮೂಲಾಧಾರವಾದ, ಪ್ರಮಾಣಗಳು.

೧. ವಾಮನ ಪುರಾಣೋಕ್ತ ಮಾನಸಾಧ್ಯಾನ ಸ್ನಾನ.

೨. ಪಾಂಚರಾತ್ರಾಗಮೋಕ್ತ ಭಗವಧ್ಯಾನ.

೩. ಶ್ರೀ ವ್ಯಾಸರಾಜ ಅನುಭವಕೃತ ಮಾನಸಿಕಧ್ಯಾನ.

೪. ಶ್ರೀ ರಾಘವೇಂದ್ರ ತೀರ್ಥಕೃತ ಭಗವಧ್ಯಾನ.

೫. ಶ್ರೀ ವ್ಯಾಸತತ್ವಜ್ಞರು ಸ್ವತಃ ಪ್ರಮಾಣಪೂರ್ವಕವಾಗಿ ಸಂಸ್ಕೃತದಂತೆ ಬರೆಸಿದ ಕನ್ನಡಗದ್ಯರೂಪವಾದ ಮಾನಸಸ್ಮೃತಿ ಈ ಹಳೇ ಪ್ರತಿ ಬಾಲಬೋಧ ಲಿಪಿಯಲ್ಲಿ ೨೫ ಪುಟ ೫೦ ಪತ್ರದಲ್ಲಿ ಬಹು ಪೂರ್ವದಲ್ಲೇ ಬರ

ದದ್ದು ಸೋಮಪುರ ದಾಸರಲ್ಲಿ ದೊರೆತದೆ. ಶ್ರೀ ಶ್ರೀವ್ಯಾಸತತ್ವಜ್ಞ ಸ್ವಾಮಿಗಳವರೇ ಸಂಸ್ಕೃತಮಾನಸ ಸ್ಮೃತಿಯಂತೆ ಕನ್ನಡದಲ್ಲಿ ಶಿಷ್ಯರಿಗೋಸ್ಕರ ಬರೆಸಿದ್ದೆಂದು ತೋರುತ್ತದೆ. ಶುದ್ಧಪ್ರತಿ ಇದೆ. ಈ ಪಂಚರತ್ನಗಳನ್ನು ಸಹ ಇದರಲ್ಲಿ ಕೊಟ್ಟಿದೆ. ಈ ಗ್ರಂಥಗಳು ಲಭಿಸಿದ್ದು ಪುಣ್ಯವೇಸರಿ.

ಮೊದಲಿಗೆ ಕನ್ನಡ ಗದ್ಯರೂಪಾತ್ಮಕ ಶ್ರೀ ವ್ಯಾಸರಾಜಕೃತ ಧ್ಯಾನಾನುಭವ, ಶ್ರೀ ವ್ಯಾಸತತ್ವಜ್ಞಕೃತ, ಮಾನಸಸ್ಮೃತಿ ಚನ್ನಾಗಿ ಅವಲೋಕಿಸಿ ಗುರುಗಳಿಂದ ತಿಳಿದು ನಂತರ ಸುಳಾದಿಗಳನ್ನು ನೋಡಿದರೆ ಸರಿಯಾಗಿ ಅರ್ಥವಾಗುವದು. ಅನೇಕ ವಿಭಾಗಗೈಸಿದೆ.

ಮೊದಲಿಗೆ ಧ್ಯಾನವೆ ಮುಖ್ಯವೆಂಬ (೪) ಸುಳಾದಿಗಳನ್ನು ಅರಿಯಬೇಕು. ನಂತರ "ಸಾಮಾನ್ಯಧ್ಯಾನವಿದು" ಎಂಬ ಸುಳಾದಿ (೯) ರಲ್ಲಿ ವಿವರಿಸುವಂತೆ, ಸಾಧಕನು ವಿಷಯಾದಿಗಳಿಂದ ದೂರನಾಗಿ, ಕಾಮುಕ್ರೋಧಾದಿಗಳನ್ನು ಅಳಿದು, ನಿಯಮವಾದ ಅಲ್ಪವಾದ ಸಮೀಚೀನ ಭೋಜನ, ನಿಯಮವಾದ ನಿದ್ರಾ, ಸ್ವಾಮಿಭೃತ್ಯಭಾವ ಸಂತತನೆಸಗುತ್ತ ಉಪಾಸನೆ ಕ್ರಮ, ಆ ಮೆಟ್ಟಿಲುಗಳು ಗುರುದ್ವಾರಾ ಅರಿತು ಉಪಾಸನೆ ಮಾಡುವದು. ಶ್ರೀ ಗೋಪಾಲದಾಸರಪದ ೧೬ ಪುಟ ೨೦೧, ಧ್ಯಾನಮಾಡು ಮನವೆ ಬಿಂಬ ಮೂರುತಿಯ ಎಂಬ ಪದದಲ್ಲಿ ಉಪಾಸನೆ ಕ್ರಮವನ್ನು ಮನದಟ್ಟವಾಗುವಂತೆ ಹೇಳಿರುವರು. ಹೀಗೆ ಕ್ರಮವರಿತು ಆಚರಿಸಿದರೆ ಉಪಾಸನಾ ಮಾಡಲು ಅಧಿಕಾರಿಯಾಗುವನು.

ಉಪಾಸನೆ ಎಂದರೆ ಸ್ವಾಮಿ ಎದುರಿಗೆ ಇರುವದು ಸೇವಾ (ಸರವ್ಹೀಸ), ವರಶಿಪ್ (Worship) ಪೂಜಾ, ಎಡವರೇಶನ್ (Adoration) ಧ್ಯಾನ, ಡಿವೋಷನ್ (Devotion) ಧ್ಯಾನದಲ್ಲಿ ಮಗ್ನನಾಗುವದು. ಪ್ರ್ಯಾಕ್ಟೀಸ್ ಇನ್ ಅರ್ಚರಿ (Archery) ಹೀಗೆ ಅನೇಕ ಅರ್ಥ, ಅಭಿಪ್ರಾಯೊಂದ ಇರುವದು. ಭಗವಂತನನ್ನು ಸಮೀಪಮಾಡಿಕೊಳ್ಳಲು ಏಕಾಗ್ರಚಿತ್ತತೆಯಿಂದ, ವಿಷಯಾದಿಗಳಿಂದ ದೂರನಾಗಿ, ಏಕಾಂತದಲ್ಲಿ ಆಸನದಲ್ಲಿ ಕುಳಿತು ಧ್ಯಾನ ಮಾಡುವದು.

ಧ್ಯಾನೋಪಾಸನೆ ಸಾಂಗಕ್ರಮ

ಗುರುಗಳಿಗೆರಗಿ, ಸ್ಥೂಲದೇಹ ಅಂಗ ಉಪಾಂಗ ಸಪ್ತಧಾತುಗಳಲ್ಲಿಪ್ಪ ಕಾರ್ಯರೂಪಗಳನ್ನು ಸ್ಮರಿಸಿ, ಅರಿಷಡ್ವರ್ಗಗಳನ್ನು ಗೆಲ್ಲಲು, ಆ ಭಗವಂತನ ರೂಪಧ್ಯಾನ, ಗಾಯತ್ರಿಪ್ರತಿಪಾದ್ಯನಧ್ಯಾನ, ಸದ್ಬುದ್ಧಿಕೊಡಲು ಪ್ರಾಣಾಗ್ನಿಹೋತ್ರದಿಂದ ರಸವಿಭಾಗಮಾಡುವ ಪಂಚಪ್ರಾಣಾಂತರ್ಯಾಮಿ ಅನಿರುದ್ಧಾದಿ ೫ ಮೂರ್ತಿಗಳಧ್ಯಾನ. ನಂತರ ವಿಷಯಾದಿಗಳಿಂದ ದೂರನಾಗಿ ಮನೋನಿಗ್ರಹಕ್ಕೆ ದೇಹಾಖ್ಯರಥದಲ್ಲಿ ಸಾರಥಿಯಾಗಿಪ್ಪ ಮನೋಭಿಮಾನಿ ಸಾರಥಿಯಾದ ಮಹರುದ್ರದೇವರಧ್ಯಾನ, ನೇತ್ರಶೋತ್ರ ವಿಷಯಾದಿ ಹಯಾಕಾರವಾದ ಇಂದ್ರಿಯಗಳಿಗೆ ನಿಯಮನಮಾಡುವ ಸೂರ್ಯ-ಚಂದ್ರ ತದ್ಧಾರ್ಯರ ಅನುಗ್ರಹ, ಇವರಿಗೆಲ್ಲ ಕಡಿವಾಣರೂಪದಿಂದ ನಿಯಮನಮಾಡುವ ಬುದ್ಧ್ಯಭಿಮಾನಿ ಉಮಾ, ತತ್ಪತಿ ಮನೋರೂಪವಾದ ಮಹರುದ್ರಾಂತರ್ಯಾಮಿ ಪ್ರಾಣಪತಿರೂಪ ಹೀಗೆ ಧ್ಯಾನಮಾಡುತ್ತ, ದೇಹದಲ್ಲಿರುತಿಪ್ಪ ಬ್ರಹ್ಮನಾಡಿ ಪಂಚಪ್ರಭೇದವಾಗಿರುವ ವಿವರ ಅಲ್ಲಿಪ್ಪ ೩೨ ಕಮಲಗಳ ವಿಚಾರ. ನಂತರ ಇಡಾಪಿಂಗಳಾಂಶದಿಂದ ೭೨೦೦೦ ಸಾವಿರ ನಾಡಿಕ್ರಮ. ಅಲ್ಲಿಪ್ಪ ಹರಿಮೂರ್ತಿಧ್ಯಾನ. ಪಿತೃಯಾನ, ದೇವಯಾನ, ಬ್ರಹ್ಮಯಾನ ಮಾರ್ಗಕ್ರಮಪೂರ್ವಕ, ಗರುಡಶೇಷಮಾರ್ಗ, ದೇಹದಲ್ಲಿಪ್ಪ ದೇವತೆಗಳ ಲಯಕ್ರಮದಿಂದ ಹೃದಯದಲ್ಲಿಪ್ಪ ಬಿಂಬನಲ್ಲಿ ಐಕ್ಯಚಿಂತನೆ.

ನಂತರ, ಹೃತ್ಪದ್ಮಲ್ಲಿಪ್ಪ ಶತಸ್ತಂಭ ಮಂಟಪ, ಆ ಮಂಟಪಕ್ಕೆ ಶ್ರೀಭೂದುರ್ಗಾ ಭಾಗದಲ್ಲಿ ಚತುರ್ದಿಕ್ಕಿನಲ್ಲಿಪ್ಪ ೧೨ ಊರ್ಧ್ವದ್ವಾರ (೧) ರಲ್ಲಿಪ್ಪ ದ್ವಾರಪಾಲಾದಿಗಳಧ್ಯಾನ, ಹೃತ್ಕಮಲ ಕರ್ಣಿಕೋಪರಿ ಸೂರ್ಯ–ಚಂದ್ರ ಅಗ್ನಿಮಂಡಲ ತದುಪರಿ ಸ್ಥೂಲ ಬಿಂಬನಾದ ಅಗ್ರೇಶ, ಪ್ರಾದೇಶ ಮೂಲೇಶರ ಧ್ಯಾನಾದಿ, ಮೂಲೇಶ ಪಾದಾಶ್ರಯ ಮುಖ್ಯ ಪ್ರಾಣನ ಪಾದಾಶ್ರಯನಾಗಿ ಅನಿರುದ್ಧ ಲಿಂಗದೇಹ ಸಹಿತನಾಗಿಪ್ಪ ಸೂಕ್ಷ್ಮನಾದ ಜೀವನಿರುವಿಕೆ, ಜೀವನಲ್ಲಿಪ್ಪ ಹರಿರೂಪಗಳ, ಜೀವನಸ್ವರೂಪ ಸೂಕ್ಷ್ಮ ಶ್ವೇತಹೃತ್ಪದ್ಮದಲ್ಲಿಪ್ಪ ಬಿಂಬನ ಲಕ್ಷಣ, ಜೀವನು ಪ್ರತಿಬಿಂಬನು ಹೇಗೆಂಬ ಭಾವವನ್ನು ಬಹು ವಿಸ್ತಾರವಾಗಿ ಶ್ರೀವಿಜಯಗೋಪಾಲದಾಸರು ವರ್ಣಿಸುವಂತೆ, ಶ್ರೀಪ್ರಾಣೇಶ

ದಾಸರು "ಹೃದಯಮಂದಿರ ವಿವರ"ವೆಂಬ ಪದ (೨೧) ಪುಟ ೨೪ ರಲ್ಲಿ ಮತ್ತು ಸುಳಾದಿಯಲ್ಲಿ ಬಿಂಬರೂಪನ ವರ್ಣನೆ ಸಂಕ್ಷಿಪ್ತವಾಗಿ ಮನದಟ್ಟಾಗುವಂತೆ ವರ್ಣಿಸಿರುವರು ಇಂಥ ಜೀವಾಂತರ್ಯಾಮಿ ಜೀವನ ಶ್ವೇತ ಹೃತ್ಪದ್ಮ ವಿಶಿಷ್ಟನಾದ ಬಿಂಬನೇ ಕಾರಣ ತದನಂತರದಲ್ಲಿ ಲಿಂಗ ಅನಿರುದ್ಧದಲ್ಲಿ ಕಾರ್ಯಮಾಡುವ ರೂಪಗಳನ್ನು, ಇದರಂತೆ ಸ್ಥೂಲ ಹೃದಯಾರಸ್ತ್ರಾಂಬುಜ ಅಷ್ಟಪತ್ರದಲ್ಲಿ ಅಂಶಾಂಶದಿಂದ ಧೇಸಿಸುವ ಕ್ರಮ. ಬಿಂಬ ಪ್ರತಿಬಿಂಬಭಾವ ಅನೇಕ ಸುಳಾದಿ ಪದಗಳಲ್ಲಿ ಅಪರೋಕ್ಷ ಜ್ಞಾನಿಗಳು ವರ್ಣಿಸಿರುವರು. ಇದನ್ನರಿಯುವದು ಆ ಬಿಂಬನ ನೋಡಲು ಸಾಧನ, ಹೃತ್ಪದ್ಮ ಅಂತಃಸಂಕುಚಿತ ಪತ್ರವಾಗಿಪ್ಪ ಅಧೋಮುಖವಾಗಿದ್ದುದನ್ನು ಮಿಹಿರಾ ಎಂಬುವ ಜ್ಞಾನಾರ್ಕದಿಂದ ಎತ್ತಿ ಅರಳಿಸುವ ಕ್ರಮ, ಪ್ರಾಣಾಯಾಮ ಪ್ರತ್ಯಾಹಾರಾದಿಗಳಿಂದ ಗುರುಗಳ ಕರುಣವಾದರೆ ಆಗಬೇಕು.

ಈ ತರುವಾಯ ವಿಮಾನಾವಳಿ ಸಂಕುಲದಿಂದ, ಆರೋಹಣ ಕ್ರಮದಿಂದ ತನ್ನ ಬಿಂಬನೇ ದೇಹದಲ್ಲಿಪ್ಪ ದೇವತೆಗಳ ಅಂಶಾಂಶದಲ್ಲಿರುವನೇ, ಸಮಸ್ತ ಪಂಚಭೂತಾತ್ಮಕ ಸ್ಥಳ, ವನ, ನದಿ, ಗಿರಿ, ಗಂಹ್ವರ, ಸಪ್ತದ್ವೀಪ, ಸಪ್ತಸಮುದ್ರ, ಶ್ವೇತದ್ವೀಪ, ಅನಂತಾಸನಾದಿಯಲ್ಲಿಪ್ಪ ಹರಿಮೂರ್ತಿಗಳಲ್ಲಿ ಐಕ್ಯಚಿಂತನ, ನಂತರ ಅಧಃಪಾತಾಳಾದಿ ಗರ್ಭೋದಕ, ವಾಯು, ವಿಷ್ಣು, ಕೂರ್ಮ, ಮಾಂಡೂಕ ರೂಪಗಳಲ್ಲಿ ಐಕ್ಯ ಚಿಂತಿಸುತ್ತ, ಪುನಃ ಶ್ವೇತದ್ವೀಪಗತ ಹರಿಮೂರ್ತಿಧ್ಯಾನ, ಅಂತರಿಕ್ಷಸ್ಥ, ಮೇಘಮಂಡಲಾರಂಭಿಸಿ, ಸೂರ್ಯಚಂದ್ರಾದಿ, ಧ್ರುವಮಂಡಲ ಪರಿಯಂತ ನಿಯಮನ ಮಾಡುವ ಕಾಲರೂಪಗಳ ಐಕ್ಯ ಚಿಂತಿಸಿ ಮೇಲಿನ ಸ್ವರ್ಗಾದಿ ಊರ್ಧ್ವ ಮಹ ಜನೋ ತಪೋ ಸತ್ಯಲೋಕಗಳ ಕ್ರಮ, ಅಲ್ಲಿಪ್ಪ ಹರಿಮೂರ್ತಿಗಳಲ್ಲಿ ಐಕ್ಯ ಚಿಂತನ, ನಂತರ ವೈಕುಂಠದಲ್ಲಿಪ್ಪ ನಾರಾಯಣ, ಖರ್ಪರ ಬಹಿರ್ಬ್ರಹ್ಮಾಂಡಾದಿ ನವಾವರಣದಲ್ಲಿಪ್ಪ, ಮೇಲೆ ವಾಸುದೇವಾದಿ ಆವರಣದಲ್ಲಿಪ್ಪ ಹರಿಮೂರ್ತಿಯೊಡನೆ ಐಕ್ಯ ಚಿಂತಿಸಿ, ಶ್ರೀ ಹರಿಯಮಹದ್ರೂಪಕ್ಕೆ ಷೋಡಶೋಪಚಾರ ಪೂಜಾ, ನಂತರ ಅವರೋಹಣ ಕ್ರಮದಿಂದ, ಕ್ರಮವಾಗಿ ಮೇಲೆ ಹೇಳಿದಂತೆ ಅದೇ ರೀತಿಯಿಂದ ಪುನಃ ಶ್ವೇತದ್ವೀಪ ಪರಿಯಂತರ

ವಾಗಿಯೂ ಆ ಆ ಅಂಶಗಳನ್ನು ತಂದು ನಿಲ್ಲಿಸಿ, ಪುನಃ ಹದಿನಾರು ಪೂಜಾದಿಗಳಿಂದ, ವಾಯು ಸೂರ್ಯಾದಿಮಂಡಲ, ಸಪ್ತದ್ವೀಪ, ಸಪ್ತಸಮುದ್ರ, ಭಾರತ ವರ್ಷಕ್ಕೆ ಬಂದು ಸಕಲ ಕ್ಷೇತ್ರಸ್ಥ ಮೂರ್ತಿಗಳ ಚಿಂತಿಸುತ್ತ ಶ್ರೀ ವೆಂಕಟೇಶನೇ ಮದ್ಬಿಂಬನೆಂಬ ಭಾವನೆಯಿಂದ, ಸ್ವಗುರು ಮೂರ್ತಿಯಲ್ಲಿ ತಂದು ನಿಲ್ಲಿಸಿ ಆ ಸ್ವಗುರುಗತನಾದ ಅಂಶವನ್ನು ತನ್ನ ಸ್ಥೂಲಕಳೇವರದಲ್ಲಿಪ್ಪ ದೇವತೆಗಳಲ್ಲಿಪ್ಪ ಹರಿಯ ರೂಪಕ್ಕೆ ಐಕ್ಯ ಚಿಂತಿಸುತ್ತಾ ಹೃತ್ಪದ್ಮಕರ್ಣಿಕೆಯಲ್ಲಿಪ್ಪ ಸ್ಥೂಲಬಿಂಬನ ಪೂಜಾ, ಇದು ಮೊದಲನೇ ಮೆಟ್ಟಲು. ನಂತರ ಅಧಿಕಾರ ವಿವಕ್ಷಾ ಚಿತ್ರವಿಚಿತ್ರ ಉಪಾಸನೆ ಸುಳಾದಿಗಳಲ್ಲಿ ವರ್ಣಿಸಿರುವಂತೆ ಗುರುಗಳಿಂದ ಅರಿಯಬೇಕು. ಶ್ರೀ ವ್ಯಾಸರಾಜರು ತ್ರಿಬಗೆಯಾಗಿ ಬಹುಚನ್ನಾಗಿ ಅವಸ್ಥಾಭೇದದಿಂದ ವರ್ಣಿಸಿ ಆಜ್ಞಾಪಿಸಿರುವರು. ಗುರುಕೀಲಿಯಿಂದ ಅಂತರಂಗದ ಕದವು ತೆಗೆಯಬೇಕು. ಗುರುಗಳೇ ಮುಖ್ಯಗತಿ. ಅಲ್ಲಿಂದ ಇವನ ಸಾಧನ ಸಂಪತ್ತು ಉಕ್ತಜನುಮಗಳಲ್ಲಿ ಆಯಿತೆಂದರೆ, ನಿಯತವಾದ ನೀತ ಗುರುಗಳ ಉಪದೇಶದಿಂದ ಜೀವಾಂತರ್ಯಾಮಿ ಬಿಂಬಾಪರೋಕ್ಷ. ಇದೇ ಉಪಾಸನೆ ಕ್ರಮ ಸಂಕ್ಷಿಪ್ತವಾಗಿ ಶ್ರೀ ದಾಸರು ತಿಳಿಸಿದಷ್ಟು ಮುಂದಮತಿಯಿಂದ ಬರೆಸಿಷ್ಟು ಬರೆದುದು ಸಜ್ಜನರಿಗೆ ಸಾಧನಕ್ಕೆ ಅನುಕೂಲ.

" ಶ್ವೇತದ್ವೀಪಗತೋಹ್ಯಾತ್ಮಾ ಹೃತ್ಪದ್ಮೇಷು ವ್ಯವಸ್ಥಿತಃ | ತಯೋರೈಕ್ಯಂ ವಿಜಾನೀಯಾ ಜೀವಹೃತ್ಪದ್ಮಗಸ್ಯ ಚ ||೧|| ಶರೀರ ಸರ್ವನಾಡೀಷು ನಿವಿಷ್ಟಾನಾಂಚ ವೈಹರೇಃ ಬ್ರಹ್ಮಾಂಡಂತರ್ಬಹಿಸ್ಥಾನಾಂ ರೂಪಾಣಾಂ ಮಪಿ ಸರ್ವಶಃ | ಆತ್ಮಹೃತ್ಪಗೇ ನೈಕ್ಯಂ ಚಿಂತನಂ ಪರಮಾರ್ಚನಂ ||೨|| ಎಂದು ಮಾನಸಸ್ಮೃತಿಯು, ಇದೇ ಉಪಾಸನಾಕ್ರಮ ಮುಖ್ಯಧೇಯ. ಶ್ರೀ ವಿಜಯ ದಾಸರೆಂಬ ಕೋಕಿಲೆಯ ಕುಕಿಲ ಮಂಜುಳ ಸುಸ್ವರ ಆಲಿಸಿ ಕೇಳಿ, ರಸ ಸವಿದು ಆನಂದಪಡುವರೆಂದು ಪ್ರಾರ್ಥನೆ.

ಇಂಥ ಉಪಾಸನಾ ಭಾಗ ಸುಳಾದಿಗಳನ್ನು ಅಚ್ಚುಮಾಡಲು ಬಲವತ್ತರವಾಗಿ ಪ್ರೇರಿಸಿದ ಕೆಲ ಮಿತ್ರರಲ್ಲಿ ಅಭಿನಂದನೆ. ಪ್ರೆಸ್‌ಕಾಪಿಯನ್ನು ಶುದ್ಧವಾಗಿ ಬರೆದುಕೊಟ್ಟ ಹಿರಿಯರಾದ ಶ್ರೀ ಶೇಷಗಿರಿರಾಯರು ಬಾಗಲಕೋಟ

ಮುಕ್ಕಾಂ ರಾಯಚೂರ ಇವರಲ್ಲಿ ಅನೇಕ ಪ್ರಣಾಮಗಳನ್ನು ಅರ್ಪಿಸುತ್ತ ಅರ್ಧಭಾಗದ್ರವ್ಯವನ್ನು ಅಚ್ಚಿನ ಸಹಾಯಕ್ಕೆ ಕೊಟ್ಟ ಪೋಷಕರಲ್ಲಿಯೂ ಚಿರ ಋಣಿಯಾಗಿದ್ದೇನೆ. ಅಚ್ಚಿನಾಲಯಮಾಲಕರ ಉಪಕಾರವನ್ನೂ ಸ್ಮರಿಸುತ್ತದೆ.

ಸುಳಾದಿಗಳು ಅಚ್ಚಾದರೂ ನನ್ನ ದೇಹಾಲಸ್ಯದಿಂದ ವೇಳೆಗೆ ಸರಿಯಾಗಿ ಪ್ರಕಟವಾಗಲಿಲ್ಲ ಕ್ಷಮಿಸುವದಾಗಿ ವಿನಂತಿ.

ಹರಿದಾಸರದಾಸ

ಹನುಮಂತರಾವ ವೆಂಕಟರಾವ ಗೊರಾಬಾಳ

ತಾ. ೨೨-೧೦-೫೧ ಸಾಹಿತ್ಯಸೇವಾಲಂಕಾರ

— ಪರಿವಿಡಿ —

ಶ್ರೀ ವಿಜಯವಿಠ್ಠಲರ ಸುಳಾದಿಗಳು

ಕ್ರಮಾಂಕ	ವಿವರ	ಪುಟ
	೧ ಧ್ಯಾನೋಪಾಸನೆ ಮುಖ್ಯ	
೧	ಬಿಡುಡಡು ದೇಹವ ದಂಡಿಸಿ ಮಾಡಿದ ಕರ್ಮ	೧
೨	ಏನು ಮಾಡಿದರೇನು ನಿನ್ನ ಧ್ಯಾನವ ಬಿಡುವೆನೆ	೩
೩	ಮಂದಮತಿಯು ಮನಸು ಮಂಗನಂತೆಯಾಗಿ	೫
೪	ಅರ್ಚಿಸು ಮನವೆ ನಿತ್ಯ ಅನಾದಿ ಮೂರುತಿಯ	೭
	೨ ಧ್ಯಾನ ಸಿದ್ಧಸಾಧನ ಚಕ್ರಾಬ್ಜಾದಿ ಮಂಡಲ ವಿವರ	
೫	ಕಂಕಣಾಕಾರವನ್ನು ಬರೆದು ಅದರ ಮಧ್ಯ	೯
೬	ಚೇತನಾಚೇತನಾಂತರ್ಗತ ಭಗವದ್ರೂಪ	೧೪
೭	ಅಜ ಅಣಿಮಾ ಯಜ್ಞ ಅಚ್ಯುತ ಹಯವದನ	೧೬
೮	ಸಾಮೋಪಾಸನೆ ಮಾಡು ಶುದ್ಧಾಂತಃಕರುಣದಲ್ಲಿ	೧೮
	೩ ಧ್ಯಾನೋಪಾಸನೆ ಮೆಟ್ಟಿಲು	
೯	ಸಾಮಾನ್ಯ ಧ್ಯಾನವಿದು ಮಾನ್ಯವಂತರು ಕೇಳಿ	೨೧
	೪ ಅಧ್ಯಾತ್ಮ ಸ್ವರೂಪಾದಿ, ಸ್ಥೂಲ ದೇಹದಲ್ಲಿ ಭಗವದ್ರೂಪ ಚಿಂತನೆ	
೧೦	ಸಪ್ತಾವರಣದೇಹ ಸತತ ಸಾಧನಗೇಹ	೨೩
೧೧	ಜೀವ ಅಚ್ಛೇದ್ಯ ಅಭೇದ್ಯ ತೋಯಃಗರಳ ಶಸ್ತ್ರ	೩೧
	೫ ಮಾನಸಪೂಜಾ ಆಸನವಿಧಾನ ಪೂಜಾಕ್ರಮ	
೧೨	ಮಾನಸ ಪೂಜೆಮಾಡು ಧ್ಯಾನಪೂರ್ವಕದಿಂದ	೪೨
೧೩	ಬಿಂಬಮೂರುತಿ ನಿನ್ನ ಕಾಂಬೆನೆಂದು ನಾನು ಹಂಬಲಿಸಿ	೪೪

೧೪	ಧ್ಯಾನಮಾಡು ಮನವೆ ಧ್ಯಾನಂಗತನಾಗಿ	೪೬
೧೫	ಮೂಲಾಧಾರದಲ್ಲಿ ಚತುರದಳ ಪದುಮಪ್ರವಾಳ	೪೭
೧೬	ಹೃದಯವ್ಯಾಪ್ತಿ ಪ್ರಾದೇಶವೆಂಬ ಮೂರುತಿ	೫೦
೧೭	ಅಷ್ಟದಳದಲ್ಲೊಪ್ಪುವ ಹೃದಯಾಕಾಶದಲ್ಲಿ	೫೨
೧೮	ಗುಪ್ತ ಅರ್ಚನೆಮಾಡು ಗುಣವಂತನಾಗಿ ಬಲು	೫೫
೧೯	ಬಾ ಎನ್ನ ಭಾಗ್ಯಸಿಧಿ ಭಕುತರ ಬೆಂಬಲನೆ	೫೬
೨೦	ಮನುಮೂರ್ತಿಯಿಪ್ಪ ಮೂಲಸ್ಥಾನದಲ್ಲಿ ಒಂದು	೫೮
೨೧	ಆಚಾರವಂತನಾಗಿ ಅನುದಿನ ನಿನ್ನೊಳಗೆ ಯೋಚಿಸು	೬೩
೨೨	ಧಾರಣಧ್ಯಾನಯೋಗ ಮಾಡು ಮನವೆ ಅಸಾಧಾರಣ	೬೭
೨೩	ಧ್ಯಾನಮಾಡು ಮನವೆ ದೈನ್ಯವೃತ್ತಿಯಿಂದ	೭೩
	೬ ಪ್ರಮೇಯಯುಕ್ತ ಚಿತ್ರವಿಚಿತ್ರ ಉಪಾಸನಾ	
೨೪	ಅರ್ಚಾಅರ್ಚನೆಮಾಡು ಅಧಿಕಾರ ಭೇದದಿಂದ	೮೦
೨೫	ಸಂಪೂಜೆಮಾಡು ಮನವೆ ಸಂತತ ನಿನಗೆ ಜ್ಞಾನ	೮೫
೨೬	ಭಗವಧ್ಯಾನವ ಮಾಡು ಭಕುತಿ ಪೂರ್ವಕದಿಂದ	೮೯
೨೭	ಮಾನಸಪೂಜೆಮಾಡು ಮನೋಹರ ಗುಣದಿಂದ	೯೩
೨೮	ಹರಿಯ ಅರ್ಚನೆಮಾಡು ಹರುಷದಿಂದಲಿ ಮನವೆ	೯೬
೨೯	ಹೃತ್ಕಮಲ ಮಧ್ಯದಲಿ ಪೊಳೆವ ವೈಚಿತ್ರ್ಯ, ಸತ್ಕಾಲ	೯೮
೩೦	ವೈರಾಗ್ಯವೆಂಬೊದಿದೆ ಆವಾವ ಕಾಲಕ್ಕೆ ಸಾರಾಂಶವನ್ನೆ ತಿಳಿ	೧೦೧
೩೧	ಅಂತಿಜನುಮ ಬರಲು ಅಂತಿಜ ಜನುಮ ಬರಲಿ	೧೦೩
೩೨	ಜ್ಞಾನಾವೆಂಬೋದಿದೆ ಕೇವಲಾಧಿಕಾರಿಗಳಿಗೆ	೧೦೬
೩೩	ಅಪದ್ಧ ತಿದ್ದುವದು ಅಪಶಬ್ದ ಮನ್ನಿಸುವದು	೧೦೯
೩೪	ಅರಣಿ ಮಥನ ಪ್ರಮುದದ್ವಾರ ಅದ್ವಾರದಿಂದ	೧೧೧
೩೫	ನಿನ್ನಾಧೀನ ಈ ಜೀವರೊಳಗಿದ್ದ ಪೂರ್ಣಶಕ್ತಿ	೧೧೪
	೭ ಬಿಂಬ ಪ್ರತಿಬಿಂಬ ಭಾವಲಕ್ಷಣ	
೩೬	ಆಪ್ತ ಅಖಿಳಮುಕ್ತಿ ಯೋಗ್ಯಜನಕೆ ನಿತ್ಯತೃಪ್ತ	೧೧೬
೩೭	ಮೀಸಿಯಾತಿದ್ದಿ ಬಹು ಬೆದರಿಸಿದರಂಜುವೆನೆ	೧೧೮
೩೮	ಅಂದು ನಿನ್ನ ದರ್ಶನಕ್ಕೆ ಆರ್ತವುಳ್ಳವನಾಗಿ ಬಂದು	೧೨೧

೮ ಧ್ಯಾನೋಪಾಸನಕ್ಕೆ ಅನುಕೂಲವಾದ ಕೆಲ ಸುಳಾದಿ
ಧ್ಯಾನೋಪಾಸನಕ್ಕೆ ಮುಖ್ಯ ಗುರುಗಳು ಬೇಕು

೩೯ ಗುರುಮಂತ್ರವನ್ನೇ ಮಾಡು ಗುಣವಂತನಾಗಿ ಮನುಜಾ ೧೨೭

೪೦ ಗುರುಭಕುತಿ ಪ್ರಧಾನ ಸಾಧನ, ಗುರು ಶುಶ್ರೂಷವೇ ೧೩೦

೯ ಮುಖ್ಯ ಗುರುದ್ವಾರಾ ಸಕಲಶಾಸ್ತ್ರ ವೇದೋಪಷತ್ ಜ್ಞಾನ

೪೧ ಪ್ರತಿಪಾದ್ಯ ಭಗವನ್ಮೂರ್ತಿಗಳುಂಟು ನಿತ್ಯಾನಿತ್ಯ ೧೩೩

೪೨ ಗುಣಕಾಲ ದೇಶಕರ್ಮ ಕ್ರಿಯನಾಮತೀರ್ಥದೇಹ ೧೩೫

೪೩ ರಕ್ಷಿಸುವ ಭಕ್ತರ ನಾನಾ ರೂಪದಿಂದ ಅಕ್ಷರಪುರುಷ ೧೩೮

೪೪ ಸಮರ್ಪಣೆ ಪ್ರಕಾರ ತಿಳಿವದು ಚನ್ನಾಗಿ (ನೈವೇದ್ಯ ಪ್ರ||) ೧೪೨

೪೫ ಅನ್ನಾಭಿಮಾನಿ ಚಂದ್ರ ಅಲ್ಲಿ ಕೇಶವ ,, ೧೪೬

೧೦ ಧ್ಯಾನ ವಿ|| ಶ್ರೀ ಗೋಪಾಲವಿಠ್ಠಲರ ಸುಳಾದಿಗಳು

೪೬ ಧ್ಯಾನಮಾಡು ಮನವೆ ದೈನ್ಯವೃತ್ತಿಯಲಿನ್ನು ೧೪೯

೪೭ ಆವವಿಷ್ಣುನೆ ಜೀವದಂಗುಟ ಮಾತ್ರಾಮೂರ್ತಿ ೧೫೩

೪೮ ಒಂದೆರೂಪವು ನೋಡಾ ಅನಂತ ಪೂರ್ಣವಿನ್ನು ೧೫೬

೪೯ ನಿಲ್ಲುನಿಲ್ಲಯ್ಯ ದೇವ ನೀಲವರ್ನದ ಸ್ವಾಮಿ ೧೬೦

೫೦ ಅಪರೋಕ್ಷವೆಂಬೋದು ಬಹುದೂರವಿಲ್ಲವಿನ್ನು ೧೬೩

೫೧ ಸೃಷ್ಟಿಗೊಡೆಯ ಕೇಳೊಂದೆಷ್ಟುನಾ ತುತಿಸಲು ೧೬೫

೫೨ ನಿನ್ನ ನಿರ್ದೋಷನೆಂದು ನಾನಿರ್ದೋಷಿ ಆಗುವೆ ೧೬೮

೧೧ ರಾಮಚಂದ್ರವಿಠ್ಠಲರು
(ವೇಣುಗೋಪಾಲದಾಸರ ಶಿಷ್ಯರು)

೫೩ ಸುಜನರೆಲ್ಲರು ಹರಿಯ ಪೂಜೆಯ ವಿವರ ಕೇಳಿ ೧೭೦

೧೨ ಪ್ರಾಣೇಶವಿಠ್ಠಲರ ಸುಳಾದಿ

೫೪ ಧ್ಯಾನವಮಾಡು ಮನುಜಾ ದೇಹಾಂತರ್ಗತ ಹರಿಯ ೧೭೩

೧೩ ಧ್ಯಾನೋಪಾಸನೆ ವಿವರಣೆ ಹಲವು ಪದಗಳು
ಪುರಂದರವಿಠ್ಠಲ

ಪದ

೧ ಹೃದಿಸ್ಥಿತಂ ಪಂಕಜ ಮಷ್ಟಪತ್ರಂ ಸಕೇಸರಂ ೧೭೬

ಶ್ರೀ ವಿಜಯವಿಠ್ಠರ ಪದಗಳು

೨ ಮನಸು ನಿಲ್ಲಿಸುವದು ಬಹಳ ಕಷ್ಟ ಗುಣಿಸುವದು ೧೮೪
೩ ಹರಿಮಣಿವರ್ಣ ವಿಠಲ ನಿನ್ನವನೊ, ಪರಮ ಪ್ರೀತಿಯಿಂದ ೧೮೪
೪ ಆವಾವ ಬಗೆಯಿಂದ ಹರಿಗರ್ಪಿಸೊ, ಭಾವಶುದ್ಧನಾಗಿ ೧೮೫
೫ ಅರ್ಚನೆ ಬಗೆ ಕೇಳು ಲೋಕ ಕಣ್ಣುಮುಚ್ಚಿ ಕುಳಿತರೆ ೧೮೬
೬ ಅಂತರಂಗದ ಕದವು ತೆಗೆಯಿ ತಿಂದು ಎಂತುಪುಣ್ಯ ೧೮೬
೭ ವಿಗ್ರಹವನೆ ನಿಲ್ಲಿಸೊ ವೆಂಕಟನ ನಿನ್ನ ಗಗನಾಗ್ರಕೆ ಬೆಳೆದು ೧೮೭
೮ ಮಾನಸಪೂಜೆಯಮಾಡು ಧ್ಯಾನಪೂರ್ವಕದಿಂದ ಕುಳಿತು ೧೮೭
೯ ಭಜಿಸಿದ್ಯಾ ಈ ಭಾಗ್ಯನಿಧಿಯಾ, ನೋಡು ತ್ರಿಜಗವಂದಿತ ೧೮೮

ಗೋಪಾಲವಿಠ್ಠಲರ ಪದಗಳು

೧೦ ಪೂಜಿಸು ಪೂರ್ಣಾನಂದನ್ನ ಮಹಾರಾಜಾಧಿರಾಜೇಶ್ವರನ್ನ ೧೯೧
೧೧ ಮೋಸಹೋದೆನಲ್ಲ ಕಾಣದೆ ಮೋಸಹೋದೆನಲ್ಲ, ವಾಸುದೇವ ೧೯೨
೧೨ ತೋರೊತೋರೊ ನಿನ್ನ ಮೂರ್ತಿಯಾ ವಾರಿಜದಳನಯನನೆ ೧೯೮
೧೩ ಇಂತು ತಿಳಿದ ಜನರಲಿ ಶ್ರೀಹರಿಯಾ ಅಂತರಂಗದಿ ನಿಂತು ೧೯೯
೧೪ ಅಂಜನೆ ಗಿರಿರಾಯ ಪಿಡಿಯನ್ನಕೈಯ್ಯಾ ಆಂಜನೇಯಸುತ ಪ್ರೀಯ ೨೦೦
೧೫ ನಂಬುಮನವೆ ಹಲವುಹಂಬಲಿಸದೆ ಹೃದಯ ಅಂಬರದಲಿಪ್ಪ ೨೦೧
೧೬ ಧ್ಯಾನವೆಮಾಡು ಬಿಂಬಮೂರುತಿಯ ಆನಂದದಲಿಕುಳಿತು ೨೦೧
೧೭ ಅಭಿವಂದಿಪೆ ಎನಗಭಿಮುಖನಾಗಿಹ್ಯನಬ್ಜವನದಲ್ಲಿ ೨೦೨
೧೮ ಕರುಣಾಳು ಎಂಬುವದುಕಂಡೆ ನಾನಿನ್ನಲ್ಲಿ ಶರಣಜನ ೨೦೩
೧೯ ಲಜ್ಜೆಬರುತದೋ ಹ್ಯಾಗೆ ನಿರ್ಜರೇಶಾ ಅರ್ಜುನಸಾರಥಿ ೨೦೪
೨೦ ಧೇನಿಸುಮನವೆ ನೀ ಧೇನಿಸು, ಧೇನಿಸು ಮನವೇ ಶ್ರೀಹರಿಯ ೨೦೬

ಪ್ರಾಣೇಶ ವಿಠ್ಠಲರು

೨೧ ಹೃದಯ ಮಂದಿರ ವಿವರ ಈ ಪರಿಯಲಿಂ ತಿಳಿದು ೨೦೯

೧೪ ಉಪಾಸನಾಕ್ಕೆ ಆಧಾರ ಕೆಲವು ಗ್ರಂಥಗಳು

೧ ವಾಮನ ಪುರಾಣೋಕ್ತ ಮಾನಸಾ ಧ್ಯಾನ ಸ್ನಾನ ಸ್ತೋತ್ರ
ಯೋಗಿನಾಂ ಸ್ನಾನಮಾಖ್ಯಾನಂ ಯೋಗೋ ವಿಷ್ಣು ವಿಚಿಂತನಮ್ ೨೧೨

೨ ಪಂಚರಾತ್ರಾಗಮಸ್ಥ ಮಾನಸಪೂಜಾ ಕ್ರಮ
ಅಷ್ಟೈಶ್ವರ್ಯ ಸಮಾಯುಕ್ತಂ ರಮಯಾಸಹಿತಂ ಪ್ರಭುಂ ೨೧೩

೩ ಶ್ರೀ ವ್ಯಾಸರಾಜ ಕೃತ ಧ್ಯಾನಪ್ರಕರಣ (ಕನ್ನಡ ಗದ್ಯಾತ್ಮಕ)
ಶ್ರೀ ದೇವಿಗೆ ಪತಿಯಾದಂಥ ಶ್ರೀನಿವಾಸನಪಾದಯುಗಳನ್ನು ೨೧೫

೪ ಶ್ರೀರಾಘವೇಂದ್ರ ತೀರ್ಥಗುರುವರ್ಯ ವಿರಚಿತ ಭಗವಧ್ಯಾನ ಪ್ರಕರಣಮ್ (ಸಂಸ್ಕೃತ ಗದ್ಯಾತ್ಮಕ) ಓಂ ರೇಚಕಪೂರಕ ಕುಂಭಕ ಕ್ರಮೇಣ ೨೩೩

೫ ಶ್ರೀ ವ್ಯಾಸತತ್ವಜ್ಞ (ಐಜಿಸ್ವಾಮಿಗಳು) ಕೃತ ಕನ್ನಡ ಗದ್ಯ ರೂಪ ಮಾನಸಸ್ಮೃತಿ, ಶ್ರೀಹರಿಯಾದಂಥ ಶ್ರೀನಿವಾಸನ ಪಾದಗಳಿಗೆರಗಿ ೨೩೬

ತಿದ್ದುಪಡಿ

ವಿಜಯ ದಾಸರ ಗುಟ್ಟಿನ ವಿವರ, ಸಾಧನಭಾಗ ಸು. (೨) ರಲ್ಲಿ
ಒಟ್ಟಿಗೆ ಪುಟಗಳು (೨೮೯)

ಹರಿಃ ಓಂ

॥ ಶ್ರೀ ಲಕ್ಷ್ಮೀನರಸಿಂಹಾತ್ಮಕ ಶ್ರೀ ಲಕ್ಷ್ಮೀವೆಂಕಟೇಶ ಪ್ರಸನ್ನಃ ॥

— ಶ್ರೀ ಗುರುರಾಜೋ ವಿಜಯತೇ —



— ಶ್ರೀ ವಿಜಯದಾಸರ —

ಉಪಾಸನಾಭಾಗ ಸುಳಾದಿಗಳು

ಸುಳಾದಿ ೧

ಧ್ಯಾನೋಪಾಸನ ಮುಖ್ಯವಾದುದು

ರಾಗ ಶಂಕರಾಭರಣ ಝಂಪಿತಾಳ

ಬಿಡು ಬಿಡು ದೇಹವದಂಡಿಸಿ ಮಾಡಿದಕರ್ಮ । ಕೊಡತಕ್ಕವಲ್ಲವವು
ದೃಢವಾದ ಪದವಿಗಳು । ಕಡು ಸಾಹಸವು ಬಿಟ್ಟು ನೆಸಗಿದರೆ ಸ್ವರ್ಗಾದಿ ।
ಒಡನೆ ತಿರುಗಿಸಿ ಫಲಪುಡಿಯಾಗಿ ಪೋಗುವದು । ಮಿಡುಕುವದೆ ಸಿದ್ಧ
ಶತಕಲ್ಪಮಾಡಿದರನ್ನ । ನುಡಿಗೆಸಂಶಯ ಸಲ್ಲಕೇಳಿ ಮರುಳಾಗದಿರಿ ।
ಷಡಿ ಇಲ್ಲದಾ ದಾರಿ ತೋರುವರು ಹಿರಿಯರು । ದೃಢನಾಮ ವಿಜಯ
ವಿಠ್ಠಲನ ಶ್ರವಣ ಮನನ । ಅಡಿಗಡಿಗೆ ಲಾಲಿಸಿ ಪಡೆಯೊಂದು ಧ್ಯಾನಾ ॥೧॥

ಮಟ್ಟತಾಳ

ಧ್ಯಾನಾದೊಳಗೆ ಸ್ನಾನವಡಕಾ । ಧ್ಯಾನಾದೊಳಗೆ ಮೌನ ಅಡಕಾ । ಧ್ಯಾನಾದೊಳಗೆ ದಾನವಡಕಾ । ಧ್ಯಾನಾದೊಳಗೆ ಮಾನವಡಕಾ । ಧ್ಯಾನಾದಿಂದ ಜ್ಞಾನ ಉಂಟು । ಧ್ಯಾನಾದೊಳಗೆ ಜಗವಡಕಾ । ಧ್ಯಾನಾದೊಳಗೆ ದೇವರಡಕಾ । ಧ್ಯಾನಾದೊಳಗೆ ಸರ್ವಾ ಅಡಕ । ಧ್ಯಾನಾವನ್ನು ಫಳಿಸಿ ಕೊಂಡು । ಧನ್ಯವಿಜಯ ವಿಠಲನ್ನ । ಧ್ಯಾನವನ್ನು ಮಾಡು ನೀ । ದಾನದಿಂದ ಭಕುತಿಯಲ್ಲಿ ಧ್ಯಾನವನ್ನು ಬಿಟ್ಟ ನರಗೆ । ಏನು ಇರಲಿ ಎಲ್ಲವಡಕ ॥

ರೂಪಕತಾಳ

ಧ್ಯಾನರಹಿತನಾದ ಮನುಜ । ರೇನು ಕರ್ಮವ ಮಾಡಲೇನು । ಆನೇ ಕಪಿತ್ಥ ನುಂಗಿದಂತೆ । ಹೇನು ಬಿಡದೆ ವಾಸನಿಯು । ತಾನು ನಿರುತಾ ಶ್ರೈಸಿದಂತೆ । ಜಾಣನೊಬ್ಬ ಕಿನ್ನರಿ ಧರಿಸಿ । ಕೋಣನಲ್ಲಿ ಮೀಟಿದಂತೆ । ಗಾಣದೊಳಗೆ ಮಳಲು ತುಂಬಿ । ಭಾನು ಮುಣಿಗಿ ಸುತ್ತಿದಂತೆ ಕಾಣಿರೊ । ಧ್ಯಾನ ಜ್ಞಾನ ಸಂಗತಿಯಿಂದ । ವಾನರನ್ನ ಮುಷ್ಟಿಯಂತೆ । ದೀನನಾಗಿ ಒಂದು ನಿಮಿಷಾ । ಧ್ಯಾನವನ್ನು ಮಾಡಲು । ಶ್ರೀನಿವಾಸ ವಿಜಯ ವಿಠ್ಠಲ । ಆನಂದವಾಗಿ ಒಲಿವನು । ಧ್ಯಾನದಿಂದ ಗತಿಗೆ ಸೋ । ಪಾನವಾಗಲಿ ವಿರಚಿಸೂ ॥೩॥

ಧ್ರುವತಾಳ

ಅನಂತ ಕಲ್ಯಾಣ ಗುಣಪರಿಪೂರ್ಣ ನಿತ್ಯನಿರ್ದೋಷಾ । ಜ್ಞಾನಾ-ನಂದಾತ್ಮಕ “ ವಿಷ್ಣುರ್ಮೇಸ್ವಾಮಿ ” ತ್ರಿಲೋಕಕರ್ತಾ । ನೀನೆ ಸ್ವಾತಂತ್ರ ಬೊಮ್ಮಾದಿಗಳು ನಿನ್ನ ದಾಸಾನುದಾಸರು । ಅನಂತ ಅನಂತ ಕಾಲದಲ್ಲಿ ನಿಜವೆಂದು ಪೇಳುತ್ತ । ಮಾನುಷೋತ್ತಮ ಹೀಗೆ ಬಲುಕಾಲ ವರ್ಜಿಸಲು । ಮನದೊಳಗ ವಿಜಯ ವಿಠ್ಠಲನು ಕೃಪೆಯಿಂದ ಧ್ಯಾನಕ್ಕೆ ಪೊಳೆವ ॥೪॥

ತ್ರಿವಿಡಿತಾಳ

ಚತುರ ಗುಣದಲ್ಲಿ ಚತುರ ಸಾಸಿರ । ಚತುರ ನೂರು ವರುಷ ಧ್ಯಾನಂಗಳ । ಚತುರದಿಂದಲಿಮಾಳ್ಪ ಮತಿಗೆ ದೇವೋತ್ತಮ । ಚತುರ ವೇದ ವಿಜಯ ವಿಠ್ಠಲನು । ಚತುರನಾಗಿ ಬಿಂಬ ಮೂರುತಿ ಸುಳಿದು । ಚತುರತನದಲ್ಲಿ ಬಂದು ಚರಿಸುವನು ॥೫॥

ಅಟ್ಟತಾಳ

ಹೊನ್ನ ಹುಳುವಿನಂತೆ ಕಣ್ಣಿಗೆ ಸುಳುವನು । ತನ್ಮಯ ಗುಣನಿಧಿ ಶನ್ನಾಮಕ ದೇವ । ತನ್ನಿಚ್ಛೆ ಸ್ವಭಾವ ಮುನ್ನೆ ಧ್ಯಾನದಲ್ಲಿ । ಜನ್ನಿತ ಜ್ಞಾನಕ್ಕೆ ಮನ್ನಿಸುವನು ಇವನ । ಮುನ್ನಿನ ಮಾರ್ಗಕ್ಕೆ ಮಾನ್ಯ ವಿಜಯ ವಿಠ್ಠಲನ್ನದಯದಿಂದಾ । ಪನ್ನ ನೀವನೆಂದು ಚನ್ನಾಗಿವೊಲಿದು ॥೬॥

ಆದಿತಾಳ

ಆಗಮ ಸಂಚಿತ ಹರಿಸಿ । ಆಗುವ ಪ್ರಾರಬ್ಧಗಳ । ವೇಗಾನುಸಾರ ತೀರಿಸಿ । ತಾಗಿದ ದುಃಖ ಸ್ವರೂಪಾ (ಶಾ) । ಪೋಗಲಾಡಿಸಿ ಅವರವರ । ಯೋಗ್ಯತಾವರಿದು ಸುಖವಪಾಲಿಸಿ । ಭಾಗವತರನಮಾಡಿ । ಶ್ರೀ ಗುರು ವಿಜಯ ವಿಠ್ಠಲ । ಮೂಗುತಿಯನೀವ ॥೭॥

ಜತೆ

ಧ್ಯಾನಾದಿಂದಲಿ ಮನಸು ನಿಲಿಸಿ ಜ್ಞಾನವ ಪಡೆದು । **ಆನಂದ** ವಿಜಯ ವಿಠ್ಠಲನ ಲೋಕವ ಸೇರೋ ॥೮॥

ಸುಳಾದಿ ೨

ಧ್ಯಾನೋಪಾಸೆ ಮುಖ್ಯ ಧ್ಯಾನದಿಂದ ಜ್ಞಾನಪುಟ್ಟುವುದು
ಸ್ಥೂಲ ಸೂಕ್ಷ್ಮ ಧ್ಯಾನ ವಿವರ

ರಾಗ ರೇಗುಪ್ತಿ ಧ್ರುವತಾಳ

ಏನಾದರೇನು ನಿನ್ನ ಧ್ಯಾನವ ಬಿಡುವೆನೆ । ಏನಾದರಾಗಲಿ ಎನ-ಗಿಂದೀಗ । ಶ್ರೀನಿವಾಸನೆ ನಿನ್ನ ಧ್ಯಾನದಿಂದಲಿ ಕರೆದು । ಆನೀಗ ನಿರು-ತಾರ್ಚನೆ ಮಾಡುವೆ । ನಾನಾ ಕರ್ಮದ ಶ್ರೇಣಿಯಿಂದಲಿ ಸೋ । ಪಾನ ವಾಗುವಗತಿಗೆ ಅನಂತ ಜನುಮದಲ್ಲಿ । ಕಾಣೆನೊ ಧ್ಯಾನ ಸಮಾನವಾದ ಭಕುತಿ । ಈ ನಿರಂತರದಲ್ಲಿ ಜ್ಞಾನಶೂನ್ಯ । ನಾನಾಗಿ ತಿಳಿಯದೆ ನೀ-ನೆಂಬೋದು ಮರೆದು । ಧ್ಯಾನಹೀನನಾಗಿ ಮಾನಾವಳಿದೆ । **ಕ್ಷೋಣಿ ಧರನೆ** ನಮ್ಮ ವಿಜಯ ವಿಠ್ಠಲ ನಿನ್ನ । ಧ್ಯಾನವರಿದ ಮೇಲೆ ಮಾಣುವ ದೆಂತೊ ॥೧॥

ಮಟ್ಟತಾಳ

ಧ್ಯಾನವೆ ಗತಿಗೆ ಪ್ರಧಾನವೆ ಎನುತಲಿ । ಜ್ಞಾನಿಗಳು ತಿಳಿದು ಆನಂದ ವಾಗುತ್ತ । ಗಾನವಮಾಡುವರು ಆನಂದಗತಿಯಲ್ಲಿ । ಗೇಣವನೀ ಇಲ್ಲಾ ಈ ನುಡಿಯನು ಕೇಳಿ । ನಾನು ನೆಚ್ಚಿದೆ ನಿನ್ನ । ಶ್ರೀನಿವಾಸಮೂರ್ತಿ ವಿಜಯ ವಿಠ್ಠಲ ಎನಗೆ । ಧ್ಯಾನವೆಗತಿ ನಿಧಾನದಪದವಿಗೆ ॥೨॥

ತ್ರಿವಿಡಿತಾಳ

ಮನವೆ ನಿಲ್ಲದ ಧ್ಯಾನ ಗುಣವೆ ಇಲ್ಲದನಾರಿ । ಹಣವೆ ಇಲ್ಲದ ನೃಪತಿ ಕ್ಷಣವೆ ತಿಳಿಯದ ಜ್ಞಾನಿ । ಪ್ರಣವೆ ಇಲ್ಲದ ಮಂತ್ರಾ ಘನವೆ ಇಲ್ಲದ ದಾನಾ । ಪಣತಿ (ವೆ) ಇಲ್ಲದ ದೇಹ ಅನುವೆ ಇಲ್ಲದ ನಡತಿ । ಜನವೆ ಇಲ್ಲದ ಸಭಾ ಲಕ್ಷಣವಿಲ್ಲದ ಗುರು । ನೆನವೆ ಇಲ್ಲದ ಸಾಧನವೆ ಇಲ್ಲದ ಸಂಗತಿ । ದಿನವಸ್ತಮಾನಾ ನೂರು ಮನುಕಲ್ಪವಿರಲು ೮೦ । ಜನ ವಾಗುವದೇ ನಾ ಜನ ಜನಕಾ । ತನು ಮನದಾಧೀನ ವಿಜಯ ವಿಠ್ಠಲ ಕೃಪಾ । ವನಧಿ ನಿನ್ನನು ಧ್ಯಾನವನುಗಾಳ್ಪ ಮನವೀಯೋ ॥೩॥

ಅಟ್ಟತಾಳ

ಪಾಪವೆಂಬೋ ರಾಶಿ ಅಪಾರವಾಗೆನ್ನ । ಕೋಪವ ಪುಟ್ಟಿಸಿ ತಾಪದ ಬಲದಿಂದ । ಲೇಪಿಸಿಕೊಂಡು ಪ್ರಳಾಪ ಬಡಿಸುತಿದೆ। ನಾ ಪೋಗುವದೆತ್ತ ಶ್ರೀಪತಿ ಲಾಲಿಸು । ಅಪಾರ ಕರ್ಮದಲೀ ಪೂಜೆಮಾಡಲು । ಶ್ರೀಪದವೀಗಳ ಪ್ರಾಪುತವಾಗೊವೆ । ಪ್ರಾಪುತ ಮಹನಾಮಾ ವಿಜಯವಿಠ್ಠಲ ನಿನ್ನ । ಆಪಾದ ಮೌಳಿಯನೂ ಪತಿಕರಿಸುವೆ ॥೪॥

ಆದಿತಾಳ

ಧ್ಯಾನವನ್ನು ಕೈಕೊಳ್ಳಲು ಜ್ಞಾನವನ್ನೆ ಪುಟ್ಟುವದು । ಹೀನ ಕರ್ಮವೆಂಬದುರಿತ ಕಾನನರಾಶಿಗೆ ಕೃ । ಶಾನನಾಗಿ ಪೋಗಗಳೆದು ಮಾನವಭಿಮಾನವೆನಸಿ । ಧ್ಯಾನ ಧ್ಯಾನ ಧ್ಯಾನವನ್ನು ದಿನ ದಿನಗಧಿಕ ವಾಗೆ । ಆನಂದಕ್ಕಾನಂದ ಏನೆಂದು ಪೇಳವೆನೊ । ಧ್ಯಾನವಿನಾ ಗತಿಗೆ ಸಾಧನವನ್ನು ಕಾಣೆನಯ್ಯಾ । ನೀನೆ ನೀನೆ ಎಂದು ಧ್ಯಾನದಲ್ಲಿ ನಂಬಿದೆನೊ ಸ್ಥಾನದೊಳಗೆ ಪೊಳೆವ ವಿಜಯ ವಿಠ್ಠಲರೇಯಾ । ದಾನಿ ದಯದಿಂದ ಉತ್ತುಮನಮಾಡು ಮನ್ನಿಸುತ್ತ ॥೫॥

ಜತೆ

ಸ್ಥೂಲ ಸೂಕ್ಷ್ಮ ಧ್ಯಾನವ ಭೇದವೆನಿಸೋದು । ನೀಲವರ್ಣ ವಿಜಯ ವಿಠ್ಠಲ ಪ್ರಾಕೃತರಹಿತಾ ॥೬॥

ಸುಳಾದಿ ೩

(ಉಪಾಸನಾ) ಬಾಹಿರದಲ್ಲಿ ಪ್ರತಿಮಾರ್ಚನೆ ಅಮುಖ್ಯ
ಧ್ಯಾನವೆ ಮುಖ್ಯವೆಂದು ಬಿಂಬಪ್ರಾರ್ಥನೆ.

ರಾಗ ತೋಡಿ ಧ್ರುವತಾಳ

ಮಂದಮತಿ ಮನಸು ಮಂಗನಂತೆಯಾಗಿ । ಸಂದೇಹ ಬಿಡದಲೆ ಸಂಶಯದಲ್ಲೀ । ಮುಂದೆ ಉಳ್ಳಾವಸ್ತಾ ಎಡಹಿ ಮುಂಗಾಣದಂತೆ । ಅಂಧಕನಾನಾದೆ ಅಕಟಕಟಾ । ಹಿಂದಣ ಸಂಚಿತವೊ ಮುಂದೆ ಯಾಗುವಾಗಮವೊ । ಇಂದನುಭವಿಸುವ ಪ್ರಾರಬ್ಧವೊ । ಒಂದೆ ಒಂದೆ ದೈವಯಂದಾ ಬಿಂಬಮೂರುತಿ । ಇಂದು ಹೃದಯಾರವಿಂದದೊಳು । ಅಂದವಾಗಿರೆ ಮನ ಪೊಂದದಲೆ ಬರಿದೆ । ಸಂದರುಶನವಿಲ್ಲಾ ಇಲ್ಲಾವೆಂದೂ । ಕುಂದಿ ಬೆಂಡಾಗುವದು ಏನೆಂಬೆ ಎಲೊಜೀಯ । ಬಂದ ವ್ಯಾಕುಲ ಇನ್ನು ತೊಲಗದಲ್ಲಾ । ಪೊಂದಿದೆನು **ಶಶಿಬಿಂದು** ವಿಜಯವಿಠ್ಠಲ । ವಂದಿಸುವೆನು ನಿನ್ನ ದ್ವಂದ್ವಾಬ್ಜಪದಕೆ ॥೧॥

ಮಟ್ಟತಾಳ

ಅಂತರಂಗದಲ್ಲಿ ಅಂತರಾತ್ಮಕ ನೀನು । ಸಂತತ ಪೊಳೆವುತ್ತ ನಿಂತು ಸೊಬಗಿನಿಂದ । ಸಂತೋಷದ ಮೂರ್ತಿವಂತನಾಗಿ ಇರಲು । ಶಾಂತ ವಿಜಯವಿಠ್ಠಲ ಚಿಂತೆಪೋಗದಲ್ಲೊ ॥೨॥

ರೂಪಕತಾಳ

ಒಳಗೊಂದು ಮೂರುತಿ ನೆಲೆಯಾಗಿ ಇರಲಾಗಿ । ನೆಲೆಯನ್ನು ತಿಳಿಯದೆ ಕಲಿಮತಬಿಡದಲೆ । ಕೆಲಸಾರಿ ಬಲುಹಾರಾ ಬಳಿಯಲ್ಲಿ ಇಪ್ಪವಾ । ಚಲ ಮೂರ್ತಿಗಳಿಗಾಗಿ ಬಳಲಿ ಬಳಲಿ ನಾನು । ಅಲಿಸೀದೆ ಅನುಗಾಲ ಬೆಳಗುವಿಡಿಯಪೋಗಿ । ತಳಕೆಳಗಾದಂತೆ ಅಳಲೀದೆನೊ ಅನು । ಕುಲ ವಿಜಯ ವಿಠ್ಠಲನೆ ಗಳದಸತ್ವಮೀರಿ । ಸಿಲಚೆಯ ಪೊತ್ತಂತೆ ಇಳಿಯೊಳ ಗತಿ ಮೂರ್ಖ । ಕುಲಶಿರೋಮಣಿಯಾದೆ ॥೩॥

ಝಂಪಿತಾಳ

ಸಮೀಪದಲ್ಲಿದ್ದ ಸಡಗರದ ಚಲುವ । ಅಮೃತನ್ನದಯಡೆ ಆದರಣಿ ಇಲ್ಲದಲ್ಲಿ । ಸಮ್ಮತವಾಗಿರಲು ಕಾಲಕಾಲಕೆಸವಿದು । ಅಮೃತವಬೇಡದಲೆ ಬಲು ಅನಾದರದಲ್ಲಿ । ಹಮ್ಮು ತೋರಿಯದಲೇವೆ ದೂರಿದ್ದ ಯಂಜಲ । ವ್ಯೊಮ್ಮುಸುರೆಎಡೆ ಬಯಿಸಿ ಬಯಿಸಿದಂತೆ । ಇನ್ನುನ ನಾನಾಗಿ ಅಜ್ಞಾನ ದಲ್ಲಿನ್ನು । **ಅಮೃತ** ವಿಜಯ ವಿಠ್ಠಲ ವಿಶ್ವನಾಯಕನೆ । ಹೆಮ್ಮೆ ಯಿಂದಲಿ ಬಾಳಿ ಗತಿರಹಿತನಾದೆ ॥೪॥

ತ್ರಿವಿಡಿತಾಳ

ಆಕಾರವಾಗಿ ಅರ್ಚನೆಗೊಂಬ ದೈವವು । ಸಾಕಾರವಾಗಿ ಸಂಪತ್ತು ಪಾಲಿಸುತ ರವಿ । ಯಾಕಾರದಂತೆ ರಂಜಿಸುತಾ ಮನಿಯೊಳಗಿರೆ । ಪ್ರಾಕಾರಾ ಶಿಲಿಗಳಿಗೆ ಕೈಯಾಮುಗಿದು ವರ । ವಾ ಕರುಣಿಸು ಎಂದು ಮಡೆ ಹೊರಳಿ ಪೂಜಿಪುವ । ವೀಕಾರ ಮನುಜಗೆ ಸಂಪ್ರೀತಿಯಾಗುವದೇ । ಪ್ರಾಕಾರ ಕಲ್ಲುಗಳು ವರಕೊಡಬಲ್ಲವೆ । **ವಿಶೇಷಾದ** ನಾವು ವಿಜಯ ವಿಠ್ಠಲ ನಿನ್ನ । ವಾಕರಿಸೀ ಅನ್ಯರನ ಹಂಬಲಿಸುವೆನೋ ॥೫॥

ಅಟ್ಟತಾಳ

ಬಿಂಬಮೂರುತಿಯಪರೋಕ್ಷವಾಗದೆಗತಿ । ಯೆಂಬದು ಸಲ್ಲಾದು ಎಲ್ಲರಿಗೇ । ಬಿಂಬನೆಂಬ **ಪ್ರಾಜ್ಞ**ನನುಭವ ತಿಳಿದು । ನಂಬುವಂತೆಮಾಡು ವಿಜಯ ವಿಠ್ಠಲರೇಯಾ ॥೬॥

ಆದಿತಾಳ

ನಿತ್ಯನೈಮಿತ್ಯಗಳು ಆವಾವ ಕರ್ಮಗಳು । ಕೃತಾರ್ಥನಾಗಿ ಸಂಚರಿಸಿದರು । ನಿತ್ಯ ತನ್ನೊಳಗಿದ್ದ ಬಿಂಬಗೆ ಆವಾಹನಿಸಿ । ಭೃತ್ಯನು ನಾನು ಎಂದು ಪೂಜಿಸಿದಲೆ । ನಿತ್ಯ ಪದವಿ ಇಲ್ಲಾ ಶ್ರುತ್ಯರ್ಥದಲ್ಲಿ ಪೇಳೆ । ಅತ್ಯಂತದಲ್ಲಿ ಕೇಳಿ ಮೊರೆ ಬಿದ್ದೆನೊ । **ಸತ್ಯಧರ್ಮ ಪರಾಕ್ರಮ** ವಿಜಯವಿಠ್ಠಲ ರೇಯಾ । ಮಿಥ್ಯ ಸಂಗವನೀಯದೆ ಕೃತ ಕೃತ್ಯ ಎನ್ನ ಮಾಡೊ ॥೭॥

ಜತೆ

ಅಂಗುಟ ಪರಿಮಿತಿವಾಗಿ ಎನ್ನೊಳುನಿಂದೂ । **ಶ್ರಿಂಗಿಣಿ** ವಿಜಯ ವಿಠ್ಠಲ ಎನ್ನ ಕರುಣಿಸೊ ॥೮॥

ಸುಳಾದಿ ೪

ಕರ್ಮಮಾರ್ಗವನ್ನು ಬಿಟ್ಟು ಧ್ಯಾನೋಪಾಸನೆ ಮುಖ್ಯವಾಗಿಮಾಡು

ರಾಗ ಮಾರವಿ ಧ್ರುವತಾಳ

ಅರ್ಚಿಸು ಮನವೆ ನಿತ್ಯ ಅನಾದಿ ಮೂರುತಿಯು । ನಿಚ್ಚಳವಾಗಿ ನಿಸ್ಸಂಗದಲ್ಲಿ । ಅಚ್ಚಾ ಭಕುತಿಯಲ್ಲಿ ಪಂಚ ಭೇದಜ್ಞಾನ । ಎಚ್ಚತ್ತು ದಿವಾರಾತ್ರಿ ದೈನ್ಯವೃತ್ತಿ । ಯಾಚಕ ನಾನು ಬೊಮ್ಮಾದ್ಯರ ತಾರತಮ್ಯ ತಿಳಿದು । ಸಚ್ಚಿದಾನಂದಾತ್ಮಕ ಗುಣಗಳಿಂದ । ಅಚ್ಯುತಾನಂತ ಗೋವಿಂದ ಗೋಪಾಲಕೃಷ್ಣ । ಸುಚ್ಚರಿತಸಾರ ಸುಖಸಾಗರ । ನೆಚ್ಚಿದವರನೆಂಟಾ ನಿಗಮಾಗೋಚರನೆಂದು । ಮೆಚ್ಚಿಸು ಮುದದಿಂದ ಮುಂದಾಲಿಸಿ । ಬಚ್ಚಿಟ್ಟ ದ್ರವ್ಯದಂತೆ ಅನ್ಯರಿಗೆ ತೋರಿದರು । ಹುಚ್ಚು ಹುಚ್ಚಾಗಿರುಬಾಹಿರದಲ್ಲಿ । ಹೆಚ್ಚುವದು ನಿನಗೆ ಇದರಿಂದ ಲಾಭ ಪ್ರಾಪ್ತಿ । ಬಿಚ್ಚಿ ಬಿಸಾಟದರು ಅಂತ ರಂಗ । ಸಚ್ಚರಾಚರದಂತೆ ಚರಿಸು ಚನ್ನಾಗಿ ಬಲು । ಚಚ್ಚರದಲಿ ಚಂಚಲ ಬೀರೂತ । ಹಚ್ಚಿಕೆ ಜನರನ್ನು ವದದು ಓಡಿಸು ವೊಳಗೆ । ಮುಚ್ಚುಗೊಳಿಸು ತಿರು ವೈದೀಕವ । ಯುಚ್ಚಾವಾಗದಂಥ ಪುಣ್ಯವೆ ಸಂಪಾದಿಸಿ । ಮುಚ್ಚು ಮರೆಯೆಲ್ಲೆ ಅನುಭವಿಸು । ಅಚ್ಚಟ ವೈರಾಗ್ಯ ಧೃಡವಾಗಿ ತಿಳಿದು ಕೆಂ । ಗಿಚ್ಚು ಬೀರೂವದು ಪಾಪದರಾಶಿಗೆ । ಲಚ್ಚು ಮನುಜನಾಗಿ ಲೋಕಕ್ಕೆ ಕಾಣಿಸು । ರಚ್ಚಿಗೆ ಹಾಕದಿರು ದಿವ್ಯಪ್ರಮೇಯಾ । **ಸುಚಿತ್ರನಾದ** ನಮ್ಮ ವಿಜಯ ವಿಠ್ಠಲರೇಯನ । ಅಂಚ್ಚಾಗುಪ್ತ ಮಾರ್ಗದಲಿನಿಲಿಸು ಸಂತತವೊಲಿಸು ॥

ಮಟ್ಟತಾಳ

ಕರ್ಮವ ಕಡೆಮಾಡಿ ನೆಲೆಗೊಂಡವನಾರು । ಧರ್ಮವನೆಮಾಡಿ ಕಡೆಬಿದ್ದವನಾರು । ಮರ್ಮ ತಿಳಿಯದನಕ ಏನೇನುಮಾಡಿದರು । ನಿರ್ಮಳ ಪದವಿಗೆ ನಿಶ್ಚಿಂತ ಪಥವಲ್ಲಾ । ನಿರ್ಮತ್ಸರದಿಂದ ಎಳ್ಳನಿತದಾಗೆ । ಪೇರ್ಮೆ ಯಿಂದಲಿ ಬಹು ಅನುಭವಸಿದ್ಧಿಪದು । ಚರ್ಮಾ ಪಾಲಿಸಿಕೊಂಡು ಕಷ್ಟ ತರದಿಂದ । ದುರ್ಮತಿಯಾದರೆ ಫಲಪ್ರಾಪ್ತಿ ಉಂಟೇ । **ಕರ್ಮ ಧರ್ಮದ ಒಡೆಯ** ವಿಜಯ ವಿಠ್ಠಲರೇಯನ । ಮರ್ಮಗಳನು ತಿಳಿದು ವರ್ಣಿಸು ನಿನ್ನೊಳಗೆ ॥೨॥

ತ್ರಿವಿಡಿತಾಳ

ಸ್ಥೂಲ ದ್ರವ್ಯಗಳ ಬಾಹಿರದಲಿ ತಂದು । ಕಾಲಕಾಲಕೆ ಆಯಾಸ
ಬಡುವದಲ್ಲಾ । ಕೇಳೋದು ಕಿವಿಗೊಟ್ಟು ಅನ್ಯರರಿಯದಂಥ । ಮೇಲು
ಉಕ್ತಿಯನ್ನು ಕೇವಲ ಸುಲಭಾ । ಆಳು ಸಾಮಗ್ರಿಗಳು ಬೇಕಾದವಲ್ಲಾ
ವಿಶಾಲ ದೇಶ ಕೋಶ ಆರಸಸಲ್ಲಾ । (ವ್ಯಾ)ವೇಳ್ಯಗೆ ದೊರೆತಷ್ಟು ಪೂಜಿ
ಸಲಿ ಬಹುದು । ಮೂಲ ಮುಟ್ಟದು ಕಾಣೋ ತಿಳಿಯದನಕಾ । ಸಾಲು
ಸಾಲಾಗಿ ಮೈಯ್ಯಾರ ತೋರುವದಲ್ಲ । ಹೇಳುವೆ ಒಂದೊಂದು ದಿವ್ಯ
ಮಾತುಗಳು ಹೀ । ಯಾಳಿ ಇಂದಲತಿ ನಿತ್ಯಮನದಾ । ಆಲೋಚನೆಯೆಲ್ಲ
ಪೂಜಾವಿಧವೇ ಎಂದು । ಪಾಲಯ ಹರಿಯು ಸಂಪ್ರೀತಿ ಬಡಿಸೂ । ಬಾಳುವ
ದನುದಿನ ಲೇಶವಾದರು ನಿನಗೆ । ಕಾಲ ಕರ್ಮದ ಭೀತಿ ಇಲ್ಲವಿಲ್ಲಾ ।
ಹಾಳುಹರಟೆಯಮಾತು ಪೇಳುತ್ತಲಿದ್ದರೂ । ಓಲಾಡು ಅಂತರಂಗದ
ಮಧ್ಯದಿ । ಪಾಲಗವನೆ ಮಾಡು ಮರೆಯದೆ ಮರೆಯದೆ । ಏಳಲಾವೆನ್ನ
ದಿರು ಎಲ್ಲಿದ್ದರು ನಿನಗೆ । ಕಾಲನ ಉಪದ್ರವಾಗದಿದಕೋ । **ಶ್ರೀ ಲೋಲನಾದ**
ವಿಜಯ ವಿಠ್ಠಲರೇಯನ । ಮಾಲೆಯಿಂದಲಿ ಎಣಿಸುತ ಜರಿಸುವದೂ ॥೩॥

ಅಟ್ಟತಾಳ

ಸುಲಭವಾಗಿದ್ದ ಪೂಜೆಯ ನೋಡು ನಿನ್ನೊಳು । ಗಲಭೆಯಾಗದಿ-
ಪ್ಪದು ಕಾಣೊ ಎಂದಿಗೂ । ಎಲೊ ಎಲೊ ಮನವೆ ಇಂಥ ಯೋಗಸಂಪಾ
ದಿಸಿ । ಬಲುಧನ್ಯನಾಗು ಬಾಹಿರಂಗಡಿಬಿಡು । ಕುಳಿತದ್ದು ನಿಂತದ್ದು ತಿರು
ಗಾಡತಿದ್ದದ್ದು । ಮಲಗಿಕೊಂಡಿದ್ದದ್ದು ಇವು ನಾಲ್ಕರೊಳು । ಹಲವು ಬಗೆ
ಉಂಟು ಹೆಜ್ಜೆಗೆ ಹೆಜ್ಜೆಗೆ ಕರ । ತಳದೊಳಗಿದ್ದ ಪದಾರ್ಥ ನೋಡಿದಂತೆ ।
ತಿಳಿದು ತಿಳಿಯಬೇಕು ಅನುಭವರೂಢದಲ್ಲಿ । **ಕಲಿಭಂಜನ** ನಮ್ಮ ವಿಜಯ
ವಿಠ್ಠಲನಂಘ್ರಿ । ಜಲಜ ಕಾಂಬುವದಕ್ಕೆ ಇದೆ ಇದೆ ಉಪಾಯಾ ॥೪॥

ಆದಿತಾಳ

ಏಕಮೇವ ಸರ್ವ ಜಡದ್ರವ್ಯಂಗಳೆಲ್ಲಾ । ಲೋಕದೊಳಗೆ ಹರಿಯು
ಕಾರವೆಂದು ಅರಿದು ಅ । ನೇಕ ವಾಕ್ಯಗಳೆಲ್ಲ ಒಡಿಯನಿಗೆ ಉಪಚಾರಾ ।
ಏಕ ವಿಧದಿಂದ ನಿಜವೆಂದು ಹಿಗ್ಗುತಾ । ಈ ಕಳೇವರ ಮಿಕ್ಕಾದ ಇಂದ್ರಿ-
ಯಂಗಳು ತನ್ನ । ಜೋಕೆಮಾಡುವರು ಮಾನಿಸಿಕೊಂಬಾ ಸಕಲಜನರು ।

ಶ್ರೀಕಮಲಾಕ್ಷ ತನ್ನ ಅಧೀನವೆ ಎಂದು । ವ್ಯಾಕುಲ ಪಿಡಿಯದೆ ಚಿಂತಿಸ ಬೇಕು ನೀನೆ। ಲೌಕಿಕವಾದರು ವ್ಯರ್ಥವಾಗದು ವೈ। ದೀಕ ವೆನಿಸುವದು ಎತ್ತಲಾದರೂ ನೋಡೆ । ಏಕೀ ಭೂತ ನಮ್ಮ ವಿಜಯ ವಿಠ್ಠಲರೇಯಾ ಸಾಕುವ ಸಾಕುವ ಇಹ-ಪರದಲಿ ಒಲಿದೂ ॥೫॥

ಜತೆ

ದ್ವಿವಿಧಕರ್ಮಗಳ ಹರಿಯಾಧೀನ ಚಿಂತನೆ। ವಿವರಿಸಿಮಾಡಲು ವಿಜಯ ವಿಠ್ಠಲಗೆ ಪ್ರೀತಿ ॥೬॥

ಕಂಕಣಾಕಾರ ಸುಳಾದಿ ೫

ಧ್ಯಾನೋಪಾಸನಕ್ಕೆ ಮೂಲಭೂತವಾದ ಚಕ್ರಾಬ್ಜಾದಿಮಂಡಲ ವಿವರ

ರಾಗ ಭೈರವಿ ಧ್ರುವತಾಳ

ಕಂಕಣಾಕಾರವನ್ನು ಬರೆದು ಅದಕ ಮಧ್ಯ। ಓಂಕಾರ ಎರಡು ಎಡಬಲದಿ ರಚಿಸಿ । ಶಂಕೆ ಇಲ್ಲದೆ ನಡುವೆ ಘೃಣಿ ಎಂದು ಲಿಪಿಸಿ ಮೀ । ನಾಂಕ ನಯ್ಯನ ಪೀಠಸ್ಥಳವಿದೆಂದು । ಬಿಂಕದಲಿ ಸ್ವರದೊಳಗೆ ಕಡಿಯಣ ಸ್ವರವೆ ಎರಡಾ | ಲಂಕಾರವನೆಮಾಡಿ ಅದರ ಬಳಿಯ। ಕಂಕಣಾಕಾರವನ್ನು ಒಳಗೆಮಾಡಿಕೊಂಡು। ಮಂಕುಮತಿಯ ತೊರೆದು ತ್ರಿಕೋಣಸುತ್ತಿಸಿ । ಶ್ರೀಂಕಾರ ಇಚ್ಛಾಶಕ್ತಿ ಕ್ಲೀಂಕಾರ ಕ್ರಿಯಾಶಕ್ತಿ। ಹ್ರೀಂಕಾರ ಜ್ಞಾನಶಕ್ತಿ ಮೂರು ಮೂಲಿಗೆ ಬರಿಯೊ। ಪಂಕಜ ಪಾಣಿಯ ಶ್ರೀ ಭೂ ದುರ್ಗಾನಾ- ಮಕಳು। ಪಂಕಜಾಕ್ಷನ ರೂಪ ಮೂರು ಉಂಟು। ಕಂಕಣಾಕಾರ ಮರಳೆ ತ್ರಿಕೋಣಮೇಲೆ ಒರೆದು । ಸಂಕೋಚವಾಗಿ ಇದೆ ದ್ವಿತಿಯ ವಲಯ । ಪಂಕಜ ಮಿತ್ರ ಸೋಮ ಅಗ್ನಿ ಜನರ ನಾಗ। ಕಂಕಣ ಅನಲ ವರುಣದಿಕ್ಕಿಗೆ ರಚಿಸಿ। ಕಿಂಕರ ಜನಪಾಲ ವಿಜಯ ವಿಠ್ಠಲ ಅಕ । ಳಂಕನ ಭಜಿಸುವದು ಹೃದಯದಲ್ಲಿ ತಿಳದು ॥೧॥

ಮಟ್ಟತಾಳ

ಕರಿ ಅಜ ರಥ ವೀಥಿ ಎಂದೆಂಬವೆ ಮೂರು। ಬರದು ಇದಕೆ ಹನ್ನೆರಡು ರಾಶಿಗಳು ವಿ। ಸ್ತರವಾಗಿ ಉಂಟು ಎರಡೆರಡೊಂದು ಕಡೆ। ಅರಿವದು ಮಿತ ಸಮಗತಿ ತ್ವರಗತಿ ಸೂರ್ಯನ್ನ । ಎರಡು ನಾಲ್ಕು ಕೋಣೆ ರಚಿಸೆದರ ಮೇಲೆ। ಮರಳೆ ಮಧು ಮಾಧವ ಕರಸುವ ಋತು ಒಂದು ।

ಬರೆದು ಪ್ರಣವ ವಿವರ ಹೃದಯದಲ್ಲಿ ನಮ । ಸ್ಮರಿಸು ಜ್ಞಾನಾತ್ಮನೆಂದು । ಧರಿಸು ಈ ಪರಿ ಮೂರು ಎರಡುಕೋಣೆಯಮಧ್ಯ । ತರುವಾಯ ಮಾಸ ಋತು ವರುಷ ತಾರಕ ಸಂ । ಸ್ಮರಿಸಿ ಕ್ರಮ ವರ್ಣ ಹರಿ ಐಶ್ವರ್ಯಾದಿ । ಪರಮ ಮೂರ್ತಿಗಳನ್ನು ಶಿರಸುಮೊದಲುಮಾಡಿ । ಕರತಳ ಪದತನಕ ಚರಿತೆಯಕೊಂಡಾಡು । ಗುರುತು ಆರುಕೋಣೆ ಸರಿ ಉಪರಿಭಾಗ । ಎರಡರ ಮಧ್ಯ ವರಣಂಗಳು ಉಂಟು । ಅರಹುವೆ ಪ್ರಥಮದಲ್ಲಿ ಎರಡೆರಡು ನಾಲ್ಕು ೧. **ಅ, ಆ, ಕ, ಖ, ಙ, ಢ, ಮ, ಯ;** । ೨. ಎರಡನೆ ಮನಿಯಲ್ಲಿ ವರಣಗಳಿಪ್ಪಯ್ಯಾ । **ಇ, ಈ, ಉ, ಊ, ಗ, ಘ, ಣ, ತ, ರ, ಲ;** ೩. ಸ್ಮರಿಸು ಮೂರನೆ ಮನಿಯಲ್ಲಿರುತಿಪ್ಪ ಮಾತ್ರ **ಋ, ೠ, ಌ, ೡ, ಙ, ಚ, ಥ, ದ, ವ, ಶ;** । ೪. ಕರಿಸಿಕೊಂಡವು ಇನಿತು ನಾಲ್ಕನೆಸ್ಥಾನದಲಿ । **ಎ, ಐ, ಛ, ಜ, ಧ, ನ, ಷ, ಸ;** । ೫. ವರಣಂಗಳು ಗ್ರಹಿಸು ಐದನೆಮನಿಯಲ್ಲಿ । **ಒ, ಔ, ಝ, ಞ, ಪ, ಫ, ಹ, ಳ;** । ೬. ನಿರುತ ಇಪ್ಪದು ಕೇಳಿ ಕಡಿಯಣಮನಿಯಲ್ಲಿ । **ಅಂ, ಅಃ, ಟ, ಠ, ಬ, ಭ, ಕ್ಷ** ಬರೆದು ಈಪರಿಯಲ್ಲಿ ಆರುಮನಿಯ ಮಧ್ಯ । ಸರಿ ಇಲ್ಲಿಗೆಯನ್ನಿ ತರುವಾಯ ನಾಲ್ಕು । ಎರಡೂ ವಲಯಾಕಾರ ಎರಡು ಕೋಣೆಯ ಗಣಿತ । ನಿರೀಕ್ಷಿಸಿ ಮನದಲ್ಲಿ ಪರಿಶುದ್ಧನಾಗಿ । ಪರಮ ಪುರುಷ ನಮ್ಮ ವಿಜಯವಿಠಲಮೂರ್ತಿಯ । ಸ್ಮರಿಸು ಆಜ್ಯಾದಿಗಳ ನರಸಿಂಹ ಪರಿಯಂತ ॥೨॥

ರೂಪಕತಾಳ

ಆರು ಕೋಣೆಯಮೇಲೆ ವರ್ತುಳಾಕಾರವನ್ನು । ಚಾರುವಾಗಿ ಬರೆದು ಅದರ ಸುತ್ತಲು ಎಂಟು ! ವಾರಿಜದಳವನ್ನು ರಚಿಸಿ ರಮ್ಯವಾಗಿ । ಸೌರಿ ಸ್ವರ್ಭಾನು ಗುರು ಬುಧ ಶುಕ್ರ ಚಂದ್ರಮ । ಧಾರುಣಿಸುತ ಕೇತು ಇವರನ್ನ ಮಧ್ಯ । ಹಾರೈಸಿ ಬರೆದು ಇವರಿವರಬಳಿಯಲ್ಲಿ ಓಂ। ಕಾರ ಸಹಿತವಾಗಿ ನಮೋನಾರಾಯಣನೆಂಬೊ । ಈರೆರಡು ನಾಲ್ಕು ವರ್ಣಗಳು ಒಂದೊಂದರಲ್ಲಿ । ಆರಾಧಿಸಿ ಬರೆದು ಬೀಜಾಕ್ಷರವೆನ್ನು । ಸಾರವನ್ನು ತಿಳಿ ಎಂಟು ವರ್ಣಮಿಳಿತ । ತಾರ ಮಂತ್ರವೆ ಸತ್ಯ ಇದರ ನಿಯಾಮಕ ವಿಶ್ವ । ಮೂರುತಿ ಮೊದಲಾದ ಅಷ್ಟರೂಪಂಗಳುಂಟು । ಸೌರಿ ರಾಹು ಮಧ್ಯ ಆದಿ ವರ್ಣವೆ ಲಿಪಿಸಿ । ದ್ವಿರಷ್ಟ ಮಾತ್ರಾ ವರ್ಗವ ಇದಕೆ ಇಂದಿರಾ । ಮಾರುತ

ದೇವನ್ನ ಬರೆದು ಶ್ರುತಿ ಕಾಲಗಳ । ಈ ರೀತಿಯಿಂದಲಿ ವಿಶ್ವನ್ನ ಸ್ಮರಿಸೆ । ಕಾರುಣ್ಯಮಾಡುವನು ಮುಂದೆ ಕ ವರ್ಗ ಉ । ಕಾರ ತೈಜಸ ದೇವನ ಬರೆದು ಕ ವರ್ಗಕ್ಕೆ । ಧಾರುಣಿ ಉದಕಾಗ್ನಿ ವಾಯು ಗಗನ ಭೂತ । ಮೂರೆರಡು ಸ್ಥಾಪಿಸಿ ಅಲ್ಲಿ ಮಾನಿಗಳನ್ನು । ತಾರೇಶ ಸ್ವರ್ಭಾನು ಮಧ್ಯದಲ್ಲಿ ಸಿದ್ಧಾ । ಆರೋಹಿಣೆಯ ಗುರು ಈರ್ವರನಡುವೆ ಮ । ಕಾರ ಪ್ರಾಜ್ಞ ಮೂರುತಿ ಚ ವರ್ಗ ಒಂದೊಂದಕೆ । ಈರೆರಡು ಮೇಲೊಂದು ಜ್ಞಾನೇಂದ್ರಿಯುಗಳುಂಟು । ವಾರ ವಾರಕೆ ಬಿಡದೆ ತತ್ವೇಶರುಗಳವಾಸ । ತೋರುವ ತುರ್ಯದೇವನು ಟ ವರ್ಗಕ್ಕೈದು । ಮೀರದೆ ಕರ್ಮೇಂದ್ರಿಯು ಪಾಣಿ ಪಾದದಿ ಪಂಚ । ಕಾರಣೆಕರಲ್ಲಿ ವಸ್ವಾದಿ ನಿರ್ಜರರೂ । ಸಾರಿರೈ ಬುಧ ಶುಕ್ರ ಅಂತರಾಳದಲ್ಲಿ ವಿ । ಸ್ತಾರ ಇದನೆ ತಿಳಿದು ಶುಕ್ರ ಚಂದ್ರನ ನಡುವೆ । ಭೋರನ್ನ ಆತ್ಮಾಮೂರುತಿ ಬಿಂದು ತ ವರ್ಗ । ಪೂರೈಸು ಪಂಚ ತನ್ಮಾತ್ರಗಳು ಶಬ್ದಾದಿ । ಮಾರುತಗಳೈದು ಪ್ರಾಣಾದಿ ನಾಮದಲ್ಲಿ । ಸೇರಿಕೊಂಡಿಪ್ಪರೈ ಮುಂದೆ ಲಾಲಿಸಿ ಕೇಳಿ । ಗೌರೀಶನ ಶಿರದಲ್ಲಿ ಇಪ್ಪ ಕುಜನ ನಡುವೆ । ಮೂರುತಿ ಅಂತರಾತ್ಮನು ಘೋಷ ಪ ವರ್ಗ । ಆರನೆ ಮನೆ ಎನ್ನಿ ಇಲ್ಲಿಪ್ಪದು ಅಹಂ । ಕಾರ ಬುದ್ಧಿ ಚಿತ್ತ ಮನಸು ಚೇತನ ತತ್ವ । ಮಾರಾರಿ ಮಿಗಿಲಾದ ದೇವತಿಗಳಕ್ಕು । ಧಾರುಣಿಸುತ ಕೇತು ಇವರ ಮಧ್ಯದಲ್ಲಿ । ಶ್ರೀರಮಣ ಪರಮಾತ್ಮ ಶಾಂತವೆಂಬೋದು ಓಂ । ಕಾರದೊಳಗಿನ ವರ್ಣ ಯ ವರ್ಗ ಚತುರ್ವಿಧಾ । ಆರೊಂದು ಧಾತುಗಳು ತ್ವಕುಚರ್ಮ ರಕ್ತಾದಿ । ವಾರಿಜ ಮಿತ್ರನ್ನ ಮುಸುಕುವನ ಶನಿಮಧ್ಯ । ಬೀರುವೆನು ಜ್ಞಾನಾತ್ಮ ಅತಿಶಾಂತ ಶ ವರ್ಗ । ಕ್ಷಾರ ಸತ್ವ ರಜ ತಮ ತ್ರಯಾವಸ್ಥೆಗಳು ತಾರ ನಮೋನಾರಾಯಣವೆಂಬೊವೆಂಟು । ಸೌರಿ ಮಿಕ್ಕಾದೆಂಟು ದಳದಲ್ಲಿ ಲಿಖಿಸೋದು । ವಾರಿಜ ಭವನಯ್ಯಾ ವಿಜಯ ವಿಠ್ಠಲರೇಯಾ । ಶರೀರ ದೊಳಗಿದ್ದು ತನ್ನವಂಗೆ ತಿಳಿಪುವಾ ॥೩॥

ಝಂಪೆತಾಳ

ಹನ್ನೆರಡು ದಳವುಳ್ಳ ಕಮಲ ವಲಯಾಕಾರ । ಚನ್ನಾಗಿ ಬರೆವದು ಇದರ ಮೇಲೆ । ಇನ್ನು ಒಂದೊದು ದಳದೊಳಗೆ ಲಿಖಿಸಲಿಬೇಕು । ಮನ್ನಿಪದು ಜ್ಞಾನಿಗಳು ಬಾಲಬೋಧ । ಮುನ್ನಾದಿದಳಲ್ಲಿ ಮೇಷರಾಶಿಯು

ಬರೆದು । ಬಿನ್ನಣದಿ ಓಂ ಓಂ ಇದಕೆ ಕೇಶವಮೂರ್ತಿ । ಭಿನ್ನ ವರ್ಣಗಳು
(ಅ, ಕ, ಡ, ಮ) ವೆಂಬವು ನಾಲ್ಕು । ಇನ್ನಿತು ರಚಿಸಿ ಎರಡನೇದಳ
ದಲ್ಲಿ । ಸನ್ನುತಿಸು ವೃಷಭ (ಆ, ಖ, ಢ, ಯ) ಚತುರವರ್ಣಗಳು ।
ಓಂ ನಂ ನಾರಾಯಣಮೂರ್ತಿನೆನೆದು । ಘನ್ನ ಮೂರನೆಯದಳದಿ ಮಿಥುನ
ರಾಶಿಯ ಬಳಿಯು । ವರ್ಣಿಸಿ ಓಂ ಮೋಂ ಮಾಧವದೇವನ್ನ । ಗಣ್ಯ
(ಇ, ಗ, ಣ, ರ) ನಾಲು ಮಾತ್ರಗಳ ಬರೆದು ನಿಜ । ವೆನ್ನಿ ನಾಲ್ಕನೆದಳಕೆ
ಮನಸುಮಾಡಿ । ಪುಣ್ಯವೆ ಉಂಟು ಕರ್ಕರಾಶಿ (ಈ, ಘ, ತ, ಲ) । ವನ್ನು
ಓಂ ಭಂ ವರ್ಣ ಗೋವಿಂದನು । ನಿನ್ನೊಳಗೆ ತಿಳಿವದು ಐದನೆ ಪತ್ರದಲ್ಲಿ ।
ಪೆಣ್ಣುಗಳ ಮಧ್ಯದಾ ಪೆಸರಿನರಾಶಿ । (ಉ, ಊ, ಙ, ಥ, ವ) ಓಂ ಗಂ
ಇದಕೆ ವಿಷ್ಣುಮೂರ್ತಿ । ಕನ್ಯಯಲಿ (ಋ, ೠ, ಚ, ದ, ಶ) ಓಂ ವಂ
ವರ್ಣ ಮಧುಸೂ । ದನ ದೇವನ ಭಜಿಸು ಷಡ್ದಳದಲ್ಲಿ । ಸನ್ಮತ
ವಹುದು ತುಲರಾಶಿ (ಌ, ೡ, ಛ, ಧ, ಷ) ಗಳು । ಇನ್ನು ತ್ರಿವಿಕ್ರಮ
ಓಂ ತೇಂ (ಓಷ್ಠಾ) ಸಪ್ತದಳದಿ । ಮಣ್ಣು ಭಕ್ಷಿಪ ಕ್ರಿಮಿ (ಎ, ಐ, ಜ,
ನ, ಸ) ವರ್ಣ । ವನ್ನು ಓಂ ವಾಂ ವಾಮನ ಅಷ್ಟದಳದಿ । ಹೊನ್ನಿನಂಥ
ಮಾತು ಧನುರಾಶಿ ಲಿಪಿಸೆ ಸಂ । ಪನ್ನ (ಓ, ಝ, ಪ, ಹ) ಓಂ ಸುಂ
ಶ್ರೀಧರ । ಇನ್ನು ನೋಡು ಪತ್ರ ನವಮದಲಿ ಈಪರಿ । ಎನ್ನು ಗ್ರಹಿಸುವದು
ಹತ್ತುದಳದಿ । ಇನ್ನಿತಾದರು ಸತ್ಯ ಮಕರ (ಔ, ಞ, ಫ, ಳ) ಓಂ ದೇಂ ।
ಅನಂತರೂಪಾತ್ಮಕ ಹೃಷಿಕೇಶ । ಕನ್ನೊಂದನೆ ದಳದಲ್ಲಿ ಕುಂಭ । (ಅಂ,
ಟ, ಭ, ಕ್ಷ) ಓಂ ಎನ್ನು ವಾಂ ಇದಕೆ ಶ್ರೀಪದ್ಮನಾಭ । ಹನ್ನೆರಡನೆ ದಳದಿ
ಮೀನ (ಅಃ, ಠ, ಭ) ವರ್ಣ । ಚನ್ನಾಗಿ ರಚಿಸಿ ಓಂ ಯಂ ದಾಮೋದರ ।
ಹನ್ನೆರಡು ದಳದೊಳಗೆ ಇಷ್ಟೆ ಭಗವದ್ರೂಪ । ಹನ್ನೆರಡು ಮಾತ್ರಕಾ
ಕೂಡಿಸಲು । "ಓಂ ನಮೊ ಭಗವತೆ ವಾಸುದೇವಾಯ" ಪ್ರ । ಸನ್ನ ದೇವನ್ನ
ನೋಡಿ ಏಕ ಪಂಚಾಶ । ದ್ವರ್ಣ ಒಂದೊಂದರಲಿ ಹಂಚಿಹಾಕಿ । ಹನ್ನೆ-
ರಡು ರಾಶಿಗಳ ಬರೆದು ಸ್ತುತಿಸಿ । ಧನ್ಯನಾಗೆಲೊ ಮುಂದೆ ದಳದ ಸಂಧಿ
ಗಳಲ್ಲಿ । ರನ್ನ ತಾರ ಯೋಗ ಒಂಭತ್ತು ಪದದಂತೆ । ಹನ್ನೆರಡುರಾಶಿಗೆ
ವಿಭಾಗಮಾಡಿ । ಪನ್ನಗಶಾಯಿ ಸಿರಿ ವಿಜಯ ವಿಠ್ಠಲನ್ನ ಕಾ । ರುಣ್ಯವನು
ಪಡದು ಚಿಂತಿಸು ಸುಹೃದಯದೊಳಗೆ ॥೪॥

ತ್ರಿವಿಡಿತಾಳ

ದ್ವಾದಶದಳವುಳ್ಳ ಕಮಲದಮೇಲೆ। ದ್ವಿದ್ವಾದಶ ಪತ್ರದ ಕಮಲ ಬರೆದು। ಸಾಧಿಸು ಒಂದೊಂದು ದಳದ ಮಧ್ಯದಲ್ಲಿ ವೀ। ನೋದ ಚತುರ ವಿಂಶತಿ ವರ್ಣಂಗಳ। ವೇದ ಮಾತಾ ಮಂತ್ರ ಇದೆ ಎನ್ನು ಕೇಶವ। ಮಾಧವಾದಿ ವರ್ಣ ಮೂರ್ತಿಗಳ । ಪಾದವೆ ಸ್ಮರಿಸುತ್ತ ಮತ್ತೆ ಸೂರ್ಯನ ಗಮನ। ಭೇದದಿಂದಲಿ ತಿಳಿ ನವ ವಿಧೀಯ। ಐದಿಸು ಒಂದೊಂದುಕಡೆ ಮೂರರ ಪ್ರಕಾರ। ಅದಾವಿಲ್ಲಿಗೆ ತಾರೆ ಇಪ್ಪತ್ತೇಳು। ಐದೇಳುರಾಶಿಗಳು ಹಂಚಿಹಾಕಲಾಗಿ। ಪಾದ ಪಾದಾರ್ಧ ತ್ರಿಪಾದವಾಹದು। ಪಾದ ತ್ರಿಮಂತ್ರ ತತ್ಸವಿತುಃ ವರೇಣ್ಯಂ ಭ । ರ್ಗೋದೇವಸ್ಯ ಧೀಮಹಿ ಧೀಯೋಯೋನಃ ಪ್ರಚೋದಯಾ। ಆದಿಮೂರುತಿ ನಮ್ಮ ವಿಜಯ ವಿಠಲನ ಶ್ರೀ । ಪಾದವ ನೆರೆನಂಬು ಓಂಕಾರ ನುಡಿಯುತ್ತಾ ॥೫॥

ಅಟ್ಟತಾಳ

ಇದರಮೇಲೆ ಏಕ ಪಂಚಾಶದ್ದಳವುಳ್ಳ। ಪದುಮವ ಬರೆದು ಪ್ರದಕ್ಷಿಣಿ ಮಾಡಿ। ಮುದದಿಂದ ದ್ವಿರಷ್ಟ ಮಿಕ್ಕ ಮೂವತ್ತೈದು । ಇದೆ ಇದೆ ದಳ ದೊಳು ಲಿಪಿಸಿ ಅಜಾದಿಯ। ವೊದಗಿ ಸ್ತೋತ್ರವಮಾಡು ವರ್ಣದೇವತ ವೆಂದು। ತುದಿ ಮೊದಲಿದರ ವಿಸ್ತಾರವೆ ಈ ಪರಿ। ಇದೆ ಚಕ್ರಾಂಬುಜ ವೆಂದು ಕರೆಸುತಿಪ್ಪದು। ಹೃದಯಾಕಾಶ ವಾರಿ ಸ್ಥಂಡಿಲ ಗಗನ ಸೂರ್ಯ। ವಿಧು ಮಂಡಲ ಸಮಸ್ತ ಉತ್ತಮಸ್ಥಾನ। ಇದೆ ನಿರ್ಮಾಣಮಾಡಿ ಸತ್ಕರ್ಮ ದಲಿ ನಿತ್ಯ। ಪದೋಪದಿಗೆ ಶ್ರೀಹರಿಯ ಧ್ಯಾನಮಾಡಲಿಬೇಕು। ಇದರೊಳು ಏಳು ಕೋಟಿ ಮಂತ್ರಾರ್ಥವೆ ಉಂಟು। ಅಧಿದೈವ ಅಧಿಭೂತ ಅಧ್ಯಾತ್ಮವೇ ಉಂಟು। ಅಧಿಕಾರತನಭೇದ ತಿಳಕೊಂಬ ಜೀವಿಗಳಿಗೆ। ಸದಮಲಾನಂದ ನಮ್ಮ ವಿಜಯ ವಿಠ್ಠಲರೇಯಾ। ಬದಿಯಲ್ಲಿ ಇರುತಿಪ್ಪ ಚಕ್ರಾಬ್ಜ ಬಲ್ಲವನಿಗೆ॥

ಆದಿತಾಳ

ಸ್ನಾನ ಉದಕ ಆಚಮನಿಯ ಸಂಧ್ಯಾರ್ಘ್ಯ ತ್ರಿಪದ । ಎಣಿಸುವಾಗ ನಾನಮಂತ್ರ ಜಪಿಸುವಾಗ। ಮೇಣು ಆರ್ಚಾ ಅರ್ಚನೆ ಪಾವಕಾಹುತಿ ಯಜ್ಞ । ಕ್ಷೋಣಿ ಸುರರಪೂಜೆ ಆತ್ಮಸಂತೋಷ ಅನ್ನ। ಪಾನಾದಿ ಕೊಡುವಾಗ ಇದನೆ ಚಿಂತಿಸಬೇಕು। ಏನೆಂಬೆನಯ್ಯಾ ಅವ ಅಪರೋಕ್ಷಿ ಎಂದಿಗೆ ।

ಧ್ಯಾನ ಸಂಪೂರ್ಣಸಿದ್ಧ ಜ್ಞಾನವಂತನಾಹಾ । ಪ್ರಾಣನಾಗಿ ಇಪ್ಪರು ಹರಿ ಸಿರಿ ಪ್ರಾಣಾದ್ಯರು । ಕಾಣಿಸಿ ಕೊಂಬರು ಒಂದೊಂದು ಮಂಡಲದಲ್ಲಿ । ಆನಂದ ಗತಿಗೆ ಸಾಧನ ಬೇಕಾದರೆ । ಮಾನವಾ ಇದನೆ ಕೈಕೊಂಡು ಆಲೋಚಿಸು । ಸ್ಥಾನ ಸ್ಥಾನಕೆ ನಿನಗೆ ಶುಭವಕ್ಕು ಪುಸಿಅಲ್ಲ । ದೀನನಾಥನಾದ ವಿಜಯ ವಿಠಲರೇಯನ್ನ । ಗಾನವಮಾಡಿರೊ ಗ್ರಹಿಸಿ ಈಪರಿಯಿಂದ ॥೭॥

ಜತೆ

ಸಿದ್ಧ ಸಾಧನವಿದು ಬಿಂಬ ಕಾಣುವದಕ್ಕೆ । ಪದ್ಮಿವಲ್ಲಭ ನಮ್ಮ ವಿಜಯ ವಿಠಲಪ್ರಾಪ್ತಿ ॥೮॥

ಹಂಸಮಂತ್ರ ಸುಳಾದಿ ೭

ಪುರುಷ, ಕಾಲರೂಪಗಳ ದ್ವಿವಿಧ ಉಪಾಸನೆ

ಅಧ್ಯಾತ್ಮದಲ್ಲಿ ಚಕ್ರಾಬ್ಜಾದಿ ಮಂಡಲ

ರಾಗ ಭೈರವಿ ಧ್ರುವತಾಳ

ಚೇತನಾ ಚೇತನಾಂತರ್ಗತ ಭಗವದ್ರೂಪ । ಚಾತುರ್ಯದಿಂದ ಉಂಟು ಅಣು ಮಹತ್ತು । ಆತುಮದೊಳು ನೆನಸಿ ನಾನಾಬಗೆಯಿಂದ । ಗಾತುರ ಇಂದ್ರಿಯಂಗಳ ಕಾರ್ಯ ತಿಳಿದು । ಭೌತಿಕ ನೆಚ್ಚದಿರು ಕಾಯ ನಿಂದಿರದು ಜೀ । ಮೂತ (ಭವ) ಛಾಯವೆನ್ನು ಇಹದ ಸೌಖ್ಯ । ಮಾತು ಈಪರಿ ತಿಳಿದು ಮುದದಿಂದ ಪೂರ್ಣ್ಯಕ್ಕೆ ಸಂ । ಕೇತಮಾಡುವೆ ಮಾಳ್ಪ ಮಂತ್ರಗಳಿಗೆ । ಶ್ವೇತದ್ವೀಪವಾಸಿ ವಾಸುದೇವ ಮುಖ್ಯ । ವಾತ ಖದ್ಯೋತ ಗುರು ಇವರಲ್ಲಿಟ್ಟು । ಆ ತರುವಾಯ ತನ್ನ ಹೃತ್ಕಮಲದಲ್ಲಿಪ್ಪ । ಶ್ರೀತರುಣೀಶನ್ನ ಧ್ಯಾನಗೈದು । ಈತನು ಮಧ್ಯದಲ್ಲಿ ಅನಂತ ಅಂಶಾತ್ಮಕ । ಆತನ್ನ ತಂದು ಏಕ ಚಿಂತನೆಗೈದು । ವಾತ ಸ್ಪರಶವಿಲ್ಲದ ದೀಪದಂತೆ ಕುಳಿತು । ಜ್ಞಾತಾನುಷ್ಠಾನದಿಂದ ಗಮನಾಗಮನವನೋಡು । ಕೌತುಕವೆನಿಸುತಿದೆ ಈ ಮಂತ್ರವೊ । ಪೋತತನಾರಭ್ಯ ಯೌವನಜರಠವಿಡಿದು । ಪ್ರೇತ ಯಾತನಾ ದೇಹ ನರಕ ಸ್ವರ್ಗ । ಜ್ಯೋತಿರ್ಮಯ ಶರೀರ ಪುನರ್ಜನನ ಮರಣ । ಈ ತೆರದಲ್ಲಿ ಬಲು ಜನುಮ ಬರಲು । ಭೂತದೊಳು ನಾಲ್ಕು ಎಂಭತ್ತುಲಕ್ಷಯೋನಿ । ಜಾತನಾದ ಕಾಲಕ್ಕೂ ವೊಳಗಿಪ್ಪದು । ಭೂತಿ ಕೊಡುವದಿದು ಅಪ್ರಯತ್ನ ಮಂತ್ರ । ತಾ ತೋರಗೊಡದಯ್ಯಾ

ಅಜ್ಞಾನಿಗೆ। ಪ್ರಾತಃಕಾಲಾರಭ್ಯ ಅಪರೋದಯು ಪರಿಯಂತ। ಆತುವ ದೊಳು ಸಿದ್ಧಾ ಶ್ವೇಚ್ಛಾವೃತ್ತಿ। ಜ್ಞಾತ ಕಾಲಾದಿಯಿಂದ ಗತ ಜನ್ಮಗಳು ಮಿಶ್ರ। ವರಾತೃಗರ್ಭಾದಿ ಸ್ಥಾನಾ ಶೇಷಾರಬ್ಧಾ। ಧೌತವಾಗುವ ತನಕ ಇದೆ ಪ್ರಾಣಮಂತ್ರವೆಂದು। ಪ್ರೀತಿಯಿಂದಲಿ ಜಪಿಸು ಧ್ಯಾನೋಕ್ತದಿ। ಪಾತಕ ನಿನಗಿಲ್ಲ ಕಾಲಕಾಲಕ್ಕೆ ಪುಣ್ಯ। ವ್ರಾತ ಬಂದೊದಗುವದು ಆನಂದಕ್ಕೆ ಶಿತಾಂಶು ರವಿ ಹಸ್ತ ವಿಜಯ ವಿಠಲರೇಯ। ಭೀತರಹಿತನ್ನ ಮಾಳ್ಪ ಮಂತ್ರಾನುಸಂಧಾನಕ್ಕೆ ॥೧॥

ಮಟ್ಟತಾಳ

ಮಂತ್ರಮಾಡುವ ಬಗೆ ತಿಳಿವದು ಚನ್ನಾಗಿ। ತಂತ್ರಸಾರದಿಂದ ಅಂಗಾಂಗುಲಿನ್ಯಾಸ। ಸಂತೋಷದಲ್ಲಿಮಾಡು ಧೃಡತರ ಮನಸಿನಲಿ। ಅಂತರಂಗದಲಿ ಸರ್ವ ರೂಪಾತ್ಮಕ। ಮಂತ್ರದೇವತೆ ಮುಖ್ಯ ಪ್ರಣವ ಮೂರುತಿಯ ಏ। ಕಾಂತದಲ್ಲಿ ಹೃತ್ಕಮಲ ಕರ್ನಿಕೆ ಮಧ್ಯ। ಇಂತಿಹ ಕಮಲಕ್ಕೆ ಚತುರಷ್ಟ ದ್ವಾದಶ। ಮುಂತೆ ಚತುರ್ವಿಂಶತಿ ಐವತ್ತೊಂದು। ಚಿಂತಿಸು ದಳಸಂಖ್ಯೆ ತ್ರಿಕೋಣ ಬೀಜಗಳು। ಯಂತ್ರವಾಹಕ ನಮ್ಮ ವಿಜಯ ವಿಠಲ ಸ್ವ। ತಂತ್ರ ಪುರುಷ ಸರ್ವ ಮಂತ್ರ ನಿಯಾಮಕನೊ ॥೨॥

ತ್ರಿವಿಡಿತಾಳ

ಮನವೆ ಲಾಲಿಸಿಕೇಳು ಲಬ್ಧ ಮಂತ್ರಕೆ ಜಿತಾ। ಸನನಾಗು ಜಯ ವೆಂದು ಹರಿಯ ಸ್ತುತಿಸಿ। ಎಣಿಕೆಯಿಂದಲಿನೋಡು ಒಂದೊಂದುಮಂತ್ರಕ್ಕೆ ಘನವಾಗಿ ವರ್ಣಗಳು ಇಪ್ಪವೇಸೂ। ಎಣಿಸು ಒಂದೊಂದು ದಳದಲ್ಲೊಂ ದೊಂದು ವರ್ಣ। ಮಿನಗುವ ಮತಿಯಿಂದ ಇಡಲಾಬಟ್ಟು। ಇನಿತು ಗ್ರಹಿಸು ಇವಕೆ ಒಂದೊಂದು ಹರಿರೂಪ। ಚಿನುಮಯ ಮೂರುತಿ ಸರ್ವಾ ಭಿನ್ನ। ಗುಣವಂತ ಮಂತ್ರಾತ್ಮಕನನ್ನು ಕೂಡಿಸಿ। ಮಣಿಗಣದಿಂದ ಜಪಿಸು ವಾಗಲಿ। ಅನುಭವವಿರಲಿ ಮಂತ್ರದೇವತೆಸಹಿತ। ಕ್ಷಣಕ್ಷಣಕೆ ನಿನ್ನೊಳು ವಲಯಾಕಾರ। ಗುಣಿಸು ವರ್ಣಾಕ್ಷರ ಆದ್ಯಮೂರುತಿಯಲ್ಲಿ। ಗಣನೆ ಮಾಡುತ ನಿತ್ಯ ಜಿಹ್ವಾಗ್ರದಿ। ಕೊನೆಯಿಂದ ವಾಕ್ಪ್ರಯೋಗಮಾಳ್ಪದರೊಳು ಮಣಿಯಿಂದ ಮಣಿಗೆ ಬೆರಳಚಾಚುವದು। ಅನ ಭಾರತಿ ಪ್ರಿಯ ವಿಜಯ ವಿಠಲ ಸ। ದ್ಗುಣಿಮಣಿ ಖಣಿಯೆಂದು ಅನುದಿನನೆನೆನೆನೆ ॥೩॥

ಅಟ್ಟತಾಳ

ಇದೆ ಮಂತ್ರ ಸಾರ್ಥಕ ಇದೆ ಮಂತ್ರಸಿದ್ಧಿಯೊ। ಇದೆ ಇದೆ ಮಂತ್ರವೊ ಇದೆ ಪ್ರಕಾರದಿಂದ ತತ್ತತ್ತು ಮಂತ್ರವ। ವಿಧಿಯಿಂದ ಜಪಿಸುವದು ಹೃದಯು ದಲ್ಲಿ ಯಿಟ್ಟು। ಪದೆ ಪದಗೆ ಬಲುವೊದಗಿ(ರಿ) ಮಾಡುವದೇಕೆ। ಮುದ ಭಕುತಿಯಿಂದಲಿದರಂತೆ ಯೊಂದೆ ಸಾ। ರಿದರೆ ಸತ್ಪುಣ್ಯದ ಉದಧಿ ಸೂಸುವ ದಯ್ಯಾ। **ಮಧುಸೂದನ** ಹರಿ ವಿಜಯ ವಿಠಲರೇಯ। ಪ್ರಧಾನವ ಕೊಡುವನೋ ಒಂದೇಯುಚ್ಚಾರಣೆಗೆ ॥೪॥

ಆದಿತಾಳ

ಮಧ್ಯಮೂರುತಿ ಸುತ್ತ ಸೇವ ರೂಪದಿಂದ। ಪೊದ್ದಿಕೊಂಡಿಪ್ಪವು ಸ್ವ ಮೂರ್ತಿ ಪರಿವಾರ। ಸಿದ್ಧವಾದುದೆ ಕೇಳು ಜಪಿಸಿ ತಿಳಿಯಬೇಕು। ಹೃದ್ಗುಹದಲ್ಲಿ ಇನಿತು ಚಕ್ರಾಬ್ಜ(ಕಾ)ಮಂಡಲ। ಪದ್ಮ ಸುದರ್ಶನದಳದ ವಿಚಾರ ತಿಳಿದು। ಪದ್ಧತಿ ತಪ್ಪದಲೆ ಪರಿಭ್ರಮಣವಾಗುವದು। **ಪದ್ಮ ಬಾಂಧವ** ನಮ್ಮ ವಿಜಯ ವಿಠ್ಠಲರೇಯ। ಉದ್ಧರಿಸುವ ಬಿಡದೆ ಉನ್ನತ ಗತಿಯಿತ್ತು ॥೫॥

ಜತೆ

ಜನುಮದೊಳಗೆಯೊಮ್ಮೆ ಈಪರಿ ಜಪಿಸಲು। ಗುಣತ್ರಯ ನಾಶನ ವಿಜಯ ವಿಠಲ ಪೊಳೆವ ॥೬॥

ಸುಳಾದಿ ೭

ಚಕ್ರಾಬ್ಜಾದಿ ಮಂಡಲ ವಿವರ ಕಾಲರೂಪ ಹರಿಯ ವರ್ಣನಾತ್ಮ ಅಧ್ಯಾತ್ಮ ಉಪಾಸನೆ

ರಾಗ ಸಾರಂಗ ಧ್ರುವತಾಳ

ಅಜ ಅಣಿಮಾ ಯಜ್ಞ ಅಚ್ಯುತ ಹಯವದನ ಕೇಶವ ಈಶ ಈಶ ವೆಂಕಟೇಶ। ಭೂ(ಭು)ಜ ಸ್ಥಿತ ವಿಷ್ಣು ಉರುಕ್ರಮಶರಚಕ್ರ ಗದಾಧರ ಧನುರ್ಧಾರಿ ವೆಂಕಟೇಶ। ರಜದೂರ ಉರಗಾಯ ಉಪೇಂದ್ರ ತಾರಕ್ಷ ಹಲಧರ ಪುರುಷಾಖ್ಯ ವೆಂಕಟೇಶ। ಕುಜನಹರ ಯೋಗೇಶ್ವರ ಪ್ರಶ್ನಿಗರ್ಭ ಪರಮ ಪುರುಷ ಗೋವಿಂದ ವೆಂಕಟೇಶ। ಅಜನಪಿತ ಮಾಧವ ವೈಕುಂಠ ಶ್ರೀಪತಿ ಯಜ್ಞಭೋಕ್ತ ವಿಶ್ವ ವೆಂಕಟೇಶ। ಪ್ರಜನುತ ಇಂದ್ರ ಪ್ರಾದೇಶ ಅಂಗುಷ್ಟ

ಮಾತ್ರ ಶ್ಯಾಮ ಶಬಲವರ್ಣ ವೆಂಕಟೇಶ। ಪ್ರಜಗಳನೋಳ್ಪ ಚಕ್ಷುಸ್ಥ ಲೋಹಿತವರ್ಣ ಜೀವಗತ ರೂಪ ಸಿರಿವೆಂಕಟೇಶ। ಭುಜಗಾದ್ರಿನಿಲಯ ಎನ್ನಪ್ಪ ತಿಮ್ಮಪ್ಪ ಜಗದಪ್ಪ ವಿಜಯ ವಿಠಲ ವೆಂಕಟೇಶ ॥೧॥

ಮಟ್ಟತಾಳ

ಅನಿರುದ್ಧ ಪ್ರದ್ಯುಮ್ನ ಸಂಕುರಷಣ ವಾಸುದೇವಾನಂದಾವೃತ್ಯಷ್ಟಾ। ಜ್ಞಾನರೂಪ ಪ್ರಣವಮೂರುತಿ ಅಶೇಷ ಗುಣಾಧಾರ ಪೂರ್ಣೈಶ್ವರ್ಯ। ಅನಂತ ಸುಖವನಧಿ ತಿರುವೆಂಗಳೇಶ। ವಿಜಯ ವಿಠಲರೇಯ ಪರಮಪದವಿ ಕೊಡುವ ಈಪರಿನೆನಿಸಲು ॥೨॥

ತ್ರಿವಿಡಿತಾಳ

ಪ್ರಣವ ನಾರಾಯಣ ಹರಿ ವಾಸುದೇವ ದ್ಯು। ಹಿಣ ಗಾಯಿತ್ರಿ ಮಾತೃಕಾಪುರುಷ ವಿಷ್ಣು। ಇನಿತು ಮಂತ್ರ ವರ್ಣದೇವತಿಗಳು ಸಂ। ದಣಿಸಿ ಇಪ್ಪರು ಎಂಟು ದಿಕ್ಕಿನಲ್ಲಿ। ವನಜ ಕರ್ನಿಕೆದಳ ಇಂದ್ರಾದಿಗಳ ಬಳಿಯ। ಮಿನುಗುವ ನಾನಾರೂಪವನೆ ಧರಿಸಿ। ಗುಣಿಸು ಈಪರಿಯಲ್ಲಿ ಚಕ್ರಾಬ್ಜಮಂಡಲ। ಎಣಿಕೆಮಾಡು ಮೇಲು ಅಧಿಕವಾಗಿ। ಗುಣ ಸಂಪೂರ್ಣ ನಮ್ಮ ವಿಜಯ ವಿಠಲರೇಯ । ತನುವಿನೊಳಗೆ ಯಿಂತು ನಿಂತು ಪರಿಪಾಲಿಪ ॥೩॥

ಅಟ್ಟತಾಳ

ಕಾಯದೊಳಗೆ ಇದ್ದು ಸರ್ವ ವ್ಯಾಪಾರವ। ಆಯಾಸವಿಲ್ಲದೆ ನಡೆಸುವ ಲಕುಮಿ। ನಾಯಕಗೆ ನಿರ್ಗುಣ ಸೋಹಂ ಉತ್ಪತ್ತಿ। ನಾಯಕ ದಿಂದಲಿ ಭೇದ ಭೇದಾದಿ ಶ್ರೀ । ವಿಯೋಗತನ ಕ್ಲೇಶ ಶೋಕಾದಿ ವಿಪ್ರ ರಾಯತ್ತ್ರ ಅಂತರಾವೇಶ ಪರಾಭವ। ಜಾಯಾದ್ಯಗೋಸುಗ ಶಿವಪೂಜೆ ದೇಹ ವಿ। ಹಾಯು ಪಲಾಯನ ಲಿಂಗಸ್ಥಾಪನ ಅ। ನ್ಯಾಯ ವಿಕಾರಾಂತರವು ಭೌತಿಕ। ಕಾಯ ಸ್ವಯಂ ವ್ಯಕ್ತಸ್ಥಳದಲ್ಲಿ ಚಿದ್ರೂಪ। ತಾಯಿ ತಂದೆ ಗುರು ಚತುರಾವರ್ಣ ಜಾತಿ। ನಾಯಿಗಳೆ ಸಾಕ್ಷಾತ ಭಗವಂತ । ತೋಯಜ ಭವ ರುದ್ರ ಮಿಗಿಲಾದವರಿಗೆ ನಾ। ರಾಯಣನಕೂಡ ಐಕ್ಯ ಸಮಾಧಿಕ್ಯ। ಮಾಯಾ ಗುಣ ಕರ್ಮ ಕಾಲಕ್ಕೆ ಕರ್ತೃತ್ವ। ವಾಯು ಪ್ರತಿಮೆ ವಿನಾ ಹರಿಗೆ ನಮಸ್ಕಾರ। ಈಯವನಿಯಲ್ಲಿ ಅಶ್ವಥ ತುಲಸಿ

ವಿ। ನಾಯಕ ಲಿಂಗ ಸ್ವಯಂ ವ್ಯಕ್ತ ನಿಧಿ ಪುಣ್ಯ । ತೋಯಗಳಲ್ಲಿ ಗಂಡಿಕಿ ಶಿಲಾ ರಹಿತಾದಿ । ಬಾಯಿ ಲಂಬುವದಲ್ಲ ಶೂದ್ರಾದಿಗಳ ಪೂಜೆ । ವಾಯು ವಿಷ್ಣು ಲಿಂಗ ಪ್ರತೀಕದಲ್ಲಿ । ಸ್ಥಾಯುವಾಗಿದ್ದುದು ವಂದನೆ ಮಾಡಸಲ್ಲ । ಈಯವನಿ ಯೊಳು ಶೂದ್ರಾದಿ ಪ್ರತಿಷ್ಠೆ ! ಆಯತಾರ್ಥಕ್ಕೆ ಪೋಗಿ ಸಾಗಿ ಬಾಗಸಲ್ಲ । ಈಯರ್ಥದಲಿ ನಿಶ್ಚಯವೆಂದವನು ಆತ । ತಾಯಿ ವೆಂದೆಂಬೋದು ಸಿದ್ಧ ವಯ್ಯ ಕೇಳಿ । ಕಾಯಜಪಿತನಿಗೆ ಇಂತು ನುಡಿವವಾಕ್ಯ । ನ್ಯಾಯವಲ್ಲವೋ ಸರ್ವವು ಹರಿಸಿಂಧ್ಯವೋ । ಮಾಯಾವರ್ಜಿತ ನಮ್ಮ ವಿಜಯ ವಿಠಲರೇಯನ ಗಾಯನವಮಾಡಲು ನವಭಕುತಿಯನೀವಾ ॥೪॥

ಆದಿತಾಳ

ಜೀವಾದಿ ಭೇದ ಚಿದ್ಗುಣಗಣ ಪೂರ್ಣ ಪರಿ । ಪಾವನ್ನ ಸಾಮ್ಯಾಧಿಕ ರಹಿತ ತದ್ಗತ ಭೇದ । ದೇವ ಪ್ರಾದುರ್ಭವ ವಿಪರೀತಶೂನ್ಯ ವೇ । ದಾವಳಿ ಪ್ರಮಾಣಸಿದ್ಧ ಪ್ರಮೇಯಾವಸ್ತು । ಕೋವಿದ ಹರಿ ಪಾದ ಭಜಕರಸೇವಾ ಸಕ್ತ । ಆವಾವಕಾಲಕ್ಕೆ ನಡಕೊಂಡ ಯೋಗ್ಯಗೆ। ಈ ವಿಧ ತಿಳಿವಿಕೆ ಭಗವದ್ರೂಪಗಳೆಲ್ಲ । ಲಾವಣ್ಯ ಕಾಯದಲ್ಲಿ ಸುಳಿದಾಡುವ ಸುಖದಿ । ದೇವಕ್ಕಿ ನಂದನ ವಿಜಯ ವಿಠಲರೇಯ । ಕಾವ ಸರ್ವದಾ ನಮ್ಮ ಬಳಿಯಲಿ ಯಿದ್ದುನೋಡಿ ॥೫॥

ಜತೆ

ಸಕಲಾಭರಣದಿಂದ ಒಪ್ಪುವ ಸಿರಿಕಾಂತ । ನಿಖಿಳೇಶ ವಿಜಯವಿಠಲ ಶೇಷಗಿರಿಯರಾಯ ॥೬॥

ಸುಳಾದಿ ೮

ಸಪ್ತ (ಸಾವ:) ಕಾಲ ವಿವರ ತತ್ಪ್ರೇರಕ, ತನ್ನಿಯಾಮಕ ಕಾಲರೂಪಿ ಹರಿಯ ಉಪಾಸನೆ, ಚಕ್ರಾಬ್ಜಾದಿಕ ಅಧ್ಯಾತ್ಮಿಕ ವಿಚಾರ

ರಾಗ ರೇಗುಪ್ತಿ ಧ್ರುವತಾಳ

ಸಾಮೋಪಾಸನೆಮಾಡು ಶುದ್ಧಾಂತಃಕರಣದಲ್ಲಿ । ಸಾಮಸ್ತ ಬ್ರೊ–ಮ್ಹಾಂಡವನ್ನೆ ತಿಳಿದೂ । ಶ್ಯಾಮ ಶಬಲವರ್ಣ ಇದ್ದ ಬಿಂಬ ಮೂರ್ತಿಯ ಭೂಮಾದಿ ಗುಣಗಳಿಂದ ಹರಿಯವೊಲಿಸೊ । ನೇಮ ನಿತ್ಯದಲ್ಲಿ ನಿಸ್ಸಂಗನಾಗಿ

ಇದೆ । ಕಾಮಿಸು ಕಾಲಕಾಲಕೆ ಯೋಗಮಾರ್ಗ। ಕಾಮಿನಿ ಮೊದಲಾದ ಭೋಗ ಭಾಗಗಳೆಲ್ಲ। ಶ್ರೀಮನೋಹರ ವಿಷ್ಣು ಸರ್ವೋತ್ತಮ। ರೋಮ ರೋಮಾಂತರದಿ ಮುಕ್ತಾ ಮುಕ್ತರನಿಟ್ಟು । ಸ್ವಾಮಿ ಮಮ ಸ್ವಾಮಿ ಸರ್ವಸ್ವಾಮಿ। ತಾಮಸ ತಾಮಸ ನಿರ್ಲೇಪ ತಾತ್ವಿಕ ಸಾತ್ವಿಕ । ಸಾಮಗಾಯನ ಪ್ರಿಯ ಭೂತಸ್ಥನೆ । ಪ್ರೇಮ ಪರಮನೆಂದು ಹಿಂಕಾರಾದಿ ಪಂಚ। ಸಾಮಾದಿ ಉಪದ್ರವ ಇಂತು ಗ್ರಹಿಸೊ। ಈ ಮಾತಿಗೆ ಪ್ರದ್ಯುಮ್ನ ವಾಸುದೇವ ನಾರಾಯಣ। ನಾಮಾ ಅನಿರುದ್ಧ ಸಂಕರುಷಣ ವರಹಾ । ನೃಮೃಗ ಸಪ್ತ ಭಗವದ್ರೂಪಗಳು ಅಲಿಗಲ್ಲಿ। ನೀ ಮಿದದಲ್ಲಿ ಧ್ಯಾನವ ಮಾಡೋ। ಧೂಮರಹಿತ ಅಗ್ನಿಯಂತಾಹನೊ। ಕಾಮಕ್ರೋಧಗಳೆಲ್ಲ ದಹಿಸಿ ಭಸ್ಮಮಾಡುವ। ಆ ಮೃತ್ಯು ಮಾರಿಗಳು ಭೃತ್ಯರಾಹರೊ। ಹೇಮ ವರ್ಣದಂತೆ ಪೊಳೆವ ಸಜ್ಜನರೊಡನೆ। ಭೂಮಿಯೊಳಗೆ ಅಪ್ರತಿಮಾನವಾ। ಭೀಮ ಭವ ವಾರಿಧಿ ಆವಾಗೆ ಗೋವತ್ಸ ಪಾದೋದಕ। ಸಾಮಿಪ್ಯದಲ್ಲಿ ಕಾಣಿಸುತಿಪ್ಪದೊ। ಶ್ಯಾಮ ಶಬಲವರ್ಣ ದೇವನೆ ಅತ್ಯಣು ನಿ। ಸ್ತೀಮ ಇಂದ್ರಿಯಗಳಿಗಾಗೋಚರ ಪುರುಷ। ವ್ಯಾಮೋಹ ಪುಟ್ಟಿಸುವ ಈತನೆ ಇಷ್ಟ ದೈವ। ಕೋಮಲಗಾತುರ ಬಲು ಸುಲಭ। ಸಾಮಸ್ತ ವ್ಯಾಪ್ತ ವಿಶಿಷ್ಟಾವರಣ ಲಕುಮಿ ಮೀರಿ। ಸ್ವಾಮಿಯ ದಯದಿಂದಲಿ (ಸಾಮದಿಂದಲಿ) ಸ್ವಮಹಿಮ ಕಾಣೊ। ವ್ಯೋಮ ಕಾಲ ವೇದ ಗುಣ ಜೀವರಾಶಿ ತ್ರಿವಿಧ। ಈ ಮಾತಿನಂತೆ ಸರ್ವದ ಎಣಿಸೂ। ಸಾಮೋಪಾಸನೆ ಇದೆ ಮಾಡೊ ಮನುಜಾ। ಸಾಮವಂದಿತ ನಮ್ಮ ವಿಜಯ ವಿಠಲರೇಯಾ। ಕಾಮಿಸಿದಂತೆ ಫಲವ ಕೊಡುತಿಪ್ಪನೊ ॥೧॥

ಮಟ್ಟತಾಳ

ಹಿಂಕಾರ ಪ್ರದ್ಯುಮ್ನ ಪ್ರಸ್ತಾವ ವಾಸುದೇವ। ಉದ್ಗೀಥ ನಾರಾಯಣ ಪ್ರತಿಹಾರ ಅನಿರುದ್ಧ। ಸಂಕರುಷಣ ನಿಧನ ಈಪರಿ ಪಂಚ ಸಾಮ। ಶಂಕೆ ಇಲ್ಲದೆ ಜನರು ಕೊಂಡಾಡಿ ಭಕುತಿಯಲಿ। ಮಂಕು ಬುದ್ಧಿ ಬಲು ದೂರಾಗಿ ಪೋಗುವದು। ಸಂಕಟ ತೊಲಗುವದು ದೇಹದೊಳಗಿದ್ದ। ಓಂಕಾರ ಮೂರ್ತಿ ವಿಜಯ ವಿಠಲನಲ್ಲಿ ಅ। ಲಂಕಾರನಾಗಿ ಪೂಜಿಪ ಜೀವ ಹೃದ್ಗತನಾ ॥೨॥

ತ್ರಿವಿಡಿತಾಳ

ಬಿಂಬೋಪಾಸನೆಮಾಡು ಭಕುತಿ ಪೂರ್ವಕದಿಂದ । ಡಂಬಕವನೆ ತೊರೆದು ಶ್ರೀವೃದಲ್ಲಿ । ಡಿಂಬಾದೊಳಗೆ ಇದ್ದ ಹೃದಯಸ್ಥ ಮೂರ್ತಿಯ ಬೆಂಬಡದೆ ನೋಡುವದು ಬಹು ಪ್ರಕಾರ । ನಂಬು ಸಂತತ ಸಂಯೋಗ ಮೊದಲಾವರ್ತಿಲಿ । ಹೊಂಬಣ್ಣ ವರ್ಣನು ಆ ತರುವಾಯ । ಕಾಂಬ ಮೂರ್ತಿಗಳ ಪೆಸರು ಕೇಳು ಶ್ರೀವಿಷ್ಣು । ಅಂಬುಜ ಸಂಭವ ರುದ್ರನಾಮಾ । ಇಂಬಾಗಿ ಇಪ್ಪದು ಪರಿಚ್ಛೇದ ತ್ರಯದಲ್ಲಿ । ಅಂಬುಧಿ ನಂದನೆ ಲಕುಮಿ ನಾಣಿ । ಅಂಬಿಕ ನಾಮಾದಲ್ಲಿ ತತ್ತ್ವಸ್ಥಾನದೆಡಿಯಾ । ಬೆಂಬಲವಾಗಿ ಪಾಲಿಸು ತಿಪ್ಪಳು । ತುಂಬಿದ ಪ್ರಕೃತಿ ಗುಣ ಸಾಮ್ಯ ಪರಮಾಣುಗಳು । ಎಂಬೊವು ಒಂದೊಂದಾನಂತ ಮಿಳಿತ । ಇಂಬುಗೊಂಡಿಹವು ಅವ್ಯಕ್ತಾದಿ ಮನ । ಅಂಬಕ ಮಿಕ್ಕಾದ ದಶ ಕರಣ । ಅಂಬರಾದಿಭೂತ ಪಂಚ ತನ್ಮಾತ್ರಿಗಳು ಎಂಬ ತತ್ವಗಳು ಇಪ್ಪತ್ತುನಾಲ್ಕು । ತುಂಬಿದ ಚಿತ್ತದಲ್ಲಿ ವಿಚಾರಿಸಿ ಹರು । ಷಾಂಬುಧಿಯೊಳಗಿರು ಹಗಲಿರಳು । ಶಂಬರಾರಿ ಜನಕ ವಿಜಯ ವಿಠಲ ರೇಯ । ನಂಬಿದ ಭಕ್ತರಿಗೆ ನಾನಾಪರಿ ಪೊಳೆವ ॥೩॥

ಅಟ್ಟತಾಳ

ಗುಣ ಕಾಲ ದೇಶವು ಕರ್ಮ ನಾನಾ ಜೀವಾ । ನೆನೆಸೋದು ಅನಾದಿ ಯಿಂದ ಸಿದ್ಧವೆಂದು । ಎಣಿಸಿ ಕಾರ್ಯಗಳೆಲ್ಲ ಸೂಕ್ಷ್ಮ ಸ್ಥೂಲ ಬಹು । ಗಣನೆ ಇಲ್ಲದೆ ಬೊಮ್ಮಾಂಡ ಬಾಹ್ಯಾಂತರ । ಕ್ಷಣ ಬಿಡದಲೆ ಸಾಮವಿದ್ಯ- ವನುಗ್ರಹಿಸಿ । ಇನ ಮಂಡಲದಲ್ಲಿ ಉಪಾಸನೆ ಹೃ । ದ್ವನಜದಲ್ಲಿ ಇದೆ ವಿಧ ದಲ್ಲಿ ತಿಳದು । ಗುಣವಂತನಾಗು ಭವ ಬೀಜವ ನೀಗು । ತೃಣ ಮೊದಲಾದ ದ್ರವ್ಯದಲ್ಲಿ ಯೋಚಿಸು । ಗುಣಗಣ ಪೂರ್ಣ ಶ್ರೀ ವಿಜಯ ವಿಠಲನ್ನ । ಮನಮೆಚ್ಚಾ ಭಜಿಸಿ ಮಹತ್ಕಾರ ಸೇರೊ ॥೪॥

ಆದಿತಾಳ

ಒಂದೆರಡು ಮೂರು ನಾಲ್ಕು । ಮುಂದೈದು ಆರೇಳೆಂಟು । ನಂದಾನ ಹತ್ತು ಹನ್ನೊಂದು ಹನ್ನೆರಡು ಇಂ । ತೊಂದು ಈಪರಿ ಇಪ್ಪತ್ತೆರಡರ ಪರಿ ಯಂತ ಸು । ನಂದದಿಂದಲಿ ಎಣಿಸಿ ಸಾಮೋಪಾಸನೆಮಾಡು । ಕುಂದದಲೆ ಕೇಶವಾದಿ ಮತ್ಸ್ಯಾದಿ ವಾಸುದೇವ । ವಂದಿಸಿ ಇನಿತು ನಿತ್ಯ ಕೊಂಡಾಡಿ

ಕಂಡಲ್ಲಿ। ನಿಂದಲ್ಲಿ ಧ್ಯಾನಮಾಡು ಸ್ಮರಿಸು ವಿವೇಕನಾಗಿ। ಎಂದೆಂದಿಗೆ ಕೇಳು ಪಾಪಲೇಪವೆ ಇಲ್ಲಾ । ಬಂಧನ ಪರಿಹಾರ ಭಕುತಿವಮಾತುರವಮಾಡು ನಂದ ಮೂರುತಿ ನಮ್ಮ ವಿಜಯ ವಿಠಲರೇಯ । ಬಂದು ಹೃತ್ಕಮಲದಲ್ಲಿ ಸುಳಿದಾಡುವನಲಿದು ॥೫॥

ಜತೆ

ಸಕಲಬಗೆಯಿಂದ ಸಾಮವಂತನಾಗು। ರುಕುಮಣಿಪತಿ ವಿಜಯ ವಿಠಲನ್ನ ಸ್ಮರಿಸು ॥೬॥

ಸುಳಾದಿ ೯

ಧ್ಯಾನೋಪಾಸನೆ ತದ್ವಿವರ, ಧ್ಯಾನೋಪಾಸನೆಯ ಮೆಟ್ಟಿಲುಗಳು ತದಾಚರಣೆ ನಿಯಮ, ಧ್ಯಾನಗೈಯ್ಯಲು ಯೋಗ್ಯನಾಗುವಬಗೆ

ರಾಗ ಮಧ್ಯಮಾವತಿ ಧ್ರುವತಾಳ

ಸಾಮನ್ಯಧಾನ್ಯವಿದು ಮಾನ್ಯವಂತರು ಕೇಳಿ। ತಾಮಸ ಭಕ್ತಜನಕೆ ಪೇಳಸಲ್ಲ। ಸ್ವಾಮಿ ಭೃತ್ಯನ್ಯಾಯಬಲ್ಲ ತಾತ್ವಿಕರಿಗೆ। ಈ ಮಹಾ ಮಹಿಮೆಯ ತಿಳಿವದೊ । ಕಾಮಕ್ರೋಧಗಳಳಿದು ತನ್ನ ಚಿತ್ತಕ್ಕೆ ಸುಖ। ಸ್ತೋಮವಾಗುವ ಸೂಚನೆ ಗ್ರಹಿಸಿ । ನೇಮವಾದ ಭೋಜನ ನಿದ್ರಾ ನಾನಾ ವ್ಯಾಪಾರ। ಭೂಮಿವೊಳಗೆ ನಿರ್ಭಯವೆ ಸರಿ । ಕೋಮಲನಾಗಿ ಮಾಡಿ ಸ್ವಧರ್ಮ ಬಿಡದಲೆ। ಯಾಮ ಯಾಮಕೆ ಹರಿ ನಾರಾಯಣ। ರಾಮಾನಂತ ಗೋವಿಂದ ಅಚ್ಯುತ ಕೃಷ್ಣನೆಂಬೊ। ನಾಮಾಮೃತದಲ್ಲಿ ವೋಲಾಡುತ। ಹೇಮ ರಜತ ರತುನ ಧನಧಾನ್ಯ ಪಶುವ್ರಾತ। ಧಾಮ ಸತಿ ಸುತರು ಕೇವಲವಾಗಿ। ತಾಮುನಿದು ಪೋಗದೆ ನಶ್ವರದೇಹದಲ್ಲಿ। ಪ್ರೇಮ ಅನವರತ ಇದ್ದದರೊಳು। ಕಾಮ ಅನುದಿನ ಹೊರ್ತು ಶ್ರೀರಮಣನ್ನ ಪಾದ ತಾಮರಸದಲ್ಲಿ ಏಕಾಗ್ರದಿ। ಪ್ರೇಮ ಉಳ್ಳವನಾಗಿ ಹರಿ ಪರ ಪರ ಬೊಮ್ಮ ಕಾಮಾದಿಗಳವೊಡೆಯ ಸುಲಭನೆಂದು। ಸಮಸ್ತ ವೇದಾತೀತ ನಿರವರಧಿಕ ನಿಗಮ। ತಮ ಸರ್ವ ಭವ ತಾರಕನೀತಾ ನಿತ್ಯ। ನಿಷ್ಕಾಮದಲ್ಲಿಗೆ ಮನಸು ಮಾಡಿ ಪ್ರಮೋದದಿಂದ । ರೋಮಾಂಚನಮಹಸ್ನೇಹದಿಂದ ಬಿಡದೆ। ಯಾಮಿನಿ ನಾಥ ವರ್ಣ ವಿಜಯ ವಿಠಲರೇಯ। ಕಾಮಿಸಿದ ಫಲಕೊಡುವನು ಭಕ್ತರಿಗೆ ॥೧॥

ಮಟ್ಟತಾಳ

ತಪ್ತಗಿಷ್ಟವಾದ ಪ್ರತಿಮೆಯನು ಸುಲ । ಕ್ಷಣ ಉಳ್ಳದೊಂದು ಕ್ಷಿಪ್ರ ಮತಿಯಲ್ಲಿ। ದಣಿ ದಣಿ ನೋಡುತ್ತ ಮುಂಭಾಗದಲ್ಲಿ ಯಿಟ್ಟು। ಮಣಿಮಯ ಮಕುಟ ಕಾಂಚನ ತೊಡಗಿಯ ತೊಡಿಸಿ । ಗುಣಗಣ ಪರಿಪೂರ್ಣ ಸಾಕಾರ ನೆಂದು। ಇನಿತು ಚಿಂತಿಸಿ ಪ್ರತೀಕದೊಳಗೆ ಇದೆ। ನೆನೆದು ತದ್ಗತವಾದ ಮೂರ್ತಿಯ ಮಧ್ಯದಲ್ಲಿ । ಅನಿಲದೇವನ ಸ್ಮರಿಸಿ ಇದರಂತೆ ಯೋ। ಚನೆ ಮಾಡು ವೊಳಗೆ ಚಿನುಮಯ ಕಾಯನ। ನಿನಗೆ ನೀನೆ ತಿಳಿ ದ್ವಯ ಬಿಂಬವ ತರುವಾಯ । ಸನುಮಾರ್ಗವನ್ನೆ ಸು(ಸ)ಜ್ಞನ ದಿಂದಲಿ । ಇನಿತು ಗೋಳಕವೆಂದು ನುಡಿಯದಿರೊ ಮಂದ । ಜನರಿಗೆ ಮಾತುರ ಪೇಳಿದೆ ನೋಡಿರೊ । ಘನ ಜ್ಞಾನಿಗಳೊಡೆಯ ವಿಜಯ ವಿಠಲರೇಯ। ಅನುದಿನ ಯೋಗ್ಯರಿಗೆ ಗೋಚರಿಸುವಕಾಣೊ ॥೨॥

ತ್ರಿವಿಡಿತಾಳ

ಎದುರಿಲಿ ಮೂರ್ತಿಯ ಇಟ್ಟು ಪೂಜಿಸಿ ತನ್ನ । ಸದಮಲ ದೃಷ್ಟಿ ಯಲಿ ನೋಡಿ ನೋಡಿ । ಪದಮೂಲಪಿಡಿದು ಕಿರೀಟ ಪರಿಯಂತ । ಇದೆ ಇದೆ ಪರಿಯಲ್ಲಿ ನಿರೀಕ್ಷಿಸುತ್ತ । ಸುಧೆಯನ್ನು ಕುಡಿದಂತೆ ಇದ್ದ ಮೂರ್ತಿಯ ಬಾಹಿ । ರದ ಧ್ಯಾನ ಚನ್ನಾಗಿ ನಿಲ್ಲಲಾಗಿ । ಒದಗಿ ವಾಸನಮಯ ಜಡದಿಂದ ನಿರ್ಮಾಣ । ಹೃದಯದೊಳಗೆ ಬೇಗ ಮಾಡಿಕೊಂಡು। ಅದನೆ ಪೂಜಿಸ ಬೇಕು ಮರಳಿ ಮರಳಿ ಚಿತ್ತದಲ್ಲಿ । ನಿಂದಲ್ಲಿ ಕುಳಿತರೆ ಮಲಗಿದರೆ। ಇದೆ ಇದೆ ಅಭ್ಯಾಸಮಾಡಲು ಬಲು ಜ । ನ್ಮದಲ್ಲಿದ್ದ ವಾಸನಮಯ ಮೂರುತಿ । ಪದೊ ಪದಿಗೆ ಸಾಂಗೋಪಾಂಗದಿಂದಲೆ ಪೊಳೆವ । ಇದುರಲಿ ಇಟ್ಟಿದ್ದ ದ್ರವ್ಯ ದಂತೆ। ಮದನ ಜನಕ ನಮ್ಮ ವಿಜಯ ವಿಠಲರೇಯ। ಇದನೆ ಹಿಂದುಮಾಡಿ ಹೊಸಪರಿತೋರಿಸುವಾ ॥೩॥

ಅಟ್ಟತಾಳ

ನಿರುತ ವಾಸನಮೂರ್ತಿ ಪೂಜಿಸಲು ಕಾಲ। ಪರಿಪಕ್ವಬರಲಾಗಿ ಹರಿಕರುಣದಿಂದ ಗುರುಕೃಪೆ ಮಾಡುವ। ಸರನೆ ಈ ಮೂರ್ತಿ ಇವನ ಕಣ್ಣಿಗೆ ಗೋ। ಚರಿಸೋದು ಈತನೆ ತೋರುವ ಪ್ರಾಜ್ಞಾಕ್ಷಿ ಪೆ। ಸರು ಉಳ್ಳ ಆತ್ಮ ಬಿಂಬ ನಾಮಕನೆಂದು । ಕರಿಸಿಕೊಳ್ಳುತಲಿಪ್ಪ ಕಡೆಮನೆ

ಧೊರೆಯೆಂದು । ಶರಣರಿಗೆ ಮಿರಗುವ ಅಂತರಂಗದಲ್ಲಿ । ಅರಿದೆ ಅವನ ಯೋಗ್ಯತವನ್ನೆ ಪಸರಿಸಿ । ಪರಮಪುರುಷ ನಮ್ಮ ವಿಜಯ ವಿಠ್ಠಲಮುಂದೆ ಕುರುಹ ತೋರುವ ನಿಜಸ್ವರೂಪದೇವನ್ನಾ ॥೪॥

ಆದಿತಾಳ

ಜೀವಾಂತರ್ಗತವಾದ ಮೂರ್ತಿಯೆ ತಾನಾಗಿ । ಆವಾಗ ಪೊಳೆಯಲು ಸಂಚಿತಾಗಾಮಿ ಕರ್ಮ । ಬೇವೋದು ಅನುಭವಿಪ ಪ್ರಾರಬ್ಧಕರ್ಮಂಗಳೆಲ್ಲ ನೋವು ಸುಖವಾದರು ಉಂಡು ತೀರಿಸಬೇಕು । ಆ ವಿರಾಜನದಿಯಲ್ಲಿ ಮುಳುಗುವ ಪರಿಯಂತ । ತ್ರೀವಿಧ ಯೆನಿಸುವ ದೇಹ ನಾಶವಿಲ್ಲ । ದೇವನ ಲೀಲೆಯಂತೊ ಅಧಿಕಾರಭೇದದಿಂದ । ತಾ ಪೊಳಗಿದ್ದು ಸರ್ವಬಗಿಯನ್ನು ಮಾಡಿಸುವ । ಪಾವನ ಜೀವಕ್ಕೆ ತಮಸ್ಸು ಎಂದಿಗೂ ಇಲ್ಲ । ಕೋವಿದರು ಕೇಳಿ ಕೌತುಕವೆನ್ನದಿರಿ । ಶ್ರೀ ವಲ್ಲಭ ನಮ್ಮ ವಿಜಯ ವಿಠಲರೇಯ । ಜೀವರ ಸ್ವರೂಪದಂತೆ ಧ್ಯಾನವಕೊಡುವಾ ॥೮॥

ಜತೆ

ಆಚಾರವಂತನಾಗಿ ಧ್ಯಾನಮಾಡಲಿಬೇಕು । ರೋಚನ ಪ್ರೀಯ ವಿಜಯ ವಿಠಲನ್ನ ಮೂರ್ತಿಗಳ ॥೬॥

ಅಧ್ಯಾತ್ಮ ಸುಳಾದಿ ೧೦

ಸ್ಥೂಲ ದೇಹಾರಂಭಿಸಿ ಪ್ರಾಕೃತ ಅನಿರುದ್ಧ ಅವ್ಯಕ್ತ ಲಿಂಗದೇಹ ವಿಚಾರಪೂರ್ವಕ ಅಧ್ಯಾತ್ಮ ಉಪಾಸನೆ, ತತ್ ಕಾರ್ಯಪ್ರವರ್ತಕ ಹರಿಯರೂಪಗಳ ಧ್ಯಾನ

ರಾಗ ಭೈರವಿ ಧ್ರುವತಾಳ

ಸಪ್ತಾವರಣ ದೇಹ ಸತತ ಸಾಧನಗೇಹ । ಆಪ್ತನು ಅನಂತ ಗುಣ ರೂಪಾತ್ಮಕ ಹರಿ । ತಪ್ತ ಕಾಂಚನದಂತೆ ಪೊಳಗೆ ಸುಳಿವ ನಿ । ರ್ಲಿಪ್ತನು ಸಮಸ್ತ ದೋಷರಾಶಿಗಳಿಂದ । ತೃಪ್ತನು ಅನಾದ್ಯಂತಕಾಲದಲಿಂದ । ಪ್ರಾಪ್ತನಾಗುವ ಕೇವಲ ನಂಬಿದವರಿಗೆ । ಗುಪ್ತ ಮಹಿಮ ಗುಣಾಸಾಂದ್ರ ಸುಜನಾಬ್ಧಿ ಚಂದ್ರ । ವ್ಯಾಪ್ತ ಪ್ರಧಾನಪುರುಷ ಅಣುರೇಣುಸ್ಥಾನದಲ್ಲಿ । ಶಪ್ತಮಾಡಿದಮೇಲೆ ಭಕ್ತರ ಪೊರೆಯದಿರಾ । ಸುಪ್ತಿಕಾಲದಲ್ಲಿ ಏಕಮೇವನೆನಿಸುವ । ಕ್ಲೃಪ್ತಿಗೆ ಲೇಶಾಂಶ ಕೊರತೆ ಎನಿಸಾಶ್ರೀಶ । ಜಪ್ಪರ ಮನದಲಿ

ಮುಂದೊಲಿದು ಪೊಳೆವ। ದೀಪ್ತ ಮೂರುತಿ ನಮ್ಮ ವಿಜಯ ವಿಠಲ ಕಮಲಾಪ್ತನಂತೆ ಪೊಳೆದು ಅಜ್ಞಾನಾಂಧ ಓಡಿಸುವ ॥೨॥

ಮಟ್ಟತಾಳ

ತ್ವಕ್ಚರ್ಮ ಮಾಂಸ ಮಜ್ಜ ಮೇದಸ್ಸು ಅಸ್ಥಿ । ರಕುತ ಸಮೇತ ಸಪ್ತಧಾತುಗಳು । ಯುಕ್ತಿವಂತರು ಮನಃಪೂರ್ವಕದಿಂದ। ಉಕ್ತಿ ತಿಳಿದು ಹರಿಯ ಕೊಂಡಾಡುವರು। ಭಕುತಿಯಿಂದಲಿ ಒಮ್ಮೆ ಸ್ಮರಣೆಮಾಡೇ । ಮುಕುತಿಗೆ ಇದೆ ಮಾರ್ಗ ಅನ್ಯಯೋಚನೆಸಲ್ಲ । ಕಕುಲಾತಿಯಿಂದ ಅನ್ಯ ಗ್ರಂಥವನೋದಿ । ಕರ್ಕಸ ಯಾತನೆಯ ಒಳಗಾಗುವದಲ್ಲ। ನಖ ಶಿಖ ಪರ್ಯಂತ ಗುಣಿಸಿ ಎಣಿಸುವದು। ಸುಖ ತೀರ್ಥರ ಮತದ ಮನುಜರ ನೆರೆನಂಬಿ । ಸುಖಪೂರ್ಣ ನಿತ್ಯ ವಿಜಯ ವಿಠಲರೇಯನ। ಭಕುತರೊಳಗೆ ನಲಿದು ಭವ ಉತ್ತರಿಸುವದು ॥೨॥

ರೂಪಕತಾಳ

ತನುರೂಹದಲ್ಲಿ ಹಿಂಕಾರ ಪ್ರದ್ಯುಮ್ನ। ನನು ಕಾಣೋ ತ್ವಕ್ಕಿನಲ್ಲಿ ಪ್ರಸ್ತಾವನಾಮಕ। ಅನಿರುದ್ಧ ರಾಮನು ಚರ್ಮದಿ ಸಂಕರು। ಷಣನೆಂಬ ಪ್ರತಿಹಾರ ನಾಮಕ ಶ್ರೀಪತಿ। ಗುಣನಿಧಿ ಉದ್ಗೀಥ ನಾಮಕ ವಾಸುದೇ । ವನು ವರಾಹಾಮೂರ್ತಿಗಳು ಮಾಂಸದಲ್ಲಿ ಉಂಟು। ನೆನಿಸು ಶಾಂತಿ ಸಂವಿದ ನಿಧನ ನಾಮಕ ನಾರಾ। ಯಣ ದ್ವಯ ರೂಪಗಳು ಶೋಣಿತದಲಿ ವಾಸ। ಪ್ರಣವ ಪ್ರತಿಪಾದ್ಯ ವಷಟ್ಕಾರನಾಮಕನು ಷ। ಡ್ಗುಣನೆಂಬೊ ಎರಡನ್ನು ಮೇದಸ್ಸಿನಲ್ಲಿ ತಿಳಿ। ಘನಶೋಕ ಹರ ಸಾರನೆಂಬೊದಾದಿ ನಾರಾಯಣ ಮೂರ್ತಿ ಇಪ್ಪರು ಮಜ್ಜದಲ್ಲಿ ಬಿಡದೆ। ಜನನರಹಿತ ಹಂಸನಾಮಕ ಉಪೇಂ। ದ್ರನು ಪೊಳೆವ ಅಸ್ಥಿಗಳೊಳಗಿದ್ದು ತಪ್ಪದೆ। ಮನೋನಿಯಾಮಕ ನೊಡೆಯ ವಿಜಯ ವಿಠಲರೇಯ। ಅಣುರೇಣು ತೃಣಕಾಷ್ಟ ಬಹಿರಂತರ ಭರಿತ ॥೩॥

ಝಂಪೆತಾಳ

ಪೇಳಲೇನು ಮುಂದೆ ಅಸ್ಥಿ ಮಜ್ಜದಲ್ಲಿ ಅಂ। ಗುಲಿ ಪರ್ವಗಳಲ್ಲಿ ಸಾವಿರದ ಎಂಭತ್ತು। ಮೇಲು ಭಗವದ್ರೂಪ ಮೂರುಕಡೆ ಇಪ್ಪದು। ಹೋಲಿಕೆಯ ಬಲ್ಲವರಾರು ಬುಧರು। ಏಳು ಧಾತುಗಳೊಳಗನ್ನಮಯಾದಿ

ಕೋಶ। ಮೇಲು ಕೆಳಗೆ ಕವಚದಂದದಿ। ವಾಲಯವಕ್ಕು ಅದರೊಳಗೆ ತನ್ನಾಮಕ। ಶ್ರೀಲೋಲನಿಪ್ಪನು ಅಯಿದುರೂಪಾ। ಏಳಲವಮಾಡದೆ ಸೂಕ್ಷ್ಮ ಸೃಷ್ಟಿಯಲ್ಲಿ। ನಾಲ್ಕು ಮೂರ್ತಿಗಳು ಅನಿರುದ್ಧಾದಿ। ಆ ಲಿಂಗ ದೇಹಕ್ಕೆ ಅವರಕವಾಗಿಹವು। ಆಲಿಸಿದರೆ ಅಂಗಿತೊಟ್ಟ ತೆರದಿ। ಪಾಲಿಸುವ ಪ್ರತಿದಿನ ವಿಜಯ ವಿಠಲರೇಯನ। ಊಳಿಗವನುಮಾಡೆ ಉದ್ಧಾರನಾಗುವಾ॥

ತ್ರಿಪುಡಿತಾಳ

ಹದಿನಾರುಕೂಡಿದ ಅನಾದಿ ಲಿಂಗದೇಹ। ಇದು ಉಂಟು ಕವಳೆಯಂದದಿ ಜೀವಕ್ಕೆ ಮುಚ್ಚಿ। ಅದರೊಳು ಪುರುಷನಾಮಕ ಭಗವಂತನು। ಕದಲಿ ಪೋಗದೆ ಸರ್ವ ಸ್ವರೂಪದಿ। ಮುದದಿಂದ ಇಪ್ಪನು ಅಗಲನು ಕ್ಷಣಮಾತ್ರ। ಪದುಮಜವಿಡಿದು ಜೀವಿಗಳೊಳಗೆ। ಕುದುರೆಯ ಕೂದಲು ಸಹಸ್ರಭಾಗಮಾಡೆ। ಅದರ ಪ್ರಮಾಣ ನಿಶ್ಚಯ ಜೀವವೊ। ಇದೇ ಬ್ರಹ್ಮಾದಿಗಳಿಗೆ ಒಂದೇ ಪ್ರಕಾರವು। ಅಧಿಕಾರತನ ಭೇದ ಗುಣವನೋಡು ತ್ರಿದಶಗಣಕೆ ಅಂಶತೋವ್ಯಾಪ್ತಿ ಶರೀರ। ವದೆ ಮಿಕ್ಕಾದವರಿಗೆ ಪ್ರಕಾಶಿತಾ ಇದೆ ಇದೆ ಸಿದ್ಧ ಶ್ರುತಿ ಸ್ಮೃತಿ ಸಮ್ಮತ। ಪದೋಪದಿಗೆ ಹರಿಯ ಮರಿಯದಿರು। ವಿಧಯಿಂತು ಇರಲಿಕ್ಕೆ ಜೀವೇಶವೊಂದೆಂಬ। ಅಧಮಾಧಮರ ಕರ್ಮವೇನೆಂಬೆನೋ। ಕ್ಷುಧೆಯಗೋಸುಗಪೋಗಿ ಕಂಡ ಕಂಡ ಜನರ। ಪದಕೆ ಬೀಳುವ ಮನುಜ ಬೊಮ್ಮನೆಂತೊ। ಸುದತಿ ವಂಚಿಸಿ ಸುತರಪಡದ ಕಾರ್ಯವತಿಳಿಯಾ। ಮದ ಗರ್ವ ಮತಿತಾನು ದೈವ ಸಮನೇ। ಮದುವೆಯ ಮಾಡುವ ತನ್ನ ನಷ್ಟವ ತಿಳಿಯದೆ। ತದುಪರಿ ಶೋಕಿಸುವ ನೆಲೆಗಾಣದೆ। ವೊದಗಿ ಪೋಗುವ ಪಯಣಗತಿಯಲ್ಲಿ ಗ್ರಾಮಕ್ಕೆ। ಹದುಳ ಾಣದಲಿಪ್ಪ ಸೇರುವದೊ। ಮದ ಸೊಕ್ಕಿದವರನ್ನು ಕೊಲ್ಲುವ ವಿಜಯ ಠಲ। ಇದೇ ದೇಹ ನಿರ್ಮಾಣಮಾಡಿದ ಮಹಾಮಹಿಮ ॥೫॥

ಧ್ರುವತಾಳ

ಆರಂಗುಲ ಪ್ರಮಾಣ ಪೊಕ್ಕಳಧೋಭಾಗ। ಶಿರಸು ಪರಿಯಂತ ್ರಹ್ಮನಾಡಿ। ಘೋರ ನೋಡಿದರು ಕೇವಲ ಸೂಕ್ಷ್ಮ ನಿರ್ಮಳ। ಧಾರಾಳ ಾಗಿಪ್ಪದು ಮಧ್ಯದಲ್ಲಿ। ಈ ರೀತಿ ಇದೆ ಸುಷುಮ್ನವೆಂದೆನಿಪದು।

ಮೂರೊಂದು ಇದಕೆ ಪ್ರಭೇದನಾಡಿ । ಚಾರು ವಜ್ರಿಕಾರ್ಯಕ ಪ್ರಕಾಶಿನಿ ವೈದ್ಯುತಿ। ಸೇರಿಸಿಕೊಂಡಿಪ್ಪವು ಚತುರ ಭಾಗ । ಸಾರಿರೈ ಹರಿತಾ ನೀಲ ಶ್ವೇತ ಪಿಂಗಳ ರಕ್ತ । ನಾರಾಯಣಾಂತ ಕೃತಿಪತಿತನಕ । ಮೂರೊಂದು ಒಂದು ನಾಡಿಯೊಳಗೆ ಈ ಕ್ರಮವವರ್ಣ । ಮೂರುತಿಗಳಿಪ್ಪವು ವಾಸವಾಗಿ ಬೇರೆ ಬೇರೆ ನಾಡಿ ಸ್ಥಾನದಲ್ಲಿ ಲಕುಮಿ ; ವಾರಿಜಾದ್ಯರಿಂದ ತುತಿಸಿಕೊಳುತ ಪಾರತಂತ್ರವಿಲ್ಲದ ವಿಜಯ ವಿಠಲರೇಯ । ಆರಾಧಿಸುವ ಜನಕೆ ಬೆಂಬಿಡದೆ ಬೆಂಬಲನು ॥೬॥

ಮಟ್ಟತಾಳ

ಸತತ ಈ ನಾಡಿ ಮೂಲಸ್ಥಾನದಲ್ಲಿ । ಚತುರದಳ ಪದುಮರಕುತ ವರ್ಣ । ಹುತಾಶನ ಮಂಡಲ ತ್ರಿಕೋಣಾಕಾರ । ಅತಿಶಯವಾದ ನಾಭಿ ಸ್ಥಾನದಲ್ಲಿ। ಚತುರ ದ್ವಿದಳ ವನಜ ರಕ್ತವರ್ಣ । ಪತಿತನ ಶೋಷಿಸುವ ಆರುಕೋಣೆಯು ಮಾ। ರುತ ಮಂಡಲವೆನ್ನಿ । ಕೃತಿಪತಿ ಮೊದಲಾದ ಐದು ಮೂರುತಿಯು ಉ । ಕುತ ಕ್ರಮದಿಂದ ಇಪ್ಪವು ಅನುಗಾಲ । ಚ್ಯುತ ದೂರ ನಮ್ಮ ವಿಜಯವಿಠಲ ಕಾಣಿರೊ । ನುತಿಸಿದವರಿಗೆ ಸದ್ಗತಿಯನು ಪಾಲಿಸುವಾ ॥೭॥

ತ್ರಿವಿಡಿತಾಳ

ಹೃದಯಸ್ಥಾನದಲಷ್ಟದಳದಿಂದಲೊಪ್ಪುವ । ಪದುಮ ಇದರ ಮೇಲೆ ರವಿ ಮಂಡಲ । ಅದನು ನೋಡಲಾಗಿ ಮೂರು ಕೋಣೆಯುಳ್ಳ । ತ್ರಿದಶ ಮೊಗ ಮಂಡಲ ಪೊಳೆವತಿದಕೊ । ಅದನು ಕಳೆದು ತಿಳಿ ಹನ್ನೆರಡು ದಳವುಳ್ಳ । ಪದುಮವೆವುಂಟು ಉರಃಸ್ಥಾನದಲ್ಲಿ । ದ್ವಿದಳ ಶುಕ್ಲ ಪದುಮ ತಾಲುದಲ್ಲಿ ನೋಡು । ವಿಧುಮಂಡಲವದರ ಮೇಲೆ ಸಿದ್ಧಾ । ಪದುಮ ಶುಭ್ರ ಎಸಳ ಎರಡರಿಂದೊಪ್ಪುತ । ಇದೆ ಭ್ರೂ ಮಧ್ಯಾಗ್ನಿ ಮಂಡಲ ತ್ರಿಕೋಣ । ಪದುಮ ದ್ವಾದಶ ಎಸಳು ಶುಕ್ಲವರ್ಣದಲ್ಲಿ । ಪ್ಪದು ಶಿರಸ್ಸಿನಲ್ಲಿ ವರ್ತುಳ ಮಂಡಲ । ನದಿ ಪತಿ ನಾಮದಲಿ ಕರಿಸಿಕೊಂಬದು । ಇದಕೆ ಮೊದಲು ಪೇಳಿದಂತೆ ಮೂರುತಿಗಳು । ಯದುಕುಲೋತ್ತಮರಂಗ ವಿಜಯ ವಿಠಲರೇಯ । ಪದವಿಯಕೊಡುವನು ಈಪರಿಧ್ಯಾನಿಸೆ ॥೮॥

ಝಂಪೆತಾಳ

ಹಿರಿಯ ನಾಡಿಯಸುತ್ತ ಪೂರ್ವಾದಿವಿಡಿದು ಚ । ತುರ ನಾಡಿಗಳುಂಟು ಉಕ್ಸಹದಲಿ । ಕರಿಸಿದವು ವಜ್ರಿಕಾ ಈಡಾಪಿಂಗಳಾಧಾರಣಿ । ತರುವಾಯದಲಿ ಗುಣಿಸು ಎಪ್ಪತ್ತೆರಡು ಸಾ । ವಿರ ನಾಡಿಗಳು ಸತ್ಯ ಸವ್ಯಾಪಸವ್ಯದಲಿ । ಬೆರದಿಪ್ಪುದು ಅರ್ಧಾರ್ಧ ಉಭಯಪಕ್ಷ । ಹರಿ ತಾನೆ ಸ್ತ್ರೀ ಪುರುಷರ ರೂಪವನ್ನೆ ಧರಿಸಿ । ಇರುಳು ಹಗಲು ಕ್ರೀಡೆಯಾಡುತಿಪ್ಪ ನರನುತ್ತಮನೊಬ್ಬ ವೈಷ್ಣವನ ಮನ್ನಿಸಿ । ಕರೆದು ಮೃಷ್ಟಾನ್ನ ಭೋಜನವ ಮಾಡಿಸೆ । ಪುರುಷಾಯು ಉಳ್ಳನಕ ನಿತ್ಯ ಕುಟುಂಬಕ್ಕೆ । ಪರಿತೋಷಬಡಿಸಿದಂತೆ ಕಾಣಿರೈ । ತುರಿಯನಾಮಕದೇವ ವಿಜಯ ವಿಠಲ । ಹರಿಯ ಕರುಣವನು ಪಡೆದವನು ಬಲುಧನ್ಯನು ॥೯॥

ರೂಪಕತಾಳ

ಆ ಶಿಖೆಯಲ್ಲಿ ಬ್ರಹ್ಮನಾಮಕ ನಾರಾಯಣ । ಕೇಶದಲಿ ಪ್ರದ್ಯುಮ್ನ ತದಭಿಮಾನಿ ರುದ್ರ । ಕೇಶವ ಫಣಿಯಲ್ಲಿ ಬಲಗಣ್ಣಿನಲಿ ಸ್ತಂಭ । ವೇಷ ನಾರಾಯಣ ದಾಮರೂಪ ಲಕುಮಿ । ಆ ಸಮೀರನು ವತ್ಸರೂಪದಲಿಪ್ಪ ಉ । ಪಾಸನೆ ಸರ್ವ ದೇವತೆಗಳು ಮಾಳ್ಪರು । ಸುಶುಕ್ಲ ರಕ್ತ ನೀಲ ರೇಖೆಗಳಲ್ಲಿ । ವಸಿಷ್ಟ ಗೌತುಮ ವಿಶ್ವಾಮಿತ್ರರೆಂದು । ಈಶ ಇಂದ್ರ ಸೂರ್ಯ ನಾಮಕರಾಗಿ ಕ । ರಸಿ ಕೊಂಬರು ಕಾಣೊ ಉದಕಾಗಮದಲ್ಲಿ । ಲೇಸು ಭಾರದ್ವಾಜನಾಮಕ ಪರ್ಜನ್ಯ । ವಾಸ ವೂರ್ಧ್ವಯವೆ ಅಧೋಯವೆ ಪ್ರತಿಮೆ ಜೋ । ತಿಷಕ್ಕೆ ಅತ್ರಿ ಕಶ್ಯಪ ಕಪಿಲನಾಮಕಾ । ಕಾಶ ದೇವಾದ್ಯರು ಶೋಭಿಸುತಿಪ್ಪರು । ಈ ಸಮಸ್ತದ್ರವ್ಯ ಕಾಣಿಸಿಕೊಡುವ ಮಾ । ನಿಸ ವೊಗ ಹದಿನೆಂಟು ಒಂದು ಆನಿಯಮೋರೆ । ಏಸುಬಗೆಯಿಂದ ಮೆರೆವ ಸಪ್ತಾಂಗ ವಿಭೂಷಿತ ವಿಶ್ವನು ದಕ್ಷಿಣಾಕ್ಷಿಯಲ್ಲಿ । ಮೀಸಲ ಪದಾರ್ಥ ಶುಭ ರಸವನು- ಭವಿಪ । ಆಶೆಯಿಲ್ಲ ನಿತ್ಯ ತೃಪ್ತ ನಿರ್ದೋಷನು । ಈ ಸವ್ಯಗಣ್ಣಿನಲ್ಲಿ ವಾಮನ ದ್ವಯಗಣ್ಣೆ । ಗಾ ಸೂರ್ಯಗಭಿಮಾನಿಯುಶ್ವಿನಿದೇವತೆಗಳು । ನಾಸಕ್ಕೆ ಸ್ಥಾನಿಗಳು ಅಲ್ಲಿ ಶ್ರೀ ಧನ್ವಂತ್ರಿ । ಶ್ವಾಸೋಚ್ಛ್ವಾಸದಲ್ಲಿ ಮುಖ್ಯಪ್ರಾಣ ಭಾರತಿ । ದ್ಯು ಸರಿತು ಮೊದಲಾದ ತೀರ್ಥಗಳು ಕಿವಿಯಲ್ಲಿ ಲೇಶಬಿಡದಿಪ್ಪರಲ್ಲಿ ತ್ರಿವಿಕ್ರಮ । ಧೀಶಾ ದೇವತೆಗಳು ತದಭಿಮಾನಿಗಳು ।

ವೈಶ್ರವಣ ಚಂದ್ರಮ ಧರ್ಮಾದ್ಯರು ಕಾಣೋ। ದಾಸೋಹಮ್ಮೆಂದೆನಲು ತನ್ನನೆಕೊಡುವ ಜಗ। ದೀಶ ವಿಜಯ ವಿಠಲ ಸರ್ವರನಾಳುವಾ ||೧೦||

ಧ್ರುವತಾಳ

ಗಲ್ಲ ಓಷ್ಠಗಳಲ್ಲಿ ಮಧುಸೂದನಾದಿಮೂರ್ತಿ। ಪಲ್ಲಿನಲ್ಲಿ ಓಜೋಭೃತ ಔರಸ। ಇಲ್ಲಿ ಪೇಳಿದವೆರಡು ಬಿಟ್ಟು ಉಳಿದ ಹದಿ। ನಾಲ್ಕು ಅಜಾದಿಗಳ ತಿಳಕೊಂಬೋದು । ಸೊಲ್ಲು ನುಡಿವ ಜಿಹ್ವೆಯಲ್ಲಿ ವರುಣದೇವ। ಅಲ್ಲಿ ಮತ್ಸ್ಯಾದಿ ಮೂರ್ತಿ ನಲಿದಾಡುವ। ಮೆಲ್ಲುವ ವದನದಲಿ ವನ್ಹಿ ಮತ್ತೆ ಭಾರ್ಗವ। ಸೊಲ್ಲಿನಲ್ಲಿ ಸರಸ್ವತಿ ನಾಮಕ ನಾರಾಯಣ । ಎಲ್ಲಾ ನುಡಿಗಳು ಉಮೆ ನಿಂದಾಡಿಸುವಳು। ಬಲ್ಲವರಿಗೆ ಇದೆ ಕರದರ್ಪಣ। ಉಳ್ಳ ಕಿರಿನಾಲಿಗೆಯಲಿ ಇಂದ್ರನಾಮಕ ಭಗವಾನ। ಅಲ್ಲಿಪ್ಪಕಕು ದಾಮೋದರ ದೇವತೆ । ಮೆಲ್ಲನೆ ಕಂಠದಲಿ ತೈಜಸ ವಿಶ್ವನಂತೆ । ಸಲ್ಲಲಿತವಾದ ಮನ ಮಂದಿರ। ಸಲ್ಲುವರದಕಭಿಮಾನಿ ದೇವತೆ ಶಚಿ। ವಲ್ಲಭಾದ್ಯರು ಉದಾನ ವಾಸಾ। ಸಲ್ಲದು ಎಚ್ಚರಿಕೆ ಸ್ವಪ್ನದಲಿ ಇಂದ್ರಾದ್ಯರಿಗೆ । ಬಲ್ಲಿದ ರುದ್ರನೊಬ್ಬಗೆ ಜಾಗ್ರತವೋ। ಬೆಳ್ಳಗಿರಿಯರಾಯ ತನ್ನ ರಾಣಿಯ ಸಹಿತ । ದಲ್ಲಿಯಭಿಮಾನಿಗಳು ಅಹಂ ಬುದ್ಧಿಗೆ। ದಲ್ಲಣ ಸರ್ಪಗಳಿಗೆ ಗರುಡ ಚಿತ್ತಕೆ ಚೇತನ । ದಲ್ಲಿಗೆ ಶೇಷದೇವರಿಗೊಡೆತನವೋ। ಎಲ್ಲರಿಗೆಧೊರೆ ವಿಜಯ ವಿಠಲರೇಯ। ಅಲ್ಲಲ್ಲಿ ತಾನೆ ನಿಂದ ವ್ಯಾಪಾರಮಾಡಿಸುವಾ ||೧೧||

ತ್ರಿಪುಡಿತಾಳ

ಸಾರಭೋಕ್ತ ವಿಶ್ವ ತೈಜಸನೆ ಪ್ರಾಜ್ಞ। ಮೂರುತಿಗಳು ಮೂರು ಅವಸ್ಥಾಕ್ಕೆ। ಪ್ರೇರಣೆಕಾರರು ದಿನ ಪ್ರತಿದಿನದಲ್ಲಿ। ತೋರುವ ಕನಸು ಗಾಢನಿದ್ರೆಯು। ಧೀರ ವಿಶ್ವನು ಬಂದು ತೈಜಸನನ್ನು ಕೂಡೆ। ಹಾರುವದು ನರಗೆ ಬಾಹಿರ ಸ್ಮರಣೆ। ಕಾರಣಮಾಡುವ ವಾಸನಮಯ ಸೃಷ್ಟಿ। ವಾರುಣ ಹಯ ಛತ್ರ ಚಾಮರಗಳು। ಭೂರಿ ಧನ ಸತಿಸುತರು ನಾನಾಸೌಖ್ಯ। ತೋರುವ ಬಹು ಪರಿಕ್ಲೇಶಂಗಳು । ಆರೊಂದು ಜನುಮದ ಅನುಭವ ಮಾಡಿಸುವ। ಸಾರೆ ದೂರದಲ್ಲಿ ಯಿದ್ದವಸ್ತು। ಪಾರಗಣಿಸುವ ಕಂಠದಿಂದ ಈರ್ವರು। ಜಾರಿ ಪ್ರಾಜ್ಞನಲ್ಲಿ ಕೂಡಿಕೊಳಲು। ತೋರುವದು ಕನಸಿನ ವ್ಯಾಪಾರ ಮನಸಿಗೆ । ಭಾರಣೆ ನಿದ್ರೆಯಾಸಕ್ತನಾಗೆ । ಮಾರುತನು

ಶ್ರೀಹರಿಯು ತರ್ಕೈಸಿ ಜೀವಕ್ಕೆ । ಸ್ವರೂಪ ಸುಖಾಭಿವ್ಯಕ್ತಿಯಹದು । ಮೂರುತಿಗಳು ತಮ್ಮ ತಮ್ಮ ಸ್ಥಾನಕ್ಕೆ ಬರಲು। ಶಾರೀರವಾಡಿಸುವ ಎಚ್ಚರವ। ಈ ರೀತಿಯಲ್ಲಿ ಜೀವನ ಪ್ರಕಾಶವಸೆಳೆದು। ಈರ ಮೂರುತಿ ಗಳು ಮಾಳ್ಪರಯ್ಯಾ। ಆರು ಯೆಣಿಸುವರು ಹರಿಯ ವಿಚಿತ್ರವ। ಸಾರಿ ವೇದಗಳು ಹಿಂದಾಗುತಿವಕೋ। ಮೀರಿದವರಗಂಡ ವಿಜಯ ವಿಠಲರೇಯ ಕಾರುಣ್ಯನಿಧಿ ಕಾಣೊ ಕಂಡನ್ಮಾತುರದಲ್ಲಿ ॥೧೨॥

ಝಂಪೆತಾಳ

ಸ್ಥೂಲಾಂಗುಟ ಪ್ರಮಾಣ ಮೂರುತಿ ಪ್ರಾಜ್ಞ । ಮೂಲೇಶನಂಗು-ಟಾಗ್ರ ಪರಿಮಿತನು। ಕೇಳಿ ಪ್ರಾದೇಶ ಪರಿಮಿತಿ ಪುರುಷನಾಮಕನು । ಕಾಲಕಾಲಕೆ ಬಿಡದೆ ಪೂಜಾರ್ಹರೂ। ಮೂಲ ಮುಖ್ಯ ಗುರುವು ಪವಮಾನ ದೇವತೆ। ಮೂಲೇಶನ ಪಾದಬಳಿಯು ವಾಸ। ವಾಲಗಮಾಡುವ ಸಮ್ಮೊಗ ವಾಗಿ ಹೀ। ಯಾಳದಿಂದಲಿ ಕರವಮುಗಿದು ನಿಂದು। ಬಾಳುವ ಜೀವನು ಪ್ರಾಣನಂಘ್ರಿಯರೇಣು। ತಾಳಿ ಆತನ ಪಾದ ಸಾಮಿಪ್ಯದಿ। ವ್ಯಾಳೆ ವ್ಯಾಳೆಗೆ ವಾಯು ಹಂಸಮಂತ್ರವ ಮೂರು। ಏಳುಸಾವಿರದಾರುನೂರ ಜಪಿಸಿ। ಆಳಾಗಿಯಿದ್ದ ಜೀವಕ್ಕೆ ಪುಣ್ಯತಂದೀವ। ಏಳಲಮಾಡುವ ಹರಿ ದ್ವೇಷಿಜನರ। ಖೂಳರಿಗೆ ಪ್ರಾಜ್ಞನು ಅನಿತ್ಯ ಸುಖವ ದಾ। ಶಾಳಪುಷ್ಪದ ಒಳಿಯಲಿ ಪಟಕಧರಳು। ಕೀಲಿಸಿದಂತೆ ಮಾಡುವನಲ್ಲದೇ ದೈತ್ಯ। ಜಾಲಕ್ಕೆ ಸುಖವಿಲ್ಲ ಪೊವಮ್ಯಾದರೂ। ಶ್ರೀಲೋಲ ನಾಭಿಯಲಿ ಅಜನಪಡದುದೇ ಸತ್ಯ ಮೂರ್ಲೋಕ ಬಲ್ಲುದೈ (ದೇವರು) ಇವರು ತಮ್ಮ। ಆಳುತನವುಳ್ಳವರೇ ಪೊಕ್ಕಳಿಂದಲಿವಂದು। ಕೋಳಿಯನು ಪಡೆದರೆ ದೈವವೆಂಬೆ। ಹಾಳಾಗಿ ಹೋಗುವನು ಗತಿಯಿಲ್ಲ ನರಕದಲಿ। ಹೂಳುವರು ಯಮಭಟರು ತಿರುಗ ಗೊಡದೆ। ಫಾಲ ಲಿಪಿಯನು ತಿಳಿದು ಪೋದಿ ನಡೆಯದವನು। ಕಾಲ ಮೂರುತಿ ವಿಷ್ಣುವೆಂತಾಹನೋ। ಶೀಲಗುಣಸಂಪನ್ನ ವಿಜಯವಿಠಲರೇಯ ಆಲದೆಲೆಯಮೇಲೆ ಮಲಗಿದ ವಿನೋದಾ ॥೧೩॥

ಮಟ್ಟತಾಳ

ಬಲಗಡೆ ಹಸ್ತದಲಿ ಮಧುಸೂದನ ಸಂಧಿ। ಗಳಲಿ ಕಪಿಲಾದಿ ಪಂಚ ಮೂರುತಿಗಳು। ಸಲೆ ಎಡ ಹಸ್ತದಲಿ ಶ್ರೀಧರನು ಸಂಧಿಗ। ಳಲಿ ಚರಾಂಗದಿ

ಪಂಚ ಭಗವದ್ರೂಪ । ಚಲುವ ಪ್ರಾಣಿಗಳಲ್ಲಿ ದಕ್ಷಪ್ರಜೇಶ್ವರ ಕುಕ್ಷಿ । ಯಲಿ ನಾರಾಯಣ ಎರಡು ಪಾರ್ಶ್ವದಲ್ಲಿ । ಬಲಿ ಮಥನ ವಿಷ್ಣು ಪೃಷ್ಠಭಾಗದಲ್ಲಿ । ನಳಿನನಾಭನು ನಾಭಿಯಲಿ ಸಮಾನನನಿಲದೇವನುವಾಸ । ಪೊಳೆವ ಮಿತ್ರ ನೆಂಬ ಸೂರ್ಯನು ಪಾಯ್ವಿಂದ್ರಿ । ಯಲಿ ಸ್ವಾಯಂಭುವ ನಿಲವರು ಗುಹ್ಯ ದಲಿ । ಫಲಿ ಪರ ಮನು ಭಗ ಒಲಿ ಮೂರುತಿ ಐದು । ನೆಲೆಯಾಗಿ ಇಪ್ಪವು ತತುಸ್ಥಳದಲ್ಲಿ । ಸುಲಭ ಮೂರುತಿ ನಮ್ಮ ವಿಜಯ ವಿಠಲರೇಯ ! ಕಲ ಕಾಲ ತಾನೇ ನಿಯಾಮಕ ಅವರವರ ॥೧೪॥

ಧ್ರುವತಾಳ

ಅನಿರುದ್ಧ ಕಟಿಯಲ್ಲಿ ದಕ್ಷಿಣಪಾದದಲ್ಲಿ । ವಿನುತನಂದನ ಶೇಷ ರುದ್ರ ಸಂಧಿಗಳಲ್ಲಿ । ಗುಣವಂತ ಟಂಕಿನೀ ಐದು ರೂಪಗಳುಂಟು । ಮನುಮಥ- ನಿಂದ್ರನು ಎಡಕಾಲಿನಲ್ಲಿ । ಮಿನಗುವ ತಾರಾದಿ ರೂಪಸಂಧಿಗಳಲ್ಲಿ । ಮನೆ ಮಾಡಿ ಕೊಂಡಿಪ್ಪ ಜಯಂತನಲ್ಲೀಗ । ಘನ ಯಜ್ಞ ಮೂರುತಿ ನಾರಾ- ಯಣನಿಪ್ಪ । ಅನಿಲಾಧಿಷ್ಠಾನದಿಂದಲಿ ದೇಹಧರದ । ಕ್ಷಿಣಾಂಗುಟದಲ್ಲಿ ತೀರ್ಥ ನಾರಾಯಣ । ಎಣಿಸದು ಈಪರಿ ಹಗಲಿಂಳು ನೋಡಿ । ಕ್ಷಣ ಮಾತುರ ಬಿಡ ವಿಜಯ ವಿಠಲರೇಯ । ಅನಿಮಿಷರೊಡಿಯಾನತ್ಯಂತಾ- ದ್ಭುತಶಕ್ತಾ ॥೧೫॥

ಅಟ್ಟತಾಳ

ಈ ದೇಹದಲ್ಲೀಗ ನವಕೋಟಿ ಸುರರು ವಿ । ವಿವಾದವಿಲ್ಲದೆ ವಾಸ ನಾಗಿಪ್ಪರು । ಆ ದೇವತೆಗಳೊಳು ಶ್ರೀ ಭಗವದ್ರೂಪ । ಆದಿಕಡೆಯಿಲ್ಲ ದಂತಿಪ್ಪವು । ಈದೇಹಿಮಾಡಿದ ಕರ್ಮಗಳನಂತ । ಶೋಧಿಸೆಯೊಂದೊಂದು ಅನಂತವೊ । ಆದ ಕರ್ಮಗಳಲ್ಲಿ ತನ್ನಾಮಕನಾಗಿ । ಸಾಧುಗಳಿಪ್ಪರು ಯಿವರಿಗೆಲ್ಲ । ಮಾಧವ ನಿಯಾಮಕ ಬಹು ರೂಪದಿ । ಸಾಧನೆ ಸಂಪತ್ತು ಮಾಡಿಸುವ । ವೇದೋದ್ಧಾರಕ ವಿಜಯ ವಿಠಲರೇಯ । ಕ್ರೋಧ ದೈತ್ಯರ ನಿಯಾಮಕ ಬಹುರೂಪ ॥೧೬॥

ಆದಿತಾಳ

ಚತುರ ಮೂರುತಿ ಹತ್ತು ಮತ್ಸ್ಯಾದಿ ಮೂರುತಿ । ಚತುರ ವಿಂಶತಿ ಮೂರುತಿ ಮತ್ತೆ ಶತಮೂರುತಿ । ಶತನೂರು ಮೂರುತಿ ಕ್ಷದ್ರೋಲ್ಕಾದಿ

ಗಳೈದು । ಪ್ರತಿದಿನ ಪುಂಡ್ರದಲ್ಲಿ ದ್ವಾದಶಮೂರುತಿ ಶ । ಕುತಿ ಮೊದಲಾದ ಏಕಾದಶ ಮೂರುತಿ ವಿಂ । ಶತಿಯಷ್ಟ ಋಷಭಾದಿ ಮೂರುತಿ ವಿಮಲ ಮೂ । ರುತಿಗಳೆಂಟು ವಿಶಿಷ್ಟ ಮೂರುತಿಯೊಂದು । ಪೃಥಿವಿಯುದಕ ತೇಜ ಭೂತ ವಾಯು ತಾರಾ । ಪಥ ಶಬ್ದ ಸ್ಪರುಶ ರೂಪ ರಸ ಗಂಧದೊಳು ನಿ । ರುತವಾದ ಮೂರುತಿ ಅಜಾದಿ ಮೂರುತಿ । ಸತು ಚಿತು ಆನಂದಾತ್ಮ ವಿಜಯ ವಿಠಲ ಶಾ । ಶ್ವತವಾಗಿ ಎನ್ನ ಪೊರೆವ ದಯವಂತ ಮೂರುತಿ ॥

ಜತೆ

ಅಧ್ಯಾತ್ಮ ತಿಳಿಯುವದು ಭೌತಿಕ ದೇಹದೊಳು । ವಿದ್ಯಾವಂತರು ಪೊಲಿಸೆ ವಿಜಯ ವಿಠಲಪೊಲಿವಾ ॥೧೮॥

ಪ್ರಮೇಯಮಾಲಾ ಸುಳಾದಿ ೧೧

ಜೀವನ ಸ್ವರೂಪ ವಿಚಾರ, ಲಿಂಗ ಅವ್ಯಕ್ತ ಅನಿರುದ್ಧ, ಸ್ಥೂಲದೇಹಗಳ ಉತ್ಪತ್ತಿ, ಗುಣಬಿಂದುಗಳು, ಕಾಲರೂಪಿ ಹರಿಯ ಉಪಾಸನೆ, ಪಿಂಡಾಂಡ ಬ್ರಹ್ಮಾಂಡದಲ್ಲಿಪ್ಪ ಹರಿರೂಪ ಐಕ್ಯ ಉಪಾಸನೆ, ಆರೋಹಣ ಅವರೋಹಣ ಧ್ಯಾನಕ್ರಮ

ರಾಗ ರೇಗುಪ್ತಿ ಧ್ರುವತಾಳ

ಜೀವ ಅಚ್ಛೇದ್ಯಾಭೇದ್ಯ ತೋಯ ಗರಳಶಸ್ತ್ರ । ಪಾವಕ ಮಿಗಿಲಾದ ಉಪಹತಿಯಿಂದ । ಸಾವಿಲ್ಲ ಸಾವಿಲ್ಲ ಆವಾವಕಾಲಕ್ಕೆ । ಪಾವನ್ನವಾಗಿಪ್ಪದು ಪರಮಸೂಕ್ಷ್ಮ । ಆವಿರಾನಂದ ಭಾವ ಭರಿತವಲ್ಲದೆ ಇದಕೆ । ನೋವಾಗದು ಕಾಣೊ ನಿಜರೂಪದಿ । ತ್ರಿ ವಿಕಾರದಿಂದ ಪ್ರವೃತ್ತಿಮಾರ್ಗ ಕಾಣೊ । ಈ ವಿಧ ತಿಳಿಯೋದು ಸತ್ಪಂಥಕ್ಕೆ । ಜೀವಾಂಗುಟಾಗ್ರ ಮೂರ್ತಿ ಜೀವಾಂಗುಟ ಮೂರ್ತಿ ಈ । ಜೀವದಾಕಾರ ಮೂರ್ತಿ ಪುರುಷ ಮೂರ್ತಿ । ಜೀವೇಂದ್ರಿಯ ಗಳಲ್ಲಿ ತತು ತತ್ತು ಸ್ಥಾನವಾಸ । ಆವಾವ ರೂಪದಂತೆ ಇಪ್ಪ ಮೂರ್ತಿ । ಜೀವೋತ್ತಮವಿಡಿದು ತೃಣಜೀವ ಪರ್ಯಂತ । ಯಾವತ್ತರೊಳಗಿದ್ದಾನಂತ ಮೂರ್ತಿ । ಶ್ರೀ ವಾಸುದೇವ ಸಂಕರುಷಣ ಪ್ರದ್ಯುಮ್ನ । ಜೀವನಾಮಕ ಅನಿರುದ್ಧ ಮೂರ್ತಿ । ದೇವಿ ಸಹಿತವಾಗಿ ಇನಿತು ಪೊಪ್ಪುವಾನೇಕ। ಆವರ್ಣ ವುಳದಾದಲ್ಲಿ ಯಿಪ್ಪ ಮೂರ್ತಿ । ಈ ವಿಚಾರವೆ ಗ್ರಹಿಸು ಏಕಾಗ್ರಚಿತ್ತದಲ್ಲಿ । ದೇವಾದೇವೇಶನ್ನ ಅಣು ಮಹತ್ತು । ಕೋವಿದ ಪೂರ್ಣಾಂಬುಧಿ ಅಭಿನ್ನವಾದ ರೂಪ । ಜೀವದೊಳಗೆ ಸದಾವಕ್ಕು ಸಿದ್ಧ । ಪಾವಿತ್ರ ತಾನಾಗಿ ಪತಿತರ

ಉದ್ಧರಿಪ । ತಾವರೆ ಜಲದಲ್ಲಿ ಇದ್ದ ತೆರದಿ । ಭಾವಿಸು ಎಲೊ ಮನುಜ ಜಿತಚಿತ್ತನಾಗಿ ನಿನ್ನ । ಜೀವದೊಳಗೆ ಇದ್ದ ಮೂರ್ತಿಗಳ । ದೈವ ಸ್ವಭಾವ ಕೇಳೊ ಅಚಿಂತ್ಯಾದ್ಭುತ ಶಕ್ತಿ । ಸೇವಿಸು ಭಕುತಿಯಲಿ ಸನು ಬುದ್ಧಿಲೀ । ದೇವಕಿನಂದನ ವಿಜಯ ವಿಠಲರೇಯ । ಕಾವ ಕರುಣದಿಂದ ಧ್ಯಾನಂಗತನ ಮಾಡಿ ॥೧॥

ಮಟ್ಟತಾಳ

ಚೇತನದೊಳಗಿದ್ದ ಮೂರ್ತಿಗಳನೆ ತಿಳಿದು । ಮಾತು ಮಾತಿಗೆ ನೆನಸಿ ಕೊಂಡಾಡಿ ಪಾಡಿ । ಜ್ಯೋತಿರ್ಮಯವಾದ ಅನಾದಿಬದ್ಧ ಲಿಂಗ । ಗಾತುರ ಇರುತಿಪ್ಪ ಸ್ಥಿತಿಗತಿಯನು ನೋಡಿ । ಆ ತರುವಾಯದಲಿ ಅಲ್ಲಲ್ಲೆ ಇದ್ದ । ಧಾತನಾಮಕ ಬ್ರಹ್ಮಾವಿಷ್ಣು ರುದ್ರಾಭಿದಾನ । ನೀತ(ತಿ)ಪ್ರದಾತ ಪ್ರಮುಖ್ಯ ಮೂರುತಿ ಮೂರು । ಶ್ರೀ ತೈಜಸ ವಿಶ್ವ ಪ್ರಾಜ್ಞನಾಮಕರಾಗಿ । ವಾತ ವಾರಿಜಗರ್ಭ ಸರಸ್ವತಿ ಭಾರತಿ । ಸೋತ್ತ್ರಮರು ಇವರು ಪೂಜಿಸುವ ಮೂರ್ತಿ । ಶ್ರೀ ತರುಣಿ ಧರಣಿ ದುರ್ಗಾನಾಮಕಳಪ್ಪೆ । ಭೂತಿವಂತಳು ಇಪ್ಪಳು ತ್ರಯ ಭಾಗದಿ ಬಿಡದೆ । ಭಾತಿಗುಣಗಳಿಂದ ನಿತ್ಯಾಭಿಮಾನಿನಿ । ಮಾತ್ರ ಮೊದಲಾದ ಷೋಡಶಕಳೆವುಂಟು । ಪ್ರೀತಿಯಿಂದಲಿ ಇವಕೆ ಒಂದೊಂದು ಮೂ । ರುತಿಗಳುಂಟು ಕೇಶವಾದಿ ಹದಿನಾರು । ಜೋತಿಗೆ ಪ್ರತಿಬಂಧಕ ದ್ವಯಾಚ್ಛಾದಿಕ ಜಡದಿ । ಭೀತಿಗೊಳಿಸುವೈದು ತಮ ಮೋಹಾದಿಗಳು । ಪಾತಕ ಮಾಳ್ಪುದಕೆ ಕಾರಣ ಪ್ರಕೃತಿಗಳು । ಮಾತು ಈ ಪರಿ ನೋಡಿ ಕೃದ್ಧೋಲ್ಕಾದಿ ಮೂ । ರುತಿಗಳು ಐದು ಅಂತಃಪರಿಚ್ಛೇದ । ಪೂತುರೆ ವಿಶಿಷ್ಟ ಲಿಂಗ ದೇಹಕೆ ಖಳರಾ । ಘಾತಿಸುವ ಮೂರ್ತಿ ಜನಾ-ರ್ದನನೆನ್ನು । ದೈತೇಯ ಗಣದ ಪ್ರಸಂಗವೆ ಇಲ್ಲ । ಖ್ಯಾತ ಕುಂಭ ಗರ್ಭ ಮಿಕ್ಕಾದದಿವಿಜಾ । ವ್ರಾತ ತೃಣ ಜೀವರಿಗೆ ಒಂದೆಸವುನವಿದೆ । ಕೌತುಕ ಕೌತಕವೊ ಅಂಶಿ ಅಂಶದಸೊಬಗು । ಜಾತರಹಿತ ವಿಜಯ ವಿಠಲನ ಮೂರ್ತಿಗಳ । ಈ ತೆರದಿ ನೆನಿಸಿ ಅಲ್ಲಿಂದಲಿ ಇತ್ತ ॥೨॥

ರೂಪಕತಾಳ

ಗುಣಸಾಮ್ಯವಾದಾಗ ರಜೊ ಬಿಂದು ಹನ್ನೆರಡು । ಮಿನಗುವ ಸತ್ವದಲಿ ಹತ್ತು ವಂದಕೆ ಮಿಳಿತ । ರೆನಿಸುವದು ತಮೋ ಭಾಗದಲಿ ಒಂದು

ಒಂದನೆ ಪೇಳುವದು। ತನ್ನಯ ಸ್ವರಾಶಿಯಲ್ಲಿ ಇನಿತು ಬಿಂದುಗಳಿಗೆ ಶಕ್ತ್ಯಾದಿ ಹನ್ನೆರಡು। ಚಿನುಮಯ ದೇವ ಸಿರಿ ಲಕುಮಿಗೆ ಇದೆ ಪೆಸರು। ಗುಣ ವೈಷಮ್ಯವಾಗೆ ಎರಡು ರಾಶಿಯಲಿದ್ದ । ಅಣು ಬಿಂದು ಹನ್ನೊಂದು ತತ್ತ್ವದ್ರಾಶಿಲಿವುಳ್ಳ । ಮಣಿ ವಜ್ರ ಪ್ರಕಾಶ ಭಾಗದಿಂದಲಿ ಉತ್ತಮವಾಗಿ ರಜೋಬಿಂದು ಈರೈದು ಒರುವಾಗ। ವಿನಯದಿಂದಲಿ ತತ್ಪರಿಮಿತ ಬಿಂದು ಗಳು। ಗುಣ ಸತ್ವ ಸ್ಥಳದಿಂದ ಹತ್ತು ಪೊಂಡಿಸಿಕೊಂಡು । ಜಿನಗು ಒಂದೊಂದಕ್ಕೆ ಹತ್ತು ಯುಕ್ತವಾಗಿವೆ। ಎಣಿಕೆ ನೋಡುವದು ತಮದ-ಲ್ಲಿದ್ದಾ ಒಂ । ದನೆ ಬಿಂದು ಕೊಂಡು ತನ್ನಲ್ಲಿ ಪ್ರವೇಶಿಸಿತು। ವನಜರಾಗ ವರ್ಣ ಪರಿಚ್ಛೇದದಲ್ಲಿ ಸೂ। ಚನೆ ಸತ್ವ ಬಗೆ ಬಿಂದು ಹತ್ತು ತಮೊ ಬಿಂದೊಂದು। ಇನಿತು ಈರೈದೊಂದು ಸ್ವರಾಶಿವು ಹನ್ನೆರಡು। ಗುಣ ವೈಷಮ್ಯವೆಂದು ಲಿಂಗದಲ್ಲಿ ಆಯಿತು। ಗುಣವಂತ ವಿಜಯ ವಿಠಲರೇಯ ಅಲ್ಲಲ್ಲಿ। ವಿನಿಯಾಮಕನಾಗಿ ಯಿಪ್ಪ ಮತ್ಸ್ಯಾದಿ ರೂಪದಲ್ಲಿ ॥೩॥

ಝಂಪೆತಾಳ

ಅರುಣ ಗುಣದಲಿ ಬಂದು ಬಿದ್ದ ಸತ್ವ ತಮೊ । ಎರಡು ರಾಶಿಯ ಬಿಂದು ಹತ್ತು ಒಂದು ಸ್ಥಿರ ರ। ಜೋ ರಾಶಿಯಲಿ ವೈಷಮ್ಯವಾದ ಹನ್ನೆರಡು ಬಿಂದುಗಳು ಮುಂದಕ್ಕೆಸಾಗಿ। ತೆರಳಿದವು ಹತ್ತರಿಂದಲಿ ಹತ್ತು ಹತ್ತಾಗೆ। ಎರಡೈವತ್ತು ಸತ್ವ ಸಂಬಂಧ। ನಿರಿಕ್ಷಿಸು ಒಂದೊಂದು ಬಿಂದು ಗಳಿಗೆ ಸಾವಿರ ವಿಶಿಷ್ಟವಾದ ಬಿಂದುಗಳೆನ್ನು। ಅರುಣ ಭಾಗದಿಂದ ನೂರು ಯುಕ್ತದಲಿ ಹ। ನ್ನೆರಡು ಬಿಂದುಗಳು ಬಂದವು ಕಾಣಿರೊ। ಕರುದಿನ ದೆಶೆಯಿಂದ ಹತ್ತು ಯುಕ್ತವಾಗಿ। ಪೊರಟತೊಂದೇ ಬಿಂದು ವೇಗದಿಂದ । ನೆರೆದು ಶತತ್ರಯೋದಶ ಬಿಂದುಗಳೇಕವಾಗಿ। ಕರಿಸಿಕೊಂಡಿತು ಅವ್ಯಕ್ತ ವೆಂದೂ। ಮರುತ ಸತಿ ಸರಸ್ವತಿ ಸೂತ್ರನಾಮಕ ಪ್ರಾಣ। ಪರಮೇಷ್ಠಿ ಗಳು ಇದಕೆ ಅಭಿಮಾನ್ಯರೂ। ಸಿರಿ ಲಕುಮಿ ರೂಪಗಳುಂಟು ಹದಿಮೂರು ಶತ। ನಿರುತ ಮಾನಿಯಾಗಿ ಪೊಪ್ಪುತಿಹಳು। ಪುರುಷನಾಮಕ ಹರಿಯ ರೂಪಗಳು ಪೊಳೆಯುತಿವೆ। ವರ ವಿಶ್ವಾ ಅನಿರುದ್ಧ ನಾರಾಯಣಾದಿ। ಸ್ಮರಿಸು ಪೊಂದಕೆ ಮೂಲ ಮೂರ್ತಿಯ ಬಿಡದಲೆ। ಕರಣ ಶುದ್ಧಿಯಲಿ ಕೊಂಡಾಡಿ ಸುಖಿಸು। ಹರ ಮೊದಲಾದವರು ಅವ್ಯಕ್ತದಲಿ ಯಿಲ್ಲ।

ಕುರುಹು ತಿಳಿವದು ಅನಿರುದ್ಧದಲ್ಲಿ । ಸಿರಿ ತತ್ವದಲಿಯಿದ್ದ ಬಿಂದುಗಳ ದೆಸೆಯಿಂದ । ತೆರಳಿದವು ಮೂರು ಪ್ರಕಾರದ ವರ್ಣ । ಮರಳೆ ಸತ್ವದ ಬಿಂದುಗಳು ಒಂದೊಂದಕ್ಕೆ ಸಾ । ವಿರ ಪ್ರಕಾರ ಗುಣಿಸೆ ಲಕ್ಷವಾಗೆ । ಅರುಣ ಬಿಂದುಗಳಿಗೆ ನೂರರಿಂತೆಣಿಸೆ ಹನ್ನೆರಡಕ್ಕೆ । ಹನ್ನೆರಡು ನೂರಾ ದವು ಕರಿಯ ಬಿಂದೊಂದಕ್ಕೆ ಹತ್ತು ವೆಗ್ಗಳಿಸಿದವು । ಪರಮ ಜ್ಞಾನಿಗಳು ಗುಣಿತವೆಮಾಡಿ । ಗುರುಕೃಪೆಯಿಂದ ಪೇಳದಿರೆ ಲಕ್ಷ ಹನ್ನೆರಡುನೂರರ ಹತ್ತು ನಿಶ್ಚಯ । ಭರದಿಂದ ಅವ್ಯಕ್ತದಿಂದ ವ್ಯಕ್ತವಾಗಿ । ಕರಿಸಿಕೊಂಡಿತು ಅನಿರುದ್ಧ ದೇಹಾ । ಶರಣವಾಗಿಪ್ಪದು ಅವ್ಯಕ್ತಲಿಂಗಕ್ಕೆ ಮಿರಿ ಮಿರಿ ಮಿಂಚುವ ಕಾಂತಿಯಿಂದ । ಗರುಡ ನರ ಹರ ಸುರಪ ಸ್ಮರ ಮರುತ ಸ್ಮರಜ ಗುರು । ಮರೀಚಿ ತರಣಿಜಾತ ತರಣಿ ಹಿಮಕರಾಪ್ಪೆ । ಸುರದೂತ ಮಿತ್ರಾ ನಿರಋತಿ ವೈದ್ಯ ಕರಿವದನ । ಹರಸಖ ಜಯಂತ ಪಂಚ ಮರುತಾ ಧರ ಶನೈಶ್ಚರ ಪುಷ್ಕರ ಮೊದಲಾಗಿದ್ದ । ಸುರರು ತಾತ್ವಿಕರು ಕೇವಲ ಸೂಕ್ಷ್ಮ ಮಾ । ತರ ತಮರಾಗಿ ದೇಹವಧರಿಸಿ ಅನಿರುದ್ಧ । ಶರೀರದಲ್ಲಿ ಯಿಪ್ಪರು ತಮ ತಮ್ಮ ವರಸ್ಥಾನದಲಿ ವ್ಯಾಪಾರಗಳ ಮಾಡುತ್ತ । ಪರಮ ಸಂಭ್ರಮದಿಂದ ಹರಿನೇಮದಿ । ದುರುಳರು ಅಲ್ಲಿ ವಾಸವಾಗಿಹರು । ಚರಿ ತೆಯನು ಮಾಡುವರು ದೋಷವೃತ್ತಿ (ಯಿಂದ) । ಸುರಾಸುರರು ಬೆರೆದು ಪ್ರಬಲದುರ್ಬಲರಾಗಿ । ತರ ತಮ್ಯದಿಂದಲಿ ವಿವಿಧ ಕರ್ಮ । ಚರಣೆ ಯನು ಮಾಡಿಪರು ಕಾಲವ್ಯವಧಾನಗಳ । ಪರೀಕ್ಷಿಸಿ ತೀವ್ರದಲಿ ತಿರಿಗಿ ಸುತ್ತಾ । ಹರಿ ರೂಪಗಳು ಉಂಟು ವಿಶ್ವಾದಿ ನೂರು ಬಗೆ । ಸಿರಿ ರೂಪಗಳು ಇದೇಪರಿ ತಿಳಿವದು । ಪರಮೇಷ್ಠಿ ಮರುತ ಭಾರತಿ ಸರಸ್ವತಿ ಮಿಕ್ಕಾ । ಸುರರು ಅಂಶಿ ಅಂಶಾ ತೆರದಲಿ ಯಿಪ್ಪರು । ಕರಣ ನಿಯಾಮಕರು ಇವರೆಲ್ಲ ಸರ್ವದಾ । ಕಿರಿಯರೊಳಗೆ ಹಿರಿಯರು ಪ್ರವೇಶ । ಪೊರಟ ಬಿಂದುಗಳೆಲ್ಲ ಮೂಲದಿಂದಲಿವಿಡಿದು । ಎರಡೆಂಟು ಕಳೆಗಳ ಸಂಬಂಧವೊ । ಪರಿಣಮಿಸಿತು ಕೇಳಿ ಅನಿರುದ್ಧದವೊಳಗೆ ಪ । ದರುಂಟು ಒಂದಕ್ಕೊಂದಧಿಕವಾಗಿ । ಎರಡೈದಾವರ್ಣ ಅನಿರುದ್ಧ ಪ್ರಕೃತಿ ಯಲ್ಲಿ ಚ । ತುರ ವಿಂಶತಿ ತತ್ವ ಜಾಂಡದಂತೆ । ಗುರುತ ಮಾತುರ ಈ ಕಾಯದಲಿಬಿಂದುಗಳು । ತರುವಾಯ ಅರುಹು ಕಾಣೊ ನಿರುತ ಪಂಚ

ಕೋಶನ್ನ ಮಯಾದಿ ವಿಗ್ರಹಾ। ಕರೆಸಿದವು ನಾರಾಯಣೈದು ಪೆಸರು। ವರ ವಿಶ್ವ ತೈಜಸ ಪ್ರಾಜ್ಞ ಮೂರು ಮೂರುತಿ ಅವ। ತರಿಸಿದವು ಮೂಲ ದಿಂದಂತ್ಯತನಕ। ಪರಮೇಷ್ಠಿ ರೂಪ ಲಿಂಗದ ಕೊನಿಸುತ್ತಿನಲಿ। ಯಿರುತಿಪ್ಪ ಮುಂದತ್ತ ಸಂಚರಿಸುವ। ಸರಿಯನ್ನಿ ಜಡಕೆ ಚೇತನವೆಲ್ಲಿದೆಂಬಿಯಾ ಹರಿ ಯಿಚ್ಛೆ ಇಂಥಾದ್ದೆ ಬಲು ವಿಚಿತ್ರಾ। ಕರುಣಸಾಗರ ನಮ್ಮ ವಿಜಯ ವಿಠಲರೇಯ। ತರತಮ್ಯ ಗುಣಗಳ ವ್ಯಕ್ತಮಾಳ್ಪಾ ॥೪॥

ತ್ರಿವಿಡಿತಾಳ

ಹೃದಯ ನಿಮ್ನದ ಮಧ್ಯ ಮಧ್ಯನಾಡಿಯ ಮಧ್ಯ। ಹುದಿಗಿಪ್ಪ ದನಿರುದ್ಧ ದೇಹವದಕೆ। ಹದಿನಾಲ್ಕುದಳವುಳ್ಳ ಪೊಳೆವ ರಕುತವರ್ಣ। ಇದೆ ಅಷ್ಟದಳವೆಂದು ಎನಿಸಿ ತಿದಕೋ। ಅದರ ಕರ್ನಿಕೆಮೇಲೆ ರಾಮ (೩) ಮೂರುತಿಗಳುಂಟು। ಮೊದಲಗ್ರ ಮಧ್ಯ ಮೂಲೇಶ ಭಗವಾನ್। ಮುದದಿಂದ ಮೂಲೇಶನ ಪಾದಾಂಗುಟದಲ್ಲಿ। ವಿಧಿ ಪಟ್ಟಕ್ಕೆ ಸಾರುವ ಪ್ರಾಣ ವಾಸಾ। ಇದನೆ ಗ್ರಹಿಸಿ ಈತನ ಪಾದ ಮೂಲಾಶ್ರಯ। ಕದಲಾದಂತೆ ಜೀವ ಯಿಪ್ಪನೋಡು। ಪದುಮಾಷ್ಟದಳದಲ್ಲಿ ಲೋಕಪಾಲಕರುಂಟು ಸ। ನ್ನಿಧವಾಗಿಪ್ಪರು ತಮ್ಮ ಸೇವಕರೊಡನೆ। ಪದೆ ಪದಿಗೆ ಉಪೇಂದ್ರ ರಾಮ ಭಾರ್ಗವರಾಮ। ಅದು ಭೂತ ಜನಾರ್ದನ ಮತ್ಸ್ಯತುರಂಗಾ। ವದನ ಕಲ್ಕಿ ನೃಕೇಸರಿಯ ಪೂಜಿಪರಯ್ಯಾ। ಬುಧರು ಒಂದಾಗಿ ವಸುಗಳೇಳುಜನ। ಸುದರುಶನ ಶಂಖ ಖಡ್ಗ ಚರ್ಮ ಗದೆ। ಪದುಮ ಕಾರ್ಮುಕ ಬಾಣ ಧರಿಸಿ ಅಷ್ಟಾ। ಯುಧ ನಾಲ್ಕೆಡು ಬಾಹು ವುಳ್ಳ ನಾರೇಯಣ। ಪದುಮೆ ಕೂಡಲಿ ಪಹರಿಯೆ ತಿರುಗುವ। ಪದುಮ ವಿಕಸಿತವಾಗೆ ಜಾಗ್ರತೆ ಎಂದೆನ್ನಿ। ಪದು ಸ್ವಲ್ಪ ಮುದುರಿದರೆ ಸ್ವಪ್ನಕಾಲ। ಮುದರಿ ಪೋದರೆ ಸುಷುಪ್ತಿ ಜೀವ ಪ್ರಾಜ್ಞದೇವನ್ನ। ವದನದೊಳಗಿಳಿದರೆ ನಿಚೇಷ್ಟನೋ ಇದರಂತೆ ಮೂರಾವಸ್ಥೆಯಾದಡೆ ವ್ಯಾಪಾರ। ಚದುರಾವೃತ್ತಿಯಲ್ಲಿ ಯಾಗುವದು ಸಿದ್ಧಾ। ಪದುಮ ಈಪರಿಯಲ್ಲಿ ಐದುಕಡೆಯಿಪ್ಪದು। ಇದರಲ್ಲಿ ಪಂಚ ಭಗವದ್ರೂಪವು। ಬದಿಯಲ್ಲಿ ಯಿಪ್ಪಳು ಲಕುಮಿ ಐದುರೂಪ। ತ್ರಿದಶಗಣ ತುಂಬಿಹುದು ನಿಬಿಡವಾಗಿ। ಹೃದಯಾಖ್ಯ ಪಟ್ಟಣಕ್ಕೆ ಐದುಃಬಾಗಿಲುವುಂಟು ತದುಪರಿ ದ್ವಾರಪಾಲಕರಿಪ್ಪರು। ಸದರವಿಲ್ಲದೆ ಜನರು ಪ್ರತ್ಯೇಕ ಪ್ರತ್ಯೇಕ।

ಮಧುಸೂದನನ ವಾಲಗವಮಾಡುವರು। ಇದು ಯೆಲ್ಲ ಪೇಳಿದ್ದು ಜೀವೇಶ ಪದುಮ ಒಹು। ವಿಧಗಳೆಲ್ಲ ನಾಡ್ಯಾಂತರ ಪ್ರವೇಶ। ಉದರ ಬೊಮ್ಮಾಂಡ ಭರಿತ ವಿಜಯ ವಿಠಲರೇಯ। ಬದಿಗನು ತಾನಾಗಿ ನಿರ್ಮಾಣಮಾಡುವಾ॥

ಧ್ರುವತಾಳ

ಎಪ್ಪತ್ತೆರಡು ಸಾವಿರ ಮೇಲೆ ನಾಡಿವುಂಟು। ಮುಪ್ಪರ ವೈರಿ ಬ್ರಹ್ಮ ಇವಕೆ ಮಾನಿಗಳೆನ್ನಿ। ತಪ್ಪದಲೆ ತಮತಮ್ಮ ತತ್ವಾತ್ಮಕರೊಡಗೂಡಿ। ಇಪ್ಪರು ಸರ್ವರಲ್ಲಿ ನೇಮಿಸುತ್ತ। ಒಪ್ಪದಿಂದಲಿ ಕೇಳಿ ಇವಕೆ ಸ್ತ್ರೀ ಪುರುಷ ರೂಪ ಕಂ। ದರ್ಪನಯ್ಯನು ಇಹ ಅರ್ಧಾರ್ಧಮೇಲೊಂದು। ಒಪ್ಪುತಿಹವು ಲಕುಮಿ ಪ್ರಾಣೇಶಗಿಪ್ಪರೂಪಾ। ಸಪ್ತ ಧಾತುವುಳ್ಳ ಕಾಯದಲ್ಲಿ। ಇಪ್ಪತ್ತೊಂದು ಸಾವಿರ ಐದೊಂದುನೂರು ಶ್ವಾಸ। ಒಪ್ಪೋವು ಅಲ್ಲಿ ಭಾರತಿ ಪ್ರಾಣ। ಪ್ರಾಪ್ಯನಾಗುವ ಸತ್ಕರ್ಮಮಾಡಿದಜನಕೆ। ಅಪ್ಪಣೆಕೊಡುವ ತತ್ವೇಶಗಳಿಗೆ। ಅಪ್ರತಿಹತ ನಮ್ಮ ವಿಜಯ ವಿಠಲರೇಯ। ಅಪ್ಪಾರ ಮಹಿಮನೊ ಸರ್ವಗತನಾಗಿಪ್ಪಾ ॥೬॥

ಝಂಪೆತಾಳ

ಈ ಲಿಂಗೋಪಾದನ ಅನಿರುದ್ಧಾಂಗದತನಕಾ। ಲಾಲಿಸಿ ಅಲ್ಲಿಂದಿತ್ತಲಿ ಪ್ರತ್ಯೇಕ ಏಳು ಕ। ಮಲಗಳು ಸ್ಥಾನ ಭೇದದಿಂದರಿದು। ನೀಲ ರಕ್ತಾದಿ ವರ್ಣಾ ಮೂರ್ತಿಯು ಹೇಳಿಪ್ಪುದು ಮೊ। ದಲೆ ಅದರಂತೆ ಗುಣಿಸು ಶುಂಡಾಲ ಮುಖ ಮಿಕ್ಕಾದ ದೇವತೆಗಳಾ। ಕೀಲಾಲರುಹಕ್ಕೆ ಸುತ್ತ ಮೂವತ್ತೆರಡು। ಮೇಲೆ ಕೇಸರವುಂಟು ಭಗವಾನ್ ಮೂರ್ತಿ। ವಾಲಯು ಓಂಕಾರಕೂಡಿದ ಗಾಯತ್ರಿ। ವೋಲಿಕೆಯಿದ್ದ ವರ್ಣಕೆ ಪ್ರತಿಪಾದ್ಯ। ಏಳು ಕಮಲಗಳಲ್ಲಿ ಭೂರಾದಿ ಭುವನದ। ಲೀಲೆ ಸಕಲವುಳ್ಳದಾಗಿಪ್ಪವು। ನಾಳ ವೊಂದರ ಮಧ್ಯ ಈ ಪರಿ ಯಿಪ್ಪದು ವಿ। ಶಾಲ ಮತಿವಂತರು ತಿಳಕೊಂಬದು ಗೋಳಕವು ಹನ್ನೊಂದು ಇಂದ್ರಿಯಗಳು ಯಿಷ್ಟೆ। ಮ್ಯೆಲಿಗೆ ಬೆರಸಿದರೆ ನಿರರ್ಥಕಾ। ಕಾಲಕಾಲಕೆ ಯಿಲ್ಲಿ ಅಧಿಪತಿಗಳಾಗಿ। ಸುರಪಾಲಕಾದ್ಯರು ಸ್ಥೂಲ್ಯದಲ್ಲಿಪ್ಪರು। ವಾಲಗಮಾಳ್ಪರು ಹರಿ ಅಜ್ಞೆ ಶಿರದಲ್ಲಿ। ತಾಳಿ ಜೀವನದ ಪ್ರಕೃತಿಮಾಳ್ಪರು। ಏಳೈದು ನಾಡಿಗಳು ಕರಣಗಳ ದಾರಕ್ಕೆ। ಕೇಲಿಸಿ ಅವೆ

ಅಲ್ಲಿ ದ್ವಾದಶ ನದಿ॥ ...ಳೈದು ಪ್ರಾಣ ರೂಪಗಳುಂಟು ಬಿಡದಲೆ । ಭೂಲೋಕದನ್ನ ವಿಕಾರವಾಗಲು ಋತು । ಕಾಲದಲಿ ಜನಿಸುವ ಗರ್ಭದಲ್ಲಿ ಕಾಲ ವ್ಯವಧಾನದಲಿ ಬೆಳೆದು ಪರಿಮಿತನಾಹ । ಸ್ಥೂಲ ದೇಹವತಾಳಿ ಅಬ್ಜದಿಂದ । ಶೈಲಧರ ವಿಜಯ ವಿಠಲರೇಯ ವಿನಯದಿಂದ । ಬಾಲಕ್ರೀಡೆ ಯಾಡುವ ಭಕುತ ಭಕುತರಿಂದ ॥೭॥

ತ್ರಿವಿಡಿತಾಳ

ಈ ರೀತಿಯನು ತಿಳಿದು ನ್ಲಿಹ್ನಾರಂಭಿಸಿಕೊಂಡು । ಈರೆರಡು ಲಕ್ಷ ಮಾನವರ ಯಿನಿತು ಗುಣಿಸು । ಹಾರೈಸು ಯಿವರಿವರ ವರ್ಣಾಶ್ರಮಾಚಾರ ಬೇರೆ ಬೇರೆಯೆಂದು ಅನುಕರಿಸು । ಮೂರೊಂದು ಇಪ್ಪತ್ತುಲಕ್ಷ ಜೀವನ ವಿವರ । ಧಾರುಣಿ ಮೇಲಿಪ್ಪವು ಎಣಿಸು । ಭೂರುಹ ವನಚರ ಕ್ರಿಮಿ ಖಗ ಮೃಗ ಸಂಚಯ । ಮೇರೆ ಇಲ್ಲದೆವುಂಟು ನೋಡಲಲ್ಲಿ । ಆರೊಂದು ಆರೊಂದು ಅಧೋಭುವನ ಅತಳಾದಿ ಪೆಸರುಂಟು । ವಾಡುತಿಯುನೆ ತಿಳಿ ಅಲ್ಲಲ್ಲಿಯ । ವಾರುಣಿಪತಿ ಶೇಷ ಮಾರುತ ಕೂರ್ಮನು । ನಾರಾಯಣ ವರಹಾ ಹರಿ ಕೂರ್ಮನು । ಭಾರಾಹೊತ್ತಿಹರು ಚತುರ್ದಶಲೋಕಕ್ಕೆ ಆ । ಧಾರಭೂತರಾಗಿ ಶಕ್ತಿ ಸಹಿತ । ಘೋರ ಉಪ ನಾಯಕ ನರಕಾ ನರಕಾ ವಕ್ಕು । ಭಾರಣೆಯಾಗಿವೆ ಪಾಪಿಗಳಿಗೆ । ಕಾರಣ ಕರ್ಮಭೂಮಿಗೆ ಬಂದು ಚಿಂತಿಸು । ಭಾರತ ವರ್ಷದೊಳಗೆ ಯಿದ್ದ ಕ್ಷೇತ್ರ । ನಾರಾಯಣಾಶ್ರಮ ಮೊದಲಾದವು ಮತ್ತೆ । ವಾರಿತಾ ಪೂರಿತವಾದ ನದಿ ಕಾಸಾರಾ । ಮೇರು ನಂದನ ಮಿಕ್ಕ ಪರ್ವತಗಳುಚ್ಚರಿಸೆ । ಧೀರನಾಗಿ ಮುಂದೆ ಮನವೆ ನಡಿಸು ಮೇರು ಪರ್ವತ ನಾನಾ ನವಖಂಡ ನದಿ(ವ)ದ್ವೀಪ । ವಾರಿಧಿಗಳು ಶ್ವೇತ ದ್ವೀಪಾನೇಕ ರೂಪಾ । ಧಾರುಣಿಲೋಕ ಲೋಕಾದ್ರಿ ತಾಮಸು ಗಂ । ಭೀರ ಭುವನಾನಂತಾಸನ ಕುಂಡಲಕಾರ । ವಾರುಣಗಳುವುಂಟು ಎಂಟು ಸುತ್ತಲು ವಡಬಾ । ವಾರುಧಿಯೊಳಗಿಪ್ಪರು ಸುರರಿಗೆ ಮಹಿಮೆಯು । ತೋರುತ್ತ ಕಾರುಣ್ಯವನೆ ಬೀರುತ್ತ । ವಾರಿದಾ ಸ್ವರ್ಭಾನು ದಿವಾಕರ ಚಂದ್ರಮ । ತಾರಾ ಮಂಗಳ ಸೌಮ್ಯ ಬೃಹಸ್ಪತಿ ಭಾರ್ಗವ । ಸೌರಿ ಸಪುತ್ರ ಋಷಿ ಧ್ರುವ ಮಂಡಲ ವಿ । ಚಾರಣೆ ಮಾಡುವದು ಅವರ ನೀತಿ । ಮೂರು ದಾರಿಯ ತಿಳಿ ಪಿತೃದೇವ ಬ್ರಹ್ಮ । ಸಾರಿ ಸಾರಿಗೆ ಸ್ಥಾನ ಸ್ಥಳ

ದವರಾ। ಪಾರ ಸುಂದರ ಸಾರ ವಿಜಯ ವಿಠಲರೇಯನ। ಚಾರಿತ್ರವನೆ ಗುಣಿಸು ಸರ್ವಕಾವಿನಲ್ಲಿ ॥೮॥

ಧ್ರುವತಾಳ

ಮರಳಿಯೋಚಿಸು ವಿಮಾನಾವಳಿ ಸಂಕುಲ। ಕರೆಸಿ ಕೊಂಬೊದಿದೆ ಭುವರ್ಲೋಕವೆಂದೆನಿಸೆ। ಖಂಪತಿ ಯಿಲ್ಲಿಪ್ಪ ಪರಿವಾರದೊಡನೆ ಸಾ। ಧ್ಯರು ಉಭಯ ಗಂಧರ್ವರು ಯಕ್ಷ ಕಿನ್ನರಾದ್ಯರು। ತರುವಾಯಸುವರ್ಲೋಕಯಿದೆ ಸ್ವರ್ಗಲೋಕವೆನಿಸುತಿದಕೋ। ಪರಿ ಪರಿ ಭೋಗದಿಂದ ಇಂದ್ರನು ಸುಖ ಬಡುವ। ಸುರಧೇನು ಕಲ್ಪತರು ಉಚ್ಚೈಶ್ರವೈರಾವತ ಕರಿ। ಊರ್ವಸಿ ರಂಭೇರು ವೈಜಯಂತಿ ನಗರಿ। ಗುರು ಮೊದಲಾದ ಪರಮ ಋಷಿಗಳು ವೊಪ್ಪುತಿಹರು। ಹರಿ ಉಪೇಂದ್ರನಾಮಕ ಪೂಜೆಯಗೊಳುತಿಪ್ಪ। ಧರಣಿ ಯೊಳಗೆ ಯಾಗ ಸತ್ಕಾರಾಚರಿಸಿದರು। ಮೆರವು ತಿಪ್ಪರು ಅಲ್ಲಿ ನಾನಾ ಸೌಖ್ಯದಲ್ಲಿ! ಬರಿದೆ ಪುಣ್ಯದಿಂದ ತಲೆ ಕೆಳಗಾಗಿ ಬಿದ್ದು। ನರನಾರಿ ಈ ಸರ್ವ ಯೋನಿಯಲ್ಲಿ ಪುಟ್ಟುವರು। ವರ ಮಹರ್ಲೋಕ ಜನೋ ತಪ ಸತ್ಯದಲ್ಲಿ ವಿ। ಸ್ತರಿಸುವೆ ಬ್ರಹ್ಮ ರುದ್ರ ಕಾಮ ಸನಕಾದಿಗಳು। ಭರದಿಂದ ತಿರಗುವ ನಾಟ್ಯಾಲಂಕಾರ ಜನ। ಸ್ವರವೆತ್ತಿ ಪಾಡುವ ಪರಿ ಪರಿ ಸೇವೆಯು ಭರಿತಾಗಿಪ್ಪರು ಅಲ್ಲಲ್ಲಿ ತುಂಬಿಕೊಂಡು। ತರತಮ್ಯದಿಂದ ವಾಲಗಮಾಡುತ್ತ ವರ ಅ। ನಿರುದ್ಧ ಪ್ರದ್ಯುಮ್ನ ಸಂಕರುಷಣ ಹರಿ ಕೃಷ್ಣ। ನಾರಾಯಣ ವಾಸುದೇವಾ। ಎರಡೈದು ಮೇಲು ಲೋಕಾದಲ್ಲಿ ಭಗವದ್ರೂಪ। ಧೊರೆ ತನದಲ್ಲಿ ಪೂಜೆಗೊಳುತಿಪ್ಪವು। ಪರಮೇಷ್ಟಿ ಲೋಕದಿಂದಿತ್ತಲು ಮೇಲು ಭಾಗದಲ್ಲಿ; ದುರಿತವಿದೂರ ವೈಕುಂಠವೆನ್ನಿ। ಧರಿಯೊಳಗಿಲ್ಲದ ವಿಚಿತ್ರ ತರತಮ್ಯ ನಿರೀಕ್ಷಿಸುವ ಮು। ಕ್ತ ರಸಂದಣೆ ಬರಹದಲ್ಲಿ ಪೇಳುವೆ ಇದರ ವರ್ಣನೆ ಮುಂದೆ। ಅರುವು ಸಜ್ಜನರ ಚಿತ್ತಕ್ಕೆ ಆಗೋದು। ಚಿರ ಜ್ಞಾನಾ ನಂದ ಮೂರ್ತಿ ವಿಜಯನ ವಿಠಲನ್ನ। ಕರುಣದಿಂದಲಿ ಕೇಳಿ ಕರಣ ಶುದ್ಧಿಯಲಿ ॥೯॥

ರೂಪಕತಾಳ

ಹತ್ತೈದ ಕೋಟಿ ಯೋಜನ ಬೊಮ್ಮಾಂಡವು। ಎತ್ತನೋಡಿದರತ್ತ ಅವಕಾಶವಾಗಿದೇ। ಮತ್ತ ಯಿದರ ಇಮ್ಮಡಿ ಬ್ರಹ್ಮಾಂಡ ಖರ್ಪರ। ಹತ್ತಿ

ಕೊಂಡಿದೆ ನೋಡಿ ಸುತ್ತಲು ತೊಲಗದಲೆ । ಇತ್ತಂಡ ವಿರಾಟ ಮೂರ್ತಿಗಳು ಉಂಟು । ಸತ್ಯಲೋಕವೆ ಶಿರಸು ಒಂದಕೆ ಉಲ್ಲಿತನಕ । ತತ್ತಳಿಸುವ ಉದಕ ತೇಜೋ ವಾಯು ಗಗನ । ಚಿತ್ತಾದಾಹಂಕಾರ ಮಹಾ ಅವ್ಯಕ್ತಾ ವರ್ಣಾ । ಪ್ರತ್ಯೇಕ ಪ್ರತ್ಯೇಕವಾಗಿವೆ ಇವು ಏಳು । ಸತ್ಯವಾಗಿಪ್ಪವು ಅನಿತ್ಯ ಎಂದಿಗೂ । ತತ್ವ ಒಂದೊಂದಕ್ಕೆ ಹತ್ತುಮಡಿವೆಗ್ಗಳಿಸಿ । ಸತ್ವ ಜೀವಿಗಳು ಬೊಮ್ಮಾದಿ ಸರ್ವ ದೇ । ವತ್ತಿಗಳಲ್ಲಲ್ಲಿ ತಮ ತಮ್ಮ ಸ್ಥಾನದಲ್ಲಿ । ಕರ್ತರಾ-ಗಿಪ್ಪರು ತಮಗಿಂದ ನೀಚರಿಗೆ । ಉತ್ತಮ ಮತಿಯಲ್ಲಿ ಉಪದೇಶಮಾಡುತ್ತ ವೃತ್ತಿ ರೂಪದಲ್ಲಿ ಅಂಶಿ ಅಂಶವಧರಿಸಿ । ಅತ್ಯಂತ ಹರುಷದಲ್ಲಿ ಬಾಳುತ್ತ ಲಿಪ್ಪರು । ಚಿತ್ತಜ ಪಿತ ನಮ್ಮ ವಿಜಯ ವಿಠಲರೇಯ । ನಿತ್ಯದಲ್ಲಿ ನೆನೆಸೆ ಮುಕ್ತಿಯ ಕೊಡುವನು ॥೧೦॥

ಮಟ್ಟತಾಳ

ಬುದ್ಧಿಯಲ್ಲಿ ಮನಸ್ಸು ಪೊಗಿಸಿ ಪೊಂದಿಸಿ ಚಿತ್ತ । ಶುದ್ಧನಾಗಿ ನಿಂತು ತತ್ವ ವಿಚಾರಿಸಿ । ಬದ್ಧವಾದ ಪ್ರಕೃತಿ ಹಾರಿ ಪೋಗುವಂತೆ । ಸಿದ್ಧಾಂತವೆ ತಿಳಿದು ಭಕುತಿ ವೈರಾಗ್ಯದಲಿ । ಮಧ್ವಮತವಪೊಂದಿ ಮುದ ದಿಂದಲಿ ಧ್ಯಾನ । ಪದ್ಧತಿ ತಪ್ಪದಲೆ ಪಾವನ್ನ ನೀನಾಗೊ । ಸಿದ್ಧಿಸುವದು ನಿನಗೆ ಈ ಪರಿ ಆರೋಹಣ । ಇದ್ದದೆ ಚನ್ನಾಗಿ ಉಪಕ್ರಮಿಸಿಮಾಡು । ಸದ್ಭಾವದಿಂದ ಉಪಸಂಹಾರಣೆಯನ್ನು । ನಿರ್ಧಾರಗೈಸಿ ವೊಳಗಿದ್ದ ನಿತ್ಯ । ಬುದ್ಧಿಯ ಮಧ್ಯದಲಿ ಧ್ಯಾನರೂಪದಲ್ಲಿಟ್ಟು । ನಿರ್ದ್ವಂದನಾಹದೆ ಇದೆ ಲಯಚಿಂತನೆಯೊ ಇದೇ ಅವರೋಹಣವೋ । ಪದ್ಮವಲ್ಲಭ ನಮ್ಮ ವಿಜಯ ವಿಠಲನಂಘ್ರಿ । ಪದ್ಮ ಕಾಂಬುವದಕ್ಕೆ ಇದೆ ಉಪಾಯಗಳು ॥೧೧॥

ತ್ರಿವಿಡಿತಾಳ

ಆದಿ ಮಧ್ಯಾಂತದಲಿ ಮನಸು ಕಂಡಕಡಿಗೆ । ಪೋದರೆ ನೀನು ವ್ಯಾಕುಲನಾಗದೆ । ವೇದ ವೇದಾಂಗಗಳಲಿ ಪೇಳಿದಂತೆ ಪಂಚ । ಭೇದೋಕ್ತಿ ಮಾರ್ಗವ ಬಿಡದಿರೆಲೋ । ಸಾಧವನೆಮಾಡು ಮರಳೆ ಮರಳೆ ಮರಳೆ ಸಂ । ಪಾದಿಸು ಧ್ಯಾನವ ನಿನ್ನೊಳಗೆ ಆ । ರಾಧನೆ ಮಾಳ್ಪದು ನಾನಾ ವಿಚಿತ್ರದಲ್ಲಿ । ಸಾಧಿಸು ಮೆಲ್ಲ ಮೆಲ್ಲನೆ ಹರಿಪುರದ । ಹಾದಿಯ ಮೆಟ್ಟುವದು ಸ್ಥೂಲ ಸೂಕ್ಷ್ಮ ಬುದ್ಧಿ । ಪಾದ ಮೂಲವಿಡಿದು ಮೌಳಿತನಕಾ । ವೋದ

ದಿಂದಲಿ ಹರಿಯಾ ತ್ರಿ ವಿರಾಟಮೂರ್ತಿ । ಶೋಧಿಸು ತಜ್ಜನ್ಯ ತದಾಶ್ರಯವೆನ್ನು ಆದಿ ಪೊರಬೊಮ್ಮ ಸದ್ಗುಣ ನಿರ್ಗುಣ ತತ್ತ್ವ । ಧ್ಯೇದನೆಂದು ತಿಳಿದು ಚಿಂತನೆ ಮಾಡು । ಆದಾ ಭುವನವೆಲ್ಲ ಆತನಲ್ಲಿ ಅನು । ವಾದವಮಾಡು ಮನವೆ ವಾಣಿಯಲ್ಲಿ । ಶ್ರೀದೇವಿಯರಸ ನಮ್ಮ ವಿಜಯ ವಿಠಲರೇಯನ । ಆಧಾರ ನಮಗೆಲ್ಲ ಬೇಡಿದಾರ್ಥವಕೊಡುವಾ ॥೧೨॥

ಝಂಪೆತಾಳ

ಅಧಿಕಾರತವಭೇದ ಯಿದರೊಳಗೆ ತಿಳಿವದು । ಅಧಿದೈವ ಮೊದಲಾದ ಮುಕ್ತ ಜನರಾ । ಅದೆ ತನ್ನ ಸ್ವರೂಪ ಅವಲಂಬಿಸಿ ಲಿಂಗ । ಹೃದಯದಲ್ಲಿ ಕಂಡ ವಿಶಿಷ್ಟ ಮತ್ತೆ । ಮುದದಿ ಅನಿರುದ್ಧ ಸ್ಥೂಲ ದೇಹ ಆವಾವ । ಉದು ಭವಿಸಿದ ಕಳೆವರದ ತೆರದಿ । ತದನಂತರದಲ್ಲಿ ಮರಿಯಾದಿ ಧರಣಿ ಯೋಜ । ನದ ಲೆಖ್ಖ ಉನ್ನತೋನ್ನತ ಎಣಿಸಿ । ಇದರಂತೆ ಚತುಸ್ರವಲಯಾಕಾರ- ಧಿಕಧಿಕ । ವಿಧಿ ಪರಿಯಂತ ವ್ಯಾಪ್ತಿಸಿದ್ಧವೋ । ನಿದರುಶನದಿಂದ ಅಲ್ಲಿಗಲ್ಲಿ ಯಿದ್ದ । ಪದುಮನಾಭನಮೂರ್ತಿಯನು ಕಾಂಬೋರು । ವಿಧು ಜನರು ವಿಲಿಂಗರಾಗಿ ಸಂಸ್ಕೃತಿಯಲ್ಲಿ । ಪದೋಪದಿಗೆ ನೋಡಿದುದೆ ಸ್ಪಷ್ಟವಾಗಿ । ಇದರಲ್ಲಿ ಪ್ರತ್ಯಕ್ಷ ಕರಿಸಿ ನೋಡುವರ್‍ಯ್ಯಾ । ಸದಮಲರಾಗಿ ಇಚ್ಛಾನು ಸಾರಾ । ಉದಕ ಮಿಗಿಲಾದ ರೂಪವ ಧರಿಸಿ ಸೋತ್ತುಮರಾ । ಪದಪೂಜೆ ಮಾಡುವರು ವಿನಯನಿಂದ । ಮದನನ್ನ ಪೆತ್ತ ಸಿರಿ ವಿಜಯ ವಿಠಲರೇಯ ಅದುಭೂತ ಮಹಿಮೆಗಳ ಪೊಗಳುತ್ತಲಿ ॥೧೩॥

ಅಟ್ಟತಾಳ

ಮೋದ ಸುಖಾನಂದ ಹರುಷ ಸಂತೋಷ ಪ್ರ । ಮೋದಾ ಪಾರಾ- ವರ್ಯ ಪಾವನ್ನ ಪ್ರೀಯ್ಯಾಹ । ಲ್ಹಾದ ಜ್ಞಾನವು ವಿಜ್ಞಾನ ಪ್ರಜ್ಞಾನ ಸಂಮೋದ ಸಂವಿಜ್ಞಾನ । ಅದುಭೂತ ಗಂಭೀರನಾದ ಧೀರ ಶೂರ ಅತ್ಯಂತ ಶಕ್ತ ವಿ । ರೋಧ ವಿದೂರ ಉದಾರ ಮುತ ಮುದ । ಆಧಾರ ಅವ್ಯಕ್ತ ಅತಿವ್ಯಕ್ತ ವ್ಯಕ್ತ । ವೇದಮೂರುತಿ ವ್ಯಾಪ್ತ ಕರ್ತಾ ಪ್ರೇರಕ ಸಾಕ್ಷಿ । ಸಾಧು ಗುಣಾಂಬುಧಿ ಕ್ಷೇಮ ಅಭಯ ವಿ । ನೋದ ಅಂತರ್ಯಾಮಿ ಮಹಾ ಮಹತ್ತು ಅಣು । ಆದಿ ಪರಬೊಮ್ಮ ಸಂಭೃತಿಸಾಧ್ಯಾ ಅ । ನಾದಿ ಬ್ರಹ್ಮಚಾರಿ ಲೋಕಸಂರಕ್ಷಣ । ಆದಿ ವ್ಯಾಧಿಶೂನ್ಯ ಏಕ ಸುಂದರ ಸತ್ಯ ।

ಆದಿತ್ಯ ಪ್ರಕಾಶ ಶಾಂತ ಪೂರ್ಣ ಕರು। ಣೋದಧಿ ಪ್ರಣತಾರ್ತಿಹರ ಶೋಕನಾಶನ। ಮಾಧುರ್ಯಾದನು ಧರ್ಮ ದಿವ್ಯ ವಿಭೂಷಣ ಕಾ। ಲಾದಿ ಜಯಾ ಧೈರ್ಯ ಪೀತಾಂಬರಧಾರಿ। ವೈದಿಕ ಲಕ್ಷಣವಂತ ಅವಿರುದ್ಧಾ। ಕ್ರೋಧರಹಿತ ನಿತ್ಯ ತೃಪ್ತ ಜನನದೂರ। ನಿದಾನ ನಿಸ್ಸಂಗ ನಿಷ್ಕಳಂಕ ದಾತಾ। ಭೇದ ಜಡ ಪ್ರಕೃತಿ ಜೀವಿ ತ್ರಿವಿಧ। ಸಾಧ್ಯ ವಿಲಕ್ಷಣ ಬಹು ಕುಟುಂಬಿಪಾಲಾ। ಸೌದಾಮಿನಿ ತೇಜ ಅವ್ಯಾಕೃತಭುಕು ನಾನಾ। ರಾಧ್ಯಾ ದುರಾರಾಧ್ಯಾ ನಿತ್ಯ ಪುರುಷತ್ರಾಶ್ರಯ। ಮೇದಿನೀಶ್ವರ ಪೂರ್ಣ ಐಶ್ವರ್ಯ ಅನುಪಮ। ಮೇಧಾದಿ ನೇಮನ ಸರ್ವಾಂತರ್ಯಾಮಿ। ಪ್ರಾದೇಶ ಮೊದಲಾದ ತತ್ತ್ವಪ್ರಮಾಣನೆ। ತ್ರಿಧಾಮ ಬಲ ತ್ರಿಗುಣಾತೀತ ಫಲಪ್ರದ। ಮಾಧವ ವಿಜಯ ವಿಠಲರೇಯ ಪರಮಾತ್ಮ। ಯಾದವಕುಲ ಶಿರೋಮಣಿಯ ಧ್ಯಾನವೆಮಾಡು ॥೧೪॥

ಅದಿತಾಳ

ಸಾಕಾರ ಅಪ್ರಾಕೃತ ಶರಣಾಂಗತ ವತ್ಸಲಾ। ಲೋಕ ವಿಲಕ್ಷಣ ಅಚಲ ಅಚಂಚಲ। ಏಕಪತ್ನಿವ್ರತ ಭುಕ್ತಿ ಭಕ್ತಿಪ್ರದಾ। ನೇಕ ಮಹಿಮ ಚಕ್ರವರ್ತಿ ಸಾರ್ವಭೌಮ। ವಾ(ಲೋ)ಕುಪಾಲಕ ಸರ್ವವರ್ಣ ಸರ್ವಾ ಶ್ರಮ। ನಾಕ ಜನರ ಪ್ರಿಯಾ ಸರ್ವಾಧಿಕಸುಹೃತ್। ಭೂಕಾಂತ ಭವ ನಾಶ ನೀರದವರ್ಣ ಪುಣ್ಯ। ಶ್ಲೋಕ ಶತ್ರುಸಂಹಾರ ನಿರ್ವಿಕಾರ ಅಗಮ್ಯ ಬೇಕಾದ ಗುಣ ರೂಪ ಕ್ರಿಯಾ ಭಾವಂಗಳು ಅ। ನೇಕವಾಗಿವುಂಟು ವೊಂದಾರಂಭಿಸಿಕೊಂಡು। ಈ ಕ್ರಮವನ್ನು ತಿಳಿದು ಮಾಡುವಬಗೆ ವಿ। ವೇಕ ಜನ ಯಿಪ್ಪದು ಅಧಿಕಾರತನಭೇದ। ಲೋಕೇಶ ಸರ್ವದಿಂದ ಆ ಮೇಲೆ ತರುವಾಯ। ಶ್ರೀ ಕಂಠಾದಿಗಳೆಲ್ಲ ತಮ್ಮ ಸ್ವರೂಪದಂತೆ। ಸಾಕಲ್ಯವಾಗಿ ಸರ್ವೋಪಾಸನೆ ಮಾಡುವರು। ಏಕಾರ್ಣವವಾಸ ಸಿರಿ ವಿಜಯ ವಿಠಲರೇಯ ಸಾಕುವ ಈಪರಿ ತಿಳಿದ ಜ್ಞಾನವಂತರಾ ॥೧೫॥

ಜತೆ

ಆರೋಹಣ ಅವರೋಹಣದಿಂದ ಹರಿಯ ಧ್ಯಾನಿಸಿ। ದಾರಢ್ಯ ಸಾಹದು ವಿಜಯ ವಿಠಲಪೊಳೆವಾ ॥೧೬॥

ಸುಳಾದಿ ೧೨

ಮಾನಸಪೂಜಾಕ್ಕೆ ಆಸನವಿಧಾನ ಮಾನಸಪೂಜಾಕ್ರಮ, ಯೋಗಮಾರ್ಗ ಬಿಂಬ ಇರುವ ಸ್ಥಳ ಬಿಂಬನ ಲಕ್ಷಣ ಬಿಂಬಮೂರ್ತಿ ಪೂಜಾ ವಿಚಾರ

ರಾಗ ಭೈರವಿ ಧ್ರುವತಾಳ

ಮಾನಸ ಪೂಜೆಮಾಡು ಧ್ಯಾನಪೂರ್ವಕದಿಂದ। ಜ್ಞಾನಲೋಚನದಲ್ಲಿ ನೀ ನಡದು ನಡದು। ಶ್ವಾನ ಸೂಕರ ನಾನಾ ಯೋನಿಗಳಲ್ಲಿ ಬಂದ। ಹೀನಾಯ ಕಳೆದು ಮುಂದಿನ ಜನನವಳಿದು। ಮಾಣು ಪ್ರಾರಬ್ಧವ ಕಾಣಿಸು ಮತಿ ಮಾರ್ಗ। ಮೇಣು ಸಾಧನವಕ್ಕುದಾಸೀನವ ಮಾಡದಲೆ। ಮಾನವಾಧೀಶ ನಮ್ಮ ವಿಜಯ ವಿಠಲನ್ನ। ಏನಾದರು ಬಿಡದೆ ನೀ ನೋಡುವದು ಮನುಜಾ ॥೧॥

ಮಟ್ಟತಾಳ

ತತ್ವ ತಾರತಮ್ಯ ತಾತ್ಪರ್ಯವು ತಿಳಿದು। ಸತ್ವಗುಣದಲ್ಲಿ ಸತ್ಯದಲ್ಲಿ ನಡೆದು। ನಿತ್ಯವಧಿಕ ಜ್ಞಾನ ಭಕ್ತಿ ವೈರಾಗ್ಯದ। ಉತ್ತಮೋತ್ತಮನಾಗಿ ಉತ್ತರೋತ್ತರದಲ್ಲಿ। ಚಿತ್ತದ ಮಧ್ಯದಲ್ಲಿ ಚಿತ್ತಜಪಿತನನ್ನ। ಸ್ತೋತ್ರವ ನೆಸಗುತ್ತ ಅತ್ಮನಿರ್ಮಳನಾಗು। ಸಾತ್ವಿಕ ದೈವವೆ ವಿಜಯ ವಿಠಲ ಸ। ಸರ್ವೋತ್ತಮನೆಂದು ಸಾರುತ್ತ ಸಂತತದಲ್ಲಿ ॥೨॥

ರೂಪಕತಾಳ

ಅವಲೋಕವಾಗದೆ ನಾಸನನು ನೋಡಿ ಕೊಳುತಾ। ಗ್ರೀವನು ನಿಲ್ಲಿಸಿ ದೇಹವನ್ನು ಚಂಚಲಸದೆ। ಪವನಾದಿಗೆ ನಮಿಸಿ ಹವಣಿಸಿ ಪದುಮಾಸ। ನವನಿಟ್ಟು ಲೌಕಿಕ ತವಕದಿಂದಲಿ ತೊರೆದು। ಭವಮನದಲ್ಲಿ ಶ್ರೀಧವ ವಿಜಯ ವಿಠಲನ। ನವಕುಸುಮ ಚರಣವನೋಡು। ಹರಿಯ ಮಹಿಮೆಯೆಂತು ಕರದೊಯ್ಯುವು। ಸ್ಮರನ ಯಮುನದೂತರಂದು ನರಕವೇ ಬತ್ತಿಪೋಯಿತು ॥೩॥

ಝಂಪೆತಾಳ

ದೇಹ ಜೀವಾಂಗುಟಾ ತತು ಪರಿಮಿತಾ। ಈಹ್ಯದು ಹೃದಯ ಸ್ಥಾನದಲ್ಲಿ ಬಿಂಬಾ। ಈ ಹದನವನು ತಿಳಿದು ಅಧೋಮುಖಾವಾದಂಬು। ರೂಹಪ್ಪ ಷಟ್ ದಳಾರುಣ ಶುಕ್ಲವರಿದೂ। ಮಹ ನಾಡಿಯ ಮೂಲಾ

ಧಾರಾಳವನು ನೋಡಿ। ಸಹ ವಾಯುವು ಬೀಜದಿಂದ ಕಮಲವನೆತ್ತಿ । ಮಿಹಿರಾ ಯೆಂಬೊ ಜ್ಞಾನದಿಂದಲಿ ಅರಳಿಸಿ। ಶ್ರೀಹರಿಯ ಕರ್ಣಿಕೆ ಮಧ್ಯ ದಲ್ಲಿ ಕಂಡು । ತ್ರಾಹಿ ತ್ರಾಹಿಯೆಂದು ವಿಜಯ ವಿಠಲಗೆರಗಿ। ದೇಹಿ ಎನುತಲಿ ತತ್ಪರನು ಕೊಂಡಾಡೊ ॥೪॥

ತ್ರಿವಿಡಿತಾಳ

ಏಕಾಂತಧ್ಯಾನವ ಕೈಕೊಂಡು ದ್ವಾರಗಳಾ। ನೇಕ ಬಗೆಯಿಂದ (ನಿ) ವಿರೋಧಿಸಿ। ಸಾಕಾರ ಸಕ್ರೀಯಾ ಲೌಕೀಕ ವಸ್ತುದ। ಆಕಾರವನು ಹೃಯ ಸ್ಥಳದಲ್ಲರಿದೂ। ಜೋಕೆಯಿಂದಲಿ ಜೀವಾಂತರ ಕಳೆಯನುತಂದು। ಲೋಕ ಮೋಹನವಾದ ಮೂರ್ತಿಯಲ್ಲಿ। ನೀ ಕೂಡಿಸಿ ನಿನ್ನ ಉಪಾಸ್ತಿದೈವವ । ಸಾಕು ಬೇಕೆಂದು ದೈನ್ಯದಿಪಾಡುತ್ತ। ಏಕಮೇವಾ ನಮ್ಮ ವಿಜಯ ವಿಠಲನ ಅ। ನೇಕ ರೂಪಗಳು ಪೂರ್ವಾಪರ ಸ್ಮರಿಸುತ್ತಾ ॥೫॥

ಅಟ್ಟತಾಳ

ಪರಮಗುರುವಿನ ಮೂರುತಿಯನ್ನು ಸ್ಮರಿಸಿ। ಇರದೆ ಮೊದಲಾ ವಿಗ್ರಹಗಳಾವ್ಹಾನಿಸಿ । ಶರಧಿ ಥೆರೆಯಂತೆ ಐಕ್ಯವ ಚಿಂತಿಸಿ । ಕರದು ತನ್ನಯ ಗುರುವಿನ ಮೂರುತಿಯೊಳು। ಪರಮ ಗುರುವಿನ ಮೂರುತಿ ಯನ್ನು ಪೊಗಿಸಿ। ಪರಮ ಹರುಷದಿಂದ ಹಾರಿ ಹಿಗ್ಗುತಲಿನ್ನು । ಮರಿ ಯಾದೆ ನಿನ್ನಯ ವರ ಮೂರುತಿಯೊಳು। ಪರಿ ಚಿಂತಿಸು ಆ ಮೂರುತಿಯ ರೂಪ। ಪರಮ ಪುರುಷ ಹರಿ ವಿಜಯ ವಿಠಲನ ತ್ರಿ। ಕರಣ ಒಂದಾಗಿ ಬಿಂಬಾಮೂರುತಿಯಮಾಡೊ ॥೬॥

ಆದಿತಾಳ

ಧ್ಯಾನಶ್ಲೋಕವನ್ನು ಪೇಳು ಆನಂದದಾನಿಯನ್ನು। ಶ್ರೀ ನಖಪಿಡಿದು ಸುಂದರಾನನ ಪರಿಯಂತ । ಮಾನಸದಲಿನೋಡಿ ಧ್ಯಾನವನ್ನು ಮಾಡು ಒಂದೊಂದ। ನು ನಿರೀಕ್ಷಿಸಿ ದೃಢವನು ತಿಳಿದು ಖಚಿತದಲ್ಲಿ। ನೀ ನರಿದು ಧನ್ಯನಾಗು ಶ್ರೀನಿವಾಸನಗುಣವ। ಧ್ಯಾನ ಜ್ಞಾನ ಗಾನ ಸನ್ಮಾನ ಬಾಹ್ಯ ರಂಗದಲ್ಲಿ। ಏನೇನು ಯಿದ್ದ ಪೂಜೆಯನು ಮಾಡು ಪೊಳಗೆನಲಿದು । ಮಾನಸದಲ್ಲಿ ಸೃಜಿಸಿ ದೀನದಲ್ಲ್ಯುದ್ಧಾರನಾಗು । ಭಾನುಕೋಟಿ ತೇಜ

ಕಾಯಾ ವಿಜಯ ವಿಠಲನಂಘ್ರಿ । ಧ್ಯಾನವನ್ನು ಬಿಡದಲೆ ಜಾಣನಾಗು ನಿರುತದಲ್ಲಿ ॥೭॥

ಜತೆ

ನಿಷ್ಕಾಮದಲಿ ಭಜಿಸಿ ನೀರೆರದು ಸುಖಬಡು। ನಿಷ್ಕಳಂಕ ರೂಪ ವಿಜಯ ವಿಠಲರೇಯಾ ॥೮॥

ಸುಳಾದಿ ೧೩

ಅಂತರಾತ್ಮನಾದ ಬಿಂಬನಕಾಂಬ ಹಂಬಲ, ಅಧೋಮುಖವಾಗಿದ್ದ ಹೃತ್ಪದ್ಮ ಅರಳುವ ವಿಚಾರ, ಸ್ಥೂಲ ಬಿಂಬನಾದ ಪ್ರಾಜ್ಞನ ಲಕ್ಷಣ, ಈ ಪ್ರಾಜ್ಞನ್ನ ಪರಮ ಗುರುವಿನಮೂರ್ತಿ ಸಹ, ಸ್ವ ಗುರುಮೂರ್ತಿಯಲ್ಲಿ ಚಿಂತಿಸಿ ಆತ್ಮ ಬಿಂಬನಲ್ಲಿ ಐಕ್ಯ ಪೂಜಾಕ್ರಮ

ರಾಗ ಅಹರಿ ಧ್ರುವತಾಳ

ಬಿಂಬಮೂರುತಿ ನಿನ್ನ ಕಾಂಬೆನೆಂದು ನಾನು। ಹಂಬಲಿಸಿ ಬಲು ಹಲುಬಿ ಡಿಂಬದೊಳಗೆ ಬಂದು ಸುಳಿದು ಪೊಳೆದು ನಿಲುವ। ಇಂಬ ನಿರೀಕ್ಷಿಸಿ ಬಲು ಬಡವಾಗಿದೆ। ತುಂಬೂಡಿದು ಬಿದ್ದ ಹಣ್ಣು ಆರುವಲ್ಲದಾ। ಎಂಬೊ ಗಾದೆ ಪೋಲುವ ತೆರನಾಗಿದೆ। ಅಂಬುಜೇಶ ಈಶ ವಿಜಯ ವಿಠಲ ಹೃದ। ಯಾಂಬರದೊಳು ನೀಲಾಂಬುದಾ ಬಾರೋ ॥೧॥

ಮಟ್ಟತಾಳ

ಅಂಬುಜಸಂಭವನು ಬಿಂಬದರುಶನಕಾಂಬನು ಮನದಿಚ್ಛೆ। ಅಂಬರ ನದಿಧರನು ಬಿಂಬದರ್ಪಣದಿ। ಕಾಂಬನು ಪ್ರತಿಬಿಂಬ ಅಂಬರ ಸಂಚರರು। ಅಂಬುಜ ಸಖನಂತೆ ಬಿಂಬ ಕಾಂಬುವರು। ಎಂಬ ಮಾನುಷ್ಯರು ಅಂಬುಪ ಮಿಂಚಿನೆಂಬಂತೆ। ಬಿಂಬಕಾಂಬರುಸಿದ್ಧ ನಂಬಿದೆನೆ ಪೀ । ತಾಂಬರ ಅವರಿ ಗೆಂಬೋದು ಯೆನಗುಂಟೆ। ಡಂಭಕ ಭಕ್ತಿಗೆ ಸಂಭವನಾಮ ವಿಜಯ ವಿಠಲ ಡೊಂಬನ ಅರಿತು ನಂಬಿಗೆನೀಯೋ ॥೨॥

ರೂಪಕತಾಳ

ಹೃದಯ ಸ್ಥಳದಲ್ಲಿ ನೇಗಲಿಧರನು । ವಧೆಮಾಡುತಿರಲು ——— ಕಾರಿಯ। ಅದೆ ಸಮಯದಲ್ಲಿ ನಿನ್ನ ಕರದೊಯಿದು। ಅಧಿಕನಾಡಿಯಲ್ಲಿ ಊರ್ಧ್ವದಲ್ಲಿ ಯಿಟ್ಟೆ। ಮದಗರ್ವ ಪುರುಷನಾ ಭಾಸಮಾನ ತ್ಯಾಗಮಾಳ್ಪ

ಹದನ ತಿಳುಪದೆ ವದನ ತೋರದೆ। ತದನಂತರದಲ್ಲಿ ಮೊದಲು ಮಂದಿರಕೆ ಬಾ। ರದಿಪ್ಪುದೇನೋ ಪಾವನ ಸುರಧೇನು। ಪದುಮ ಗರ್ಭನಾಮ ವಿಜಯ ವಿಠಲಯೆನ್ನ। ಹದುಳಿಲೆ ನಿನ್ನ ಮಾಡಿದೆ ಸುರತರುವೆ ॥೩॥

ಝಂಪೆತಾಳ

ಅಧೋಮುಖವಾಗಿದ್ದ ಪದುಮಾರುಳುವಬಗೆ। ವಿದಿತ ವಿದುಕಾಣೊ ಇಂದಿರೇಶ। ಮೊದಲು ಶ್ವಾಸದಲ್ಲಿ ಉರ್ಧ್ವಮುಖವಮಾಡಿ। ಮುದದಿಂದ ನಿಲವಿಡಿದು ಜ್ಞಾನಾರ್ಕದಾ। ಉದಯಾದ್ಭಾಸ ಸಮ ಭಾಸವೆಂಬೊ ಮಂ। ತ್ರದಲಿ ಕರಿವೆನು ಜೀಯಾ ಕೇಳೂ ಮುಂದೆ। ಅದುಭೂತ ನಾಮ ಸಿರಿ ವಿಜಯ ವಿಠಲ ನಿನ್ನ। ಸದಾ ಮೂರ್ತಿಗಳ ನಿಬಿಡಿ ನಿನ್ನೊಳಗಿರಲಿ॥

ತ್ರಿವಿಡಿತಾಳ

ಸಿರಿದೇವಿರಮಣ ಭಕ್ತರಪರಣ। ಶರನಿಧಿಶಯನ ಶ್ರುತಿಶಿರೋರನ್ನ ಮೊರೆಪೊಕ್ಕೆ ನೋಜೀಯಾ ಮರುತನ ಅಯ್ಯಾ। ಅರಿದವರಿಗೆ ಹೊಣಿಯೆ ಸದಾ ಚಿಂತಾಮಣಿಯೆ। ಸ್ಮರಿಸಿದೆ ಬಹು ಮೂರ್ತಿ ವೊಂದು ಮೆಟ್ಟಕೆ ನಿಲಿಸಿ। ಪರಮ ಗುರುವಿನ ಮೂರ್ತಿ ವೊಳಗೆತಂದು। ಇರಿಸುವೆನಲ್ಲಿಂದ ಸ್ವಗುರು ಮೂರುತಿಯೊಳಗಿಟ್ಟು। ಭರದಿಂದ ಪ್ರಾಜ್ಞನೆ ನಿನ್ನಲ್ಲಿ ಚಿಂತಿಸುವೆ ಸರಿ ಪೇಳು ಇಲ್ಲಿಗೆ ಮುಂದಿನಾಲೋಚನೆ। ಅರವಿಂದಾಕ್ಷ ನಾಮ ವಿಜಯ ವಿಠಲನೀನೆ ॥೫॥

ಅಟ್ಟತಾಳ

ವರ ಮೂರ್ತಿಯೊಳಗೆ ನಿನ್ನ ಚಿಂತನೆ ಪತಿ। ಕರಿಸುವೆನೆಂದಲ್ಲಿ ಪುಷ್ಪ ಸಂಕಾಶಾಂಬರ। ಧರನೆ ಮೇಣು ಅಂತರಂಗದೊಳು ತರುವಾಯ ವರುಣ। ಸರಸಿಜದಳವಷ್ಟಾಕರನಿಕೆ ಪೀಠದ ಮೇಲೆ ಶೋಭಿತವಾಗಿ। ಹರಿ ಪಾಲಕರು ಪರಿವಾರ ಸುತ್ತಲು। ಕರಗಳು ಮುಗಿದು ಪರಾಕು ಪೇಳುತಿರೆ। ಧೊರೆಯಾಗಿ ಸ್ವಮೂರ್ತಿಗಣಮಧ್ಯದಲ್ಲಿ। ಮಿರಗುವ ಪ್ರಕಾಶ ವಿಜಯ ವಿಠಲ ದೇ। ವರದೇವ ಸಂಜೀವ ಅಘವನದಾವಾ ॥೬॥

ಆದಿತಾಳ

ಲೋಕದೊಳಗಿದ್ದವೆಲ್ಲಾನೇಕವಾಗಿ ನೋಡೆ ಪರ। ಲೋಕಕ್ಕೆ ಸಾಧನವಲ್ಲಾ ವಾಕು ಇದು ಪುಸಿ ಅಲ್ಲಾ। ಏಕೋಭಾವದಲ್ಲಿ ನಾಶಿಕದಲ್ಲಿ

ದೃಷ್ಟಿ ಯಿಟ್ಟು । ಕಾಕು ದೈವಂಗಳ ಬಿಟ್ಟು ಆ ಕಮಲಪೀಠನಲ್ಲಿ । ಅಖಂಡ ಧ್ಯಾನಾನಾಗಿ ಏಕೋಮೇವನ ಪೂಜಿಯಾ । ನೇಕ ದಿನದಲ್ಲಿ ಮಾಳ್ಪನೇಕ ಮ್ಯಾಯಾ ವಿಜಯ ವಿಠಲ । ಸಾಕುವನು ಬೇಕಾದನಿತ್ತು ॥೭॥

ಜತೆ

ನಿದರುಶನವಾಗೆ ಜನನದ ಭಯವಿಲ್ಲ । ಉದುಭವ ನಾವು ಸಿರಿ ವಿಜಯ ವಿಠಲಪೊಳಿಯೋ ॥೮॥

ಸುಳಾದಿ ೧೪

ಬಿಂಬಮೂರ್ತಿ ಧ್ಯಾನೋಪಾಸನ ಲಕ್ಷಣ, ಬಿಂಬಮೂರ್ತಿ ನಿಲಿಸುವ ಸದುಪಾಯ

ರಾಗ ಬೈರವಿ ಧ್ರುವತಾಳ

ಧ್ಯಾನ(ವ)ಮಾಡು ಮನವೆ ಧ್ಯಾನಂಗತನಾಗಿ । ದಾನ ವಾರಿಯ ನಖವನುವಿಡಿದು ಸುಂದ । ರಾನನ ಪರಿಯಂತ ಜ್ಞಾನಲೋಚನದಿಂದ । ಮಾನಸದಲ್ಲಿ ಪೂಜಿಯನು ಗ್ರಹಿಸು ಬಿಡದೆ । ಭಾನು ಮಂಡಲದಂತೆ ತಾನಿಪ್ಪನು ಹೃದಯ । ಅನಂತದಲ್ಲಿ ನಿಧಾನ ಪರಮ ಪುರುಷ । ನೀನರಿಯೊ ಪ್ರಾದೇಶ ಮಾತುರ ಮೂರುತಿಯ । ಸಾನಂದ ವಿಜಯ ವಿಠಲ ಪರ ಬೊಮ್ಮ । ಮೀನಾಂಕನಯ್ಯ ಎನ್ನ ಮಾನದ ಧೊರಿಯೆ ಎನ್ನ ॥೧॥

ಮಟ್ಟತಾಳ

ಅರಿದರಗದ ಪದುಮ ಧರಿಸಿದ್ದು ಚ । ತುರ ಕರ ಪ್ರಸನ್ನ ವರ ವದನ ತಾ । ವರೆ ನಯನ ಸುಂದರದ ಪಿಶಾಂಗಂಬರ ಪೊಳೆವಹಾರ । ಮಿನುಗುವ ಕನಕ ಬಾಪುರಿ ಬಲು ವಿಚಿತ್ರ । ಸುರಮಣಿ ಮುಕುಟ ವಿಸ್ತರಿಸುವ ಕುಂಡಲ ಧರಿಸಿದ ಕರುಣಾಕರ ವಿಜಯ ವಿಠಲಂ । ತರದೊಳು ನಲಿದೊಲಿವಾ ॥೨॥

ತ್ರಿವಿಡಿತಾಳ

ಬಾಡದ ವನಮಾಲೆ ಉರದಲ್ಲಿ ಸಿರಿ ತೂ । ಗಾಡುವ ಕೌಸ್ತುಭ ರತ್ನ ಕಂಧರ ಭೂಷಾ । ನೋಡು ಮೇಖಲ ಮತ್ತೆ ಬೆರಳ ಉಂಗುರವೊ ಇ । ನ್ನಾಡಲೇನೂಪುರ ಕಂಕಣಾದಿಗಳು । ಪಾಡುವರಾರು ಅಮಲ ಸುಳಿ ಗುರುಳು । ತೀಡಿದ ಕಸ್ತೂರಿ ನಗೆ ಮೊಗದ ಸೊಗಸು । ಆಡುವ ಪ್ರತಿದಿನ ವಿಜಯ ವಿಠಲರೇಯನ । ಬೇಡು ಸೇವಿಯನು ಸಂತತದಲಿ ಮರಿಯದೆ ॥

ಅಟ್ಟತಾಳ

ಆಪಾದಮಸ್ತಕ ಪರಿಯಂತ ನೀಕ್ಷಿಸಿ। ಆಪಾರ ಮಹಿಮನ್ನ ಚಿಂತಿಸು ಹೃದಯಾಬ್ಜ। ವಾ ಪೆಸರಿಸಿ ಕರ್ನಿಕೆ ಮಂದಿರದೊಳು। ತಾಪಸಿಯಾಗಿ ಕಾಲಾಕಾಲಾ ಕಳಿಯದೇ। ನೀ ಪ್ರೀತಿಯಲಿ ಪಾದದಿ ಮೊದಲುಮಾಡಿ। ರೂಪವ ನಿನ್ನೊಳು ನಿಲಿಸುತ್ತ ಜಿತವಾಗಿ। ಮಾ ಪತಿ ವಿಜಯ ವಿಠಲನಲ್ಲಿ ರತಿಯಿಟ್ಟು। ಪಾಪ ರಹಿತನಾಗು ಪಂಚರನೀಗೂ ॥೪॥

ಆದಿತಾಳ

ಒಂದೊಂದು ಸ್ಥಾನದಲ್ಲಿ ನಿಂದು ಕೇವಲವಾಗಿ। ಒಂದೊಂದು ಜಿತವಾಗಿ ಬಂದ ತರುವಾಯದಲ್ಲಿ। ಇಂದಿರಾರಮಣ ಗೋವಿಂದನ್ನ ವೊಲಿಸಿ ಕೊಂಡು। ಹಿಂದಣ ದೋಷದ ಸಂಬಂಧಗಳೋಡಿಸಿನ್ನು। ಮುಂದಣ ಮಾರ್ಗಕೆ ಅನುಸಂಧಾನವನ್ನು ತಿಳಿದು। ತಂದೆ ತಾಯಿ ಎಂದಿಗೆ ವಿಜಯ ವಿಠಲನೆಂದು। ಒಂದೇ ಭಕುತಿಯಲ್ಲಿ ಇಹದಿಂದ ದೂರನಾಗೋದೂ ॥೫॥

ಜತೆ

ಬಿಂಬ ಮೂರುತಿಧ್ಯಾನ ಇಂಬಾಗಿಮಾಡಲು। ಇಂಬುತೋರುವನಲ್ಲಿ ವಿಜಯ ವಿಠಲವೊಳೆದು ॥೬॥

ಸುಳಾದಿ ೧೫

ಸ್ಥೂಲದೇಹಸ್ಥ ಸಪ್ತಕಮಲಗಳ ವಿವರ, ಕಮಲದಳ ಕಮಲಾಭಿಮಾನಿ ದೇವತೆಗಳು, ಕಮಲಗಳ ನಿಯಾಮಕ ಹರಿ ರೂಪಗಳ ವಿಚಾರ

ರಾಗ ಭೈರವಿ ಧ್ರುವತಾಳ

ಮೂಲಾಧಾರದಲ್ಲಿ ಚತುರ ದಳ ಪದುಮ ಪ್ರ। ವಾಳಮಣಿ ವರ್ಣದಂತೆ ಯಿಪ್ಪದು। ಏಳು ಮರುತ ಜನ ಅಲ್ಲಿ ವಾಸಾ। ನಾಲ್ಕು ವೇದಂಗಳು ಒಂದೊಂದು ದಳದಲ್ಲಿ। ಮೇಲಾಗಿ ಇರುತಿಪ್ಪವು ಪೊಳೆವುತ್ತಲ್ಲೀ। ವಾಲಯ ಬೃಹಸ್ಪತಿ ಸೋಮಜ ಸೋಮ ಶನಿ।ಕಾಲ ಪೋಗಾಡದೆ ನಿರುತ ಅಲ್ಲಿ।ಶೀಲ ಗುಣರಾಗಿ ಭಗವಧ್ಯಾನವ ಮಾಳ್ಪರು। ಆಳುಗಳಾಗಿ ತಮ್ಮಿಂದುತ್ತಮರಿಗೆ। ಶ್ರೀಲೋಲ ಅನಿರುದ್ಧ ನಿಯಾಮಕ ಮಿಕ್ಕ। ನೀಲ ವರ್ಣಾದಿ ಮೂರ್ತಿ ಅಲ್ಲಿ ವುಂಟು। ಕಾಲ ಚಕ್ರದಂತೆ ಜಡವಾಯು ಸಂಚಾರ। ಮೇಲಧೋ ಭಾಗ ಬಿಡದೆ ತಿರಗುವದು। ಪೇಳುವೆ ಸ್ವಾಯಂಭುವ ಇದಕ್ಕೆ ಅಭಿಮಾನಿ

ಯಾಗಿ ವಿ। ಶಾಲ ಚಿತ್ತದಲ್ಲಿ ಅನಿರುದ್ಧನ್ನ । ಆಲಸ್ಯವಿಲ್ಲದೆ ಆರಾಧಿಸುವ ಕರು। ಕಾಳಿನ ಭಕ್ತಿಯಲ್ಲಿ ಲೋಲಾಡುತ। ಬಾಲ ಗೋಪಾಲ ವಿಜಯ ವಿಠಲರೇಯ। ಪಾಲ ಸಾಗರ ಶಾಯಿ ಅಪ್ರತಿಹತನಯ್ಯಾ ॥೧॥

ಮಟ್ಟತಾಳ

ಪೊಕ್ಕಳ ಭಾಗದಲ್ಲಿ ಆರುದಳದ ಕಮಲಾ। ರಕ್ತ ನೀಲ ವರ್ಣ ಸಪ್ತ ವಾಯುಗಳಲ್ಲಿ। ತಕ್ಕವರು ಆರುಜನ ಹರಿ ರಾಣಿಯರು। ಮುಕ್ಕಣನ ಪುತ್ರ ಗಣಪತಿ ಅಭಿಮಾನಿ। ಚಕ್ಕನೆ ವಿಶ್ವಮೂರ್ತಿಯ ಪೂಜಿಸುವ। ಲಕುಮಿಯ ರಮಣ ಪ್ರದ್ಯುಮ್ನ ನಿಯಾಮಕನು। ರಕ್ಕಸ ರಿಪು ಸಿರಿ ವಿಜಯ ವಿಠಲರೇಯ। ಪಕ್ಕಿ ಹಾರುವ ದೇಶ ನಿರ್ಮಿಸಿ ಇಪ್ಪ ॥೨॥

ತ್ರಿವಿಡಿತಾಳ

ಹೃದಯದಲ್ಲಿ ಎಂಟುದಳದ ಕಮಲವು ಉಂಟು। ಉದಯಾದಿತ್ಯ ವರ್ಣದಂತಿಪ್ಪದು। ಅದರಲ್ಲಿ ಅಷ್ಟ ವಸು ದಿಕ್ಪಾಲಕರುಂಟು। ಮುದದಿಂದ ಸಪ್ತ ಸಮೀರ ವಾಸ। ತ್ರಿದಶ ನಾಯಕ ಇದಕೆ ಅಭಿಮಾನಿಯಾಗಿ ನಿ। ತ್ಯದಲಿ ಉಪೇಂದ್ರನ ಪೂಜಿಸುವಾ। ಇದರ ನಿಯಾಮಕ ಸಂಕರುಷಣ ಯೆನ್ನಿ। ಪದೊ ಪದಿಗೆ ಖಳನ ದಹಿಸುವನು। ಸದಮಲರಾಗಿ ಲಕುಮಿ ನಾರಾಯಣ। ಎದಿರಿಲಿ ಯಿಪ್ಪ ಪ್ರಾಜ್ಞನೆಂಬ ರುದ್ರ। ಸುದರಶನ ಶಂಖ (ಖಾದಿ) ಗದಾ ಪದುಮ ಧರಿಸಿ ಚತುರ ಹಸ್ತ। ಹದುಳ ಕೊಡುತಲಿಪ್ಪ ಭಕ್ತಜನಕೆ। ಪದವಿಗೇ ಈತನಿಂದಲಿ ಅಪರೋಕ್ಷವಾ। ಗದೆ ಬಿಂಬನ ಕಾಂಬುವ ಮಾರ್ಗವಿಲ್ಲಾ। ಇದೆ ಮೂರುತಿ ಮುಕುತಿ ಯೋಗ್ಯನಸ್ವರೂಪ ದಂತೆ। ತದನಂತರದಲ್ಲಿ ತನ್ನಾಕಾರವಾ। ಹೃದಯಾದೊಳಗೆ ವೊಳಗೆ ವೊಳಗೊಳಗೆ ಪೊಳೆದು ಸ। ನ್ನಿಧಿಯಾಗಿಪ್ಪದು ಲಿಂಗದೊಳಗೇ। ಇದೆ ಪೋಗಲು ವಿರಜಾನದಿಯ ಸ್ನಾನದಿಂದ। ವೊದಗಿ ಜೀವನದಂತೆ ದೇವನಿಪ್ಪಾ। ಪದುಮನಾಭ ನಮ್ಮ ವಿಜಯ ವಿಠಲರೇಯ। ತ್ರಿದಶ ಲೋಕದಲ್ಲಿ ಸುರರ ಕೂಡಾಡುವಾ ॥೩॥

ರೂಪಕತಾಳ

ಉರದಲ್ಲಿ ದ್ವಾದಶದಳವುಳ್ಳ ಸರಸಿಜ। ಮಿರಗುತಿದೆ ನೋಡಿ ಮುತ್ತಿನ ವರ್ಣದಲ್ಲಿ। ಉರುಕ್ರಮ ಸಹಿತ ದ್ವಾದಶ ಅಂಶು ಮಾಲೆಗಳು। ಮರುತಜನ

ಜನ ಸಪ್ತರು ಮಹಾರುದ್ರ ಅಭಿಮಾನಿ। ನರಸಿಂಹ ಮೂರುತಿಯ ಪೂಜೆ ಮಾಡುತಲಿಪ್ಪ। ಗಿರಿಜೆ ಸಮೇತದಲಿ ಮುಂದೆ ಅಹಿಪತಿಯೆಂದು। ಹರಿ ನಾಮಕ ಪರಮಾತ್ಮ ನಿಯಾಮಕನಾಹಾ। ಸುರರು ವಾಲಗದಿಂದ ಜಯ ಜಯವೆನುತಿಹರು। ಮೆರೆವ ವೈಭವದಿಂದ ವಿಜಯ ವಿಠಲ ಮಹಾ। ಧರಣಿಗೊಡೆಯನಾಗಿ ಗತಿಕೊಡುವ ನಮಗೆ ॥೪॥

ಝಂಪೆತಾಳ

ಇಂದ್ರಿಯೋನಿಯಲ್ಲಿ ಷೋಡಶ ದಳವುಳ್ಳ ಅರ। ವಿಂದ ಧವಳ ವರ್ಣ ದಂತಿಪ್ಪದು। ಚಂದ್ರ ಕಲಾಭಿಮಾನಿಗಳು ಅಲ್ಲಿ ವಾಸಾ। ಮುಂದೆ ದಧಿ ವಾಮನನ್ನ ಧ್ಯಾನಿಸುವ। ಅಂದವಾಗಿ ಸಪ್ತ ಮರುತಗಳು ಉಂಟು। ಫಣೀಂದ್ರನು ಅಭಿಮಾನಿ ಆ ಸ್ಥಾನದಲ್ಲಿ ವಾಸಾ। ನಂದ ಮೂರುತಿ ಲಕುಮಿರಮಣನ್ನ ಪೂಜಿಸುವ। ಪೊಂದಿಪ್ಪ ನಾರಾಯಣ ನಾಮಕ ಪರ ಮಾತ್ಮ। ಸಂದೇಹವಿಲ್ಲ ನಿಯಾಮಕನಾಗಿ ಗುಣ। ವೃಂದದಲ್ಲಿ ಪಾಲಿಸುವ ಸರ್ವರನ್ನು। ನಂದ ಗೋಪನಕಂದ ವಿಜಯ ವಿಠಲರೇಯ। ಎಂದೆಂದಿಗೆ ನಿತ್ಯ ತೃಪ್ತ ಜನರಲ್ಲಿ ವಾಸಾ ॥೫॥

ಅಟ್ಟತಾಳ

ದ್ವಿದಳವುಂಟಾದ ಕಮಲ ಭ್ರೂಮಧ್ಯದಿ। ಮಧು ಪುಷ್ಪ ವರ್ಣದಂ- ತಿಪ್ಪದು ಆವಾಗ। ಪದುಮ ಸಂಭವ ವಾಯುವಾಸ ದ್ವಯಭಾಗ। ಪದ-ಮನಾಭನ ವಹನ ಅಲ್ಲಿ ಅಭಿಮಾನಿ। ಸದರವಿಲ್ಲದೆ ಕೃಷ್ಣನ ಧೇನಿಸುವ ಜ್ಞಾ। ನದಲಿ ಕೊಂಡಾಡುತ ಸಪ್ತ ಮರುತ ಜನ। ಮೊದಲಾದವರು ಸೇವಿಸುವರು ಹರಿಪಾದ। ಇದಕೆ ನಿಯಾಮಕ ಕೃಷ್ಣನೆಂಬ ಮೂರುತಿ। ಅದುಭೂತ ಮಹಿಮನೆ ವಿಜಯ ವಿಠಲರೇಯ। ಉದಯ ಭಾಸ್ಕರನಂತೆ ತಪಕೆ ಮೆಚ್ಚಿ ಪೊಳೆವಾ ॥೬॥

ಆದಿತಾಳ

ಸಾಸಿರ ದಳವುಳ್ಳ ಕಮಲ ಶಿರಸಿನಲ್ಲಿ। ಲೇಸಾಗಿ ಪೊಳ್ಪುತಿದೆ ವಜ್ರ ಪ್ರಕಾಶದಂತೆ। ವಿಶ್ವಾದಿ ರೂಪಗಳು ಒಂದೊಂದು ದಳದಲ್ಲಿ। ವಾಸವಾಗಿಪ್ಪ ತನ್ನಾಮಕ ಪ್ರಾಣ। ಸೂಸಿದ ಭಕ್ತಿಯಿಂದ ಭಜನೆಮಾಡುವ ನಿತ್ಯ ವಾಸ ವಾದ್ಯರಿಂದ ಸ್ತುತಿಸಿಕೊಳ್ಳುತ। ಲೇಶಬಿಡದೆ ಇಲ್ಲಿ ಲೋಕೇಶ ಅಭಿಮಾನಿ।

ಮೀಸಲ ಮನದಲ್ಲಿ ರಂಗನ್ನ ಧ್ಯಾನಿಸುವ। ವಾಸುದೇವನಾಮಕ ಪರಮಾತ್ಮ ನಿಯಾಮಕ। ದಾಸೋಹಂ ಎಂದವಗೆ ಸರ್ವದಳದಲ್ಲಿ ಪೊಳೆವ। ವಾಸುಕಿ ಶಯನ ನಮ್ಮ ವಿಜಯ ವಿಠಲರೇಯ। ಮೋಸವಿಲ್ಲಿದೆ ತನ್ನ ಸ್ಥಾನದಲ್ಲಿಟ್ಟು ಪೊರೆವಾ ॥೭॥

ಜತೆ

ಬ್ರಹ್ಮನಾಡಿಯೊಳಗೀಪರಿ ವಿಧ ಉಂಟು । ಬ್ರಹ್ಮಾತೀತ ನಮ್ಮ ವಿಜಯ ವಿಠಲಸ್ವಾಮಿ ॥೮॥

ಸುಳಾದಿ ೧೬

ಅಗ್ರೇಶ, ಮೂಲೇಶ, ಪ್ರಾದೇಶ ಮೂರು ಮೂರ್ತಿಗಳಿರುವ ಸ್ಥಳ, ಮೂರುತಿ ಲಕ್ಷಣ ವಿಚಾರ, ಬ್ರಹ್ಮಾದಿ ತೃಣಾಂತ ಉತ್ತಮ ಅಧಮಾಧಿಕಾರಿಗಳ ಬಿಂಬ ದರ್ಶನ ಕ್ರಮ

ರಾಗ ರೇಗುಪ್ತಿ ಧ್ರುವತಾಳ

ಹೃದಯವ್ಯಾಪ್ತಿ ಪ್ರಾದೇಶವೆಂದೆಂಬೊ ಮೂರುತಿ। ಪದುಮ ಕರ್ನಿಕೆ ಮೂಲದಲ್ಲಿ ಮೂಲೇಶ। ಇದೆ ಅಂಗುಟಾಗ್ರಪರಿಮಿತವೆನ್ನಿರೋ। ಪದುಮ ಕರ್ನಿಕಾಗ್ರದಲಿ ಅಂಗುಟಾದನಿತು । ಇದೆ ಪ್ರಾಜ್ಞಮೂರುತಿ ಎಂದು ಕೊಂಡಾಡಿರೋ। ಸದಮಲವಾಗಿ ಸಂತತ ಪೊಪ್ಪುತಿಹಪೊ ಸ । ನ್ನಿಧಿಯಾಗಿ ಜ್ಞಾನಿಗಳ ಪೊರೆವುತಿವಕೋ। ಪದುಮಸಂಭವಪಿಡಿದು ತೃಣಜೀವ ಪರಿಯಂತ। ತದು ತದು ಶಾರೀರ ಪರಿಮಿತ ಗಣಿತ। ಅಧಿಕಾರತನದಿಂದ ನೋಳ್ಪದು ಭಿನ್ನ ಕಾಣೋ। ಇದೆ ಮೂರುವರ್ಣಾ ಶುಕ್ಲ ರಕ್ತ ನೀಲ। ಇದೆ ಶ್ರವಣ ಮನನ ಧ್ಯಾನ ಜಾಗ್ರತ ಸ್ವಪ್ನ ಸುಪ್ತ । ಇದರಂತೆ ಗುಣಿಸುವದು ವೊಂದೊಂದು ಭಾಗ । ವಿಧಿಮಾತುರ ಕೇವಲ ಅಸಂಪ್ರಜ್ಞಾವು। ಳಿದ ಋಜುಗಳಿಗೆ ಸ್ಪಷ್ಟತ್ವದಲಿ ಭೇದ। ತ್ರಿದಶಗಣಕೆ ನೋಡು ತಾರತಮ್ಯದಿಂದ। ವೊದಗಿ ಸಾಧನ ಪ್ರಾರಬ್ಧ ದೇಹ। ಮುದದಿಂದ ಮರ್ತ್ಯರಿಗೆ ಕಾಲಾನುಸಾರ ಪ್ರಾಪ್ತಿ। ಇದೆ ಸರ್ವಜೀವರಿಗೆ ಅನುಕೂಲವು; ಇದರ ತರುವಾಯ ಅನಂತರೂಪಗಳು। ಹೃದಯೇಂದ್ರಿಗಳು ಸರ್ವದೇಹದಲ್ಲಿ । ವಿದಿಯಾಗಿಪ್ಪವು ಎಣಿಕೆಮಾಡಲುಂಟೆ। ಅಧಿಕಾರದಂತೆ ಹರಿ ಕಾಣಿಸಿಕೊಂಬ

ಉದಯಾರ್ಕ ಸನ್ನಿಭ ವಿಜಯ ವಿಠಲರೇಯ । ಪದೋ ಪದಿಗೆ ತನ್ನನು ಕೊಂಡಾಡೆ ಪೊಲಿವ ॥೧॥

ಮಟ್ಟತಾಳ

ಅಂತ್ಯ ಬಾಹ್ಯ ಉಭಯ ತ್ರಿವಿಧ ದರ್ಶಿಗಳಿನ್ನು । ಸಂತರು ಯಿದರೊಳಗೆ ಅಲ್ಪ ಮಹತ್ತಾಗಿ । ಸಂತತ ಕಾಂಬುವರು ತಮ್ಮ ಸ್ವಯೋಗ್ಯತದಿ । ಚಿಂತಿಸಿ ಮೂರ್ತಿಯ ಒಂದೊಂದು ಪ್ರಕಾರ । ಎಂತೆಂತು ನೋಡುತ್ತ ಪೂರ್ಣ ಭಕುತಿತನಕ । ಸಂತು ಜನರ ಸ್ಪರ್ಧಿ ದುಃಖ ಪ್ರಾರಬ್ಧಾ । ಹಂತ ಜನಾವೇಶ ಮಿಶ್ರಾದ ದೋಷ । ನಿಂತ ಕಾಲಕೆ ತಮ ತಮ್ಮಂತರಂಗದಲ್ಲಿ । ಕಾಂತಿ ವಿಶೇಷದಲಿ ಹರಿಯ ಕಾಂಬುವರಯ್ಯಾ । ಅಂತರಾತುಮ ಈರಿ ವಿಜಯ ವಿಠಲರೇಯ । ಇಂತಿಂತು ನಡಿಸಿ ಮುಕ್ತಿಕೊಡುವ ಬಿಡದೆ ॥೨॥

ತ್ರಿವಿಡಿತಾಳ

ಪುರುಷ ಸೂತ್ರ ಪ್ರಕೃತಿ ಶ್ರದ್ಧ ಜೀವಕಾಲ । ಹರ ಷಣ್ಮಹಿಷೇರು ವಾರುಣ್ಯಾದಿ । ಸುರಪ ಸ್ಮರ ಅಹಂಕಾರ ಅನಿರುದ್ಧಾದಿ ನಾಲ್ಕು । ಎರಡು ಜನ ಪ್ರವಹ ಸೂರ್ಯಾದ್ಯರು । ವರುಣ ನಾರದ ಭೃಗು ಪಾವಕ ಪ್ರಸೂತಿ ಮರೀಚ್ಯಾದಿ ಸಪ್ತ ಗಾಧೇಯಮನು। ಮಿತ್ರ ನೈರುತ್ಯ ಗುರುಪತ್ನಿ ಪ್ರಾವಹಿ ವಿ । ಸ್ತರಿಸುವೆ ವೈದ್ಯ ವಿಷ್ವಕ್ಸೇನ । ಮರುತಾದಿತ್ಯರು ರುದ್ರ ವಿಶ್ವದೇವರು ಸಪ್ತ । ಪರಿವಸುಗಳು ದ್ಯಾವಾಪೃಥುವಿ ಋಭರು । ಸರಿ ಇಲ್ಲಿಗೆ ಕೇಳಿ ಮುನ್ನೂರು ಮೂರು ಸಾ । ವಿರ ದೇವತಿಗಳನ್ನು ಗುಣಿಸಿರಯ್ಯಾ । ಮರಳೆ ಪಾವಕಾದ್ಯರು ಬಲ್ಯಾದಿಗಳು ಸಪ್ತ । ಅರಿವದು ಮುಂದೆ ಮನುಗಳು ಹನ್ನೊಂದು । ಅರಸು ಜನರು ನೂರು ಗಂಧರ್ವರೆಂಟು ಮಂದಿ । ಸರಸ್ವತಿ ಪ್ರಾಕೃತ ವಾಕ್ಯಾದೊಡತಿ । ತರುವಾಯ ದಶರುದ್ರ ರಾಕಾ ಶ್ರೀಪ್ರಾಚಿನಿ(?) ತರುಣೀರುಷೆ ಭಾರ್ಯರ ಸಹಿತ । ಸುರನದಿ ಪರ್ಜನ್ಯ ಸೂರ್ಯ ಚಂದ್ರಮ ಭಾ । ಸ್ಮರ ಅನಿರುದ್ಧನ್ನ ಸತಿಯ ಪೇಳಿ । ಇರದೆ ಪಾವಕ ರೈವತ ಪರ್ಜನ್ಯಾದ್ಯರ । ನಾರಿಯರು ಕಾಲಾಭಿಮಾನಿ ಜಯಾದ್ಯರೆನ್ನಿ । ಸುರ ಧೇನು ಗುಹ್ಯಕ ಯಮಭಟರು ಯಕ್ಷಾದಿ । ಸುರದೂತನರಾಣಿ ಬುಧ ಉಷಶನಿ ಇಲ್ಲಿಗೆ। ವಿರಚಿಸು ಪಾವಕವಿಡಿದು ಎಣಿಕೆಮಾಡೆ । ಎರಡೊಂಭತ್ತು ಸಾವಿರ ಏಳುನೂರು । ಸರಿ ಯೆನ್ನಿ ಇತ್ತ ಕೆಲವು ದೇವತಿಗಳ

ಹಂ। ಡರು ಬುಧ ಶನಿ ಪತ್ನಿಯರು ತೀರ್ಥರು। ವರ ಪುಷ್ಕರ ಮತ್ತೆ ಕಿಂಚಿತು ದೇವತಿಗಳು। ನಿರುತ ಈ ಬಗೆ ತಿಳಿ ಇಲ್ಲಿಗೆ ತ್ರಿಂಶತಿ। ಎರಡೊಂದು ಸಾವಿರ ಕಡಿಮೆ ನವಕೋಟಿಯು। ಅರಿವದು ಮುಂದೆ ಅನಾವು ಸುರರು। ಎರಡು ಹನ್ನೆರಡುಕೋಟಿ ಜನರೆನ್ನಿರೋ। ಸ್ಮರಿಸು ಇಲ್ಲಿಗೆ ತ್ರಿಶಂತಿ ತ್ರಿಕೋಟಿಯು। ಪರಮ ಪುರುಷ ರಂಗ ವಿಜಯ ವಿಠಲರೇಯ। ತರತಮ್ಯ ಸಮದಿಂದ ಸರ್ವರನ್ನ ಪಾಲಿಸುವಾ ॥೩॥

ಅಟ್ಟತಾಳ

ಅನಲನ ಮಕ್ಕಳು ಅಜಾನಜದೇವರು। ಮುನಿಗಳು ಚಿರ ಪಿತೃ ಗಂಧರ್ವ ಅಪ್ಸರ। ಗಣ ಸಿದ್ಧ ಸಾಧ್ಯರು ಯಕ್ಷ ರಕ್ಷರು ವಿದ್ಯಾ। ಮನುಜ ಗಂಧರ್ವರು ಋಷಿ ಕ್ಷಿತಿಪಾಲರು। ಮನುಜೋತ್ತಮರು ತೃಣಾಂತ ಪರಿಯಂತ। ತನುವು ತನುವಿನಲ್ಲಿ ಮೂರು ಮೂರ್ತಿಗಳನ್ನು। ಮನದಲ್ಲಿ ತಿಳಿದು ಪೂಜಿಸುವರು ಯೋಗ್ಯತ। ಪ್ರಣತರ ಪರಿಪಾಲಾ ವಿಜಯ ವಿಠಲರೇಯ। ಘನವಾಗಿ ನಮ್ಮನು ಪೊರೆವನು ಬಿಡದೆ ॥೪॥

ಆದಿತಾಳ

ಲೇಶಾಕಾಶದಲ್ಲಿ ವಾಸವಾಗಿಪ್ಪ ಸ। ರ್ವೇಶ ವಾಸುದೇವ ವಿಶಿಷ್ಟ ಗಣದೊಡನೆ। ದಾಸರಿಗೆ ಸರ್ವಭೂಷಣಯುಕ್ತನಾಗಿ। ಕೋಶದೊಳಗೆ ಸ್ವ ಪ್ರಕಾಶವಂತನಾಗಿ। ಕೇಸಲದಲ್ಲಿ ಪೊಳೆವ ಕೇಶವ ದಯಾನಿಧಿ ವಿಜಯ ವಿಠಲರೇಯ। ಲೇಸುಕೊಡುವ ವೊಲಿದು ಈ ಪರಿ ತಿಳಿದವಗೆ ॥೫॥

ಜತೆ

ಕಮಲಕರ್ಣಿಕೆ ಮಧ್ಯ ಕಮನೀಯ ಭಕುತಿಯಲಿ। ಕಮಲಾಕರ ವಿಜಯ ವಿಠಲನ್ನ ನೋಡಿರೊ ॥೬॥

ಸುಳಾದಿ ೧೭

ಅಧ್ಯಾತ್ಮ ಉಪಾಸನ, ಅಷ್ಟದಳ ಕಮಲಗಳಲ್ಲಿ ದೇವತೆಗಳ ವಿಚಾರ, ಮೂಲೇಶನು ಅಷ್ಟದಳಗಳಲ್ಲಿ ಸಂಚರಿಸಲು ಜೀವನಿಂದ ಮಾಡಿಸುವ ವ್ಯಾಪಾರ

ರಾಗ ಭೈರವಿ ಧ್ರುವತಾಳ

ಅಷ್ಟದಳದಲ್ಲೊಪ್ಪುವ ಕಮಲ ಹೃದಯಾಕಾಶದಲ್ಲಿ। ಅಷ್ಟ ದಿಕ್ಪಾಲಕರು ತಮ್ಮ ನಿಜದಳದೊಡನೆ। ಅಷ್ಟೈಶ್ವರ್ಯದಿಂದ ಶ್ರೀಶನ್ನ

ಪದವಾಲಗ। ತುಷ್ಟರಾಗಿಮಾಡಿ ಸುಖಿಸುವರು। ಸ್ಪಷ್ಟನಾಗಿ ನಿರೂಪ ದಂತೆ ಕಾಲಕಾಲಕೆ ಬಿಡದೆ। ಶಿಷ್ಟಾಚಾರದಲ್ಲಿ ನಡೆಯುತಿಪ್ಪು। ವಿಷ್ಣು ಅಂಗುಷ್ಟಪ್ರಮಾಣ ವಿಶ್ವ ವ್ಯಾಪಕನಾಗಿ । ಅಷ್ಟ ಬಾಹು ಅಷ್ಟ ಆಯುಧ ಅತಿ ಸಾರ ಸೌಂದರ್ಯ। ಅಷ್ಟ ಪರಿಮಿತ ದ್ವಾತ್ರಿಂಶ ಲಕ್ಷಣ। ಸ್ಪಷ್ಟ ಕರ್ಣಿಕ ಪದ್ಮನಾಳ ಶೋಭಿಸುತಿಪ್ಪ। ಸೃಷ್ಟಿಯೊಳಗೆ ಇದು ತಿಳಿದ ಮನುಜ ಜ್ಞಾನಿ। ಇಷ್ಟಾರ್ಥಕೊಡುವ ಶ್ರೀ ವಿಜಯವಿಠಲ। ಕೃಷ್ಣಾ ಅಷ್ಟದಳ ಮಿಕ್ಕಾದಲ್ಲಿ ಸಂಚರಿಪಾ ॥೧॥

ಮಟ್ಟತಾಳ

ಒಂದೊಂದು ದಳದಲ್ಲಿ ಒಬ್ಬೊಬ್ಬ ಪಾಲಕರು। ಪೊಂದಿಕೊಂಡಿಪ್ಪರು ಪ್ರತಿದಿನ ತೊಲಗದಲೆ। ನಂದದಲ್ಲಿ ತಮ್ಮ ಉಚಿತಸಾಧನಗಳು। ಅಂದ ದಿಂದಲಿಮಾಡಿ ಅತಿಹರುಷದಲಿಪ್ಪು। ಇಂದಿರೆ ಭೂಸಹಿತ ವಿಶ್ವಗುಣಪೂರ್ಣ। ನಿಂದಲ್ಲಿ ನಿಲ್ಲದೇ ನಾನಾವಿಧವನ್ನು। ತಂದುಕೊಡುವನು ತವಕದಿ ಜೀವಕ್ಕೆ ಸಿಂಧು ಶಯನನಾದ ವಿಜಯ ವಿಠಲ ಹೃದಯ। ಮಂದಿರದೊಳಗಿದ್ದು ಬಹು ಚರಿತೆಯಮಾಳ್ಪ ॥೨॥

ತ್ರಿವಿಡಿತಾಳ

ಸುರಪನಲ್ಲಿಗೆ ಬರಲು ಪುಣ್ಯಮತಿಲಿ ಜೀವ। ನಿರುವ ಪಾವಕನಲ್ಲಿ ಬರಲಾಲಸ್ಯ ನಿದ್ರ। ತೆರಳಿ ಜವನಲ್ಲಿಗೆ ಹರಿ ಸಾಗೆ ಮಹಾಕ್ರೋಧ। ಬರುವದು ಜೀವಕ್ಕೆ ಅಲ್ಲಿಂದತಿವೇಗ। ನಿರಋತಿಯಲ್ಲಿಗೆ ಮೆಟ್ಟೆ ಪಾಪದ ಕೃತ್ಯ। ವರುಣನ್ನ ಬಳಿಯಲ್ಲಿ ನಾನಾವಿನೋದ । ಮರುತನಲ್ಲಿ ಹರಿ ಬಂದು ಪೋಗಲು ಜೀವ। ಪರಮ ಗಮನಾಗಮನವಾಗುವದು। ತೆರಳಿ ಕುಬೇರನಮನಿಗೆ ಬರಲು ಕೊಡುವನು। ಸ್ಥಿರ ಬುದ್ಧಿಯು ತಪ್ಪದಂತೆ। ಹರನಲ್ಲಿಗೆ ಬರಲು ದ್ರವ್ಯ ಪ್ರದಾನಮಾಡಿಸುವ। ನಿರುತ ಈ ಪರಿಯಲ್ಲಿ ಪರಮ ಪುರುಷನು। ತಿರುಗುತಲಿಪ್ಪನು ಅವರವರ ಯೋಗ್ಯತೆ। ಇರವ ನೋಡಿ ಫಲವ ತಂದುಕೊಡುವ। ಕರುಣಾಳುಗಳ ಒಡೆಯ ವಿಜಯ ವಿಠಲರೇಯಾ। ಎರಡೊಂದು ವಿಧದವರ ಪೊರೆವ ಕರ್ತನೆನಿಸಿ ॥೩॥

ಅಟ್ಟತಾಳ

ಮಧ್ಯದಲ್ಲಿ ನಿಲ್ಲೆ ವೈರಾಗ್ಯಮಾಡುವ । ಬುದ್ಧಿ ಪಾಲಿಸುವನು ಸರ್ವ ಕೇಸರದಲ್ಲಿ । ಪೊದ್ದಲು ಮುಕುಂದ ಜಾಗ್ರತೆ ತೋರುವ । ಸಿದ್ಧವು ಕರ್ಣಿಕೆ ಸೇರೆ ಕನಸುಗಳು । ಪದ್ಧತಿ ತಿಳಿವದು ನಾಳದಿ ಸಾರಲು ಗಾಢ । ನಿದ್ರೆ ಆಗುವದು ಜೀವಕೆ ಕಾಲತಿಳಿಯದೆ । ಶುದ್ಧಾತ್ಮ ಪರಿಚ್ಛಿನ್ನಮೂರುತಿ ಇದೆ ಅ । ನಾದ್ಯ ಅನಾದಿಕರ್ಮಂಗಳನೋಡಿ । ಶ್ರದ್ಧೆಯನ್ನು ಕೊಟ್ಟು ಮುಖ್ಯಪ್ರಾಣನ್ನ । ಪೊದ್ದಿ ಬದಕುವಂತೆ ಮಾಡುವನು । ಮುದ್ದು ಮೋಹನ ರಂಗ ವಿಜಯ ವಿಠಲ ಕರು । ಣಾಬ್ಧಿಯೆ ಕಾಣೊ ಭಜಕರ ವಂಶಕೆ ॥೪॥

ಆದಿತಾಳ

ಹರಿ ಅಂತರಂಗದಲ್ಲಿ ಸರಿಯದೆ ವಾಸವಾಗಿ । ಇರಳು ಹಗಲು ಇಂಥ ಚರಿಯೆಮಾಡಿಸುತಿರೆ । ನರಲೋಕದೊಳಗೆ ಈಶ್ವರನಾನೆಂದು ನುಡಿವ । ಪರಮ ದುಃಖಿಷ್ಟರ ಗರ್ವಿಕೆಗೇನೆಂಬೆ ತಾ । ನರಿಯು ಸ್ವಸ್ಥಾನದಲ್ಲಿ ನೆರದು ತನ್ನ ಬಳಗಕ್ಕೆ । ಹರಿಯೆನಗೆನ್ನಿರೆಂದು ವೊರಲಿಕೊಂಡರೆ ಅವು । ಶಿರ ದೂಗುವದಲ್ಲದೆ ಸರಿ ಸರಿ ಎಂದು । ಹಿರಿದಾಗಿನೋಡಿದವರು ಪರಿಹಾಸ್ಯ ವೆಂದನ್ನರೆ । ನರಿಯ ಮಾತುಗಳೆಲ್ಲ ನರಿಗೆ ತಿಳಿದಂತೆ । ದುರುಳರಾಡುವ ಅರ್ಥ ದುರುಳರಿಗೆ ಸರಿಬಹದು । ಹರಿಯ ನರಿಯ ಮೆಚ್ಚುವದೆ ಸರಕೆಂದರೆ ಓಡಿ । ಚರಹಾಕಿ ಪೋಗುವದು ನರಿ ಕೇಸರಿಯಾಗುವದೆ । ಉರಗನ ಕಾಣಲು ಸಾರಿರದೆ ಕೆಲಸಾರುವ । ನರನು ಈಶ್ವರನೇನೊ ಜರ ಮರಣ ಜನನದವ । ಹರಿಯೆಂದು ಒಮ್ಮೆ ಸ್ಮರಿಸೆ ದುರಿತಕೋಟಿಗಳು ಸಂ । ಹಾರ ವೆನ್ನಿರೊ ಇವನ ಸ್ಮರಣೆ ಇಂದೇನಾಹದು । ಸುರರಾದಿಗಳಧೊರೆ ವಿಜಯ ವಿಠಲನ್ನ । ಚರಣವ ನೋಡಿದವ ಪರಮ ಜ್ಞಾನಿ ನಿತ್ಯ ॥೫॥

ಜತೆ

ಉದಯಕಾಲದಲೆದ್ದು ವಿಜಯವಿಠಲನ್ನ । ಅದುಭೂತ ಕ್ರೀಡೆಯ ನೆನಿಸಿ ಮುಕುತಿಯ ಬಯಸಿ ॥೬॥

ಸುಳಾದಿ ೧೮

ಅಷ್ಟದಳ ಕಮಲೋಪರಿ ಶತಸ್ತಂಭಯುಕ್ತ ಮಂಟಪ ಧ್ಯಾನ, ತದುಪರಿ ಮಂಡಲ ತ್ರಯ ವಿಚಾರ, ಬಿಂಬಮೂರ್ತಿ ಲಕ್ಷಣ, ಮೂಲೇಶನ ಲಕ್ಷಣ ಮತ್ತು ಕಾರ್ಯ

ರಾಗ ಕಾಂಬೋದಿ ಧ್ರುವತಾಳ

ಗುಪ್ತದಾರ್ಚನೆಮಾಡು ಗುಣವಂತನಾಗಿ ಬಲು। ಆಪ್ತಾಲೋಚನದಿಂದ ಧೈರ್ಯವಿಡಿದು। ಕ್ಲಪ್ತಿಗೆ ಎಳ್ಳನಿತು ಕಡಿಮೆಯಾಗದಂತೆ। ಪ್ರಾಪ್ತಿಯಾಗುವಂತೆ ಎಲೆ ಮನವೆ। ತೃಪ್ತಿಯಬಡು ಹರಿಯಧ್ಯಾನ ರಸದಿಂದ। ಲಿಪ್ತನಾಗದಿರೋ ದುಷ್ಕರ್ಮದೊಳು। ಸಪ್ತ ಪ್ರಾಕಾರ ಗ್ರಾಮದೊಳಗೆ ಶತ। ಸಪ್ತಾಶ್ವನಂತೆ ಜನ್ಮ ಜನ್ಮಕ್ಕೆ। ದೀಪ್ತನಾಗಿಪ್ಪನೀತಾ ಪರಿವಾರ ಸಹಿತಾ। ವ್ಯಾಪ್ತನಾಗಿಹನು ಸರ್ವ ಠಾವೀನಲ್ಲಿ ತೊಲಗದೆ। ಶಪ್ತಮಾಡಿದ ಮೇಲೆ ಪೊರಿಯದೆ ಬಿಡ ಸೂ। ಸುಪ್ತಿಲಿ ಸ್ವರೂಪಾನಂದ ಉದ್ರೇಕವೀವ। ಸಪ್ತ ಸಪ್ತ ಭುವನಪಾಲಾ ವಿಜಯವಿಠಲ। ಆಪ್ತನೊ ಅನಿಮಿತ್ಯ ಬಂಧುನೆಂಬೊದೆ ಸಿದ್ಧ ॥೧॥

ಮಟ್ಟತಾಳ

ಛಳಿಮಳಿಯೊಳಗಿದ್ದು ಕೆಲಕಾಲ ಬಳಲಿ। ಅಳಲಿ ತೊಳಲಿ ದೇಹ ಬಳಲಿಪದಲ್ಲ ಬಿ। ಸಿಲು ಬೇಸಿಗೆ ಸಲ್ಲ ಜಲದಲಿಮಿಂದು ತೊ। ಪ್ಪಲು ತೊಡಮೆ ತಿಂದು ಹಲವು ಯೋಚಿಸಸಲ್ಲ। ತಲೆ ಕೆಳಗಾಗಿ ಹಂಬಲಗೊಂ-ಬುವದಲ್ಲ। ಹಲಬು ಹಲಬಿ ವ್ಯರ್ಥ ತಳತಳಮಿಡಿಕಿ ಕ। ತ್ತಲೆ ಬೆಳಗೆನ್ನದಲೆ ಚಲ ಗಂಧ್ವರ ದೇಶಾ। ವಳಿ ವನದಲಿ ಪೋಗಿ ಕುಳಿತು ಕಂಗಳ ಮುಚ್ಚಿ। ವೊಲಿಸುವ ಮಾತಲ್ಲ ತಿಳಿವದು ಉತ್ತಮ। ಕುಲದಲ್ಲಿ ಜನಸಿದ ಮಲರಹಿತ ಜ್ಞಾನಿ ಸುಮನನಿಂದ। ಜಲಜದಳನಯನ ವಿಜಯ ವಿಠಲ ಹರಿಯ। ವೊಲಿಸುವ ಉಪಾಯವ ಒಲಿವಿನಲಿ ಕೇಳಿ ॥೨॥

ತ್ರಿವಿಡಿತಾಳ

ಡಿಂಬದೊಳಗೆ ಹೃದಯಾ ಅಂಬರದಲಿಪೊಳವಾ। ಲಂಬಿಸೀದ ನೂರು ಖಂಬದಿಂದ ಬಲು। ಸಂಭ್ರಮ ಮಂಟಪ ಕೊಂಬಿಕೊಂಬಿಗೆ ಶತ। ಕುಂಭ ಪವಳಮಯ ತುಂಬಿದ ರತುನಾ। ದಂಭೋಳಿ ಜೋಡಿಸಿದ ಮುಂಬಿಗಿಸುತ್ತಾ

K 4123

ಕೆಂಬಣ್ಣದ ಕಟ್ಟು ಇಂಬಾಗಿ ಎಸೆಯೆ। ಶಂಬರಾರಿಯ ಜನಕ ವಿಜಯ ವಿಠಲ ಹರಿಯ। ಬಿಂಬಾತೋರುವ ಸ್ಥಾನ ಚನ್ನಾಗಿ ಗ್ರಹಿಸೋದು ॥೩॥

ಅಟ್ಟತಾಳ

ದಳ ಅಷ್ಟವುಳ್ಳ ರಕ್ತಾಂಬುಜ ಮಧ್ಯ। ಪೊಳೆವ ಕರ್ನಿಕೆಮೇಲೆ ಮಂಡಲಾತ್ರಯವಪ್ಪೆ। ನಿಲವರ ಹೇಮಗದ್ದುಗೆಯಲ್ಲಿ ಸುರತರು। ಕೆಳಗೆ ಫಣಿಮಂಚ ಹಾಸಿಕೆ ಮನೋಹರ। ಲಲನಿಯರಿಬ್ಬರು ಎಡಬಲದಲಿವಪ್ಪೆ ಕುಳಿತು ಮೆರೆವ ಮನ್ಮಥಕೋಟಿ ಲಾವಣ್ಯ। ಜಲಧರ ವರ್ನ ಚತುರ್ಭುಜ ನಾನಾಕ। ಅಳವಳಿಸುವ ಭೂಷಾವಳಿಗಳು ರಂಜಿಸೆ। ಕಿಲಿ ಕಿಲಿ ನಗುವ ಶ್ರೀ ವಿಜಯ ವಿಠಲರೇಯ। ಪೊಲಿಸಿದವರಘ ಅರಘಳಿಗೆ ಅಗಲನುಕಾಣೊ॥

ಆದಿತಾಳ

ಒಂದೇಳುಭುಜದ ಲಕ್ಷ್ಮೀ ನಾರಾಯಣ। ಇಂದ್ರನಲ್ಲಿಗೆ ಬರೆ ಐಶ್ವರ್ಯ ಅನಕು। ಲೇಂದ್ರನಲ್ಲಿಗೆ ಬರೆ ತೇಜಸ್ಸು ಯಮನಲ್ಲಿ। ಬಂದು ಪೊಂಗಲು ಧರ್ಮ ವರುಣನಲ್ಲಿಗೆ ಬರೆ। ಕುಂದದೆ ರಸಕಾಂಕ್ಷಿ ವಾಯುವಿನಲ್ಲಿ ಜ್ಞಾನ। ಇಂದುಧರಸಖನಲ್ಲಿ ಧನದಾಶೆ। ಇಂದು ಮೌಳಿಯಲ್ಲಿ ವೈರಾಗ್ಯಭಾಗ್ಯ। ತಂದು ತೋರುವದು ನಿತ್ಯದಲ್ಲಿಮನ। ಸಂದೇಹವಿಲ್ಲವು ಇದು ಸಿದ್ಧಾಂತವೂ ಎಂದೆಂದಿಗೆ ತಿಳಿದಾಲೋಚನೆಮಾಡು। ಕಂದರ್ಪಪಿತ ನಮ್ಮ ವಿಜಯ ವಿಠಲರೇಯನ। ಸಂದರುಶನವಾಗೆ ಅವನೇ ಜೀವನ್ಮುಕ್ತಾ ॥೫॥

ಜತೆ

ಇಂತು ಚಿಂತನೆಮಾಡು ಸಚ್ಚಿದಾನಂದಾತ್ಮನ। ಅಂತು ತೋರದ ಮಹಿಮ ವಿಜಯ ವಿಠಲ ಹರಿ ॥೬॥

ಸುಳಾದಿ ೧೯

ಹೃತ್ಪದ್ಮ ಅಷ್ಟದಳದಲ್ಲಿಪ್ಪ ಬಿಂಬಿಮೂರ್ತಿ ಅನಿರುದ್ಧಾತ್ಮಕ ಪ್ರಾಜ್ಞನ ಆವಾಹನೆ, ಜ್ಞಾನಿಗಳು ಬಹುಬಗೆ ಅರ್ಚಿಸುವ ವಿವರ, ನೀರು ತುಲಸಿ ಅರ್ಪಿಸಿ, ಬಿಂಬೋಪಾಸನ ಸುಲಭೋಪಾಯ

ರಾಗ ಭೈರವಿ ಧ್ರುವತಾಳ

ಬಾ ಎನ್ನ ಭಾಗ್ಯನಿಧಿ ಭಕುತರ ಬೆಂಬಲವೆ। ಬಾ ಎನ್ನ ಮನ ದೈವ ಭವವನದಾವಾ। ಬಾ ಎನ್ನ ಕುಲಸ್ವಾಮಿ ಸಕಲಂತರಿಯಾಮಿ।

ಬಾ ಎನ್ನ ನಿಜ ತಪವೆ ಅಮೃತ ವಪುವೆ । ಬಾ ಎನ್ನ ಕರ್ನಾಮೃತವೆ ಅನುದಿನದಲ್ಲಿ ಹಿತವೆ । ಬಾ ಎನ್ನ ಸುರಧೇನು ಸಂತತ ಜ್ಞಾನಾಸೋನೆ । ಬಾ ಎನ್ನ ಸುರತರುವೆ ಬಣ್ಣಿಸಿ ನಿನ್ನ (ನಿಂದು) ಕರೆವೆ । ಬಾ ಎನ್ನ ಚಿಂತಾ ರತುನ ನಾನಾಯತುನ । ಬಾ ಎನ್ನ ಹೃತ್ಕುಮುದ ಚಂದ್ರ ಚನ್ನಿಗ ಮುದಾ । ಬಾ ಎನ್ನ ಶಬದಾಸುತಾ ನಿತ್ಯ ಅಜಾತಾ (ಅಚ್ಯುತಾ) ಬಾ ಎನ್ನ ಕರತಳದಲ್ಲಿಪ್ಪ ಕನ್ನಡಿಯಾದಾ । ಬಾ ಎನ್ನ ಬೆಳವಗಿಯು ಬೆಳಸುವ ಮಹಾಪ್ರೀಯಾ । ಬಾಎನ್ನ ಭಾರಕರ್ತಾ ಮತ್ತಾರಿಗೆ ಸಮರ್ಥಾ । ಬಾ ಎನ್ನ ಅಂತರಂಗ ಕರುಣಾಪಾಂಗ । ಬಾ ಯದುಕುಲತಿಲಕ ವಿಜಯ ವಿಠಲರೇಯ । ಬಾ ಎನ್ನ ಧ್ಯಾನದಲ್ಲಿ ನಿಲುವ ಬಿಂಬಮೂರುತಿ ॥೧॥

ಮಟ್ಟತಾಳ

ಹೃದಯಾಕಾಶದಲ್ಲಿ ಅಧೋಮುಖವಾಗಿದ್ದ । ಪದುಮಾಷ್ಟದಳ ಅದರೊಳಗೆ ಇಪ್ಪ । ಪದತಳ ಮೇಲಾಗಿ ಸದಮಲಶರೀರಾ । ಮದನ ಜನಕ ಹರಿ ವಿಜಯ ವಿಠಲ ಎನ್ನ । ಪದೋ ಪದಿಗೆ ನೀನು ಬಿಡದೆ ಸಾಕುವ ಧೊರಿಯೆ ॥೨॥

ತ್ರಿವಿಡಿತಾಳ

ಚಿಂತಿಪದೆಂತೊ ಸಮಾಧಿಯಲಿ ಕುಳಿತು । ಅಂತರಾತ್ಮಾತ್ಮಾ ಪ್ರಜ್ಞಾನಘನ ಅನಿರುದ್ಧ । ಮಂತ್ರ ತಂತ್ರಗಳಿಂದ ಮೆಚ್ಚಿಸಿ ನಿನ್ನ ನಾನು । ಸಂತೋಷಬಡಿಸುವನೆ ಸರ್ವದಾ ಸರ್ವ । ತಂತ್ರ ಸ್ವಾತಂತ್ರಾ ನೀನೆ ನೀನಲ್ಲದೊಂದಿಲ್ಲ । ಚಿಂತಾಯಕ ಚಿನ್ಮಯರೂಪ ಪ್ರತಾಪಾ । ಅಂತಾವದೊ ನಿನ್ನ ಅರ್ಚಿಸುವ ಭಕುತಿ । ಸಂತರಿಗೆ ಬಹು ಬಗೆ ಮಾರ್ಗವೊ । ಪ್ರಾಂತಕ್ಕೆ ನೀನೆ ಗತಿ ಅನಂತ ಜನುಮಕ್ಕೆ । ಇಂತೀ ನುಡಿಗಳು ಪುಸಿ ಬಪ್ಪವೆ । ಸಂತತ ರಮಣ ಶ್ರೀ ವಿಜಯ ವಿಠಲ ಏಕಾ । ನಿಂತಿಪ್ಪ ಮೂರುತಿ ಜೀವಾಕಾರಾ ॥೩॥

ಅಟ್ಟತಾಳ

ಪ್ರಣವ ಜಪ ತಪ ಪ್ರಣಾಮ ಪ್ರದಕ್ಷಣೆ । ಧನದಾನ ದೀಪ ವಂದನೆ ತೀರ್ಥಯಾತ್ರವೋ । ದನುಯಾಗ ಭೂರಿಭೋಜನ ಪಂಚಾನಲ ಅನು । ದಿನ ಚಾಂದ್ರಾಯಣ ಅನಿಮಿಷನದಿಸ್ನಾನ ವನವನ ಸಂಚಾರ । ಮುನಿ

ವೇಷಾ ಔಪಾಸನ ನಾನಾಧರ್ಮರ್ವ । ಘನ ವ್ರತಗಳು ಒಂದೊಂದನು ಒಬ್ಬರಿಗೆ ಸಾ । ಧನಮಾಡಿ ಇಂತು ಅಕ್ಷಣ ಜ್ಞಾನ ಭಕುತಿ । ಯನು ಮಿಳಿತವಾದದನು ನೀನೆ ಪಾಲಿಸು । ತನು ಕ್ಲೇಶವ ಬಿಟ್ಟು ವೇಗನೆ ಗತಿ ಗಳುವಾ ಘನಕೃಪೆಮಾಡುವ । ಘನ ವರ್ಣ ಕಾಯಾ ಶ್ರೀವಿಜಯವಿಠಲರೇಯ ಎನೆಗೊಂದೆ ಈ ಸಾಧನದಿಂದ ಗತಿವುಂಟು ॥೪॥

ಆದಿತಾಳ

ನೀರು ತುಲಸಿಯಿಂದ ಆರಾಧನೆಮಾಡುವೆ । ಸಾರಭೋಕ್ತನೆ ಕರುಣಾ ವಾರುಧಿ ಲಾಲಿಸಯ್ಯಾ । ತೋರ-ವದಿದೆ ಪೂಜೆ ಬೇರೆ ನಾನೊಂದುಕಾಣೆ। ಧಾರುಣಿಯೊಳಗೆ ಅಪಾರ ಸಾಧನವುಂಟು । ತೂರಿ ಯೋಗಿ(ಗ್ಯ)ತ ರಾಶಿ ಸೂರೆ ಬಿಡಲು ಎನಗೆ । ನೀರು ತುಲಸಿಯಿಂದ ಏರಿಸಿ ನಿನ್ನ ಚರಣ । ಸೇರುವಂಥ ಯೋಗ್ಯತಾ ಕೈ ಸೇರಿತಯ್ಯಾ ಎನಗಿಂದು । ಹಾರವಾಗಿದೆ ಇದಕೆ ವಾರ ವಾರಕೆ ಪೊಳಿದು । ಸಾರಿ ಸಾರಿಗೆ ನಿನ್ನ ರೂಪ ತೋರುವದು ಎನ್ನೊಳಗೆ । ವಾರಧಿಶಯನ ನಮ್ಮ ವಿಜಯ ವಿಠಲರೇಯಾ । ಚಾರು ಮನೋಹರ ಉದ್ಧಾರಮಾಡು ಮುದದಿಂದ ॥೫॥

ಜತೆ

ಎನ್ನಿಂದ ಈ ಪೂಜೆ ಕೈ ಕೊಂಡುನ್ನ(ನೆ)ರವದು । ಇನ್ನೊಂದು ನಾನರಿಯೆ ವಿಜಯ ವಿಠಲ ವಾಮನ ॥೬॥

ಸುಳಾದಿ ೨೦

ಅಷ್ಟದಳ ಕಮಲ ಇಪ್ಪ ಬಗೆ, ಕರ್ಣಿಕಾ ಕೇಸರ ವಿಚಾರ, ಮೂಲೇಶ ಆ ದಳದಲ್ಲಿ ಸಂಚರಿಸಿ ಬುದ್ಧಿ ಕೊಡುತಿಪ್ಪ ವಿಚಾರ, ರವಿ ಶಶಿ, ಪಾವಕಮಂಡಲೋಪರಿ ಶತಸ್ತಂಭ ಮಂಟಪ ವಿಮಾನಶೋಭೆ ಅಲ್ಲಿಪ್ಪ ಬಿಂಬಮೂರ್ತಿ ಧ್ಯಾನ ಪೂಜಾಕ್ರಮಾದಿ ವಿಸ್ತಾರ

ರಾಗ ಸಾವೇರಿ ಧ್ರುವತಾಳ

ಮನು ಮೂರ್ತಿ ಇಪ್ಪ ಮೂಲ ಸ್ಥಾನದಲ್ಲಿ ಒಂದು । ಮಿನಗುವ ಕಂದವುಂಟು ಆದರಿಂದಲಿ । ಜನಸಿದ್ಧ ನಾಳಾ ಗಗನಾದಲ್ಲಿಗೆ ಮುಟ್ಟುವಾಗ್ಯೆ ಎಣಿಸಿ ಹೃಷಿಕೇಶಾಂಗುಲಿಯು (೧೧) ಇಟ್ಟು । ಎಣಿಕೆಮಾಡಲಲ್ಲಿಗೆ ಅಷ್ಟದಳ ಜಗುನು । ಕನಕವರ್ಣದ ಕದಳಿಕುಸುಮದಂತೆ ಪೊಪ್ಪುತ್ತ । ಮೊನೆ

ಅಧೋಮುಖವಾಗಿ ಚಂದ್ರ ಪ್ರಕಾಶದಂತೆ। ಘನ ಕೋಮಲ ಪೂರ್ಣ ವಿಶಾಲ ದಿಶ ದಶ। ವನ್ನು ಶೋಭಿಸುತಿಪ್ಪದು ನೋಪ್ಪರಕಂಗಳಿಗೆ। ಗುಣಿಸು ಕೇಸರಿಗಳ ಅನುಮಾನ ಮಿಸಿಯ ಲಕ್ಷಣ। ವೆನ್ನು ಸುತ್ತ ಕಿಂಜಲ್ಕ ಮಧ್ಯ ಕರ್ನಿಕೆ। ಅನಿಮಿಷರಲ್ಲಿ ವಾಲಗ ಅಷ್ಟ ಹಸ್ತ ನಾರಾ। ಯಣ ಶ್ರೀ ಭೂ ಸಹಿತ ಪ್ರಹರಿಯಮಾಡುವ। ಮನುಜಾದಿಗಳವಿಡಿದು ಶರ್ವ ಪರಿಯಂತ। ಕ್ಷಣಕ್ಷಣಕೆ ಒಂದೊಂದು ಬುದ್ಧಿಕೊಡುತ। ವನಜ ಕರ್ನಿಕೆ ಮೇಲೆ ಇನ ಶಶಿ ಪಾವಕ। ತ್ರಿಣಿ ಮಂಡಲ ವಕ್ಕು ತದುಪರಿಯು। ಅನುವಾಗಿ ಪ್ರವಳ ಸ್ಫಟಿಕದಕಂಭ ನೂರು। ಕನಕ ರಕ್ತ ಸಂಯುಕ್ತವಾದ। ಇನಕರಾನೇಕ ಸಂಕಾಶ ವಿಮಾನಸುತ್ತಾ। ಹಣಿದ ಚಿನ್ನದದಾಮಾ ವಿರಾಜಿಸೆ। ಗಣಗಣ ಘಂಟೆ ಗೆಜ್ಜೆ ನಾದ ಕಟ್ಟಿದ ಮು। ತ್ತಿನ ಗೊಂಚಲಗಳು ಮಕರ ತೋರಣ ಗಳು। ವಿನಯಾ ವಿಚಿತ್ರ ಧ್ವಜಪತಾಕೆ ಮೇಲು ಕಟ್ಟು। ಮಣಿಗಣದಿಂದ ಬಿಗಿದ ಮಲಕುಗಳು। ಚಿಣಿಚಿಣಿಯಾಂಬರ ಜೋಡಿಸಿದ ಕೀಲು। ಕನಕ ಸಮ್ಮಯವಾದ ಕಳಸ ಪೊಳೆವುತಿರೆ। ಪ್ರಣವಾಕಾರ ವಿಮಾನ ಮಧ್ಯದಲ್ಲಿ। ಅನುದಿನ ವಿಚಿತ್ರ ವೈಚಿತ್ರಕವಾದ। ಗುಣರೂಪವುಳ್ಳ ಹರಿ ತ್ರಿಗುಣಾತೀತ। ಚಿನುಮಯ ಸರ್ವ ವಸ್ತುಗಳಿಂದ ಭಿನ್ನ ಮಹಾ। ಅಣು ಜ್ಯೋತಿರ್ಮಯ ವಾದ ಕಾಂತಿಯಿಂದ। ದಿನ ದಿನದಲಿಮೆರೆವ ವಿಜಯ ವಿಠಲರೇಯ। ಘನ ಮಹಿಮ ವಾಸವಾಗಿಪ್ಪ ಜಗದಪ್ಪಾ ॥೧॥

ಮಟ್ಟತಾಳ

ತೇರಿನ ಮಧ್ಯದಲಿ ಚಾರುವಾದ್ದ ಜಗಲಿ। ಈರೆರಡು ಮೂಲೆ ತೋರುತಿದೆ ಕಲ್ಪತರುವೆ ಅದರ ಮೇಲೆ। ಸಾರ ರತುನ ಸಂಕೀರಣವಾದ ಶತ ನೂರು ಫಣವುಳ್ಳ। ವಾರಣದಾ ಪ್ರಭಾಪಾರ ಕಾಂತಿಗೆ ಬಲು। ಮೀರಿದ ಸಿಂಹಾಸನ ಹೀರಮಯವಾದ ಶೃಂಗಾರದ ಮಂಟಪ। ಶ್ರೀ ರಮಣ ನಮ್ಮ ವಿಜಯ ವಿಠಲರೇಯ। ಆರಾಧನೆಗೊಂಬ ಸಾರ ಹೃದಯದಿಂದ ॥೨॥

ರೂಪಕತಾಳ

ಮಲ್ಲಿಗೆ ಕುಂದ ಮಂದಾರ ಕೇತಕಿ ಮರಗು। ಎಲ್ಲ ಪೂವಿನ ಅಲಂಕಾರವಿರೆ। ಅಲ್ಲಿ ಶ್ರೀಹರಿ ತನ್ನ ಮಡದೇರ ವೊಡಗೂಡಿ। ಸಲ್ಲುವಾ ವಾರಿಜ ವೆಲಿಸಿದಲ್ಲಿ। ಸಲ್ಲಲಿತ ಮಕುಟ ಶ್ರೀವತ್ಸ ಕೌಸ್ತುಭ। ಜಲ್ಲಜಪುಷ್ಪ

ಶ್ರೀಗಂಧ ತುಳಸಿಹಾರ। ಉಲ್ಹಾಸ ಕನಕಾಂಬರ ಕಟಿಸೂತ್ರ ಕುಂ। ಡಲ ಬ್ರಹಸೂತ್ರ ವೈಜಯಂತಿಮಾಲೆ । ಘುಲ್ಲುಘುಲ್ಲುವೆಂಬ ಕಂಕಣ ಕಡಗ ನೂಪುರ। ಬೆಲ್ಲೆಗಾಣದ ಫಣೆಯಲ್ಲಿ ಮೃಗನಾಭಿ। ತಿಲ್ಲುಕ ಕೇಯೂರ ಭುಜಕೀರ್ತಿ ರಸಸುಲಿ। ಪಲ್ಲು ಕರ್ಪುರ ಪರಿಮಳದಿಂದ ಎಸೆವ । ಮೆಲ್ಲುವ ತಾಂಬುಲ ಸೂಲಕ್ಷಣ ಪುರುಷ। ನಿಲ್ಲದೆ ಕೈವಲ್ಯ ಭಜಕರಿಗೆ ಪಾಲಿಸುವ। ಮಲ್ಲಮರ್ದನ ನಮ್ಮ ವಿಜಯ ವಿಠಲರೇಯ। ಸೊಲ್ಲಿನಿಂದಲಿ ತೃಪ್ತಿಬಡುವ ಕರಪಿಡಿವ ॥೩॥

ಝಂಪೆತಾಳ

ವರದ ಅಭಯಹಸ್ತ ಶಂಖ ರಥಾಂಗ ಚ। ತುರ ಪ್ರಸನ್ನ ವದನ ಮಂಗಳ ಮನೋ। ಹರ ದಯಾಮೂರ್ತಿ ಮಂದಹಾಸ ಮುಖಾಂಬುಜ। ಧರ ಕಂಧರ ವಕ್ಷ ವಿಶಾಲೋನ್ನತ ಬಾಹು। ಸರಿಗಿ ನ್ಯಾವಳ ಕಂಠಿ ಮೇಲೆ ಬೆರಳುಂಗರ। ಪರಿ ಪರಿ ಅಲಂಕೃತವ ಧರಿಸಿ ನಿಂದು। ಹರಿ ಅಣಿಮಾದಿ ಅಷ್ಟೈಶ್ವರ್ಯ ಮೂರುತಿ। ಎರಡೆರಡು ನಾಲ್ಕು ಕರ್ತೃತ್ವವುಳ್ಳ । ಹರಿ ಪರಮ ಪುರುಷ ಪುರುಷೋತ್ತಮ। ಶರಣರಿಗೆ ಆ ಹರಿಯ ಚರಣ ಶರಣ। ಸರಸಿಜಭವ ಶಿವ ಇಂದ್ರಾದ್ಯರಣಿಯಾಗಿ । ನೆರದು ಅಂಜಲಿಯಿಂದ ಸ್ತುತಿಪರು। ಸುರಮುನಿ ನಾರದಾದಿಗಳು ಹಸ್ತವ ಮುಗಿದು। ಸ್ವರವೆತ್ತಿ ಗಾನವನು ನಲಿದು ಪಾಡೆ। ಭರದಿಂದ ಕುಣಿವ ಊರ್ವಸಿ ಮೇನಕಿ ರಂಭೆ ಕರ ತಿರುಹಿ ಕುಣಿ ಕುಣಿದು ಕೊಂಡಾಡಲು। ಪರಮ ಹಂಸರು ಸನಕಾದಿ ಯೋಗಿಗಳು ಎ। ದಿರಲಿ ನಿಂದು ಸೂತಮಾಗದ ಬಂಧಿಯೂ। ಇರದೆ ತಮ ತಮ್ಮ ಬಲ್ಲದನು ಗುಣದಿಂದ। ನಿರ್ಉಪಮನ ನಿರ್ಲಜ್ಜೆಯಿಂದಲಿ ಪೊಗಳೆ। ಸರುವಾಭರಣದಿಂದ ಉಭಯ ಪಾರ್ಶ್ವದಲಿ ಇ। ಬ್ಬರು ನಾರಿಯರು ಚಾಮರಢಾಳಿಸೆ। ಪರಮಾತ್ಮ ಭಕ್ತವತ್ಸಲ ವಿಜಯ ವಿಠಲನ। ನಿರುತ ಈ ಪರಿ ಧ್ಯಾನವಮಾಡಿರೋ ॥೪॥

ತ್ರಿವಿಡಿತಾಳ

ಮೂಲಾನಾಭಿಯಿಂದ ಹೃದಯ ಪರಿಯಂತ। ನಾಳವದರ ಮೇಲೆ ಕಮಲ ಎಂಟು। ದಳಯುಕ್ತವಾಗಿ ಮಧ್ಯದಿ ಕರ್ನಿಕ। ಮೇಲು ತ್ರಿಮಂಡಲ ದಲ್ಲಿ ತೇರು। ಕೇಳಿ ತೇರಿನ ಮಧ್ಯ ಚಿತ್ರಮಂಟಪ ಪೂ। ಮಾಲೆಗಳಿಂದ

ಶೋಭಿಸುತಿದಕೊ । ನಾಲ್ಕು ಮೂಲೆ ಜಗುಲಿ ಕಲ್ಪವೃಕ್ಷ ವಿ। ಶಾಲವಾದರ ಕೆಳಗೆ ಸಿಂಹಾಸನ। ಕೀಲು ಮಣಿಗಳಿಂದ ಜಡಿತವಾಗಿದೆ ಅಲ್ಲಿ। ಶ್ರೀಲಕುಮಿ ಭೂರಿಂದ ಹರಿ ಕುಳಿತು। ವಾಲಗ ಕೊಳುತಿಪ್ಪ ಮುಕ್ತಾ ಮುಕ್ತರಕೈಯ್ಯ ಲಾಲಿಸಿ ಸಹಸ್ರ ಫಣ ಸಂಯುಕ್ತಾ। ನೀಲ ಮೇಘ ಶ್ಯಾಮ ಅಂಗುಷ್ಟ ಮಾತ್ರ ಮೂರ್ತಿ। ವಾಲಯ ಸಮಾಧಿಯಲ್ಲಿ ವೊಪ್ಪುವ। ಪೋಲುವರಿಲ್ಲ ಈತಗೆ ತ್ರಿಭುವನದೊಳು। ಬಾಲಾರ್ಕನಂತೆ ಪ್ರಕಾಶಿಸುವ। ಜಾಲಗಾರನಂತೆ ತನ್ನ ಮಾಯದೊಳು। ತ್ರಿಲೋಕವನು ಇಟ್ಟು ಸ್ತುತಿಸುವ। ಶೀಲ ಜನರಿಗೆ ಕೈ ಹಿಡಿಕಿಯಾಗಿಪ್ಪ। ಕಾಲಕಾಲಕೆ ತನ್ನ ತೋರುತಲಿ। ಕಾಲ ನಂದದಲಿಪ್ಪ ದುಷ್ಟ ಜನರಿಗೆ ನಿ। ರ್ಮೂಲನು ಕಾಣೋ ತ್ರಿಬಗೆಯಿಂದಲಿ। ಆಳುವ ನಮ್ಮ ವಿಜಯವಿಠಲ ಅನು। ಗಾಲ ಅನುಕೂಲ ಆಪನ್ನವೆಂದಿನೆ ॥೫॥

ರೂಪಕತಾಳ

ಹೃದಯಾಂಬರದಲ್ಲಿ ಅಧೋಮುಖವಾಗಿದ್ದ। ಪದುಮ ಎತ್ತುವದೊಂದು ವಿಧವನ್ನು ಗ್ರಹಿಸಿ। ಮುದದಿಂದ ಪ್ರಾಣವನ್ನು ಉದರದಲ್ಲಿ ತುಂಬಿ। ಉದಯಾರ್ಕವೆಂಬೊ ಜ್ಞಾನದಲ್ಲಿ ಬೆಳಕುಮಾಡಿ। ಅದರ ತರುವಾಯ ವೊದಗಿ ಘಾಳಿಯ ಬೀಸಿ। ಪದುಮ ನಿಮ್ನ ವಾಗಿದ್ದದನೆ ಸರಳಮಾಡಿ। ಸದಮಲ ಬಿಂಬನೆ ಅದೆ ಅವಸ್ಥಾ ಪ್ರೇರಕ। "ಹೃದಯಸ್ಥ ಹರೇರ್ಮೂರ್ತೇಃ ಜಿವೋಯತ್ಪ್ರತಿಬಿಂಬಕಾ। ಯದ್ವಸೆ ವರ್ತತೇ ಜೀವಃ ಸಾತು ಜೀವ ಕಳಾ ಸ್ಮೃತಃ" ಇದೆ ಮಂತ್ರವನು ಧೇನಿಸಿ ಪದುಮನಾಭನ ದಿವ್ಯ। ಪದಗಳರ್ಚನಿಗೆ ನಂದದಲಿ ಮನಸುಮಾಡಿ। ಪದವಿಪ್ರದಾತಾ ಶ್ರೀ ವಿಜಯವಿಠಲರೇಯ। ನಿದರುಶನವಾಗುವ ಮದಗರ್ವ ನೀಗುವಾ ॥೬॥

ಝಂಪೆತಾಳ

ನೋವಿಲ್ಲದೆ ಕಮಲವನು ವಿಕಸಿತವನುಮಾಡಿ। ಆವ್ಹಾನಾಸನ ಅರ್ಘ್ಯ ಪಾದ್ಯ ಆಚಮನವ। ದೇವಗಂಗೆಯಲಿ ಮಜ್ಜನ ಸುವಸನ। ಪಾವಿತ್ರ ಉಭಯಾಚಮಾನ ಒಮ್ಮೊಮ್ಮೆ। ಶ್ರೀ ವಿಭುವಿಗೆ ಗಂಧಪುಷ್ಪದೀಪಧೂಪ। ನೈವೇದ್ಯ ಮತ್ತೆ ಉಪಸ್ಪರ್ಶ ತಾಂಬೂಲ ನಾ। ನಾ ವಿಧದ ಉಪಚಾರ ಪ್ರದಕ್ಷಣೆ ನಮಸ್ಕಾರ। ತವಕದಿಂದ ಸ್ತೋತ್ರ ತೈಲಾಜ್ಯವರ್ತಿಗಳ। ಹವಣಿಸಿ ಜ್ಯೋತಿ ಹಲವು ಮಂಗಳಾರ್ತಿ। ದೇವ ಮಾರುತಪಿತಗೆ ಎತ್ತಿ

ನಿತ್ಯ ಸ್ಮರಿಸಿ। ಪಾವನನಾಗಿ ಜ್ಞಾನದಲಿನೋಡಿ । ಲಾವಣ್ಯ ವಿಗ್ರಹ ವಿಜಯ ವಿಠಲನಪಾದ। ತಾವರೆ ಹಿಡಿದು ಮೌಳಿತನಕ ನಿಲಿಸೋ ॥೭॥

ಧ್ರುವತಾಳ

ಶುದ್ಧ ಸೂಕ್ಷ್ಮ ನಿರ್ವಿಕಾರ ನಿರಂಜನ। ಅದ್ವೈತ ಮಹಿಮ ಶ್ರೀನಿವಾಸ ಅಪ್ರಮೇಯ। ಸಿದ್ಧಾಪ್ರಮೇಯ ಸಂಪೂರ್ಣ ಸಚ್ಚಿದಾನಂದಾತ್ಮಕ। ಉದ್ಧರಿಸು ಅನಿರುದ್ಧ ಕ್ಷೀರ ಸಮುದ್ರ ಶಯನ। ಆದಿ ಮಧ್ಯಾಂತ ರಹಿತ ಅ। ಚ್ಛೇದ್ಯ ಅಭೇದ್ಯ ಜೀವಭಿನ್ನ ಭವರೋಗ। ವೈದ್ಯ ಚೈದ್ಯ ವಿನಾಶ ವಿಶ್ವಾಸ ಫಲದಾಯ। ಪದ್ಮ ಪದ್ಮಜ ರುದ್ರ ತ್ರಿದಶ್ಯಾದರು ಪ್ರ। ಬುದ್ಧರ ಮಾಡಿ ಭವಬಂಧ ಪೊದ್ದು ಬಿಡಿಸುವೆ। ಶುದ್ಧ ಭವಾಬ್ಧಿಯೊಳು ಪೊಂದಿಪೆ ಎನ್ನ ಅನಾದ್ಯವಾ। ಗಿದ್ದ ಅವಿದ್ಯ ಕರ್ಮಗಳು ಪೊಸ್ತು ಕಡಿಗೆಮಾಡಿ। ಉದ್ಧರಿಸು ಎಂದು ಎದ್ದು ಅಂಜಲಿಪುಟಬದ್ಧದಲಿನಿಂದು। ಹೃದ್ಗತನಾಗಿದ್ದ ಉದ್ದಂಡ ದೇವನಂಘ್ರಿ। ಪದ್ಮದ್ವಯಕೆ ಬಿದ್ದು ಭಕುತಿಯಿಂದಾ। ಭದ್ರಗತಿಯನ್ನು ನಿರ್ಧಾರವಾಗಿ ಬೇಡಿ। ಮುದ್ರಧಾರರೊಡನೆ ಪದ್ಧತಿವುಳ್ಳ ಮನೋಬುದ್ಧಿಯ ಕೊಡು ಎಂದು। ಶುದ್ಧವಾದಾನಂದ ಅಬ್ಧಿಯೊಳಗೆ ಇದ್ದು। ಕೃದ್ಧಾ ಪೊದ್ದು ಪೋಡಿಸಿ। ಮಧ್ವರಮಣ ನಮ್ಮ ವಿಜಯ ವಿಠಲರೇಯಗೆ ತದ್ದಾಸನೆಂದರೆ ಇಷ್ಟಲ್ಲಿ ಶುಭಯೋಗಾ ॥೮॥

ತ್ರಿವಿಡಿತಾಳ

ಈಪರಿ ಇಂದಲಿ ಹೃದಯದೊಳಗೆ ಬಿಂಬ। ರೂಪವನ್ನ ಪೂಜಿಸಿ ಯೋಗ್ಯತದಿನಿತು। ಅಪಾರ ಜನುಮ ಜನುಮದಲಿಂದ ಮಾಡಿದ। ಅಪರಾಧಂಗಳು ಉಚ್ಚರಿಸಿ। ವ್ಯಾಪಿ ವ್ಯಾಪಿಗೆ ಹರಿಯ ಸ್ಮರಿಸಿ ಅಹಹಾ ಎಂದು ರೂಪಾತಿಶಯ ಕಣ್ಣು ತೆರದು ಮುಚ್ಚಿ। ಲೋಪ ಮನಮಾಡದೆ ಸಾಧಾರಣವಾಗಿ । ವ್ಯಾಪ್ತನಾಗಿದ್ದ ಹರಿಯ ನೆನಿಯೋ । ತಾಪತ್ರಯವಕಳೆವ ವಿಜಯ ವಿಠಲರೇಯ। ಆಪತ್ತುಕಾಲಬಾಂಧವ ಕಾಣಿರೋ ॥೯॥

ಅಟ್ಟತಾಳ

ಅಪರೋಕ್ಷವಾಗದೆ ಸಂಚಿತಾಗಾಮಿಯು । ನಿಪತನವಾಗದು ಪ್ರಾರಬ್ಧ ಕರ್ಮವು। ಉಪಶಮನದಿಂದ ಭೋಕ್ತವಾಗದು ಕಾಣೋ। ಕಪಟನಾಟಕ ಹರಿಯ ರೂಪವ ಬಾಹಿರ। ಅಪರೋಕ್ಷವಾಗಲು ಅದು

ನಿಮಿತ್ಯವಲ್ಲಾ । ಚಪಲ ಸದೃಶವಾದ ಮೂರ್ತಿಯ ಆವಾಗ । ಅಪರೋಕ್ಷ ಕರಿಸಿ ಮನದಲ್ಲಿ ಕಾಂಬೋದು । ಅಪವರ್ಗಕ್ಕೆ ಕೇವಲ ಸಾಧನವೆನ್ನು । ತಪನೀಯ ಗರ್ಭಾದಿ ದೇವತೆಗಳಿಗೆ । ಅಪರಮಿತ ಜನ್ಮಸಾಧನವಾಗದೆ । ಅಪರೋಕ್ಷವಾಗದು ಹರಿಯ ಕೂಡಾಡುವ । ಗುಪಿತ ಮಹಿಮ ನಮ್ಮ ವಿಜಯ ವಿಠಲರೇಯ । ಜಪ ತಪಕೆ ವೊಲಿವನು ಭಕುತಿಯಿಲ್ಲದಲೆ ॥೧೦॥

ಆದಿತಾಳ

ಅನಂತ ಜನುಮಕ್ಕೆ ಒಮ್ಮೆ ನಿನ್ನವನೆಂದು । ಧ್ಯಾನಾದಲ್ಲಿ ತಿಳಿದು ಮನಮುಟ್ಟಿ ನುಡಿದರೆ । ನಾನಾ ಸತ್ಕರ್ಮಂಗಳ ಮಾಡಿದಧಿಕ । ಏನೆಂಬೆ-ನವಗೆ ಎಲ್ಲಾ ಸುಲಭಸಾಧ್ಯ । ಹೀನ ಯೋನಿಜನಾಗಿ ಜನಿಸಿದರಾದರೂ । ಜ್ಞಾನವೆ ಕೆಡದಿಪ್ಪದು ಎಂದಿಗೆಂದಿಗಾದರೂ । ಮಾನವಾ ಮುಕ್ತಿ ಯೋಗ್ಯನೆಂದು ತಿಳಿವದು । ಆನಂದ ಆನಂದ ಗೋಪನ್ನ ಕಂದ ಒಲಿಯೆ । ನಾನಾ ಶಾಸ್ತ್ರವನೋದಿ ಮಿಥ್ಯಾಜ್ಞಾನ ಸಂಪಾದಿಸಿ । ನಾನು ನೀನೆ ಎಂದು ನುಡಿದ ಜೀವ । ಅನಂತ ಕಲ್ಪಕ್ಕೆ ನರಕವಾಸಿಯಾಗುವ । ಹಾನಿ ವೃದ್ಧಿ ಇಲ್ಲದ ವಿಜಯ ವಿಠಲರೇಯಾ । ಕಾಣಿಸುವ ನವರ ಸಾಧನವುಳ್ಳನಿತು ॥೧೧॥

ಜತೆ

ಹೃದಯವಾಸವಾಗಿ ಆರಾಧನೆಗೊಂಬ । ವಿಧಿ ಶಿವಾದಿಗಳೊಡೆಯ ವಿಜಯ ವಿಠಲರೇಯಾ ॥೧೨॥

ಸುಳಾದಿ ೨೧

ಶ್ರವಣ ಮನನ ಧ್ಯಾನೋಪಾಸನೆ ಕ್ರಮಗಳನ್ನು ಸಂಕ್ಷಿಪ್ತವಾಗಿಯೂ, ಕೆಲವು ಹಿಂದೆ ವಿವರಿಸಿದ ವಿಸ್ತಾರ ಕ್ರಮವನ್ನೂ ಪೂರ್ವಾಪರ ವಿಚಾರದೊಂದಿಗೆ ಧ್ಯಾನಗೈವ ವಿಸ್ತಾರ ಬಗೆ

ರಾಗ ಸಾರಂಗ ಧ್ರುವತಾಳ

ಆಚಾರವಂತನಾಗಿ ಅನುದಿನ ನಿನ್ನೊಳಗೆ । ಯೋಚಿಸು ಸುಷುಮ್ನ ನಾಡಿ ಮಧ್ಯ । ವಾಚಾಮಾದಿ ದೋಷ ಹಿಂಗಳೆದು ಚನ್ನಾಗಿ ಆಚಮನಾದಿಯಿಂದ ಆಸನಹಾಕಿ । ಬಾಚಿ ತೊಡಕು ಬಿಡಿಸಿದಂತೆ ಭೇದವುತಿಳಿದು । ಪ್ರಾಚೀನ ದಿಕ್ಕುಗಳ ವಿಚಾರಿಸಿ । ವಾಚಾರಂಭಣವಲ್ಲಾ ದ್ವಾದಶಾಂಗುಲಿ ಪೋಪ । ಈ ಚಕ್ರ ವಾಯು ಸಂಚಾರಗ್ರಹಿಸಿ । ಗೋಚರಿಸುವ ಮನ

ಚಿತ್ತ ಬುದ್ಧಿಯಿಂದ। ಆ ಚೇತನಾಹಮ್ಮತಿ ಏಕಗ್ರೈದು। ಯಾಚಕ ವೃತ್ತಿಯಿಂದ ಪ್ರಾಣ ನಿ(ವಿ)ರೋಧ ಕರ್ಮ। ಮೋಚಕವಾರ್ಗದಿಂದ ಒಹು ಶ್ರುತಿಯಲ್ಲಿ। ರೇಚಕ ಪೂರಕ ಕುಂಭಕ ನಿಲಿಸಿ ಆ। ಲೋಚನೆಮಾಡು ಆತ್ಮ ಅವಿಲದಿ (ಅನಿಲಂಬದಿ)। ಸೂಚನೆ ಕೇಳು ಮುನ್ನೆ ಪ್ರಸನ್ನ ವದನಾಂಭೋಜ। ಲೋಚನ ಹರಿಯ ಮೆಚ್ಚಿಸಿ ಮೆಚ್ಚಿಸಿ। ನೀಚ ಸಂಗವ ಬಿಟ್ಟು ನಿಜಭಕುತಿಯಿಂದ ನಿತ್ಯ। ಊಚ ಪ್ರವರ್ತಿ ದಿವಸ ದಿವಸಕ್ಕಧಿಕ। ಲೋಚನೇಂದ್ರಿಯ ಗೋಲಕ ಜ್ಯೋತಿರ್ಮಧ್ಯಾಕಾಶ। ರೋಚಿಷು ವ್ಯಾಪ್ತಿ ಬಾಹ್ಯ ಪಂಚದಲ್ಲಿ। ಚಾಚುತ್ತ ಪೋಗುವದು ದಿಗ್ದೇಶ ಭೂಮಂಡಲ। ಈ ಚೇತನದ ವ್ಯಾಪಾರವಿಂತೊ। ಸೂಚರಾಗಿದಕೆ ಅಪಭ್ರಷ್ಟ ದೇವತೆ ಸೂ। ರ್ಯ ಚಂದ್ರಮೌಳಿ ಪ್ರಾಣ ಶಿರಿ ಭಗವಂತ। ಪ್ರಾಚೀನ ಪುಣ್ಯ ಪಾಪದಿಂದ ಕರ್ಮ ಭೂಮಿಯಲ್ಲಿ। ಈ ಚರಾಚರ ಕಾಣಿಸಿ ಕೊಡುವರು। ಯೋಚನೆ ಬಿಡು ಹೇಯ ಅನಿತ್ಯ ವುಂದೆ ಮಂಗ। ಆಚರಣೆ ಮಾಡು ಇವರಿಗೆರಗಿ। ಭೂ ಚೋರ ಮೊದಲಾದ ರಕ್ಷ ರಾಕ್ಷಸರು ಪಿ। ಶಾಚಿ ಈರ್ವರುಪದ್ರ ಪೋಡಿಸೆಂದು ದು। ರಾಚಾರವನ್ನೆ ಬಿಟ್ಟು ಹರುಷದಿಂದ। ನಾಚಿಕೆ ತೊರಿಯದಲೇ ಯಮನೇಮದಿಂದ ಸವ್ಯ। ಸಾಚಿ ಸೂತನ್ನ ನೆನಿಸು ತ್ರಿಬಗೆಯಿಂದ। ವಾಚಾಮ ಗೋಚರ ವಿಜಯ ವಿಠಲನ್ನ ಪ। ರಿಚಾರನಾಗು ಗುರುಗಳ ಉಪದೇಶದಿಂದ ॥೧॥

ಮಟ್ಟತಾಳ

ಹೃದಯ ನಿಮ್ನದ ಮಧ್ಯ ಗ್ರಂಥಿಮಂಡಲವುಂಟು। ಇದರಲ್ಲಿ ಉಭಯ ಭಾಗದ ನಾಡಿಗಳು। ಎದರೆದರು ಬೆರದು ಪೋಗಿವೆ ಅಧರೋರ್ಧ್ವ ಇದರ ವಿಭಾಗಗಳು ತಿಳಕೊಂಡವ ಧನ್ಯ। ಇದೆ ಎಡಬಲವಿಡಿದು ಸ್ತ್ರೀ ಪುರುಷರ ನಾಡಿ। ಇದೆ ಅರ್ಚಿರಾದಿಲೋಕದುಭಯಮಾರ್ಗ। ಇದರೊಳು ಬಲು ಭೇದ ಜ್ಞಾನ ಧ್ಯಾನದಬಲವೋ। ಸದಮಲಮೂರುತಿ ವಿಜಯ ವಿಠಲರೇಯನ। ಪದಗಳನೋಡುವ ಮಹಾತ್ಮ ಬಲ್ಲ ಕಾಣೋ ॥೨॥

ತ್ರಿಪುಡಿತಾಳ

ಘನ ನಾಡ್ಯಾಂತರ್ಗತ ಎಂಟು ದಳದಕಮಲ। ಮಿನುಗುತಿಪ್ಪದು ನೋಡಿ ಕಳಸದಂತೆ। ಅನುದಿನ ಅದರ ಮಧ್ಯದಿ ಒಂದು ಕರ್ಣಿಕೆ।

ಕನಕಾದ್ರಿಯೆಂದದಲಿ ಶೋಭಿಸುತಿದೆ। ಅನಳಾರ್ಕ ಶಶಿಮಂಡಲ ಪೀಠದ ಮೇಲೆ। ಚಿನುಮಯ ಮೂರುತಿ ಕುಳುತಿಹನೋ। ಅನಿಳ ಈತನ್ನ ಪಾದ ಮೂಲಾಶ್ರಯಮಾಡಿ ಭ। ಜನೆಯಿಂದ ಸುಖಿಸುವ ಜೀವ ಇಂತೊ। ಅನುಮಾನವಿದಕ್ಕಿಲ್ಲ ಅಧ್ಯಾತ್ಮ ನಿಶ್ಚಯ। ಇನನುದಯ ದಿಕ್ಕಿನಲ್ಲಿ ಸಿದ್ಧ ವೆನ್ನಿ। ಇನಿತು ಗ್ರಹಿಸಿ ಮುಂದೆ ಜೀವ ಪ್ರಕರಣ ಕೇಳೊ। ಚಿನುಮ-ಯಾತ್ಮಾನಯ್ಯ ಎಂದೆಂದೆಗೆ। ಗುಣತ್ರಯಾತ್ಮಕವಾದ ಲಿಂಗ ಬದ್ಧನಾಗಿ। ಎಣಿಸು ಆ ಮೇಲೆ ಅನಿರುದ್ಧ ದೇಹ। ಅನುವಾಗಿದೆ ಮತ್ತೆ ವೈಕಾರಿಕದಿಂದ ಜನನವಾದ ಮನಸು ಪ್ರಕೃತಾದಿಂದ। ತನುವಾಗಿದೆನೋಡು ಮೂರು ವಿಧ ಕೂಡಿ। ಅನಿರುದ್ಧದಲಿ ಮೇಲೆ ತದಾಕಾರದಲ್ಲಿ। ವನಜ ಗರ್ಭಾದಿ ತತ್ವೇಶ್ವರರು ತಮ ತಮ್ಮ। ಮನಿಯಲ್ಲಿ ನಿಂದಿಹರು ಅಭಿಮತರಾಗಿ। ಮನಸು ಎಂಬೋದು ಕೇಳು ಒಂದೊಂದು ಪರಮಾಣು। ಎಣಿಸಿದರು ಅನಂತಾನಂತ ಅಂಶಿ। ಗಣನೆದೊರಕದು ಕಾಣೊ ಏನಂಬೆ ಸೋಜಿಗ। ಗುಣದ ಕಾರ್ಯದ ಸಂಗತಿ ಸಿಗಬಲ್ಲದೆ। ಮನಸು ಹೃದಯ ಇಂದ್ರಯೋನಿ ದಕ್ಷಿಣನಯನ। ದಿನ ರಾತ್ರಿ ಸಂಚಾರಾವಸ್ಥೆ ತ್ರಯವ್ಪೋ। ಅನಿಳ ರುದ್ರ ಸೂರ್ಯರಾಮುಖ್ಯವಾಗಿ ಜೀ। ವನ ಪ್ರಕಾಶದಿಂದ ವ್ಯಾಪಾರವಾ। ಮನಸಿನ ವಶಮಾಡಿಸು ವರೊ ಇದಕೆ। ಗುಣಪೂರ್ಣ ಪರಮಾತ್ಮ ಪ್ರಾಜ್ಞ ತೈಜಸ। ಪ್ರಣವ ಮೂರುತಿ ವಿಶ್ವ ಮೂರು ರೂಪಗಳೇಕ। ಕ್ಷಣಬಿಡದೆ ಸ್ಥಾನಸ್ಥಾನಕೆ ವೈವರು। ಅನಿಮಿಷ ತತಿಗಳಿಗೆ ಅಂಶದಿಂದಲಿಸಿದ್ಧ। ಮನುಜಾದಿಗಳಿಗೆ ಪ್ರಕಾಶವೃತ್ತಿ (ವ್ಯಾಪ್ತಿ)। ಅಣು ಜೀವವಾದರು ಪ್ರಕಾಶದಿಂದಲಿ। ಅನುಭವ ಮಾಡಿಸುವ ಹರಿಯ ಶಕ್ತಿ। ಮನಸಿನಲಿ ಜೀವನದ ಸಂಸ್ಕಾರವೀರ್ವಗೆ ಜನುಮ ಜನುಮಾಂತರದು ತುಂಬಿಹದೊ। ದನುಜಾರಮರ ನಿಕರ ಒಂದೊಂದು ತತ್ವದಲ್ಲಿ। ಗುಣಪ್ರವರ್ತಕರಾಗಿ ವಸತಿಯಯ್ಯಾ। ಗಣಿತ ವೆಂಬುದೆ ಇಲ್ಲ ತತ್ತತ್ಕರ್ಮಕೆ ತತ್ತ। ಜ್ಞನರು ನಿಯಾಮಕರು ನಿತ್ಯದಲ್ಲಿ। ಉಣಬೇಕು ಇವರಿಂದ ಸುಖದುಃಖ ಈ ಜೀವ। ಕೊನೆಗೆ ಯೋಗ್ಯತದಂತೆ ಸಾಧನವಾಹುದೊ। ಮನಸು ಕೇವಲ ಸೂಕ್ಷ್ಮ ಮಹವಲ್ಪ ಪ್ರದೇಶ। ಅನಿತು ಜನ್ಮದ ಸಂಸ್ಕಾರ ತುಂಬಿಹುದೊ। ತೃಣಕೆ ಗಜ ಜನುಮ ಆ ಗಜಕೆ ತೃಣಜನ್ಮಗಳು। ಅನಿಶಾ ಬಂದರಾಗೇ ಒಂದೆ ಸಮನೋ। ಮನಸು

ನ್ನೋಡಿದರೆ ಜೀವಕೆ ಭಿನ್ನ ಸುಷುಪ್ತಿ । ಕನಸು ಜಾಗರಕೊಡುವದೆಲ್ಲಿದ್ದರೂ ಪ್ರಣವ ಪಾದ್ಯ ನಮ್ಮ ವಿಜಯ ವಿಠಲರೇಯನ । ನೆನೆಸು ನಾನಾ ಚಿತ್ರ ವ್ಯಾಪಾರವಪಾರ ॥೩॥

ಅಟ್ಟತಾಳ

ಕಮಲ ಗರ್ಭಾಂತರ ಪ್ರಾಜ್ಞನ ಬಳಿಯಲ್ಲಿ । ತಮ ರಜ ಸತ್ವ ಗುಣಾತ್ಮಕ ಬದ್ಧ ಉ । ತ್ತಮ ಜೀವನಿರುತಿಪ್ಪ ಸಂಸಾರದೊಳು ಬಿದ್ದು । ಕ್ರಮದಿಂದ ವರ್ತಮಾನ ತಿಳಿ ಒಂದೊಂದು । ನಿಮಿಷ ಪಾಲಿಸುವಲ್ಲಿ ಸಪ್ತಾಂಗ ವಿಶ್ವನು । ಗಮಿಸಿ ಕಂಧರಭಾಗ ಇಂದ್ರಿಯೋನಿಯ ಮಧ್ಯ । ಸಮ ತೈಜಸ ದೇವನ್ನ ನೆರೆದು ಅಲ್ಲಿಂದ ಹೃ । ತ್ಕಮಲ ಮಧ್ಯದಲ್ಲಿದ್ದ ಪ್ರಾಜ್ಞನಕೂಡಲು । ತಮೋಗುಣದ ಕಾರ್ಯ ಮಿಗಿಲೋರ್ಧ್ವಗುಣದ ಮೇಲೆ । ಅಮಮ ಮನಸಿನಲ್ಲಿ ಚತುರ್ವಿಂಶತಿತತ್ವ । ಸಮ ಅಸಮವಾಗಿ ಸೂಕ್ಷ್ಮ ತರತರದಿಂದ ಪೂರ್ಣವಾಗಿಪ್ಪವು । ಅಮಿತ ಪ್ರಕಾಶ ಕಿರಣನಯ ವಿಸ್ತಾರ । ರಮಣೀಯಾಗಿ ಜೀವಕಾಂತಿ ಮಿಶ್ರದಲಿ । ನಿಮಿಷಾರ್ಧದೊಳಗೆ ಅನಂತ ವಾಸನಮಯ । ಚಮತ್ಕೃತಿಯಿಂದಲಿ ಸೃಷ್ಟಿಯಾವದು । ಆಗಮ ಸಿದ್ಧ ನಿರ್ಣಯಸಿದ್ಧವಾಗಿದೆ ಇದೆ । ಪ್ರಮೆಯ ಭಾಗಗಳೆಲ್ಲ ಉಪದೇಶ ಗಮ್ಯವೊ । ಉಮೆಯ ರಸ ತತ್ವ ಏಕಭಾಗದ ಕ್ರೀಯ । ಕ್ಷಮೆಯಲ್ಲಿ ವ್ಯಾಪಿಸಿಕೊಂಡಿದೆ ಬಲು ವಿಧ । ರಮೆಯರಸ ನಮ್ಮ ವಿಜಯ ವಿಠಲನ್ನ । ವಿಮಲಗತಿಯಿಂದ ಧ್ಯಾನವಮಾಡು ॥೪॥

ಆದಿತಾಳ

ಕಂದ ಮೂಲದಿಂದ ಋಜುವಾಗಿ ಪೊಳೆವ ನಾಳ । ರಂಧ್ರವುಳ್ಳ ನಾಡಿಗಳು ಗ್ರಂಥಿಭೇದಿಸಿಕೊಂಡು । ಇಂದ್ರಿಯೋನಿಯ ಸಾರಿ ಅಗ್ರಭಾಗದಿಂದ । ಒಂದೊಂದು ಜ್ಞಾನೇಂದ್ರಿಯಕೆ ಪ್ರವೇಶವಾಗಿಹವೊ । ಅಂದವ ನೋಡು ಮುಖ್ಯ ಧ್ಯಾನಗೈಯಬೇಕಾದರೆ । ದ್ವಂದ್ವಾತೀತನಾಗಿ ದಕ್ಷಿಣಾಕ್ಷಿಯಲಿಂದ ರಂಧ್ರವಬಂಧಿಸಿ ತಿರೊಭಾವ ಶ್ವಾಸದಿಂದ । ಸಂದಿದ್ದ ಭೌತಿಕತೊರದು ಪ್ರಾಕೃತದೇಹ । ಪೊಂದು ವಿಶ್ವತೈಜಸನ್ನ ಪ್ರಾಜ್ಞನೊಳಗೆ ಇಟ್ಟು । ಕುಂದದಲೆ ಭಜಿಪದು ಇದೆ ಮಾನಸಪೂಜೆ । ಕೆಂದಳಾತ್ಮಕವಾದ ಕಮಲ ಕರ್ಣಿಕೆ ಮೂಲಾಗ್ರ । ಒಂದೊಂದು ಸ್ಥಾನವೆನ್ನಿ ಹೃದಯ ವ್ಯಾಪ್ತಿ ಸಮೇತ

ನಿಂದು ಒಪ್ಪುತಲಿಪ್ಪ ಪುರುಷತ್ರಯನನುವೊಲಿಸು। ವಂದಿಸು ಹದಿನಾರು ಕಳಾಭಿಮಾನಿಗಳಿಗೆ। ಮುಂದೆ ಮುಂದೊಲಿದು ತಾರತಮ್ಯಂದ। ಸಂದರುಶನ ಮಾಡು ಉತ್ತಮೋತ್ತಮ ಭಕ್ತಿ। ಯಿಂದ ಮುಖ್ಯಪ್ರಾಣನಸೇವಿಸಿ ಅಲ್ಲಿಂದ ಇಂದಿರೇಶನಮೂರ್ತಿ ನಿನಗಿಷ್ಟವಾದಷ್ಟು। ನಂದದಿಂದಲಿ ನೆನೆಸಿ ಏಕೀಭೂತವಮಾಡು। ಸಂದೇಹನಾಗದಿರು ಬ್ರಹ್ಮನಾಡಿಯು ಮಧ್ಯ। ತಂದಿ ಊರ್ಧ್ವಭಾಗಕ್ಕೆ ದ್ವಾದಶಾಂಗುಲಿ ಹೃದಯ। ಮಂದಿರದೊಳು ಭಜಿಸು ದಹರಾಕಾಶದಲ್ಲಿ। ಎಂವೆಂದಿಗೆ ಇನಿತು ಇಷ್ಟ ಪುಣ್ಯ ಸಂಪಾದಿಸಿ। ನಿಂದಿತ ಕರ್ಮಗಳು ಪೋಗಾಡು ನಲಿದಾಡು। ಮಂದಮತಿಯಲ್ಲಿ ಕೆಡದಿರು ಬಾಳದಿರು। ಹಿಂದಕ್ಕೆ ಹಿಂದಕ್ಕೆ ಸರಿದು ಮೆಲ್ಲ ಮೆಲ್ಲನೆ ಮು। ಕ್ಕುಂದನ ಕಾಣುವದು ಪಂಚಸ್ಥಾನದಲ್ಲಿ। ನಂದವಾದ ಜೀವಕ್ಕೆ ವಿಪರೀತ। ಬಂದಿಹುದು ನೋಡು ಅನಾದಿಯಿಂದ ಹರಿಯ। ಬಂಧಕಶಕ್ತಿಗೆ ಶರಣೆಂದು ಬಾಗಬೇಕು। ವೃಂದಾರಕರ ಪ್ರಿಯ ವಿಜಯ ವಿಠಲರೇಯ। ಸಂದರುಶನ ಕೊಡದೆ ಆವದು ಸಿದ್ಧಿಸದು ॥೫॥

ಜತೆ

ಶ್ರವಣ ಮನನ ಧ್ಯಾನೋಪಾಸನೆಮಾಡೋದು। ಜನುಮ ರಹಿತ ನಮ್ಮ ವಿಜಯ ವಿಠಲಸುಳಿವ ॥೬॥

ಸುಳಾದಿ ೨೨

ಹಿಂದಿನ ಧ್ಯಾನೋಪಾಯ ಕ್ರಮವನ್ನು ಸವಿಸ್ತರಿಸಿ, ಧಾರಣಯೋಗದಿಂದ ಧೃಢೀಕರಿಸಿ, ಸ್ವದೇಹದಲ್ಲಿದ್ದ ತತ್ವ ತತ್ವಾಭಿಮಾನಿಗಳೇ ಬಹಿರದಲ್ಲಿ ವ್ಯಾಪ್ತ ತತ್ವಪತಿಗಳ ಅಂಶ, ಅವತಾರಗಳನ್ನು ಏಕೀಕರಣಗೈದು ಪಾತಾಳಾರಂಭಿಸಿ ಚತುರ್ದಶಲೋಕ, ಧಾಮತ್ರಯ ವಿರಾಟಮೂರ್ತಿ ಬಹಿರ್ಬ್ರಹ್ಮಾಂಡ ಆವರಣಗಳಲ್ಲಿ ವ್ಯಾಪ್ತನಾಹ ಹರಿಯರೂಪಕ್ಕೆ ಐಕ್ಯಚಿಂತನಪೂರ್ವಕ, ಷೋಡಶೋಪಚಾರ ಪೂಜಾ ಧ್ಯಾನೋಪಾಸನೆಯಲ್ಲಿ ಮಾಡುವದು

ರಾಗ ಭೈರವಿ ಧ್ರುವತಾಳ

ಧ್ಯಾರಣ ಧ್ಯಾನಯೋಗಮಾಡು ಮನವೆ ಆಸಾ। ಧಾರಣ ಹರಿಯ ಮಹಿಮೆ ಪೂರ್ಣ ತಿಳಿದು। ತಾರತಮ್ಯನುಸಾರ ತಾತ್ವಿಕ ಜನರ ವಿ। ಸ್ತಾರವಾದ ರೂಪಾಂತರವ ಗ್ರಹಿಸಿ। ಆರೇಳೊಂದು ಭುವನ ಅಲ್ಲಲ್ಲಿ ಇದ್ದ

ವಸ್ತ್ರ (ವಾಸಾ) । ವಿರಾಟರೂಪ ವೈಕುಂಠನಗರ । ವಾರಿಜ ಜಾಂಡ ಖರ್ಪರ ಸಮಸ್ತಾವರಣ ; ಸಾರಾಸಾರವನ್ನು ನೋಡು ಅಧಿಕವಾಗಿ । ಮೂರು ಗುಣದಿಂದ ಆಗುವ ಕಾರ್ಯ ತಿಳಿದು । ಸಾರಿ ಸಾರಿಗೆ ಹಿಗ್ಗಿ ಕೊಂಡಾಡುತ್ತ । ನಾರಾಯಣನೆ ಮುಖ್ಯ ಸಮಸ್ತರೊಡನೆ ಮಹಾ । ಧೀರನೆ ಅಪ್ರಮೇಯ ನಿತ್ಯ ಸುಲಭ । ಆರಾಧನೆಮಾಡೋದು ಓರ್ವೋರ್ವರಲ್ಲಿ ನಿಲಿಸಿ । ಬೇರೆ ಬೇರೆ ಬುದ್ಧಿಯಿಂದ ತಿಳಿದು । ಮೇರೆ ಇಲ್ಲದೆ ದೇವತೆಗಳ ಅಂಶ ಅವ । ತಾರ ಎಣಿಸಿ ಇವರ ಪ್ರಸಾದವ । ಮೂರು ಬಗೆಯಿಂದ ಸಂಪಾದಿಸಿ ಲಕುಮಿ । ನಾರಾಯಣನನ್ನು ಧ್ಯಾನಗೈದು ಮುಕ್ತಿ । ಸೂರೆಗೊಂಡು ನೀನು ಸುಖಿಸೋದು ಅಲ್ಲಿಗಲ್ಲಿ । ಕೀರುತಿವಂತನಾಗು ಇಹ ಪರದಲ್ಲಿ । ಶಾರೀರದೊಳಗಿದ್ದ ಮಾನಿಗಳೆ ಸರ್ವ । ಕಾರವಾಗಿಪ್ಪರೆಂದು ಚಿಂತಿಸಿ ನಿತ್ಯ । ವಾರ ವಾರಕ್ಕೆ ಪ್ರಾಣ ನಿರೋಧಮಾಡಿ ಶ್ವಾಸ । ಧಾರಣದಿಂದಲಿ ಮನ ನಿಲಿಸೋ । ಕಾರಣ ಕಾರ್ಯರೂಪ ಒಂದೊಂದು ನೆನಿಸಿ ಉಪಸಂ । ಹಾರಾದಿಂದಲಿ ಸರ್ವ ಮಿಳಿತಗೈಯ್ಯೋ । ಚಾರು ಚರಿತ್ರ ನಮ್ಮ ವಿಜಯ ವಿಠಲನಂಘ್ರಿ । ವಾರಿಜದಳವನ್ನು ಭಕ್ತಿಯಿಂದಲಿ ನೋಡು ॥೧॥

ಮಟ್ಟತಾಳ

ತಾತ್ವಿಕ ಕಾರ್ಮಿಕ ಮನುಜ ತೃಣ ತನಕ । ಸಾತ್ವಿಕ ಗುಣದವರು ಮುಕ್ತಿಯೋಗ್ಯರು ಮುಖ್ಯ । ಜಾತಿ ಭೇದವುಂಟು ಜಗದೊಳಗೆ ಎನ್ನಿ । ಪೂತುರೆ ಮೂವತ್ತು ಮೂರು ಕೋಟಿ ಸ್ವರ್ಗ । ಜಾತಸ್ತರು ಕಾಣೋ ಪಾತಾಳಮಾರಭ್ಯ । ಸತ್ಯಲೋಕವೆಪಿಡಿದು । ಗಾತುರ ಭೇದದಲಿ ತುಂಬಿ ಕೊಂಡಿಹರಯ್ಯಾ । ಈ ತೆರದಲಿಯಿದ್ದ ದೇವರೊಳಗೆ ತ್ರಿವಿಧ । ಚಾತುರ ಬಗೆ ಸಂಖ್ಯೆ ಪಂಚ ಪ್ರಕಾರಗಳು । ಧಾತ ಮೊದಲಮಾಡಿ ಆಜಾನಜ ಪರಿಯ ಂತ । ನೀತಿಯಿಂದಲಿ ಗ್ರಹಿಸು ನಿರ್ಣಯ ಉಕ್ತಿಯಲಿ । ಭೀತ ರಹಿತ ನಮ್ಮ ವಿಜಯ ವಿಠಲರೇಯ । ಸ್ವಾತಂತ್ರನೆಂದು ಇದರನ್ನೇ ಪ್ರಾರ್ಥಿಸೋ ॥೨॥

ತ್ರಿವಿಡಿತಾಳ

ಮುಕುತಿಯೋಗ್ಯರ ಸರ್ಗ ಕ್ರಮಾಂತು ಚಿಂತಿಸು । ಭಕುತಿ ಸ್ನೇಹ ದಿಂದ ಅಡಿಗಡಿಗೆ । ಸಕಲಕ್ಕು ಮಹಾಶ್ರೇಷ್ಠ ಬ್ರಹ್ಮ ವಾಯುಗಳು

ಕಾ । ವರ್ಣಕ ದೇವತಿ ಭಾರತಿ ನಾಗಾರಿ ಫಣಿ ಕಾಮಾ । ಹರ ಷಣ್ಮಹಿಷಿ ಜನ ಗರುಡಾದ್ಯರ ಸತಿಯರು । ಮುಖಶತ ಮದನ ಅಹಂಪ್ರಾಣ ಅನಿರುದ್ಧ ಅಕಳಂಕಾದಿ ಮನು ರತಿ ಗುರು ಶಚಿ ದ । ಕ್ಷಕ ಪ್ರವಾಹ ವಾಯು ಮನು ಪತ್ನಿ ಶಶಿ ಜಲಜ । ಸಖ ಧರ್ಮ ವರುಣ ನಾರದಮುನಿ ಭೃಗು ಪಾ । ವಕ ಪ್ರಸೂತಿ ವಿಶ್ವಾಮಿತ್ರಾದ್ಯರು । ಅಕಟ ಮಿತ್ರನು ತಾರಾ ಪ್ರಾವಾಹಿ ದನುಜ ನಾ । ಯಕ ವಿಷ್ವಕ್ಸೇನ ವೈದ್ಯರು ಧನಪ ವಿನಾ । ಯಕ ಉಕ್ತಶೇಷರು ಸಹವಾಗಿ ಮುಖ್ಯ ತಾ । ತ್ವಿಕರೆನ್ನಿ ಇವರಿಗೆ ಸಹಜ ದೇವತ್ವವೊ ಅಖಿಳಬಗೆಯಿಂದಲಿ ನೋಡಲು ನಿಜ ಮುಕ । ಭಕುತಿವುಳ್ಳವರಯ್ಯಾ ದ್ವಿವಿಧವೆನ್ನಿ । ಪ್ರಕಟವಾಗಿದೆ ತಾರತಮ್ಯಾನುಸಾರ ಹಾ । ಟಕಗರ್ಭವಿಡಿದು ಋಭುಗಣ ತನಕ ಎ । ಣಿಕೆಮಾಡಲಾಗಿ ತ್ರಿಶತೋತ್ತರ ತ್ರಿಸಹಸ್ರ । ಧಿಕರೆನ್ನಿ ವಿಷ್ಣುಪಾದೈಕಾಶ್ರಯು । ಸುಖಸಾಂದ್ರ ವಿಜಯ ವಿಠಲರೇಯನ ಸೇ । ವಕರಾಗಿ ಸರ್ವ ಲೋಕದಲಿ ತುಂಬಿಹರೋ ॥೩॥

ಝಂಪೆತಾಳ

ಪಾವಕ ಪವಮಾನ ವಹ್ನಿಲಿ ಪುತ್ರರು ಷಡ್ । ದೇವ ಬಲ್ಯಾದಿಗಳು ಮನುಗಳೇಕಾದಶ । ಚಾವನೌಚೇಥ್ಯಾದಿ ಋಷಿಗಳು ನವತಿ ಸಂ। ಭಾವಿಸುತ ಸನಕಾದಿ ಚಿತ್ರಾಂಗದ ಮುಖ್ಯ । ದೇವಗಂಧರ್ವರು ಚಕ್ರವರ್ತಿಗಳು ಶತ । ಈ ವಿಧದಿ ಮಾನುಷ್ಯ ವಾಗಾಭಿಮಾನಿ ವಾ । ಗ್ದೇವಿ (ರಾಕಾದಿ) ರಾಕಾಧಿ ಶಾಂತನು ಶತಾನುಶೇಷ ಭಾರ್ಯರ್ । ದೇವಿ ದಿಕ್ಪಾಲಕರು ಪ್ರಾಣಾನಿರುದ್ಧ ಋಭು । ಅವರುಗಳ ಹೆಂಡರನು ತಿಳಿದು ದೇವ ನದಿ ಪರ್ಜನ್ಯರವಿ ಶಶಿ ಯಮಾದ್ಯ । ರ ವಧುಗಳು ಅನಿರುದ್ಧನ ಪತ್ನಿ । ಪಾವ-ಕಾದ್ಯರು ಮನುರ್ದೈವತಾದ್ಯಸ್ತ್ರೀಯರು । ಕೋವಿದ ಜಯಂತ ಜಯಾದ್ಯ ಕಾಲಾಖ್ಯರು । ಧಾವಂತ ಯಮಭಟರು ಬಲ್ಯಾದಿಗಳಹೆಂಡರು । ದೇವತೆಗಳು ಕೆಲವು ಯಕ್ಷಗಣ ಪ್ರಧಾನ । ಪಾವಕನಮಡದಿ ಬುಧನಾಮದೇವಿ । ಆವಿಗಡ ಶನಿ ಇಳ್ಲಿಗೆ ಲೆಖ್ಖವನುಮಾಡೆ । ಪಾವಕ ಪವಮಾನ ಆರಂಭಿಸಿ । ಆವ ಬಗೆಯಿಂದ ಗುಣಿಸೆ ವಿಂಶತಿ । ನವ ಸಾವಿರದ ಏಳನೂರಜನರೆನ್ನಿ । ಸಾವಧಾನದಿ ಕೇಳಿ ಅಮುಖ್ಯ ತಾತ್ವಿಕ । ದೇವತೆಗಳು ಇವರೆ ಕಾರ್ಮಿಕರೊ ।

ದೇವಕಿ ಸುತ ನಮ್ಮ ವಿಜಯ ವಿಠಲರೇಯ । ಕಾವ ಈಪರಿಯಿಂದ ನೆನೆಸಿ ಧ್ಯಾನವಮಾಡೆ ॥೪॥

ರೂಪಕತಾಳ

ಬುಧಶನಿ ಪತ್ನೀರು ತೀರ್ಥಾಭಿಮಾನಿಗಳು । ಇದರ ತರುವಾಯ ಪುಷ್ಕರ ಕರ್ಮಪಾಭಿದರು । ಇದನೆಲ್ಲ ಕೂಡಿಸಿ ಎಂಟು ಕೋಟಿಯಮೇಲೆ ಅಧಿಕ ನವಲಕ್ಷ ಅರವತ್ತೇಳುಸಹಸ್ರ । ಹದಿನಾರುಸಾವಿರ ಅಗ್ನಿ ಪುತ್ರರು ಈ । ವಿಧದಲಿ ಶತಕೋಟಿಗೆ ಶತನ್ಯೂನ ಋಷಿಗಳು । ತ್ರಿದಶ ಗಂಧರ್ವ ಅಪ್ಸರರು ಶತಾಶತಮಂದಿ । ಮುದದಿಂದ ಚಿರಪಿತೃರು ಕೆಲವು ಪಿತೃ ಗಂಧರ್ವ । ಒದಿಯಲ್ಲಿ ಅಪ್ಸರರು ಸಿದ್ಧಸಾಧ್ಯಚಾರಣ । ಮೊದಲಾದ ವಿದ್ಯಾಧಾರರು ಕಿನ್ನರ ಕಿಂಪುರುಷಜನ । ಅದುಭೂತ ಭೂತ ಪ್ರೇತ ಪಿಶಾಚ ಯಕ್ಷ । ಹದುಳಬಯಸುವ ರಾಕ್ಷಸ ಭಿನ್ನರಾಗೆ । ಹದಿನಾರು ಜಾತಿಯೋಳ್ಗತರಾಗಿ ಇಪ್ಪರು । ತದುಪರಿ ಕೆಲವು ಅಪ್ಸರರು ನರಗಂಧರ್ವ । ವೊದಗಿ ಇಲ್ಲಿಗೆ ಗುಣಿಸಿ ವಿ । ವಿಧ ಇವರೊಳಕ್ಕು ಪದಸ್ಥ ರಹಿತಕಾಣೊ । ಚದುರರು ಚತುರ್ವಿಂಶತಿಕೋಟಿ ಸಂಖ್ಯಾಕರು । ಇದನೆಲ್ಲ ಕೂಡಿಸಿ ಗಣಿತ ಮಾಡಲು । ಆದಷ್ಟು ಮೂವತ್ತುಮೂರುಕೋಟಿದೇವತಿಗಳು । ಯದುಕುಲ ಲಲಾಮ ವಿಜಯವಿಠಲ ಸಾರಾ । ಹೃದಯ ಮನಸ್ಸಿನಲಿ ಇದರಂತೆ ನುಡಿಸುವ ॥೫॥

ಅಟ್ಟತಾಳ

ಉಳಿದಾದರಾಯರು ಮನುಜೋತ್ತಮರು ಖಗಾಳಿ ವಳಿ ಮೃಗ ಉರಗ ಗಜಾದಿ ತೃಣಜೀವ । ತಿಳಿದು ಈಪರಿಯಿಂದ ಮುಕುತಿಯೋಗ್ಯರನ್ನ ಬಲಗೊಂಡು ತರತಮದಿಂದ ಕೊಂಡಾಡಿ ವೆ । ಗ್ಗಳ ಭಕುತಿಯಿಂದ ಸವಿಶೇಷ ಗ್ರಹಿಸು ವಿ । ಮಲ ಮನಸಿನಿಂದಲಿ ಇದರೊಳು ನಿರಂಶರ ಆ । ಕೆಲಕೆ ಸಾರಿ ಮುಂದೆ ಸಾಂಶರ ಮಧ್ಯ । ಕೆಲರು ಅಜಾನಜರು ಕಾರ್ಮಿಕರು । ಕೆಲವು ತಾತ್ವಿಕ ಜನರು ಇನಿತು ಲೆಖ್ಖವನುಮಾಡೆ ವಿವರವುಂಟು । ತಿಳಿ ಮುಖ್ಯ ತಾತ್ವಿಕಜನರು ಮೂರುಸಾವಿರಮುನ್ನೂರು । ಬಲುಗಣನೆ ಅಮುಖ್ಯ ತಾತ್ವಿಕ ಶನಿ ಪರಿಯಂತ ವಿಂಶತಿನವ । ಏಳುಸಾವಿರ ಜನರೆನ್ನಿ ತೀರ್ಥಾಭಿಮಾನಿ ಪುಷ್ಕರ ಪರಿಯಂತ । ಮಿಳಿತವಾಯಿತು ಎಂಟು

ತೊಂತ್ತೊಂಭತ್ತು ಲಕ್ಷ ಆರವ। ತ್ರೀಳು ಸಾವಿರ ಎಲ್ಲ ಕೂಡಿಸಿ ಒಂಭತ್ತು ಕೋಟಿ ಆಯಿತು। ಉಳಿದಾ ಜಾನಜ ಅಗ್ನಿ ಪುತ್ರ ಅಪ್ಸರ ಗಂಧರ್ವ ಚಿರ ಪಿತೃ ಮೊ। ದಲಾಗಿ ಸಿದ್ಧ ಸಾಧ್ಯ ಇಪ್ಪತ್ತು ನಾಲ್ಕು ಕೋಟಿ ಋಷಿ। ಗಳು ನೂರುಕೋಟಿ ಅಂತು ನೂರಾಮೂವತ್ತುಮೂರುಕೋಟಿ। ಮಿಳಿತ ವಾಯಿತು ಕೇಳಿ ಮಹಾತ್ಮರ ಲೀಲೆ। ಒಳಗೆ ಹೊರಗೆ ಭೂಮಂಡಲದಿ ತುಂಬಿದೆ। ನೆಲೆಯು ಬಲ್ಲವರಾರು ಅಚಿಂತ್ಯಾದ್ಭುತಶಕ್ತಿ। ಕೆಲಕಾಲ ಇವರಿಗೆ ವುಂಟು ಹರಿ ಕೃಪೆ। ಕಳಾಕಾಷ್ಟ ಮೊದಲಾದ ಕಾಲದೇಶ ಕರ್ಮಾ। ವಳಿಗುಣ ಭೂತ ಪಂಚಕ ದಶೇಂದ್ರಿಯ। ಬಲು ವೈರಾಗ್ಯ ಜ್ಞಾನ ಭಕುತಿ ಸಾಧನ ನಾನಾ। ಕುಲ ಯಾಗ ಯೋಗ ಭೋಗ ಭೋಜನಾಜನ। ಸಿಲಿ ನದಿ ಪರ್ವತ ದ್ವಿಸಪ್ತಾಂಬುಧಿ। ಪೊಳೆವ ಪಾತಾಳಾದಿ ಚತುರ್ದಶಭುವನ ಆಶಾ ರೂಪ ವಾಗ್ವಾದಿ ವ್ಯವಹಾರ ಶಾಮಲವರ್ನಾದಿ ರೂಪವ ದಿವ್ಯಾಕಾರಾ। ಪೊಳೆವ ಪೋತ ಯವ್ವನ ವೃದ್ಧಾಪ್ಯತನ। ಇಳಿಯೊಳು ಎಂಭತ್ತುನಾಲ್ಕು ಲಕ್ಷ ಜೀವ। ಫಲ ಮರ ಮೊದಲಾಗಿ ಮನುಷ್ಯಪರಿಯಂತ। ಮಳೆ ಬೆಳೆ ಥಳಿ ಮಿಂಚು ನಾನಾ ವಾದ್ಯಶಬ್ದ। ಸುಲಭ ವೇದ ಶಾಸ್ತ್ರ ಪುರಾಣ ಬಲು ವರ್ಣ। ಕಲಿಯುಗದೊಳಿದ್ದವೇನೇನು ಕ್ರಿಯಾದಿ। ಜಲಜಭವಾಂಡ ವಿರಾಟ್ರೂಪ ಖರ್ಪರ। ವಲಯಾಕಾರ ಸಪ್ತ ಪ್ರಕಾರ ತತ್ವವು। ಫಲ ಪರಮಾಣು ಲಿಂಗದೇಹದಲಿಯಿದ್ದ। ಕಳೆಸಹಿತವಾಗಿ ಸರ್ವದಾ ಸಮಸ್ತ। ಸ್ಥಳದಲ್ಲಿ ಪೊಂದಿದ ಅಭಿಮತದಿವಿಜರ। ಬಳಿವಿಡಿದು ಅವತಾರಗಳಾವೇಶ। ಗಳನು ಚಿಂತಿಸಿ ಓರ್ವೋರ್ವರ ಪ್ರತಾಪ। ವೊಲಿಮೆಯಿಂದಲಿ ತುತಿಸುತ್ತ ಹಿಗ್ಗುತ್ತ ಚಂ। ಚಲತನವನೆ ಬಿಟ್ಟು ಸರ್ವ ಏಕೀಭೂತ। ತಿಳಿದು ಆಮೇಲೆ ಉತ್ತಮರಾಧೀನ ಚಿಂತೆ। ನಲಿನಲಿದುಮಾಡು ಅವರವರಕೋಟಿಯು। ಸಲೆ ಮೂರು ಬಗೆಯಿಂದ ಈಪರಿ ಎಣಿಕಿಲೀ। ಹಲವು ಸ್ಥಾನಾಂತರ ಬರುತ ಸೂರ್ಯಮಂಡಲ। ದಲಿ ಯೋಚಿಸು ತದನಂತರದಲಿ ಈ। ಕಳೆವರ ಪಾಲಿಪ ದೇವತಿಗಳಪಾದ। ಜಲಜಕ್ಕೆ ಬಿನ್ನೈಸಿ ಜಿತ ಗದ್ದುಗೆ ನಿರಾ। ಕುಲನಾಗಿ ರೂಪ ರೂಪಾಂತರ ಕೂಡಿಸಿ। ವೊಲಿಸಿಕೋ ವೊಲಿಸಿಕೋ ವೊಲಿಸಿಕೋ ಇವರನ್ನ। ಥಳಥಳಾಯ ಮಾನ ಭೂಷಣ ವಸನ ಸೂ। ಎಳೆನಗೆ ಸರ್ವ ಲಕ್ಷಣೋಪೇತ ಸತಿ ಬಂಧು। ಬಳಗ ಪರಿವಾರ ಪರಿಪೂರ್ಣ

ಕಾಮರು । ಗೆಳಿಯರಾಗಿಪ್ಪರು ನಮಗೆ ನಿರಂತರ । ಅಳಲಿಕೆ ಬಳಲಿಕೆ ನಾನಾಶೋಕ ದುಃಖ । ಕಳೆದು ಕರುಣದಿಂದ ತಮಗಿಂದಧಿಕರ । ಒಳಗೆ ತೋರುವರಯ್ಯಾ ಧರ್ಮಮಾರ್ಗದಿಂದ । ಸುಳಿ ಸುಳಿದಾಡೋರು ಮನದಲ್ಲಿ ಮಾಣದೆ । ಬಲಗೊಳ್ಳಲಿಬೇಕು ಪ್ರಾಣಪರಿಯಂತ । ಫಲಗಳ ಬಯಸದೆ ಉಪಸಂಹಾರದಿಂದ । ಹೊಲಬು ತಪ್ಪದೆ ಸ್ವರ್ಗ ಸುಸ್ವರ್ಗದಂತೆವೊ । ಹೊಲೆಗೂಡು ಮೆಚ್ಚಿಸಿ ನಡೆಯದಿರು ಕೆಡದಿರು । ನಳಿನಳಿಸುವ ಬಿಂಬಾ ಬಿಂಬನ ಗುಣ । ಬಲು ರೂಪ ಕ್ರಿಯಾದಿ ಸರ್ವವು ಪರಿಪೂರ್ಣ । ಸ್ಥಳ ದೇಶ ಗುಣ ಕಾಲ ವ್ಯಾಪ್ತ ನಿಜೈಶ್ವರ್ಯ । ಸುಲಭಾ ಸುಲಭ ಅಣು ಮಹತ್ತು ರೂಪ ಹಂ । ಬಲಿಸು ಈಪರಿಯಿಂದ ಅತ್ಯಂತಾಭೇದವೊ । ನಳಿನನಾಭನ ಮೂರುತಿಯು ಈಕ್ಷಿಸೋದು । ಇಳಿಯೊಳು ಇನಿತು ಮಾಡಿದವನೆ ಧನ್ಯ । ಬಲಿ ಮಥನ ನಮ್ಮ ವಿಜಯ ವಿಠಲರೇಯ । ಕುಲಕೋಟಿ ಉದ್ಧಾರ ಮಾಡುವ ಪ್ರತಿದಿನ ॥೬॥

ಆದಿತಾಳ

ಎಲ್ಲೆಲ್ಲಿ ತತ್ತ್ವತನು ಧರಿಸಿದ ದೇವಾಂಶಿಗಳು । ಅಲ್ಲಿಗಲ್ಲಿ ಚಿಂತಿಸಿ ಅವ-ರವರ ನಿರ್ದೇಶವನು । ಮೆಲ್ಲಮೆಲ್ಲನೆ ತಿಳಿದು ಲಿಂಗಗಳು ರೂಪ । ಎಲ್ಲ ಉಪಸಂಹಾರದಿಂದ ವಾರಿಜ ಜಾಂಡ । ವೆಲ್ಲ ಏಕಾಕಾರಮಾಡಿ ಮಾಡುತ್ತ ಬಂದು । ಸಲ್ಲಲಿತ ದೇಹದಲ್ಲಿದ್ದವರ ಜ್ಞಾನ । ದಲ್ಲಿ ಕೂಡಿಸು ಮಹಾ ಯೋಗಾ ಭ್ಯಾಸದಿಂದ । ಬಲ್ಲವನಾಗು ಹೃತ್ಕಮಲ ಪರ್ಯಂತ । ಅಲ್ಲಿದ್ದ ಚೇತನಾ-ವರಣ ತ್ರಿಬಗೆಯಲ್ಲಿ । ಸಲ್ಲಿದವರನೋಡು ಕ್ರಮಾನುಸಾರದಿಂದ । ನಿಲ್ಲಿಸು ಹದಿನಾರು ಕಳೆಗಳು ವಿಧಾನದಲ್ಲಿ । ಗೆಲ್ಲುವೊಬ್ಬಾರೊಬ್ಬರನಮಾಡಿ ವಿಡಿದು ಮಾ । ವಲ್ಲಭ ಪರಿಯಂತ ಅಧೀನಾಧೀನ ನೆನೆದು । ಹೊಲ್ಲೆ ಚಿತ್ತ ಮಾಡದೆ ಹರುಷದಿಂದಲಿ ನಿತ್ಯ । ದಲ್ಲಿ ಈ ಪರಿ ಧ್ಯಾನಿಸು ಅಂಗ ಬದ್ಧ ಮಾರ್ಗ । ವಲ್ಲೆನೆಂದೆನದಿರು ಇದರೊಳಗವರ । ಸಲ್ಲುವಾಭಿಮಾನಿಗಳು ಶದ್ಧತರಾಗಿಹರು । ಎಲ್ಲರ ಕರುಣವಪಡೆದು ಭಕುತಿಯಿಂದ । ಇಲ್ಲಿ ನಲಿದ ವಾಯು ಪ್ರತೀಕಾ ಮಧ್ಯದಲ್ಲಿ । ವುಳ್ಳ ದೇವತೆಗಳನ ಸ್ಥಾನಸ್ಥಾದಲಿ ಇಟ್ಟು ಕಲ್ಲಣಗೊಳದಲೆ ಅಂತರ ಪೂಜೆಯ । ಒಳ್ಳಿತಾಗಿ ರಚಿಸು ಪ್ರಾರ್ಥನೆ ಪೂರ್ವಕ ಬಳ್ಳಿಯಕುಡಿ ಒಂದೊಂದು ದಿವಸಕ್ಕೆ ಬಿಡದೆ । ಪಲ್ಲೈಸಿದಂತೆ ಮನಸು

ಸಾಗಿ ಸಾಗಿಸಬೇಕು । ಸಲ್ಲದು ಸಲ್ಲದಯ್ಯಾ ಸುಮ್ಮನಿದ್ದಡೆ ಗತಿ । ಇಲ್ಲವೊ ಇಲ್ಲವೊ ಹರಿಗುರುಗಳ ಕೃಪೆ । ಎಳ್ಳನಿತಾದರೆ ಇದನೆ ಕೈಕೊಂಡರೆ । ಪೊಳ್ಳಾಗದು ಕಾಣೊ ಮಾಡಿದ ಸತ್ಕರ್ಮ । ಕ್ಷುಲ್ಲಕ ಬುದ್ಧಿ ಬಿಟ್ಟು ಚತುರ ತನದಿಂದಲಿ । ಬಲ್ಲಿದ ಜನರ ಪೊಲಿಸಿಕೊಂಡು ನಲಿದಾಡು । ಎಲ್ಲಿ ನಿನಗೆ ಇಷ್ಟವಾದ ಸ್ಥಾನದಲ್ಲಿ । ಎಲ್ಲ ಧ್ಯಾನವಮಾಡು ಸಾಧಿಸು ಹರಿಪಾದ । ಮಲ್ಲ ಮರ್ದನ ನಮ್ಮ ವಿಜಯ ವಿಠಲರೇಯ । ಚಿಲ್ಲರ ಸಂಗತಿ ಬಿಡಿಸಿ ಶುದ್ಧನಮಾಳ್ಪ ॥೭॥

ಜತೆ

ಒಂದಾರಂಭಿಸಿಕೊಂಡು ಹದಿನಾರು ಪರಿಯಂತ । ನಂದಾ ಧ್ಯಾನವ ಮಾಡು ವಿಜಯ ವಿಠಲ ಹರಿಯ ॥೮॥

ಸುಳಾದಿ ೨೩

ಸದಾ ಸ್ವಾಮಿಭೃತ್ಯನೆಂಬ ಭಾವದಿಂದ ತೃಣಾದಿ ಬ್ರಹ್ಮಾಂತ ಜ್ಞಾನ ಭಕ್ತಿ ವೈರಾಗ್ಯ ತಾರತಮ್ಯಜ್ಞಾನ ಸಂಪಾದನೆ, ಶ್ರೀ ಹರಿ ಅನಂತರೂಪದಿಂದ ಕಾರ್ಯ ಮಾಡುವಿಕೆ, ಬಿಂಬನಲ್ಲಿ ಶ್ವೇತದ್ವೀಪಗತನಾದ ಪರಮಾತ್ಮನ ಐಕ್ಯಚಿಂತನೆ, ಅಧ್ಯಾತ್ಮ ಷೋಡಶೋಪಚಾರ ಪೂಜೆ, ಅನಂತ ಜೀವ ಜಡಾಧಿಷ್ಠಾನಗತ ಶ್ರೀ ಹರಿಯ ಬಿಂಬೈಕ್ಯ ಪೂಜಾವಿಧಾನಾದಿ

ರಾಗ ಶಂಕರಾಭರಣ ಧ್ರುವತಾಳ

ಧ್ಯಾನವಮಾಡು ಮನವೆ ದೈನ್ಯವೃತ್ತಿಯಿಂದ । ನಾನೆಂಬೊ ಮಾತು ಮುಕ್ತಿಯೆಲ್ಲಿಪ್ಪದು । ಮಾಣಾದಿರೀ ಸೊಲ್ಲು ಸತ್ಯವೆ ಸಿದ್ಧ ದುರಾಭಿ। ಮಾನವಲ್ಲವು ಕಾಣೊ ಸ್ವರೂಪ ಭೂತಾ । ಈ ನುಡಿಯಲ್ಲದಿರೆ ಸೇವಕ ನೆಂಬೊ ನ್ಯಾಯ । ತಾನಿಲ್ಲದು ಕೇಳಿ ಸ್ವಾಮಿ ಭೃತ್ಯ । ಅನಂತ ಅನಂತ ಕಲ್ಪಕೆ ಇರಲಿ ಇರಲೇಬೇಕು । ವೇಣು ಪುಸಿಯಾದರೆ ಜೀವೇಶ್ವರ । ಏನೆಂಬೆ ಇದೆ ಇದೆ ಸಂಸಾರಾವಸ್ಥೆಯಲ್ಲಿ । ಜ್ಞಾನ ವೈರಾಗ್ಯ ಭಕ್ತಿ ಎರಡು ವಿಧವು । ಆ ನಳಿನ ಸಂಭವ ತೃಣಜೀವರತನಕ ನಿ । ದಾನದಿಂದಲಿವುಂಟು ತರತಮವು ಪ್ರಾಣ ಪ್ರಕೃತಿ ಪುರುಷ ಇವರಿಂದ ಈ ಜಗತ್ತು । ವೇಣಿಯುಂಪದಲಿ ಪ್ರವಾಹವಕ್ಕು । ಪ್ರಾಣ ತ್ರಿಬಗೆವುಂಟು ಜಾತಿಭೇದದಿಂದ । ಶ್ರೀ ನಾಥ ಅಭಿಮಾನಿ ಸಕಲಕ್ಕು ನಿತ್ಯ । ಇನಿತು ತಿಳಿವದು ಇಂದಿರಾದೇವಿಗೆ । ಜ್ಞಾನ

ಶರೀರವಹುದು ಶ್ರುತಿಸಿದ್ಧವೋ। ಪ್ರಾಣಿ ಮಾತುರಗಾಗೆ ಲಿಂಗದೇಹವೆ ಸಿದ್ಧ। ಅನಾದಿಯಿಂದಲಿಬಂದ ಪ್ರತಿಬಂಧಕ। ಏಣಿಸಿ ನೋಡುವದು ಅವರವರ ಯೋಗ್ಯತ। ಆನಂದ ಮಿಶ್ರದುಃಖ ಬಾಧ್ಯಕರೋ। ಧ್ಯಾನವ ಮಾಡು ಮನವೆ ಮನೋಹರದಿಂದ ಸಿ। ನೆನೆದು ಧನ್ಯನಾಗು ಪ್ರಥಮ ದಲ್ಲಿ ಸಿರಿ। ಪ್ರಾಣನಾಥನಾದ ನಾರೇಯಣನ। ನಾನಾವತಾರಾವೇಶ ಅಂಶ ಅಂಶಿ ಆಧಿ। ಷ್ಠಾನವನ್ನು ಚಿಂತಿಸು ಅಪ್ರಾಕೃತ। ಆ ನಖಾಂಗುಲಿಯು ರೇಖ ಪಾದ ಪರಡು ಜಂಘೆ। ಜಾನೂರು ಜಘನ ಕಟಿ ನಾಭಿ ಉದರ ಪಾರ್ಶ್ವ। ಪಾಣಿ ರೇಖೋಪರೇಖೆ ಹಸ್ತಾಂಗುಲಿಯು ನಖರ। ಗೇಣು ಗೋಕರ್ಣ ಪ್ರದೇಶ ತೋಳು। ಗೋಣು ಸ್ಕಂಧ ಬಾಹು ಉರ ಉದರ ತಳ ವದನ। ಆನನ ನಾಸಾಕ್ಷಿ ಶ್ರವಣ ಕದಪು। ವಾಣಿ ಕುಂತಳ ಪುಬ್ಬು ಓಷ್ಠ ದಂತಪಂಕ್ತಿ ಮೃದು। ವಾಣಿ ಮಂದಹಾಸ ನೋಟ ನಟನೆ। ಗಾನವ ಸೊಗಸಾದ ಶಾಂತ ಘೋಷಣೆ ಕೋಪ। ತ್ರಾಣ ಅಹಂಬುದ್ಧಿ ಚಿತ್ತ ಮನಸು ಪ್ರಾಣೇಂದ್ರಿಯಗಳೈಶ್ವರ್ಯ ಪ್ರಭೆ ತೇಜ ಶಕ್ತಿ ಕಾಂತಿ। ಜ್ಞಾನ ವೈರಾಗ್ಯ ಕರುಣ ವಿದ್ಯಾ ನಿದ್ರಾ। ಧ್ಯಾನ ಜಾಗರ ಶಬ್ದ ಸ್ಪರುಶ ರೂಪ ರಸ ಗಂ। ಧಾನುಲೇಪನ ಗಮನ ಕಾಲ ಶೌರ್ಯ ಧೈರ್ಯ। ಮೌನ ವಿಲಾಸ ಭೋಗ ನೀತಿ ನಿರ್ಣಯ ನಾಮ। ದಾನ ವ್ಯಾಪಾರ ಮತ್ತೆ ತನು ಶಿರೋರುಹ। ಏನೇನು ಇದ್ದವೆಲ್ಲ ಸರ್ವವು ಪರಿಪೂರ್ಣ। ಆನಂದಮಯವಯ್ಯಾ ಜ್ಞಾನ ಕಾರ್ಯ। ದೀನನಾಥ ಸಿರಿ ವಿಜಯವಿಠಲನಂಘ್ರಿ। ಧ್ಯಾನವಮಾಡುವದು ಈಪರಿಯಲಿಗ್ರಹಿಸೋ ॥೧॥

ಮಟ್ಟತಾಳ

ಜಡ ಜೀವ ವಿಧಿ ಸಿರಿ ರೂಪಗಳಾನಂತಾ। ಬಿಡದೆ ಯಿಪ್ಪದು ನೋಡಿ ಬಲು ಪರಿ ಯಿಂದಲಿ। ಕಡಲ ಶಯನ ಹರಿಯ ರೂಪಗಳಾನಂತ। ಅಡಿ ಗಡಿಗೆ ಉಂಟು ದ್ರವ್ಯ ಪೂರುತಿಯಾಗಿ। ಪಡಿಯಿಲ್ಲದೆ ಜಗದೊಳು ತುಂಬಿ ಕೊಂಡಿಹವಯ್ಯಾ। ತಡಿಯದೆ ದೇವನ್ನ ಮಹಿಮೆಯನ್ನು ತಿಳಿ। ಕೊಡು ವನು ಪದದಿಂದ ನೋಡುವ ಕರದಿಂದ। ಪಿಡಿಯುವನು ಕಿವಿಯಿಂದ ಕೇಳುದ ಕಣ್ಣಿನಿಂದ। ನಡುವನು ಮೂಗಿನಿಂದ ಓಡುವ ಜಿಹ್ವೆಯಿಂದ। ನುಡಿವನು ಬೆನ್ನಿಂದ ಹಾರುವ ಮುಖದಿಂದ। ಬಿದು ಬಿಡು ಇದು ಯಾತರ

ಮಾತೆ ಪೇಳಲಿ ಸಲ್ಲ। ನುಡಿ ಮೊದಲಾದ ವ್ಯಾಪಾರಂಗಳ। ಸಡಗರದಲಿ ಸ್ವಾಮಿ ಯುಗಪದಿಮಾಡುವನು। ಕಡೆಗೆ ಅಣುವಾಗಿ ಅನಂತ ಬ್ರಹ್ಮಾಂಡ। ಒಡಲೊಳಿಟ್ಟುಕೊಂಬ ಪ್ರಯಾಸವಿಲ್ಲದೆ। ಜಡಜ ಸಂಭವ ಮಿಕ್ಕ ಸರ್ವ ಜೀವಿಗಳ ಪೊಂದೆ। ಡೆಯುಲಿ ಮೇರುವಿಗೆ ಸಣ್ಣ ಇರುವಿನಂತೆ। ಉಡಿದು ಬೀಳದೆ ನೋಡಿ ಕಡುಸಾಹಸವಲ್ಲ। ಅಡಿ ಶಿರ ಮೇಲಾಗಿ ನಾನಾಪರಿ ಸಂ। ಗಡಲೆ ದೇಶಕಾಲ ವ್ಯವಧಾನಗಳಾಗ। ನೋಡದೆ ಪೂರ್ಣವಾಗಿ ಸರ್ವಸ್ವತಂತ್ರದಲಿ। ಒಡನೊಡನಿರುತಿಪ್ಪ ಕಾಣಿಸಿಕೊಳದಿಪ್ಪ। ಜಡದಂತೆ ಯಿಪ್ಪ ಚೇತನದಂತಿಪ್ಪ। ತೊಡರು ಯಿಲ್ಲದೆ ಮಹಾಮಹಚೇತನವಾಗಿಪ್ಪ ಕುಡಿ ವ್ಯಾಳಿಗೆ (ವೇಳೆಗೆ) ನಿತ್ಯ ಮಹಾ ಮಹತ್ತಾಗಿ। ಅಡಗಿಪ್ಪನು ಬಹು ದೇವತಿಗಳ ಸಹಿತ। ಗಿಡ ಫಲ ಮರ ಬಳ್ಳಿ ನಾನಾವೇಷವಧರಿಸಿ। ಮಡದಿ ಯರ ಬೆರಸಿ ಸರಸವಾಡುವಮೂರ್ತಿ। ಬಡವನಲ್ಲವಕಾಣೊ। ಮಾಡಿದದೇ ಮಾಟಾ ಭಳಿರೆ ಭಳಿರೆರಾಯಾ। ಪೂತುರೆ ಪೂತುರೆ ಜಯ ಜಯ ಜಗ ಜ್ಯೋತಿ। ನಮೊ ನಮೊ ಅನಿಮಿತ್ಯ ತ್ರಾಹಿ ತ್ರಾಹಿ ಕರುಣ। ಪಾಹಿ ಪಾಹಿ ಫಲದಾ ಅಹೊ ಅದುಭೂತನೆ। ಅತಿ ವೈಚಿತ್ರಕನೆ ಅರೆರೆ ಪರಮ ಸುಹೃತು ಅಚ್ಚರ್ಯ ಕಾರ್ಯ ಅಲೌಕೀಕ ವಸ್ತು। ಬಹು ವೈಲಕ್ಷಣ್ಯ ಒಂದು ಮೊದಲುಮಾಡಿ। ಅನಂತ ಪರಿಯಂತ ಶಿಖನಖಸಮಸ್ತವುಳ್ಳ। ಉದಧಿ ಶಯನ ಇಂತು ನಲಿವ ಜಾಣ। ಸ್ವಲ್ಪಾಕಾಶದಲ್ಲಿ ನಿಂತು ಭಕ್ತರ ಕೈಯಲಿ ಪೂಜೆಕೊಂಬ ರಾಜ। ಕೊಡುವ ಬೇಡಿದ ವರವ ವಿಜಯವಿಠಲರೇಯನ। ಅಡಿಗಳ ಕೊಂಡಾಡಿ ಮನ ಮುಟ್ಟಿ ನೋಡಿ ॥೨॥

ತ್ರಿವಿಡಿತಾಳ

ನಿನ್ನ ಬಿಂಬನ ಸ್ಮರಿಸಿ ಇದೆ ಇದೆ ಅನಂತ। ಚಿನ್ಮಯರೂಪಗಳು ಸಿದ್ಧವೆಂದು। ಭಿನ್ನ ಜೀವರೊಳು ಯಿದ್ದ ಮೂರ್ತಿಗಳಲ್ಲಿ। ಚನ್ನಾಗಿ ನಿನ್ನ ಬಿಂಬನ ಅಂಶವ। ಮುನ್ನೀಗ ಪೊಗಿಸಿ ಏಕೀಭೂತವನೆನೆದು। ಸನ್ನುತಿಸಿ ತಿರಿಗಿ ಭಿನ್ನರ ಮಧ್ಯದಲಿ। ಮನ್ನಣೆಗೊಳುತಿಪ್ಪ ಅಗ್ರೇಶರೊಳಗೆ ಸಂ। ಪೂರ್ಣವಾಗಿದ್ದ ಅಂಶಗಳ ತೆಗೆದು। ನಿನ್ನ ಬಿಂಬನಕೂಡ ಕೂಡಿಸಿಕೊಂಡು ಸಂ। ಪನ್ನ ಭಕುತಿಯಿಂದ ಪೂಜೆಮಾಡೊ। ಇನ್ನು ಈ ಮಾತಿಗೆ ಸಂಶಯ ಬಡ ಸಲ್ಲ। ಗಣ್ಯ ಇಲ್ಲದೆ ಮನಸು ಮಾಡಲ್ಯಾಕೆ। ತನ್ನೊಳು ತಾನೆವೇ

ತಿಳಿದು ಈಪರಿಭಕುತಿ । ಯನ್ನುಮಾಡು ಸರ್ವ ಸ್ಥಾನದಲ್ಲಿ । ಸ್ತನ್ಯ ಪಾನದಿ ಹತ್ತ ದೆಂಬೊದಿದ್ದರೆ । ಪುಣ್ಯವೆ ಸಂಪಾದಿಸು ಅತಿ ತೀವರ । ಕಣ್ಣಿಗೆ ಕಾಂಬುವದಲ್ಲ ಅಂತರಂಗದಪೂಜೆ । ಘನ್ನ ಸುಲಭವೆನ್ನು ಸುಲಭ ವಿದ್ಯಾ ಪುನ್ನಾಡಿಯೊಳು ಇದು ರಚಿಸಬೇಕು । ಅನುಗುಣ್ಯವಾದ ತತ್ವೇಶರನೆನೆದು । ಚನ್ನಾಗಿ ಕೇಶವಗೆ ಪೂಜಾ ಭಾಗಿಗಳೆಂದು । ಅನ್ನೋದಕ ಅಭಿಮಾನಿ ಜನರಾ । ಇನ್ನಿತು ನಮಿಸಿ (ನೇಮಿಸಿ) ಆತ್ಮನ್ನ ಅರ್ಚನೆ । ಬಿನ್ನಣದಲಿ ಮಾಡು ಧೃಡತರದಲ್ಲಿ । ಬಣ್ಣ ಬಣ್ಣದವರ್ಣ ಯಿದ್ದಂತೆ ಕಲ್ಪಿಸಿ । ಬಣ್ಣಿಸು ವದು ಹರಿಯ ಮುಂಭಾಗದಿ । ಮುನ್ನ ಮನು ಸನಕಾದಿ ದೇವತಿಗಳು ಅಬ್ಧಿ । ಕನ್ಯ ಇದನೆಮಾಡಿ ಸುಖಿಸುವರು । ನಿನ್ನ ಯೋಗ್ಯತದಷ್ಟು ಮರತು ಬಿಡುವದಲ್ಲ । ಭಿನ್ನವಾದರು ಹರಿಯ ಮೆಚ್ಚಿಸಬೇಕು । ಅನ್ಯಥಾ ಉಪಾಯವು ಮತ್ತೊಂದುಯಿಲ್ಲ ಪ್ರ । ಸನ್ನನಾಗುವ ಹರಿ ಪೊಳಗೆ ಪೊಳೆದು ಉನ್ನತವಾಗಿ ಮಾಣಿಕ ಕನಕಕೋಟಿ । ಕನ್ಯಾದಾನ ವಸ್ತ್ರಾಗ್ರಹಾರಾವು ಅಶ್ವ ಹಿ । ರಣ್ಯಗರ್ಭ ಕ್ಷೇತ್ರ ಮಿಕ್ಕಾದ । ಸನ್ಯಾಸ ಮೊದಲಾದ ವರಣಾ- ಶ್ರಮ । ನಾನಾರಣ್ಯ ವೇದಾದಿಗಳು ಪೊಲಿಸಿದರಾಗೆ । ಧನ್ಯನಾಗನು ಕಾಣೊ ಹರುಷತೀರಿದಮೇಲೆ । ಬನ್ನಬಡಲುಬೇಕು ವಿಮುಖನಾಗಿ ಘನ್ನಪಾತಕವಲ್ಲದೆ ನೆಲೆಯಿಲ್ಲ ಗತಿಯಿಲ್ಲ । ಶೂನ್ಯನಾಗುವ ಅವನು ಜ್ಞಾನದಿಂದ । ಮನ್ಯುವಿನಾಶ ನಮ್ಮ ವಿಜಯವಿಠಲ । ಕಾರುಣ್ಯಮೂರ್ತಿಯ ರೂಪ ಗುಣ ಕ್ರೀಯ ಯೋಚಿಸು ॥೩॥

ಝಂಪೆತಾಳ

ಈಸರಿ ನಿನ್ನ ಮೂರ್ತಿಯೊಳಗೆ ಸರ್ವ । ರೂಪಾತ್ಮಕ ಹರಿ ಮೂರ್ತಿಯ ಸುಂದರ । ಆಪಾದ ಮೌಳಿ ಮಸ್ತಕ ಪರಿಯಂತರ । ಆಪಾರ ಮಹಿಮ ಅದುಭೂತ ಶಕ್ತಾ ಒಲು । ಶ್ವೇತದ್ವೀಪ ನಿವಾಸ ನಿತ್ಯ ಕಲ್ಯಾಣ ಗುಣ ನಿ । ಲೋಕಾಭಿಮಾನಿಯು ಸುಪ್ತಿ ಪ್ರೇರಕ ಕರು । ಣಾಪಯೋನಿಧಿ ಎಂದು ಸ್ತುತಿಸಿ ಎಂದಿಗೆ ನಿನ್ನ । ಆಪನ್ನ ನಾನೆಂದು ಇದಕೆ ಪ್ರೇರಕನೆಂದು । ಆಪತ್ತು ನಾಶವಾಗುವದಕೆ ಇದೆ । ಪ್ರಾಪ್ಯವಾಗದಲೇವೆ ಏನು ಫಲವಿಲ್ಲ । ಶ್ರೀಪತಿ ಸುರಪತಿ ಜಗಪತಿ ಯುಗಪತಿ । ತಾಪಸಪತಿ ಯಜ್ಞಪತಿ ಮುಕ್ತಪತಿ ಗೋಪತಿ ಗುಣಪತಿ ವೇದಪತಿ ಗಗನಪತಿ । ಚಾಪ ಸುದರುಶನ ದರಗದಾ

ಪದುಮ ಸ। ಲ್ಲಾಪ ಚರ್ಮ ಖಡ್ಗ ಶರ ಮಿಕ್ಕಾದಾಯುಧ। ದೀಪ ಪ್ರಭೆ ಸೋಲಿಪ ಕಾಂತಿಮಿಗೆ। ಭೂಪಾರ ತುಂಬಿದೆ ಬುಧ ಜನ ಪ್ರೀಯನ। ತಾಪ ಭಂಜನಗೆ ಷೋಡಶದಶ ಪೂಜೆಯು। ವ್ಯಾಪ್ತುತ ತಿಳಿ ಒಂದರಿಂದ ಸರ್ವಕ್ಕೆ ಆಪಾರ್ಥ ಪಾರ್ಥಿವ ಲಿಂಗದತಲಿಮೇಲೆ। ತಾಪುಷ್ಪ ಭಕುತಿಯಿಂದಲಿ ಬಿಸ್ಸು ವ್ಯಾಧ। ರೂಪನಾಗಿದ್ದವನ ಗೆಲುವೆನೆಂದ. ಸಂ; ತಾಪದಿಂದಿಲಿ ಶಶಿ ಆತನ್ನ ಶಿರದಲ್ಲಿ। ಈ ಪುಷ್ಪ ಕಂಡೆನೆಂಬೋದೇನು ಪುಸಿಯೇನು। ಗೋಪತಿ ಕೇತಕಿ ಈಪರಿ ಇರಲಿಕ್ಕೆ। ಆ ಪರನಾತ್ಮಗೆ ಇಪ್ಪದರಿಂದೆ(ಇಪ್ಪದು ಅರಿದೆ)। ನೀ ಪರಮ ಭಕುತಿಯಿಂದಲಿ ಅಂತರಂಗದ। ಸೋಪಾನಮಾಡುವದು ವೈಕುಂಠಕ್ಕೆ। ಗೋಪಾಲ ವಿಜಯವಿಠ್ಠಲರೇಯನ ನಿತ್ಯ। ವ್ಯಾಪಾರವನೆ ನೆನೆಯೊ ಗುಣರೂಪಕ್ರಿಯುಗಳೊಮ್ಮೆ ॥೪॥

ರೂಪಕತಾಳ

ಮೇರು ಮಹಾಸಿಂಹಾಸನ ಧಾರುಣಿ ಮಂಟಪ। ತೋರಣ ಮಕರ ಮಹಾಲಕುಮಿಯನ್ನು ಕುದುರೆ। ಮೋರೆ ಎರಡು ತಥಾಸ್ತು ಎಂಬವ ರಯ್ಯಾ। ಚಾರು ಮಂದಿರ ವಾಸ್ತುದೇವತೆಗಳು ರಜತ ಭಂ। ಗಾರ ಚಂದ್ರ ಭಾಸ್ಕರರಾಗಿಪ್ಪರು। ಹೀರಾ ಮೊದಲಾದ ಮಣಿಗಳಿಗೆ ಹಿಮವಂತ। ವಾರಿಧಿ ಯಾಗಿಪ್ಪ ಸುತ್ತ ರಂಜಿಸುತಲಿ। ವಾರುಣಿಪತಿ ಹಾಸುಗೆ ನಿನ್ನಿಂದಲಿ। ಆರಾಧನೆಗೊಂಬ ವಿಗ್ರಹವನೆ ನಿಲ್ಲಿಸಿ। ದ್ವಾರಪಾಲಕರನ್ನು ಪೆಸಗೊಂಡು ಜಯಾದಿಗಳ। ಮೂರೊಂದು ಬಾಗಿಲಲ್ಲಿ ತಿಳಿದು ಕೊಂಡಾಡುವದು। ಹಾರೈಸು ಧ್ಯಾನ ಮೊದಲಾದ ಬಗೆಯನ್ನು। ಮೂರು ಮೂರುತಿಗಳ ಕೂಡಿಸು ಅಭೇದ। ಕಾರಣವನು ನೋಡಿ ಪೂಜಾಸಾಧನವೆಲ್ಲ। ವಾರಿಜ ಮೊದಲಾದ ದ್ರವ್ಯಗಳ ಚಿಂತಿಸಿ। ಜೇರೆ ಬೇರೆಯೊಬ್ಬ ದೇವತಿಗಳು ಸಿದ್ಧ। ತಾರತಮ್ಯವೆ ಉಂಟು ಕೇಳು ಗ್ರಹಸ್ಥನಲಿ। ವಾರಿಜಭವನೇವೆ ಪ್ರಧಾನ ಅರ್ಚಕನು। ಈ ರೀತಿಯುಲ್ಲದೆ ಇನ್ನೊಂದುಪಾಯುವೇ। ಚಾರು ಚರಿತ ನಮ್ಮ ವಿಜಯ ವಿಠಲರೇಯನ। ಆರೆರಡು ಕರ್ತೃತ್ವ ತಿಳಿದು ನಿನ್ನೊಳುಹಿಗ್ಗು ॥೫॥

ಧ್ರುವತಾಳ

ತರಣಿ ಚಂದ್ರಾಗ್ನಿ ಮೂರು ದೀಪಗಳನೆಮಾಡು। ಗರುಡನ ಘಂಟೆ ಯನ್ನು ನಾದಶೇಷ। ಸರುವ ವೃಷಕಂಣೆ ಭೂದೇವಿಯನ್ನೆಮಾಡು।

ವರಮಹಾಲಕುಮಿ ಅನಿರುದ್ಧನೆನ್ನು । ಸುರ ತರಂಗಿಣಿ ಗಂಗೆ ಉದಕ ಸ್ನಾನಕ್ಕೆ। ವರುಣನ್ನ ಕೂಡಿಕೊಂಡು ಸಕಲ ಜಲವು। ಪುರಹರ ಕಲಶ ಪಾತ್ರೆಯಾಗುವನೆನ್ನು ಖಗೇ। ಶ್ವರನು ಪೀತಾಂಬರ ರೂಪನಹ। ಪರ ಮೇಷ್ಟಿ ಕೌಸ್ತುಭಮಣಿಯನ್ನು ವನಮಾಲೆ । ಧರಣಿದೇವಿಯೆ ಸಿದ್ಧ ಯಾವಾಗಲೂ। ಉರಗೇಂದ್ರ ಕುಂಡಲದ್ವಯನಾಗಿ ಕರ್ಣದಲಿ । ವರ ಮುಕುಟ ಸಿರಿದೇವಿ ಪ್ರಕಾಶಪ್ಪೋ। ಸುರಪತಿ ಮೊದಲಾದ ತಾತ್ವಿಕಜನರು ಆ। ಭರಣವಾಗಿಪ್ಪರು ಪರಿಪರಿಯಿಂದ। ಅರಿ ಶಂಖ ಗದೆ ಪದುಮ ಮಿಕ್ಕಾದ ಆಯುಧಗಳು। ಸ್ಮರಾನಿರುದ್ಧ ವಾಯು ಲಕುಮಿದೇವಿ। ನಿರೀಕ್ಷಿಸು ಇದರಂತೆ ಅಲ್ಲಿಗಲ್ಲಿ ಚಿಂತಿಸು। ಪರಮ ಪುರುಷ ಹರಿಯ ಆರಾಧನೆ । ಶರೀರದೊಳಗೆಮಾಡು ಜ್ಞಾನಾಂಕುರದಿಂದ। ಮುರಳಿ ಮುರಳಿ ಗುಣಿಸು ಶುಭ ಮಾರ್ಗದಿ। ಕರಿ ಭಯಹರ ನಮ್ಮ ವಿಜಯವಿಠಲರೇಯನ। ಸ್ಮರಿಸಿ ಚನ್ನಾಗಿ ಆತನ ಧ್ಯಾನಮಾಡು ॥೬॥

ಝಂಪೆತಾಳ

ಮರುತ ಚೂಡಾರತುನಾ ಗೋಪಿಚಂದನ ಕಾಮ। ಚರಣದಲಿ ಯಿದ್ದ ಪಾದುಕ ಗರುಡನು। ಸಿರಿ ತುಲಸಿ ಗಂಧ ಪರಿಮಳ ಪುಷ್ಪಧೂಪಗಳು ವರ ಲಕುಮಿ ಕಾಮ ಅಜ ರುದ್ರ ನೈರುತ್ಯ। ಭರದಿಂದ ಪಾವಕನೆ ಏಕಾ- ರುತಿಯಾಹ। ಉರಗ ವರ್ತಿ ತೈಲವೆ ವರುಣದೇವನು। ಹರಿಣಾಂಕ ಅನ್ನ ನಾಗುವ ದೇವಗೆ। ಪರಮಾನ್ನವಾಗುವಳ ಭಾರತಿ ಭಕ್ಷ್ಯರೂಪ। ತರಣಿ ಯಾದನು ಲಕ್ಷ್ಮೀಘೃತವಾದಳು । ಸಂಸ್ಪೃತಿದೇವಿಯೇಕ್ಷೀರ ಮಂಡಿಗೆ ಬ್ರಹ್ಮ। ಮರುತ ನವನೀತ ಮೊಸರು ಚಂದ್ರನು। ಗರುಡದೇವರೆ ಸೂಪ ದಾಕಾರವಾದನು। ಪರಿಶುದ್ಧ ಪತ್ರ ಶಾಖವೆನ್ನು ಮಿತ್ರ। ಮಿರಗುವ ಫಲ ಶಾಕ ಶೇಷದೇವರೆ ನಿಜವು। ಗಿರಿಜೆಯಾಮ್ಲ ರೂಪಳಾದಳದಕೋ। ಪುರ ಹರನೆ ಆನಾಮ್ಲ ಸಕ್ಕರಿ ಬೆಲ್ಲವೆ ಇಂದ್ರ। ಪರಮೇಷ್ಟಿಯುಪಸ್ಕಾರ ರೂಪ ನಾದಾ । ತರಣಿಸುತ ಕಟುದ್ರವ್ಯವಾದ ರಾಮಠ ಏಲ। ಸ್ಮರನೇ ತಾನಾದ ತವಕದಿಂದಲಿ। ಪುರುಹೂತ ತನುಜ ಜಯಂತ ತೈಲಪಕ್ವ। ಶರೀರವನೆ ಧರಿಸಿದ ಹರಿಯಾಜ್ಞದಿ। ಸರಸಿಜಭವಸುತರು ಮನು ದಕ್ಷ ಪ್ರಜೇ। ಶ್ವರನು ಮಂಡಿಗೆ ಮಾಷ ಭಕ್ಷ್ಯವಾದರು ಹರಿ ಸೇವಿಗೆ। ನಿರಋತಿ

ಲವಣ ಲವಣಶಾಖವೆ ಪ್ರಾಣ। ಇರುತಿಪ್ಪ ತಾಂಬೂಲ ಸುರ ಗಂಗೆಯು। ಪರಿಮಳ ಸ್ವಾದೋದಕ ಬುಧ ದೇವನಾಗುವ ಚಿ। ತ್ತರದಿಂದ ನೈವೇದ್ಯ ಸಮರ್ಪಿಸು। ಕರುಣಾಕರ ನಮ್ಮ ವಿಜಯವಿಠಲರೇಯ। ಶರಣು ಜನರಿಂದ ಈಪರಿ ಕೈಕೊಂಬ ॥೭॥

ಅಟ್ಟತಾಳ

ಇಂತು ನೈವೇದ್ಯ ತಾತ್ವಿಕಜನರೆಲ್ಲ ನಿ। ರಂತರ ತದಾಕಾರ ತನ್ನಾ-ಮಕರಾಗಿ। ಅಂತರಂಗದಲ್ಲಿ ಜನ್ಯರಾಗುವರಯ್ಯಾ। ಎಂತು ಪೇಳು ಇವರ ಅಷ್ಟಾಂಗಯೋಗ। ಚಿಂತಿಸಿದಂತೆ ಕಾಯವ ಧರಿಸುವರು। ಸಂತರಿಗೆ ಫಲ ಪ್ರಾಪ್ತಿ ಐದಿಸುತ್ತ। ಕಂತುಪಿತನಸೇವೆಮಾಳ್ಪರು ಸರ್ವದಾ। ನಿಂತಿಹರು ಹಸ್ತವ ಜೋಡಿಸಿಕೊಂಡು। ಭ್ರಾಂತಿಗೊಳಗಾಗದೆ ಸಂತಸದಿ ಮನಸಾ। ಚಿಂತೆಯಮಾಡೊ ನಿರ್ಮಾಣವಗೈದು। ದಂತಿ ಮೊದಲಾದ ಚೇತನ ಜಡಾನೇಕ। ಅಂತರಂಗದಲಿ ತತ್ವಜನರು ಜನರು ಭಗ। ವಂತನು ಇಪ್ಪನೊ ವೇದ ಪ್ರಮಾಣವು। ತಂತ್ರವುಳ್ಳವನಾಗು ನಿನ್ನೊಳು ಅರ್ಚನೇ। ಕಾಂತದಿ ಧ್ಯಾನಿಸು ಪೊಂದೆಶಿಯಲಿ ಇದ। ರಂತೆ ಸಮಸ್ತವು ತಿಳಿದು ಪಾಡಲು ಅ। ನಂತ ಜೀವರ ಬಿಂಬಾನಂತವಾನಂತಮತ್ತಾನಂತನಂತ। ಅಂತುಗಾಣದೆ ಭಗವದ್ರೂಪಂಗಳು। ನಿಂತು ಕುಳಿತು ಮಲಗಿ ಪೋಗುತ್ತಿಪ್ಪವು। ಪಿಂತೆ ಪೇಳಿದ ಮಾತು ಅನುಭವಕೆ ಆ। ದ್ಯಂತ ತಂದುಕೊಂಡು ಸುಖಿಸು ಅರ್ಪಿತವೆಂದು। ಮುಂತಿನ ಬಲು ಜನ್ಮಕ್ಕೆ ಸಾಧನವೆನ್ನು। ನಿಂತಲ್ಲಿ ಕುಳಿತಲ್ಲಿ ಆವಾವ ಪ್ರಯೋಜನ। ಸಂತತಮಾಡುವ ಸಮಯಾನುಸಾರದಿ। ನಂತೆಯೊಳಗೆಪೋಗಿ ವಾನವ ತಿರುಗಾಡಿ। ದಂತೆ ಕಾಣೆಲೊ ಜೀವಿ ಈ ಬಗೆ ವಿಚಾರ। ಚಿಂತೆ ಮೆಲ್ಲ ಮೆಲ್ಲನೆ ಕ್ರಮಾನುಸಾರ। ಎಂಥವನಾದರೆ ಇದನೆ ಕೈಕೊಂಡರೆ। ಸಂತತಿ ಸಮೇತ ಮೋಕ್ಷಕ್ಕೆ ಸಾರುವ। ಚಿಂತಾಮಣಿಯೇ ನಮ್ಮ ವಿಜಯವಿಠಲರೇಯ। ಸಂತಾಪಹರಿಸುವ ತನ್ನ ಧ್ಯಾನವನಿತ್ತು ॥೮॥

ಆದಿತಾಳ

ಸಕಲ ತಾತ್ವಿಕಜನ ಮನಸು ಸಹಿತದೇವ। ಅಕಳಂಕರಾಗಿ ಪುಟ್ಟಿದರೆಂಬು ವೈಕಾ। ರಿಕದಿಂದಲಿ ಸಿದ್ಧ ಇದರಲ್ಲಿ ಸರ್ವ ತಾ। ತ್ವಿಕರುಂಟು ಇವರನ್ನೆ ಧ್ಯಾನವಮಾಡಿದರೆ। ವ್ಯಕುತವಾಗುವರಯ್ಯಾ ಆವಾವ ಪದಾರ್ಥ

ನಿಕರದಂತೆ ಸತ್ಯ ಯೋಗ ಮಾಯಾದಿಂದ। ಭಕುತಿಮಾತ್ರಬೇಕು ಇದು ಒಂದೆ ಸಾಧನ (ಉಪಾಯ)। ಮುಕುತಿವಂತರಿಗೆಲ್ಲ ಪೂಜಾಸಾಧನ ಭೇದ ಯುಕುತಿಯಿಂದಲಿ ಯಿಂಥ ಅನುಸಂಧಾನರೂಪದಲಿ। ಯುಕುತಿಯ ನಡೆ ಪದು ಅಪರೋಕ್ಷಬೇಕಾದರೆ। ಭಕುತಿ ಮೊದಲಾದ ಆವಾವ ಕ್ರೀಯವೆಲ್ಲ। ಕಕುಲಾತಿಯಿಂದ ಮರೆದು ಜನನವಾಗುವದಲ್ಲ। ಹಕಲ ಮಾನವರಿಗೆ ಇದು ದೊರಕುವದೇನೋ। ಸುಖಸಾರ ವೀರ್ಯ ನಮ್ಮ ವಿಜಯವಿಠಲರೇಯ ವಿಕಳ ಮತಿಯ ಬಿಡಿಸಿ ತನ್ನ ಲೋಕವಕೊಡುವಾ ॥೯॥

ಜತೆ

ಜಡ ಜೀವಾನಂತ ದಿಷ್ಠಾನದಲ್ಲಿ ನಿತ್ಯ। ಬಿಡದಿರು ವಿಜಯವಿಠ್ಠಲನ ಅರ್ಚನೆ ಬಹು ॥೧೦॥

ಸುಳಾದಿ ೨೪

ಅಧ್ಯಾತ್ಮ ಉಪಾಸನೆ, ಸ್ವದೇಹದಲ್ಲಿಪ್ಪ ಪಂಚಭೌತಿಕತತ್ವ, ತತ್ವಪತಿ ತನ್ನಿಯಾಮಕ ರೂಪ, ಅಂತಃ ಬಹಿರ್ಬ್ರಹ್ಮಾಂಡದಿ ಕ್ರಮವಾಗಿಪ್ಪ ಪಂಚಭೂತಗಳಲ್ಲಿಪ್ಪ ಹರಿಯ ಒಡಗೂಡಿದನ್ನು ಬಿಂಬೈಕ್ಯಚಿಂತನೆ, ಅರ್ಚನೆ ವಿಸ್ತಾರ ಕ್ರಮ

ರಾಗ ಸಾವೇರಿ ಧ್ರುವತಾಳ

ಅರ್ಚಾ ಅರ್ಚನೆಮಾಡು ಅಧಿಕಾರಭೇದದಿಂದ। ನಿಚ್ಚ ವರ್ಜಿತ ಕಾಮನಾಗಿ ಬಾಗಿ। ಅಚ್ಯುತ ದೈವವೆಂದು ಅಲ್ಹಾದದಿಂದ ಸದಾ। ಸಚ್ಚಿದಾನಂದಾತ್ಮಾದಿ ಗುಣಗಳಿಂದ। ಮೆಚ್ಚಿಸು ಮನಸು ಪೂರ್ವಕದಿಂದ। ಯೋಗ್ಯತಾದನಿತು। ಮೆಚ್ಚಿಸು ಹರಿಯ ವೊಳಗೆ ಹೊರಗೆ ತಿಳಿದು। ಸಚ್ಚಿದಾನಂದಾದಿಗಳ ಗುಣಗಳಿಂದ ಧ್ಯಾನಗೈದು। ಎಚ್ಚರನಾಗು ನಿನ್ನ ಯೋಗ್ಯತಾದನಿತು। ನೆಚ್ಚಿದವರ ಪ್ರಾಣ ಪ್ರಕೃತಿ ರಮಣ ಹರಿ। ಸುಚ್ಚರಿತ್ರನು ಕಾಣೋ ತನ್ನ ತೋರಿ। ಅರ್ಚರಾದಿ ಲೋಕ ಯ್ಯೆದಿಸಿ ತಾತ್ವಿಕರ। ಹೆಚ್ಚು ಹೆಚ್ಚಾಗಿ ವೊಳಗೆ ಪೊಳೆವದ್ವಿವಿಧ। ಅಚ್ಯುತಾನಂತ ರೂಪಗಳಾನಂತ ನಿಚ್ಚಳವಾಗಿವೆ ನೋಡಿದಲ್ಲಿ। ಒಚ್ಚಿಡತಕ್ಕದ್ದು ಈ ಪ್ರಮೇಯ ಕಂಡಲ್ಲಿ। ಬಿಚ್ಚುವದಲ್ಲ ಬೀದಿ ಬೀದಿ ತಿರುಗಿ। ಉಚ್ಚಟ ಜ್ಞಾನಿಗಳಿಗೆ ಕೇಳಿದಾಕ್ಷಣ ಬೆಲ್ಲ। ದಚ್ಚಾಗಿ ಯಿಪ್ಪದು ಸವಿದೋರುತ। ಸುಚಿತ್ತದಲ್ಲಿ ನಿತ್ಯ ವಿಚಾರಿಸಿ ಕೊಳುತ। ಚಚ್ಚರದಲ್ಲಿ ಗುಣವಂತರಹರೋ। ಕೊಚ್ಚಿ ಪೋಗುವದಘ

ಘೋರ ದೈತ್ಯರಿಗೆದಿ । ಗಿಚ್ಚಾಗಿ ಯಿಪ್ಪೊದು ಸರ್ವಕಾಲಾ। ಹುಚ್ಚು ಹುರುಳು ಮಾತಿನಿಂದ ಫಲವಿಲ್ಲಾ । ಮುಚ್ಚು ಬಾಗಿಣದಂತೆ ಸುಕೃತ ವುಂಟು । ಇಚ್ಚಕನಾಗು ಹರಿದಾಸರಲ್ಲಿ । ಎಚ್ಚ ಸುಖ ಬರುವದು ವರ್ಣಾಶ್ರಮ ಧರ್ಮ। ಸಚ್ಚರಾಚರದೊಳು ಲೇಶ ಮಾಡೆ। ವೆಚ್ಚವಾಗದು ಕಾಣೋ ಒಂದಾನಂತಾ । ಚೊಚ್ಚಲ ಮಗನಂತೆ ಪಾಲಿಸುತಿಹರು । ಪಚ್ಚದಮಣಿಗೆ ಸರಿಯೆ ಗಾಜು ಮಣಿಹಾರ। ಹಚ್ಚಿದ ಕಾಲಕ್ಕೆ ಶೋಭಿಸು ವದೇ । ನುಚ್ಚುಗಳ್ಳ ದೇವರ ಎಂತ ಪೂಜಿಸಲೇನು । ಒಚ್ಚಲವೋರಿ ನೀರು ಕೂಡಿದಂತೆಪ್ಪೋ। ಕುಚ್ಚಿತವಲ್ಲದೆ ಜಗದೊಳು ಜನನವಿಡಿದು। ರಚ್ಚೆಯಲ್ಲದೆ ಭಂಡು ಭೂತಪೂಜೆ। ಅಚ್ಯುತಪದವಿಗೆ ಇದೆ ಇದೆ ಉಪಾಯು। ಬೆಚ್ಚದೆ ಮಾಡಿರಯ್ಯಾ ಮನದಲಿಟ್ಟು। ಬೆಚ್ಚಿಸಿದಂತೆ ಮನಸು ಹರಿಪಾದ ಪೊಂದು ವದು । ಸಚ್ಛಾಸ್ತ್ರ ಶ್ರವಣ ಮನನ ಧ್ಯಾನೋಪಾಸನದಿಂದ । ತಚ್ಛಬ್ದ ವಾಚ್ಯ ಹರಿಯು ನೋಡಬೇಕು। ಎಚ್ಚರ ದೈವ ನಮ್ಮ ವಿಜಯ ವಿಠಲ ರೇಯನ್ನ । ನಿಚ್ಚ ಈಪರಿಯಿಂದ ಚಿಂತಿಸಬೇಕು ಸತತ ॥೧॥

ಮಟ್ಟತಾಳ

ಧರಣಿ ಉದಕ ವೈಶ್ವಾನರ ಮಾರುತ ಗಗನ। ಎರಡೆರಡು ಪೊಂದು ಭೂತಗಳಿಪ್ಪಲ್ಲಿ। ಹರಿಯ ವ್ಯಾಪಾರಗಳು ಚಿಂತಿಸು ಚನ್ನಾಗಿ। ಪರಿ ಪರಿ ಬಗೆಯಿಂದ ಗುಣಿಸುವದು ಬಿಡದೇ। ವರ ಗುಣ ರೂಪ ಕ್ರೀಯಗಳಾನಂತ ಚರಿಸುವ ಬಗೆ ತಿಳಿದು ಚತುರಂತೆ ನೀನಾಗೊ । ಇರಳು ಹಗಲು ಭೂತಾ ಭೂತಾಭಿಮಾನಿಗಳ। ಶರೀರ ತಧಿಷ್ಠಾನ ಸಿರಿ ನಾರಾಯಣ ಸಿರಿ ಲಕುಮಿ ಬೊಮ್ಮ। ಹರ ಮಿಕ್ಕಾದ ನಿರ್ಜರಗಣ ನಾನಾ । ತರತಮ್ಯದಿಂದಲಿ ಜ್ಞಾನೇಚ್ಛಾ ಪ್ರಯತ್ನ ಸ್ವಾಭಾವಿಕವೆಂದ.। ನಿರ ತ ತದಾಕಾರ ನಿಃಸಂಗರು ಯೆಂದು ಅರಿತು ಸಂತಸನಾಗು ಸಜ್ಜನರನೊಡನಾಡಿ । ದುರಿತಾಂಬುಧಿ ತಾರಿ ವಿಜಯವಿಠಲರೇಯ। ಕರುಣಾಕರಮೂರ್ತಿಯ ಚರಣವನೆರೆನಂಬಿ॥

ರೂಪಕತಾಳ

ಹೃದಯಾಕಾಶ ರೋಮ ಕೂಪಗಳೊಂದೊಂದು। ಉದರ ನಾಸ ಶ್ರವಣ ನಯನ ರಾಜಿಸುವ। ವದನ ಹಸ್ತ ಚರಣ ಸಂಧಿಗಳ ವಿವರ। ಹೊದರು ಗುಹ್ಯ ಒಂಭತ್ತು ದ್ವಾರಕ್ಷುದ್ರ ಛಿದ್ರ। ಮುದದಿಂದ ಘಟಮಠಾ

ಕಾಶ ಜಾಲ ರಂಧ್ರ । ನಡುವೆ ಛಪ್ಪರ ಯಜ್ಞಶಾಲಿ ಮುಡಿಗೆ ಮರು । ಸ್ಪದ ಚತುರ್ವೀಧಿಗಳು ತತ್ತತ್ತು ಶ್ರೇಣಿಗಳು । ಚದುರಂಗಾಕ್ಷ ಮನೆ ಗಾಂದ ಹರದಾರಿ ಲೆಖ್ಖವ ಬೈಲು ವರಣಾವರಣಗರ್ಭ ದಿಗ್ಭಾಗಾ । ಹದಿನಾಲ್ಕು ಲೋಕ ವಿರಾಡ್ರೂಪ ವೈಕುಂಠ । ಪದುಮಭವಾಂಡ ಸಪ್ತಾವರಣವೋಲೆ । ತದನಂತರವ್ಯಾಕೃತಾಕಾಶ ಭೂತ ಈ । ತುದಿ ಮೊದಲು ಗುಣಿಸೋದು ಆಕಾಶಪ್ರಭೇದ । ಇದರಲ್ಲಿ ಹರಿ ಚಿಂತನೆಮಾಡು ಪರಿಪರಿ । ಹೃದಯಾರಂಭಿಸಿಕೊಂಡು ಅಲ್ಲಿಪರಿಯಂತ । ತದಕಾರ ತನ್ನಾಮ ವಿಜಯವಿಠಲರೇಯ ವಿಧಿದೂರ ತದ್ಭಿನ್ನಾತನ್ನ ತನ್ನಕ್ರಾನ್ನ್ಯಾ ಎನ್ನು ॥೩॥

ಝಂಪೆತಾಳ

ನಾಸಮೊದಲಾದ ಶ್ವಾಸೋಚ್ಛ್ವಾಸ ಮತ್ತೆ ಉಪ । ಶ್ವಾಸ ಸರ್ವ ಜೀವ ರಾಶಿಯಲ್ಲಿ । ಬೀಸುವ ವ್ಯಜನ ಚಾಮರನವಿಲಗರಿ । ಕೋಶ ವಾರಿಧಿ ಧೆರೆ ಊದುವವಾದ್ಯ । ಲೇಸು ಪಕ್ಷಿಯಗರಿಯಿಂದ ಬರುವ ಗಾಳಿ । ಗ್ರೀಷ್ಮಋತು ಬಿರಿಸುತ್ತ ವಾಯುಪಟಮಿಕ್ಕ । ಈ ಸಮೀರ ಭೂತ ತತ್ತ ಲೋಕದಗತಿ । ಶೇಷ ವಿಶೇಷ ವಿರಾಟ ಬ್ರಹ್ಮಾಂಡದಲ್ಲಿ । ಭೂ ಸಲಿಲಭಾಗ ಮೇಲಾವರಣಾಚೆಯಲಿ । ಸೂಸಿಕೊಂಡಿದ್ದ ಮಾರುತ ಚಂಡವಾತಗಳ । ಈಸು ಬಗೆಯನು ಪೂರ್ವದಂತೆ ಎ । ಣಿಸುವದು ವಾಯು ಪರಮಾಣುಗಳಲ್ಲಿ । ವಾಸುದೇವನೆ ಯಿಪ್ಪನೆಂದು ಚಿಂತಿಸು ಮನುಜಾ । ದೋಷದೂರನಾಗು ಇದರಿಂದಲಿ । ಈಶ ಸರ್ವೇಶ ನಮ್ಮ ವಿಜಯವಿಠಲರೇಯನ್ನ । ಬೇಸರದಲೆ ಮನದೊಳಗೆ ನಿಲಿಸೋ ॥೪॥

ತ್ರಿವಿಡಿತಾಳ

ನೇತುರಾಗ್ನಿ ಜಠರಾಗ್ನಿ ಪಾವಕ ಕಣ । ಜ್ಯೋತಿ ಜ್ವಾಲೆ ದೀಪ ಪಂಚವಿಧ ಪಂಚಾಗ್ನಿ । ಜಾತಕರ್ಮ ವಿವಾಹ ವೈಶ್ವದೇವ ಉಪ । ನೀತ ಶಾಂತಿಕರ್ಮ ಅಭಿಚರಾಗ್ನಿ ಪಿತೃ । ನೀತಾ ನಿತ್ಯಾಗ್ನಿಹೋತ್ರ ನಾನಾಬಗೆ ಯಾಗಾ । ಜಾತವೇದ ದಾವಾ ವಡಬಾಗ್ನಿ ಧೂಮ್ರಾದಿ । ಭೂತಳವಿಡಿದು ವಿರಾಟ ಪರಿಯಂತ । ಜ್ಯೋತಿ ಪ್ರಕಾಶಗಳು ಪದ್ಮಜಾಂಡ ತೃತಯ । ಭೂತಾವರಣ ಸಹ ಚಿಂತಿಸು ಪರಮಾಣು । ಮಾತುರಾ ತೇಜೋ

ಬಿಂದುಗಳಿನ್ನು ಪ್ರತಿಪ್ರತಿ । ಭೀತಿರಹಿತ ನಮ್ಮ ವಿಜಯ-ವಿಠಲರೇಯ । ಈತೆರದಲ್ಲಿಪ್ಪ ಬಲ್ಲವಗೆಲ್ಲಿಲ್ಲ ॥೫॥

ಧ್ರುವತಾಳ

ರಸನೆ ಮಿಕ್ಕಾದುದೋದಕ ಶ್ರೀಕರ ವರುಷಧಾರಿ । ಬೆಸನೆ ಅಗ್ರೋದಕ ನೈವೇದ್ಯ ವಾರಿ ತೃಷಿ । ಬಿಸಿಸಿಧಿ ನದಿ ಕ್ಷುದ್ರ ನದಿ ತಟಾಕ ವಾಪಿ । ಕುಶಲ ಕೂಪ ದೇವಖಾತ ವರತೆ ಮಡವು । ಪ್ರಸರ ಸರೋವರ ಕ್ರೀಡಾಜಲವ ಸಂ । ದಿಸಿ ಪೂರ್ವ ಪ್ರವಹ ಸುಳಿಫೇನ ಬುದ್ಬುದ । ಎಸೆವ ಧೆರೆ ಬಹುರಸ ಸಮಸ್ತ ಬೊಮ್ಮಾಂಡ । ಮುಸುಕಿದ ಸುತ್ತು ಮಿತಿ ತಿಳಿದು ಕೊಂಡಾಡುವದು ವಸುದೇವ ಪುತ್ರನಿದೆ ರೂಪದಿಂದಿಪ್ಪನೆಂದು । ನಸುನಗುತ ತಿಳಿವದು ಯೋಗ್ಯಜನಕ್ಕೆ । ಅಸಮ ಸಾಹಸ ನಮ್ಮ ವಿಜಯವಿಠಲರೇಯ । ವಶವಾಗಿ ಯಿಪ್ಪ ಸಾಕಾರ ಸರ್ವೋತ್ತಮ ॥೬॥

ಝಂಪೆತಾಳ

ಪುರಿ ಗೋಪುರ ದುರ್ಗ ಸಾಲಿ ಪ್ರಾಸಾದ ಮಂ । ದಿರ ಸಭೆ ಸಮಸ್ತ ದೇವಾಲಯ । ಪುರ ಅಗ್ರಹಾರ ಖೇಟಕಘೋಷ ವೇದಿಕ । ಅರವಂಟಿಗೆ ಆಸ್ಥಾನ ರಾಜಧಾನಿ । ಶರ ನಿಧಿ ನದಿ ಕೂಲ ದ್ವೀಪ ಪರ್ವತ ನಿಮ್ನ । ತರು ಮೊದಲಾದ ಭೂರುಹ ಜಾತಿ । ಮರಕತ ಮಿಕ್ಕಾ ನವರತುನ ರಜತ ಸ್ವರ್ನ ಪರಿ ಲೋಹ ಕಾಂಶ ತಾಂಬ್ರಾದಿ ಧಾತು । ಪರಶು ನೇಗಲಿ ಶಕ್ತಿ ಗದ ಶಂಖ ಚಕ್ರ ತೋ । ಮರ ಪರಿಘ ಚಾಪ ನಾನಾಶಸ್ತ್ರವು । ಪರಿ ಪರಿ ಧಾನ್ಯ ರಥ ಫಲ ಪುಷ್ಪ ಹದಿನಾಲ್ಕು । ಧರಣಿತಳ ಉಪದ್ವೀಪ ಎಂಭತ್ತುನಾಲ್ಕು ಲಕ್ಷ । ಶರೀರಧಾರಿಗಳ ಗಾತ್ರ ಚಿತ್ರಲೆಖ್ಖನಿಂ । ದಿಂದೆ ಬೊಮ್ಮಾಂಡ ಖರ್ಪರ ದ್ವಿಗುಣ । ಧರೆ ಮೀರಿ ಮೂಲ ಪ್ರಕೃತಿತನಕ ಯೋಚಿಸು । ಪರಮಾಣು ಮೂರುವಿಧ ಅಂಶಿ ಅಂಶಾ । ಭರಿತವಾಗಿವೆನೋಡು ಜಗವೆಲ್ಲ ಸರ್ವದಾ । ಇರುತಿಪ್ಪವು ಶುಭ್ರ ರಕ್ತ ಕಪ್ಪು । ಹರಿಯ ಚಿಂತಿಸು ಅಲ್ಲಿ ಒಂದೊಂದು ಭಾವದಲಿ । ಮೆರೆವ ಆತುಮ ಜಗದಾತುಮನ್ನಾ । ಮರಿಯದಿರು ಆವಾವ ಕ್ರೀಯೆಮಾಡುವಾಗ । ಹೊರಗೆ ವೊಳಗೆ ನೆನೆದು ಸುಖಿಸು ಸತತಾ । ಚರರಿಗೆ ಬದ್ಧವಾಗಿಪ್ಪ ಲಿಂಗ ಗಾ । ತುರದ ಸ್ಥಿತಿ ತಿಳಿದು ತಿಳಿದು ತಿಳಿಯೋ ।

ಪರಿಪೂರ್ಣ ಗುಣಪೂರ್ಣ ವಿಜಯವಿಠ್ಠಲರೇಯ । ಸುರ ನರೋರಗರಲ್ಲಿ ಇಸಿತು ನಿರ್ನೈಸಿ ॥೭॥

ಅಟ್ಟತಾಳ

ಭೂತ ಪಂಚಕದಲ್ಲಿ ಬಹುವಿಧ ತಿಳಿದು ಗು । ಣಾತಿಶಯದಿಂದ ತತ್ತ್ವದ್ಗುಣಂಗಳ । ಮಾತುರ ಕರ್ಮಜ್ಞಾನ ತತ್ವ ಹುದಗಿಸಿ । ಪ್ರೀತಿಯಿಂದಲಿ ಪ್ರಾಣ ಅನ್ನಮಯ ಕೋಶವು । ಈ ತೆರದಲಿ ಏಳು ಪೊಂದೇಳು ತತುವವೊ ಭೂತದಲ್ಲಿ ವುಂಟು ಐದು ಸ್ಥಾನದಲ್ಲಿ । ಶ್ರೋತ್ರ ತ್ವಕು ಚಕ್ಷು ರಸನ ನಾಶಿಕವನ್ನು । ಮಾತು ಮಾತಿಗೆ ಕೇಳಿ ನೀಕ್ಷಿಸಿ ಧ್ಯಾನಿಸಿ । ಕೌತುಕಯ್ಯೈದುವ ಕಾಲಜ್ಞರ ಕೇಳಿ । ಧಾತು ಮೊದಲಾದ ಪ್ರತಿಮೆಯಲ್ಲಿ ಈ । ಭೂತಗಳಿಟ್ಟು ಒಂದೊಂದುಬಗೆಯಿಂದ । ಶ್ರೀ ತರುಣೀಶನ್ನ ರೂಪಂಗಳಾನಂತ । ಜ್ಯೋತಿ ಪ್ರಕಾಶಮಯವಾದ ದೇವನ । ನೀತಿಯಿಂದಲಿ ನಿನ್ನ ಯೋಗ್ಯತಪ್ರಕಾರ । ಸ್ತೋತ್ರಮರಿಂದ ಉಪಾಸನೆ ಚಿಂತಿಸಿ । ಓತ ಪ್ರೋತದಂತೆ ಹರಿವ್ಯಾಪ್ತಿ ನಿಜವಾಗಿ । ಭೂತಕ್ಕೆ ಒಂದೊಂದು ಹೆಚ್ಚುಕಡಿಮೆಯಿಂದ । ಧೌತ ಪಾಪನಾಗು ಪಾರಮಾರ್ಥಿಕದಲ್ಲಿ । ಶ್ವೇತದ್ವೀಪ ಸೂರ್ಯಮಂಡಲ ತನ್ನಯ । ಗಾತ್ರ ಸಾಲಿಗ್ರಾಮ ಪಂಚಭೇದಸ್ಥಾನ । ವಾತಪ್ರತೀಕದೊಳರ್ಚನೆಮಾಡು । ಆತುಮ ಮೂರುತಿ ವಿಜಯವಿಠ್ಠಲ ಸರ್ವ । ತೀತನು ಮೂರ್ತ್ಯಾಮೂರ್ತಿಯಲ್ಲಿ ನಿಲಿಸೊ ॥೮॥

ಆದಿತಾಳ

ಏಕೇಕ ಭೂತದಲ್ಲಿ ಲೌಕಿಕ ವೈದಿಕ । ನೇಕ ವ್ಯವಹಾರದಲ್ಲಿ ಶ್ರೀಕಾಂತನಮೂರ್ತಿಯ । ಸಾಕಾರವಾಗಿತಿಳಿ ಬೇಕಾದ ಪುರುಷಾರ್ಥ । ತಾ ಕೊಡುವನು ಜಗದೇಕವಂದ್ಯನು ಪುಣ್ಯ । ಶ್ಲೋಕ ಶೋಭನ ದೇವನಾಕಿ ವೃಂದರಸಹಿತ । ಆಕಾಶ ಮೊದಲಾದ ತತ್ವಂಗಳೆಲ್ಲ ಸರ್ವ । ಲೋಕವೆ ತುಂಬಿದೆ ಪರಮಾಣುದ್ವ್ಯಣುಕವು ಎಂದು । ಅಕಾರಮಿಗಿಲಾದ ಎಂಟುವರ್ಗದಿಂದ । ವೈಕುಂಠವಾಗುವದು ದೇಶಕಾಲದಿವಿಡಿದು । ಪ್ರಾಕೃತ ರಹಿತನೆ ಹರಿಯೆಂದು ಕೊಂಡಾಡಿ । ಭೂತದೊಳು ಚರಿಸು ಸತ್ಕರ್ಮದಲ್ಲಿ । ವಾಕು ಬರಿದೆಮಾಡಿ ಬಾಳಿದಿರಲೊ ಮನುಜ । ಏಕಾಂತದ ಪರ ಕೇಳು ಸುಖದಲ್ಲಿ [illegible] ಹರಿಗುಣಗಳ ಇದನೆ ಕೈಕೊಂಡರೆ । ಶೋಕನಾಶ

ಜನ್ಮಜನ್ಮಾಂತರದಲಿದ್ದ । ಏಕಚತುರಗುಣಾದಿವಿಡಿದು ಪೂಜಿಸಿ ವಿ। ವೇಕ ನಾಗೆಲೊ ಪಂಚವಿಧರೊಳು ವೊಪ್ಪನೆನಿಸಿ। ಕಾಕ-ಲತಿ ಬಿಟ್ಟು ವಿಜಯ ವಿಠ್ಠಲರೇಯನ್ನ । ಬಾಕುಳಿಗನಾಗಿ ಭಕ್ತಿಯಿಂದ ನಲಿದಾಡು ॥೯॥

ಜತೆ

ಹರಿಯ ಚಿಂತಿಸು ಪಂಚಭೂತದಲ್ಲಿ ನಿತ್ಯ। ಕರುಣಾಳು ವಿಜಯ ವಿಠ್ಠಲ(ನೆ) ಏಕೀಭೂತಾ ॥೧೦॥

ಸುಳಾದಿ ೨೫

ಚಲಾಚಲ ದ್ವಿವಿಧದಲ್ಲಿ ಶ್ರೀ ಹರಿಯು ವ್ಯಾಪ್ತತ್ವಬಗೆ ಚನ್ನಾಗಿ ಚಿಂತಿಸಿ, ಚಲ ಪ್ರತಿಮೆಗಳಲ್ಲಿ ಗೋ ಆರಂಭಿಸಿ ಉತ್ತಮರ ಬಿಂಬಾಧೀನ ಚಿಂತಿಸಿ ಸಂಪೂಜನವೇ ಬಿಂಬಾರ್ಚನ, ಇತರ ಪ್ರಾಣಿಗಳಲ್ಲಿ ಭೂತದಯಾ ಪೂರ್ವಕ ಸೋತ್ತಮರ ಬಿಂಬನನ್ನು ಸ್ವಬಿಂಬನಲ್ಲಿ ಧ್ಯಾನಗೈವ ಸಂಪೂಜೆ ಕ್ರಮ,

ರಾಗ ಭೈರವಿ ಧ್ರುವತಾಳ

ಸಂಪೂಜೆಮಾಡು ಮನವೆ ಸಂತತ ನಿನಗೆ ಜ್ಞಾನ। ಸಂಪತ್ತು ಸಿದ್ಧ ಸುಲಭಮಾರ್ಗ। ಸಂಪದವಿಗೆಯನ್ನು ಸಮುಸ್ತಕಾಲದಲ್ಲಿ। ಸಂಫುಲ್ಲಾಕ್ಷನ ನೋಳ್ಪ ಸೌಭಾಗ್ಯವೆ । ಇಂಪಾಗಿದೆ ನೋಡು ಈಶಾವಾಶ್ಯಾಜಗತ್ತು । ಸಂಪ್ರೀತಿಯಾಗಿದ್ದ ಪ್ರಮಾಣದಾ। ಗುಂಪು ತಿಳಿದು ನಿತ್ಯ ಸುಖದಲ್ಲಿ ಯಿಪ್ಪ ದೊಂದೆ। ಸಂಪೂಜೆಕಾಣೊ ಕೇವಲ ಸಾಧನ। ಪುಂ ಪೆಂಗಳಿಂದ ಪ್ರಪಂಚ ನಿರ್ಮಾಣಮಾಳ್ಪ। ಕೆಂಪು ಮಿಕ್ಕಾದ ಗುಣದ ಕಾರ್ಯಬಲಿಸಿ। ಕಂಪು ಹೇಯ ಹೊಲಸು ಹಗರಣ ದುರ್ವಿಷಯ। ಲಂಪಟಾ ನಾನಾ ಬಗೆಯು ಚಿಂತಾತುರ। ಸಂಪೂಜೆ ಇದೆ ಎಂದು ಬಿಗಿವಿಲಿ ನಡಿಯದಿರು। ಸಂಪಿಗೆ ಪ್ರತಿಕೂಲ ವಿಚಾರಿಸು। ಸಂಪ್ರಮೋಹದಿಂದ ಕೆಡದಿರು ಕೆಡದಿರು। ಸಂಪ್ರ ದಾಯಕ ತಿಳಿದು ಸಂಚರಿಸು। ಪುಂ ಪುಂಗವರಾಜ ವಿಜಯವಿಠ್ಠಲನಂಘ್ರಿ। ತಂಪಿನಲ್ಲಿ ವಾಸವಾಗು ವ್ಯಾಕುಲನೀಗು ॥೧॥

ಮಟ್ಟತಾಳ

ಹರಿ ಹರಿದಾಸರ ವೇದಪ್ರಮಾಣವ। ನಿರುತ ನಿಂದ್ಯಮಾಳ್ಪ ಅಧ ಮರನ ನೋಡಿ। ಪರಿ ಪರಿಯಿಂದಲಿ ನಿಂದ್ಯಮಾಡುದೊಂದೆ। ಪರಮ ಭಕುತರಿಗೆ ಇದು ಸಂಪೂಜೆ। ಕರಣಶುದ್ಧದಲ್ಲಿ ಉತ್ತಮರ ದಿವ್ಯ। ಚರಣವನು

ನೋಡಿ ಕೊಂಡಾಡುವದೊಂದೆ । ಧಾರುಣಿಯೊಳಗೆ ಇದೆ ಪರಿಶುದ್ಧ ಸಂಪೂಜೆ। ಎರಡರ ವಿರಹಿತ ನಾನಾ ಬಗೆಯಿಂದ। ಸರುವ ಉಪಸ್ಕರವು ಸಂಭ್ರಮದಿ ತಂದು। ಹರಿಯ ಪೂಜಿಸಿದರು ಅದು ಸಂಪೂಜೆ ಅಲ್ಲ। ಕರುಣಾಕರಮೂರ್ತಿ ವಿಜಯವಿಠಲನ್ನ । ಚರಣವಾರಿಜದಳವೆ ನಂಬಿದವಗೆ ಸಾಧ್ಯ ॥೨॥

ತ್ರಿವಿಡಿತಾಳ

ಹರಿಗೆ ಪ್ರತಿಮೆ ಎರಡು ಬ್ರೂಮ್ಹಾಂಡದೊಳಗೆ ವಿ। ವರಿಸುವೆ ಜಡ ಜೀವವೆಂಬೊವೆ ಅನಂತ । ಪರಿಯಲ್ಲಿ ಯಿಪ್ಪವು ಕೇಳಿ ಭಗವನ್ಮೂರ್ತಿಗಳೆಂದು। ಎರಡರಲ್ಲಿ ಉಂಟು ಅಂತದಲ್ಲಿ । ವರ ಪ್ರತಿಮೆಯಲ್ಲಿ ಮೂರು ಅವರಾದಲ್ಲಿ ಎರಡು। ತರತಮ್ಯ ಇದರೊಳಗೆ ಬಲು ಇಪ್ಪದೋ। ಸ್ಮರಿಸಿ ನೋಡು ಕೇಳಿ ಮಾತಾಡು ಧ್ಯಾನಿಸು। ಹರಿಯ ಮೆಚ್ಚಿಸು ಇದಕೆ ವಿವರ ಕಾಣೊ। ಅರಹುವೆ ಇದರ ವೃತ್ತಾಂತ ತೋರಿದಿನಿತು। ಕುರುಹು ತಿಳುಕೊಂಬುವದು ಕಠಿಣವಲ್ಲಾ । ಸರುವ ಪ್ರಕಾರದಲಿ ವ್ಯಾಪ್ತಮೂರ್ತಿಯ ಪೂಜಾ। ವರ ಅವರಾದಲಿ ನಿರ್ಲಿಪ್ತನೆಂದು । ಇರಳು ಹಗಲು ಇದೆ ಚಿಂತಿಸುತಿಪ್ಪದೆ ಪೂಜೆ। ಮರಳೆ ತತ್ತದಾಕಾರ ಮೂರ್ತಿಯಲ್ಲಿ। ವಿರಚಿಸುವ ಬಗೆ ಕೇಳು ಎರಡು ಪರಿ। ಇರತಕ್ಕ ಜಡದೊಳು ಸ್ತಂಬಾದಿ ಪಾಷಾಣ । ಧರಣಿ ಮೊದಲುಮಾಡಿ ತದ್ವ್ಯಾಪಾರ। ಹರಿಯಿಂದಾಗುವದೆಂದು ತಿಳಿವದು ತದಾಕಾರ । ವರ ಸಂಪೂಜೆ ಎಂದು ಗ್ರಹಿಸಬೇಕು । ತರುವಾಯ ಮತ್ತೊಂದು ತದಾಕಾರದ ಪೂಜೆಯ। ಚಿರಕಾಲದಲ್ಲಿಮಾಳ್ಪ ಸಂತೋಷವೋ ಕರ ಚರಣಗಳಿಂದ ವೊಪ್ಪುವ ಮೂರ್ತಿ ಸುಂ। ದರ ಲಕ್ಷಣೋಪೇತವಾಗಿದ್ದದಕೆ। ವರ ಮಂತ್ರತಳಿಂದ ಅಭಿಷೇಚನೆ ಗಂಧ। ಪರಿಮಳಾ ಭರಣಾ ತುಲಸಿ ಕುಸುಮ । ಮಿರಗುವ ಧೂಪಾರ್ತಿ ಯೇಕಾರ್ತಿ ನೈವೇದ್ಯ । ಮರಿಯದೆ ಮಂಗಳಾರುತಿ ಕರ್ಪುರ। ಭರದಿಂದ ಸ್ತವನಮಂತ್ರ ಪ್ರದಕ್ಷಣೆ ನಮ। ಸ್ಮರಿಸುವ ಸೊಬಗು ನಾನಾ ಸೇವೆಯು । ನಿರುತಮಾಡುವದಿದೆ ಒಂದು ಪೂಜೆ। ಎರಡು ವಿಧ ಪೂಜೆ ಜಡದಲ್ಲಿ ನಿರ್ಮಿಸಿ। ಹರಿಯ ಪ್ರೀತಿಬಡಿಸಿ ಸುಖಿಸುವರು। ಕರ ಚರಣಾದಿಗಳು ಇಲ್ಲದ ಪ್ರತಿಮೆ ಒಂದೆ। ವರ ಸಾಲಿಗ್ರಾಮದಲಿ ಯಿದೇ ಪ್ರಕಾರ ಆ। ಚರಣೆ ಮಾಡುವರಯ್ಯಾ ಇತ್ತ

ಲಾಲಿಸು ಸಂ। ಚರಿಸುವ ಪ್ರಾಣಿಗಳ ವಿಚಾರವ। ಎರಡೆರಡು ಎಂಭತ್ತು ಲಕ್ಷ ಯೋನಿಗಳುಂಟು। ಇರುವು ಮೊದಲಾಗಿ ಗಜ ಪರಿಯಂತ। ವರ ಅವರಾ ಉಂಟು ಕೇಳಿ ಇದರೊಳು ತಿಳಿದು ಅನು। ಸರಿಸು ಗೋ ಪೂಜೆ ಉಳಿದ ಭೂತದಯವು। ತರುವಾಯು ಮಾನವರೊಳು ಗ್ರಹಿಸಲಿಬೇಕು। ಎರವುನೋಡದೆ ಅನ್ನೋದಕವಕೊಟ್ಟು। ಸುರ ಮುನಿ ನುತ ನಮ್ಮ ವಿಜಯ ವಿಠಲರೇಯನ। ಸ್ಮರಣೆಮಾಡುತಲಿರಬೇಕು ತತು ತತು ರೂಪಗಳಾ ॥೩॥

ಅಟ್ಟತಾಳ

ಇದರೊಳು ಕೇವಲ ಭಗವಂತ ಪೊಂದಿಹ। ಅಧಿಷ್ಠಾನ ಪೇಳುವೆ ಭೂಸುರ ಜಾತಿಲಿ। ವಿಧಿನಿಷೇಧ ಕರ್ಮ ತಿಳಿದು ವೈಷ್ಣವಜ್ಞಾನ। ಮುದ ಭಕ್ತಿಯಿಂದ ಸಂತತಯಿಪ್ಪ ಮನುಜನ್ನ। ಸದನುಲನಾಗಿ ವಂದಿಸಿ ನಾನಾ ಬಗೆಯಿಂದ। ಮಧುರನ್ನ ಮಿಗಿಲಾದ ಉಪಚಾರದಿಂದ। ಪದೋಪದಿಗೆ ಪ್ರೀತಿಬಡಿಸಿದರಾಗಿದು। ತದಾಕಾರದಪೂಜೆ ಇದೆ ಮಾನಸಪೂಜೆ। ಅಧಿಕಾರತನ ಭೇದದಲಿ ತಿಳಿಯಬೇಕು। ಚದುರನಾದವ ಆಲಸ್ಯಮಾಡದೆ ನಿತ್ಯ ಪದುಮನಾಭ ನಮ್ಮ ವಿಜಯವಿಠ್ಠಲರೇಯ। ಒದಗಿ ಕೈಕೊಂಬ ತದಾಕಾರ ವ್ಯಾಪ್ತಿಲಿ ॥೪॥

ಆದಿತಾಳ

ಇಂತು ಜಡ ಜಂಗಮದಲಿ ಭಗವಂತನ। ಸಂತೋಷ ಯ್ಯೈದುಸುವದು ವಿವಿಧ ಮೂರ್ತಿಗಳನ್ನು। ಸಂತರು ತಮತಮ್ಮ ಬಿಂಬನ ಧ್ಯಾನದಿಂದ। ಮಂತ್ರೋಕ್ತಿಯಲ್ಲಿ ಮೆಚ್ಚಿಸಿ ಪೊಲಿಸುವರು। ಅಂತು ಗಂಡವರಾರೊ ಅವರವರ ಯೋಗಮಾರ್ಗ। ಗ್ರಂಥದಲ್ಲಿ ಉಂಟು ಮುಕ್ತಿಗೆ ಸೋಪಾನ। ಮುಂತೆ ನೀನು ನಿನ್ನ ಆಧೀನವಾಗಿದ್ದ ಸಿರಿ। ಕಾಂತನ ಪೂಜೆಮಾಡು ಮೂರು ಮೂರ್ತಿಗಳನ್ನು। ಪಿಂತೆ ಪೇಳಿದಂತೆ ವ್ಯಾಪ್ತತ್ವ ತಿಳಿದು। ಚಿಂತಿಸು ಪರಿಪರಿ ಭೋಜ್ಯಾದಿ ಭೋಗದಲ್ಲಿ। ಸಂತಾಪ ಹರಿಸುವ ದೇಹಾಕಾರ ಮೂರ್ತಿಯ। ಸಂತೃಪ್ತಿಮಾಡುವದು ಈತನೆ ನಿತ್ಯಪೂರ್ಣ। ಅಂತರಂಗದ ಪೂಜೆ ಕೇವಲ ಪ್ರೀತಿ ಯೇ। ಕಾಂತದಲ್ಲಿ ಮಾಳ್ಪ ಉನ್ನತೋನ್ನತ ಆತ್ಮಾ ಅಂತರಾತುಮ ಮೂರುತಿ ಎರಡು ಅಭೇದವೆಂದು। ಅಂತರಾತುಮದಲ್ಲಿ

ನಿಲಿಸಿ ಪೊಳಿಸಿ। ಎಂತು ಪೇಳಲಿ ಈ ಮನದಲ್ಲಿ ಸರಸ್ವತಿ। ಕಾಂತಾಂಡೆ ತುಂಬಿದೆ ಧ್ಯಾನಮಾಡೆ। ಕಂತುಪಿತನ ಪೂಜೆ ಮಾಳ್ಪ ಲಕ್ಷಣ ಆ। ದ್ಯಂತ ಕಾಲದಲ್ಲಿ ತಕ್ಕವೆಂದು। ಚಿಂತಾಮಣಿ ಕಾಮಧೇನು ಕಲ್ಪವೃಕ್ಷ। ಇಂತಿವೆ ಮನದಲ್ಲಿ ಅಂಶಿ ಅಂಶಾ। ಚಿಂತಿಸು ಪ್ರಾರ್ಥಿಸು ಕಲ್ಪಿಸು ಮೂರರಿಂದ। ಎಂಥ ಪವಿತ್ರ ಷಡುರಸ ಪದಾರ್ಥ। ಅಂತು ಇಲ್ಲದೆ ಸೂಕ್ಷ್ಮತರವಾಗಿ ಕೊಡುವವೋ। ಶಾಂತ ದಾಂತ ಸೂಚಿತ್ತ ತರತಮ್ಯ ಭಕ್ತಿಜ್ಞಾನ। ವಂತೆಗೆ ವೇಗದಿಂದಾ ವಾಸನಮಯದಿ। ಇಂತು ಸಂಪೂಜೆಮಾಡು ಆವಾವ ಬಗೆ ಯಿಂದ। ನಂತ ಕಾಲಕ್ಕೆ ಬಿಡದೆ ಯೋಚನೆಯಿಂದ। ನಿಂತಲ್ಲಿ ಕುಳಿತಲ್ಲಿ ಮಲಗಿ ತಿರುಗಾಡುತಲಿ। ಇಂಥದ್ದೇ ಕೈಕೊಂಡು ಕರ್ಮ ತೊರಿಯೊ। ಸಂತೆ ಕೂಟದ ಪೂಜೆ ಯಾತಕ್ಕೆ ಪ್ರಯೋಜನ। ಭ್ರಾಂತಿಯಲ್ಲದೆ ಅಲ್ಪ ಸುಖವಾಹೊದೇ। ಅಂತಿ ಕಂತಿಕ ಪೂಜೆ ಮಹಿಮೆ ನಿರ್ಜರ। ಸಂತರು ಮೆಚ್ಚಿ ಕೊಡರು ಕೊಡುವರು ಕೆಲರು। ಅಂತಕನಗರಿಯ ಭಯಃ ಶೋಕ ಆದಿ ಮ। ಧ್ಯಾಂತದಲ್ಲಿ ಯಿಲ್ಲ ಕಾಯದಲ್ಲಿ। ಎಂತು ಕೊಂಡಾಡಲಿ ಧ್ಯಾನ ಸಾಧನ ಪೂಜೆ। ವಂತನ ಭಾಗ್ಯಕ್ಕೆ ಎಣಿಸಲಾಗಿ। ಅಂತ್ಯಕಾಲ ಕೇಳು ಕಠಿಣವಾಗಿದ್ದ ಹೃದಯ। ಗ್ರಂಥಿಭೇದಿಪದಕ್ಕೆ ಇದೇ ಉಪಾಯ। ಜಂತು ಅಲ್ಪಯೋಗ್ಯತನೆ ನಿನಗೆ ತಿಳಿದಷ್ಟು ಸ। ಸ್ವಂಥವ ಬಿಡು ಬಿಡು ಬಾಹ್ಯ ಅರ್ಚನಿಗೆ ಈ। ಅಂತರಂಗದಪೂಜೆ ಕೂಡದಲೆ। ಅಂತರಿಕ್ಷವಲ್ಲದೆ ಫಲ ವಿಲ್ಲ ನಿರ್ಜಲ। ಕಾಂತಾರದಲ್ಲ ಪೊಕ್ಕು ಆಳಲಿದಂತೆ। ದಂತಿಯ ದಾಡಿಗೆ ತೂಗಿ ಬಿದ್ದಂತೆ ವಿ। ಶ್ರಾಂತನಾಗುವ ಜನ್ಮ ಧರಿಸುವನು। ದಂತಕ್ಕೆ ರುಚಿ ತಂದು ಸ್ಪರುಶವಮಾಡಿಸಲಾಗಿ। ಸಂತಸವಾಗುವದೆ ರಸವ ತಿಳಿದು। ಮಂತ್ರ ತಂತ್ರೋಪಕರಣ ನಾನಾ ಚಿತ್ರ ವಿಚಿತ್ರ। ಚಿಂತನೆಮಾಡು ಪೊಳಗೆ ಪ್ರಾಣಾಂತಸ್ಥ। ದಂತಿ ವರದ ನಮ್ಮ ವಿಜಯ ವಿಠ್ಠಲರೇಯ। ಕುಂತಿ ಮಕ್ಕಳಿಗೆ ವೊಲಿದಂತೆ ವೊಡನೆ ತಿರುಗುವ ॥೫॥

ಜತೆ

ಸಂಚಿತಾಗಾಮಿ ನಾಶ ಪ್ರಾರಬ್ಧ ಉಪಮರ್ದಾ। ಪಂಚ ಪ್ರಾಣೇಶ [illegible] ಸಮನಾಗಾ ॥೬॥

ಸುಳಾದಿ ೨೬

ಯುಗಾದಿ ಕಾಲ ದೇಶ, ಋಗ್ವೇದಾದಿ ವೇದ, ಚತುರ್ದಶ ಮನ್ವಾದಿ ಇತ್ಯಾದಿಯಲ್ಲಿ ಶ್ರೀ ಹರಿಯ ಜಗದ್ವ್ಯಾಪಾರ, ನಾಮ ರೂಪ ಕ್ರೀಯಾಭೇದವಿದ್ದರೂ, ಅನಂತರೂಪಿ ಒಬ್ಬನೆ ಎಂದು ಬಿಂಬನಲ್ಲಿ ಐಕ್ಯ ಚಿಂತಿಸುವ ಭಗವಧ್ಯಾನೋಪಾಸನೆ ಕಾರಣ ಕಾರ್ಯರೂಪಗಳಿಗೆ ಬಿಂಬೈಕ್ಯಚಿಂತನ

ರಾಗ ನೀಲಾಂಬರಿ ಧ್ರುವತಾಳ

ಭಗವಧ್ಯಾನವಮಾಡು ಭಕುತಿಪೂರ್ವಕದಿಂದ। ಅಗಣಿತ ಗುಣಸಿಧಿ ಅಪ್ರಮೇಯಾ । ಬಗೆ ಬಗೆ ವ್ಯಾಪಾರಮಾಡುವ ಮಹಾಮಹಿಮ। ಜಗದತ್ಯಂತ ಭಿನ್ನ ಜಗದ್ವ್ಯಾಪ್ತಾ । ನಿಗಮಮಂಗಳಗೇಯ ನಿಖಿಲ ಜಗತ್ಸೇವ್ಯ । ತ್ರಿಗುಣರಹಿತ ಸುಗುಣಿ ನಿರ್ಭೇದಕಲ್ಯಾಣ। ಅಘದೂರ ಅನಂತಾನಂತ ರೂಪ ಪರಮಾ। ಯುಗ ಮಹಾಯುಗ ಮನುಕಲ್ಪ ದಿನ ಪ್ರಳಯ । ಮಗುಳೆ ಮಹಾ ಪ್ರಳಯಾಕಾಲ ತಿಳಿದು। ಭಗವಧ್ಯಾನಮಾಡು। ಋಗು ಯಜುಃ ಸಾಮ ಅಥರ್ವಣಾಗಮದಂತೆ। ಗಗನಮಣಿರಶ್ಮಿ ಚತುರವಿಭಾಗ । ಮಿಗೆ ವಾಸುದೇವ ಸಂಕರುಷಣ ಪ್ರದ್ಯುಮ್ನ । ಜಗನ್ಮಯ ಅನಿರುದ್ಧ ನಾರಾಯಣ। ಮೃಗರೂಪ ಕೋಲಮೂರುತಿ ವಾಮನ ನರ। ಮೃಗಯಜ್ಞ ಪುರುಷೋತ್ತಮ ವಾಸುದೇವ। ಪಗೆದಲ್ಲಣ ನಾರಾಯಣ ವಟು ಅನ್ನ ಮಯಾ। ದಿಗಳು ಹರಿ ವಿಷ್ಣು ಶೇಷಶಯನ ಶ್ರೀಶ। ಮಗನ ಪೆತ್ತಬ್ಜನಾಭ ವೈಕುಂಠನಾಮಾ ವನುಜ। ಮೃಗ ಅನಿರುದ್ಧಾದಿ ಪಂಚಮೂರ್ತಿ । ಮೃಗಲಾಂಛನ ವದನ ವಿಜಯವಿಠಲನ ಮೂ। ರ್ತಿಗಳ ಕೊಂಡಾಡೊದು ಪಾದಾಂತ ಪ್ರಣವದಲ್ಲಿ ॥೧॥

ಮಟ್ಟತಾಳ

ನರ ನಾರಾಯಣ ಹಯಗ್ರೀವ ಕಪಿಲ। ವರ ದತ್ತ ವ್ಯಾಸ ಅನಿರುದ್ಧ ಪ್ರದ್ಯುಮ್ನ ಸಂ। ಕರುಷಣ ವಾಸುದೇವ ಹರುಷ ಉತ್ಕೃಷ್ಟ ಜ್ಞಾನರೂಪತ್ವ ಹರಿಯಿ ಗುಣಪೂರ್ಣ ಪೂರ್ಣ ವಿಭೂತಿ। ಪರಿಮಿತ ರಹಿತ ಸುಖಸಂಗೀತ ಜನಪಾಲ । ಸುರನುತ ನಾರಾಯಣ ವಾಸುದೇವ ವೈಕುಂಠ। ವರ ಅನಿರುದ್ಧ ಸಂಕರುಷಣ ಪ್ರದ್ಯುಮ್ನ। ತರುಣಿ ರಮಾಂತರ್ಗತ ವಾಸುದೇವ ದೇವ। ಪರಶುರಾಮ ಮುಸಲಧರ ಪ್ರದ್ಯುಮ್ನ। ನಾರಾಯಣ ಅನಿರುದ್ಧ

ಕರಿಸಿಕೊಂಬವಿಷೇ ವಾಸುದೇವಸಹಿತ । ಮಿರಗುವ ಪಂಚರಾತ್ರಾ ಅವಕಾಶ ಪ್ರದಕೆ। ಸ್ಮರಿಸು ಈ ಮೂರ್ತಿಗಳ ನಾಮ ಕೀರ್ತನೆಮಾಡು । ಸರುವ ವ್ಯಾಪ್ತಸ್ವಾಮಿ ವಿಜಯವಿಠ್ಠಲರೇಯ । ಪರಿ ಪರಿ ಬಗೆಯಿಂದ ಪ್ರತಿಪಾದ್ಯ ನಾಗಿಪ್ಪಾ ॥೨॥

ರೂಪಕತಾಳ

ಅನಂತ ಅನಂತರೂಪ ಸಚ್ಚಿದಾನಂದ ದೇಹ। ಅನಂತಶೀರ್ಷ ಪಾದದಿ ಸರ್ವಾಂಗ। ಅನಂತ ಗುಣಗಣ ಮಹಾತ್ಮ ಪುರುಷ। ಏನೆಂಬೆ ವರಹ ನರಸಿಂಹ ವಾಮನ। ಮಾನಸೋತ್ತರ ಶೈಲ ಸ್ಥಿತ ವಾಸುದೇವಾದಿ। ಅನನ ಚತುಷ್ಟಯ ಸೀಲ ವರುಣಾಗ್ನಿ ಸೋಮ। ಭಾನು ಉರಗದೇವ ಇವ ರಂತರ್ಗತ। ಶ್ರೀನಿವಾಸನರೂಪ ವಾಸುದೇವ ವಿಷ್ಣು। ಭಾನು ಭಾರ್ಗವ ವಟುನಾರಾಯಣ ಜಯಾನಾಥ। ಈ ಸೀತಿ ಹಯವದನ ನರಸಿಂಹ ಪ್ರದ್ಯುಮ್ನ। ಜ್ಞಾನ ಮತ್ಸ್ಯನು ಕೋಲ ಕೂರ್ಮಮೂರುತಿ ಮತ್ತೆ। ಜಾನಕಿರಮಣ ಬದರಿನಾರಾಯಣ। ರೇಣುಕಾನಂದನ ಜಯಂತನರಸಿಂಹ ಈ ನವ ವರುಷ ಸರ್ವ ದ್ವೀಪಲ್ಲಿ ನೋಡು। ಜ್ಞಾನ ಗಾತುರ ಹರಿ ವಿಜಯ ವಿಠ್ಠಲರೇಯ। ನಾನಾ ರೂಪಗಳಿಂದ ಅರ್ಚನೆ ಕೈಕೊಂಬಾ ॥೩॥

ಝಂಪೆತಾಳ

ಸಿರಿ ಮಾಧವ ವೀರನಾರಾಯಣ ಕೃಷ್ಣ। ತರಣಿ ಮೊಮ್ಮಗ ರಾಮ ಚಂದ್ರ ಮಹಾವಿಷ್ಣು ವರಹ ಕ್ಷೀರ। ಶರಧಿಶಯನ ನರಹರಿ ತ್ರಿವಿಕ್ರಮ ದೇವ। ಹರಿಗ್ರೀವ ಶ್ರೀಧರಾನಂತ ಜನಾರ್ದನ। ಪರಮೇಷ್ಠಿ ಈಶದೇವ ಕೇಶವಾದಿ। ವರದತ್ತಾತ್ರಯ ವೇಂಕಟೇಶ ಕೋಲ ಗದಾ। ಧರ ಲಕ್ಷ್ಮೀ ನಾರಾಯಣಾಚ್ಯುತ ಚಕ್ರಿ। ಸ್ಥಿರ ವಾಸುದೇವ ವಿಷ್ಣು ನಾರಾಯಣದೇವ। ಪರ ವಿಷ್ಣು ಬ್ರಹ್ಮೇಶ ಪರಮಪುರುಷ। ವರದೇವ ವಾಸುದೇವ ಸಂಕರುಷಣ ಕೃತಿಪ। ವರ ಅನಿರುದ್ಧ ರೂಪಗಳ ನೆನೆಸು। ತಿರುಗಿ ಇದೆ ರೂಪಗಳು ನಾರಾಯಣಸಹಿತ। ಎರಡೊಂದುಗುಣ ವಾಸುದೇವ ರಾಮ। ವರಹ ಪ್ರವರ್ತಕ ವಿಶ್ವ ತೈಜಸ ಪ್ರಾಜ್ಞ। ಭರಿತ ವಿಮಲಾದಿಶಕ್ತಿನವ ರಾಜರಾಜೇ ಶ್ವರಿ ವಿಭೂತಿರೂಪ ಪ್ರತ್ಯಕ್ಷ ಪರಂಪರೆ। ಇರತಕ್ಕವು ಇತ್ತು ತತ್ತತ್ಕಾಲ [illegible]। [illegible] ಮಹಾಕಾಲ ಮೊಸುತ ಗದಾ। ಧರ ಕೇಶವಾತ್ಮಕ

ಗೋವಿಂದ ನಾರಾಯಣ। ಅರಿಧರವಿಷ್ಣು ಮಧುಹಾಮಾಧವ। ಕರಣೇ–ಶಾಂಬುಜನಾಭ ಶ್ರೀವತ್ಸದೇವ ಸಂ। ದರ ಜನಾರ್ದನ ದಾಮಜಠರ ವಿಶ್ವ। ಶರ ಸಂಚಾರ ವಟು ತ್ರಿವಿಕ್ರಮ ನೃಸಿಂಗ ಭೂ। ವರಹ ಭಾರ್ಗವ ಲಕ್ಷ್ಮಣಾಗ್ರಜ ರಾಮ। ನರ ನಾರಾಯಣ ನರ ದತ್ತ ಕಪಿಲ ಮುನೇ। ಶ್ವರ ಸನತ್ಕುಮಾರ ಹಯವದನ। ಹರಿ ಮಿತ್ರಾ ಮಹಿದಾಸ ಕಮಠ ಮೂರುತಿ ಧನ್ವಂ। ತರಿ ವೃಷಭಯಜ್ಞ ಬಲಭದ್ರ ವ್ಯಾಸ। ನಿರುಪಮ ಬುದ್ಧ ಕಲ್ಕಿ ಗಂಗೆಯ ಪೆತ್ತನ। ಸ್ಮರಿಸು ಪಾಷಾಂಡಗಣಾತ್ಮ ಮಾದಕ್ಕೆ। ಪರಮಪಾವನ ರಂಗ ವಿಜಯವಿಠ್ಠಲರೇಯ। ಸರುವಕಾಲದಲ್ಲಿ ಭಕ್ತರಿಗೊಲಿದಿಪ್ಪಾ ॥೪॥

ತ್ರಿವಿಡಿತಾಳ

ಸದಮಲ ಅಜ ಅಣಿಮಾ ಯಜ್ಞ ಅಚ್ಯುತ ಹಯ। ವದನ ಕೇಶವ ಈಶಸ್ವಾತ್ಮ ವಿಷ್ಣು ರುರುಕ್ರಮ। ಮುದದಿಂದ ಕೇಶ್ವರ ಚಕ್ರಿ ಗದಿ ಧನು ರಾಸ್ಯ(?)। ಮಧುಸೂದನ ಇಂದ್ರ ವರ ಜಾತ ರಕ್ಷಾತ್ಮ। ಚದುರ ಹಲಧರ ಹೃಷೀಕನಾಥ ನಾರಾಯಣ। ಉದಧಿನಿವಾಸ ಯೋಗೇಶ್ವರ ಪೃಶ್ನಿಜ। ಒದಗಿ ಪರಮಪುರುಷ ಗೋವಿಂದ ಮಾಧವ। ನಿಧಿ ವೈಕುಂಠಾತ್ಮಕ ಶ್ರೀ ಪತಿಯು ಯಜ್ಞ। ಇದರ ತರುವಾಯ ವಿಶ್ವೇಂದ್ರನಾಮಕ। ಪದವೀವ ಪ್ರಾದೇಶ ನಾಮಕಂಗುಟಮಾತ್ರ ಜೀವಸ್ಥ। ತದುಪರಿ ಏಕಪಂಚಾಶ ನ್ಮೂರ್ತಿಗಳೆನ್ನು। ಮಧು ವಿದ್ಯಾವಾಸಿಗಳ ಚಿಂತಿಸು ಬಿಡದೆ। ಹದಿನಾಲ್ಕು ಮನ್ವಂತರದಲ್ಲಿ ಅವತಾರಗಳು। ಪದೋಪದಿಗೆ ಪೊಳವುತಿದೆ ಪೆಸರಿಸಿಂದ। ಮೊದಲು ಯಜ್ಞ ವಿಭು ಸತ್ಯಶೇನ ತಾಪಸ। ಇದೆ ಸಿದ್ಧ ವೈಕುಂಠ ಅಜಿ ತಾರ್ಕ್ಷ್ಯ ವಾಮನ। ಅಧಟ ಸಾರ್ವಭೌಮ ವೃಷಭ ಶಾಂತಾಖ್ಯಾ। ಸಿಧಿ ಧರ್ಮಸೇತು (ಶ್ವೇತು) ಸ್ವಧಾಮ ಯೋಗೇಶ್ವರ। ತುದಿಗೆ ಬ್ರಹದ್ಭಾನು ಗುಣಿಸಿ ಎಣಿಸಿ ಮುಂದೆ। ಉದಯಾರ್ಕ ಸನ್ನಿಭ ವಿಜಯವಿಠ್ಠಲರೇಯ। ಹೃದಯದೊಳಗೆ ಪೊಳವ ಕಾರುಣ್ಯವನುಮಾಡಿ ॥೮॥

ಅಟ್ಟತಾಳ

ಅವನಿಯೊಳಗೆ ಕೇಳು ಮನು ಮುನಿನೃಪರಲ್ಲಿ। ಅವತರಿಸಿದ ರೂಪ ಹಿಂದೆ ಮನ್ವಾದಿಯಲಿ। ಸ್ತವನಮಾಡಿದರೂಪ ಹದಿನಾಲ್ಕರಲಿ ನಾ।

ವಿವರಿಪೆ ಮಹಿದಾಸ ದತ್ತ ವೇದವ್ಯಾಸ । ರವಿಜಾತ್ಮ ಕೃಷ್ಣ ನರನಾರಾಯಣ ಹರಿ । ರವಿಕುಲಾಗ್ರಣಿ ರಾಮ ಪ್ರಶ್ನಿಗರ್ಭ ಯಾ । ದವ ವಿಷ್ವಕ್ಸೇನ ಭಾರ್ಗವ ಬುದ್ಧ ಕಲಿಕಿ ಮೆ । ರೆವ ಶಿಂಶುಮಾರ ಧನ್ವಂತರಿ ಋಷಭ ಮಹಾ । ಕವಿ ಕಪಿಲ ಮಿಕ್ಕ ಹರಿಯವತಾರ ಮಾ । ನವರಲ್ಲಿ ಉದ್ಭವವಾದ ಮಹಿಮೆ ಮ । ತ್ರಿವಿಕ್ರಮ ಮತ್ಸ್ಯ ಕೂರ್ಮ ವರಹ ನರಸಿಂಹ । ಧವಳ ವರ್ನ ಹಂಸ ಹಯಗ್ರೀವ ನಾನಾ ಪ್ರಾದು । ರ್ಭಾವ ಯುವತಿ ನಾರಾಯಣಿ ರೂಪ ಬಲ ರೂಪ । ಭುವಿ ತತ್ವ ನಾನಾ ವರ್ಣ ಮಂತ್ರ ದೇವತಾ । ಅವ ಕಾಶ ಪರ್ಯಂತ ಭಗವದ್ರೂಪಗಳೆನ್ನು । ನವ ನವ ಮೋಹನ್ನ ವಿಜಯ ವಿಠ್ಠಲರೇಯ । ಭವದಿಂದ ತೆತ್ತುವ ಇನಿತು ಭಜನಮಾಡೆ ॥೬॥

ಆದಿತಾಳ

ಸಕಲ ಪ್ರತಿಪಾದ್ಯ ಸರ್ವದ ಸ್ಥಿತಿ ನಿಯಾ । ಮಕ ಅವತಾರ ಪ್ರಾದು ರ್ಭಾವ ಆವೇಶ ಪ್ರವ । ರ್ತಕ ಉಪಾಸ್ಯ ಆಶ್ರಯ ಏಕೈಕಾಭೀಷ್ಟಪ್ರದ । ಮುಕುತ ವಾಲಗ ಕರ್ಮಮೋಚಕ ಭೋಕ್ತೃಭೋಗ । ಅಖಿಲ ಆಧಾರ ಶಕ್ತಿ ಸರ್ವಲೋಕಾಶ್ರಯ । ಅಕಳಂಕ ನಾನಾರೂಪ ಸರ್ವದ ನಿರ್ಭಿನ್ನ । ಲಕುಮಿರಮಣನಲ್ಲದೆ ಅನ್ಯರಿಗೆ ಈ ಮಹಿಮೆ । ಪ್ರಕಟ ಗುಪುತನಾಗಿ ಅಂತಿಕ ದೂರದಲಿ । ಭಕುತರನ ಸಲಹುವ ಕಾರಣ ಕಾರ್ಯದಲ್ಲಿ । ತಕ್ಕ ತಕ್ಕ ಸೂಕ್ಷ್ಮ ಸ್ಥೂಲ ಕಾಲದಿ ಜಡದಲಿ । ಸುಖಪೂರ್ಣ ಜ್ಞಾನನಾಗಿ ವ್ಯಾಪಾರಮಾಡಿಸುವ । ಸಖನಾಗಿಯಿಪ್ಪ ಸರ್ವಜೀವರ ಸಾಧನಕ್ಕೆ । ದುಃಖ ಬಡದಂತೆ ಕಾವ ಇರಳು ಹಗಲು ಪೊಲಿದು । ಮಕ್ಕಳಾಟಿಕೆಯಂತೆ ಲೀಲೆ ಮಾಡುವ ಸಂ । ಮ್ಮುಖನಾಗಿ ಸತ್ವಾದಿಗುಣ ಉಪಾದಾನದಿಂದ । ನಖ ಶಿಖ ಪರಿಯಂತ ಸಾರ ಸುಂದರೋಪೇತ । ಸಕಲಾಭರಣ ಭೂಷಿತ ಜ್ಞಾನಾದಿ ಬಲಕಾಯ । ವಿಕಸಿತ ಚಿತ್ತದಲ್ಲಿದೆ ಧ್ಯಾನವಮಾಡು ಆರಂ । ಭಕೆ ಚಿಂತಿಸಿ ನೀನು ಸರ್ವರೂಪಾತ್ಮಕನಾ । ನಿಖಿಲ ಬಗೆಯಿಂವ ಹೃದಯಾಕಾಶ ಕ । ರ್ನಿಕೆಯಲ್ಲಿ ಪೂಜಿಸು ಒಂದಾನಂತನೆಂದು । ಋಕ್ ಯಜುಸ್ಸಾಮಾ ಥರ್ವಣವೇದದಲ್ಲಿ ನಿತ್ಯ । ಅಕಳಂಕವಾಗಿದೆ ಇದೆ ಸಿದ್ಧಾಂತಮಹಾಪ್ರಮೇಯ । ರುಕುಮಿಣಿಪತಿ ನಮ್ಮ ವಿಜಯವಿಠ್ಠಲ ಪ್ರೇ । ರಕನೆಂದು ನಿತ್ಯ ನಂಬು ನಂಬು ನಾನಾವಿದ್ಯಾ ಬಪ್ಪದು ॥೭॥

ಜತೆ

ದಿನದಿನಕೆನಿತಿನಿತು ಧ್ಯಾನಮಾಡಲು । ನಿನಗೆ ಪ್ರಣವ ಮೂರುತಿ ವಿಜಯವಿಠ್ಠಲ ಪೊಳೆದು ನಿಲುವ ॥೮॥

ಸುಳಾದಿ ೨೭

ಚಲಾಚಲಪ್ರತಿಮಾಗಳಲ್ಲಿಪ್ಪ ಶ್ರೀ ಹರಿಯ ಗುಣ ರೂಪ ಕ್ರಿಯ ಚಿಂತಿಸಿ ಮಾನಸ ಪೂಜಾ ಕ್ರಮ ವಿವರ

ರಾಗ ಶಂಕರಾಭರಣ ಧ್ರುವತಾಳ

ಮಾನಸಪೂಜೆಮಾಡು ಮನೋಹರಗುಣದಿಂದ । ಜ್ಞಾನ (ವೈರಾಗ್ಯ) ವಿಜ್ಞಾನ ತೈಲಧಾರಿ ಭಕುತಿ । ಧ್ಯಾನವಗ್ಗಿಯೊ ಶ್ರುತಿಗೆ ಅಪ್ರಮಾಣ ಬರಲೀಯದೆ । ಕಾಣು ಶ್ರೀ ಹರಿಪಾದ ತಾತ್ವಿಕರೊಡನೆ । ಭಾನು ಮೊದ ಲಾದ ಚೇತನಾಚೇತನದಲ್ಲಿ । ಮಾಣದೆ ನೋಡಿ ತಿಳಿಯೊ ಪೂಜಾ ವಿಧವ್ಯೊ ದಾನವಾರಿಯ ರೂಪ "ಚಲಂಚಾಚಲಮೇವಚ" । ಆನಂದತೀರ್ಥರ ವಾಕ್ಯಸಿದ್ಧ್ಯಾ । ಮಾನವ ಮಾನಿಗಳಿಗೆ ಅರ್ಚನೆಗೆ ಯೋಗ್ಯವಾದ । ವೇಣು ಶಾಸ್ತ್ರೋಕ್ತಿಯಲ್ಲಿ ಪೇಳಿದ ಪ್ರತೀಕ । ನೀನೊಲಿದು ಕೇಳುವದು ಚಲದಲ್ಲಿ ವಿವರಣ । ಆ ನಳಿನಸಂಭವ ತೃಣಜೀವಾಂತಾ । ಎಣಿಸಿ ನೋಡಲು ಇದ ರೊಳಗನೇಕವುಂಟು । ಗೌಣ ಅಧಿಕ ಅಧಿಷ್ಠಾನಗ್ರಹಿಸೊ । ಯೋನಿಭೇದ ದಿಂದ ಭಗವಂತನ ಪೂಜಾಫಲನೋ । ಜ್ಞಾನಿ ಚಿಂತಿಸು ಜಂಗಮ ಸ್ಥಾವರ ನಿತ್ಯ । ಕಾಣಿಸದಿಪ್ಪರು ಕೆಲವು ಬ್ರಹ್ಮಾದಿಗಳು (೯ಳಿಲ್ಲ) । (ಏ)ಎಣಿಸಬೇಕು ಇವರ ಚರ್ಯತನವೂ । ಏನು ಉಳದದ್ದು ಆಗಮ ಉಕ್ತಿಲಿ ನಿ । ದಾನಿಸಿ ತಿಳಿಯಬೇಕು ಅಜ್ಞಾನದೃಷ್ಟಿ । ಅನಪರೋಕ್ಷಕಾಲ ಇನಿತು ಸಾ । ಧನ ಗೈಯೋ ಜ್ಞಾನ ಪ್ರಾಪುತವಾಗೆ ಪ್ರತ್ಯಕ್ಷವ್ಪೂ । ಈ ನುಡಿ ಹಿಂಗಳೆದು ಉಳಿದ ವಿಚಾರಕೇಳು । ಪ್ರಾಣಿಗಳಲ್ಲಿ ಸಂಚರಿಸುತಿಹರೊ । ಅನಂತಾನಂತ ದ್ವಿವಿಧಕರ್ಮ ಮಾಡುತಿಪ್ಪರು । ಕಾಣಿಸುತಿಪ್ಪರು ನೋಡಿದರಾಗೆ । ನೀನು ತಿಳಿಯೊ ಒಬ್ಬರಂತೆ ಕರ್ಮಗಳನು । (ಮಾ) ಮನದಿಂದಲಿ ಇದೆ ಪ್ರಮಾ ಣವ್ಪೊ । ಧ್ಯಾನವಮಾಡು ಮನ ಚಲಮೂರುತಿಯ । ಏನೆಂಬೆ ಇದರೊಳು ತಂತಮ್ಯವಕ್ಕು ಭರದಿ । ತಾನು ತನ್ನಯಗುರು ಸರ್ವಭೂತ । ಶ್ರೇಣಿಯಲ್ಲಿ

ಅರ್ಚಿಸು ನಿಜೋಚ್ಚ ಭಾವನೆಮಾಡಿ । ಆನಂದವಾಗು ಸ್ಥಾವರದಲ್ಲಿ ಇನಿತು । ಧ್ಯಾನವಮಾಡು ಮನವೆ ಚಲಪ್ರತೀಕವ । ಮಾನಸಹಂಸ ನಮ್ಮ ವಿಜಯ ವಿಠ್ಠಲರೇಯನ । ಕಾಣುವ ಯೋಗ್ಯತೆ ಸಂಪಾದಿಸು ಸಜ್ಜನರಕೂಡ ॥೧॥

ಮಟ್ಟತಾಳ

ಚಲಪ್ರತೀಕದೊಳು ತರತಮ್ಯವೆ ಉಂಟು । ತಿಳಿದು ಜ್ಞಾನಿಗಳು ನಾನಾಪ್ರಕಾರ । ಕೆಲವು ಕಣ್ಣಿನಿಂದ ಹಸ್ತ ಶ್ರವಣದಿಂದ । ಕೆಲವು ಕೆಲವು ವಾಕ್ಯದಿಂದ ಗಾತ್ರದಿಂದ । ಕೆಲವು ಮನಸಿನಿಂದ ಹರಿಯ ತೃಪ್ತಿಯಬಡಿಸಿ । ಕಲಕಾಲಗುಣಿಸು ವಂದನಾದಿ ಕರ್ಮ । ಜಲ ತೃಣ ವೃಷ್ಟ್ಯಾನ್ನ ಇಷ್ಟ ವಾದವೆಲ್ಲ । ಜಲಜನಾಭನೆ ಕೈಕೊಂಬ ಕರುಣದಿಂದ । ಸ್ಥಳ ವಿಶೇಷದಿಂದ ನಾಮಭೇದಗಳಕ್ಕು । ಸುಲಭ ಮೂರುತಿ ನಮ್ಮ ವಿಜಯವಿಠ್ಠಲರೇಯನ । ಒಲಿಸಿ ಸಂತತ ಸರ್ವಸ್ಥಾನದಲ್ಲಿ ಪೂರ್ಣಾ ॥೨॥

ತ್ರಿವಿಡಿತಾಳ

ಪೂಜಿಸು ಈ ಪರಿ ಚಲಪ್ರತಿಮೆ ಮಧ್ಯ । ಮೂಜಗತ್ಪತಿ ಹರಿಯ ರೂಪವೆಂದೂ । ರಾಜೀವಪೀಠ ಮಿಕ್ಕಾ ದೇವತೆಗಳು (ಚೇತನಗಳು) । ಭೋಜನಮಾಡುವ ಚೇಷ್ಟಾದಿಯೂ । ರಾಜಿಸುತಿಪ್ಪವು ತದ್ಭಿನ್ನವಾಗಿವೆ । ಸೋಜಿಗವೇನಂಬೆ ಹರಿ ಆಧೀನ । ರಾಜ್ಯದೊಳಗೆಕೇಳು ಮುಖ್ಯ ಪುರುಷ ಕಾರಣ (ಕರುಣ) । ಸ್ತ್ರೀ ಜನ ಪ್ರಸೂತವಾದರೆಂಬೊದೇನಯ್ಯಾ । ಈ ಜೀವಿ ಗಳು ಮಾಡುವ ನಾನಾ ವ್ಯಾಪಾರ । ರಾಜೀವನೇತ್ರ ಮಾಳ್ಪನಾಗೆ । ಮಾಜದೆ ಖ್ಯಾತಿ ಜೀವರಿಗೆ ಒಂದದು ಕಾಣೊ । ಬೀಜವಮಾತಿಲಿನೋಡೆ ಬಿಂಬಕ್ರೀಯಾ । ವಾಜಿ ಕಟ್ಟಿದ ತೇರು ಬಂದರಾದಡೆ ಪೆಸರು । ವಾಜಿಗೆ ಪೇಳರು ಬಂತೆಂಬವರು ತೇರು । ಭೂ ಜಡವಾದರೂ ಬೆಳಿಯತೆಂಬರು ಇದಕ್ಕೆ । ನೈಜವಾಗಿದ್ದ ಪರ್ಜನ್ಯಗೆ ಪೆಸರ್ಯಾಕೆ । ಈ ಜಗದೊಳಗೆ ಪ್ರಧಾನ ವಿದ್ಧರುಕೀರ್ತಿ । ರಾಜಿಸುತಿವೆ ಅಪ್ರಧಾನಮಾತು । ಸುಜನರು ಬಲ್ಲರು ಇದರ ವೃತ್ತಾಂತ ವಿ । ರಾಜದೇಹದತನಕ ಗುಣಿಸಿದರೂ । ಭೋಜ ಕುಲೋತ್ತಮ ಕೃಷ್ಣನಲ್ಲದೆ ಅನ್ಯ । ರಾಜನ್ಯ ಮಿಕ್ಕಾದ ಜೀವಿಗಳೆಲ್ಲರು । ಆಜನ್ಮವಾರಭ್ಯ ಇಂತು ತಿಳಿದು ಹೃತ್ಸ । ರೋಜದಲಿ ಇದ್ದ ಬಿಂಬನ್ನ

ಪಾಡುವರು । ಕುಜನರು ಇದರಂತೆ ಕೊಂಡಾಡದಲೆ ಬಲು । ವ್ಯಾಜದಿಂದಲಿ ನರಕಸೇರುವರು । ರಾಜರಾಜೇಶ್ವರ ವಿಜಯವಿಠ್ಠಲ ಯೋಗ । ರಾಜಿವ ಮಿತ್ರನ್ನ ಚಿಂತಿಸು ಚೇತನದಲ್ಲಿ ॥೩॥

ಅಟ್ಟತಾಳ

ಇದರೊಳು ಅಜ್ಞಾನ ಜ್ಞಾನವಾಗಿದ್ದ ದ್ವಿ । ವಿಧವುಂಟು ಚಲಮೂರ್ತಿ ಒಂದಾನಂತವಾಗಿ । ಮುದದಿಂದ ಧೇನಿಸು ಜನ್ನಾಗಿ ತರುವಾಯ । ಸದ ಮಲ(ವಾಗಿ)ದಲಿಪ್ಪ ಅಚಲ ಪ್ರತಿಮೆಯನ್ನು । ಸುಧಿಯಿಂದ ತಿಳಿವದು ಭಕುತಿಯಿಂದಲಿ ಬಲು । ವಿಧ ಪೂಜೆಗೊಳುತಿಪ್ಪ ವ್ಯಕ್ತಾ ವ್ಯಕ್ತಕಾಯ । ಉದಧಿ ಮೇಖಲದೊಳು ಅಪರೋಕ್ಷಿ ಬ್ರಾಹ್ಮಣ । ಮೊದಲಾದ ಚಾಂಡಾಲ ಜಾತಿಯವರು ಮು । ಟ್ಟದರೆ ದೋಷವಿಲ್ಲ ಸರ್ವದ ಪವಿತ್ರ । ಬುಧರಿಗೆ ಸಮ್ಮತ ಅವ್ಯಕ್ತ ಭಗವಂತ । ಅಧಿಷ್ಠಾನವುಳ್ಳ ಸಾಲಿಗ್ರಾಮ ಮುಖ್ಯ । ಸನ್ನಿಧಿಯಾಗಿಪ್ಪನು ಲೋಕಪಾವನಕಾಣೊ । ಸುದರುಶನದಿಂದ ಅಭಿಧಾನ ಪ್ರಭೇದ । ಅಧಮಾಧಿಕಾರನು ಇದರಲ್ಲಿ ಅಪರೋಕ್ಷ । ಒದಗಿ ಕಾಂಬರು ಮತ್ತೆ ಅನ್ಯತ್ರದಲಿ ಉಂಟು । ಬದರಿ ದ್ವಾರಕಿ ಮಾಯಾ ಕಾಶಿ ಪ್ರಯಾಗ ಪ್ರ । ಪದ ವೀವಾ ಗಯಾಕ್ಷೇತ್ರ ಅಯೋಧ್ಯಾ ಜಗನ್ನಾಥ । ಯದುಗಿರಿ ತೋತಾದ್ರಿ ಶ್ರೀಮುಷ್ಣ ಮುನ್ನಾರ । ಪದುಮನಾಭಾನಂತ ವೆಂಕಟಚಲ ಪುಣ್ಯ । ನಿಧಿಯಲ್ಲಿ ನಿಲಿಸಿದ್ದ ಪ್ರತಿಮೆ ಕ್ರಮದಿಂದ । ವಿಧಿ ಶಂಭು ಮಿಗಿಲಾದವರು ಪೂಜಿಸಿದರಿನ್ನು । ಪದೋಪದಿಗೆ ಯಾತ್ರಿಮಾಡುತ ನೋಳ್ಪದು । ಇದರಂತೆ ನಿರೀಕ್ಷಿಸು ಮನುಷ್ಯಕೃತ ದಶ । ವಿಧ ಪ್ರತಿಮೆಗಳ ಸ್ವರ್ನಾದಿ ರೂಪವು । ಪದನಖಮಸ್ತಕ ಲಕ್ಷಣವಾಗಿದೆ । ಚದುರತೆಯಿಂದ ಪೂಜಿಸು ದ್ರವ್ಯಗಳಲ್ಲಿ । ಉದಯಾರ್ಕ ವಿಧು ತಾರಾಮಂಡಲ ಪಾವಕ । ನದಿ ನದಿ ಸಾಗರ ಪರ್ವತ ಸರೋವರ । ಹೃದಯ ಗಗನ ಸಮಸ್ತ ಸೂಕ್ಷ್ಮ ಸ್ಥೂಲ । ದಧಿ ಶಬ್ದ ಮುಂತಾದ ನಾನಾ ಅಚಲಗಳು । ಮೃದು ಮಾರ್ಗದಿಂದಾಗಲಿ ಮನೋಹರನಾಗು ಮು । ನ್ನಿದಕೆ ನಿಸ್ಸಂದೇಹ ಯೋಚಿಸು ನಿರುತಾ । ಸದಮಲಮೂರುತಿ ನಮ್ಮ ವಿಜಯವಿಠ್ಠಲರೇಯನ । ಪದಗಳ ಬಿಗಿದಪ್ಪು ಮನಸಿನಲಿ ನೆನೆದೂ ॥೪॥

ಆದಿತಾಳ

ಬೊಮ್ಮಾಂಡದೊಳಗಿನಿತು ವ್ಯಕ್ತಾವ್ಯಕ್ತಮೂರ್ತಿ । ಒಮ್ಮನದಲಿತಿಳಿ ತದಾಕಾರ ತದ್ವರ್ಣ । ಚಿನ್ಮಯರೂಪನ್ನ ಅಚಲಕೋಟಿ ಮಧ್ಯ । ಒಮ್ಮೆ ಒಮ್ಮೆ ನೆನೆದು ನಾನಾ ಪೂಜೆಯಮಾಡು । ರಮ್ಮೆ ತತ್ವದಕನಕ ಇನಿತು ರಚಿಸಿ ವೇಗ । ದುನ್ಮಾನಗಳು ಎಲ್ಲ ಕಡಿಗೆ ನೂಕಲಿಬೇಕು । ಅಮ್ಮಮ್ಮ ಈ ಬಗೆ ಪೂಜಾಸಾಧನ ಧ್ಯಾನ । ನಿಮ್ಮ ನಿಮ್ಮ ಮನಸಿನಲಿ ಮಾಡಿರೊ ಎಂದು ಸಾರಿ । ಸನ್ಮತಿಯಿಂದಲಿ ಜನಕೆ ಪೇಳಲಿಬೇಕು । ತಮ್ಮ ತಮ್ಮ ಯೋಗ್ಯತ ಪೂರ್ವಕರುಮಾಡಿ । ಅವಿಕೃರಿತ ಲೋಕವಾಸವಾದರು ಮನವೆ । ಅವ್ಮಿಶ್ರ ನೀನಾಗು ನೀಚವೃತ್ತಿಯಬಿಟ್ಟು । ಉಮ್ಮಾಹ ಭಕ್ತಿಲಿ ನಲಿನಲಿ ದಾಡು ಓಲಾಡು । ಬೊಮ್ಮನಯ್ಯಾ ನಮ್ಮ ವಿಜಯವಿಠ್ಠಲಿರೇಯ । ಸಮ್ಮೊಗವಾಗುವ ಸಂಚಿತಾಗಮ ಕಳೆದೂ ॥೭॥

ಜತೆ

ಚಲ ಅಚಲಾಂತರದಲಿ ನಿತ್ಯಸೇವಿಸು ಮಹಾ । ಬಲವಂತ ವಿಜಯ ವಿಠ್ಠಲ ನಾನಾ ರೂಪಾ ॥೮॥

ಸುಳಾದಿ ೨೮

ಬಹಿರ ಪ್ರತಿಪದಾರ್ಥಗಳಲ್ಲಿ ಚತುರ್ವಿಂಶತಿತತ್ವ ಆ ತತ್ವ ನಿಯಾಮಕ ದೇವತೆ ಗಳಂತರ್ಗತ ಶ್ರೀಹರಿ ವ್ಯಾಪಾರ ಅನುಸಂಧಾನ ಪೂರ್ವಕ ಬಿಂಬೋಪಾಸನೆ ಪೂಜಾಕ್ರಮ

ರಾಗ ಸಾರಂಗ ಧ್ರುವತಾಳ

ಹರಿಯಾರ್ಚನೆಯಮಾಡು ಹರುಷದಿಂದಲಿ ಮನವೆ । ನಿರುತ ಯೋಚಿಸು ನಿನ್ನೊಳಗೆ ನೀನು । ಧರಣಿಮೇಲಿದ್ದ ಪುಷ್ಪಫಲ ವುದಕಾದಿ ಯಿಂದ । ಪರಿಪರಿ ಪೂಜೆಯನ್ನು ಮಾಡಿದರೂ । ಹಿರಿದಾಗಿ ಜ್ಞಾನ ನಿನಗೆ ಪುಟ್ಟದು ಕಾಣೊ ನಿಂ। ದಿರದು ಈ ಪುಣ್ಯ ಮೇಲುಗತಿ ಮಾರ್ಗಕೆ । ಬರಿ ದಾಗಿ ಪೋಗುವದು ಸಂತತ ತಿಳಿವದು । ಹರಣಾ ಬಳಲಿಪಲಾಗದು ಸುತ್ತಿ ಸುತ್ತಿ । ಕುರುಡನ್ನ ಕೈಯ ಪಿಡಿದು ಕುರುಡಪೋದಂತೆಯೊ । ಪರಮ ಭಕುತಿ ಜ್ಞಾನ ವೈರಾಗ್ಯವ । ದೊರಿಯದೆ ಬಗೆಬಗೆ ಪೂಜಿಸಿ ಹಾದಿದರು । ಸ್ಪರಿಶವಾಗದು ಕಾಣೊ ಪುಣ್ಯ ಜನರ । ಸಿರಿ ತತ್ವವಿಡಿದು

ಗುಣಿಸು ಶನೈಶ್ಚರ ತತ್ವ । ಪರಿಯಂತ ಹರಿವ್ಯಾಪ್ತಿಗಲ್ಲಿಗಲ್ಲಿ । ಪರಮ ರೂಪ ಗಳುಂಟು ಒಂದಾನಂತವಾಗಿ । ಮಿರಗುತಿವೆ ನೋಡು ಭೇದವಿಲ್ಲಾ । ಸುರಗಣನುತ ವಿಜಯವಿಠ್ಠಲರೇಯನ । ಚರಣಾರ್ಚನೆ ಮಾಡಲು ಸರ್ವ ಲೋಕವೆ ತೃಪ್ತಿ ॥೧॥

ಮಟ್ಟತಾಳ

ಒಂದು ಬಿಂದೋದಕ ಒಂದು ತುಲಸಿ ಪತ್ರ । ಒಂದು ಫಲವು ಮತ್ತೊಂದು ಮಂಗಳಾರ್ತಿ । ಒಂದು ಧೂಪಾರತಿ ಒಂದು ಚರವು ಅನ್ನ । ಒಂದು ಸ್ತೋತ್ರದ ಪಠಣೆ । ಒಂದು ವಂದನೆ ಒಂದೇ ನಮಸ್ಕಾರವನ್ನು । ನಂದದಿಂದಲಿಮಾಡೆ ಕುಂದದೆ ಶ್ರೀಹರಿ । ಮಂದಹಾಸದಲಿಂದ । ಚಂದವಾಗಿ ಒಲಿದು ನಿಂದರದೆಕೊಂಬ । ಸಿಂಧುಶಯನ ನಮ್ಮ ವಿಜಯವಿಠ್ಠಲರೇಯನ । ಒಂದು ಮೂರುತಿಗೀಯೆ ಬಲು ರೂಪಕೆ ಉಂಟು ॥೨॥

ತ್ರಿವಿಡಿತಾಳ

ಒಬ್ಬ ಮನುಜ ತಾನು ಸಭೆಯೊಳಗೆ ಕುಳಿತು । ಶಬ್ದ ನುಡಿದರೆ ಸರ್ವರು ಕೇಳಿದಂತೇವೆ । ಅಬ್ಜನಾಭನ್ನ ಒಂದು ಮೂರುತಿಗೆ । ತಬ್ಬಿಬ್ಬಿ ಕೊಳದಲೆ ಉದಕಗಳಿಂದ । ಉಬ್ಬಿ ಉತ್ಸಹದಲ್ಲಿ ಪೂಜೆಯಮಾಡಿದರೆ । ದಭ್ರಬಿಡದಲೆ ಹರಿ ಸರ್ವರೂಪಗಳಿಂದ । ನಿಬ್ಬಡೆಯಾಗಿ ಪೊಪ್ಪಗೊಂಡು ಕೃಪೆಯಿಂದ । ಹಬ್ಬಿದ ಕರ್ಮಗಳಿಂದ ಕಡೆಗೆಮಾಡಿ । ಒಬ್ಬಗೆ ಗತಿಯನ್ನು ಕೊಡುವ ವೇಗದಲ್ಲಿ । ಶಬ್ದಗೋಚರ ನಮ್ಮ ವಿಜಯವಿಠ್ಠಲನಂಘ್ರಿ । ಅಬ್ಜವ ನೆನದವಂಗೆ ಆವಾಗ ಫಲವಕ್ಕು ॥೩॥

ಅಟ್ಟತಾಳ

ಪದೋಪದಿಗೆ ನಿನ್ನ ಹೃದಯದೊಳಗೆ ಧ್ಯಾನ । ಮುದದಿಂದ ಮಾಡೋದು । ಪದುಮನಾಭನ ವ್ಯಾಪ್ತಿ ಅಖಂಡದಲಿ ಉಂಟು । ಅದರ ತರುವಾಯ ಸಿರಿ ಅಜಭವ ಇಂದ್ರ । ಮದನ ವಿಡಿದು ಶನೇಶ್ಚರ ವ್ಯಾಪ್ತಿ ತಿಳಿದು ನಿ । ಲ್ಲದೆ ಇವರ ಪೂಜೆ ಆವಾವ ಬಗೆಯಿಂದ । ಉದಯಾಸ್ತಮಾನ ಪರಿಯಂತ ರಚಿಸಲು । ಇದೆ ಇದೆ ತತ್ವೇಶರ ವ್ಯಾಪ್ತಿ ಪರಿಯಂತಾ । ಸದ ಮಲ ವಾಗಿ ಮುಟ್ಟುವದೆಂದು ಧ್ಯಾನಿಸಿ । ಪದವಿಗೆ ಸೋಪಾನ ವೇಗ

ದಿಂದಾಗೋದು । ಚದುರ ಮೂರ್ತಿ ನಮ್ಮ ವಿಜಯವಿಠ್ಠಲರೇಯು । ಇದ ನೆನೆದರೆ ಕೈಕೊಂಡು ಸರ್ವರಿಗೀವಾ ॥೪॥

ಆದಿದಿತಾಳ

ಉಣಲಿ ಉಡಲಿ ಭೂಷಣಗಳು ಧರಿಸಲಿ । ಕುಣಿಯಲಿ ನಡಿಯಲಿ ಗುಣಗಳು ಎಣಿಸಲಿ । ತೃಣ ಮೊದಲಾದಲ್ಲಿ ಯೋಚನೆಮಾಡಲಿ । ಇನಿತು ಪೇಳಿದವರ ಸ್ಮರಣೆ ಮರಿಯದಿರು । ಜನರೊಳಗಿಪ್ಪ ನಮ್ಮ ವಿಜಯವಿಠ್ಠಲ ರೇಯನ । ಶಸಿಶನಿಯಲ್ಲಿ ತಿಳಿದು ಮುಕುತಿಸುಖಬಡು ॥೫॥

ಜತೆ

ಹಗಲಿರಳು ಚಿತ್ತ ವ್ಯಾಪ್ತಮಾರ್ಗದಲ್ಲಿಡೂ । ತ್ರಿಗುಣಾತೀತ ನಮ್ಮ ವಿಜಯವಿಠ್ಠಲ ವೊಲಿವಾ ॥೬॥

ಸುಳಾದಿ ೨೯

ಹೃತ್ಕಮಲಸ್ಥ ಬಿಂಬಪೂಜಾ, ಸಮನ್ವಯ ಅರಿಯಲಾರೆ, ಸರ್ವೋತ್ತಮನಾದ ಶ್ರೀಹರಿಬಿಂಬನ ವರ್ಣನೆ, ಸಕಲಕ್ರೀಯಾದಲ್ಲಿ ವ್ಯತಿರೇಕ ಪೂಜಾಕ್ರಮದಿಂದ ಅಧ್ಯಾತ್ಮ ಸಮನ್ವಯರೂಪ ಬಿಂಬೋಪಾಸನೆ

ರಾಗ ಭೈರವಿ ಝಂಪೆತಾಳ

ಹೃತ್ಕಮಲ ಮಧ್ಯದಲಿ ಪೊಳೆವ ವೈಚಿತ್ರಾ । ಸತ್ಕಾಲ ಕ್ರಮಣಿಯ ಮಾಡಿಸುವದನುದಿನಾ । ಸತ್ಕರುಣದಲಿ ಎನಗೆ ನಿನಗೆ ನಾನೊಂದು ಚ । ಮತ್ಕಾರದಲಿ ಪೇಳ್ವೆ ನಮಿತರಿಗತಿ ಪ್ರೇಮ । ಸತ್ಕಾರ ಪೂಜೆ ಪುರಸ್ಕಾರ ದಿಂದಲ್ಲಿ । ಮತ್ಕಾಯಃದಲಿ ನಿಲಿಸಿ ವೊಲಿಸಿ ಅರ್ಚಿಸಲಾರೆ । ಸತ್ಕುಲದಲಿ ಜನಿಸಿ ಹಗಲಿರಳು ಬಿಡದೆ ಬ । ಲತ್ಕಾರ ಭಜಿಸಿದರೆ ಸುರರಿಗಸಾಧ್ಯವೆ । ಮತ್ಕುಲದ ಸತ್ಕೃತವ ನಾನರಿಯೆ ವರ್ನಿಸಲು । ಶತ್ಕೋಟಿ ಧರನು ಬಲ್ಲನು ಕಾಣಿರೋ । ಸತ್ಕಥೆಗೆ ಪೊಳಪೊಕ್ಕು ಭೇದಿಸುವ ಪ್ರಬಲ ಜ । ಗತ್ಕಾರಣನೆ ವಿಜಯವಿಠ್ಠಲ ರಮೇಶಾ ॥೧॥

ಮಟ್ಟತಾಳ

ಹರಿ ಪರದೇವತಿ ಪರಿಪೂರ್ಣ ಮೂರುತಿ । ಧರೆಯೊಳು ಕೀರುತಿ ಮೆರೆವ ಜಗತ್ಪತಿ । ಸುರರೊಳಗಪ್ರತಿ ದುರುಳದಾನವರಾತಿ । ಶರಣೆಂದರೆ ಸುಮತಿ ಪರಿಪಾಲಿಪ ಪ್ರೀತಿ । ವಿಜಯವಿಠ್ಠಲಶ್ರುತಿ ವರಗಳಿಗೆ ಗತಿ ॥೨॥

ರೂಪಕತಾಳ

ಅಪ್ರಾಕೃತ ಮಹಿಮಾ। ಅಪ್ರಾಕೃತ ಲೀಲಾ। ಅಪ್ರಾಕೃತಕಾಯಾ। ಅಪ್ರಾಕೃತ ರೂಪ। ಅಪ್ರಾಕೃತ ತೇಜ। ಅಪ್ರಾಕೃತ ಪೂಜೆ। ಕ್ಷಿಪ್ರದಲಿ ಲಕುಮಿ। ಸುಪ್ರೀಮದಿಂದ ನಾ। ನಪ್ರಕಾರ ಮಾಡುತ ಪ್ರತಿಗಾಣಳೂ। ಅಪ್ರಮೇಯನೆ ರಂಗ। ವಿಜಯವಿಠ್ಠಲ ನಿನ್ನ। ಅಪ್ರಬುದ್ಧನು ನಾನು। ಸುಪ್ರೀತಿಬಡಿಸುವಿನೆ ॥೩॥

ಧ್ರುವತಾಳ

ಆವಾದು ನಿನ್ನಪೂಜೆ ಆವಾದು ನಿನ್ನಸ್ತೋತ್ರ। ಆವಾದು ನಿನ್ನ ಪ್ರೀತಿ ಆವಾದು ನಿನ್ನಸೇವೆ। ಅವದಾವುದರಿಂದ ವಿವರಿಸುವೆನೆ ನಾನು ಒಂದು ಕಾಣೆನೊ। ಪಾವನರೂಪ ಕೋಪಿದರರಸ ಶ್ರೀವಿಜಯವಿಠ್ಠಲ ಎನ್ನ। ಭಾವದಲ್ಲಿನಿತು ಭಾವಿಸುವೆನು ಕೇಳೊ ॥೪॥

ತ್ರಿವಿಡಿತಾಳ

ತನುವೆ ನಿಕೇತನ ಶಿರವೆ ಉತ್ತಮಕಳಸ । ಅನಿಲಾ ಬರುವ ರಂಧ್ರ ಯುಗಳ ಶ್ರವಣಗಳು। ಮಿನಗುತಿಪ್ಪ ಪೂರ್ವದ್ವಾರ ವದನವೇ ಗ। ಕ್ಷಣ ಉತ್ತರದ್ವಾರ ದ್ವಯ ನಾಸರಂಧ್ರ ಲೋ। ಚನವೆರಡೆ ಸುರದೀಪ ನಾಲಿ ಗೆಂಬೋದೆ ಘಂಟೆ। ವನಜ ಕರಗಳೆ ಬೀಸುವ ಚಾಮರ ಚೌರ। ಅನುವಾದ ಹೃದಯವೆ ಮಂಟಪವನೆ ರಚಿಸಿ। ಘನ ಕಳೆಯು ಕಾಂತಿ ಮಕರತೋರಣ ತಳಿಗೆ। ಅನುಪಮಾ ಬುದ್ಧಿ ಎಂಬೊದೇ ಗದ್ದಿಗೆಮಾಡಿ। ಎನ್ನ ಬಿಂಬ ಮೂರುತಿ ವಿಜಯವಿಠ್ಠಲರೇಯನ। ಮನವೆಂಬೊ ಭಟನಟ್ಟಿ ಕರೆಸಿ ನಿಲಿಸಿ ನೋಳ್ಪೆ ॥೫॥

ಅಟ್ಟತಾಳ

ಕುಡಿವ ಜಲಭಿಷೇಕ ಇಡುವ ಗಂಧವೆ ನಿ। ನ್ನಡಿಗೇರಿಸುವ ಗಂಧ ಕಡುಮುದ್ರೆ ಭೂಷಣ। ಉಡುವ ಪೀತಾಂಬರ ಉಡುಗರಿ ಇತ್ತವು। ಪಡೆದ ಜ್ಞಾನಾದಿ ನಿನ್ನಡಿಗೇರಿಸುವ ಪೂವೊ। ತಡಿಯದೆ ಜಠರಾಗ್ನಿ ಬಿಡದೆತ್ತುವ ಧೂಪಾ। ತೊಡನೊಡ ನೀಪರಿ ವಿಜಯವಿಠ್ಠಲಯ। ನ್ನೊಡಿಯನೆ ಒಡಂಬಡು ಬಡವನಪೂಜೆ ॥೬॥

ತ್ರಿವಿಡಿತಾಳ

ಭಕುತಿ ಎಂದೆಂಬೋದೇಕಾರುತಿ ಪ್ರತಿದಿನ। ಭುಕುತಿಗೆ ಹಾಕುವ ಕವಳ ನೈವೇದ್ಯ ಕಾ। ಣಿಕೆ ಚತುರವಿಂಶತಿನಾಮಗಳಯ್ಯಾ। ಸುಖ ವೆಂಬೋದೆ ಕರ್ಪುರ ತಾಂಬೂಲ ಕಾ। ಳಿಕ ನಾಶವೆಂಬೋದೆ ಕರ್ಪುರ ದಾರೂತಿ। ಮುಕುತಾರ್ಥ ತತ್ವರೂ ವಾಲಗದವರು ಗ। ಮಕದಲ್ಲಿ ತಿರು ಗುವದು ನಿತ್ಯ ಪ್ರದಕ್ಷಿಣೆ। ಸುಖಸಾಂದ್ರ ವಿಜಯವಿಠ್ಠಲ ಶ್ರೀನಿಕೇತನ ಸಕಲ ಗುಣಪೂರ್ಣ ಗುರುವಿನ ಗುರುವೆ ॥೭॥

ಅಟ್ಟತಾಳ

ಪವಡಿಸುವದು ನಿನ್ನ ಯ ನಮಸ್ಕಾರವು। ಅವಸರಕೆ ಪೋಗುವನಡೆ ನರ್ತನೆ। ನವ ನೂತನವಾದ ಉತ್ತಮಗುಣ ರಭಸವೆಲ್ಲ। ನಿನಗೆ ವಾಲೈಸುವವಾದ್ಯವೋ। ಅವನೀಶ ವಿಜಯವಿಠ್ಠಲ ನಿಗಮವಂದ್ಯ। ಭವದೂರ ಭವಸುರರರ್ಚಿತವಿಗ್ರಹರಂಗಾ ॥೮॥

ಆದಿತಾಳ

ಕುರುಕ್ಷೇತ್ರ ಕಾಶಿ ಗಯಾ। ವರ ಪ್ರಯಾಗ ಗಂಗಾ। ನರ ನಾರಾ ಯಣ ನಿಧಿ। ಪುರುಷೋತ್ತಮ ದ್ವಾರಕಾ। ವರ ಗಿರಿ ಕಂಚಿ ನಿಲ। ವರಹ ಶ್ರೀಮದಾನಂತ। ಅರಿನಾಶ ಜನಾರ್ದನ। ಸಿರಿರಂಗ ರಜತಪೀಠ ಪುರಿವಾಸ। ಸುರಧೀಶ। ಗುರು ಸುಖ ತೀರ್ಥರಿಂದ। ನಿರುತ ಪೂಜೆಯಗೊಂಬ। ಪರಮ ಕರುಣಾಸಿಂಧು ಎನ್ನನು। ಧರಿಸಬೇಕೀಪರಿಯಲ್ಲಿ। ಭರದಿಂದ ಪೊಲಿದು ನೋಡು। ವಿಜಯವಿಠ್ಠಲರೇಯ। ಅರಿಯದ ಮನುಜ ಸಂ। ದರುಶನಕೆ ಬರಲಾಗೀ ॥೯॥

ಜತೆ

ಆವಾವ ಕ್ಷೇತ್ರಕ್ಕೆ ಕರದೊಯ್ದು ಎನ್ನಿಂದ। ಈ ವಿಧಾರ್ಚನೆ ಗೊಳ್ಳೊ ವಿಜಯವಿಠ್ಠಲಮೂರ್ತಿ ॥೧೦॥

ಸುಳಾದಿ ೩೦

ಮುಖ್ಯ ವೈರಾಗ್ಯ ಲಕ್ಷಣ ಉಪಮೆಪೂರ್ವಕ, ಶ್ರೀಹರಿಬಿಂಬ ಕರ್ತೃತ್ವಾನುಸಂಧಾನದಿಂದ ಸರ್ವ ಸಮರ್ಪಣೆ, ಸಕಲಕ್ರಿಯೆ ಬಿಂಬಾಧೀನ ಬಿಂಬೈಕ್ಯ ಸಮನ್ವಯವೇ ಮೂರೊಂದು ವೈರಾಗ್ಯ ಇತ್ಯಾದಿ

ರಾಗ ಭೈರವಿ ಧ್ರುವತಾಳ

ವೈರಾಗ್ಯವೆಂಬೊದಿದೆ ಆವಾವಕಾಲಕ್ಕೆ। ಸಾರಾಂಶವನ್ನೆ ತಿಳಿ ಹರಿ ತಿಳಿಪಿದಷ್ಟು। ಭಾರವೆ ವಹಿಸದಿರು ನಾನೆ ಸ್ವತಂತ್ರನೆಂದು। ಸಾರಿ ಸಾರಿಗೆ ನುಡಿದು ಹಿಗ್ಗುವಂಥಾ। ಮೇರೆದಪ್ಪಿದಮಾತು ಬಿಡು ಬಿಡು ಸಿರಿ ಅರಸಾ। ಪ್ರೇರಿಸಿದಂತೆ ಸಂಚರಿಸನೆನ್ನು। ಹಾರಾವಾಗಿರು ಬಾಲಹಾಲುಂಡು ಸದನದೊಳು। ಚಾರು ವಿಲಾಸದಲ್ಲಿ ಆಡಿದಂತೆ। ಕ್ರೂರ ಅಕ್ರೂರರಲ್ಲಿ ಸಮಬುದ್ಧಿಯನ್ನು ಮಾಡು। ತಾರತಮ್ಯ ಪಂಚಭೇದಜ್ಞಾನ। ತಾರಕವೆಂದು ಘೋರ ಸಂಸಾರಾಬ್ಧಿಗೆ ಸದಾ। ಚರಾಚರದಲ್ಲಿ ವಿಹಿತಾವಿಹಿತಗ್ರಹಿಸೀ। ಮೂರು ಗುಣಗಳ ಮೀರಿದ ಮಾತಿನಲ್ಲಿ। ನಾರಾ ಹೃದಯನಾಗು ಸತ್ಕಾಲದಲ್ಲಿ। ಶರೀರದಲ್ಲಿ ತಿಳಿ ಏನೇನುಬಗೆವುಂಟು। ಭಾರಿಭಾರಿಗೆ ಬರುವ ಸೌಭಾಗ್ಯವ। ದಾರಿದ್ರವನ್ನೆ ನೋಡಿ ಸುಖದುಃಖ ಹಚ್ಚಿಕೊಂಡು। ಧೋರ ಸಣ್ಣನಾಗುವ ಮನಸೆತೋರಿಯೊ। ಆರಾರು ಕೊಡುವರು ಕೊಂಬುವರಾರು ಮ। ತ್ತಾರಾರೊ ಆರೊ ನಾನಾ ಚೇಷ್ಟೆಗಳು। ಆರಾರು ಕೂಡಿ ಮುತ್ತಾರು ಮಾಡಿಸುವರು। ಆರಿಂದಲೇನಹುದು ಕಡೆ ಭಾಗಕ್ಕೆ। ಕಾರಣ ಕರ್ತನಾಗಿ ಇಪ್ಪ ಸಮರ್ಥನು। ನಾರಾಯಣನ ಮಾಯಾವನ್ನೆ ತುತಿಸಿ। ಮೂರೇಳು ಗೋತ್ರವೆ ಸಂಬಂಧದಲಿ ಪಿ। ಸ್ತಾರಗೈಸುವ ಭವದ ಭ್ರಮಣವೆಂದೂ। ಹಾರೈಸಿ ದಿನದಿನ ಮುಕ್ತಿಗೆ ಪೋಗುವ। ದಾರಿಯು ನಿರಿಕ್ಷಿಸು ನಿತ್ಯದಲ್ಲಿ। ಭಾರತಿಪತಿ ಪ್ರಿಯ ವಿಜಯವಿಠ್ಠಲನ್ನ। ಸಾರಿಕೊಳ್ಳುತ ಸಿದ್ಧನಾಗಿ ತಿಂಗಬೇಕು ॥೧॥

ಮಟ್ಟತಾಳ

ಜಾಡಾ ಉಂಕಿಯನ್ನು ಜೋಡಿಸಿ ಮಗ್ಗವನು। ಹೂಡಿ ನಡಿವೆ ನಡಿವೆ ನೋಡಿ ಕಾಷ್ಟಗಳನ್ನು। ಸೀಡಿ ನಾನಾ ವಸ್ತ್ರವಮಾಡುವ ಬಗೆಯಿಂದ। ಆಡುತ ನೇವುತಲೀ। ನಾಡಿನಾಡಿಗೆ ಓಂದುಮಾಡುವ ಕಾಷ್ಟಗಳ ಆಡಲೇನು ತಿರುಗಿ ಪಾಡಿಲ್ಲದೆ ಉಂಕಿ। ಹೂಡಿಕೊಂಬುವನೇನೊ। ಪ್ರೌಢ

ಮೂರುತಿ ನಮ್ಮ ವಿಜಯ ವಿಠ್ಠಲರೇಯನ । ಹಾಡುತ ದಿನಗಳನು ಪೋಗಾಡಲಿಬೇಕು ॥೨॥

ತ್ರಿವಿಡಿತಾಳ

ಪರಿಪರಿ ದೇಹದಂಡಣೆಮಾಡಿದರೇನು । ಚರುವ ಚಾಂದ್ರಾಯನ ಚರಿಸಲೇನು । ಇರದೆ ಸತಿಸುತರ ತೊರೆದು ದೇಶವೆಲ್ಲ । ತಿರಿಗಿ ದಿಗಂಬರ ನಾದರೇನು । ಶಿರಮುಂಡಣವಾಗಿ ಶೀಲನಾದರೇನು । ಗಿರಿ ಗಂಹರದಲ್ಲಿ ಸೇರಲೇನು । ಮರಳೆ ನಾನಾಭೋಗ ಕೈಕೊಂಡರೆ ಏನು । ತೆರವಿಲ್ಲದ ಬಹು ವಿಷಯದಲ್ಲೀ । ಸರಿ ಸರಿ ಬಂದಂತೆ ಸರಸವಾಡಿದರೇನು । ವಿರಕುತಿ ಮಾಡುವಬಗೆ ಬೇರಕ್ಕು (ಬೇರೆವಕ್ಕು) । ಬರಿದೆ ಸರ್ವದ್ರವ್ಯತೊರೆದರೇನು ಫಲ । ಸರ್ವ ಪದಾರ್ಥಗಳ ಕೊಂಡರೇನ್ನೈ । ನರನು ವೈರಾಗ್ಯವ ಚರಿಸುವ ಉಪಾಯ । ಅರಿತರೆ ಕೈವಲ್ಯಪುರವೆಂಬೋದು । ಕರತಳದಲ್ಲಿ ಉಂಟು ಕರಿಣವಂದಿಷ್ಟಿಲ್ಲ । ವರ ಶ್ರುತಿಗಳು ಕೂಗುತಲಿವಕೋ । ಸರಸದಲ್ಲಿಯುಕ್ಕು ಸಾವಿರಕ್ಕೂ ವಂದೆ । ವರ ಬೀಜ ನುಡಿ ಉತ್ತಮರು ಕೇಳಿ । ಸರ್ವದಾತ್ಮಕ ನಮ್ಮ ವಿಜಯವಿಠ್ಠಲರೇಯನ । ಸ್ಮರಣೆಬಲ್ಲವ ಬಲ್ಲ ಇದರ ಪ್ರಕೃತಿಯನ್ನು ॥

ಅಟ್ಟತಾಳ

ರಸ ರಸಾಯನ ರುಚಿ ಭುಂಜಿಸಬೇಕು ಮಾ । ನಿಸರೊಳಗಿದ್ದರು ತನ್ನ ಮನಸು ಬೇರೆ । ಹಸನಾಗಿ ಇರಬೇಕು ಹಸುಳೆಯಂದದಲಿ । ಚರಿಸಬೇಕು ಸ್ವಾತಂತ್ರ ಅಸ್ವಾತಂತ್ರವು । ವಶವಾಗಿ ಎನಗಿಲ್ಲವೆಂದು ತಿಳಿದು ರಂ । ಜಿಸ ಬೇಕು ನಿಚೋಚ್ಚನಸ್ತುವೆ ಸಮನಾಗಿ । ಉಸರಲೇನ್ನೈ ಸರ್ವೇಂದ್ರಿಯಗಳ ವ್ಯಾ । ಪಿಸಿದ ವ್ಯಾಪಾರ ಸ್ಥಿತಿಗತಿ ಧರ್ಮವ । ಬಿಸಿಜ ಜಾಂಡದಮಧ್ಯ ಚಕ್ಷುಕೆ ಯೋಗ್ಯ ಸು । ರಸದ್ರವ್ಯಗಳೆಲ್ಲ ಮೆಲುವ ಬಗೆ ತಿಳಿ । ಅಸಮ ದೈವವಾದ ಹರಿ ಮುಖ್ಯ ಆತನ । ಪೆಸರು ಒಂದನೆ ಕೇಳಿ ಅನಂತ ಅಲ್ಲೈನ್ನು । ಪುಸಿಯದೆ ಅಲ್ಲಿದ್ದ ಅಭಿಮಾನಿ ದೇವತಿಯ । ಪೆಸರನೆ ತಿಳಿವದು ಮತ್ತೆ (ಸರ್ವಸುರ) ಸಮಸ್ತರು । ವಸತಿಯಾಗಿಪ್ಪರು ನಿಬಿಡಿ ಕೃತಿಯಾಗಿ । ಎಸದು ಚತುರವಿಂಶತಿ ತತ್ವಾತ್ಮಕ । ರಸವುಂಟಲ್ಲದೆ ಬರಿದೆ ಇಲ್ಲವೆನ್ನು । ಅಸುರರು ತಮ್ಮ ತಮ್ಮ ವ್ಯಾಪಾರದಲ್ಲಿ । ವಿ ಸಕದೆ ಇಪ್ಪರು ಒಂದೊಂದರಲಿ । ಪಶುಪಾಲ

ವಿಜಯ ವಿಠ್ಠಲರೇಯ ಸರ್ವದಾ । ವಸತಿಯಾಗಿಪ್ಪ ಚೇತನ ಅಚೇತನದಿ ॥೪॥

ಆದಿತಾಳ

ಹರಿಗೆ ಹರಿಗೆ ಐಕ್ಯ ಸಿರಿಗೆ ಸಿರಿಗೆ ಐಕ್ಯ । ಸರ್ವ ತಾತ್ವಿಕರಗೆ ಅವರವರಿಗೆ ಐಕ್ಯ । ಮಿರಗುವ ಚತುರವಿಂಶತಿ ಜಡತತ್ವ ತತ್ವಕೆ ಐಕ್ಯ । ಸರಿ ಬಂದಂತೆ ತಿಳಿ ಸರಸಿಜಾಂಡವೆ ಐಕ್ಯ । ತರತಮ್ಯಗುಣದಿಂದ ಚಿಂತಿಸಬೇಕು ಇಂತು । ನಿರುತ ಶ್ರೀಹರಿ ಇಚ್ಛಾ ಸರ್ವರಿಗೆ ಪ್ರೇರಕ । ಪರಸ್ಪರ ವ್ಯವಹಾರ ಮಾಡುವ ಆಡಿಸುವ । ಚಿರಕಾಲ ಶಕ್ತನು ಚಿನ್ಮಯ ವೈಚಿತ್ರ । ನಿರವೈರವೆಂಬೊದೇನು ಇಸಂತೆ ತಿಳಿ ಒಂದು । ಧರೆಯೊಳಗೆ ಅವ ಪರಮ ವೈರಾಗ್ಯ ಕಾಣೊ । ಸರ್ವ ಸಮರ್ಪಣೆ ವಿಜಯವಿಠ್ಠಲಗೆಂದು । ಕುರುಹ ಕಂಡವ ಸರ್ವ ಉಂಡವಾ ಬಿಟ್ಟವಾ ॥೮॥

ಜತೆ

ಬಿಂಬ ಐಕ್ಯವೆ ಸಿದ್ಧಾ ವೈರಾಗ್ಯ ಮೂರೊಂದು (ಮೂರೆಂದು) । ವೆಂಬೋದೆ ಇಪ್ಪದು ವಿಜಯವಿಠ್ಠಲಬಲ್ಲಾ ॥೬॥

ಸುಳಾದಿ ೩೧

ಅನಂತಾನಂತ ಜನುಮದ ಅನಂತ ಕ್ರೀಯಾ ಬಿಂಬಾಧೀನ ವ್ಯಾಪಾರವೆ
ಅನಂತರೂಪಿ ಹರಿಯ ವ್ಯಾಪಾರ ಒಬ್ಬ ಬಿಂಬನ ವ್ಯಾಪಾರವೆಂದು
ತಿಳಿದು ಉಪಾಸನೆ ಮಾಡುವದು.

ರಾಗ ಶಂಕರಾಭರಣ ಧ್ರುವತಾಳ

ಅಂತಿ ಜನುಮವೆ ಬರಲೂ ಅಂತಿಜ ಜನುಮ ಬರಲಿ । ಎಂಥ ಎಂಥಾ ಜನುಮಾನಂತ ಬಂದೊದಗಲಿ । ಎಂತಹದೊ ಗತಿ ಎಂದು ಎಲ್ಲಿಕಾಲಾ । ಚಿಂತಿಸಿ ಬಿಸಸುಯಿದು ಬಳಲದಿರು ಜೀವಾ । ಪಿಂತಿನ ಕಾಲದಲಿ ಒಂದೊಂದು ಪರಿ ಜನುಮ । ಸಂತಿ ಪೋದದಕೆ ನೀಮಾಡಿದ ಬಗೆ ಏನೊ । ಭ್ರಾಂತಿಗೊಳಗಾಗಿ ತಿರುಗಿದರಿಂದ ಲಾಭ । ಮುಂತಾಗಿ ಬರುವದೇನೊ ತಿಳಿದು ನೋಡೋ । ಸಂತತ ಲಕುಮಿಕಾಂತ ಅತಿದಯಪರನಾಗಿ । ಅಂತರಂಗದಲ್ಲಿ ವಾಸವಾಗಿ । ಅಂತ್ಯ ಕಾಲಕ್ಕೆ ಅವ

ಸ್ಮರಣೆ ತಂದೀವಾ ಅದ। ರಂತೆ ಚರಿಸಬೇಕು ತಪ್ಪದಿದಕೊ । ತಂತಿ ತಪ್ಪಿಂದ ತಾನೇ ಸ್ವರಗೈವದೇನೊ ಗುಣ । ವಂತ ಒಬ್ಬನಿಲ್ಲದೆ ಕ್ಷಣ ಕ್ಷಣಕ್ಕೆ । ಇಂತು ಈ ಬಗೆಯಿಂದ ತಪ್ಪಿಸಿಕೊಳ್ಳಲು । ಸ್ವಾತಂತ್ರ ನೀನಲ್ಲವಲ್ಲೋ ಎಲೊ ಮಂದನೆ । ಕಂಥೆ ಹೊಲವ (ಸು) ಬಿಡದೆ ಬೊಮ್ಮಾಂಡದೊಳಗಿದ್ದ । ಚಿಂತೆ ಹಚ್ಚಿಕೊಂಡು ಬಡವಾಹರೆ । ಮಂತ್ರ ಮಹಾತಿಶಯ ಧರ್ಮ ವ್ರತಗಳು ಅ। ನಂತ ಬಗೆ ಮಾಳ್ಪವವು ನಿನ್ನ ವಲ್ಲಾ । ಶಾಂತ ಮೂರುತಿ ನಮ್ಮ ವಿಜಯ ವಿಠ್ಠಲಾತುಮ। ಅಂತ ರಾತುಮ ಅಂಗಾ ಅಂಗಿಭಾವದಿ ಮಾಳ್ಪಾ ॥೧॥

ಮಟ್ಟ ತಾಳ

ಹರಿ ಅನಾದಿಯಲ್ಲಿ ಮಾಡಿದ ಸಂಕಲ್ಪ। ಪರಿ ಪರಿ ವಿಧ ಉಂಟು ಚಿತ್ರ ವಿಚಿತ್ರಗಳು । ನರ ತರು ಖಗಮೃಗವು ಜಲಚರ ನಾನಾ ವಿ। ಸ್ತರ ಪ್ರಾಣಿಗಳು ಎಂಭತ್ತುನಾಲ್ಕು ಲಕ್ಷ। ಎರಡೊಂದು ವಿಧಯೋನಿ ವೃತ್ತಿಯ ಕಲ್ಪಿಸಿ । ಸುರ ನರೋರುಗ ಮುಖ್ಯ ಜೀವಿಗಣಕೆ ಇಂಥ । ವರ ಅವರ ಜನುಮತಂದು ಕೊಡುವ ತಪ್ಪದೆ । ಸಿರಿ ಅರಸನ ಮಾಯಾ ಬಿಡಿಸಿಕೊಂಬುವನೇನೊ। ಎರಡೊಂದುಗುಣವೆಂಬೊ ಸುಳಿಯೊ ಳಗೆಇಟ್ಟು । ತಿರುಗಿಸುವಾತನೆ ಒಡನೊಡನೆ ಇದ್ದು । ಪರಮ ಪರಂ ಜ್ಯೋತಿ ವಿಜಯ ವಿಠ್ಠಲನೊಲಿದು । ಸರಿ ಸರಿ ಬಂದಂತೆ ಮಾಡಿದ ಪರಿ ಚರಿಸೂ ॥೨॥

ತ್ರಿವಿಡಿ ತಾಳ

ಸರ್ವೇಂದ್ರಿಗಳಲ್ಲಿ ಮಾಡುವ ವ್ಯಾಪಾರಾ। ಸರ್ವದಲ್ಲಿ ತಿಳಿಯೋ ಬಿಂಬ ಕ್ರೀಯಾ। ಈರ್ವಗೆ ಮಾಡಿಸುವ ಜಗದೊಳಗೆ ಶಕ್ತಾ । ಓರ್ವ ಹರಿಯಲ್ಲದೆ ಮತ್ತೊಬ್ಬನೆ । ನಿರ್ವಾಹ ಕರ್ತನು ನಿಸ್ಸಂಗ ನಿರ್ದೋಷ। ನಿರ್ವಿಕಾರ ನಿತ್ಯ ಯೋಗಮಾಯಾ । ಶರ್ವಾದಿಗಳಿಗೆ ಜ್ಞಾನಾಜ್ಞಾನ ಕೊಡುವಾ । ಊರ್ವಿ ಮೊದಲು ಮಾಡಿ ವ್ಯಾಪ್ತನಾಗೀ । ದ.ರ್ವಿ ಮಿಕ್ಕಾದಂಥ ತತು ತತುಸ್ಥಾನದಲಿ । ಪೂರ್ವೋತ್ತರ ಕಾಲ ವಿಡಿದು ಹರಿಯ । ಸರ್ವ ನೇಮಕನೆಂದು ತಿಳಿದು ಧನ್ಯನಾಗೋ । ಪರ್ವ ವಿಸರ್ವ ದೇಶದಿ ಚಿಂತಿಸಿ। ದುರ್ವಿಷಮವಾಗಿದ್ದ ವಿಷಯಕ್ಕೆ ಸುಖಕೆ

ಸೀ । ನೋರ್ವ ನೆನೆ ಬಿಟ್ಟು ಹೊರಗಾಗುವ । ಗರ್ವಿಕಿತನ ಸಲ್ಲ ತಿಳಿಯುದ ತರುವಾಯುದಲಿ । ಸಿರ್ವ್ಯಸನ ಮನದಲಿ ಶುದ್ಧನಾಗೊ । ಗುರ್ವಾದಿಗಳ ಪ್ರೌಢಿಯ ವಿಜಯ ವಿಠ್ಠಲರೇಯ । ಪಾರ್ವತಿ ರಮಣನ್ನ ಪ್ರತೀಕ ದಂತೆ ನಿಲ್ವಾ ॥೩॥

ಅಟ್ಟ ತಾಳ

ನೀರ ಹರಿಯು ಸಂಗಡ ತೃಣ ಪೋದಂತೆ । ಸಾರಿ ಸಾರಿಗೆ ನಿನ್ನಿಂದಾಗುವ ಕ್ರೀಯಾ । ಈರೈದು ಇಂದ್ರಿಯಂಗಳ ವ್ಯಾಪ್ತಿವ್ಯಾಪಾರ । ಹಾಗೈಸು ಶ್ರೀ ವಿಷ್ಣು ಪೋದಂತೆ ಪೋಪವು । ಈ ರೀತಿ ನಿಜವೆಂದು ಅನಂತ ಕಾಲಕ್ಕೆ । ಕಾರಕ ಕ್ರೀಯಾ ದ್ರವ್ಯ ಭ್ರಮಣವಬಿಟ್ಟು । ಸಾರುತಾನಂದ ಭರಿತನಾಗು ಬಲುಗುಪ್ತ । ಸಾರಿ ಪೇಳಿದೆ ನಿದು ಸಮಸ್ತ ಜನರಿಗೆ । ತೋರದು ಅನುಭವವಾಗದ ಪರಿಯಂತ । ಪಾರು ಮುಟ್ಟುವದಕ್ಕೆ ಇದೆ ಉಪಾಯವು । ಬೇರೆ ಮತ್ತೊಂದಿಲ್ಲ ಇದನೆ ತೊರೆದು ತುಲಾ । ಭಾರ ಕಾಂಚನ ಕನ್ಯ ಗೋದಾನ ಭೂದಾನ । ಧಾರುಣಿ ಯೊಳಗುಳ್ಳ ಮೂರು ಮೂರುತಿಗಳ । ವೀರ ವ್ರತಗಳ ನಾನಾ ಪ್ರಕಾರದಿ । ಶಾರೀರ ದಂಡಿಸಿ ತಪಗೈದರೆನಯ್ಯಾ । ನೇರನು ಮುಕುತಿಗೆ ನೇರನೊಸೇರನೊ । ತಾರತಮ್ಯದಿಂದ ಎರಡು ತಪ್ಪದೆ ವಿ । ಚಾರ ಮಾರ್ಗವನು ತಿಳಿದದಲ್ಲದೆ ಸಂ । ಸಾರ ನಿವೃರ್ತಿಭವದೊಳಗಿದ್ದರೂ । ಶ್ರೀ ರಮಣನಲಲೇ ಒಂದೆ ರೂಪದ ಚರಿಯಾ । ಸಾರೆದಲ್ಲಿ ಇಪ್ಪದು ದೂರದಲ್ಲಿ ಇಪ್ಪ । ತೋರುತಲಿಪ್ಪ ತೋರದಲೆ ಇಪ್ಪ ತತುತದಾ । ಕಾರ ವಾಗಿಪ್ಪ ವ್ಯಾಪ್ತನಾಗಿಪ್ಪ ಪ್ರೇರಕ ನಾಗಿಪ್ಪ ಪ್ರಭುವಾಗಿಇಪ್ಪ । ಭಾರವಾಗಿಇಪ್ಪ ಲಘುವಾಗಿ ಇಪ್ಪ ಮಧ್ಯದಲಿ ಇಪ್ಪ । ಹಾರುತಲಿಪ್ಪ ಕುಣಿಯುತಲಿಪ್ಪ । ಕಾರಣದಲಿಯಿಪ್ಪ ಕಾರ್ಯದಲ್ಲಿಯಿಪ್ಪ । ಮೀರದಲೆ ಇಪ್ಪ ಮೀರಿ ಇಪ್ಪ ವಿ । ಸ್ತಾರ ವಾಗಿಪ್ಪ ಅತ್ಯಣುಮಹತ್ತಾಗಿಪ್ಪ । ಆರಾರ ಗುಣದಂತೆ ಒಳಗಿಪ್ಪ ಹೊರಗಿಪ್ಪ । ತೋರಿನುಡಿವದೇನು ಒಂದೇ ಎರಡೇ ಮು । ರಾರಿಯು ವ್ಯಾಪಾರ ಚಿತ್ರ ವಿಚಿತ್ರಕಾ । ಬೇರೆ ಬೇರೆ ಇಪ್ಪ ಏಕವಾಗಿ ಇಪ್ಪ । ವಾರಿಜ ಜಾಂಡಕ್ಕೆ ನಿಬಿಡಿಯಾಗಿಪ್ಪ ಶಾಂತನಾಗಿಪ್ಪ । ಧೀರನಾಗಿಪ್ಪನು ಅವಕಾಶಕೊಡುತಿಪ್ಪ ।

ಶೌರಿ ಸಂತತ ದೇವ ವಿಜಯ ವಿಠ್ಠಲರೇಯಾ । ಕಾರುಣ್ಯನಿಧಿಕಾಣೊ ತಿಳದಂತೆ ಇರುತಿಪ್ಪ ॥೪॥

ತಾಳ ಆದಿ

ಸಿರಿ ಪರ (ವರ) ಸಂಪನ್ನ ಮೂರ್ತಿ । ಪರಮ ಪಾವನ ಕೀರ್ತಿ । ನಿರುತರ ಘನ್ನ ವಾರ್ತಿ । ಭರಿತವಾಗಿದ್ದ ಪೂರ್ತಿ। ಕರುಣ ಸಂಪನ್ನ ರಂಗ । ಧರೆಯೊಳು ಮೋಹನಾಂಗಾ । ದುರಿತ ಧ್ವಾಂತ ಪತಂಗಾ । ದುರಳರ ಮಾನಭಂಗಾ । ಪರಿ ಪರಿ ವಿಧದಿಂದ । ಚರಿಯ ಮಾಡುವ ಗೋವಿಂದ । ಸುರ ನರೋರುಗರಿಂದ । ಶರಣೆನಿಸಿ ಕೊಂಬಾನಂದಾ । ಹರಿ ಒಂದು ನಿಮಿಷದೊಳು ಅನಂತ ರೂಪಗಳು । ಧರಿಸಿ ನಿತ್ಯ ಸೃಷ್ಟಿ ಒಂದೊಂದು ಪ್ರಕಾರ ಮಾಳ್ಪ । ಹರಿ ಗುಣ ಗಣಾಂಬುಧಿ ಎಂತು ನಡಿಸುವನು । ನರನೆ ನರ ನಾನಾಯೋನಿ ತಂದಿತ್ತದನುಭವಿಸು । ವರ ಮೂರುತಿ ನಮ್ಮ ವಿಜಯ ವಿಠ್ಠಲರೇಯನ । ಚರಣಾರಾಧನೆಯಲ್ಲಿ ಸುಖಬಡು ಮಮತೆ ತೊರದು ॥೫॥

ಜತೆ

ಘಾಳಿ ಮಧ್ಯ ಧೂಳಿಯ ತಡೆದವರುಂಟೆ ನಿ । ನ್ನಾಳುವ ವಿಜಯ ವಿಠ್ಠಲನಿರಲು ಭಯವೇನೊ ॥೬॥

ಸುಳಾದಿ ೩೨

ಜ್ಞಾನಿಗಳ ಲಕ್ಷಣ ಉತ್ತಮರಾದ ಜ್ಞಾನಿಗಳ ಬಿಂಬಾಧೀನವಾಗಿ ಬಿಂಬೋಪಾಸನೆ ಸಕಲ ಕ್ರೀಯಾಗಳಲ್ಲಿ ಭಗವಂತನ ಧ್ಯಾನ ನೀಚಾಧಿಷ್ಠಾನದಲ್ಲಿ ಪೂಜಾ ಉಪಾಸನೆ ಕೂಡದು.

ರಾಗ ಸಾರಂಗ ಧ್ರುವತಾಳ

ಜ್ಞಾನ ವೆಂಬೋದಿದೆ ಕೇವಲಾಧಿಕಾರಿಗಳಿಗೆ। ಮೌನದಲ್ಲಿಪ್ಪೊದು ಮುಖ್ಯವಯ್ಯಾ । ಕಾನನ ಪಟ್ಟಣ ಸಮವಾಗಿ ತಿಳಿದ । ಜ್ಞಾನಿ ಎಂತಿರಬೇಕು ನೊಳ್ಪರಿಗೇ । ಏನೇನು ಅನ್ಯರಿಂದ ಮಾತುವೆಗ್ಗಳಿಸಲು । ಸ್ಥಾಣೋಪಾದಿಯಲ್ಲಿ ತೋರಬೇಕು । ಕಾಣಿಸಿ ಕೊಳದಲೆ ಇರಬೇಕು ಕಂಡರು । ನಾನಲ್ಲವೆಂದು ಜಗದೀಶ ಹರಿಯ । ಧ್ಯಾನ ಮಾಡಲುಬೇಕು ಅಡಿಗಡಿಗೆ ಮರಿಯದಲೆ । ಪ್ರಾಣೇಂದ್ರಿಗಳೆಲ್ಲ ನಿತ್ಯದಲಿ ।

ಏನೇನು ಮಾಡುವ ವ್ಯಾಪಾರ ಧರ್ಮಂಗಳು । ವಾಣಿಯರಸ ಮಿಕ್ಕ ಸುರರಾದ್ಯರು । ಕಾಣುವದು ಪಿಡಿದು ಬಗೆ ಬಗೆ ವೃತ್ತಿಗಳು । ಶ್ರೀನಾಥ ತಾರತಮ್ಯವನ್ನೆ ಇತ್ತು । ತಾನಾಗಿ ದಯದಿಂದ ನಡಸುವಾನಂದದಲ್ಲಿ । ಮಾಣದೆ ಒಂದೊಂದು ಕರ್ಮಕಟ್ಟಿ । ಅನುಜ್ಞದೊಳಗಿಟ್ಟು ಲೇಶವಾದರಿವಗೆ । ಮೇಣದ ಬೊಂಬೆ ಮಾಡುವ ಸ್ವಾತಂತ್ರ । ಅನಂತ ಕಲ್ಪಕ್ಕೆ ಇಲ್ಲದಂತೆ ವಂಚಿಸಿ । ತಾ ನೊಳಗಿದ್ದು ಪ್ರವರ್ತಕ ಮಾಳ್ಪನೊ । ಹಾನಿ ವೃದ್ಧಿಗಳಿಗೆ ಇವರನ್ನೆ ಗುರಿ ಮಾಡಿ । ಕಾಣಿಸಿ ಕೊಳದಲೆ ತಿರುಗುತಿಪ್ಪಾ । ತ್ರಾಣ ನಾದರೂ ಹರಿ ಜೀವರ ಚೇಷ್ಟೆಯಂತೆ । ನಾನಾ ವಿಧದಲ್ಲಿ ಅನುಸಾರಿಯಾಗಿ । ತಾನೆ ನಡಿಸಿ ನಡಕೊಂಬಕಾಲ ಮೀರದೆ । ಏನೆಂಬೆನಯ್ಯಾ ಹರಿಯ ವಿಚಿತ್ರಕ್ಕೆ । ಏನಿನಿತು ಇನ್ನು ತಿಳಿದು ತಿಳಿಸಿ ಕೊಟ್ಟದದರಿಂದ । ನಾನೆಂಬ ಸೊಲ್ಲು ಹರಿ ಇತ್ತ ದೆಂದು । ಜ್ಞಾನಿ ಯಾದವಗಿಂತು ಇದ್ದರೆ ಅವನಿಗೆ । ಹೀನ ವೆಂಬೊದೆಲ್ಲ ಎಲ್ಲಿದೊ ಗುಣಿಸಿದರು । ನೀನು ನಾನೆಂಬೊದಲ್ಲಿ ಈವಿಧ ಮುಕ್ತಿಸಿದ್ಧವೆಂದು । ಶ್ರೀನಿವಾಸನ ಸ್ತೋತ್ರಗೈಯುತಲಿ । ಆನಂದಾದಿಂದಲಿ ಸರ್ವಕಾಲದಲ್ಲಿ ಮ । ದ್ದಾನೆ ಎಂದದಿ ನಲಿದು ತಿರುಗಿ ತಿರುಗಿ । ಮಾನವರೊಳು ಮೆಲ್ಲ ಮೆಲ್ಲನೆ ಜುಣಿಗಾಡುತ । ಕೇಣಿ ಸಂತೋಷವನ್ನು ಬೇಡಿಕೊಳ್ಳದೆ । ಕಾಣಿ ಮೊದಲಾದ ಲಾಭವ ಬಯಸದೆ । ಏನು ದೊರೆತದ್ದು ಭುಂಜಿಸುತ್ತ । ರಾಣಿ ಮಿಕ್ಕಾದವರು ಹರಿಯ ಸೇವಕರೆಂದು । ಮಾನಸ ಕಾಯಾ ವಾಚದಲ್ಲಿ ನುಡಿದದ್ದು । ಗಾನ ನಟನೆ ನಗೆ ವಕ್ರಗತಿಯ ಸೊಬಗು । ಗೇಣೂದರದ ಚಿಂತೆ ಹಚ್ಚಿಕೊಳ್ಳದೆ । ಜ್ಞಾನ ಪರಿಪೂರ್ಣ ವಿಜಯವಿಠ್ಠಲ ನಂಘ್ರಿ । ರೇಣು ಕೊಂಡಾಡುವ ಭಾಗವತನಾಗೋ ॥೧॥

ಮಟ್ಟತಾಳ

ಭೂತಪ್ರಾಣಿಗಳೆಲ್ಲ ಹರಿಯ ಪ್ರತಿಮೆಯೆಂದು । ಮಾತು ಮಾತಿಗೆ ತಾನು ಮರಿಯದೆ ಸ್ಮರಿಸುತ್ತ । ಈ ತೆರದಲ್ಲಿ ಸಾಂಖ್ಯ ಶಾಸ್ತ್ರ ನಿಶ್ಚೈಸಿ । ಸೀತೋಷ್ಣ ಸಮವೆಂದು ಸಂತತತಿಳಿದು ಪ್ರ । ಖ್ಯಾತಿಯಾಗದೆ ಜಗಕೆ ಪೊಳಿಯದೆ ಗುಪ್ತದಲ್ಲಿ । ಗಾತುರ ಮಲಿನನಾಗಿ ಸಂಚರಿಸುತಲಿದ್ದು ।

ಶ್ರೀತರುಣಿ ಸರ್ವ ಜೀವರಾಶಿಗಳು ಅ । ಜಾತನಾದ ಹರಿಯ ಆಧೀನವೆಂದು । ಆತುರದಲಿ ಅತಿಶಯವನೆ ತಿಳಿದು । ಆತುಮದೊಳಗನುಭವಕೆ ತರಲು ಬೇಕು । ಶೀತಾಂಶು ವದನ ವಿಜಯವಿಠ್ಠಲರೇಯನ । ದೂತರ ಸಂಗಡ ಲೋಲಾಡಲಿಬೇಕು ॥೨॥

ತ್ರಿಪಿಡಿತಾಳ

ನಿಂದಲ್ಲಿ ಕುಳಿತಲ್ಲಿ ನೆರೆ ಮಾತನಾಡುವಲ್ಲಿ । ಬಂದು ಪೋಗುವಲ್ಲಿ ತಿರಗುವಲ್ಲಿ । ನಿಂದ್ಯ ಬೀಳುವಲ್ಲಿ ನಿಶ್ಚಿಂತನಾದಲ್ಲಿ । ವಂದನೆ ಗೈವಲ್ಲಿ ವಾಕ್ಯದಲ್ಲಿ । ಮುಂದಿ ನೆರೆದಲ್ಲಿ ಮುದದಲ್ಲಿ ಇದ್ದಲ್ಲಿ । ಮಂದಿಗದಲ್ಲಿ ಕೆಲಸ ಮಾಡುವಲ್ಲಿ । ತಂದು ಕೊಡುವರಲ್ಲಿ ತೆಗೆದು ಕೊಂಬುವರಲ್ಲಿ । ಬಂಧನವಾದಲ್ಲಿ ಭಾಗ್ಯದಲ್ಲಿ । ಗಂಧ ಪೂಸುವನಲ್ಲಿ ಹಚ್ಚಿಕೊಂಬಲ್ಲಿ । ಅಂದಣವೇರಿ ನಗುತ ಬರುವಲ್ಲಿ । ಮಂದಹಾಸದಲ್ಲಿ ಮೇಳವಾಡುವಲ್ಲಿ । ದುಂದುಭಿವಾದ್ಯಗಳು ಕೇಳುವಲ್ಲಿ । ಕಣ್ದೆರೆದು ನೋಡುವಲ್ಲಿ ಕವಳಮೆಲುವಲ್ಲಿ । ಗಂಧಾ ಕೊಂಬದರಲ್ಲಿ ತರ್ಕೈಸಪರಲ್ಲಿ । ಮುಂದೆ ಪಿಡಿವಲ್ಲಿ ಗುಹ್ಯಕರ್ಮದಲ್ಲಿ । ಒಂದೊಂದು ಬಗೆಯ ವ್ಯಾಪಾರದಲ್ಲಿ । ಪೊಂದಿಕೊಂಡಿಪ್ಪರಲ್ಲಿ ದೂರ ಬಿಟ್ಟವರಲ್ಲಿ । ಹಿಂದೆ ಅಟ್ಟುವರಲ್ಲಿ ಹಿತದವರಲ್ಲಿ । ಸಂದೇಹವಿಡಿಯದೆ ವಿಜಯವಿಠ್ಠಲಮೂರ್ತಿಯ । ಎಂದೆಂದು ನೆನೆಸುವದು ಮನದೊಳು ತಂದಿವನ ॥೩॥

ಅಟ್ಟತಾಳ

ಪಶು ವಾಜಿ ಗಜ ಮತ್ತೆ ಶಿಶು ಮಡದಿ ಮಗ । ಕುಶಲ ಮನುಜ ಮಿತ್ರ ಸೊಸೆ ಬಂಧು ಬಳಗ ರಾ । ಜಿಸುವ ನಾನಾಪರಿ ವಶವಾಗಿದ್ದ ಮಾನಿಸರು ಮಿಕ್ಕ ಜೀವ । ಪ್ರಸರಗಳಿಗೆ ನಿತ್ಯ ರಸ ರಸಾಯನ ಉ । ಣಿಸುತ ಉತ್ತಮವಾದ ವಸನಭೂಷಣಾದಿ ದಿವ್ಯ । ಕುಸುಮ ತರುವಾಯ ಎಸೆವ ಧಾನ್ಯಗಳು । ಹಸನಾದ ತೃಣ ಸರ್ವ ವಸುಧೆಯೊಳಗೆ ಯಿದ್ದ । ದಶದಿಕ್ಕಿನೊಳಗುಳ್ಳ ಪೆಸರುಳ್ಳ ದ್ರವ್ಯವ । ನಸು ನಗುತ ಸಿರಿ ಬಿಸಿಜನಾಭಗೆ ಸಮ । ರ್ಪಿಸಿ ಜೀವಗಣಕೆಲ್ಲ ಬೆಸನೆಕೊಡುತ ಪಾಲಿಸಬೇಕು ನಿರುತದಿ । ಬಸರೊಳಗೆ ಲೋಕವಿಟ್ಟ ವಿಜಯವಿಠ್ಠಲ । ಅಸಮ ದೈವವೆ ನಡೆಸುವ ಭಾರವ ತಿಳಿ ॥೪॥

ಆದಿತಾಳ

ಭಜನಿಯಮಮಾಡು ಬಿಡದೆ ಒಂದೆ ಭಕುತಿಯಲಿ। ಗಜ ತುರುಗ ಮೊದಲಾದ ನಾನಾ ರಾಶಿನಲಿ। ಅಜದೇವಾರಂಭ್ಯವಾಗಿ ಮುಕ್ತಾಮುಕ್ತರಲ್ಲಿ। ನಿಜವಾಗಿಮಾಡುವ ಹರಿಯ ವ್ಯಾಪಾರವನ್ನು। ಋಜುವಾಗಿ ತಿಳಿದು ಸಂತತ ನಿಗ್ಗು ದುರಿತದ। ವೃಜವನೊಪದು ಒಲು ಸುಖ ವನಧಿಯೊಳಿರುವ। ತ್ರಿಜಗ ಮಧ್ಯದಲಿ ಯಾವಜ್ಜನ್ಮಾಂತನಕ ವಿ। ರಜನಾಗು ಸರ್ವದ ಆವದಾದರು ಗ್ರಹಿಸಿ। ಸುಜನ ವಂದಿತ ನಮ್ಮ ವಿಜಯವಿಠ್ಠಲರೇಯನ। ಭುಜಬಲವನ್ನು ಪೊಗಳು ಪರಿಹಾರ ಭವಂಗಳು ॥೭॥

ಜತೆ

ನೀಚಾಧಿಷ್ಠಾನದಲಿ ಹರಿಯ ಪೂಜಿಸದಿರು। ಯೋಚಿಸು ವಿಜಯ ವಿಠ್ಠಲನಧಿಕಾರಿಯಲ್ಲ ॥೮॥

ಸುಳಾದಿ ೪೪

ಸಕಲ ಜ್ಞಾತಾಜ್ಞಾತ ಅಪರಾಧ ಕ್ಷಮಿಸೆ ಪ್ರಾರ್ಥನಾ, ಅವಸ್ಥಾ ತ್ರಯ ಕ್ರಿಯಾ ಸಮರ್ಪಣೆ, ಜ್ಞಾನಕೆಡದಂತ ಜ್ಞಾನಿಗಳ ಸಾಧನಬಗೆ, ಕಲಿಯುಗದಲ್ಲಿ ಅವತರಿಸಿದ ಜ್ಞಾನಿಗಳಜ್ಞಾನದಾಯಕನ ನಾಮ ಮರೆಯದೆ ಬಂಧ್ಯೈಕ್ಯ ವಿಜ್ಞಾನ

ರಾಗ ಭೈರವಿ ಧ್ರುವತಾಳ

ಅಪಧ್ವ ತಿರುಗದು ಅಪಶಬ್ದ ಮನ್ನಿಪದು। ಅಪಪ್ರಯೋಗವಿದ್ದರು ಕ್ಷಮಿಸುವದು ಸಜ್ಜನರು। ಅಪಹಾಸ್ಯ ಮಾಡಿದರೆ ನಿಮಗೆ ದೊರಕುವದೇನು। ಅಪವರ್ಗಕೆ ಸಾಧನವಲ್ಲ ಅನುದಿನಾ। ಅಪಶ್ರುತಿವಿಡಿದು ಕೂಗ್ಯಾಡಿದ ಮಾನಿಸಂಗೆ। ಅಪವಾದಹೊರಿಸಲು ಚಿಂತಿಸುವನೇ। ಅಪಕೀರ್ತಿಗೊಳಗಾಗಿ ಕಚಕುಚ ವರ್ನಿಸಿ। ಅಪಗತಿಗೆ ಪೋಗುವ ಕವನವಲ್ಲ। ಅಪಗಾ ಜನಕ ಲಕುಮಿ ಬೊಮ್ಮಾದಿಗಳ ಚರಿತೆ। ಅಪರಮಿತವಾಗಿ ತೋರಿದನಿತೂ। ಅಪದ್ಧವೆನಿಸದಂತೆ ಪೇಳಿದೆ ಗುರುಗಳು। ಅಪರಾಧದವನೆಂದು ನುಡಿಯದಂತೇ। ಅಪಮೃತ್ಯುವಿಗಿಲಾದ ಬಾಧಿಸುವ ಕ್ಲೇಶ। ಅಪಜಯವಾಗುವದು ತೊಲಗೀ ಪೋಗಿ। ಅಪರಂಪಾರ ಮಹಿಮ ವಿಜಯವಿಠ್ಠಲನಂಘ್ರಿ। ಅಫಲನಾಗಿ ಭಜಿಪದು ಭಕುತಿಪ್ರಧಾನವೆನ್ನಿ ॥೧॥

ಮಟ್ಟತಾಳ

ಎಚ್ಚರವಿದ್ದಾಗ ಕಲಿತ ವಿದ್ಯಗಳೆಲ್ಲ । ಅಚ್ಚವಳಿಯದಂತೆ ಹೃದಯದೊಳಿಪ್ಪವು । ಎಚ್ಚರವನುತಪ್ಪಿ ತವಕದಿಂದ ಕಣ್ಣು । ಮುಚ್ಚಿಕೊಂಡು ಗಾಢನಿದ್ರೆಯೊಳಿಪ್ಪಾಗ । ನಿಚ್ಚಟವಾಗಿದ್ದವಿದ್ಯ ನೆನಪೆ ಉಂಟೋ? ।ಎಚ್ಚರ ಪುಟ್ಟಿದರೆ ಮರಿಯದಲೆ ಅಪನೇ । ಉಚ್ಚರಿಸುವದಕ್ಕೆ ಒದಗುತಿಪ್ಪವು ಮನಕೆ। ಅಚ್ಯುತ ಸಿರಿ ವಿಜಯವಿಠ್ಠಲನ ಆವಾಗ । ಮೆಚ್ಚಿಸಿ ಪೂಜಿಸಿದ ನಂಗೆ ಪುಣ್ಯಪ್ರಾಪ್ತಿ ॥೨॥

ತ್ರಿವಿಡಿತಾಳ

ಜನುಮಾಂತರದಲ್ಲಿದ್ದ ಜ್ಞಾನವೇನಿದ್ದದ್ದು । ಪುನರಪಿ ದೇಹವ ತೆತ್ತನಾಗೆ। ದಿನದಲ್ಲಿ ಮಲಗಿ ಎಚ್ಚತ್ತೆತ್ತೀಪಾಡಿಯಂತೆ । ನೆನವಾಗಿ ಇಪ್ಪವು ಮೊದಲು ಜ್ಞಾನ। ಮನದಲ್ಲಿ ಮರಿಯದು ಏಸು ಕಾಲವಾಗೆ । ಘನ ಜ್ಞಾನಿಗಳ ಪುಣ್ಯವಿಂತು ಕಾಣೆರೋ । ಎನಗವರ ದಯದಿಂದ ಫಲಿಸಿ ಇಪ್ಪದು ಇದಕೆ । ಅನುಮಾನ ಸಲ್ಲದು ನೋಳ್ಪರಿಗೇ । ವನಜನಾಭನೆ ಮುಖ್ಯ ಕಾರಣನಾಗಿಪ್ಪ । ಮುನಿ ದೇವತೆಗಳಿಗೆ ಸರ್ವರಿಗೇ । ಗುಣವೆ ತಂದಿತ್ತು ಉತ್ತಮರ ದ್ವಾರದಿಂದ । ಅನುದಿನ ಉದ್ಧಾರವಮಾಡುವನು । ಜನಕೆ ಸಂಶಯ ಸಲ್ಲ ಜ್ಞಾನಿಗಳಿಗೆ ಈಗ । ಜನುಮವಿಲ್ಲವೆಂದು ನುಡಿಯದಿರೀ । ಎಣಿಕೆ ಇಲ್ಲದೆ ವೇದ ಶಾಸ್ತ್ರ ಪುರಾಣದಲ್ಲಿ । ಘನವಾಗಿ ಪೇಳಿದ ಪ್ರಮೇಯ ವಲ್ಲ । ಕೊನಿಯಗಂಡವರಾರು ಎಲ್ಲಿ ಇಲ್ಲವೆಂಬೊ । ದಣುಕೊಂಡು ಮಾತುಗಳು ನುಡಿಯಾಲ್ಯಾಕೆ। ಅನಿಮಿತ್ಯ ಬಂಧು ಸಿರಿ ವಿಜಯವಿಠ್ಠಲರೇಯ । ತನಗೆ ತಾನೆ ವ್ಯಕ್ತನಾಗಿ ಭಕ್ತರನ ಪೊರೆವಾ ॥೩॥

ಅಟ್ಟತಾಳ

ಮಧ್ವವಿಜಯದಲ್ಲಿ ಪಂಡಿತಾಚಾರ್ಯರು। ಮಧ್ವರಾಯಗೆ ಉಪದೇಶ ಮಾಡಿದ ಪ್ರ। ಸಿದ್ಧ ಅಚ್ಯುತಪ್ರೇಕ್ಷತಮುನಿ ಧರ್ಮಜ । ಅಧ್ವರ ಮಾಡಲು ದ್ವಾಪರಯುಗದಲ್ಲಿ। ಪದ್ಧತಿಯಿಂದಲಿ ದ್ರೌಪದಿ ಕೈಯಿಂದ । ಮೆದ್ದನ್ನದಿಂದಲಿ ಅಧಿಕಾರಿಗಳಾಗಿ । ಮಧ್ವರಾಯರಿಗೆ ಗುರುಗಳಾದರೆಂದು। ಸಿದ್ಧ ಪ್ರಮೇಯವನ್ನು ಪೇಳಿದ್ದದ್ದೆ ಸತ್ಯ। ಇದ್ದರೆ ಯೊಳಗೆ ಜ್ಞಾನಿಗಳು ಸಂತತವಾಗಿ। ಉದ್ಭವರಾಗಿ ಸಂಚರಿಸುವದಕ್ಕೆ ಸಿ । ಬದ್ಧಿಯಾಗಿ ಕೇಳಿ

ಪಂಡಿತಾಚಾರ್ಯರ । ಮುದುವಾಕ್ಯವಿದು ನಮಗೆ ನಿಮಗೆ ಸಾಕ್ಷಿ। ಶುದ್ಧ ಮೂರುತಿ ನಮ್ಮ ವಿಜಯವಿಠ್ಠಲನ್ನ । ಪೊದ್ದಿಪ್ಪ ದಾಸರ ಜ್ಞಾನವೆ ಕೆಡಗೊಡ ॥೪॥

ಆದಿತಾಳ

ಕಲಿಯುಗದಲ್ಲಿ ದೇವಾದಿಗಳ ಜನ್ಮ । ನೆಲಿಯಾಗಿಪ್ಪದು ಜ್ಞಾನಿಗಳು ಒಂದೇ । ತಿಳುಪಿದ ತರುವಾಯ ಅನುಮ್ಯೈಕಲಿಬೇಕು । ಹಲವು ಬಗೆಯು ಲಿಂದ ಪೇಳಿದ ವಚನವು। ಛಲಮಾಡಿದದರಿಂದ ಲಾಭ ಬರುವದೇನು । ಖಳರು ಕಲಿಯುಗದಲ್ಲಿ ಪುಟ್ಟುವರೆಂದು ಪ್ರ । ಬಲವಾಕ್ಯ ಇರುತಿರೆ ಅವರ ಪ್ರತಿಕಕ್ಷಿ । ಬಲವಂತ ಮುಕ್ತರು ಪುಟ್ಟದೆ ಇಪ್ಪರೇ। ಪ್ರಳಯಾಪಿದೂರ ನಮ್ಮ ವಿಜಯವಿಠ್ಠಲನ್ನ । ಪಾಲಿಸಿದವರ ಕೃಪೆ ಎನ್ನಮೇಲಿವುಂಟು ॥೫॥

ಜತೆ

ಆವಾವದಾದರು ತಪ್ಪೆ ಲೇಶಭಂಗವಿಲ್ಲ । ಶ್ರೀವಿಜಯವಿಠ್ಠಲನ್ನ ನಾಮಾ ಬಿಟ್ಟರೆ ಭಂಗಾ ॥೬॥

ಸುಳಾದಿ ೩೪

ಜನನಾದಿ ಪಂಚಾಗ್ನಿಗತ ಅಧ್ಯಾತ್ಮ ಪಂಚಾಗ್ನಿಹೋಮ ಪೂರ್ವಕ ಬಿಂಬೋಪಾಸನಾ ಬಹಿರೂಪವಾದ ವ್ಯಾಪಕ ಅವಕರ್ಾದಿ ಇಪ್ಪತ್ತೆರಡು ಮೂರ್ತಿಗಳ ಧ್ಯಾನಪೂರ್ವಕ ಬಿಂಬೈಕ್ಯ ಉಪಾಸನೆ

ರಾಗ ಭೈರವಿ ಧ್ರುವತಾಳ

ಅರಣಿ ಮಥನ ಪ್ರಮದಾದ್ವಾರ ಅದ್ವಾರದಿಂದ । ಪುರುಷನಿಂದ ಪುರುಷಾಪೇಕ್ಷನಿಂದಾ। ಸ್ಪರ್ಶ ಸ್ಮರಣೆ ವಾಸನೆಯಿಂದ ಸಿದ್ಧ ಗಾ। ತುರ ಪ್ರವೇಶದಿಂದ ನಾನಾಪರಿ ಸರ್ವ ಸಾ। ಧಾರಣ ಕಲಿಯುಗದಲ್ಲಿ ನಿಂ। ದಿರದೆ ಮಿಥುನ ಭಾವದಲ್ಲಿ ಜನನ। ಹರಿ ನೀನೆ ನೇಮಿಸಿಪ್ಪೆ ಯುಗ ಯುಗದಲ್ಲಿ ನಿ। ರ್ಜರಮುನಿ ಮನುಜರಿಗೆ ತಪ್ಪದಂತೆ । ಪರಮಪುರುಷ ನಾನಾ ಈಪರಿಯಿಂದಾದದಕ್ಕೆ। ತಿರಿಗಿ ಆವಾವ ಜನನದಲಿ ಬಂದಿನೋ।ಕರಣಂಗಳೆಲ್ಲ ಒಂದೆಸೆಯಲ್ಲಿ ನಿಲ್ಲಿಸಾದೆ। ಮರಳೆ ಮರಳೆ ಮರಳೆ ಪುನರಾವರ್ತಿ ಲೋಕದಿ। ನರಕಾನರಕದಲ್ಲಿ ಬಿದ್ದು ಎದ್ದು ಎದ್ದು । ಬರಲಾರದಲೆ ಬಂದೆನಯ್ಯಾ

ಜೀಯಾ । ಕರುಣಿ ಕಾಮಿತಫಲದಾ ಮೊರೆಬಿದ್ದೆ ಮೊರೆಕೇಳೊ । ಮರಹೆ ನಿಶ್ಚಯು ಎನಗೆ ಹಿಂದಣಭವಣೀ । ಧರ ಜಲ ಔಷಧಿ ಪುರುಷವಾಣಿ ರುಕ್ಸಸಿಮು ? । ಎರಡೈದು ರಸದಿಂದ ಮೇಲೆ ನಿನ್ನ । ಅರಿದು ನಿನ್ನಯ ರಸ ತ್ರಿಬಗೆ ಶಿಶುವಾಗಿ । ಎರಡೈದು ಮೂರ್ತಿಗಳ ಮಹಿಮೆಯನ್ನು । ತರತಮ್ಯ ನಿರ್ಭಿನ್ನವಾಗಿ ತಿಳಿದು ಕೊಂಡಾಡಿ ಸಂ । ತರ ಒಡನೆ ಬಾಳದಲೆ ಬರಿದೆ ತಿರಿದು । ಚರಿಸಿದೆ ಧೂಮ್ರ ವಾಯು ಮೇಘಾ । ಭ್ರ ರಾತ್ರಿ ತದನಂತರ ಕೃಷ್ಣಪಕ್ಷ ದಕ್ಷಣಾಯನ । (ಪರಕ್ಷಃದುಕ್ಷಣ) ಮಾಸ ಸಂವ । ತ್ಸರ ಪಿತೃ ಗಗನ ಚಂದ್ರಸ್ವರ್ಗಕೆಪೋಗಿ । ತಿರಿಗಿ ಪಂಚಾಹುತಿಯಲ್ಲಿ ಬಿದ್ದು ಈ ದೇಹ । ಧರಿಸಿ ಬೆಳದೆ ವಿಷಯಕೂಪದಲ್ಲಿ । ಜರೆ ನರೆ ಮೊದಲಾದ ಹೇಯ ಬಂದ ಕಾಲಕ್ಕು । ನಿರಯಕ್ಕೆ ಪೋಗಚಿಂತೆ ತೊಲಗದಿದಕೊ । ಹರಿಯೆ ಮುಂದೆ ದಾವ ಜನುಮ । ಒರುವದು ಕಾಣೆ ನಕಟಾ ಹರುಷವಾಗೋದು ನೋಡು ಇದರೊಳಗೆ । ಎರಡೆರಡು ಒಂದುಪರ್ವ ಶ್ರವಣಾದಿಯಲ್ಲಿ ಇಪ್ಪ । ಭಾರವನ್ನೆ ವಿಚಾರಿಸದೆಮೋಸವಾಗಿ।ನಿರುತಪಂಡಿತಬಲ್ಲ್ಯಾ(ಬಲದಿ)ಮುನಿಮೌನಮೌನ ದಿಂದ । ಕರುಣಾ ಸಂಪಾದಿಸಿಗೆ ಮಾರ್ಗಕಾಣೆ । ಹರಿಯೆ ನಿನ್ನವತಾರ ಮತ್ಸ್ಯಾದಿರೂಪಕ್ರೀಯ । ಸ್ಮರಿಸೆ ಒಂದೇ ಭಾರಿ ಎಲ್ಲಿ ನಾನೂ । ವರ ವಿದ್ಯಾ ವಂಶಾವೃದ್ಧಿ ಭರ ಭಯ ಮೋಹ । ದಾರಿಂದರೆಲ್ಲಾರಿಷಡ್ವರ್ಗ ನಾಶನ ಮಾಡಿಕೊಂಡು । ಸರ್ವ ಸಂಪತ್ತು ಲಾವಣ್ಯಯೈದು ದುಃಖ । ಪರಿಹಾರದಿಂದ ಬಿಂಬಾ ಬಿಂಬಾ ನಿನ್ನಾ । ವರ ಮೂರ್ತಿಗಳ ನೋಡಿ ನುಪಿಸಿ ಬರುವ ಜನನ । ವಿರಹಿತನಾಗದೆ ಪೋಪೆನಯ್ಯಾ । ಕರುಣಾಕರ ನಮ್ಮ ವಿಜಯವಿಠ್ಠಲ ಎನ್ನ । ಪೊರೆವದಾತಾರ ಹೃತ್ಕಮಲದಲ್ಲಿವಾಸ ॥೧॥

ಮಟ್ಟತಾಳ

ಹೃದಯಾ ವ್ಯಾಪ್ತಿ ಮೂರ್ತಿ ಪ್ರಾದೇಶದೊಳಗೆ । ಪದುಮಕರ್ನಿಕೆ ಗರ್ಭ ಮಧ್ಯದಲ್ಲಿ ಇಪ್ಪ । ಪದುಮೆಯರಸ ಪ್ರಾಜ್ಞ ನಿನ್ನ ಕಾಂಬುವ ದೆಂತೊ । ಪದೋಪದಿಗೆ ವಿಷಯ ಧ್ಯಾನವಮಾಡುವೆ । ಮಧ್ಯದಲ್ಲ್ಯೆ ವಿದ್ಯಾ ಪಂಚಕಾಲವನ್ನೆ ತಿಳಿದು । ಇದರಿಂದಲಿ ನಿನ್ನ ಪೂಜಿಸಲಿಲ್ಲೈಯ್ಯಾ । ಪದುಮಗರ್ಭನಯ್ಯಾ ವಿಜಯವಿಠ್ಠಲ ನಿನ್ನ । ಪದಗಳ ನೋಡುವ ಭಾಗ್ಯವೆಕೊಡು ನಿತ್ಯ ॥೨॥

ತ್ರಿವಿಡಿತಾಳ

ವ್ಯಾಪಕ ಆವರ್ಕ ಆವಿಷ್ಟ ಕ್ಷೋಭಕ ಪ್ರ । ತಿಪಾದ್ಯ ಸ್ಥಿತಾ ನಿಯಾಮಕ ಪ್ರವರ್ತಕ ಸ । ರ್ಗ ಪಾಲಣ ಸಂಹೃತಿ ಅವಕಾಶ ಭಯಮೋಚಕ । ಉಪಶಾಶ್ರಯ ಕರ್ತೃ ಮುಕ್ತ ವಿಭಾಗವು । ಆಪದ್ರಕ್ಷಕ ಅಭೀಷ್ಟಪ್ರದ । ಸಂಪ್ರಾಪ್ತ ಸಂಯೋಗ ವಿಯೋಗವು । ರೂಪ ಪಂಚನ ಪರಿಮಿತ ಅವಸ್ಥಾ ಪ್ರೇರಕ । ಪಾಪ ಪುಣ್ಯ ಬಂಧವೆ ಶತ ತತುಂತದಾಕಾರ । ಈ ಪರಿ ನಿನ್ನ ಮೂರ್ತಿಗಳನೇಕ । ಶ್ರೀಪತಿ ಪರಬೊಮ್ಮ ಅಸುರ ಸಂಹಾರ ಪ್ರ । ತಾಪ ವಿದೂರ ವಿದುರ ವಂದಿತ । ಅಪಾರಮಹಿಮನೆ ಏಕವಿಂಶತಿ ಕ್ಷೇತ್ರ । ದ್ವೀಪ ಮೂರುತಿ ಕೂಡಾ ಇಪ್ಪತ್ತೆರಡೂ । ಗೋಪಾಲ ನಿನ್ನ ಮೂರುತಿಗಳೊಂದೊಂದು ಬಗೆ । ವ್ಯಾಪಾರ ಮಾಡುತಿರಲು ಜಗದೊಳು । ಲೇಪ ನಿರ್ಲೇಪದಲ್ಲಿ ಅನಂತಾನಂತಗುಣ । ರೂಪ ಕ್ರಿಯಾ ಸಂಪೂರ್ಣವಾಗೀ । ಪೋಪ ಬರುವ ಕಳಿತು ಪವಳಿಸಿ ಓಡುವ । ಭಾಪುರೆ ಒಂದೆ ಕಾಲದಲ್ಲಿ ಮಾಡುವ ಚಿತ್ರಾ । ಆಪನ್ನ ಪರಿಪಾಲಾ ಇದರೊಳಗೆನಗೊಂದು । ನೀ ಪಾಲಿಸು ನಿತ್ಯ ಅನವರತ ತಕ್ಕದ್ದು । ಕೋಪಾನಂದದಿಂದ ನೀನೊಲಿದು ದುಃಖ । ವ್ಯಾಪಿ ವ್ಯಾಪಿಗೆ ನಗುವ ಮೂರ್ತಿಯ ಮನದಲ್ಲಿ । ಲೋಪವಿಲ್ಲದೆ ಕರುಣದಿಂದ ಸ್ವಾಮಿ । ಚಾಪಧರಾಗ್ರಣಿ ವಿಜಯವಿಠ್ಠಲ ಸರ್ವ । ತಾಪತ್ರಯ ವಿನಾಶ ಸಮಸ್ತ ಗುಣನಿಧಿ ॥೩॥

ಅಟ್ಟತಾಳ

ಆವನ್ನ ಚೇತನ ಅನಾದಿ ಇಂದಲಿ । ಆವನ್ನ ಅಹಂಕಾರ ದಾಸೋಹಂ ಎನ್ನದು । ಆವನ್ನ ಬುದ್ಧಿ ಭೇದ ನಿಶ್ಚೈಸದು । ಆವನ್ನ ಚಿತ್ತ ತತ್ವ ವಿಚಾರಿಸದು । ಆವನ್ನ ಮನಸು ಸಂಕಲ್ಪಮಾಡದು । ಆವನ್ನ ಮಸ್ತಕ ಅಚ್ಯುತಗೆರಗದು । ಆವನ್ನ ಕರ್ನ ಸತ್ಕಥೆ ಕೇಳದು । ಆವನ್ನ ನಯನ ಹರಿಮೂರ್ತಿಯನೋಡದು । ಆವನ್ನ ನಾಸಾ ನಿರ್ಮಾಲ್ಯವೆ ಕೊಳ್ಳದು । ಆವನ್ನ ವದನ ಶ್ರೀಹರಿ ಕೃಷ್ಣನೆನ್ನದು । ಆವನ್ನ ನಾಲಿಗೆ ಹರಿಯನ್ನ ಪಾಡದು । ಆವನ್ನ ಕರಗಳು ಹರಿಪೂಜೆಮಾಡದು । ಆವನ್ನ ಚರಣವು ಯಾತ್ರಿಯ ತಿರುಗವು । ಆವನ್ನ ಶರೀರ ಹರಿಗಡ್ಡಬೀಳದು । ಆವನ್ನ ಭೂಮಿಯದಾನವ ಮಾನವ । ಆವನ್ನರಕವಾಸಿಗ ನೆನ್ನಿ ಎಂದಿಗೂ ।

ಜೀವನಾಶ್ರವವೆನ್ನಿ ಪಾವನನಲ್ಲವೊ । ಓವನ್ನ ವಿಜಯವಿಠ್ಠಲನೊಲಿಸಲು । ಬಾವನ್ನವಾಗುವ ಧ್ರುವನ್ನ ಪದವಿ ಐದಿ ॥೪॥

ಆದಿತಾಳ

ಕತ್ತೆಯು ಅಂಗಕ್ಕೆ ಕಸ್ತೂರಿ ಗಂಧ ಪೂಸಿ । ಮುತ್ತು ಮಾಣಿಕಹಾರ ಸುತ್ತಲು । ಸುತ್ತಿ ಕರವೆತ್ತಿ ನಮಸ್ಕರಿಸಿ । ಸತ್ತಿಗೆ ನೆಳಲಲ್ಲಿ ಸಿಲ್ಕಿಸಿ । ತುತ್ತಿಸಿ ಚುಂಬನಕೊಟ್ಟ ಪರಿಯಂತೆ । ಸತ್ಯ ಸಂಕಲ್ಪ ನಿನ್ನ ಪಾತ್ರರ ಸಹಿತಬಿಟ್ಟು । ನಿತ್ಯ ಅನ್ಯದೇವತೆಯು ಪೂಜಿಸಲು ವ್ಯರ್ಥ । ಭೃತ್ಯವತ್ಸಲ ನಮ್ಮ ವಿಜಯ ವಿಠ್ಠಲರೇಯ । ಉತ್ತಮ ಶ್ಲೋಕ ನಿನ್ನ ಕೀರ್ತನೆಕೊಡು ಪೊಳೆದು ॥೫॥

ಜತೆ

ಈಸು ಮೂರ್ತಿಗಳಲ್ಲಿ ಒಂದು ಮೂರ್ತಿಯ ಧ್ಯಾನ । ಲೇಸಾಗಿ ಕೊಡುವದು ವಿಜಯವಿಠ್ಠಲಪೂರ್ಣ ॥೬॥

ಸುಳಾದಿ ೩೫

ಜೀವನಸ್ವರೂಪ ಲಿಂಗದೇಹಾದಿಗಳಲ್ಲಿ ಪ್ರವರ್ತಕ ರೂಪ ತಿಳಿದು ಪ್ರಕೃತಿ ವೇದ ಕಾಲಾದಿಗಳಲ್ಲಿರುವ ರೂಪಗಳಿಗೆ ಐಕ್ಯ ಚಿಂತಿಸಿ ಯಮನಿಯಮಾದಿಗಳಿಂದ ಗುಣ ರೂಪಕ್ರೀಯ ಉಪಾಸನಾ, ಸಕಲ ಬಿಂಬಾಧೀನ ಚಿಂತನೆ ಬಿಂಬಾರ್ಪಣ

ರಾಗ ಬಿಲಹರಿ ಧ್ರುವತಾಳ

ನಿನ್ನಾಧೀನ ಈ ಜೀವದೊಳಗಿದ್ದ ಪೂರ್ಣ ಶಕ್ತಿ । ನಿನ್ನಾಧೀನ ಲಿಂಗ ಗುಣತ್ರಯ ಷೋಡಶಾತ್ಮಕ ಕಳೆಗಳು । ನಿನ್ನಾಧೀನ ಅನಾದಿ ಅವಿದ್ಯಾ ಕಾಮ ಕರ್ಮ ಸಕಲವು । ನಿನ್ನಾಧೀನ ಜೀವಾಚ್ಛಾದಿಕ ಪರಮಾಚ್ಛಾದಿಕ ಬಂಧಕಾ। ನಿನ್ನಾಧೀನ ಕಾಲ ಪ್ರಕೃತಿ ವೇದ ವರ್ಣ ಅವ್ಯಾಕೃತಾ । ನಿನ್ನಾಧೀನ ರಮೆ ಪರಿ ಪರಿ ರೂಪದಲ್ಲಿ ಅಲ್ಲೆಲ್ಲಿ । ನಿನ್ನಾಧೀನ ಸೃಷ್ಟಿ ಸ್ಥಿತಿ ಲಯ ಸೂಕ್ಷ್ಮ ತರಸೂಕ್ಷ್ಮ ಮಹತ್ತು । ನಿನ್ನಾಧೀನ ಗುಣ ಸಾಮ್ಯ ವೈಷಮ್ಯ ತತ್ತತ್ಪ್ರಭೇಧಾ । ನಿನ್ನಾಧೀನ ಸರ್ವ ತಾತ್ವಿಕರ ವರ ಸಾಮರ್ಥ್ಯಕೆ। ನಿನ್ನಾಧೀನ ಬೊಮ್ಮಾಂಡ ಪಿಂಡಾಂಡ ಅಂತರ ಬಾಹಿರ ವ್ಯಾಪಾರಾ । ನಿನ್ನಾಧೀನ ಒಂದೆ ಎರಡೆ ಪ್ರಕೃತಿ ಪ್ರಕೃತಿ ವಿಕೃತಿ ವೈಕೃತ । ಇನ್ನಿತು ಪೇಳಿದರೊಳಗೆ ಅನಂತ। ನಿನ್ನಿಂದ ದತ್ತವಾದ ಸ್ವಾತಂತ್ರ ಎನ್ನದೆಂದು

ಈ ಬಗೆಯಲಿ । ಕಣ್ಣೊಳಗಿಪ್ಪ ಮೂರುತಿಯ ಪ್ರಸನ್ನಿಕರಿಸಿ ಹೃದಯದಿ । ಉನ್ನಾಹದಿಂದಲಿ ವಿಜಯಾ ವಿಠ್ಠಲಗೆ । ಬಿನ್ನೈಸಿ ಭಕುತಿ ಸಂಪಾದಿಸಿ ॥೧॥

ಮಟ್ಟತಾಳ

ಮುಕುತಿ ಬೇಕಾದವರು ಮುಕುಂದನ ಚರಣ । ನಿಖಿಳ ಕರ್ಮವ ತೊರೆದು ನಿಸ್ಸಂಗವೃತ್ತಿಯಲಿ । ಸಕಲರಾವಿನಲಿ ಯೋಚಿಸು ಪರನಾಗಿ । ರುಕುಮಿಣಿ ಪತಿ ನಮ್ಮ ವಿಜಯವಿಠ್ಠಲರೇಯನ್ನ । ಅಕಳಂಕ ಸ್ವಭಾವ ವರ್ನಿಸಿ ಪೂಜಿಸು ॥೨॥

ತ್ರಿಪಿಡಿತಾಳ

ಇನ್ನೇನೀತನ ಕರುಣಕ್ಕೆ ಎಣೆಗಾಣೆ । ಘನ್ನ ಕಾರುಣ್ಯಸಾಗರ । ನಿನ್ನಾಧೀನವೆಂದು ಒಮ್ಮೆ ನುಡಿಯಿರೋ । ಘನ್ನ ಕಾರುಣ್ಯಸಾಗರ । ಬನ್ನ ಬಡಿಸುವ ಭವದಿಂದೆತ್ತುವ । ಘನ್ನ ಕಾರುಣ್ಯಸಾಗರ । ಮುನ್ನೆ ಮಾಡಿದ ದೋಷ ಓಡಿಸುವಾ । ಘನ್ನ ಕಾರುಣ್ಯಸಾಗರ । ಘನ್ನ ಘಾತಕರ ಸದ ಬಡಿವ ನಿತ್ಯ । ಘನ್ನ ಕಾರುಣ್ಯಸಾಗರ । ಅನಂತಾನಂತ ಜನುಮವಾದರೂ । ಘನ್ನ ಕಾರುಣ್ಯಸಾಗರ । ತನ್ನ ಜ್ಞಾನವನಿತ್ತು ಸಲಹುವಾ । ಘನ್ನ ಕಾರುಣ್ಯಸಾಗರ । ಬೆನ್ನು ಬಿಡದಲೆ ಭಾಗ್ಯ ಉಣಿಸುವಾ । ಘನ್ನ ಕಾರುಣ್ಯ ಸಾಗರ । ಘನ್ನ ಮೂರುತಿ ವಿಜಯವಿಠ್ಠಲ । ಘನ್ನ ಕಾರುಣ್ಯಸಾಗರ ॥೩॥

ಅಟ್ಟತಾಳ

ಯಮನೇಮ ಮೊದಲಾದ ಅಷ್ಟಾಂಗಯೋಗ । ಕ್ರಮದಿಂದ ಸಂಪಾದಿಸಿ ಭಗವಂತನ । ವಿಮಲ ಗುಣಗಳು ಕೊಂಡಾಡಿ ಚನ್ನಾಗಿ । ಸಮ ಬುದ್ಧಿಯಲಿ ಸರ್ವದ ಸತ್ಪ್ರಕೃತಿ । ಪ್ರಮೇಯ ಭಾಗಗಳು ತಿಳಿದು ತಾರತಮ್ಯಾ । ಗಮ ತತಿಯಿಂದ ಭಗವದೋಪಾಸ । ನೆ ಮಾಳ್ಪ ಮಾಳ್ಪದು ಮನದಲ್ಲಿ । ಮಮಕಾರ ಅಹಂಕಾರ ಬಿಟ್ಟು ಸುನಿಶ್ಚಿತ್ತ । ಸುಮನಸ ರೊಡಿಯ ವಿಜಯ ವಿಠ್ಠಲರೇಯ । ನಮೊನಮೊ ಎಂದವಗೆ ಕಣ್ಣ ಮುಂದಾಡುವ ॥೪॥

ಆದಿತಾಳ

ಗುಣ ರೂಪ ಕ್ರೀಯಾ ಅಂಗಬದ್ಧ ದ್ವಿವಿಧವೆನ್ನಿ । ಅನ ರಾಮಾ ಸಹಾ ಪೂರ್ಣ ವೈಲಕ್ಷಣ್ಯ ನರಸಿಂಹ ? । ದಿನಿತು ಬಗೆಯಿಂದ ಉಪಾಸನ

ಭೇದ ತಿಳಿದು । ಮನುಜಾದಿಗಳು ಮರೆ ಅವರವರ ತಕ್ಕಂತೆ । ಘನ ಕನಕ ವಸ್ತ್ರ ವಾಹನ ಲೋಕ ಸತಿಸುತರ । ಅನುವಾಗಿ ಇತ್ತು ಅವರ ಪೊರೆದು ಪ್ರತಿದಿವಸ । ಗುಣವಂತರಮಾಡಿ ಪ್ರತ್ಯೇಕ ನಡಿಯಲಿ । ಮುಣುಗಿ ಮುಕ್ತಿಯ ಕೊಡುವ ನಿನ್ನಾಧೀನವೆಂದರೆ । ತೃಣವಾದರು ಚಲಿಸಲಿ ಸಮರ್ಥರಾರೂ । ವನಜನಾಭನೆ ಸೃಜ್ಞಕಾಲಕ್ಕೆ ಜೀವರೊಳು । ಅನಿರುದ್ಧ ಅಂಶದಿಂದ ಪೊಕ್ಕು ಈಪರಿ ಚರಿಯ । ಪ್ರಣುತರಿಂದ ಮಾಡಿಸಿ ಮುಕುತರ ಮಾಡುವ । ಜನುಮಾದಿ ವಿರಹಿತ ವಿಜಯವಿಠ್ಠಲರೇಯ । ಗಣಣೆ ಇಲ್ಲದೆ ಲಿಂಗ ಪ್ರಕೃತಿಯ ಮೊನೆಮಾಳ್ಪ ॥೫॥

ಜತೆ

ನಂಬಿರೊ ನೆರೆನಂಬಿ ಜಗದಂಬಿಕೆನಾಥನ । ಇಂಬುಕೊಡುವ ಈತನೆ ವಿಜಯವಿಠ್ಠಲಾಧೀನಾ ॥೬॥

ಸುಳಾದಿ ೩೬

ಬಿಂಬ ಪ್ರತಿಬಿಂಬಭಾವ ಬಿಂಬಲಕ್ಷಣಪ್ರಮೇಯ, ಉಪಾಸನಕ್ಕೆ ಯೋಗ್ಯವಾದ ಸ್ವದೇಹಾಂತರ್ಗತ ಜೀವ ಸ್ವರೂಪಸ್ಥ ಅಂತರಾತ್ಮನೆ ಬಿಂಬ ಮುಖ್ಯೋಪಾಸ್ಯ

ರಾಗ ರೇಗುಪ್ತಿ ಧ್ರುವತಾಳ

ಆಪ್ತ ಅಖಿಳ ಮುಕ್ತಿಯೋಗ್ಯ ಜನಕೆ ನಿತ್ಯ । ತೃಪ್ತ ತ್ರಿಗುಣಾತೀತ ಸರಸಿಜಾಕ್ಷಾ । ವ್ಯಾಪ್ತ ಪ್ರಕೃತಿ ವೇದ ಕಾಲ ಜೀವಾಕಾಶ । ಸಪ್ತಾಸಪ್ತ ಲೋಕದಲ್ಲಿ ಪೂರ್ಣ । ದೀಪ್ತಾ ಸ್ವ ಸ್ವಶರೀರ ವಿಜ್ಞಾನರೂಪ ಸರ್ವ । ಅಂತರಾತ್ಮ ಸಗುಣ । ಪ್ರಾಪ್ತನಾಗುವ ತನಗೆ ತಾನೆ ಒಲಿದು ಮೊದಲು । ಕ್ಲಿಪ್ತ ಮಾಡಿದಲ್ಲಿಗೆ ಕರುಣದಿಂದ । ತಪ್ತನಾಗಿ ಕಾಣಿಸುವ ದೈತ್ಯಾವಳಿಗೆ ದೋಷ । ಲಿಪ್ತ ರಹಿತ ಲಿಂಗಶೂನ್ಯ ಅನ್ಯ । ಸುಪ್ತಿ ಇಲ್ಲದಂತೆ ಏಕಮೇವ ನೆನಿಪ । ಶಪ್ತನೊ ಸಾಕಾರಮೂರ್ತಿ ಮೂಲ । ಸಪ್ತಾವರಣ ಸರಿಸಿಜಾಂಡದೊಳಗೆ ಸಂ । ದೀಪ್ತನಾಗಿ ಒಪ್ಪುವ ಸರ್ವೋತ್ತಮಾ । ಗೆಪ್ತಿಗೆ ಸಿಲುಕುವಾ ವಿಜಯ ವಿಠ್ಠಲರೇಯ । ಆಪ್ತಾ ಅಖಿಳ ಮುಕ್ತಿಯೋಗ್ಯಜನಕೆ ॥೧॥

ಮಟ್ಟತಾಳ

ಅಗಣಿತ ಗುಣಧಾಮಾ ಅತ್ಯದ್ಭುತಶಕ್ತಾ । ನಿಗಮಗೋಚರ ನಿರ್ವಿಕಾರ ನಿರ್ವಿಕಲ್ಪಾ । ಜಗತಿ ವಲ್ಲಭ ಜನನ ಮರಣಾದಿದೂರಾ । ಬಗೆ ಬಗೆ

ಲಕ್ಷಣ ಭರಿತವಾದ ಕಾಯಾ । ಯುಗ ಯುಗದೊಳು ತತ್ಕಾರ್ಯವಮಾಡಿಸು ವಂಥ । ಭಗವಂತನೆ ನಿತ್ಯ ಭಕ್ತರ ಮನೋರಥನೆ । ಮಗುವಿನ ಪಾಲಿಸಿದ ವಿಜಯವಿಠ್ಠಲ ನಿನ್ನ । ಪೊಗಳಿದವನ ಭಾಗ್ಯ ಎಂದಿಗೇ ಸವೆಯದೂ ॥೧॥

ತ್ರಿವಿಡಿತಾಳ

ಸದ್ಗುಣಗಣಸಾಂದ್ರಾ ಜ್ಞಾನಾನಂದ ಪೂರ್ಣಾ । ಚಿದ್ರೂಪಾ ಅಖಿಳ ಬೊಮ್ಮಾಂಡ ಕರ್ತಾ । ನಿರ್ದೋಷ ನಿಸ್ಸಂಗ ನಿರ್ವಿಕಾರ ನಿತ್ಯ । ವಿದ್ಯಾವಂತ ವಿಶ್ವಪರಿಪಾಲಕಾ । ಖದ್ಯೋತ ಲಾವಣ್ಯ ಬಲು ಪಾವನಧೈರ್ಯಾ । ಸಿದ್ಧ ಪರಮೈಶ್ವರ್ಯ ಯೋಗೀಶ್ವರಾ । ನಿದ್ರಾರಹಿತ ಸರ್ವಸ್ವಾತಂತ್ರ ಸರ್ವೋದಾ । ಮುದ್ದು ಮೋಹನ್ನ ಸಿರಿವಂತ ತೇಜಾ । ಬುದ್ಧಿ ವಿಸ್ತರನೆ ಜಗದಂತರ್ಯಾಮಿ । ಶುದ್ಧ ಲಕ್ಷಣವಂತ ಗರುಡಗಮನಾ । ಭದ್ರಮೂರುತಿ ಪ್ರಾಜ್ಞ ಸರ್ವೋತ್ತುಮಶೌರ್ಯ । ಕ್ಷುದ್ಬಾಧಿ ವಿದೂರ ನಿತ್ಯ ತೃಪ್ತಾ । ನಿರ್ದ್ವಂದ ಜಡಜೀವಭಿನ್ನ ಭವರೋಗ । ವೈದ್ಯ ವೈಕುಂಠನಿವಾಸ ದೈತ್ಯ । ಮರ್ದನ ಮಹಚರ್ಯಾ ತ್ರಿಜಗಪೂಜಿತಕಾಯ । ಸ್ವಧರ್ಮರಕ್ಷಕ ಸರ್ವ ವ್ಯಾಪ್ತಾ । ಮದ್ರಮಣ ಮೊದಲಾಗಿ ಹರಿಯುಭಜನೆಮಾಡಿ । ಸದ್ಭಾವದಲಿ ಇಂಥ ಗುಣೋಪಾಸನೆ । ಪದ್ಧತಿ ತಪ್ಪದೆ ಮಾಡಿದರಿದರಂತೆ । ಇಪ್ಪಲ್ಲಿ ಕೊಡುವನು ಇನಿತಿನಿತು । ಹೆದ್ದೈವ ವಿಜಯವಿಠ್ಠಲ ಸರ್ವದಾಸರ್ವ । ವಿದ್ಯಾತೀತನು ಕಾಣೋ ಎಂತೆಂತು ಇದ್ದರೂ ॥೨॥

ಅಟ್ಟತಾಳ

ಪರಮೇಷ್ಟಿ ಪವಮಾನ ಗರುಡಾಹಿ ಶಿವ ಇಂದ್ರ । ಸ್ಮರ ಪ್ರಾಣ ಅನಿರುದ್ಧ ರವಿ ಚಂದ್ರ ಮೊದಲಾದ । ಸುರರು ತಾತ್ವಿಕರು ಚತುರವಿಂಶತಿ ತತ್ವ । ಧರಿಸಿ ಇದ್ದವರು ಮಿಕ್ಕಾದ ಜೀವರಾಶಿ । ಪರಿಯಂತ ನೆನೆದು ಒಂದೊಂದಧಿಷ್ಠಾನದಲ್ಲಿ । ಹರಿಯ ಧ್ಯಾನವೆಮಾಡೆ ತತ್ಕಾರ್ಯವ । ಅರುಹಿ ಕೊಡುವನಯ್ಯಾ ಕ್ರಮದಿಂದ ನೇಮಿಸಿ । ಮರ್ಯಾದೆ ತಪ್ಪದು ತಮ್ಮ ಯೋಗ್ಯತದಷ್ಟು । ಕಿರಿಯ ಜನಕೆ ಶಕ್ತಿ ಉತ್ತು । ಮರಿಗೆ ಸರ್ವಸಾಧ್ಯ ವಾಗಿಪ್ಪದು ಕೇಳಿ । ಸರಸಿಜಗರ್ಭಂಗೆ ಇತರ ಸಂಶಯವಿಲ್ಲಾ । ಹರಿ ಕರುಣ ಒಂದೇ ಪ್ರಧಾನ ಸಾಧನ । ಪರಮಪಾವನ ಸಿರಿ ವಿಜಯವಿಠ್ಠಲ ತನ್ನ । ಶರಣರಿಗೊಂದೊಂದು ಕ್ಲಿಪ್ತಮಾಡಿಯಿಪ್ಪಾ ॥೩॥

ಆದಿತಾಳ

ಬಿಂಬ ಪ್ರತಿಬಿಂಬ ಬಿಂಬಭಾವದಲ್ಲಿ ಹರಿಯಾ । ಬಿಂಬವೆ ಕಾಂಬು ವರು ಮುಕ್ತಿಯೋಗ್ಯರು ಎಲ್ಲಾ । ವೆಂಬೊದೆ ಸಿದ್ಧಾಂತವೆನ್ನಿ ಸ್ಪಷ್ಟತ್ವದಲಿ ಭೇದ। ಕುಂಭಿನಿ ವಿಡಿದು ಅಧಿಕಾರಿಗಳವ್ಯಾಪ್ತಿ । ತುಂಬಿಕೊಂಡಿಪ್ಪದು ನೋಡುವದು ತಿಳಿವದು । ಹಂಬಲಿಸುವದು ಉತ್ಕೃತ ಉನ್ನತ ಮನಸು । ಅಂಬುಜಾಕ್ಷಗೆ ಅಜನು ಅಜಗೆ ಶಿವ ಶಿವಗೆ ಇಂದ್ರ । ಬಿಂಬ ಪ್ರತಿಬಿಂಬ ಇದೆ ತಳಗಿಯೊಳಗೆ ಉದಕ । ತುಂಬಿರಲದರದರೊಳಗೆ ಸೂರ್ಯನಬಿಂಬವಿರಲಾ । ಬಿಂಬದಪ್ರಕಾಶ ಮತ್ತೊಂದರಲಿ ಪ್ರತಿ । ಬಿಂಬ ತೋರಿದಂತೆ ಈ ತೆರದಲಿ ಹರಿಯು । ಬಿಂಬವೆ ಕಾಣುವರು ಸ್ವಯೋಗ ತಪ್ಪದಲೆ । ಬೆಂಬಲವಾಗಿ ಯಿಪ್ಪ ವಿಜಯ ವಿಠ್ಠಲಸ್ವಾಮಿ । ನಂಬಿದ ಮಾನವರಬಳಿಯು ಕುಣಿ ದಾಡುವಾ ॥೫॥

ಜತೆ

ಭಕ್ತಿಯಿಂದಲಿ ಭಜಿಸೆ ಭವದಿಂದಕಡೆಮಾಡಿ । ಮುಕ್ತಿಯಲ್ಲಿಯಿಡುವ ವಿಜಯವಿಠ್ಠಲಪೊಳೆದು ॥೬॥

ಸುಳಾದಿ ೩೭

(ಬಿಂಬಾಪರೋಕ್ಷ) ಬಿಂಬನು ಸ್ವರೂಪದೇಹಹೃತ್ಪದ್ಮದಲ್ಲಿ ಇರುವಿಕೆ, ಬಹಿರಂಗ ರೂಪಗಳು ಬಿಂಬವಲ್ಲ; ಜೀವಾಂತರ್ಯಾಮಿ ರೂಪವೇ ಮುಖ್ಯ ಬಿಂಬನೆಂಬೋ ಪ್ರಮೇಯು

ರಾಗ ಸಾವೇರಿ ಧ್ರುವತಾಳ

ಮೀಸಿಯಾ ತಿದ್ದಿ ಬಹು ಬೆಳಸಿದರಂಜುವೆನೆ। ಪಾಷಾಣ ಪೊತ್ತು ನಿಂದಾರೆ ಅಂಜುವೆನೆ । ವಿಷಾಣ ಕೋಟಿಯನ್ನು ಮನೆಮಾಡಿದರಂಜೆನೊ । ಘೋಷವೆಬ್ಬಿಸಿ ಚೀರಿದರಂಜೆನೊ । ವೇಷಾ ಚೊಕ್ಕಟ ತೋರಿದರಂಜೆನೊ । ಭೂಸುರ ಧರ್ಮತೋರದರಂಜೆನೊ । ಕೇಶ ಜಡೆಗಟ್ಟಿ ಬಿಲ್ಲುಧರಿಸಾಲಂಜೆ । ಭೇಷಜವನ್ನೆ ತೋರಿ ಉರಿಯನುಂಗಿದರಂಜೆ । ಕೂಸಾಗಿ ವಂಚನೆಮಾಡಿದ ರಂಜೆನೊ । ದೋಷಕ್ಕೆ ಹೇಸಾದೆ ಖಡ್ಗ ಝಳಪಿಸಾಲಂಜೆ। ಏಸೊಂದು ರೂಪಗಳು ಧರಿಸಾಲಂಜೆ । ವಾಸುದೇವ ನಿನ್ನ ಭೀತಿಗಾನಂಜೆನೊ । ಈ ಶರೀರವೆ ನಿನ್ನಾಧೀನವೆಂಬೊದೊಂದೆ । ಏಸೇಸುಬಗೆ ಕರ್ಮ ಆನೆ ಉಣಲಿಬೇಕು । ದಾಸಾನಾದ ಕಾಲಕ್ಕೂ ತೊಲಗದಯ್ಯಾ । ಲೇಸಾಗಿ

ನೀನೆ ಪೊಲಿದು ಕರುಣಾವಮಾಡಿದರಾಗೆ। ಈ ಸಮಸ್ತ ಗರ್ಭದಲಿ ಜನಿಸಿ ಬಂದು। ಲೇಶಾಲೇಶವಾದರು ಕರ್ಮ ಉಣಲಿಯಿತ್ತು। ನಾಶಗೈಸುವೆನೆಂಬ ಪ್ರತಾಪ ಘನವಕ್ಕು। ಶೇಷಶಾಯಿ ನಮ್ಮ ವಿಜಯವಿಠ್ಠಲ ನಿನ್ನ। ಈಶ ತನಕೆ ಅಂಜಿ ತಲೆಬಾಗಿತುತಿಸಬೇಕು ॥೧॥

ಮಟ್ಟತಾಳ

ನಿನಗಂಜುವನಾರು ನಿನಗಳಕುವನಾರು । ನಿನಗೆ ಹಸ್ತವನೆತ್ತಿ ಮಣಿದು ಪಾಡುವನಾರೂ। ನಿನಗೋಸುಗ ನಿತ್ಯ ವನಭವನ ಭುವನಾ। ದಿನ ದಿನ ತಿರುಗಿ ಸುಮ್ಮನೆ ಅರಸುವನಾರೂ। ವನಜ ಜಾಂಡದೊಳಗೆ ನಿನಗೆ ಪೂರ್ಣವಾಗಿ। ಗುಣಗಣಗಳ ಪೇಳಿ ದಣಕೊಂಬುವನಾರೂ। ಮುನಿ ಮೊದಲಾದವರು ಚಿನುಮಯ ಮೂರುತಿ। ಅಣು ಮಹತ್ತು ನಿನ್ನನೆ ಬಾಹಿರದಲ್ಲಿ। ಕುಣಿಸಿ ಕುಣಿಸಿ ನೋಡಿ ಮಿನಗುವ ಅಪರೋಕ್ಷಕೆ ಕಾ। ರಣವಲ್ಲವೆಂದೂ ಅನುಭವಿಸಿದ್ದರೂ ಯೋ। ಚನೆಮಾಡಿ ಸಾರುತಿರೆ ಮನ ದಲಿ ತಿಳಿದು ಆ। ಇನಿತು ಉತ್ತರನಿತ್ತೆ ಜನುಮಾ ಜನುಮಾ। ಜನಕ ವಿಜಯ ವಿಠ್ಠಲ ಎನ್ನ। ಜನನ ನೀಗೂವ ಮೂರುತಿ ನೀನಲ್ಲವು ಕಾಣೋ ॥೨॥

ತ್ರಿವಿಡಿತಾಳ

ಅಧಿ ದೈವದವನಲ್ಲಾ ಅಧಿ ಭೂತದವನಲ್ಲಾ। ಪದೋಪದಿಗೆ ಹೊರಗೆ ತೋರುವನಲ್ಲಾ। ಒದಗಿ ನಾನಾ ಸೌಖ್ಯ ಉಣಿಸುವನೆ ನೀನಲ್ಲಾ। ಮುದ ದಿಂದ ಸ್ವಾಪದಲಿ ಪೊಳೆದವನೀನಲ್ಲ। ಇದರ ತರುವಾಯ ಮತ್ತೊಂದುಂಟು ಸ್ಥೂಲ। ಹೃದಯದಲ್ಲಿ ಸುಳಿದುನಿಂದಾಡಿದವನಲ್ಲಾ। ಸದಮಲಮೂರುತಿ ಎನ ಗೊಂದು ನಿಜವಲ್ಲಾ। ಇದರಿಂದ ಏನಾಗುವ ಕಾರ್ಯವಾದರೂ। ಸಿದರುಶನ ವಾಗಲಿಲ್ಲಾ ಹರಿಯೇ। ಅದು ಭೂತ ದೈವವೆ ತಿರಿಗಿ ತಿರಿಗಿ ನೀನೆ। ಎದಿರಿಲಿ ನಿಂದು ಈ ಬಗೆ ರೂಪವ। ಉದಯಾಸ್ತಾಮಾನದಲ್ಲಿ ಪೂಜಿಸು ಎನುತಂಜಿ। ಸಿದರೆ ನಾನಂಜುವನಲ್ಲಾ ಕಾಣೊ। ಯದುಕುಲೋತ್ತಮ ನಿನ್ನ ರೂಪಗಳಿಗೆ। ಮೊದಲಾರಭ್ಯ ಕಡಿಗೆಭೇದವಿಲ್ಲಾ। ವಿಧಿ ಇಂತು ಇರಲಿಕ್ಕೆ ಏನುಕಾರಣವೆನ್ನೆ। ಮದಮತ್ಸರ ರಹಿತಾ ಜ್ಞಾನಿಗಳೂ। ಹೃದಯದಲಿ ತಿಳಿದು ಪೇಳೀಪರಿಕಥೆ। ವಿದಿತವಾಗಿದೆ ನೋಡು ಆಗಮದಲ್ಲಿ। ಚದುರಾ ಮೂರುತಿ ನಮ್ಮ ವಿಜಯ ವಿಠ್ಠಲ ನಿನ್ನ। ಪದಕೆ ಬೀಳುವೆನಯ್ಯಾ ಪದವಿಗೆ ಪಥಬೇಕೂ ॥೩॥

ಅಟ್ಟತಾಳ

ಅನಂತಕಾಲಕಲ್ಪ ಲಿಂಗಾದಿ ಪಿಡಿದು। ಅನಂತರೂಪಗಳು ಒಂದೊಂದು ಬಿಡದಲೆ। ಆನಂದದಿಂದಲಿ ನೋಡಿ ಕುಣಿದಾಡಿ। ಏನೇನುಬಗೆಯಿಂದ ಪೂಜಿಸಿ ಪರಿಪರಿ। ಧ್ಯಾನಮಾಡಿದರಾಗೆ ಮಾನವಗೆ ಇದು ಬಿಂಬವಲ್ಲ ವೆಂದೂ। ಜ್ಞಾನವಂತರು ಪೇಳಿ ಸಾಧನಮಾಳ್ಪರು। ಆನೊಬ್ಬನೆ ಪೊಸಬಗೆ ಮಾಡಿದೆನೆ। ಶ್ರೀನಾಥ ಕೇಳಿಲೊ ಜಗದೊಳು ಪ್ರಸಿದ್ಧ। ಭಾನು ಇಪ್ಪದು ಸತ್ಯಾ ಈತನ ಪ್ರಕಾಶ। ನಾನಾ ಲೋಕದಲಿ ತುಂಬಿದೆ ಸಮಸ್ತ। ಪ್ರಾಣಿ ಗಳಿಗೆ ಬಲು ಹಿತವಾಗಿ ನಿತ್ಯಾನು। ಷ್ಟಾನಕ್ಕೆ ಸಾಕ್ಷಿಭೂತಾವಾಗಿ ಇರುತಿದೆ ಈ ನುಡಿ ನಿಜವೆಂಬೆ ಸಕಲರು ಬಲ್ಲದು। ಆ ನಳಿನಮಿತ್ರನಿದ್ದರೂ ನೇತ್ರಾಭಿ। ಮಾನಿಯಾದ ಚಕ್ಷುರ್ನಾಮಕಸೂರ್ಯನು। ತಾನಿಲ್ಲದಿರೆ ಸರ್ವ ಲೋಕದ ಪದಾರ್ಥ। ಕಾಣಿಸಿಕೊಡುವನೆ ಪ್ರಸಿದ್ಧ ಭಾಸ್ಕರ। ಸ್ಥಾನಭೇದದಿಂದ ವ್ಯಾಪಾರಂಗಳುಭೇದ। ನೀನೆಮಾಡಿ ಇಪ್ಪೆ ತತ್ತತ್ಕಾಲಕ್ಕೆ ದೇವಾ। ನಾನಿದೆ ಕಲ್ಪಿಸಿ ಪೇಳಿದವನಲ್ಲಾ। ಮೌನವಾಗಿರಸಲ್ಲಾ ಮಾತಾಡು ಸಿರಿನಲ್ಲಾ। ಈ ನಿರಂತರ ನಿನ್ನ ಬಾಹಿರ ರೂಪಂಗ। ಳಾನು ಕೊಂಡಾಡಿ ನೋಡಿದದಕೆ ಮು। ತ್ತೇನು ಫಲವಿಲ್ಲಾ ಇವರ ರಹಿತವಾಗಿ। ಕ್ಷೋಣಿಯೊಳಗೆ ಎಂಭತ್ತು ನಾಲ್ಕುಲಕ್ಷ। ಯೋನಿಯಲ್ಲಿ ಬಂದು ಸಾಧನಂಗಳಗೈದು। ಅನಂತಾನಂತ ನಿನ್ನ ಮೂರುತಿನೋಡಿ। ಏಣಿಸಿ ಗುಣಿಸಿ ನಿದಾನಕ್ಕೆ ಒಂದಕ್ಕು। ಶ್ರೀನಾರಿಯುರಸನೆ ಚಿತ್ತುವಿನೊಳಗಿದ್ದ। ಪೂರ್ಣ ಗುಣಾರ್ಣವ ನಿನ್ನ ಚಿದ್ರೂಪವ। ಕಾಣದಲೆ ಆವ ಜೀವಿಗಾದರೂ। ಆನಂದಾವಿರ್ಭಾವ ಇಲ್ಲಪ್ಪ। ನೀನು ಈ ಪರಿ ಸಂಕಲ್ಪವೇಮಾಡಿದ್ದು। ಮೇಣು ಹುಡುಗನಂತೆ ಅಂಜೀಪ ದೇನಯ್ಯಾ। ಆನಂದಾ ಸರ್ವಾಂಗಾ ವಿಜಯವಿಠ್ಠಲರೇಯಾ। ನೀನು ಮಾಡಿದ ಕ್ಲಪ್ತಿ ನಿನಗೆ ತಿಳಿಯದೇನೂ ॥೪॥

ಆದಿತಾಳ

ಸಜ್ಜನಾಂಬುಧಿ ಚಂದ್ರಾ ಸಕಲ ಸದ್ಗುಣಸಾಂದ್ರಾ। ನಿರ್ಜನ ಪರಿ ಪಾಲಕ ಯಾದವಕುಲತಿಲಕಾ। ದುರ್ಜನಕುಲ ಕಾಲ ದುರ್ಗ ಭೂ ಲಕ್ಷ್ಮೀಲೋಲಾ। ವರ್ಜಿತ ಲಯ ಮಾಯಾ ನವ ವಾರಿಧರಕಾಯಾ। ಅರ್ಜುನಸಾರಥಿ ಸತತ ಸತ್ಕೀರುತಿ। ಗುಂಜ್ಞಗೊಲಿದರಂಗಾ ದುರಿತ

ಮಾತಂಗಸಿಂಗಾ । ಮೂರ್ಜಗದೊಳಗೆನ್ನ ಸಾಕುವ ಸುಪ್ರಸನ್ನ । ವಜ್ರ ಪಂಜರ ಚರಣಾ ಜನಕೆ ನೀನೆ ಕರುಣಾ । ಮಜ್ಜನಾದಿಯು ಕರ್ಮ ಏನೇನು ಸ್ವಧರ್ಮ । ಎಜ್ಜಾವಾಗಿದ್ದರು ಎಣಿಸದಿರು ಎಣಿಸದಿರು । ಗೆಜ್ಜೆಕಟ್ಟಿಸಿ ನಿಲಿಸಿ ಕುಣಿಸಿದರಂದು ಪೊಲಿಸಿ । ಸಜ್ಜೀವಿಗಳು ನಿಂದು ಬಿಂಬಕಾಣಬೇಕು । ಹೆಜ್ಜೆ ಹೆಜ್ಜೆಗೆ ಪೊಳೆದು ಇಸಿತೆಂಬ ಮಾತುಕಳೆದು । ಬೆಜ್ಜರಿಸುವದೇನು ಭಕುತರ ಕಾಮಧೇನು । ರುಜುವೆಂಬೊ ಜ್ಞಾನಪುಟ್ಟದಮೇಲೆ ಅವನ । ತಜ್ಞಾತಿಗೆ ಸೌಖ್ಯ ಸಿದ್ಧವಾಗಿದೆ ಮುಖ್ಯ । ಆರ್ಜನೆ ಮಾಡುವೆನು ವಿಸ್ತರಿಸಿ ಕೇಳು ಇನ್ನು । ಆರ್ಜವಗತಿ ತೋರೊ ಗುಣ ಕಡೆಮಾಡು ಮೂರು । ವ್ಯಾಜವೆ ಎನ್ನ ಕೂಡ ಎಂದಿಗೆ ಮಾಡಬೇಡ । ರಾಜ್ಯದೊಳಗಪಾರ ನಿನಗಿದೆ ವ್ಯಾಪಾರ । ಪೂಜ್ಯನಾದಮೇಲೆ ಹಿಂದಾಗುವದು ಮೇಲೆ । ಅಬ್ಜ ಚಕ್ರಾಂಕಿತಾ ವಿಜಯವಿಠ್ಠಲ ಹೃದ । ಯಾಬ್ಜದಲ್ಲಿ ಪೊಳೆಯೊ ಸತತ ಸಂಯೋಗ ಬಿಂಬಾ ॥೫॥

ಜತೆ

ಎತ್ತಲಾದರು ಎನಗೆ ಇಷ್ಟ ಪುಣ್ಯದಿಂದ । ನಿತ್ಯ ಸತ್ಯಮೂರ್ತಿ ತೋರೊ ವಿಜಯವಿಠ್ಠಲಾ ॥೬॥

ಸುಳಾದಿ ೩೮

(ಐತಿಹಾಸಿಕ) ಬಿಂಬಾಪರೋಕ್ಷ ವಿ॥ ಪ್ರಾರ್ಥನಾ ಪಂಢರಪುರದಲ್ಲಿ ದಾಸರಿಗೆ ಪ್ರತ್ಯಕ್ಷವಾಗಿ ಪದಜರೂಪದಿಂದ ಹರಿ ತೋರಿದಾಗ್ಗೆ ಬಾಹಿರರೂಪ ಬಿಂಬನಲ್ಲ ಜೀವಸ್ವರೂಪಗನೆ ಬಿಂಬನೆಂದು ಅನೇಕ ವಿಧವಾಗಿ ಸ್ತೋತ್ರಗೈದ ಬಿಂಬಾಪರೋಕ್ಷ ಧ್ಯಾನೋಪಾಸನೆ

ರಾಗ ಭೈರವಿ ಧ್ರುವತಾಳ

ಅಂದು ನಿನ್ನ ದರುಶನಕ್ಕೆ ಆರ್ತ ಉಳ್ಳವನಾಗಿ । ಬಂದು ಒಂದೆಡೆಯಲ್ಲಿ ಏಕಾಂತದಿ । ನಂದಾವಾಗಿ ಕುಳಿತು ಧ್ಯಾನಮಾಡುತಲಿರೆ । ಮಂದರಧರ ನೀನೆ ಪದಜಾ ರೂಪಾ । ದಿಂದ ಮಾಸಿದ ವಸನ ತೊಟ್ಟ ಚಲ್ಲಣ ಬಿಗಿವಿ । ನಿಂದ ಮೆಟ್ಟಿದ ಕೆರಹು ಈಪರಿಯಲ್ಲಿ । ಮುಂದು ಬಂದು ನಿಂದು ಆಂದಾವತೋರಿ ನಗೆ । ಯಿಂದ ಮಾತುನಾಡಿದೆ ಚಿತ್ರದಕ್ಷೆ । ಕಣ್ದೆರದು ನಿನ್ನ ನೋಡಿದೆನಲ್ಲಾದೆ । ವಂದಿಸಲಿಲ್ಲಾ ಕುರುಹು ತಿಳಿಯಲಿಲ್ಲಾ ।

ಪೊಂದಿದ ಅಜ್ಞಾನದಿಂದಲಿ ಅಸೂಯಾ । ತಂದುಕೊಂಡೆ ನಲ್ಲಾದೆ ಪಾಂಡು ರಂಗಾ । ನಿಂದಿರ ಪೇಳಿ ತುತಿಸಿ ನೀನೆ ಅನಿಮಿತ್ತ । ಬಂಧುವೆ ನಿಜವೆಂದು ಪದಕೆ ಎರಗೀ । ಸುಂದರಾಂಗ ಸುಲಭ ಭಕುತವತ್ಸಲ ಪರಾ । ನೆಂದು ಕಾಯಯ್ಯಯೆಂದು ಹಸ್ತಾ ಮುಗಿದು । ಇಂದ್ರಿಯಂಗಳು ಎಲ್ಲಾ ಸರ್ವದಾ ನಿನ್ನ ಪೂಜೆ । ಯಿಂದ ಪೋಲ್ಯಾಡಲಿ ಎಲ್ಲಿ ಇದ್ದರೂ । ಎಂದೆಂದಿಗೆ ಇದನೆ ಬೇಡಿಕೊಂಡು ದುಃಖ । ದಿಂದ ಕಡೆ ಬೀಳಲಿಲ್ಲಾ ಅಕಟಕಟಾ । ಅಂದೆ ಅಪುನರಾವರ್ತಿ ಐದುವೆನೆನೊ ನಿನ್ನ । ಸಂದರುಶನವನ್ನು ಮಾಡಿಕೊಳುತಾ ಒಂದೊಂದಧಿಕವಾಗಿ ನಿನ್ನ ದಾಸರಸಂಗ । ದಿಂದ ಮೇಲು ಮೇಲಾಗಿ ಇಪ್ಪೆನಲ್ಲಾ । ಮಂದಮತಿಗ ನಾನು ಮಾನುಷ್ಯನ್ನ । ತಿಂದ ಕಾರಣದಿಂದ ಇನಿತಾಯಿತೋ । ತಂದೆ ಎನ್ನನು ಹೀಗೆ ಕರ್ಮದ ಮಾರ್ಗಕ್ಕೆ । ತಂದೆ ಯಲ್ಲದೆ ನಿನಗೆ ಲಾಭವೇನೊ । ಸಂದುವೆನಲ್ಲದೆ ಅಂದಿನ ದಿನದಿ ನಿನ್ನ । ಚಂದ ಚಂದಾದರೂಪ ವ್ಯಕ್ತವಾಗೇ । ಅಂದುಂಟು ಇಂದಿಲ್ಲಾ ಎನದಿರೀ । ಅಂದು ಪುರಂದರದಾಸರು ಪೇಳಿದಮಾತು । ತಂದುಕೊಳ್ಳಲಿಲ್ಲಾ ಅನು ಭವಕೆ ಈಗ ಹಾಹಾ । ಎಂದರೆ ಏನಾಹದೊ ಎನ್ನ ಭಾಗ್ಯ । ಇಂದು ಈಪರಿಯಲ್ಲಿ ಕ್ಲೇಶಶೋಕ ಪ್ರತಿ । ಬಂಧಕದೊಳು ಹೊರಳಿ ನಾನಾಪರಿ ದು । ಗಂಧದಲ್ಲಿ ಮುಳುಗಿ ಮುಂಗಾಣದಿಪ್ಪ ದುಃಖ । ವೃಂದಗಳಿರಲಿಕ್ಕೆ ಎಂತಾಹದೋ । ಮಂದಿಯ ಬಯಸಿದಂತೆ ಸಾಧ್ಯವಾದರೆ ಗೋ । ವಿಂದ ನಿನ್ನ ಮಾಯಕ್ಕೆ ದುಸ್ತರ ದುರವೆಂಬೊ । ಅಂದಮಾತಿಗೆ ವ್ಯಾಹತಿ ಬಾರ ದೇನೊ ನಿತ್ಯಾ । ನಂದ ವಿಗ್ರಹ ವಿಶ್ವಾ ನಾರಾಯಣಾ । ಇಂದಿರೆ ಬ್ರಹ್ಮ ವಾಯು ವೀಂದ್ರ ಫಣೀಂದ್ರ । ಕಂದು ಕಂಧರ ಇಂದ್ರ ಕಂದರ್ಪಾದಿ ಮಿಕ್ಕ । ವೃಂದಾರಕವೃಂದ ಯಾವಜ್ಜೀವರು ಮು । ಕುಂದಾ ನಿನ್ನ ಮಾಯಾ ವೆಂಬೊ ಮಹಾ । ಸಿಂಧುವಿನೊಳು ಮುಣುಗಿಸಿದಂಥವಾದಗುಣ । ದಿಂದಲಿ ಗುಣರೂಪಕ್ರೀಯಗಳೆಲ್ಲಾ । ಒಂದೊಂದು ಎಣಿಸಾದರೊಳಗಾನಂತಾ । ಒಂದಾನಂತ ಯುಕ್ತ ಅಣು ಅತ್ಯಣು । ಸಂದಿಸಿಕೊಂಡಿಪ್ಪವೊ ಅನವಸ್ಥಿ ಯಾಗಿ ಬಿಡದೆ । ಬಿಂದುಮಾತುರ ಪಾರಗಾಣರದಕೊ । ದ್ವಂದ್ವ ಸೈರಿಸ ದಿಪ್ಪ ಅಲ್ಪಬುದ್ಧಿಗ ನಿನ್ನ । ಬಂಧಕ ಶಕುತಿಗೆ ಪ್ರತಿಕೂಲನೇ । ಹಿಂದೆ ಏನಾದದ್ದು ಆಗಿಪೋಯಿತು ಮುಚ । ಕುಂದ ಪಾಲಕನೆನೆ ಎನ್ನ ಹೃದಯ।

ಮಂದಿರದೊಳು ಮುಖ್ಯಪ್ರಾಣಾನಧಿಷ್ಠಾನ। ದಿಂದಲಿ ಆಪರಿಯಲಿ ಪೊಳದು।
ಕುಂದದೆ ಭ್ರಾಂತಿಯನ್ನು ಗೊಳಿಸುವಾದೇನೊ ಅರ । ವಿಂದ ದಳಾಕ್ಷ
ಪುಂಡರೀಕವರದಾ । ಅಂದಿಗೆ ಗೆಜ್ಜೆ ಪೆಂಡೆ ಸರಪಳಿ ಪೀತಾಂಬರ । ಕುಂದಣ
ಹಾರ ಪದಕ ವೈಜಯಂತಿ । ವೃಂದಾವನ ಮಧ್ಯಯಿದ್ದ ಮಾಲೆ ವನಮಾಲಿ
ಗಂಧ ಕಸ್ತುರಿ ಪುಣಗು ಪರಿಮಳದ್ರವ್ಯ । ದಿಂದಲೊಪ್ಪುವ ಮತ್ತೆ ಕೌಸ್ತುಭ
ಮಣಿ ಸಿರಿ । ಯಿಂದ ವಕ್ಷಾಂಗದ ಕಂಕಣ ಮುದ್ರೆ । ಇಂದುವಿನಂತೆ ಕರ್ನ
ಕುಂಡಲ ನೊಸಲು ತಿಲಕ । ಮಂದಹಾಸದಿ ನೋಳ್ಪ ನೋಟಮಾಟಾ ।
ಸಂದೋಹ ಮಣಿಗಣಕಿರಣ ಕಿರೀಟ ಕಾಂತಿ । ಯಿಂದ ಈರೈದು ದಿಕ್ಕು
ಬೆಳ ಬೆಳಗುತಿಪ್ಪ । ಸಿಂಧುಶಯನ ಪೂರ್ಣ ಸದ್ಗುಣಸಾಂದ್ರ ಹರಿ । ಮಂದಾ
ಕಿನಿಯ ಪೆತ್ತ ಮಹಮಹಿಮಾ । ಒಂದೊಂದು ಇಂಥ ಯಿಂಥರೂಪಗಳಾ
ನಂತ ವಿರೆ । ನೆಂದು ತೋರಿದೆ ಎನಗೆ ಈ ರೂಪವಾ । ಸಂದೇಹಗೊಳಿಪದೇ
ಸಕಲಾರ್ಥಕೊಡುವನೇ । ಕಂದನಂತೆ ಎನ್ನ ಸಲಹ ಬೇಕೋ । ಛಿಂದಿ
ಛಿಂದಿಯಮಾಡು ಮನದಲ್ಲಿದ್ದ ಸಂಶಯ । ಗಂಧವಾದರು ನಿಂದಿರಗೊಡದೆ ।
ನಿಂದಿಸಿದವನಿಗೆ ನಿನ್ನ ಶರೀರದೊಳು । ಪೊಂದಲಿಟ್ಟುಕೊಂಡೆ ಸರ್ವರು
ನೋಡಾ । ಸಂದಿ ಗೊಂದಿಯಲ್ಲಿ ಆಡಿದರೇನುಂಟು । ಸಂಧಾನ ವ್ಯಾತಕ್ಕೆ
ಮುಕ್ತಾವಿರಲೂ । ನಿಂದಲ್ಲಿ ಕುಳಿತಲ್ಲಿ ಆವಲ್ಲ್ಯಾದರೂ ಸಂ । ಬಂಧಿಗನಾಗಿ
ವೊಡನೆ ಇಪ್ಪನೆ । ಇಂಧನದೊಳಗಗ್ನಿ ಇದ್ದಂತೆ ಎನ್ನೊಳಗೆ । ಸಂದಿಸಿ
ಕೊಂಡಿಪ್ಪ ಪರಮ ಪುರುಷಾ । ಹಂದಿ ನಾಯಿ ನರಿ ಜನುಮ ಬಂದರೆ ನಿನ
ಗೆಂದಿಗೆ ತಪ್ಪದು ಕಾವ ಬಿರಿದು । ಅಂದ ಮಾತಿಗೆ ನೀನೊಪ್ಪದಿರಲಾನಕ ।
ದುಂದುಭಿಗೆ ವೊದಲು ರೂಪತೋರಿ ಮ । ತ್ತೊಂದು ರೂಪವನ್ನು ತೋರ
ಲಿಲ್ಲವೇ ನಾ । ರಂದ ಗಾಯನಕೆ ಬೆಂಬಲ ದೇವಾ । ಬೆಂದ ಸಂಸಾರದೊಳು
ಸುಖವಿಲ್ಲ ಸುಖವಿಲ್ಲ । ನೊಂದು ಬದುಕಬೇಕು ಕ್ಷಣ ಭಂಗುರಾ । ರಂಧ್ರ
ವಲ್ಲದೆ ಪೂರ್ಣಸೌಖ್ಯ ಕಾಣೆನೊ ವ । ಸುಂಧರದಲ್ಲಿ ಜನಿಸಿ ಜಪಿಸಿದರೂ ।
ನಂದ ಗೋಪನಕಂದಾ ನಿನ್ನ ನಿಜರೂಪ । ಸಂದರುಶನದಲ್ಲಿ ಕರ್ಮ
ಕ್ಷಯವೊ । ಶ್ಯಂದಣ ಅಂದಣ ಸಿಂಧುರ ಮಂದರ । ಸುಂದರ ಮಂದಿರ
ಚಂದನಾದಿ । ಇಂದಿವರಾಕ್ಷ ನಂದಿವಾಹನ ನಿನ್ನ ನಲು । ವಿಂದೆ ನೋಡ
ದಲೆ ಪ್ರಾರಬ್ಧ ಭೋಗ । ಕಂದುಕ ಆಡಿದಂತೆ ಉಂಡು ತೃಪ್ತನಾಗೆ । ಖಂಡ

ವಿಲ್ಲದ ಪದವಿ ಬಪ್ಪದಯ್ಯಾ। ಸಂಧ್ಯಾಕಾಲ ವಾಹದಕೆ ಹೊತ್ತು ಸ್ವಲ್ಪವೆ ಉಂಟು। ದಂಘಾನ ಮಾಡದಿರು ದಯವಂತನೇ। ಇಂದ್ರಿಯ ಗೋಚರ ವಿಜಯ ವಿಠ್ಠಲರೇಯ। ಅಂಥ ಕೋಪದಿಂದ ಕಡಿಗೆತ್ತು ಕರುಣದಲ್ಲಿ ॥೧॥

ಮಟ್ಟತಾಳ

ನಮೊ ನಮೊ ಲಕುಮೀಶ ನಮೊ ನಮೊ ಧರಣೀಶ। ನಮೊ ನಮೊ ದುರ್ಗೇಶ ನಮೊ ನಮೊ ಯಜ್ಞೇಶ। ನಮೊ ನಮೊ ಲೋಕೇಶ ನಮೊ ನಮೊ ವಿತ್ತೇಶ। ನಮೊ ನಮೊ ಹೃಷಿಕೇಶ ನಮೊ ನಮೊ ಭೂತೇಶ। ನಮೊ ನಮೊ ಗುಣೇಶ ನಮೊ ನಮೊ ಮಂತ್ರೇಶ। ನಮೊ ನಮೊ ಯೋಗೇಶ ನಮೊ ನಮೊ ಕಾಲೇಶ। ನಮೊ ನಮೊ ವರುಣೇಶ ನಮೊ ನಮೊ ಗಗನೇಶ। ನಮೊ ನಮೊ ಪ್ರಕೃತೇಶ ನಮೊ ನಮೊ ಜೀವೇಶ। ನಮೊ ನಮೊ ಕರ್ಮೇಶ ನಮೊ ನಮೊ ಸರ್ವೇಶ। ನಮೊ ನಮೊ ಭಕುತೇಶ। ನಮೊ ನಮೊ ವೀರಕುತೀಶ। ನಮೊ ನಮೊ ಜ್ಞಾನೇಶ ನಮೊ ನಮೊ ಪ್ರಾಣೇಶ। ನಮೊ ನಮೊ ನಮೊ ಎಂದು ನಮಿಸಿ ಬೇಡಿದೆ ವರವ। ನಮಿಪರ ಸುರಧೇನು ದ್ರುಮವೆ ಚಿಂತಾಮಣಿಯೆ। ನಮೊ ನಮೊ ನಿನಗೆ ನಿನ್ನೈಶ್ವರ್ಯಕ್ಕೆ। ನಮೊ ನಮೊ ನಿನಗೆ ನಿನ್ನಯ ಬಲಕ್ಕೆ। ನಮೊ ನಮೊ ನಿನಗೆ ನಿನ್ನಯ ಕೀರ್ತಿಗೆ। ನಮೊ ನಮೊ ನಿನಗೆ ನಿನ್ನಯ ವೀರ್ಯಕ್ಕೆ। ನಮೊ ನಮೊ ನಿನಗೆ ನಿನ್ನಯ ಜ್ಞಾನಕ್ಕೆ। ನಮೊ ನಮೊ ನಿನಗೆ ನಿನ್ನಯ ವಿಜ್ಞಾನಕ್ಕೆ। ನಮೊ ನಮೊ ಭಗವಂತಾ ನಮೊ ನಮೊ ಎಂದವರಿಗೆ। ಶಮದಮಗಳನಿತ್ತು ಶ್ರಮಗಳ ಪರಿಹರಿಸಿ। ಅಮಿತಸೌಖ್ಯವ ಕೊಡುವ। ನಮೊ ನಮೊ ಪಾಂಡುರಂಗ ನಮೊ ನಮೊ ಪಂಢರಿರಾಯಾ। ನಮೊ ಭೀಮಾತೀರ ವಿಮಲ ಸದನ ವಾಸಾ। ನಮೊ ನಮೊ ಗೋವಳರಾಯಾ। ನಮೊ ನಮೊ ನಮೊ ನಮೊ ಅನುಪಮಿತ। ನಮೊ ನಮೊ ಪವಿತ್ರ ನಮೊ ನಮೊ ವಿಚಿತ್ರ। ನಮೊ ನಮೊ ಶುಭಗಾತ್ರರಮೆಯ ಸಂಗಡನಿತ್ಯ। ರಮಿಸುವ ನಿರ್ದೋಷಾ ಕಮಲದಳ ನೇತ್ರಾ। ತಮ ನಿಯಾಮಕನೆ ಮಮತೆಯಿಂದಲಿ ಮೋಹ, ಭ್ರಮಣದೊಳಗೆ ಇದ್ದ ಕುಮತಿಯ ಹರಿಸು। ಕುಮುದ ಬಾಂಧವ ವರ್ಣಾ। ನಮೊ ನಮೊ ವಿಠ್ಠಲ ನಮೊ ನಮೊ ವಿಜಯ। ನಮೊ ನಮೊ ಕೃಷ್ಣ ನಮೊ ನಮೊ ವೆಂಕಟ। ನಮೊ ನಮೊ ಎಂದು ನಮಿಸಿದೆ ನಿನ್ನಂಘ್ರಿ

ಕಮಲಕೆ ಶಿರವಾಗಿ । ತಮಹರ ಗೋಪಾಲ ವಿಜಯ ವಿಠ್ಠಲ ನಿನಗೆ । ಸಮವಿಲ್ಲ ಎಲ್ಲಿ ಕಮಲ ಗರ್ಭನು ಬಲ್ಲಾ ॥೨॥

ತ್ರಿವಿಡಿತಾಳ

ಇದೆರೂಪದಿಂದಲ್ಲಿ ಮುಕುತಿಯಾಗದು ಜೀಯಾ । ಪದುಮನಾಭನೆ ಕೇಳೊ ನಿತ್ಯ ಎನ್ನ । ಹೃದಯದೊಳಗೆ ಬಂದು ಪೊಳೆವ ರೂಪವ ತೋರು । ಪದ ವಿಗೆ ಇದೆ ಅಲ್ಲದಿನ್ನೊಂದುಂಟೇ । ಬದಿಯಲ್ಲಿ ನಿಂತು ಮಾತಾಡಿದ ಕಾಲಕ್ಕೂ । ನಿದರುಶನ ನಿನ್ನ ಮೂರ್ತಿ ಬೇರೆ । ಆದರಿಂದ ಮೋಕ್ಷಕ್ಕೆ ತೀವ್ರಗತಿಯುಂಟು ಇದೆ ಇದೆ ಯಾದರೆ ಪಾಪನಾಶಾ । ಸುಧಿಯಿಂದ ನಿಶ್ಚಯವಾದರೆ ಪಂಚ । ಭೇದದ ಸಮಾಧಿಗೆ ಸಿದ್ಧಯೋಗ್ಯತದಂತೆ । ಯದು ಕುಲೋತ್ತುಮ ನಿನ್ನ ರೂಪಗಳು ಅನಂತಾ । ವಿಧವಾಗಿ ಉಂಟಯ್ಯಾ ಲಾಲಿಸಯ್ಯಾ । ಪದುಮ ಮೊದಲಾದ ಚೇತನ ಜಡ ನಿತ್ಯಾನಿತ್ಯಾ । ಅಧಿ ಷ್ಠಾನ ಅವತಾರ ಆವೇಶ ಅಂಶವು । ಮುದದಿಂದ ಅಂಶಿ ಈ ಪರಿಯಲ್ಲಿ ನಮಗೆ ಸಂ । ಪದವಿಗೆ ಧ್ಯಾನಕ್ಕೆ ನಿರುತಸಿದ್ಧಾ । ಇದರೊಳಗೆನಗಾವದು ನಿಧಾನ ಕಾಣೆ । ಕದಮಲ ವಿಗ್ರಹನೆ ಸಾರ್ವಭೌಮಾ । ಪದೊಪದೆಗೆ ನಿನ್ನ ಪಂಚವಿಧ ಮೂರ್ತಿಗಳು । ನಿದರುಶನ ನಿಜವಕ್ಕು ಮುಕುತರಿಗೇ । ಅಧಿ ಕಾರ ಭೇಧದಿಂದಲಿ ಕಲ್ಪಕಲ್ಪಕ್ಕೆ । ತುದಿ ಮೊದಲು ಮಧ್ಯಸರ್ವಾಂಗದಲ್ಲೀ। ಇದೆ ಇದೆ ಸಿದ್ಧವು ಎನಗೆ ನಿಶ್ಚಯವಾವದು । ಮೊದಲು ಕಂಡದ್ದು ಈಗ ನೋಡುವದೊ । ಎದುರಿಲಿ ನಿಂದು ಕುಣಿದಾಡಿ ಬಾಹಿರದಲ್ಲಿ ಬದಿಯಲ್ಲಿ ಓಡ್ಯಾಡುತಲಿ ಇರಲೂ । ಮದನಾರಿಗಾದರೂ ಅಪರೋಕ್ಷವಲ್ಲೆಂದು । ಒದಗಿ ಶಾಸ್ತ್ರಗಳಲ್ಲಿ ಸಾರುತಿದಕೊ । ಪದುಮನಾಭನೆ ಕೇಳು ಎಂಥವರಿಗೆ ತನ್ನ । ಹೃದಯದಲ್ಲಿ ಮೂರ್ತಿಯ ಕಾಣದನಕ । ಹದುಳೆ ಸೇರರು ಕಾಣೊ ಸ್ಪಷ್ಟ ತ್ವದಲಿ ಭೇದ । ತದನಂತರದಲಿ ಪ್ರಾಚುರ್ಯನಿತ್ಯಾ । ಬುಧರು ಇಂತೆಂದು ಪೇಳುವರು ಗ್ರಂಥದಲ್ಲಿ । ಪದ ಶ್ಲೋಕಂಗಳು ಶೋಧಿಸಿ ಶೋಧಿಸೀ । ಮಧು ವೈರಿ ವಿಜಯ ವಿಠ್ಠಲರೇಯ ಎನಗಿಂದು । ಹದನಾವದು ತಿಳಿಸೊ ಲಿಂಗ ಭಂಗಕ್ಕೆವೇಗಾ ॥೩॥

ಅಟ್ಟತಾಳ

ಅನುಕ್ತವೆಂದು ಪೇಳುವದಿಲ್ಲ ಎಲೊ ಜೀಯಾ। ನಿನಗೆ ನಿನಗೆ ಭೇದ ವಿಲ್ಲವೆಂಬೊದೆ ಸಿದ್ಧ। ಮನಸು ಮುಟ್ಟಿದೆ ಇದಕೆ ಕಿಂಚಿತು ಮಾತುರ। ಅನುಮಾನ ಮಾಳ್ಪದಿಲ್ಲವಾವ ಬಗೆ ನೋಡೀ। ತನು ವಾಕ್ಮನ ಜಾಗರ ಸ್ವಪ್ನಾವಸ್ತಿ। ಗುಣದಲ್ಲಿ ಕರ್ಮಮಾಡಿದವಕ್ಕೆ ಇ। ಷ್ಟಾನಿಷ್ಟಾ ಪೂರ್ವೋ ತ್ತರ ಜ್ಞಾನದಿಂದಲಿ ಮತ್ತೆ। ಮಿನಗುವ ಶೇಷಪ್ರಾರಬ್ಧ ಪರಿಯಂತ। ಅನು ವಾಗಿ ಒಂದೊಂದು ನಿನ್ನ ಮೂರ್ತಿ ಚನ್ನಾಗಿ ದಣಿ ದಣಿ ನೋಡಲು ಒಂದ ರಲಿ ಒಂದು। ಅನುಭವವಾಗಿ ಕರ್ಮಕ್ಷಯ ಉತ್ಕ್ರಾಂತಿ ಗಣನೆ ಇಲ್ಲದೆ ಮಾರ್ಗಮೇಲೆ ಭೋಗನಂದಾ। ಸನುಮತವಾಗಿದೆ ಎಲ್ಲರಿಗೆ ಉಂಟು। ಎನ ಗಾವದು ಪೇಳು ತೋರುವ ರೂಪ ಜೀ। ತನದೊಳಗಿದ್ದದೊ ಲಿಂಗದೇಹ ಸ್ಥೂಲ। ತನುವು ಹೃದಯ ವಿಗಲಾದ ಸ್ಥಾನದಲ್ಲಿ। ಚಿನುಮಯ ಈ ರೂಪ ದಲಿ ಎಲ್ಲಿ ಇದ್ದೀ। ವನಜಸಂಭವ ದೇವಮುನಿ ಮಿಕ್ಕಾದ ನೃಪ। ಮನು ಜೋತ್ತಮ ತೃಣವಿಡಿದು ಪೊಂದಿಪ್ಪನೆ। ಅನಿಮಿತ್ತ ಬಾಂಧವ ಸದ್ಗುಣ ನಿಖಿಳ ಜೀವನ ಭಿನ್ನ। ಆನಂದಮುನಿ ಮನ ಮಂದಿರಾ। ಮನಸಿಜಕೋಟಿ ಲಾವಣ್ಯ ಲಕ್ಷ್ಮೀಶ್ವರಾ। ಕ್ಷಣ ಮಾತುರ ಆಲಶ್ಯ ಮಾಡದೆ ಪೇಳು। ವಿನ ಯದಿಂದಲಿ ಅಂದು ಒಮ್ಮೆ ತೋರಿದಿಯಿಂ। ದಿನದಲ್ಲಿ ಒಮ್ಮೆ ಪೊಳೆದೆ ಪರಂಜ್ಯೋತಿ। ಪ್ರಣವ ಪ್ರತಿಪಾದ್ಯ ಮೋಕ್ಷಪ್ರದಾಯಕ। ಘನ ಘನ ಮಹಘನ ವಿಜಯ ವಿಠ್ಠಲರೇಯ। ಜನುಮ ಸಫಲವಾಯಿತು ಸಾಧನ ಸಿದ್ಧಿಸಿತೂ ॥೪॥

ಆದಿತಾಳ

ಎಂತಾದರೇನು ಎನಗೆ ಪಾಪನಾಶನ ಮಾಡಿ। ಮುಂತೆ ಬರುವ ಜನನ ಕಳೆದು ಕಾರುಣ್ಯದಲ್ಲಿ। ಸಂತೋಷವನೆ ಕೊಟ್ಟು ಇರುಳು ಹಗಲು ನಿನ್ನ। ಚಿಂತೆ ಮಾಡುವ ಹಾಗೆ ಪ್ರೇರಣೆಯಾಗಬೇಕೊ। ಸಂತರಿಸು ನಿತ್ಯ ಸಂತರ ಸಂಗದಲ್ಲಿ। ಮಂತ್ರ ತಂತ್ರಗಳಿಲ್ಲ ಬಲು ಮಂದಮತಿ ನಾನು। ನಿಂತು ಕರಗಳ ಮುಗುವೆ ವರವ ಪಾಲಿಸೊ। ಅನಂತ ರೂಪಾತ್ಮಕ ಲೀಲಾ ಮನುಜವಿಗ್ರಹ। ಸಂತೆ ನೆರದದೊಳು ಓರ್ವನಿಪ್ಪಂತೆ ನಾ। ನೆಂತು ಕಡೆ ಬೀಳೂವೆ ವಿಷಯಾಂಬುಧಿ ದಾಟಿ। ಅಂತಿಜ ಜನುಮವೆಕೊಡು। ಅಂತ್ಯ

ದೇಹವೆಕೊಡು । ಪಂಥ ಮಾತ್ರ ಪೋಗಾಡಿ ನಿನ್ನ ಕಥಾಮೃತ । ಮಂಥನಿಸಿ ಪೂರ್ಣ ಭಕುತಿಯಿಂದ ಸವಿದು । ಗ್ರಂಥಿಸಿಕ್ಕ ತೊಡಕು ಬಿಚ್ಚುವಂತೆಮಾಡು ಇಂಥರೂಪದಿಂದ ಎನಗಾಗುವ ಸಿದ್ಧಿ । ಪಂಥವತೋರಿಸಯ್ಯಾ ತೊಲಗಿ ಪೋಗದಿರು । ಭ್ರಾಂತಿಗೊಳಿಸದಿರು ಪಾದಕ್ಕೆ ಎಚ್ಚರಿಕೆ । ಪ್ರಾಂತ್ಯ ಭಾಗಕ್ಕೆ ತಾರಕಾಣ್ಯವಾಗಲಿಬೇಕೊ । ಪಿಂತೆ ಒಲಿದು ಪರಮಾನುಗ್ರಹ ಮಾಡಿದದಕೆ । ಕಂತುಜನಕ ನನಗೆ ಇದೆ ಶಾಶ್ವಿತವೆಂಬೆ । ತಿಂಥಿಣಿಸುರ ವಂದ್ಯಾ ವಿಜಯವಿಠ್ಠಲ ಎನ್ನ । ಅಂತರಂಗದೊಳಗೆ ಇಪ್ಪ ಪಾಂಡುರಂಗಾ ॥

ಜತೆ

ಈ ಲೋಹಕ್ಷೇತ್ರನಿವಾಸಾ ಗೋಪಳೇಶ । ಪಾಹಿ ಪಂಥರಿರಾಯಾ ವಿಜಯವಿಠ್ಠಲಪ್ರೀಯಾ ॥೬॥

॥ ಶ್ರೀ ಗುರು ಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು ॥

ಧ್ಯಾನೋಪಾಸನಕ್ಕೆ ಅನುಕೂಲವಾದ ಕೆಲವು ಸುಳಾದಿಗಳು

ಸುಳಾದಿ ೩೯

ಪ್ರಮೇಯ, “ ಗುರುಮಹಿಮಾ ” ಗುರುಗಳ ವಿಚಾರ, ಧ್ಯಾನೋಪಾಸನಕ್ಕೆ ಮುಖ್ಯ ಗುರೂಪದೇಶಬೇಕು

ರಾಗ ಮುಖಾರಿ ಧ್ರುವತಾಳ

ಗುರುಮಂತ್ರವನ್ನೆಮಾಡು ಗುಣವಂತನಾಗಿ ಮನುಜಾ । ಗುರುತು ನಿನಗೆ ಪೇಳುವೆನು ಗುಪ್ತವಿಟ್ಟು । ಗುರು ಲಘು ಪಾಪಂಗಳು ದಹಿಸಿ ಪೋಗೋವು ನಿತ್ಯ । ಗುರುವೇ ಮುಖ್ಯನು ಕಾಣೊ ಸದ್ಗತಿಗೆ । ಗುರು ಭಕತಿ ಬೇಕೊ ವೈದಿಕ ಲೌಕಿಕಕ್ಕೆ । ಗುರು ಉಪದೇಶವಿಲ್ಲದೆ ವಿದ್ಯಾವಿಲ್ಲಾ । ಗುರುವೆ ಜಗದ್ಗುರು ತಾನಾದಕಾಲಕ್ಕೆ । ಭರತವರ್ಷದಲ್ಲಿ ಜನ್ಮಧರಿಸಿದಾಗ । ನರ ಯಃಕಶ್ಚಿತನಾಗೆ ಅವನಿಂದ ಉಪದೇಶ । ಗುರುಭಾವದಿಂದ ಕೊಂಡು ನಮಿಸಬೇಕು । ಅರೆ ಮರೆ ಮಾಡಸಲ್ಲಾ ಸ್ವರೂಪೋತ್ತಮನಲ್ಲಾ । ಹರಿ ಆಜ್ಞೆ ಅಂಥಾದ್ದೇ ಮೀರಲುಂಟೆ । ಗುರುಮುಖದಿಂದ ವಿದ್ಯಾಪ್ರಾಪ್ತ ವಾಗುವದೆಂದು । ಪರ ಶ್ರುತಿ ತತಿಯಲ್ಲಿ ಪೇಳುತಿದಕೊ । ಸುರನರೋರುಗ

ಲೋಕದಲ್ಲಿದ್ದ ಕಾಲಕಖ್ಯ । ಗುರುವೆ ಕಾರಣಕರ್ತರ್ಜ ಶಿಕ್ಷಿಪುದಕೆ। ಹರಿ ಬ್ರಹ್ಮನೆ ಮರುತಗೆ ಮರುತ ಗರುಡಾಹಿ ಶಿವಗೆ। ಹರಿ ಇಂದ್ರ ಪ್ರದ್ಯುಮ್ನಗೆ ಸುರಪ ಚಂದ್ರಾರ್ಕರ ಯಮಗೆ। ತರಣಿ ವರುಣಮುನಿಗೆ ತರಣಿ ಭೃಗುವಾದಿಗೆ ಹೀಗೆ। ಗುರುವೆನಿಸಿಕೊಂಬೋರು ನಿಜಸ್ವರೂಪಾ। ತರತಮ್ಯ ಇದೆ ವ್ಯತ್ಯಾಸ ಯಿಲ್ಲಾ ಸತ್ಯ। ಧರೆಯೊಳು ಸಂಸಾರ ಪ್ರವೇಶಿಸೆ। ತರತಮ್ಯ ಪ್ರಯೋಜನವಲ್ಲಾ ವಿದ್ಯಮಾತ್ರ। ಇರಬೇಕು ಉಪದೇಶಕೊಳಬೇಕಲ್ಲಿ। ಹರಿವಾಯುಗಳಿಗೆಲ್ಲ ವಿದ್ಯಾಭ್ಯಾಸವೇಕೆ। ಸರಲೀಲೆ ತೋರುವರು ಲೋಕ ಚರ್ಯಾ। ಉರಗ ಭೂಷಣ ಮಿಕ್ಕ ಜ್ಞಾನಾಂಶಕೇ। ಅರಿತು ಅರಿಯರು ಕಾಣೊ ಅವತಾರದಲ್ಲಿ ವಿದ್ಯಾ। ಗುರುಪ್ರಸಾದವೆಬೇಕು ಮನುಜಾಂಗದೀ। ತರತಮ ಇಲ್ಲ ಇಲ್ಲ ನೀಚ ಉತ್ತಮ ಉತ್ತ। ಮರು ಪೇಳುವರು ನೀಚಗೆ ಉಪದೇಶ। ಉರು ಕಾಲ ಇನಿತು ಇಪ್ಪ ಆಮೇಲೆ ಪಶ್ಚಕಾಲ। ಬರಲಾಗಿ ತನಗಿಂದ ಒಂದೆರಡು ಗುಣದ। ಗುರುವು ಮೊದಲುಮಾಡಿ ಅಧಿಕಾಧಿಕವಾಗಿ। ಗುರು ದೊರಕುವನಯ್ಯಾ ಉಪದೇಶಕ್ಕೆ। ಸರಿಯೆನ್ನಿ ಇಲ್ಲಿಗೆ ಸಂಚಿತ ಆಗಾಮಿನಾಶ । ಪರಿಪರಿ ಪ್ರಾರಬ್ಧಭುಂಜಿಸುವ ಸಮಯ। ಬರಲಾಗಿ ನಿಜಗುರು ಪ್ರಾಪ್ತನಾಹಾ। ಕರುಣಾದಿಂದಲಿ ಇವನ ಯೋಗ್ಯತೆ ತಿಳಿದು ಸು। ಸ್ಥಿರವಾದ ಮಾರ್ಗಭಜನೆ ತೋರಿಕೊಡುವಾ। ತರತಮ್ಯ ಇದ್ದರು ನಿಜಗುರು ಸಚ್ಛಿಷ್ಯ। ಪರಲೋಕದಲಿವುಂಟು ದೋಷವಲ್ಲಾ। ಎರಡೊಂದು ಯುಗದಲ್ಲಿ ಮಾತ್ರ ಸ್ವಲ್ಪ। ಕೊಂತೆಯಿಲ್ಲದೆ ಕಲಿಯುಗದಂತೆ ಯಲ್ಲ ಇದೆ। ಪರ ಮೂಢಭಾವ ನರಜೀವಿಗೆ। ಧರಣಿಸುರನು ಮೂರು ಜಾತಿಗೆ ಗುರು ಕಾಣೊ। ವರಣೋಚಿತ ಕರ್ಮ ಪೇಳಬೇಕು। ಗುರು ಉಪದೇಶವಿಲ್ಲದ ಮಂತ್ರ ವೃಥಾ। ಕ್ಷರ ಕಾಣೊ ಫಲವಿಲ್ಲ ಸಿದ್ಧಿಸದು। ವರ ಅವರರಿಗೆ ಗುರುಬೇಕು ಗುರುಬೇಕು। ಸರಿ ಮಿಗಿಲು ಗುರುದೊರಕಿದರು। ತೆರಳಿ ಪೋಗಲಿಬಹುದು ಕೇಳಿ ಕೇಳದಲೇಸು। ದರ್ಶನ ಗ್ರಂಥ ವಿದ್ಯಾಭ್ಯಾಸಕ್ಕೆ। ಗುರುಕುಲವಾಸವಾಗಿ ಶುಶ್ರೂಷ ಚನ್ನಾಗಿ; ಪರಮ ಭಕುತಿಯಿಂದ ಮಾಡಬೇಕು। ತಾರತಮ್ಯ ಜ್ಞಾನತತ್ವ ಓದಲೇಕೆ ನಿಜ। ಗುರು ಕರುಣದಿಂದಲಿ ಸಾಧ್ಯವಹುದು। ಸುರುವ ಧರ್ಮವೆತೊರೆದು ಗುರುಧರ್ಮ ನಡಿಸುತಿಪ್ಪ। ನರಗೆ ಆವಾವ ಭಯವಿಲ್ಲ ಕಾಣೊ। ಪರಮ ಪುರುಷ

ನಮ್ಮ ವಿಜಯ ವಿಠ್ಠಲರೇಯನ್ನ । ಚರಣಕಾಂಬುವದಕ್ಕೆ ಗುರುದ್ವಾರ ಸಂಪಾದಿಸು ॥೧॥

ಮಟ್ಟತಾಳ

ಭೂಸುರಭೂಭುಜಗೇ ಭೂಭುಜವೈಶ್ಯನಿಗೆ । ವೈಶ್ಯ ಚತುರ ಜಾತಿಗೆ ಶೂದ್ರ ತನ್ನವರಿಗೆ । ಲೇಶಬಿಡದೆ ಕರದು ಕರುಣದಿಂದಲಿ ಉಪ । ದೇಶ ಮಾಡಲು ಬಹುದು ಇದಕೆ ಸಂಶಯಸಲ್ಲಾ । ಲೇಸು ಲೇಸು ಅವಗೆ ವರಣೋಚಿತಜ್ಞಾನ । ನಾಶವಾಗದು ಕಾಣೊ ಶುಭಮನದಲಿ ಇಪ್ಪ । ದೇಶದೊಳಗೆ ಮಹಾ ಕೀರ್ತಿವಂತನಹಾ । ಭಾಸುರ ಮೂರುತಿ ವಿಜಯ ವಿಠ್ಠಲರೇಯಾ । ವಾಸವಾಗಿಪ್ಪನು ಅವರವರಬಳಿಯಾ ॥೨॥

ತ್ರಿಪುಡಿತಾಳ

ಧರೆಯೊಳು ಭೂಸುರ ಬ್ರಹ್ಮೋಪದೇಶಕ್ಕೆ । ವರ ಬ್ರಾಹ್ಮಣ ತನಗೆ ದೊರಕಾದಿರದಾ । ಸರಿಯಾಗಿದ್ದವನಲ್ಲಿ ವಿದ್ಯಾವಿದ್ಯಾದಿಂದ । ಸಿರುತ ಗ್ರಹಿಸ ಬೇಕು ವಿನಯದಿಂದ । ಹಿರಿಯ ಸಮಾನಿಕ ಇಲ್ಲದಿದ್ದರೆ ಅ । ವರನಿಗೇ ವಿದ್ಯಪೇಳುವಾಗ । ಇರಳು ಹಗಲು ಧಾರಣಶಕ್ತಿಯಿಂದ ನಿಂ । ದಿರದೆ ಚಿಂತಿಸಬೇಕು ಬ್ರಹ್ಮವಿದ್ಯ । ಮರಳೆ ಭೂಸೂರಜಾತಿ ಇಲ್ಲದಿದ್ದರೆ ದೇಶಾಂ । ತರದಲ್ಲಿ ತಾನೊಬ್ಬನಿದ್ದರಾಗೆ । ಕರದು ತನ್ನಲ್ಲಿಗೆ ಬಾಹುಜನ ವಿದ್ಯವ । ಪರೀಕ್ಷಿಸಿ ಮನದೊಳು ಗುಣಿಸಿ ಅವನ । ಗುರುವಿದ್ದ ಗ್ರಾಮಕ್ಕೆ ಪೋಗಿ ವಿದ್ಯಾರಂಭ । ಕರಣ ಶುದ್ಧಿಯಿಂದ ಮಾಡಲಿಬೇಕು । ಎರಡನೆ ಜಾತಿಯು ದೊರಿಯದಿದ್ದಡೆ ವೈಶ್ಯ । ವರ ಶೂದ್ರಜಾತಿಯಕೇಳುವ ವಿವರ । ಪರಿಪರಿ ವಿಧವುಂಟು ಸಾಧನವಲ್ಲ । ಪರಮ ರಹಸ್ಯಕ್ಕೆ ಸಲ್ಲದು ಕಾಣೊ । ಧರೆಯೊಳು ಭಿಕ್ಷುಕ ಜಡಜೀವರನೋಡಿ । ಗುರುವುಮಾಡಿಕೊಂಡ ಚತುರ್ವಿಂಶತಿ । ಸುರವಿದ್ಯಕ್ಕೆ ಮಾತ್ರ ಸ್ತೋತ್ರವುರಿಂದಲ್ಲದೆ । ಎರಡನೆಯುಪದೇಶ ಕೊಳ ಲಾಗದು । ಹರಿ ಇಚ್ಛೆಯಿಂದಲಿ ಸಂಸ್ಕಾರಬಲದಿಂದ । ಪರಿಪರಿ ಶ್ರುತಿಗೆ ಅವಿರೋಧವಾಗಿ । ಚರಿಯಾ ತೋರಿದರಾಗೆ ಮನಿಯೊಳು ಪಿತಾಭ್ರಾತಾ । ಹಿರಿಯಾರಾಜ್ಞದಿಂದ ತಿಳಿಯಬೇಕು । ತರುವಾಯ ತರುವಾಯ ತಕ್ಷ ವಿಚಾರಿಸಿ । ದುರಿತದಿಂದಲಿ ನರನು ಕಡೆ ಬೀಳುವಾ । ಸುರ ಪಾಲಕ ನಮ್ಮ ವಿಜಯವಿಠ್ಠಲರೇಯ । ತಾರತಮ್ಯ ಜ್ಞಾನವಕೊಟ್ಟು ಪಾಲಿಸುವಾ ॥೩॥

ಅಟ್ಟತಾಳ

ಶತಕೋಟಿಗಾದರು ಉತ್ತಮ ಗುರುಬೇಕು । ಸತತ ಗುರುಪತ್ನಿ ಗುರುಪುತ್ರ ಮಿಗಿಲಾದ । ಹಿತದವರ ಸೇವೆ ಪ್ರೀತಿಯಿಂದಲಿಮಾಡೆ । ಚ್ಯುತ ವಾಗದ ವಿದ್ಯಾ ಪರಿಪೂರ್ಣವಾಗೋದು । ಕ್ಷಿತಿಯೊಳು ಉತ್ತಂಕ ನೆಂಬು ವನಾ ನೋಡು । ಗತಲೋಚನನಾಗಿ ಅಲ್ಲಿಂದ ಗುರುವಿನಿಂದಲಿ ಮಹಾ । ಅತಿಶಯವಾದ ಭೇದವಿದ್ಯಕಲಿತನು । ಚತುರಾ ಮೂರುತಿ ನಮ್ಮ ವಿಜಯ ವಿಠ್ಠಲರೇಯ । ಪ್ರತಿ ಪ್ರತಿದಿನದಲ್ಲಿ ಜ್ಞಾನವಕೊಡುತಲಿಪ್ಪಾ ॥೪॥

ಆದಿತಾಳ

ಸುಲಕ್ಷಣ ಗುರುವಿನ ಸಂಪಾದಿಕೊಂಡು । ಕಾಲಕಾಲಕ್ಕೆ ಮಹಾ ಬುದ್ಧಿವಂತನಾಗು । ಹೇಳಿ ಕೇಳುವದೇನು ಅನ್ಯಮತವ ಪೊಂದಿ । ಕೀಳು ಗತಿಗೆ ಪೋಗಿ ಬೀಳದಿರೊಮನುಜಾ । ಮೂಲೋಕದೊಳಗೆ ತಿಳಿ ನಿರ್ಮಲ ಮರುತಮತ । ಆಲಿಸಿಕೇಳಿದರೆ ವೈಕುಂಠ ಮುಟ್ಟುತದೆ । ಏಳಲಾ ಮಾಡ ದಿರು ಎಲ್ಲ ಕಾಲದಿ ನಿನಗೆ । ಮೇಲು ಮೇಲು ವಿದ್ಯಪ್ರಾಪ್ತವಾಗುವದು । ಪಾಲಸಾಗರಶಾಯಿ ವಿಜಯವಿಠ್ಠಲ ತನ್ನ । ಊಳಿಗದವರೊಡನೆ ವಾಲಗ ಕೊಡುವನು ॥೫॥

ಜತೆ

ಗುರುದ್ವಾರವಿಲ್ಲದೆ ಸಾಧ್ಯ ಸಿದ್ಧನಾಗುವನೆ । ಗುರು ವಾಯು ವಿಜಯವಿಠ್ಠಲಗೆ ವಂದಿಸಬೇಕು ॥೬॥

ಸುಳಾದಿ ೪೦

ಗುರುಗಳವಿಚಾರ, ಗುರುಗಳ ಶುಶ್ರೂಷೆವಿಚಾರ

ರಾಗ ಭೈರವಿ ಧ್ರುವತಾಳ

ಗುರು ಭಕುತಿ ಪ್ರಧಾನ ಸಾಧನಾ । ಗುರು ಶುಶ್ರೂಷವೆ ಮಹಾಕರ್ಮ ನಾಶನಾ । ಗುರು ಉಪದೇಶವೆ ಜ್ಞಾನಮಾರ್ಗ । ಗುರು ಪ್ರಸಾದಲಿಂಗ ಭಂಗಕೆಕಾರಣ ಭಕುತಿ । ಗುರು ಪರಮಾನುಗ್ರಹ ಮಾಡಿದಡಂ । ನಿರುತ ಪಾರ ವಾರ ತತ್ವ ಪ್ರಮೇಯ । ಕರತಳದೊಳಗಿದ್ದ ತೆರದಿಂ । ಅರುಹು ವಾಗುವದು ಮಾನವಂಗೆ । ಸ್ವರೂಪ ಯೋಗ್ಯತಾದನಿತು ಗುರುಭಕುತಿ । ಗುರುಬಲವಂದೆ ಇದ್ದಡಂ । ಧರೆ ಎಲ್ಲ ಗೆಲ್ಲವಕ್ಕು ಆವಾಗಂ । ಗುರು ಕರುಣ

ಪಡದಡಂ ಧನ್ಯನೊ। ಗುರುಧ್ಯಾನವಮಾಳ್ಪದು ಜನರಂ। ಗುರು ಚರಣಾಬ್ಜ ಭೃಂಗನಾಗೊ। ಗುರುಗಳಿಗೆ ಸರಿಗಾಣೆನೊ। ಗುರು ವೊಲಿದಡೆ ಸರ್ವ ವಿದ್ಯಪ್ರಾಪ್ತಿ। ಗುರುಮಂತ್ರ ಗುರೋರ್ಜಪ। ಗುರುನಾಮಸ್ಮರಣೆ। ಹಿರಿದಾಗಿ ಕೈಕೊಂಡು ಸಂಖಿಸುವದು ಜನರು। ಗುರು ಭವಾಂಬುಧಿ ದಾಟಿದನು ಸಿರಿ ವಿಜಯವಿಠ್ಠಲರೇಯನು। ಗುರುವಿಲ್ಲದವನಿಗೆ ವೊಲಿಯನು ॥೧॥

ಮಟ್ಟತಾಳ

ದುರುಳ ಏಕಲವ್ಯನು ಏಕಾಂತದಲೊಂದು। ಗುರುಪ್ರತಿಮೆಯನ್ನು ನಿರ್ಮಾಣವಮಾಡಿ। ನಿರುತ ಭಕುತಿಯಿಂದ ಶಸ್ತ್ರಾಸ್ತ್ರವಿದ್ಯ। ಹರುಷೋನ್ನತದಿಂದ ಸಂಪಾದಿಸಿಕೊಂಡಾ। ಗುರು ಭಕುತಿಯಿಂದ ಮನುಜಗಾವಲ್ಲ್ಯಾಗೆ। ಸ್ಮರಿಸಿಬೇಡಿದ ವಿದ್ಯಪಾಲಿಸುವದೊ ಸತ್ಯ ಮರಳು। ದುರುಳನಾದರು ಕೇಳು ಮಾಡಿದ ವಿಶ್ವಾಸ। ಬರಿದೆಯಾಗದು ಕಾಣೊ ಮುಕ್ತಿವಂತರಿಗಿದೆ। ವರ ಮೂರುತಿ ನಮ್ಮ ವಿಜಯವಿಠ್ಠಲರೇಯಾ। ಗುರುದ್ವಾರದಿಂದ ಪೊಳೆವಾ ಪಾಪವಕಳೆವಾ ॥೨॥

ತ್ರಿವಿಡಿತಾಳ

ಗುರುಗಳು ವರ ಶಾಪಕೊಟ್ಟರಾದಡೆ ಅವನು। ಸುರ ನರೋರುಗ ಲೋಕ ತಿರುಗಿದರೆ ತೊಲಗುವದೆ। ಸರಸರನೆ ಒಂದೆ ಜನುಮದಲ್ಲಿ ತಿಳಿವದಲ್ಲಾ। ಎರಡೊಂದು ಜನುಮಾಂತರದಲ್ಲಿ ಅನುಭವಾ। ಗುರು ಕರುಣವ ಮಾಡಿದಂತೆ ನಾನಾಭೋಗಾ। ಶರೀರವೆ ತೆತ್ತು ಉಣಬೇಕಾ ದ್ವಿವಿಧಾ। ಗುರುಪ್ರಸಾದದಿಂದ ವರುತಮತವೆ ಪೊಂದಿ। ಚರಿಸುತಿಪ್ಪ ನರನನೋಡಿ ಜನರು। ಧರಿಸಲಾರದೆ ಮನುಜ ನುಡಿದರೇನಾಹದೊ। ಕರಣಶುದ್ಧವಿಲ್ಲದೆ ಕೆಟ್ಟ ಪೋಪಾ। ಗುರು ಕರುಣಬಂದು ಪಾವನವಮಾಡಿದಮೇಲೆ। ದುರಿತದ ಭಯ ದೂಷಣೆ ಭಯವಿಲ್ಲಾ। ಅರರೆ ಅದ(ವ)ರ ಅಂತಃಕರಣ ಆವಾವಾ। ಪರಿಯಲ್ಲಿಪ್ಪದೋ ದೂಷಿಸಬಾರದು। ವರ ಸತ್ಯವತಿಸೂನು ನಾನೂರು **ಕೋಟಿ ಮೇ| ಲೆರಡೊಂದು ಹತ್ತುಕೋಟಿ ಗ್ರಂಥಮಾಡಿರೆ**, ಹಿರಿಯರು ಪೇಳಿದ ಮಾತಿಗೆ ಮನತೆಗೆದು। ಸರಿಬಾರದೆಂದಾಡುವನೇ ಮೂರ್ಖಾ। ಉರಗ ಶಯನ ನಮ್ಮ ವಿಜಯವಿಠ್ಠಲರೇಯನ। ಪುರವೆ ಬೇಕಾದರೆ ಉತ್ತಮ ಗುರುಬೇಕು ॥೩॥

ಅಟ್ಟತಾಳ

ನದಿಯೊಳಗೊಂದು ಅಸ್ಥಿಯಹಾಕಿ ತನ್ನಯ। ಬದಿಯಲ್ಲಿದ್ದವರಿಗೆ ಮುಟ್ಟಬಾರದು ಬಂ। ತಿದಕೆ ದೋಷವೆಂದು ಪೇಳಿದರಾಮಾತು। ಬುಧರು ಮೆಚ್ಚುವರೇನೊ ಕೇಳಿದಾಕ್ಷನದಲ್ಲಿ। ಮುದದಿಂದಲಿ ತಮ್ಮ ಗುರುಗಳ ಪಾದ ಧ್ಯಾನ। ಹೃದಯದಲ್ಲಿಟ್ಟು ಪೇಳಿದ ಕಾವ್ಯಕೆಲೇಸಾ। ತುದಿ ಮೊದಲಾದರು ಸಂಶಯ ಬರುವದೆ। ಉದಧಿಯಂತೆ ತುಂಬಿದೆನೋಡು ಸತ್ಕೀರ್ತಿ। ಪದೋ ಪದಿಗೆ ಭಗವಂತನ ಸಂಗಡ। ವಿಧಿ ತಪ್ಪದಲೆ ಆಡಿದ ಮಹತ್ಮರು। ನಿದರುಶನ ಇಲ್ಲದಲೆ ಹೇಳರು ಕಾಣೊ। ಎದೆಗುದ್ದಿಕೊಂಡು ಕಸಾವಿಸಿ ಬಟ್ಟರೆ। ಆದರಿಂದೆನಾಹೋದೊ ಮಿಥ್ಯಾವಾದವ್ಯಾಕೆ। ಸದನದೊಳಗೆ ತಾನು ಕಾಣದಿರೆ ಕುರುಡಾ। ಪದುಮಜಾಂಡ ಓರ್ವರು ಕಾಣರೆಂಬಂತೆ। ಮದಡ ಮಾನವನ ಅಟ್ಟಹಾಸವೇನೆಂಬೆ। ನದಿಗೆ ಚಾಂಡಾಲ ಯವನ ಕೋಟಿ ಸಮುದಾಯ। ಅಧಮರು ಬಂದು ನಿಂದಿಸಿ ಬೈದು ಕಾಲಿಲಿ। ವದೆದು ಉಗಳಿದರೆ ದೋಷ ನದಿಗೆ ಉಂಟೆ। ನದಿಸದೃಶವಾದ ಜ್ಞಾನಿಗೆ ಅಣಕ ವಾ। ಡಿದರೆ ಅವಗಿನ್ನು ಕ್ಷುಣಿತಾಬರಲಿಲ್ಲಾ। ಮಧು ವೈರಿ ವಿಜಯ ವಿಠ್ಠಲನ ಪಾದಾಂಬುಜ। ಸದಮಲವಾಗಿ ಭಜಿಸುವರು ಗುರುವೆನ್ನಿ ॥೪॥

ಆದಿತಾಳ

ವ್ಯಾಸಮುನಿಯ ಭಾವಗರ್ಭ ಶ್ರೀಮದಾಚಾರ್ಯರು ಬಲ್ಲರಯ್ಯಾ। ವ್ಯಾಸಶಿಷ್ಯರ ಭಾವಗರ್ಭ ಜಯಮುನಿರಾಯಬಲ್ಲನಯ್ಯಾ। ಲೇಸು ಜಯಾ ರ್ಯರ ಭಾವಗರ್ಭ ಮುನಿವ್ಯಾಸರಾಯಬಲ್ಲರೈಯ್ಯಾ। ವ್ಯಾಸರಾಯರ ಭಾವಗರ್ಭ ನಿಜಯೀಂದ್ರ ವಾದಿರಾಜರುಬಲ್ಲರೈಯ್ಯಾ। ಈಸುಜನ ಬಲ್ಲದ್ದು ಕಾಣೊ ಎಣಿಸು ಪುರಂದರದಾಸರ ಇವರೊಳು। ದೇಶದೊಳಗೆ ದಾಸರ ನಿಜ ಭಾವಗರ್ಭ ಲೇಶಬಲ್ಲರು ಅವರ ಅ। ನುಸಾರಿಗಳು ಶ್ರೀಶ ವಿಜಯ ವಿಠ್ಠಲರೇಯಾ। ಕಾಶಿಯೊಳಗಿನ ಮಹಿಮೆಬಲ್ಲಾ ॥೫॥

ಜತೆ

ನಮ್ಮ ಗುರುಗಳಕವನಾ ಮಿಥ್ಯಾಮತವೆಂದವಘ। ಬೊಮ್ಮ ರಕ್ಕಸ ಕಾಣೊ ವಿಜಯವಿಠ್ಠಲಬಲ್ಲಾ ॥೬॥

ಸುಳಾದಿ ೪೧

ಪ್ರಮೇಯ, ವೇದೋಪನಿಷದ್ಗಳಲ್ಲಿ ನಿಯಾಮಕರೂಪಗಳ ವಿಚಾರಪೂರ್ವಕ ಧ್ಯಾನ ಮಹಿಮೆ

ರಾಗ ಮಾರವಿ ಧ್ರುವತಾಳ

ಪ್ರತಿಪಾದ್ಯ ಭಗವನ್ಮೂರ್ತಿಗಳುಂಟು ನಿತ್ಯಾನಿತ್ಯ । ಶ್ರುತಿ ಪುರಾಣ ಮಿಗಿಲಾದ ಓದಿನಲ್ಲಿ । ತುತಿಸಿ ಕೊಂಡಾಡುವದು ಒಂದೊಂದುರೂಪಂಗಳ । ಗತಿಗೆ ಸಾಧನ ಕಾಣೊ ಸಂಶಯವಿಲ್ಲಾ । ಸ್ಥಿತನಾಗಿ ಇಪ್ಪದು ಋಗುವೇದ ಯಜು ಸಾಮಾ । ತ್ರಿತಿಯಕ್ಕೆ ವಾಸುದೇವ ಸಂಕರುಷಣ ಪ್ರದ್ಯುಮ್ನ । ಇತಿಹಾಸ ಪುರಾಣ ಅಥರ್ವಣವೇದಕ್ಕೆ ಮೂ । ರುತಿ ಅನಿರುದ್ಧನೆನ್ನು ಸರ್ವಾಗನು । ಪ್ರತಿಪಾದ್ಯ ನಾರಾಯಣ ಇವರ ವರ್ನಂಗಳ ರ । ಕುತ ಶುಭ್ರ ಪೀತ ನೀಲ ಪ್ರೋದ್ಯದಾದಿತ್ಯ । ಪೃಥಿವಿಸ್ಥ ವರಹರೂಪ ಸಂಹ್ವಕ್ಕೆ ಪೊಪ್ಪುತಲಿಹ ದ್ಯುಸ್ಥ ವಾಮನನು ಪದಕ್ಕೆ । ಚತುರಾನನ ನರಹರಿ ಕ್ರಮುಕೆ ಅಂತಾರಿಕ್ಷಿಸ್ಥ ಮೂ । ರುತಿ ಕಾಣೊ ಎಂದೆಂದಿಗೆ ತಿಳಕೊಂಬೋದು । ಪತಿತಪಾವನ ಸ್ವಾಮಿ ವಿಜಯವಿಠ್ಠಲ ವ್ಯಾ । ಪುತನಾಗಿ ಸರ್ವಕಾಲ ವಿರುತಿಪ್ಪ ನಿಸ್ಸಂಗಾ ॥೧॥

ಮಟ್ಟತಾಳ

ಈಶಾವಾಶ್ಯಕೆ ಯಜ್ಞನಾಮಕದೇವ । ಲೇಸು ಅಥರ್ವಣಕೆ ಪುರುಷೋತ್ತಮದೇವತಿ । ವಾಸುದೇವನ ನೆನಸು ಷಟ್ಪ್ರಶ್ನಕೆ ಜಗ । ದೀಶ ನಾರಾಯಣ ತಳವಕಾರಕೆ ದೇವತಿ । ಭೂಷಣ ವಾಮನನು ಕಾಠಕ ಪ್ರತಿಪಾದ್ಯ । ಕೋಶರೂಪಗಳೈದು ತೈತರೇಯಕೆಸಿದ್ಧಾ । ಭಾಸಿತ ವಿಷ್ಣು ಐತರೇಯಕೆ ಪೇಳಿ । ಶೇಷಶಯನರೂಪ ಛಾಂದೋಗ್ಯಭಾಷ್ಯಕ್ಕೆ । ಶ್ರೀಶನು ಬೃಹದಾರಣ್ಯಕ್ಕೆ । ಈಸು ವೇದಾಂತದಲ್ಲಿ ಹರಿಯ ಧ್ಯಾನವಮಾಡಿ । ದೋಷ ರಾಶಿಗಳಿಂದ ನಿರ್ಮಲನಾಗುವನೊ । ಕೇಶವಮೂರ್ತಿ ಸಿರಿ ವಿಜಯವಿಠ್ಠಲ ತನ್ನ । ದಾಸರು ಕೊಂಡಾಡೆ ದಯಮಾಡಿ ಬರುವಾ ॥೨॥

ತ್ರಿವಿಡಿತಾಳ

ಬಲು ಉಪನಿಷಿತು ಇರಲಿಕ್ಕೆ ಧರೆಯೊಳು । ಅಲವಬೋಧರು ಹತ್ತಕೆ ನಿರ್ನೈಸಿದರ್ಯಾಕೆ । ತಿಳಿಯದು ಮತಿಗಳಿಗೆ ಇದರ ಅಭಿಪ್ರಾಯ । ನೆಲೆಗೊಳಸಿ

ಕೊಟ್ಟು ಅಂತರಾತುಮ ಸ್ವಾಮಿ । ಕಲಿಯುಗದೊಳು ಮಹಾ ಪಾಪಿ ಸಂಕರಬಂದು । ಶಳದು ಅರ್ಥವನು ಅನ್ಯಾಕ್ರಾಂತಮಾಡಿರೆ । ಒಲಿದು ಸರ್ವಜ್ಞ ತೀರ್ಥರು ಉದ್ಧರಿಸಿದರು । ಇಳಿಯೊಳು ಇದಕ್ಕೇನೆಂದು ಮಾತು ಉಂಟು । ಕಲಕಾಲ ಬಲು ಸದನ ಶೋಧಿಸುತಿರೆ ಅದು । ಒಳಗೆ ಹತ್ತು ಸದನದಲ್ಲಿ ಬಂದು । ಹೊಲೆ ಗೂಗಿ ಮುಟ್ಟಿದರೆ ಅದಕೆ ಶಾಂತಿಮಾಳ್ಪರು । ಉಳಿದ ಸದನಕೆ ಯಾಕೆ ಮಾಡುವರೋ । ಬಲವಂತನಾದನ ಮಿಗಿಲು ಮನಿಗೆ ವ್ಯರ್ಥ । ಘಳಿಗೆಯಾದರು ಚಿಂತೆಮಾಳ್ಪನೇನೊ । ಹೊಲೆ ಬಂದೊಬ್ಬನನ್ನ ಮುಟ್ಟಿದರಾದರು । ಕುಲಕೆ ಪ್ರಾಯಶ್ಚಿತ್ತ ಕೊಟ್ಟದ್ದುಂಟೆ । ಸಲೆ ಪಂಚರಾತ್ರ ಬ್ರಹ್ಮತರ್ಕಕೆಕರ್ತಾ । ಚಲುವ ನಾರಾಯಣ ನಾರಾಯಣಾ । ಕಳೆ ಪೂರ್ಣ ಹಯಗ್ರೀವ ಮೂಲರಾಮಾಯಣ । ಒಲಿಮೆ ಇಂದಲಿ ಪೇಳ್ದ ಮುಂದೆ ವಿವರಾ । ಸುಲುಭಾವೆನೆಂಬೆನೊ ಆದಿ ಭಾಗವತ । ನಲುವಿಂದ ಪೇಳಿದ ಮೂಲಮೂರ್ತಿ । ಪೊಳೆವ ಕಪಿಲಾದ್ಯರೂಪಗಳು ರಚಿಸಿ ಸ । ಮ್ಮಿಳಿತ ಮಾಡಿದರು ಯೋಗಾದಿ ಶಾಸ್ತ್ರ । ಜಲಧಿ ಶಯನ ನಮ್ಮ ವಿಜಯವಿಠ್ಠಲ ಇಂತು । ನೆಲೆಗೊಳಿಸಿ ಭಕ್ತರಿಗೆ ಸಾಧನ ತೋರಿದ ॥೩॥

ಅಟ್ಟತಾಳ

ವೇದಾವಿಭಾಗದ ಶಾಖಭೇದ ಕರ್ಮ । ಭೇದ ಪ್ರಸಿದ್ಧವು ಭಾರತ ಭಾಗವತವು । ಸಾದಿ ಸಪುರಾಣಗಳೆಲ್ಲ ಮಿಗಿಲು ವಿ । ನೋದ ಸಚ್ಛಾಸ್ತ್ರ ನಿರ್ಣಯ ಬ್ರಹ್ಮಮೀಮಾಂಸಾ । ಸಾಧುಜನರಿಗೆ ಸತ್ಪಥಕೆ ಏನೇನು ಬೇ । ಕಾದ ಗ್ರಂಥವನೆಲ್ಲ ವಿರಚಿಸಿದ ಗುರು । ವೇದವ್ಯಾಸಮುನಿ ಕರ್ತನೆ ಈತನೆ । ಶ್ರೀದೇವಿರಮಣನೊ ಅಪ್ರತಿಹತ ಸನ । ಕಾದಿಮುನಿವಂದ್ಯ ಸರ್ವೋತ್ತಮ ಕೃಷ್ಣ । ಯಾದವ ಶಿರೋರನ್ನ ವಿಜಯವಿಠ್ಠಲರೇಯಾ । ಆದಿತ್ಯಜನರಿಂದ ವಂದಿಸಿಕೊಂಬಾ ॥೪॥

ಆದಿತಾಳ

ಪದುಮನಾಭನೆ ಅಕಾರವಾಚ್ಯ ವೈಕುಂಠ । ಸದನಸ್ಥ ನಾರಾಯಣ ಉಕಾರವಾಚ್ಯ । ಸದಮಲ ಅನಿರುದ್ಧ ಪ್ರದ್ಯುಮ್ನ ಸಂಕರುಷಣಾ । ಮುದ ವಾಸುದೇವ ನಾರಾಯಣ ಈಸು ಮೂರ್ತಿಗಳು । ಇದೆ ಬಿಂದು ನಾದಘೋಷ ಶಾಂತಾದಿ ವಾಚ್ಯರೆನ್ನು । ಉದಯಕಾಲಕೆ ಎದ್ದು ಸ್ಮರಿಸು ಭಗವದ್ರೂಪಗಳ

ಹೃದಯದೊಳಗೆ ನಿಲಿಸಿ ಜಪಿಸಬೇಕು ವೇಗದಲಿ । ತ್ರಿದಶಪಾಲಕ ಸಿರಿ ವಿಜಯವಿಠ್ಠಲರೇಯನ । ಪದಗಳಸೇರುವದು ಮೂರಾವತಾರದಿಂದ ॥೫॥

ಜತೆ

ಋಗ್ಗ್ವೇದಾದಿಯಲ್ಲಿ ತಿಳಿದು ಕಾ। ಲಗ್ರಾ ಖಂಡಿಸಿ ವಿಜಯ ವಿಠ್ಠಲನ ಪೆಸರೂ ॥೬॥

ಸುಳಾದಿ ೪೨

ಸಕಲ ಕ್ರಿಯುಗಳಲ್ಲಿ ಭಗವನ್ನಾಮಸ್ಮರಣೆ, ತತ್ತಕ್ರಿಯೆಗಳಲ್ಲಿ ತತ್ತಭಗವದ್ರೂಪ ಚಿಂತನಾಕ್ರಮಃ ಪೂರ್ವಕ ಧ್ಯಾನ ಬಿಂಬಾರ್ಪಣೆ

ರಾಗ ಸಾವೇರಿ ಧ್ರುವತಾಳ

ಗುಣ ಕಾಲ ದೇಶ ಕರ್ಮ ಕ್ರಿಯ ನಾಮ ತೀರ್ಥ ದೇಹ। ಜನನ ಮಿಕ್ಕಾದ ನಾಲ್ಕು ಬಗೆ ವ್ಯಾಪಾರ। ಜನನ ನಾನಾ ಜಂತು ವರ್ಷ ಖಂಡ ದ್ವೀಪಾಬ್ಧಿ ಗಗನ। ಪ್ರಣವ ಮಂತ್ರ ವರ್ಣ ಉಪಕರಣಾ। ಇನಿತಾರಲ್ಲಿ ಅಭಿಮಾನಿಗಳ ತಿಳಿದು ಉದಯಾಸ್ತ। ಮಾನ ಪರ್ಯಂತರ ಸಂಚರಿಸು। ದಿನ ದಿನದಲ್ಲಿ ಯಳ್ಳನಿತು ಬಿಡದೆ ಸಾ। ಧನಮಾಡು ಮರಿಯದೆ ಸರ್ವದಲ್ಲಿ। ನೆನಿಸು ಭಾರತಿ ಗರುಡ ಗಣಪತಿ ಪುಷ್ಕರ। ಅನಲಾಂಗನೆ ಉಷಾ ಪುಷ್ಕರ ಧನಪಾ। ಇನ ಶಶಿ ಭೂಮಿ ಧರ್ಮ ಮಿಗಿಲಾದ ದೇವತಿಗಳು। ಮನಸ್ಸಿಗೆ ತಂದು ತತ್ತದ್ಭಗವದ್ರೂಪ। ಮನನಮಾಡುವದು ಮಾತುಮಾತಿಗೆಬಿಡದೆ। ಜನನ ಮರಣದಿಂದ ದೂರ ಕಾಣೋ। ಇನಿತು ಚಿಂತನೆಯಿಂದ ನಿಖಿಳ ಕರ್ಮಮಾಡಿದ। ಘನ ಪುಣ್ಯಕ್ಕೆ ಮಿಗಿಲು ಅಡಿಗಡಿಗೆ। ತನುವು ದಂಡಣೆಯಿಲ್ಲಾ ಪರರಿಗೆ ಬಾಯ್ದೆರದು। ದಣಿದು ಬಳಲುವದಲ್ಲಾ ತಿರುಗಿ ತಿರುಗಿ। ಹಣ ಹೊನ್ನು ವೆಚ್ಚಮಾಡಿ ಬರಿದಾಗುವದಲ್ಲಾ। ಮನದೊಳಗೆ ಉಂಟು ಬಾಹ್ಯವಲ್ಲಾ। ಅನಿಮಿಷ ಗಣದವರು ವಶವಾಗಿ ಇಪ್ಪರು। ಅನು ದಿನ ಕಾರುಣ್ಯವನು ಮಾಳ್ಪರೋ। ಮನಗುಜ್ಞಾನವಿದೆ ಭಕ್ತಿ ವೈರಾಗ್ಯ ಮಿಳಿತ। ಕೊನೆಗೆ ಇದು ದೊರಿಯದಲೆ ಮುಕ್ತಿಯಿಲ್ಲಾ। ಎಣಿಕೆ ಮಾಡೆಲೊ ಮನುಜಾ ನಾನು ನನ್ನದೆಂಬೊ। ತನು ಮನೆ ಸಮಸ್ತ ವಿಷಯ ದಲ್ಲಿ। ನಿನಗೆ ಸ್ವಾತಂತ್ರ್ಯವ ಹಚ್ಚಿ ಕೊಳ್ಳದೆ ಹರಿ। ಅಣು ಮಹತ್ತು ರೂಪ

ಯುಗಪದನೆಂದು । ಗಣಿತಮಾಡುವದು ಇದೆ ನಿನಗೆ ಗುಪ್ತಾ । ಚರ್ನಿಯು ಕಾಣೋ ಈಪರಿ ತಿಳಿದ. ನಾಮಂಕೀ। ರ್ಧನೆ ಗ್ಯಯೋ ಲಿಪಿಸಿ ಕೊಂಡಾಡು ನಿತ್ಯ। ಗುಣಿಸಿ ನೋಡೆಲೊ ಧ್ಯಾನಜಪತಪಸಿದ್ಧಿಗಿಂತ। ಮಣಿಯಾಗಿಪ್ಪನು ನಾಮಸಿದ್ಧಾ ಮನುಜಾ। ಜನರಿಗೆ ಅರುಹುವಾತನು ಗ್ರಹಿಸುವ ಸಾ। ಧನ ದಲ್ಲಿ ಬಾಳುತಿಪ್ಪ ಕಲಿಯುಗದಲ್ಲಿ। ತೃಣ ಬೊಮ್ಮಪರಿಯಂತ ತಾರತಮ್ಯ ಭೇದದಿಂದ। ಗುಣ ಬಲ್ಲವನಿಗೆ ಈಮಾತು ಸಿದ್ಧಾ। ಪ್ರಣತಾರ್ತಿ ಹರ ನಮ್ಮ ವಿಜಯವಿಠ್ಠಲರೇಯ। ನೆನಿಸು ನೆನಿಸು ಭಗವದ್ಗೀತಾರ್ಥವನ್ನೆ ತಿಳಿದು ॥೧॥

ಮಟ್ಟತಾಳ

ಪ್ರಾತಃಕಾಲದಲ್ಲಿ ನಾರಾಯಣನೆನ್ನಿ। ಶ್ರೀತುಲಸಿಯಲ್ಲಿ ವಿಷ್ಣುವಿನ ಸ್ಮರಣೆಮಾಡಿ। ಮೂತ್ರ ವಿಸರ್ಜನೆ ಸಮಯ ಕಾಲದಲ್ಲಿ। ನೀ ತಿಳಿಯೊ ಕೇಶವನಾಮಕ ಹರಿಯಮುಂಡು ಮರಿಯದಿರು। ಮೃತ್ತಿಕೆ ಶೌಚಕ್ಕೆ ಶ್ರೀ ತ್ರಿವಿಕ್ರಮನೋ। ದಂತಧಾವನ ಹರಿ ನೇತುರ ಮೊದಲಾದ ಪ್ರಕ್ಷಾಲ್ಯಕ್ಕೆ ಮಾಧವ। ಗೋತಂಡವರಿಸುವ ಕಾಲಕೆ ಗೋವರ್ಧನ। ವಾತನೊಡಿಯ ನಮ್ಮ ವಿಜಯ ವಿಠ್ಠಲಮೂರ್ತಿಯ। ಮಾತ್ರ ಕಾಲ ಬಿಡದೆ ನೆನಿಸಿ ಧನ್ಯನಾಗೋ ॥೨॥

ರೂಪಕತಾಳ

ನದ್ಯಾದಿ ಸ್ನಾನಮಾಡುವ ಕಾಲಕ್ಕೆ ವರಹಾ। ಊರ್ಧ್ವ ಪುಂಡ್ರ ಗಳಲ್ಲಿ ಕೇಶವಾದಿ ಸೂರ್ಯ। ಮುದ್ರೆ ಇಡುವಾಗ ಕೃದ್ಧೋಲ್ಕಾದಿ ಐದ। ಸಧ್ಯಾ ಸಂಧ್ಯಾಕಾಲದಲ್ಲಿ ರಾಮನೆನ್ನು। ಸಿದ್ಧವಾಗಿ ಪ್ರಾಣಗ್ರಾಸದಲ್ಲಿ ಅನಿ। ರುದ್ಧಾದಿ ಪಂಚ ಭಗವನ್ಮೂರ್ತಿಗಳ ಸ್ಮರಿಸು। ಮುದ್ದೆ ಮುದ್ದೆ ಕವಳ ಮೆಲುವಾರಂಭದಲಿ ವಾ। ಸುದೇವ ಆಪೋಶನಗಳಲ್ಲಿ ಶ್ರೀಹರಿ। ಪೊದ್ದುಡುವ ವಸ್ತ್ರದಲಿ ಉಪೇಂದ್ರ ಭಗ। ವದ್ರೂಪ ಚಿಂತಿಸು ಉಪವೀತ ವಾಮನ। ಶುದ್ಧ ಮಂಗಳಾರ್ತಿಕೊಂಬಾಗ ಭಾರ್ಗವ ವೈ। ಶ್ವದೇವಾದಿಯಲ್ಲಿ ಇದೇ ಮೂರ್ತಿ ನಿಶ್ಚಯ। ನಿರ್ದೋಷ ತೀರ್ಥದಲ್ಲಿ ಕೃಷ್ಣ ರಾಮ ವ್ಯಾಸ। ನಿರ್ಧಾರ ತ್ರಿವಾರ ಶಂಖೋದಕ ಮುಕುಂದ। ಭದ್ರಮೂರುತಿ ನಮ್ಮ ವಿಜಯ ವಿಠ್ಠಲರೇಯನ। ಹೃದ್ಗುಹದೊಳಲ್ಲಿ ನೆನಿಸಿ ಸಂತೋಷವನುಭವಿಸು ॥೩॥

ಝುಂಪೆತಾಳ

ತುತ್ತು ಪ್ರತಿತುತ್ತಿಗೆ ಗೋವಿಂದ ಭಕ್ಷಕವಳ। ಎತ್ತುವಾಗಚ್ಯುತ ಶಾಕದಿ ಧನ್ವಂತ್ರಿ। ಮತ್ತೆ ಪರಮಾನ್ನದಲಿ ಪಾಂಡುರಂಗ ನಮ। ನೀತದಲಿ ತಾಂಡವ ಕೃಷ್ಣಸ್ವಾಮಿ। ಬುತ್ತಿ ಕ್ಷೀರಾನ್ನದಲಿ ಗೋಪಾಲ ಶ್ರೀನಿವಾಸ। ತತ್ತಳಿಪ ತೈಲ ಘೃತ ಪಕ್ವದಲಿ ವೈಕುಂಠ। ಉತ್ತತ್ತಿ ಕದಳಿ ಜಂಬು ಚೂತ ಮಧು। ಕಿತ್ತಳಿ ದಾಳಿಂಬ ನಾರಿಕೇಳ ನಾರಂಗ। ಧಾತ್ರಿಮಿಕ್ಕಾದ ಫಲಮೆಲುವಾಗಲಿ ಯದುಕು। ಲೋತ್ತದು ಬಾಲಕೃಷ್ಣನ್ನ ಸ್ಮರಿಸು ಮನವೆ। ಚಿತ್ತಜಪಿತ ನಮ್ಮ ವಿಜಯವಿಠ್ಠಲನಂಘ್ರಿ। ಚಿತ್ತದಲಿ ನಿಲಿಸಿ ಉದರ ಪೂರಗೈಸು ॥೪॥

ತ್ರಿವಿಡಿತಾಳ

ಪಾನಕದಲ್ಲಿ ನಾರಸಿಂಹ ಮೂರುತಿ ಗಂಗಾ। ಪಾನದಲ್ಲಿ ವಿಷ್ಣು ತ್ರಿವಿಕ್ರಮಾ। ಮೇಣು ಗಮನಾಗಮನದಲ್ಲಿ ಗರುಡ ಕೇತನ। ಏನೆಂಬೆ ದ್ವಿಜರಲ್ಲಿ ಸರ್ವರೂಪಾ। ಗಾನಮಾಡುವ ಕಾಲ ಯೋಗೇಶ್ವರದೇವ। ಆನಂದ ಕಥಾಕಾಲ ಹಯಾಸ್ಯ ವ್ಯಾಸ। ಮಾಣದೆ ತುಲಸಿ ದೂರ್ವಾಂಕುರ ಸಕಲ ಪ್ರಾ। ಸೂನು ಮುಡಿವ ಕಾಲ ರಾಮ ದತ್ತ ಕಪಿಲ। ಸೂನೀತಿಯಲಿ ನರಸಿಂಹ ಪ್ರಣಾಮ ಪ್ರದ। ಕ್ಷಣೆಗೆ ಖಗ ಶೇಷಾಂತರ್ಗತ ಹರಿ ಎನ್ನಿ। ನೀನೆ ತಿಳಿಯೊ ಉದರ ಪೂರ್ತಿಗೆ ವಾಸುದೇವ। ದಾನದಾನದಲ್ಲಿ ರಾಮ ವಾಮನಮೂರ್ತಿ। ಧೇನುದೊಹನದಲ್ಲಿ ಗೋಪಾಲ ವತ್ಸ ಸ್ತನ।ಪಾನ ದಧಿ ಮಥನದಲಿ ಕೃಷ್ಣಹರಿಕಾಣೊ। ಪ್ರಾಣನೊಳಗಿಪ್ಪ ವಿಜಯವಿಠ್ಠಲರೇಯ। ಮಾನಸದಲ್ಲಿ ಪೊಳೆವ ಇಂತು ಕೊಂಡಾಡಿದರೆ ॥೫॥

ಮಟ್ಟತಾಳ

ಪುತ್ರಾದಿ ಚುಂಬನ ವೇಣುಹಸ್ತ ಕೃಷ್ಣ। ಮತ್ತೆ ತಾಂಬುಲಕಾಲದಲ್ಲಿ ಪ್ರದ್ಯುಮ್ನನು। ಚಿತ್ತಜನ ಕೇಳಿಯಲ್ಲಿ ಗೋಪಿರಾ। ವೃತ್ತ ಕುಚ ಕುಂಕುಮಾಂಕಿತ ಎಳೆದಳ। ಹಸ್ತ ಗೋಪಿಜನಜಾರ ಕೃಷ್ಣನೆನ್ನಿ। ಹೊತ್ತು ಹೊತ್ತಿಗೆ ಕ್ರೀಡೆ ಕಾಲಕ್ಕೆ ಗೋವಿಂದ। ಉತ್ತಮ ಶಯ್ಯಾ ಕಾಲಕೆ ಸಂಕರುಷಣ। ಇತ್ತ ನಿದ್ರೆಯಲ್ಲಿ ಪದ್ಮನಾಭದೇವ। ಅತ್ಯಂತವಾಗಿ ಕೊಂಡಾಡು ನಿರುತವಾಡು। ಸತ್ಯಸಂಕಲ್ಪನೊ ವಿಜಯ ವಿಠಲರೇಯ। ಭೃತ್ಯನಲ್ಲಿ ಮಹಿದಾಸನಾಗಿ ಇಪ್ಪಾ ॥೬॥

ಆದಿತಾಳ

ಅಡಿಗಡಿಗೆಮಾಡುವ ಸಂಸಾರಯಾತ್ರೆಯಲ್ಲಿ। ಬಿಡದೆ ಕರ್ಮಾವಳಿ ನೆಸಗುವಕಾಲಕ್ಕೆ। ಪೊಡನೊಡನೆ ಕೇಶವಾದಿ ಮೂರ್ತಿಗಳ ನೆನಿಸುವದು। ನಡೆನುಡಿ ಮರಿಯದೆ ಮನದಲ್ಲಿ ಚಿಂತಿಸಿ। ಪೊಡವೀಶ ರಂಗನ್ನ ಕರುಣ ಕಟಾಕ್ಷವ। ಪಡೆದು ಧನ್ಯನಾಗೋ ಇಂಥದಕೆ ಸತ್ಕರ್ಮ। ಕಡೆ ಬೀಳುವದು ಕಾಣೋ ಸಂಸಾರಾಂಬುಧಿಯಿಂದ। ತಡಿಯದೆ ಹೆದ್ದಾರಿ ವೈಕುಂಠನಗರಿಗೆ। ಬಡವನಾದರೆ ಇನಿತು ತಿಳಿದು ಸಂಚರಿಸಿದರೆ (ಚಿಂತಿಸಿದರೆ)। ಎಡೆಬಿಡದೆ ನೂರಾರು ಯಾಗಮಾಡಿದಫಲ। ಕುಡಿದ ನೀರು ಮೊದಲಾಗಿ ಸರ್ವಾಂತರಿ ಯಾಮಿ ಹರಿಯು। ಕಡುಪೂಜೆ ಎನಿಪದು ಆವಾವಜಗೆ ಇರಲು। ಒಡಲಿಗೋಸುಗ ಇದ ಮಾಡಿದಡೆ। ಕಡಲಧರೆಯಂತೆ ಪುಣ್ಯವೆ ಬಪ್ಪುದು। ದೃಢ ಮನದಲ್ಲಿ ನಿತ್ಯ ನೆನಿಸು ಕಾಯದಿಂದ। ಬಡುವ ಕ್ಲೇಶಗಳನ್ನು ಬಿಡುಬಿಡು ಮತ್ತೆ ಬಿಡು। ಒಡಿಯ ವಿಜಯವಿಠ್ಠಲ ಸಕಲ ವಿಷಯದಲ್ಲಿ। ಹುಡಕಿಸಿ ಕೊಳ್ಳದಲೆ ಮುಂದೆ ನಿಂದಾಡ-ವಾ ॥೭॥

ಜತೆ

ರಸನದಲ್ಲಿ ಇಂತು ನುಡಿದರೆ ತನ್ನ ದ। ರುಶನಕೊಡುವ ನಮ್ಮ ವಿಜಯವಿಠ್ಠಲ ವೊಲಿದು ॥೮॥

ಸುಳಾದಿ ೪೩

ಶ್ರೀ ನಾರಾಯಣವರ್ಮ ಪಕ್ರಿಯೆ, ದೇಶಕಾಲ ನಿಯಾಮಕನಾದ ಶ್ರೀಹರಿಯ ರೂಪ ಚಿಂತನೆ ಕಾಲೋಪಾಸನೆ ಧ್ಯಾನ

ರಾಗ ಶಂಕರಾಭರಣ ಧ್ರುವತಾಳ

ರಕ್ಷಿಸುವ ಭಕ್ತರ ನಾನಾ ರೂಪದಿಂದ। ಅಕ್ಷರ ಪುರುಷ ರಮಣ ಕರುಣಾಂಬುಧಿ। ಅಕ್ಷಿ ಮೊದಲಾದ ಕಾರ್ಯದಲ್ಲಿದ್ದು ಭಕ್ತರ। ಶಿಕ್ಷೆಮಾಡುವ ಉಕ್ಕು ತಗ್ಗಿಸುವ। ಈಕ್ಷಿಸುತಿಪ್ಪನು ಒಳಗೆ ಹೊರಗಿದ್ದು ಬಿಡದೆ। ದೀಕ್ಷ ಬದ್ಧನಾಗಿ ದೀನಬಂಧು। ಅಕ್ಷಯಕೊಡುತಲಿ ಆವಾವಕಾಲಕ್ಕೆ। ಮೋಕ್ಷಕ್ಕೆ ಸಾಧನಮಾಡಿಸುತ್ತ। ಲಕ್ಷಣ ಮೂರುತಿ ಕೇವಲ ನಂಬಿದವರು। ಲಕ್ಷ ಕೋಟಿ ಜನರ ನಡುವೆ ಇರಲು। ಲಕ್ಷ್ಮೀ ಸಹಿತ ಬಂದು ಕಾವಾನು

ಆಪದ್ಧರ್ಮ। ರಕ್ಷಕನೆಂಬೊ ಬಿರದು ಕೂಗುತಿದಕೋ। ಭಿಕ್ಷುಕ ಭಾಗ್ಯವಂತನೆಂಬೊ ವೈಷಮ್ಯವಿಲ್ಲಾ। ಲಕ್ಷ್ಮಿ ಇಟ್ಟು ಮೇಲೆ ಒಪ್ಪಿಸಿಕೊಡನೋ। ವಕ್ಷಸ್ಥಳದಮೇಲೆ ಒದ್ದ ಬ್ರಾಹ್ಮಣನ। ಉಪೇಕ್ಷ ಮಾಡದಲೆ ಮನ್ನಿಸಿದ ನೋಡು। ಈ ಕ್ಷಿತಿ ಮಧ್ಯದಲಿ ಇನ್ನೊಂದು ದೈವವುಂಟೆ। ತ್ರ್ಯಕ್ಷ್ಯ ಜನಕ ಮೊದಲಾದವರು। ರಕ್ಷಿಸಬೇಕೆಂದು ಕರವ ಜೋಡಿಸಿ। ಅಪೇಕ್ಷದಿಂದಲೆ ಸ್ತುತಿಸಿ ಬೆಂಡಾಹರೋ। ತೀಕ್ಷಣವಾಗಿ ಹರಿಯು ಕಾಣಬೇಕೆನೆ ಪ್ರ। ತ್ಯಕ್ಷ ಸೋಮನ ಶ್ರುತಿಯಲಿ ಕಾಣಿರೊ। ವೃಕ್ಷ ಸ್ಥಾವರ ಜಂಗಮ ನಾಲ್ಕು ಎಂಭತ್ತು ಜೀವಿಗಳನ್ನು ಚಕ್ರದಂತೆ। ಚಕ್ಷು ಲವ ನೋಟದಿಂದ ಬೊಮ್ಮಾಂಡಾವರ್ಣ ಮಹಾ। ಲಕ್ಷ್ಮೀ ಸಮೇತ ಸದಾ ಸರಸರಗಿದ್ಧಾನೆ। ಆಕ್ಷಣದಿಂದಲಿ ತೃಣಮಾಯಾರಂದದಿ ಪ। ರೋಕ್ಷ ತಾನಾಗಿ ಇನಿತು ತಿರುಗಿಸುವ। ಕುಕ್ಷಿಗೋಸುಗವಲ್ಲ ಸರ್ವ ಸ್ವಾತಂತ್ರ ನಿತ್ಯ। ದಕ್ಷಕ ಸುಖ ಸಂಪೂರ್ಣ ಇಂಥವರನ್ನ। ಲಕ್ಷಿಗೆ ತಾಹನೇನೊ ಸ್ವರತಾ ನಿರ್ದೋಷಮಣಿ। ಅಕ್ಷೀಣ ಬಲವಂತ ಸ್ವಪ್ರಕಾಶಾ। ಸಾಕ್ಷಾತ್ಕಾರ ಸ್ವಭಾವ ಕಾಲಾದಿಯಲ್ಲೀ ಸಮ। ಕಕ್ಷಿಗಳಿಲ್ಲ ಕಾಣೊ ಚಿಂತಿಸಿದರು। ನಕ್ಷತ್ರ ಗಣ ಪುಲಿನರಾಶೀ ಪರಾಗ ಸಂಖ್ಯ। ನೀಕ್ಷಿಸಿ ಎಣಿಸಬಹುದೋ ಇದು ತೀರದು। ಸಾಕ್ಷಿ ಪ್ರೇರಕ ಕರ್ತಕಾರಯಿತ ಅನಾದಿಯಿಂದ। ಸೂಕ್ಷ್ಮ ಶರೀರದೊಳು ಮಹಾತಮ ತರದೀ। ಪಕ್ಷಿನಾಮಕದೇವ ವಾಸವಾಗಿಪ್ಪ ವಿಶ್ವ। ಚಕ್ಷು ನಾರಾಯಣಾ ಬಿಂಬವ್ಯಾಪ್ತಿ। ದಕ್ಷಣಾದೇವಿ ರಮಣ ವಿಜಯವಿಠ್ಠಲ ಬಲು। ಪಕ್ಷಪಾತಿ ಕಾಣೊ ಒಮ್ಮೆ ನೆನಿಸಿದರೂ ॥೧॥

ಮಟ್ಟತಾಳ

ಸ್ಥಳದಲ್ಲಿ ವಾಮನ ಅಟವ್ಯ ನರಸಿಂಹ। ಜಲದಲ್ಲಿ ಮತ್ಸ್ಯ ಗಗನದಿ ತ್ರಿವಿಕ್ರಮಾ। ಕುಲಗಿರಿಯಲ್ಲಿ ಪರಶುರಾಮನು ಮಾರ್ಗ। ದಲಿ ಭೂವರಾಹಾತ್ಮಾ ಬಲು ಪ್ರವಾಸದಲಿ। ಸಲಕ್ಷ್ಮಣ ಭರತಾಗ್ರಜ ಜಾನಕಿಪತಿ ರಾಮಾ। ತಿಳಿವದು ಈ ವಿಧದಿ ರಕ್ಷಕ ಮೂರ್ತಿಗಳ। ಬಲಿಮರ್ದನಿ ಪಾದ ವಿಜಯವಿಠ್ಠಲರೇಯ। ಒಲಿದು ಸಂಗಡಿಲಿಪ್ಪು ಸುಖವೇ ಕೊಡುತಿಪ್ಪಾ ॥೨॥

ತ್ರಿವಿಡಿತಾಳ

ಮಾತ್ರೆ ನಿಖಿಳಾ ಪ್ರಮಾದ ರಕ್ಷಕ ಶುಭ । ಮೂರ್ತಿ ನಾರಾಯಣಾತ್ಮಕನೋ ಉ । ನ್ಮತ್ತ ಪೂರ್ವಾದಾ ಹಾಸಕನೆ (?) ನರನಾಮಕಸ್ವಾಮಿ । ದತ್ತನೂ ಆಯೋಗ ದ್ರಕ್ಷಕನಾಗಿಪ್ಪಾ । ಮೊತ್ತ ಕರ್ಮಾಕರ್ಮ ಬಂಧ ಮೋಚಕ ಕಪಿಲಾತ್ಮಕ ಸ । ನತ್ಕುಮಾರನು ಯೋಗ್ಯತಾವ ಕಾಮಕೆ ಇನ್ನೂ (ತಾಪಸಕಾಮ ಎನ್ನು) । ಭೃತ್ಯಧರ್ಮವೇ ಮರದು ಪತಿದೇವ ಹೇಳನ ಕೃತ್ತೀಗೆ ಹಯಗ್ರೀವ ಪಾಲಿಸುತಿಪ್ಪನು । ತತ್ವೇಶರ ಕೂಡ ಅರ್ಚನೆ ಮಾಡದೆ ಹರಿಗೆ । ತುತ್ತು ಈಯದೆ ಲಕ್ಷಣ ಕರ್ಮ ಸ್ಮರಣ ರ । ಹಿತ್ತವಾಗಿದ್ದ ಪೂಜಿಯಾ ದೋಷಹ ಮಹಿದಾ । ಸಾತ್ಮಕ ಹರಿಯೆನ್ನು ಅಶೇಷ ನಿರಯುವಾ । ಉತ್ತರಿಸುವಾ ಕೂರ್ಮ ಧನ್ವಂತರಿದೇವಾ । ಪತ್ಯ ರಕ್ಷಕಾ ದ್ವಂದ್ವಾ ಭಯ ಪರಿಹಾರಕ। ಕೀರ್ತಿ ಪುರುಷ ಋಷಭ ಯಜ್ಞಕೃತಫಲದಲ್ಲಿ । ನಿತ್ಯ ಯಜ್ಞಾತ್ಮಕ ಸುರನಾಯಕಾ । ವೃತ್ತಿ ಕ್ರೋಧಾವೇಶ ಕಳೆದ ಬಲಭದ್ರಾತ್ಮಕಾ । ಸತ್ಯಸಂಕಲ್ಪನೋ ಪರಮಾತ್ಮನೋ । ಸತ್ಯವತೀಸೂನು ಸಂಪ್ರಮೋಹ ಬಿಡಿಪಾ । ಮಿಥ್ಯಾಜ್ಞಾನಿಗಳ ಸಂಗವ ಹರಿಸುವ ಬುದ್ಧಿ । ಚಿತ್ತಾದಿಯಲಿ ಕಲಿಯ ಕಲ್ಮಷವಿರೆ ನು । ಗೊತ್ತುವಾ ಕಲ್ಕಿರೂಪವೆನಿಸಿ । ಸತ್ಯಾ ಪರಾಮಣ್ಯ(ಯಣ)ಸ್ವಾಮಿ ವಿಜಯವಿಠ್ಠಲ ಸ । ರ್ವತ್ರದಲ್ಲಿ ಇದ್ದು ಅಘನಾಶಮಾಡುವಾ ॥೩॥

ಅಟ್ಟತಾಳ

ಪದ ಜಾನು ಊರು ರಕ್ಷಕ ಅಜಾ ಅಣಿಮಾಯಜ್ಞ।ಮೃದು ಕಟಿಅಚ್ಯುತಾ ಜಠರಾ ಹಯಗ್ರೀವಾ । ಪದುಮನಾಭ ನಾಭಿ ಗುಹ್ಯೇಂದ್ರಿಯನಿರುದ್ಧಾ । ಹೃದಯ ವಕ್ಷಸ್ಥಳ ಕೇಶವಾ ಈಶಾನಾ । ಇದೇ ಸಿದ್ಧಾಕರ ಸ್ಥಆತ್ಮ (ಕಂಠಸ್ವಾತ್ಮಕ) ಭುಜವಿಷ್ಣು । ವದನ ಉರುಕ್ರಮಾ ಶಿರೋ ಈಶ್ವರನೆನ್ನು । ಎದುರಿಗೆ ಚಕ್ರಿಯಾತ್ಮಕ ಪೃಷ್ಠಭಾಗಕ್ಕೆ । ಗದಾಧರ ಪಾರ್ಶ್ವಕ್ಕೆ ಧನುರ್ಧಾರಿ ಕಾಣೊ । ತದುಪರಿ ಉಪೇಂದ್ರ ಕ್ಷಿತಿಗೆ ತಾರಕ್ಷನೋ । ಮುದದಿಂದಲಿ ನಮಾ ಅಂತಿಗೆ ಹಲಧರಾ । ಒದಗಿ ಇಂದ್ರಿಯಗಳಿಗೆ ಹೃಷಿಕೇಶ । ಸದಮಲ ಪ್ರಾಣಚಿತ್ತಾ ಮನೋಬುದ್ಧಿಗೆ । ಪದುಮೇಶ ನಾರಾಯಣ ದೇವ ಶ್ವೇ । ತದ್ವೀಪದವಾಸಿ ಯೋಗೇಶ್ವರ ಪ್ರಶ್ನಿಗರ್ಭ (ಪ್ರಶನಿಗರ್ಭ)।

ಇದೇ ಸತ್ಯವೆನ್ನಿ ಅತ್ಮನಿಗೆ ಪರಶುರಾಮಾ। ಪದೋಪದಿಗೆ ಕ್ರೀಡಾ ಶಯನಾ ವ್ರಜಾಸಿನಾ। ವಿಧಕ್ಕೆ ಗೋವಿಂದ ಮಾಧವ ವೈಕುಂಠ ಶ್ರೀಪತಿ। ಪದ ಪ್ರದಾತಾ ನಮ್ಮ ವಿಜಯವಿಠ್ಠಲ ಸ। ನ್ನಿಧಿಯಾಗಿ ಇರುತಿಪ್ಪಾ ಆನಂದ ಕೊಡತಲಿ ॥೪॥

ಆದಿತಾಳ

ಮುನ್ನೆ ಕೇಳುವದು ಭೋಕ್ತಾರಕ್ಷಕ ಯಜ್ಞಭೋಕ್ತ। ಉನ್ಮಾದಾ ಅಪಸ್ಮಾರ ಅರ್ಭಕ ಗೃಹಾ ಯಾತೂ। ಧನ್ಯ ಕೂಷ್ಮಾಂಡ ಭೂತಪ್ರೇತ ಪೈಶಾಚಿ ಡಾ। ಕಿನ್ಯ ಶಾಕಿನಿ ದೇಹ ಪ್ರಾಣೇಂದ್ರಿಯುಗಳಲ್ಲಿ। ಭಿನ್ನಾ ದುಸ್ವಪ್ನ ದೃಷ್ಟ ಮೋಹೋತ್ಪಾತಾ ಬಾಲಯೌ। ವನ ವೃದ್ಧಾಪ್ಯ ಪಿಡಿದು ನಾನಾ ಭಯ ವಿಚಿತ್ರಾ। ಘನ್ನವಾಗಿ ಬಂದಿರೆ ವಿಶ್ವನಾಮಕನ। ಚೆನ್ನಾಗಿ ನೆನಿಸುವದು ಯಮುನೇಮುನದಿಂದ। ಇನ್ನು ಈ ವಿಚಾರಕ್ಕೆ ಸುಲಭ ಮಾರ್ಗವೆ ಉಂಟು। ಅನಂತರೂಪಗಳು ಸರ್ವದಲ್ಲಿ ಇಪ್ಪವು। ಇನಿತು ಜ್ಞಾನದಲ್ಲಿ ಇದರೊಳಗಾವ ಒದಗೆ। ನಿನ್ನ ಚಿತ್ತಕ್ಕೆ ಬಂದದ್ದು ಸ್ಮರಿಸೆ ನಿರ್ಭಯವೋ। ಧನ್ಯನಾಗೆಲೊ ಜೀವಿ ಈ ಬಗೆ ಕೊಂಡಾಡಿ। ಪುಣ್ಯ ಸಂಪಾದಿಸು ಅರಿಷ್ಟ ಪೋಗಾಡು। ಸಣ್ಣೋಪಾಯವೆ ಉಂಟು ಒಂದೆರಡು ಮೂರು ನಾಲ್ಕು। ಭಿನ್ನ ಆರೇಳು ಎಂಟು ಒಂಭತ್ತು ಈರೈದು। ಹನ್ನೊಂದು ಹನ್ನೆರಡು ಈ ಪ್ರಕಾರವೆ ಹರಿಯಾ। ಉನ್ನತ ಪ್ರೇರಣೆ ಸ್ವಾಪ್ನಿತ್ಸ್ವ ತಿಳಿಯ ಬೇಕು। ತಿನ್ನಲಾಗಿ ಮೇಲಿಪ್ಪ ರಸ ಪೋದ ಮಾವಿನ। ಹಣ್ಣಿನಂದದಿ ಎಲ್ಲ ಅನುಭವ ನೋಡಿಕೊಳಿರಿ। ಮನ್ನಿಸಿ ಓದಿ ಕೇಳಿ ಲಾಲಿಸಿದವರಿಗೆ। ಇನ್ನಿತು ಆಗುವದು ದೀಪದಿಂದಲಿ ದೀಪವ। ಬಿನ್ನಾಣದಲಿ ಪಚ್ಚಕೊಂಡು ಪೋದಂತೆ ಇದು। ಪುಣ್ಯತಂದು ಕೊಡುವದು ಹರಿಕಥಾಮೃತ ನಿತ್ಯ। ಪೂರ್ಣ ಗುಣಾ ರ್ಣವ ಹರಿ ವಿಜವಿಜವಿಠ್ಠಲ। ತನ್ನ ತೋರಿಸಿ ತನ್ನ ಪದವಿಯ (ಸೇವಾ) ಕೊಡುವಾ ॥೫॥

ಜತೆ

ಭಗವನ್ಮೂರ್ತಿಗಳನ್ನು ಚಿಂತಿಸು ಅಲ್ಲಲ್ಲಿ। ಅಘ ನಿರ್ಲೇಪನಾಗು ವಿಜಯವಿಠ್ಠಲ ಪೇಳಿವಾ ॥೬॥

ಸುಳಾದಿ ೪೪

(ನೈವೇದ್ಯ ಪ್ರಕರ್ಣ) ಧ್ಯಾನೋಪಾಸನೆ ಹಿಂದಿನ ೨೩ನೇ ಸುಳಾದಿಗೆ ಅನುಕೂಲವಾದದ್ದು

ರಾಗ ಕಾಂಬೋದಿ ಧ್ರುವತಾಳ

ಸಮರ್ಪಣೆ ಪ್ರಕಾರ ತಿಳಿವದು ಚೆನ್ನಾಗಿ । ಸಮ ಬುದ್ಧಿವುಳ್ಳ ಜನರು ಸತತದಲ್ಲಿ । ಹಿಮ ಶೀತು ಮಧ್ಯದಲ್ಲಿ ಪುಟ್ಟಿದ ದೇಶದೊಳಗೆ । ಕ್ರಮ ಉಂಟು ಸ್ವಲ್ಪ ಪ್ರದೇಶ ಧರಣಿ । ಶಮ ದಮ ಉಳ್ಳ ಮಧ್ವಮತದಲ್ಲಿ ಪೊಂದಿದ್ದ । ಸುಮನೋಹರ ಜೀವಿಗಳಿಗೆ ಪೇಳತಕ್ಕ । ಪ್ರಮೇಯ ಇದು ಕೇವಲ ಹರುಷ ರಹಸ್ಯ ಅ । ಗಮದಲ್ಲಿ ಸಾರಿ ಪೇಳುತಿದೆ ಉತ್ತಮ । ರಮೆಯರಸನ್ನ ದಿವ್ಯ ವಿಗ್ರಹ ಮನಸಿಗೆ । ರಮಣೀಯವಾದದ್ದು ಲಕ್ಷಣೋಪೇತ । ದ್ಯುಮಣಿ ಪ್ರಕಾಶದಂತೆ ಒಪ್ಪುತಿಪ್ಪದು ಅ । ತುಮ ಅನಾತುಮ ದೊಳು ಚಿಂತನೆಗೈದು । ಸಮ ವಿಷಮದಲ್ಲಿ ಗೋಳಕವನೆನೆದು ಮ । ಹಿಮೆಯನ್ನು ಮರಳೆ ಮರಳೆ ಧೇನಿಸುತ್ತ । ತಮೋಗುಣದ ಕಾರ್ಯವನ್ನು ಹಿಂಗಳದು ಶುದ್ಧ ಸತ್ವ । ಮಮತೆಯಿಂದಲಿ ಹರಿಯ ಮೆಚ್ಚಿಸಬೇಕು । ಅಮರಾದಿ ಸಮುದಾಯ ಜೀವಿಗಳಿಗೆ ಲ । ಕ್ಷುಮಿ ವಲ್ಲಭನೆ ಮುಖ್ಯ ಮೂಲನೆಂದೂ । ಕಮಲ ಕರ್ನಿಕೆಯಲ್ಲಿ ಯಿದ್ದ ಬಿಂಬನ ಪ್ರ । ತಿಮೆಯಲ್ಲಿ ಇಡುವದು ವಿವಿಧ ತಿಳಿದು । ಸಮನ್ವಯ ಇಲ್ಲೆ ಮಾಡಿ ಮುಕ್ತಿಮಾರ್ಗವ ಪೊಂದು । ಗಮನವಾಗಲಾರದು ಕಂಡಕಡಿಗೆ । ಅಮಲವಾದ ಪೂಜೆ ಹದಿನಾರು ದಿಕ್ಕಿನಿಂದ । ಕ್ರಮತಿಳಿದು ಆವಾಹನ ಧ್ಯಾನಮಾಡಿ । ಅಮಿತ ಪ್ರತಾಪ ಹರಿ ನಿಸ್ಪೃಹ ನಿತ್ಯ ತೃಪ್ತ । ಕಮಲ ಭವಾದಿ ಮನಕೆ ದೂರಕ್ಕೆ ದೂರ । ಅಮಿಶ್ರ ಮಿಶ್ರಾದ ರಸಭೋಕ್ತಾ ನಾನಾ ರೂಪದಲಿ । ಭ್ರಮೆ ಇಲ್ಲವಗೆ ನಿಜಪೂರ್ಣ ಸುಖಿನೊ । ಕ್ಷಮ ಮಧ್ಯದಲಿ ಸ್ಥೂಲ ಮಧ್ಯಮ ಸೂಕ್ಷ್ಮವೆಂದೀ । ಕ್ರಮದಿಂದ ಪ್ರಸಿದ್ಧ ವಾಸನ ಚಿತ್ತು । ಚಮತ್ಕಾರ ಒಂದೊಂದಕೆ ತ್ರಿವಿಧಬಗೆ ಉಂಟು । ಸುಮತಿಲೋಕಕೆ ಸುಲಭವಾಗಿಪ್ಪದೂ ಸಮನಸಿ ತಿಳಿಯಬೇಕು ಚತುರವಿಧ ಅನ್ನ । ರಮೆ ಬೊಮ್ಮ ತಾತ್ವಿಕರು ಸಾಕ್ಷಾತ್ಪರಮಾ । ನಿಮಿಷ ಬಿಡದೆ ಇನಿತು ಕಷ್ಣಾದಿ ಇಷ್ಟ ವಾಸ । ನಾಮ ಯದಿ ಪ್ರಾಜ್ಞ ಬಿಂಬ ಕೈಕೊಂಬೋರು । ಕಮಠ ಕಪಿಲ ಭೃಗು ನರಸಿಂಹ

ನಾಮದಲಿ । ರಮಿಪ ಜಿಹ್ವೇಂದ್ರಿಯದಲಿ ಸ್ವೀಕರಿಸಿ । ಕುಮತಿ ಜನಕೆ ತಿಳಿಯಗೊಡನೊ ಅನಾದ್ಯ ವಿದ್ಯ । ತಿಮಿರ ಭಾನು ಭವಾರ್ಣವ ತಾರಕ ಉ । ತ್ರಮವಾದ ಯೋಗ್ಯ ರಸ ತತ್ತ್ವದಾರ್ಥದಲಿ । ಸಮ ತಿಳಿಸಿಕೊಂಡರೆ ಯೋಗವಾಯಿಾ । ಅಮರರಿಗೆ ಉಣಿಸುವ ತಾನು ಕೈಕೊಂಬುದು ದು । ರ್ಗಮ ಕಾಣೊ ದುಃಖ ದೂರ ಮಾಹಾಪ್ರಭುವೊ । ಉಮೆಯರಸ ಪರಿಯಂತ ಈರಸ ಸಲ್ಲುವದು । ಕಮಲಭವಗೆ ಲಕುಮಿಗೆ ಇಲ್ಲವೋ । ಸುಮನಸ ಗಣಕೆ ಲೇಪನವಿಲ್ಲಾ ಅವರ ಆ । ತುಮದೊಳಗಿದ್ದ ಖಳರಲ್ಲಿ ಐಕ್ಯ । ಕ್ರಮ ಗೆಡುವರು ಒಮ್ಮೆ ಇದರ ಪ್ರಾಚುರ್ಯದಿಂದ । ತಮ ತಮ್ಮ ಸ್ವಾಭಾವಿಕ ನಡತೆಯಲ್ಲಿ । ಅಮಮ ಹರಿ ಪರಮ ಶಕ್ತಿ ಸೃಷ್ಟ್ಯಾ ಉಪ । ರಮದಲ್ಲಿ ಸರ್ವರನ್ನು ಉದರದೊಳಗು । ತ್ರಮ ತರದಿಂದ ಪೊಂದಿಟ್ಟುಕೊಂಡಿಪ್ಪ ಉ । ತ್ರಮಶ್ಲೋಕ ಪೂರ್ಣನ್ನ ಚರಿತೆ ಎಂತೊ । ಮಮತಾ ರಹಿತ ಪರಾಯು ಆರಂಭಿಸಿ । ನವಿಪ ಜನರು ಇತ್ತ ಭೋಗ್ಯಾವಸ್ಥಾ । ಕ್ರಮದಲಿ ಆವಾವ ತತ್ವಾತ್ಮಕ ರಸಂಗಳು । ಸಮಸ್ತ ಜೀವಿಗಳಿಗೆ ಏಕ ಮಾಳ್ಪ । ಕಮಲೇಶ ಶುಭರಸ ಸವಿದುಂಬೋದು ನಿಶ್ಚಯವು । ಅಮಿತ ವಿಜ್ಞಾನಪೂರ್ಣ ಸ್ವರಮಣನು । ಕ್ರಿಮಿಮೊದಲಾದ ಚೇತನಕೆ ಉಪಜೀವ್ಯ ಅ । ಕ್ರಮಕೆ ಭಗವಂತನಿಗೆ ಆಗುವದೇನೊ । ಭ್ರಮಣನಲ್ಲವೊ ಸ್ವಾಮಿ ಭಿನ್ನಾಂಶಿ ಅಂಶಕೆ ಸಂ । ಗಮ ಮಾಡಿಸುವ ಒಂದೇ ಜೀವರನ್ನು । ನಮೊ ನಮೊ ನಮೊ ಎಂದು ಆದ್ಯಂತ ತಿಳಿದ ನರಗೆ । ಸಮವೃತ್ತಿ ಭೀತಿ ಇಲ್ಲ ಎಲ್ಲಿದ್ದರೂ । ಹಿಮಕರಾವರ್ಣ ವಿಜಯ ವಿಠ್ಠಲನನು । ಪಮನೆಂದದರ್ಪಿಸೆ ಕೈವಲ್ಯಾ ಸರ್ವದಾ ಕೈಕೋಂಬಾ ॥೧॥

ಮಟ್ಟತಾಳ

ಅರ್ಚಿಸಲಿಬೇಕು ಅಧಿಕಾರ ಭೇದದಲಿ । ಸರ್ಪಿ ಮೊದಲಾದ ನಾನಾ ವಸ್ತುಗಳಿಂದ । ದರ್ಪತನವಬಿಟ್ಟು ಧರ್ಮಮಾರ್ಗದಲಿ ಕಂ । ದರ್ಪಪಿತನೆ ಸರ್ವ ವ್ಯಾಪ್ಯ ವ್ಯಾಪಕನೆಂದು । ದರ್ಪಣದೊಳು ಬಿಂಬನೋಳ್ಪ ತೆರದಂತೆ । ಸರ್ಪಭೂಷಣ ತತ್ವದಲ್ಲಿ ಇದ್ದದ್ದೆ ಗ್ರಹಿಸು । ದರ್ಪಜನರವೈರಿ ವಿಜಯವಿಠ್ಠಲರೇಯಾ । ಅರ್ಪಿತ ಕೈಕೊಂಬ ಭಕುತಿಮಾತ್ರಕೆ ಪೊಲಿದೂ॥೨॥

ತ್ರಿವಿಡಿತಾಳ

ಒಂದೊಂದು ಪದಾರ್ಥಕ್ಕೆ ಒಬ್ಬೊಬ್ಬ ಅಭಿಮಾನಿಗಳು। ವೃಂದಾರಕ ಜನ ಉಂಟು ಅದಕೆ। ಒಂದೊಂದು ಭಗವದ್ರೂಪಗಳಲ್ಲಿ ಇಪ್ಪವು। ಕುಂದ ದಲೆ ತಿಳಿದು ಕೊಂಡಾಡುವದು। ನಂದವಾಹದು ಜನಕೆ ಅನ್ನ ಪಾಯಸ ದಲ್ಲಿ। ಚಂದ್ರ ಭಾರತಿ ಕೇಶವ ನಾರಾಯಣ। ಸಂದೋರು ಭಕ್ಷ ಘೃತ ಕ್ಷೀರದಲ್ಲಿ ಅರ। ವಿಂದ ಭಾಂಧವ ಲಕುಮಿ ವಾಣಿಯಲ್ಲಿ। ನಿಂದಿಹ ಮಾಧವ ಗೋವಿಂದ ವಿಷ್ಣು ಬಲು। ಅಂದಾ ಮುಂಡಿಗೆ ಬೆಣ್ಣೆ ದಧಿ ಸೂಪಕ್ಕೆ ಒಂದೊಂದಿರಾ ಮೌಳಿ ವಾಯು ಚಂದ್ರ ವರುಣಾ। ವೀಂದ್ರ ಮಧುರಿಪು ಕ್ರಮಾತು ಶ್ರೀಧರ। ಮುಂದೆ ಪತ್ರ ಫಲ ಶಾಖಾ ಆಮ್ಲ ಅನಾಮ್ಲಕ್ಕೆ। ಪೊಂದಿ ಮಿತ್ರ ಶೇಷ ಗೌರೀ ಗೌರೀಶರು। ಇಂದ್ರೀಶ (ಪದ್ಮ) ನಾಭ ದಾಮೋದರ ಗುಣ। ಸಾಂದ್ರ ಸಂಕರುಷಣ ಮೂರ್ತಿ ಎನ್ನೂ । ಇಂದ್ರ ಯಮ ವಾಸುದೇವ ಪ್ರದ್ಯುಮ್ನ ಆ। ನಂದ ಅನಿರುದ್ಧನು ಸಕ್ಕರೆ ಬೆಲ್ಲ। ಚಂದ ಉಪಸ್ಕರಾ ಕಟುಗಳಿಗೆ ಇವರೆನ್ನು। ವಂದಿಸುವದು ಈ ಪರಿ ತಿಳಿದೂ। ಗಂದುಗ್ರ ಯಾಲಕ್ಕಿ ಸಾಸವಿ ಮತ್ತೆ ಶ್ರೀ। ಗಂಧ ಕರ್ಪೂರ ಇಷಕೆಲ್ಲ ಕೇಳಿ। ಕಂದರ್ಪ ಪುರುಷೋತ್ತಮ ತೈಲ ಪಕ್ವಕ್ಕೆ। ಇಂದ್ರಜ ಅಧೋಕ್ಷಜ ದೇವ- ತಿಯೂ। ಸಂದೀದ ಕೂಷ್ಮಾಂಡ ಪರಿಶುದ್ಧ ತಿಲಮಾಷ। ದಿಂದ ನಿರ್ಮಿತಕ್ಕೆ ದಕ್ಷ ನರಸಿಂಹನೆ। ರಂಧ್ರವುಳ್ಳ ಭಕ್ಷಮಾಷ ಮಿಕ್ಕಾದದಕೆ ಸ। ಬಂಧ ವಾಗಿಹ ಮನು ಅಚ್ಯುತದೇವಾ। ಸೈಂಧವ ಸಂದಿಜಕೆ ನಿರುಋತಿ ಪ್ರಾಣ ಉ। ಪೇಂದ್ರನು ಜನಾರ್ದನ ಯುಕ್ತ ಕ್ರಮದಲ್ಲಿ। ತಂದಿಡುವ ತಾಂಬೂಲ ಸ್ವಾದೋದಕವಲ್ಲಿ। ಮಂದಾಕಿನಿ ಸೌಮ್ಯ ಹರಿ ಕೃಷ್ಣನೋ। ಒಂದೊಂದು ಅಭಿಮಾನಿ ಒಂದೊಂದುಮೂರ್ತಿ ಮು। ಕುಂದನ ಪ್ರೇರಣೆಯಿಂದ ಪೇಳಿದೆ, ಮಂದರಾದ್ರಿಧರ ವಿಜಯವಿಠ್ಠಲ ಕರುಣಾ। ದಿಂದ ಸುಳಿದಾಡುವ ಸವಿದು ತೃಪ್ತನಾಗಿ ॥೧॥

ಅಟ್ಟತಾಳ

ಪುಷ್ಕರ ರತಿ ಹಂಸನಾಮಕ ಪರಮಾತ್ಮ। ವಿಶ್ವನು ಪಾವಕ ಶುದ್ಧಿಗೆ ಸ್ವಾದು ರಸಕೆನ್ನಿ। ವಸುಜೇಷ್ಟ ವಸಂತ ವಲಿಗೆ ಗೋಮಯ ಪಿಂಡ, ಕೊಸತಿ ಯುಗಿಪ್ಪರು ಭಾರ್ಗವ ಋಷಭನು । ಅಸಮಾ ಗುಣದೇವಿ

ಪಾಕಕರ್ತೃಗಳಿಗೆ। ವಿಶ್ವಂಭರದೇವ ಅಲ್ಲಿ ವಾಸಾ। ವಸುಧಿ ವರಾಹ ನೈವೇದ್ಯ
ಮಂಡಲದಲ್ಲಿ । ಎಸವ ಮೇಲು ಭಾಗಕೆ ವಿಘ್ನೇಶ್ವರ ಕುಮಾರ। ಮಿಸು
ಣಿಪ ವರ್ಣಕೆ ವಿಷ್ವಕ್ಸೇನ ಪು। ರುಷನಾಮಕ ಭಗವಂತನ ಚಿಂತಿಸು ।
ಎಸಳು ತುಳಸಿಗೆ ಶ್ರೀದೇವಿ ಕಪಿಲ ರಂ। ಜಿಸುವ ಪಾತ್ರಿಯಲ್ಲಿ ವಾರುಣಿ
ಆನಂದ । ಬೆಸಸೂವೆ ಭೋಜನಪಾತ್ರಿ ವ್ಯಂಜನಕೆ ಶೋ। ಭಿಸುವರು
ದುರ್ಗಾ ಸೌಪರ್ಣಿ ಸತ್ಯಾದತ್ತ । ಮಶಕಾದಿ ಸ್ಪರ್ಶದೋಷ ಪರಿಹಾರಕ್ಕೆ।
ಶ್ವಶನಮುದ್ರೆ ಎನಬೇಕು ತಾರ್ಕ್ಷ್ಯಮುದ್ರೆಯು । ವಿಷನಿವಾರಣಾರ್ಥ
ತೋರಿಸಬೇಕು ಶುಭ। ರಸ ಸಿದ್ಧಿಗೆ ಧೇನುಮುದ್ರೆ ತೋರಿಸಬೇಕು। ಬಿಸಿಜ
ಮುದ್ರೆಯು ಶೋಧನಾರ್ಥವು ಸು। ದರ್ಶನಮುದ್ರೆಯು ರಕ್ಷಣಾರ್ಥ ಶಂಖ
ಗದಾ ಕ। ಲಶ ಮುದ್ರೆಗಳು ತೋರಿಸಬೇಕು ಚೆನ್ನಾಗಿ। ದಶ ದಿಗ್ಬಂಧನ
ಅಮೃತಬಿಂದು ಪವಿತ್ರಕೆ। ಬೆಸಸೆ ತಿಳಿದು ಮತ್ತೆ ಹಂಸಮುದ್ರೆಯು।
ಪೆಸರುಗೊಳಲಿಬೇಕು ಎಲ್ಲಿ ಬೇಕಾದಲ್ಲಿ। ಕುಶಲಮಂತ್ರ ಜ್ಞಾನಪೂರ್ವಕ
ದಿಂದ ಚಿಂ। ತಿಸಬೇಕು ನಾನಾ ಪದಾರ್ಥದ ವೈಭವ। ಅಸು ಕರಣ ಕಾಯ
ಭೇದನರಿತು ತು। ತಿಸಬೇಕು ಹರಿಯ ಈಸರಿಯಲ್ಲಿ ಸ್ವತಂತ್ರ ನಿ। ರ್ದೋಷ
ಗುಣಪೂರ್ಣ ನಿಸ್ಪೃಹ ಸಾರಭೋಕ್ತ ಅಪ್ರಮೇ। ಯ ಸತ್ಯಸಂಕಲ್ಪಕರುಣಾ
ಸಿಧಿ ಭಕ್ತ। ವತ್ಸಲ ನಾರಾಯಣಾತ್ಮಕ ಅಂಶಿ । ಅಂಶಾವತಾರಾವೇಶ
ದ್ರವ್ಯಸ್ತ್ರಪೂರ್ತಿ। ಉಸರಿಕ್ಕದೆ ನಿನ್ನ ದಾಸನೆಂದು। ಪುಶಿಯಲ್ಲ ಪುಶಿಯಲ್ಲ
ಪುಶಿಯಲ್ಲ ಎನುತಲಿ। ವಶವಾಗಿ ಇಪ್ಪ ದೇವನ ನೀಕ್ಷಿಸಿ। ಹಸುಳೆ ಎಂದದಲಿ
ಪರಮೋತ್ಸಹ ವಿಡಿದು ಸಾ। ಧಿಸು ಗುಣರೂಪ ಕ್ರೀಯಾದ ಸಮರ್ಪಣೆ ।
ಅಸುರ ಸಂಹಾರ ನಮ್ಮ ವಿಜಯವಿಠ್ಠಲರೇಯಾ। ವಿಷಯಂಗಳಿಗೆ ದೂರ
ಅನಾದಿ ಸ್ವಭಾವಾ ॥೪॥

ಆದಿತಾಳ

ರತ್ನಮಂತ್ರ ವಿಷ್ಣು ಸಹಸ್ರನಾಮ ತಂತ್ರಿಕ। ಚಿತ್ತ ಶುದ್ಧನಾಗಿ
ಮೂರು ಪ್ರಕಾರದಲ್ಲಿ। ತತ್ವಜ್ಞಾನದಿಂದ ಅಲ್ಪಜ್ಞ ನಾನು ಎಂದು। ತುತಿಸಿ
ಮಂಗಳಮೂರ್ತಿಗೆ ನೈವೇದ್ಯ। ಉತ್ತಮ ಗುಣವುಳ್ಳ ಹವಿಸ್ಸು ಪರಮ
ಪಾ। ವಿತ್ರ ಸ್ವಾದು ಸುಗಂಧ ಹವ್ಯಭಾವಕ್ರಿಯಾದಿ।ಅತ್ಯಂತ ವಿಶುದ್ಧ ಮನೋ
ಹರ ಅ। ಮೃತವಾಗಿಹ ಸತ್ಯ ಭೋಗದ್ರವ್ಯ ಹರಿಯ ಮುಂಭಾಗದಲ್ಲಿ।

ನಿತ್ಯ ಹೀಗೆ ಚಿಂತಿಸಿ ಪರಮಾನ್ನ ಹರಿದ್ರಾನ್ನ । ಚಿತ್ರಾನ್ನ ಮುದ್ಗಾನ್ನ ಅಪೂಪ ವಿಧಗಳು । ಮತ್ತೆ ಕದಳಿ ಫಲ ಸಂಬ್ರಾಣ ಸುಫಲ ಪಕ್ವ । ತಥ್ಥಳಿಸುವ ಕಂದಮೂಲ ವ್ಯಂಜನ ನಾನಾ । ವಸ್ತು ಗೋಘೃತ ಮಿಶ್ರಾ ಫಲ ಮೊದಲಾದವು । ತತ್ತತ್ಸ್ಥಾನದಲಿ ಇಡಿಸಿಕೊಂಡು ಸರ್ವ । ಕರ್ತೃ ನೀನೆ ಎಂದು ಮೇರುಮುದ್ರೆ ತೋರಿಸಿ । ಭೃತ್ಯ ಇತ್ತದ್ದು ಕೈಕೊಳ್ಳಬೇಕೆಂದು ಚಿಂತಿಸು । ಪ್ರತ್ಯೇಕ ಪ್ರತ್ಯೇಕ ಧ್ಯಾನದಿಂದಲಿ ತಿಳಿದು । ತತ್ತದ್ರಸ ಸಂಯೋಗ ವಿಭಾಗ ಯೋಚಿಸು। ಸತ್ವ ರಾಜಸ ತಮೋಗುಣದಿಂದ ಷಡುರಸ ಇ। ಪ್ಪತು ನಾಲ್ಕು ರಸ ಅದರೊಳಗಿಪ್ಪವು । ಉತ್ತಮರಸ ಎರಡು ಎಂದಿಗೆ ನಾಶವಿಲ್ಲ। ವ್ಯಾಪ್ತವಾಗಿಪ್ಪವು ಆದಿಮಧ್ಯಾಂತದಲ್ಲಿ । ಸುತ್ತುವ ಮನಸು ನಿಲ್ಲಿಸಿ ಸಾಧನದಲ್ಲಿ ಮಾನು । ಷೋತ್ತಮ ಮಾಡಬೇಕು ಅನಪರೋಕ್ಷಕಾಲಕೆ । ಸತ್ಯ ಸಂಕಲ್ಪನೆಂದು ಮೌನವಿಡಿದು ಪೂರ್ವ । ಉತ್ತರಾಪೋಶನ ವಿಧಿ ಆಚಮನಾ ನೀಯೊ । ಪ್ರತ್ಯಕ್ಷವಾಗಿದ್ದ ಗ್ರಹಮೇಧಿ ಯಾದವ । ನಿತ್ಯ ಈಪರಿಯಿಂದ ಚರಿಸಬೇಕು ಚನ್ನಾಗಿ । ತುತ್ತು ತೊರದು ಗುಹಾಶೇರಿದವನಾದರು । ಹೊತ್ತುಹೊತ್ತಿಗೆ ಕೊಂಬ ಆಹಾರ ಅರ್ಪಿಸಬೇಕು। ಉತ್ತಮ ಮಧ್ಯಮ ಅಧಮರ ಬಗೆ ಬೇರೆ । ಆತ್ಮ ಭಜನೆಯೊಳಗೆ ಸರ್ವವು ಇದ್ದ ತೆರದಿ । ಚಿತ್ತದಲ್ಲಿ ಸರ್ವವು ಎಣಿಸಿ ಉಣಿಸಲಿಬೇಕು। ಹತ್ತದು ಮನಸಿಗೆ ಒಮ್ಮೊಂದೊಮ್ಮೆಲೆಗು । ಕೋತ್ಕರ್ಷಣೆ ಮಾಡಿದರೆ ಸುಲಭವಾಗಿಪ್ಪವು । ನಿತ್ಯಾನಂದ ನಮ್ಮ ವಿಜಯವಿಠ್ಠಲರೇಯಾ । ಅರ್ಥಿಯಿಂದಲಿ ಸಾಲಿಗ್ರಾಮಾದಿಯಲ್ಲಿ ಉಂಬ॥೫॥

ಜತೆ

ಸ್ವಲ್ಪ ಪೇಳಿದೆ ಇದೆ ಬಿಡದೆ ಚಿಂತಿಸು ಅಹಿ । ತಲ್ಪ ವಿಜಯವಿಠ್ಠಲ ಗರ್ಪಿಸೆ ಕೈಕೊಂಬಾ ॥೬॥

ಸುಳಾದಿ ೪೫

ಬಾಹ್ಯದಲ್ಲಿ ನೈವೇದ್ಯಪ್ರಕರಣದಂತೆ ಧ್ಯಾನೋಪಾಸನಕ್ಕೆ ಸಂಬಂಧವಾದ ಸುಳಾದಿ ೨೩ಕ್ಕೆ ಸಮ್ಮತವಾದದ್ದು

ರಾಗ ಭೈರವಿ ಧ್ರುವತಾಳ

ಅನ್ನಾಭಿಮಾನಿ ಚಂದ್ರ ಅಲ್ಲಿ ಕೇಶವ ಪರ । ಮಾನ್ನದಲ್ಲಿ ಭಾರತೀ ನಾರಾಯಣ । ಪೂರ್ಣಭಕ್ಷಗಳಲ್ಲಿ ಸೂರ್ಯ ಮಾಧವ ಘೃತಕೆ । ಕನ್ಯಾ

ಲಕುಮಿ ಅಲ್ಲಿ ಗೋವಿಂದನೋ । ಬೆಣ್ಣೆ ಪಾಲಿನಲ್ಲಿ ಸರಸ್ವತಿ ವಿಷ್ಣು ಶಿರೋ । ರನ್ನ । ಮಂಡಿಗಿಯಲ್ಲಿ ವಾಗೀಶ ಮಧುಸೂದನ । ಬೆಣ್ಣೆಯಲ್ಲಿ ವಾಯು ಅಲ್ಲಿ ತ್ರಿವಿಕ್ರಮಾ । ಘನ್ನ ದಧಿಯಲ್ಲಿ ಚಂದ್ರ ವರುಣ ವಾಮನ । ಚನ್ನ ಸೂಪಿನಲ್ಲಿ ಗರುಡ ಶ್ರೀಧರದೇವ । ಮುನ್ನೆ ಪತ್ರ ಶಾಖ ಮಿತ್ರನು ಹೃಷಿಕೇಶ ಇನ್ನು ಫಲಶಾಖಗಳಲ್ಲಿ ಸರ್ಪ ಪದುಮನಾಭ । ಬಣ್ಣಿಪೇ ಆಮ್ಲದಲ್ಲಿ ಪಾರ್ವತಿ ದಾಮೋದರ । ಅನ್ನಾವ್ಲಪತಿ ರುದ್ರ ಅಲ್ಲಿ ಸಂಕರುಷಣ । ಕಣ್ಣಿಗೆ ಇಂಪಾದ ಸಕ್ಕರಿಯಲ್ಲಿ ಸುರವ । ರೇಣ್ಯ ಇಂದ್ರನು ತದ್ಗತ ವಾಸುದೇವ । ಪನ್ನಗ ಶಾಯಿ ನಮ್ಮ ವಿಜಯವಿಠ್ಠಲರೇಯನ ಪಾ । ವನ್ನ ಮೂರ್ತಿಯ ನೆನಸಿ ಪವಿತ್ರ ನೀನಾಗೊ ॥೧॥

ಮಟ್ಟತಾಳ

ಪರಿಪರಿ ಸೋಪಸ್ಕಾರದಲ್ಲಿಗೆ ಅಭಿಮಾನಿ । ಪರಮೇಷ್ಠಿ ಎನ್ನಿ ಆತಗೆ ಪ್ರದ್ಯುಮ್ನ । ತರುವಾಯ ಕಟುದ್ರವ್ಯಕ ಯಮರಾಯಾ । ಇರುತಿಪ್ಪನು ಅಲ್ಲಿ ಅನಿರುದ್ಧ ಮೂರುತಿ ದೇವರು । ಸರಕು ಸಂಭಾರಗಳು ಇಂಗು ಸಾಸಿವಿ ಏಳಾ । ಮರೀಚಿ ಜೀರಿಗಿ ಮೊದಲಾದ ಕರ್ಪುರ ಚಂದನ ಕೇ । ಶರ ಮೊದ ಲಾದ ಬಗೆಬಗೆ (ಪರಿಪರಿ) ವಿಧವಾದ । ಪರಮಳದ್ರವ್ಯಕ್ಕೆ ಮನುಮಥ ಅಧಿಪತಿ । ಪುರುಷೋತ್ತಮದೇವನು ವಾಸವಾಗಿಹನಯ್ಯಾ । ಪರೀಕ್ಷಿಸು ತೈಲ ಪಕ್ವ ಜಯಂತಾ । ವರ ಅಧೋಕ್ಷಜ ಮೂರ್ತಿ ಪೊಂದಿಕೊಂಡು ನಿತ್ಯ । ಮರಳೆ ಸಂಡಿಗಿಯಲ್ಲಿ ದಕ್ಷಪ್ರಜೇಶ್ವರಾ । ನರಹರಿ ಅಲ್ಲಿಪ್ಪ ಅದ್ಭುತ ಕಾರ್ಯನು । ಅರೆಮರೆ ಇಲ್ಲದೆ ಉದ್ದಿನ ಭಕ್ಷದಲಿ । ಇರುತಿಪ್ಪನು ಮನು ಅಲ್ಲಿ ಅಚ್ಯುತಮೂರ್ತಿ । ಸುರುಚಿ ಲವಣದಲ್ಲಿ ನಿಋುಋುತಿ ಜನಾರ್ದನ । ಸ್ಥಿರವೆನ್ನಿ ಲವಣ ಶಾಖಕ್ಕಭಿಮಾನಿ । ಮರೀಚಿ ಪ್ರಾಣನು ಅಲ್ಲಿ ಉಪೇಂದ್ರ ಭಗವಂತ । ಪರಮ ಶೋಭಿತ ತಾಂಬೂಲದ್ರವ್ಯಕೆ ಗಂಗಾ । ಹರಿನಾಮಕ ದೇವ ಸ್ವಾದೋದಕದಲ್ಲಿ । ತರಣಿ ಸಮನ ಪುತ್ರ ಶ್ರೀಕೃಷ್ಣನು ಎನ್ನಿ । ಸುರರ ಮಸ್ತಕಮಣಿ ವಿಜಯವಿಠ್ಠಲರೇಯಾ । ಸ್ಮರಿಸಿದ ಸುಜನಕೆ ತಿಳಪುವ ಇದರಂತೆ ॥೨॥

ತ್ರಿವಿಡಿತಾಳ

ಪಾಕಶುದ್ಧಿಗೆ ಪುಷ್ಕರ ಹಂಸನಾಮಕದೇವ । ಬೇಕಾದ ಸ್ವಾದ ರಸಗಳಿಗೆ ರತಿ ವಿಶ್ವಾ । ಕಾಕುಲಾತಿ ಸಲ್ಲ ವಲಿಗೆ ಪಾವಕ ಭೃಗು ; ನೀ ಕೇಳು ಶುಷ್ಕ ಗೋಮಯ ಪಿಂಡಕ್ಕೆ ಈರ್ವರ । ಓಕುಳಿನಾಮಕ ವಸಂತ ಋಷಭನು । ಪಾಕಕರ್ತಳು ಶ್ರೀದೇವಿ ವಿಶ್ವಂಭರ ವೇ । ದಿಕ ಮಂಟಪ ಸಹ ಭೂದೇವಿ ಸೂಕರ । ಆಕಾಶಭಾಗಕ್ಕೆ ಗಣಪತಿ ಕುಮಾರ । ಶ್ರೀಕಾಂತ ನೀತನೊ ಆವರ್ಣಕ್ಕಭಿಮಾನಿ । ಸಾಕಾರವಾಗಿದ್ದ ವಿಷ್ವಕ್ಸೇನ ಪುರುಷಾ । ಲೋಕ ಪವಿತ್ರ ತುಲಸಿಯಲ್ಲಿ ರಮಾ ಕಪಿಲ । ರಾಕೇಂದುವಿನಂತೆ ಪಾಕ ಪಾತ್ರಿಗೆ ಕೇಳು । ಕಾಕೋದರನರಾಣಿ ವಾಣಿ ಅನಂತಾ (ಅನ್ನದಾ) । ಲೋಕಾಂಬಕನಂತೆ ಪೊಳೆವ ಭೋಜನಪಾತ್ರಿಗೆ । ಲೋಕಜನನಿ ದುರ್ಗಾ ಹರಿರಾಣಿ ಸತ್ಯ । ಶೋಕ ಕಳೆವ ನಾನಾ ಮಾಟ ತಿದ್ದಿದ ಮಾ । ಣಿಕಮಯ ಬಟ್ಟಲಿಗೆ ಸೌಪರ್ಣಿದತ್ತನು । ಶ್ರೀಕಳತ್ರ ನಮ್ಮ ವಿಜಯವಿಠ್ಠಲರೇಯ ವೀ । ವೇಕವಂತರ ಚಿತ್ತದಲ್ಲಿ ಕೈಕೊಂಬನು ॥೩॥

ಅಟ್ಟತಾಳ

ಓದನ ಸರಸ್ವತಿ ಪರಮೇಷ್ಠಿ ಮಾಳ್ಪರು । ಶ್ರೀದೇವಿ ಚೆನ್ನಾಗಿ ಸೂಪಾ ಮಾಳ್ಪಳು ಕೇಳಿ । ಆದಿ ಜಗದ್ಗುರು ಭಕ್ಷಮಾಳ್ಪನು ರುಚಿ । ಯಾದ ಪರ ಮನ್ನ ಭಾರತಿ ಮಾಳ್ಪಳು । ಸ್ವಾದ ಶಾಖ ಫಲಶಾಖಾದಿಗಳು ಇಂದ್ರಾದಿ ಶ । ಚ್ಯಾದ್ಯರು ಮಾಡುವರು ಇನಿತು । ಮಾಧವನ ಮುಂದೆ ನೈವೇದ್ಯ ಇಡ ಬೇ । ಕಾದ ಲಕ್ಷಣ ತಿಳಿ ತಾರತಮ್ಯ ದಿಕ್ಕು । ಭೇದಗಳಿಂದಲಿ ಅಗ್ನಿ ಕೋಣೆಗೆ ಭಕ್ಷಾ । ಐದುಮೌಳಿಯದಿಕ್ಕಿನಲ್ಲಿ ಪರಮನ್ನಾ । ವಾದ ವಿಲ್ಲದೆ ನೈಋತ್ಯ ಕೋಣೆಲಿ ಲೇ । ಹ್ಯಾದಿಗಳಿಡಬೇಕು ಭೂತವಾಯುವಿನಲಿ । ಆದರಿಸಿ ವ್ಯಂಜನ ಪದಾರ್ಥಂಗಳು । ಮೋದದಲಿ ಇಟ್ಟು ಇದರ ಮಧ್ಯದಲ್ಲಿ । ಓದನ ಪಾತ್ರೆಯ ಇಡಬೇಕು ಪರಮಾನ್ನ । ಓದನದೆಡೆಯಲ್ಲಿ ಘೃತಪಾತ್ರದಧಿ ಮೊದ । ಲಾದವು ಸ್ಥಾಪಿಸಿ ಬದಿಯಲ್ಲಿ ತಾಂಬೂಲ । ಸ್ವಾದೋದಕವಿಟ್ಟು ದೇವಂಗೆ ಕೈಮುಗಿದು । ವೇದ ಮಂತ್ರಗಳಿಂದ ತುತಿಸಿಕೊಂಡಾಡುತ । ಬೋಧ ಮೂರುತಿ ನಮ್ಮ ವಿಜಯವಿಠ್ಠಲರೇಯ । ಆದಿ ಪೊರಬೊಮ್ಮ ಆತ್ಮ ನೆಂದು ನೆನಿಸೊ (ತಿಳಿಯೊ) ॥೪॥

ಆದಿತಾಳ

ಭೋಜನ ಪಾತ್ರೆ ಮಂಡಿಸಿ ಮೊದಲು ದಿವ್ಯಾನ್ನ ವಿ । ರಾಜಿಸುವ ಲವಣ ವ್ಯಂಜನಾದಿ ದ್ವಿತಿಯದಲ್ಲಿ।ಮೂಜದೆ ಸಾರುವೆ ಇದರ ತರುವಾಯಾ। ತೇಜವಾಗಿದ್ದ ಭಕ್ಷ ಸರ್ವವು ಇಡಬೇಕು । ಮೂಜಗತ್ಪತಿ ರಂಗಾ ಇನಿತು ಕೈಕೊಂಬನೆಂದು । ನೈಜಭಾವದಿಂದ ಚಿಂತಿಸಬೇಕು ನೋಡಿ । ಭೋಜ್ಯ ಭೋಜಕ ಭೋಕ್ತಾ ಭೋಗನು ಹರಿ ಎಂದು । ಪೂಜ್ಯ ಪೂಜ್ಯಕನೆಂದು ಅಂತರ ಮುಖನಾಗೋ । ಈ ಜಡ ದ್ರವ್ಯದಿಂದ ತೃಪ್ತಿಯಾಗುವದೆಂತೊ । ರಾಜೀವ ನೇತ್ರ ಕೃಷ್ಣ ಹೊರಗೆ ಒಳಗೆ ಇಪ್ಪ । ವ್ಯಾಜ ರಹಿತನಾಗಿ ಮಾಡೆಲೊ ಮಾಡೆಲೊ । ರಾಜ ಪದವಿ ಉಂಟು ಎಂದಿಗೂ ನಾಶವಿಲ್ಲಾ । ಬೀಜ ಮಾತು ಪೇಳುವೆ ಹಲವು ಹಂಬಲಸಲ್ಲಾ । ಮೂಜಗದೊಳಗಿದ್ದ ವರ್ಣಂಗಳು ಶುಭ್ರ । ರಾಜಸ ಭಾಗ ಮತ್ತೆ ಪೀತ ಕಪ್ಪು ಪದಾರ್ಥ । ರಾಜಿಸುತಿಪ್ಪ ನಾಲ್ಕು ಬಗೆ ದ್ರವ್ಯಾಭಿಮಾನಿ । ರಾಜೀವ ಪೀಠ ವಾಯು ಸರಸ್ವತಿ ಭಾರತಿ । ರಾಜಶೇಖರ ಮೊದಲಾದ ತತ್ವದಲಿದ್ದ । ಸುಜನರು ಕೇಳಿ ಶುಭ್ರಾದಿ ವರ್ಣಕ್ರಮಕೆ । ಪೂಜಿವಂತರು ಅಲ್ಲಿ ವಾಸುದೇವ ಸಂಕರುಷಣ । ರೈ ಜನಕ ಪ್ರದ್ಯುಮ್ನ ಅನಿರುದ್ಧ ಮೂರ್ತಿವಾಸ । ಆ ಜನ್ಮಾರಭ್ಯವಾಗಿ ಇದೇ ಮಾತ್ರ ತಿಳಿದು ಮಹಾ । ರಾಜಾಧಿ ಲೋಕದಲ್ಲಿ ವಾಸವಾಗುವದು । ರಾಜ ರಾಜಾಪ್ತ ಪ್ರಿಯ ವಿಜಯ ವಿಠ್ಠಲ ಪರಮಾ । ಸೋಜಿಗನು ಕಾಣೋ ಸಾಲಕಾಮಂಥ ಹರಣಾ ॥೫॥

ಜತೆ

ಚಿಂತನೆ ಪ್ರಕಾರ ವಿನಿಯೋಗ ಮಾಡು ಶ್ರೀ । ಕಾಂತ ವಿಜಯ ವಿಠ್ಠಲ ಕೃಷ್ಣಗೆ ಪದಾರ್ಥಗಳಾ ॥೬॥

ಶ್ರೀ ಗೋಪಾಲದಾಸರ ಸುಳಾದಿ ೪೬

ಚಲಾಚಲಗಳಲ್ಲಿ ಸರ್ವ ಕ್ರಿಯಾದಲ್ಲಿ ಅದ್ವೈತ್ರಯವಾದ ಶ್ರೀಹರಿಕರ್ತೃತ್ವ ನಿಯಾಮಕನೆಂದರಿತು ಸಕಲರೂಪಬಿಂಬನಲ್ಲಿಐಕ್ಯಚಿಂತಿಸಿಧ್ಯಾನೋಪಾಸನಕ್ರಮ

ರಾಗ ರೇಗುಪ್ತಿ ಧ್ರುವ ತಾಳ

ಧ್ಯಾನ ಮಾಡು ಮನವೆ ದೈನ್ಯ ವೃತ್ತಿಯಲ್ಲನ್ನು । ಜ್ಞಾನವಂತನಾಗಿ ಗೆದ್ದು ವಿಷಯಾ । ಹಾನಿಲಾಭಗಳಿಗೆ ಹರುಷ ಕ್ಲೇಶವು ಬಡದೆ।ಜಾಣತನದಿ

ಚಿಂತಿಸು ಜಗದೀಶನ್ನ । ನಾನು ಎಂಬೋದು ಬಿಟ್ಟು ನಿತ್ಯದಲ್ಲಿ ಇನ್ನು । ಜ್ಞಾನ ಪೂರ್ಣ ಶ್ರೀ ಹರಿಯ ಧೇನಿಸಿನ್ನು । ಯೋನಿ ಎಂಭತ್ತು ನಾಲ್ಕು ಲಕ್ಷ ಬಂದ ಕಾಲಕ್ಕು । ನೀನು ಪಕ್ವ ಬಾರದಾ ಗತಿಯುಯಿಲ್ಲಾ । ಕಾಣೆ ನಿನಗೆ ಮುಖ್ಯ ಸಾಧನ ಸಂಪತ್ತು । ಮಾನವ ಯೋನಿಯಲ್ಲೆ ಘಳಿಸ ಬೇಕು । ಕ್ಷೋಣಿಯೊಳಗೆ ಈ ಜನ್ಮ ಬಪ್ಪದೆ ದುರ್ಘಟ । ಶ್ರೀ ನಾಥನ ಕಾರುಣ್ಯವೆಂದು ತಿಳಿಯೋ । ಶ್ವಾನ ಸೂಕರ ನಾನಾ ಯೋನಿ ಬಂದಕಾಲಕ್ಕೂ । ಮಾನಿಸನಾಗೆ ಚಿಂತಿಸಲಿ ಬೇಕು । ಜ್ಞಾನ ಅಲ್ಲಿ ದೊರಿಯದು ಕುಚ್ಛಿತಯೋನಿಯಲ್ಲಿ । ನಾನಾ ಭವಣೆಯುಂಟು ನಾಯೇನೆಂಬೆ । ನಾನಾಕು ಜೀವರಿನ್ನು ನಾಲ್ಕು ಬಗೆಯ ಕರ್ಮ । ತಾವು ಮಾಡುತಿಹರೊ ದೇಹಧಾರಿಗಳಾಗಿ। ಕಾಣಿಸುವರು ಯೆಲ್ಲಾ ಜಗದ ವೊಳಗೆ ಇನು । ಜ್ಞಾನ ಮಾತ್ರ ನೀಪಿಡಿದು ಕುಳಿತುಕೋ । ಗೇಣು ಮೊಳವು ಅಣುರೇಣು ಸ್ಥಳದ ಪರಿ । ನಾನಾ ದೇಹಧಾರಿಗಳಿಂದ ಅಗುವ ಕರ್ಮ ಕಾಣೋ । ನಿನ್ನಲ್ಲಿ ಇದ್ದು ಸ್ವಾಮಿ ಮಾಡಿಪನೆಂದು । ಖೂನ ಪಿಡಿದು ಕುಣಿಕುಣಿದಾಡೋ । ನಾನು ಅಸ್ವತಂತ್ರ ನನ್ನಂತೆ ಅವರೆಂದು । ಕಾಣು ಅಲ್ಲಿ ವ್ಯಾಪಾರ ಹರಿಯೆ ಎಂದು। ಮಾನವಾ ಬಿಟ್ಟು ಮುಮತೆಯಲ್ಲಿ ನಮೋಯೆಂದು। ಪ್ರಾಣನಾ ಸಾಕ್ಷಿಯಾಗಿ ಹರಿಗರ್ಪಿಸು । ಹೀನರಲ್ಲಿ ದಯಾಘನರುಗಳಲ್ಲಿ ಸೇವೆ।ನೀನು ಅಂತು ಮಾಡು ನಿತ್ಯದಲ್ಲಿ । ದೀನ ಜನ ಬಂಧು ಗೋಪಾಲ ವಿಠ್ಠಲನ್ನ । ಕಾಣು ಚೇತನಾ ಚೇತನದಿ ಇಪ್ಪನೆಂದು ॥೧॥

ಮಟ್ಟತಾಳ

ಭಾವಾದ್ವೈತ ಕ್ರೀಯಾದ್ವೈತ ದ್ರವ್ಯಾದ್ವೈತ । ಇವು ಮೂರನ್ನೆ ದೇವನಲ್ಲಿ ಇಪ್ಪವೆಂದು ಅರಿದುನೋಡು । ಆವಾವಲ್ಲಿ ಚಿಂತಿಸು ಬಿಡದೆ । ಕಾವಾ ಕೊಲ್ಲುವಲ್ಲಿ ಈವಲ್ಲಿ ಕೊಂಬಲ್ಲಿ । ಧಾವತಿಗಳಲ್ಲಿ ಸುಲಭ ಸೂಕ್ಷ್ಮದಲ್ಲಿ । ಭಾವ ಕ್ರೀಯ ದ್ರವ್ಯ ದೇವ ದೇವ ಎಂದು । ನೀ ವಿವೇಕದಿ ನೀಚ ಊಚ ಕ್ರಮದಿ । ಜೀವಿಗಳ ಗತಿಯು ಜಿತವಾಗಿ ಅರಿತು । ಭಾವ ಶುದ್ಧದಲ್ಲಿ ಭಕುತಿ ಪೂರ್ವಕದಿಂದ।ನೀವೊಲಿ ವೊಲಿದು ತಿಳಿದು ವೊಲಿಸಿ ವೊಲಿಸಿ ಪಾಡು। ಸೇವ್ಯ ಸೂತ್ರವು ನಿಂದ್ಯ ನೋವು ದಂಡನೆಯುಲ್ಲಾ । ದೇವ ಪೂಜ್ಯ ಎಂಬ ಭಾವ ಕ್ರೀಯೆವ ಘಳಿಸು । ಆವ ವಿಷಯದಲ್ಲಿ ದೇವಾ ದೇವರನ್ನ ।

ಸಾವಧಾನದಿ ಹುಡಿಕಿ ಪಾವನಾಂಗ ನಾಗೊ। ಕೋವಿದರ ಪ್ರಿಯ ಗೋಪಾಲವಿಠ್ಠಲ। ಕಾವ ನಿನ್ನ ಬಿಡದೆ ಆವಲ್ಲಿ ಇದ್ದರು ॥೨॥

ರೂಪಕ ತಾಳ

ನೋಡಿಸಿದರೆ ನೋಡು ಆಡಿಸಿದರೆ ಆಡು। ಕೂಡಿಸಿದರೆ ಕೂಡು ಓಡಿಸಿದರೆ ಓಡು। ಬೇಡಿಸಿದರೆ ಬೇಡು ನೀಡಿಸಿದರೆ ನೀಡು। ಮಾಡಿಸಿದರೆ ಮಾಡು ವಿಹಿತ ಅವಿಹಿತಗಳು। ಕೇಡು ಎಂದು ತಿಳಿಯೊ ಅವಿಹಿತ ಮಾಡಿಸಿದರೆ। ಕೇಡು ಲಾಭಂಗಳು ಮಾಡಿಸಿದರೆ ನೀನು। ಮಾಡಿಸಿದರೆ ಕೇಡು ಬೇಡಿಕೋ ದೈನದಿ ಪಶ್ಚಾತ್ತಾಪನಾಗು। ನೋಡು ನಿನಗಾವ ವಿಷಯಂಗಳಲಿನ್ನು। ಮಾಡಿಸುವ ಅನುಭವ ಹರಿಯೆ ಎನ್ನು। ಕೂಡಿಸು ಯಾವತ್ತು ಜಡ ಚೇತನಗಳಲ್ಲಿ। ಗೂಡು ಮಾಡಿಟ್ಟಂಥ ಮೂರ್ತಿಗಳೆಲ್ಲ। ಕ್ರೋಡಿ ಕರಿಸಿ ಧ್ಯಾನ ಮಾಡು ನಿನ್ನ ಮನದಿ। ಕೇಡು ತೋರದು ನಿನ್ನ ಸಾಧನಕೆ। ಮೂಢ ಮತಿಯಲ್ಲಿ ಜಡ ಪ್ರತಿಮೆ ಪಿಡಿದು। ಮಾಡೊ ಅಲ್ಲಿ ಪೂಜೆ ಇದೆ ಬಗೆ ಚಿಂತಿಸು ಷೋಡಶ ಕಳೆಯುಳ್ಳ ಲಿಂಗದ ಒಳ ಹೊರಗೆ। ಮಾಡಿ ಮಾಡಿಸುವ ಹರಿಯ ಮಹಿಮೆ ತಿಳಿ। ನಾಡಿಗೊಡೆಯ ರಂಗ ಗೋಪಾಲ ವಿಠ್ಠಲ। ಈಡಿಲ್ಲದ ದೈವನ ನೋಡು ಮನದಿ ನಿಲಿಸಿ ॥೩॥

ಝಂಪೆತಾಳ

ಒಂದೆ ಪಿಡಿದು ಮತ್ತಾನಂತವ ಚಿಂತಿಸು। ಒಂದೆ ಚಿಂತಿಸು ಮತ್ತಾನಂತವೆಲ್ಲಾ। ತಂದುಕೋ ನಿನ್ನಲ್ಲಿ ಕ್ಷಣಕ್ಷಣಕೆ ಸ್ಮೃತಿಯನು। ಸಂದೇಹಬಿಟ್ಟು ಸರ್ವೋತ್ತಮನೆಂದು ಭಿ। ನ್ನಾದಿಯನು ತಿಳಿಯದಿರು ಹರಿ ಅಂಶಿ ಅಂಶಕ್ಕೆ। ಒಂದೊಂದೆ ಪೂರ್ಣಬಲವುಳ್ಳವೆಂದು। ಇಂದ್ರಿಯಗಳು ಎಲ್ಲ ಪೂರ್ಣಮಯಯೆಂತೆಂದು। ಒಂದು ರೂಪಕನ್ನ ಇಂದ್ರಿಯ ಭೇದವುಯಿಲ್ಲ। ಪೊಂದಿಪ್ಪವು ಕಪಿಲಾದಿ ನಾಮಗಳಿಂದ। ಗಂಧ ಆಘ್ರಾಣಿಸುತ ನೋಡುತ ಕೇಳುತ। ನಿಂದಿಪ್ಪವು ಪೂರ್ಣವಾಗಿ ತನ್ನ ಮನ। ಬಂದಂತೆ ಕ್ರೀಡೆಗಳನು ತೋರಿ। ಸಂದಿ ಸಂದಿಲಿ ಇನ್ನು ವ್ಯಾಪ್ತನಾಗಿ ಇನ್ನು। ಒಂದು ಪಿಡಿದು ನೋಡಿ ಆಡಿ ಕಂಡೇವೆನಲು। ಇಂದಿರೆಗೆ ತಿಳಿಯಲಾಗೋಚರವು। ಬಂದು ನಿಲ್ಲುವ ತತ್ತತ್ತ್ರ್ಯಗ್ಯತಿ ಅನುಸಾರ। ಸಂದರುಶನವಿತ್ತು ಸಲಹುವನೋ। ಒಂದು ಕೊಂಡು ಮತ್ತೊಂದು ಕೊಡುವನಲ್ಲ। ಒಂದು ಕೊಳ್ಳದೆ ಮತ್ತೆ।

ಈವನಲ್ಲಾ । ಒಂದುಕೊಟ್ಟರೆ ಮತ್ತೆ ಒಂದು ಕೊಡುವನಲ್ಲ । ಒಂದಕನಂತವ ಅನಂತಕೆ ಪೊಂದೀವಾ । ನಂದಮೂರುತಿ ರಾಮಗೋಪಾಲವಿಠ್ಠಲ । ಅಂದಿ ಕೈಗೆ ತೋರಿ ಅಂದದಂತೆ ಪೊಳೆವಾ ॥೪॥

ತ್ರಿವಿಡಿ ತಾಳ

ಮಾಡುವ ಕರ್ಮಉಂಟು ನೋಡುವ ಕರ್ಮಉಂಟು । ಬೇಡುವ ಕರ್ಮಉಂಟು ಮಾಡಿಸುವದುಂಟು । ಮಾಡಿ ಮಾಡಿಸುವರು ಸಾಂಶ ಸುರಾದಿ ದಿವಿಜರು । ಮಾಡುವರೂ ಮಾತ್ರ ನಿರಂಶವ್ರೂ । ನೋಡುವರೊ ಉತ್ತಮರು ಕರ್ಮಾಧಮರೊ । ಬೇಡಿ ಮಾಡುವ ಕರ್ಮ ಸರ್ವ ಜೀವರಿ ಗಿಂಟು । ಕೂಡುವ ಮಲಗುವ ಓಡುವ ನಿಲ್ಲುವ । ಮಾಡುವ ನಾಲ್ಕು ಕರ್ಮದೇಹಿಗಳು । ಮಾಡಿಸುವ ಹರಿಯೆಂದು ತಿಳಿಯಬೇಕು । ಮಾಡಿಸು ವರ ದಯ ಮಾಡುವರ ದಯ । ನೋಡುವರ ದಯ ಬೇಡು ನಿನಗೆ ಬೇಕು । ಮಾಡುವ ಕರ್ಮವು ಈ ಪರಿ ತಿಳಿಯದೆ । ಮಾಡಲು ಏನೇನು ಫಲಬಾರದು। ನಾಡನೆಲ್ಲವು ತಿರಿಗಿ ತೀರ್ಥಾದಿಗಳಮಿಂದು । ಮಾಡೆ ನಾನಾ ದಾನ ಯಜ್ಞಾದಿಗಳೆಲ್ಲ । ಕೂಡಿಸವು ಗತಿಗೆ ಎಂದೆಂದಿಗೂ । ಪಾಡಿದವರ ಪ್ರಾಣಾ ಗೋಪಾಲ ವಿಠ್ಠಲ । ಮಾಡಿ ಮಾಡಿಸುವಂಥ ಕರ್ತನರಿತು ಬಾಳು ॥೫॥

ಅಟ್ಟತಾಳ

ಮುಕ್ತಾ ಅಮುಕ್ತಾ ಚೇತನದೊಳಗೆಲ್ಲ । ನಿತ್ಯಾನಿತ್ಯ ಜಡಗಳವೊಳ ಗೆಲ್ಲ । ತತ್ತತದಾಧಾರಾ ಸತ್ವ್ರವರ್ತಿಯೊ । ನಿತ್ಯ ಮುಕುತಾ ನಿರ್ಲಿಪ್ತನಿರಾ ಶ್ರಯಾ । ಸತ್ವಾದಿ ರಹಿತ ನಿತ್ಯಾನಂದ ಮೂರ್ತಿ । ಚಿತ್ರ ಚಾರಿತ್ರ ವಿಮಲ ಜ್ಞಾನಪೂರ್ಣ । ಭಕ್ತವತ್ಸಲ ಬಂಧಕ ಮೋಚಕ ದೇವಾ । ರಕ್ತ ಶುಕ್ಲ । ಶಾಮದಳವರ್ನಾ । ತತ್ತಳಿಸುವ ಹರಿ ಮೂರ್ತಿಯ । ಸುತ್ತ ಪರಿವಾರ ನಿಲ್ಲಿಸಿ ನಿನ್ನಯ । ಹೃತ್ಕಮಲದಲ್ಲಿ ನಿತ್ಯ ವಾಸವಾದ । ನಿತ್ಯಮೂರುತಿಯನು ಚಿತ್ತಜನಯ್ಯಾ ಸ । ಪೊರ್ತಮ ಹರಿಯ ಮತ್ತೆ ಪೇಳಿದಂತೆ ಭಗವಂತ ತದ್ರೂರೂಪಾ । ಕತ್ಯಂತ ಅಭೇದ ಚಿಂತಿಸಿ ತುತಿಸಿ । ಪ್ರತ್ಯೇಕ ಪ್ರತ್ಯೇಕಧಿ ಷ್ಠಾನಗಳಲ್ಲಿ । ಭಕ್ತಿ ಪೂರ್ವಕದಿ ಎತ್ತಿ ಕರವ ಮುಗಿದ । ತ್ಯಂತ ಮಹಿಮನೆ ನಿತ್ಯಕಾಯೊ ಎಂದು । ಉತ್ತಮರ ಸಂಗ ಜತ್ತಾಗಿ ಮಾಡಿಸ್ನು । ಸತ್ಯ ಸಂಕಲ್ಪ ಗೋಪಾಲ ವಿಠ್ಠಲರೇಯಾ । ತುತ್ತ ಮಾಡಿಪ್ಪಂತೆ ಸಾಧನ ಮಾಡಿಪಾ ॥೬॥

ಆದಿತಾಳ

ಎಂತೆಂತು ಬಿಂಬನ ಚಿಂತನೆ ಮಾಡಲು । ಅಂತಂತೆ ಬರುವನು ಪ್ರತಿಬಿಂಬಕ್ಕೆ ಸ್ವಾ । ತಂತ್ರವೊಂದು ಮಾತ್ರ ಹೊರತಾಗಿ । ಚಿಂತಿಸಿ ನೋಡಲು ಜೀವ ಚಿದ್ರೂಪನು । ಸಂತೋಷಾದಿಗಳೆಲ್ಲ ಹರಿಯಾಧೀನ ನಿ । ರಂತರ ಪರಾಧೀನ ಜೀವ ಸ್ವಾಮಿ । ಭೃತ್ಯ ನ್ಯಾಯವೆಂದು ಉಪಾಸನೆ ಎದುರಿಲಿ। ಚಿಂತಿಸಿ ಕರಮುಗಿದು ಚಿಂತನೆ ಮಾಡಲು । ಸಂತೋಷದಲ್ಲಿ ಪ್ರಾಣದ್ವಾರಾ। ಚಿಂತಾಯುಕ ತಂತ್ರಮೂರ್ತಿ ತೋರಿ ಭವ । ಗ್ರಂಥಿಯು ಹರಿಸುವ ತಡವಿಲ್ಲದೆ । ಶಾಂತ ಮೂರುತಿ ನಮ್ಮ ಗೋಪಾಲ ವಿಠ್ಠಲ । ನಿಂತಲ್ಲೆ ನಿಧಾನವಾಗಿ ಉಣಿಸುವಾ

ಜತೆ

ಚಲ ಅಚಲಗಳಲಿ ಈ ಪರಿಧ್ಯೇನಿಸೆ । ಒಲಿವ ಗೋಪಾಲ ವಿಠ್ಠಲ ಇವಗೆ ಕರುಣದಲಿ ॥೮॥

ಸುಳಾದಿ ೪೭

ಆಪ್ತ ವ್ಯಾಪ್ತನಾದ ಬಿಂಬನ ಗುಪ್ತ ಉಪಾಸನೆಕ್ರಮ.
ಜೀವಬಿಂಬನೇವೆ ಸಕಲ ಜಡ ತತ್ವಾದಿಗಳಲ್ಲಿ ಸಕಲ ಚೇತನರಿಗೆ ಬಿಂಬನಾಗಿ
ಪ್ರವರ್ತಿಸುವ ಗುಣರೂಪ ಕ್ರಿಯಾದಿ ಬಿಂಬೋಪಾಸನೆ ವಿಷಯ
ಸಕಲ ರಸವಿಭಾಗ ಬಿಂಬಾರ್ಪಣ.

ರಾಗ ಕಾಂಬೋದಿ ಧ್ರುವತಾಳ

ಆವಾ ವಿಷ್ಣುನೆ ಜಿಂವದಂಗುಟ ಮಾತ್ರ ಮೂರ್ತಿ । ಆವಾ ವಿಷ್ಣುನೆ ಜೀವದಾಕಾರ ಮೂರುತಿ । ಆವಾ ವಿಷ್ಣುನೆ ಸರ್ವವ್ಯಾಪ್ತ ಮೂರುತಿ । ಆವಾ ವಿಷ್ಣುನೆ ಜೀವಕ್ಕಾವರ್ಕವಾದ ಮೂರುತಿ । ಆವಾ ವಿಷ್ಣುನೆ ಜೀವಾದಿಷ್ಠಾನ ದೇಹ ಮೂರುತಿ । ಆವಾ ವಿಷ್ಣುನೆ ಜಗದಾ ವ್ಯಾಪ್ತಿತ ಮೂರುತಿ। ಆವಾ ವಿಷ್ಣುನೆ ಮೂಲಾದವತಾರ ಮೂರುತಿ । ಆವಾ ವಿಷ್ಣುನೆ ಮಧ್ಯ ಅಜಾದಿ ಮೂರುತಿ । ಆವಾ ವಿಷ್ಣುನೆ ಜೀವಾ ಸರ್ವವಿಶ್ವಾದಿ ಮೂರುತಿ । ಆವಾ ವಿಷ್ಣುನೆ ಅನಂತವತಾರ ಮೂರುತಿ । ಆವಾ ವಿಷ್ಣುನೆ ಜೀವದ ಪ್ರತಿಪಾದ್ಯ ಮೂರುತಿ । ಆವಾ ವಿಷ್ಣುವಿನ್ನಧೀನವಾಗದ ಠಾವಿಲ್ಲ ಎಲ್ಲಿನೋಡಾ। ಆವಾ ವಿಷ್ಣು ಸರ್ವಜ್ಞ ಸಾಕಾರ ಜ್ಞಾನಾನಂದಾ । ಯಾವತ್ತು ಏಕಮೇವಾ

ದೇವಾ । ಶ್ರೀವಿಷ್ಣು ನಮ್ಮ ಸ್ವಾಮಿ ಗೋಪಾಲ ವಿಠ್ಠಲ । ಪಾವನ್ನ ಮೂರುತಿ ಪರಮ ಪುರುಷ ನೋಡು ॥೧॥

ಮಟ್ಟತಾಳ

ಪೃಥಿವಿ ಅಪ್ಪು ಅಗ್ನಿ ವಾಯುರಾಕಾಶವು । ತತು ತನ್ಮಾತ್ರಿ ಶಬ್ದಾದಿ ವಿಷಯಂಗಳು । ಜಿತ ತೈಜಸ ವೈಕಾರ ಸತು ಮಹಾ । ತತ್ವಾ ಹರಿಗೆ ಸ್ವರೂಪ ಭೂತಾ । ತತುಗಳು ಜಡವಲ್ಲ ಎಲ್ಲ ಆನಂದಮಯಾ । ಗತಿ ಕೊಡುವವು ಒಂದಕ್ಕೆ ಒಂದೊಂದೆ ಪೂರ್ಣಾ । ಖತಿಗೊಳಿಸುವವಲ್ಲ ಖಂಡ ಖಂಡವಲ್ಲಾ । ಚತುರವು ಇವು ಬಲು ಹರಿಯೆ ಇವು ಎನ್ನಿ । ಸತತ ತಾತನ್ನ ಸ್ವರೂಪಭೂತ ತತ್ವಪ್ರವೇಶವೆ । ಮತಿಯು ಪ್ರಕೃತಿ ಅಂಶಗಳಿಗೆ । ಸತತ ಬಿಂಬನಾಗಿ ಸವಿಯುದೆ ಎಂದೆಂದು । ಕ್ಷಿತಿಯಲ್ಲಿ ಜೀವರಾಶಿಗೆ ಸಾಧನ ಮಾಳ್ಪ । ಪತಿತ ಪಾವನ ವಿಷ್ಣುಗೋಪಾಲ ವಿಠ್ಠಲ । ಸತತ ಕ್ರೀಡಿಯು ಮಾಳ್ಪ ಚೇತನ ತನದಿ ॥೨॥

ರೂಪಕ ತಾಳ

ವಿಷ್ಣು ವರುಣ(ವರ್ಣ)ವಿನ್ನು ವಿಷ್ಣು ಕಾಲವು ನೋಡು । ವಿಷ್ಣುನೆ ಆಕಾಶ ಅವ್ಯಾಕೃತಕೆ ಬಿಂಬಾ । ವಿಷ್ಣುನೆ ಮಹದಾದಿ ವಿಷ್ಣುನೆ ಅಹಂಕಾರಿಕ । ವಿಷ್ಣು ವೈಕಾರಿಕ ವಿಷ್ಣು ತೈಜಸವಿನ್ನು । ವಿಷ್ಣು ಪಂಚಮಹಾಭೂತ ವಿಷ್ಣು ತನ್ಮಾತ್ರಿಗಳು । ವಿಷ್ಣುನೇ ಕಾರ್ಯಕಾರಣ ತತ್ವ ಜಡಗಳಿಗೆ ಬಿಂಬ । ವಿಷ್ಣುನೇತತ್ವಾಭಿಮಾನಿಗಳಲ್ಲಿ ಬೇರೆ ತತ್ತ್ವದಾಕಾರನಾಗಿ ಇಪ್ಪರವೊಳಗಿನ್ನು । ವಿಷ್ಣುನೆ ಅವರವರ ಸತತ ಪ್ರಾವರ್ತಕನಾಗಿ । ಇಷ್ಟನಿಷ್ಟಗಳಿಗೆ ತೊಡಕ ದಿದ್ದು । ವಿಷ್ಣುನಾಮಕ ಚಲುವ ಗೋಪಾಲವಿಠ್ಠಲನ ಸರ್ವಾಂ । ವಿಷ್ಣುಮಯಂ । ಜಗತ್ತು ವ್ಯಾಪಿಸಿಪ್ಪ ॥೩॥

ಝಂಪೆತಾಳ

ವಿಷ್ಣುನೆ ಇಪ್ಪ ತತ್ವರೂಪ ತಾನಾಗಿ । ಇಪ್ಪ ತತ್ವಗಳಿಗೆ ಬಿಂಬನಾಗಿ । ವಿಷ್ಣು ತಾನಿಪ್ಪದಾಶ್ಚರ್ಯವೆಂದೆನ್ನದಿರಿ । ವಿಷ್ಣುದಾಸರಿಗೆ ಸ್ವರೂಪ ಭೂತಾ । ಇಪ್ಪು ತತ್ವಂಗಳು ಜೀವ ಸ್ವರೂಪದಂತೆ । ಸ್ಪಷ್ಟವಾಗಿಪ್ಪದು ತಿಳಿದವರಿಗೆ । ಕಷ್ಟಬಡಿಸುವರೆಲ್ಲ ಎನ್ನೆ ಅನ್ಯಾಯ । ಪುಟ್ಟಿಸುವ ಒಂದೊಂದಾ ಭೇದವ । ನಷ್ಟವಾಗುವದಲ್ಲ ಜೀವರ ಸ್ವರೂಪ । ಬಿಟ್ಟುಹೋಗುವದಲ್ಲ

ಎಂದೆಂದಿಗೂ । ಸ್ಪಷ್ಟವಾಗಿ ಇದರ ಅನುಭವ ಎಂಬುವದು । ವಿಷ್ಣುದಾಸರೆ ಇದರ ವಿವರವು ಬಲ್ಲರು । ಇಷ್ಟವನೂರುತಿ ನಮ್ಮ ಗೋಪಾಲವಿಠ್ಠಲ । ಇಷ್ಟರಲ್ಲಿ ನಿಂತು ಹರಿ ಏನೇನುನೋಳ್ಪ ॥೪॥

ತ್ರಿವಿಡಿ ತಾಳ

ಭಿನ್ನವಾದ ವೃತ್ತಿರೂಪ ಸುಖದುಃಖವು । ಇನ್ನು ಸ್ವರೂಪಾನುಭವ ಉಂಟು । ಚಿನ್ಮಸಿನ ಮನಸಿನ ದ್ವಾರವಿನ್ನು ಅಭಿಮಾನದಲ್ಲಿ । ತನ್ನ ದೆಂದರಿವ ಭಿನ್ನವಾದ ದುಃಖವ । ತನ್ನ ಪ್ರಕಾಶ ಅಭಿಮಾನವಿದ್ದಲ್ಲೆಲ್ಲ । ತನ್ನದೆಂದೆ । ತಿಳಿವ ಅಭಿಮಾನದಿ । ಇನ್ನು ಹೀಗೆ ವೃತ್ತಿರೂಪ ದುಃಖ ವಿನ್ನು । ತನ್ನಭಿಮಾನದಿಂದಲೆ ಅನುಭವ । ಚನ್ನಾಗಿ ಲಿಂಗ ಭಂಗವಾಗುವ ತನಕ । ಇನ್ನು ಹೀಗೆ ಅನುಭವಿಪ ಜೀವನು । ಮುನ್ನೆ ವೃತ್ತಿರೂಪ ಸುಖವು ಮತ್ತೆ ಹೀಗೆ । ಇನ್ನು ಅನುಭವವೆಲ್ಲ ಒಂದೆ ನೋಡು । ತನ್ನದೆಂಬ ಅಭಿಮಾನ ಬಿಟ್ಟು ನಿರ್ಗುಣದಲ್ಲಿ । ಅನ್ನರಸ ಪಾನಂಗಳು ಎಲ್ಲ ಹರಿಯೆ ಉಣುವ । ವನೆಂದು ತಿಳಿದು ಉಂಬ ಜೀವರಿಗೆ । ಚಿನುಮಯ ಬಿಂಬ ತಾನುಂಡು ಎಲ್ಲ । ಭಿನ್ನರಸ ಸುಖ ವ್ಯಂಜಕಮಾಡಿ । ಆನಂದವನು ಇನ್ನು ಜೀವನಿಗೆ ಅಭಿವ್ಯಕ್ತಿಮಾಳ್ಪ । ಇನ್ನಿವನಿಗೆ ವಿಪರೀತ ದುಷ್ಟ ಜೀವನರಿಗೆ । ಇನ್ನು ದುಃಖ ಅಭಿವ್ಯಕ್ತಿಮಾಳ್ಪಾ । ಪುಣ್ಯಪಾಪಗಳೆರಡು ಜೀವಕೆ ಸಹಾ ಯವಾಗಿ । ತನ್ನದೆಂಬೊ ಮಾತು ಮಾತ್ರ ಇನ್ನುಪುಶಿಯು । ಖಿನ್ನನ(ನಾ) ಗ್ಯಾಡುವನು ಅಭಿಮಾನದಿ । ಅನಂತ ಗುಣಪೂರ್ಣ ಗೋಪಾಲವಿಠ್ಠಲ । ಚನ್ನಿಗನ ಮಹಿಮೆ ಚಿತ್ರವಿಚಿತ್ರವು ॥೫॥

ಅಟ್ಟತಾಳ

ಒಂದು ರಸದಲ್ಲಿ ಬಿಂದು ಉದರದಿ ಬಿದ್ದರೆ । ಇಂದಿರೆ ಉಂಟಲ್ಲಿ ವಿರಿಂಚಿ ಶಿವನುಂಟು । ಚಂದಾದಿ ಗರುಡ ಶೇಷ ಇಂದ್ರಾದಿ ಸುರರೆಲ್ಲ । ಹೊಂದಿರು ವರು ತಮ್ಮ ತತ್ವದ ರಸ । ಇಂದಿರೇಶ ವಿಭಾಗವ ಮಾಡಿ ತರತಮ । ದಿಂದಲೆ ಆರಾರ ಭಾಗ ಪೊಂದಿಸಿ ಈವಾ । ಇಂದಿರಾ ದೇವಿಗಾವ್ಯಕ್ತ ರಸದಲೆ ಅಭಿ ಮಾನ । ಮಂದಜ ಜನಕಗೆ ಮಹಾ ತತ್ವರಸವಿನ್ನು । ಇಂದು ಮೌಳಿಗೆ ಅಹಂಕಾರ ರಸದಲ್ಲಿ । ಇಂದ್ರಾದಿ ಸುರರಿಗೆ ವೈಕಾರಿಕ ರಸ । ತಂದುಕೊಡುವ ತೈಜಸ ರಸ ತರಮ್ಯ । ದಿಂದ ಭೌತಿಕ ರಸ ಬಪ್ಪದು ಮನಜರ್ಗೆ ।

ತಂದು ಕೊಡುವ ಒಂದರೊಳಗೆ ಎಲ್ಲ। ಒಂದೇ ವಿಷಯ ಬಹು ಮಂದಿಗೆ ಅನುಭೋಗ। ತಂದಿಪ್ಪದು ಪೃಥುವಿ ಗಂಧ ತನ್ಮಾತ್ರೆಯಂತೆ। ಮಂದ ಅಸುರ ದೈತ್ಯವೃಂದಕ್ಕೆ ಇದರೊಳು । ಗಂಧ ಬೇರೆ ಉಂಟು ಒಂದೆ ರಸದಲ್ಲಿ। ಮಂದಾಕಿನಿಯಲ್ಲಿ ಮೈಲಿಗೆ ವಸ್ತ್ರತೊಳಿದರೆ। ತಂದು ಕೊಡುವದು ತದ್ಭೂಷಣ ಆ ವಸ್ತ್ರಕ್ಕೆ। ಸುಂದರ ಮೂರುತಿ ಗೋಪಾಲ ವಿಠ್ಠಲ । ಒಂಧುವಾದನು ಸಾಧು ಜೀವರ್ಗೆ ॥೬॥

ಆದಿತಾಳ

ದೇವಿಯಿಂದಲಿ ಕ್ರೀಡೆ ದೇವನಾಡುವ ತತ್ವ। ದೇವತೆಗಳನೆಲ್ಲ ಕಾವಲಿ ಇಟ್ಟನ್ನು। ಆವರ್ಣ ಪ್ರಕೃತಿಗಳಲಿ ತಾನಿಂತು। ತ್ರಿವಿಧ ಮೂಲರ ಜಗಕೆ ವೃಕ್ಷನಾಗಿ। ಶ್ರೀವಿಷ್ಣುನೆ ಅಲ್ಲಿ ವಿಟಪನಾಗಿ ಸರ್ವ । ಜೀವರಿಗಾಶ್ರಯನಾಗಿ ಪಾಲಿಸುವಾ। ಆವಾ ಈ ವೃಕ್ಷದ ಮೂಲ ಕಂಡವರಿಲ್ಲ। ದೇವದೇವೇಶನ ಲೀಲೆ ಎಷ್ಟೊ। ದೇವಿ ಲಕುಮಿ ಸಾಕಲ್ಯ ತಿಳಿಯದೆ ಶ್ರೀ। ಭಾವವನು ತಾನು ನಂದದೊಳು ಮುಣುಗಿ। ಶ್ರೀವರ ಪ್ರೇರಕನೆಂದು ತುತಿಸಿಯಿನ್ನು। ಭಾವೆ ಗಂಡನ ಕೊಂಡಾಡಿಹಳು । ಜೀವರು ತಮ ತಮ್ಮ ಯಾವತ್ತು ಶಕ್ತ್ಲಿಲಿ ದೇವನ ಸ್ತುತಿಸಿ ಧೇನಿಸುವರು। ಗೋವರ್ಧನೋದ್ಧಾರ ಗೋಪಾಲ ವಿಠ್ಠಲನ್ನ। ದೇವನ್ನ ಮಹಿಮೆ ಬಲ್ಲವರಾರು ॥೭॥

ಜತೆ

ಆಪ್ತ ಉಪಾಸನಿ ಗುಪ್ತದಿಯಿದುಮಾಡಿ। ಪ್ರಾಪ್ತನಾಗುವ ಗೋಪಾಲ ವಿಠ್ಠಲ ನಿಮಗೆ ॥೮॥

ಗೋಪಾಲವಿಠ್ಠಲರ ಸುಳಾದಿ ೪೮

ಒಂದೇ ಅನಂತರೂಪ, ಅನಂತ ಒಂದೇ ರೂಪನಾದ ಹರಿಯ ಗುಣ, ರೂಪ ಕ್ರಿಯೆ, ಅಧಿಕಾರ ಭೇಧದಿಂದ ವಿಶ್ವರೂಪೋಪಾಸನಾ,

ರಾಗ ಸಾರಂಗ ಧ್ರುವ ತಾಳ

ಒಂದೇ ರೂಪವು ನೋಡಾ ಅನಂತ ಪೂರ್ಣವಿನ್ನು। ಒಂದೊಂದು ಅವಯವವೆ ಪೂರ್ಣವಯ್ಯಾ। ಒಂದು ರೂಪದೊಳಗೆ ಅನಂತ ರೂಪಂಗಳು ಒಂದೊಂದು ರೂಪದಿಂದ ಭೇದಾ ಭೇದನಾಗಿಪ್ಪ। ಒಂದು ಧನುರ್ಧರ ಒಂದು

ಒಂದು ಅರಿಶಂಖಧರ। ಒಂದು ಚತುರ್ಭುಜ ಒಂದು ದ್ವಿ ಭುಜರೂಪ। ಒಂಡು ಚತುರ ಹಸ್ತ ಒಂದು ಸಾಸಿರ ಹಸ್ತ। ಒಂದು ಏಕಮುಖ ಒಂದು ಚತುರ್ಮುಖ। ಒಂದು ಸಾಸಿರ ಮುಖ ಒಂದು ಗಜಮುಖ। ಒಂದು ಮತ್ಸ್ಯಮುಖ ಒಂದು ಸೂಕರಮುಖ। ಒಂದು ಕ್ರೂರ ಮುಖ ಒಂದು ಶಾಂತಮುಖ। ಒಂದು ಶಾಮವರ್ನ ಒಂದು ರಜೋವರ್ನ। ಒಂದು ಪೀತ ವರ್ನ ಒಂದು ಶುಭ್ರವರ್ನ। ಒಂದು ಭಯಪ್ರದ ಒಂದು ಅಭಯಪ್ರದ। ಒಂದು ಅಣುವಾಗಿ ಪುನಃ ಒಂದೊಂದೆ ಮಹತ್ತಹ। ಒಂದು ಕುಳಿತಿಪ್ಪದು ಒಂದು ನಿಂತಿಪ್ಪದು। ಒಂದು ಕೆಲವು ಮಲಗಿ ಒಂದು ಕೆಲವು ಒಡ್ಯಾಟ। ಒಂದು ಕಡೆ ಸಂಹಾರ ಒಂದು ಕಡೆ ಸೃಷ್ಟಿಯು। ಒಂದು ಕಡೆ ಪಾಲಣೆ ಒಂದೆ ರೂಪದಲ್ಲಿನ್ನು। ನಿಂದು ನಾನಾ ವೈಚಿತ್ರನಾಗಿ ತೋರುವ ದೈವ। ಸುಂದರ ಮೂರುತಿ ಗೋಪಾಲ ವಿಠ್ಠಲ। ಒಂದಾನಂತಾನಂತರೂಪ ಅನಂತ ಒಂದೇರೂಪ।

ಮಟ್ಟತಾಳ

ಒಂದು ರವಿಯ ತೇಜ ಒಂದು ದ್ವಿರವಿ ತೇಜ। ಒಂದಕ್ಕೊಂದು ಅಧಿಕ ಹತ್ತು ರವಿಯ ತೇಜ। ಒಂದೊಂದೆ ಬಲವಿಜ್ಞಾನ ಪೂರ್ಣವಾದ ರೂಪ। ನಿಂದಿವೆ ಮಲಗುವ ಮಲಗಿ ತಿರಗುವ। ಪೊಂದಿ ಕೊಡುವ ಏಕ ಇಂದ್ರಿಯ ಭೇದಗಳಿಲ್ಲ। ಮಂದ ಜನರ ಮನಕೆ ಮಹಾ ಅಲೌಕಿಕ। ಗಂಧಾದಿ ಶಬ್ದವೆಲ್ಲ ಸ್ವರೂಪ ಭೂತಾ। ಇಂದ್ರಿಯಂಗಳೆಲ್ಲ ಒಂದೊಂದೆ ಪೂರ್ಣವು। ಪೊಂದಿಪ್ಪವು ನೋಡಾನಂತ ಬೊಮ್ಮಾಂಡಗಳು। ಹಿಂದಿನ ಅತಿತ ಅನಾಗತವೆಲ್ಲಾ। ಒಂದೊಂದೆ ರೂಪದಿ ಹೊಂದಿ ಕೊಂಡಿಪ್ಪವು। ಒಂದು ಆದರು ಅಂತೆ ಕಂಡೆನೆಂಬವರಾರು। ನಂದ ನಂದನ ಕಂದ ಗೋಪಾಲ ವಿಠ್ಠಲ। ಒಂದು ತೋರುವ ತತ್ತತ್ಸ್ವಾಗ್ರತೆಯನು ಸಾರ ॥೨॥

ರೂಪಕ ತಾಳ

ಒಂದು ಕಡೆಯಲಿ ರಾವಣನ ಹನನ ಮಾಡುವ। ಒಂದು ಕಡೆಯಲಿ ತತ್ವಜ್ಞಾನ ಬೋಧಿಸುತಿಪ್ಪ। ಒಂದು ಕಡೆಯಲಿ ತುರುವುಗಳನು ಕಾಯುವನು। ಒಂದು ಕಡೆಯಲಿ ಕ್ರೂರ ಜನರ ಸದ ಬಡಿವು(ಯು)ವ। ಒಂದು ಕಡೆಯಲಿ ಕುರು ಪಾಂಡವರ ಕಡದಾಡಿಸುವ। ಒಂದು ಕಡೆಯಲಿ ಗೋಪ

ಸ್ತ್ರೀಯರ ಪ್ರೊಡನಾಟ । ಒಂದು ಕಡೆಯಲಿ ಗೋವರ್ಧನ ಗಿರಿಯನೆತ್ತಿಹ । ಒಂದು ಕಡೆ ಬ್ರಹ್ಮಾದ್ಯರಿಂದ ಪೂಜಿಸಿಕೊಂಬ । ಒಂದು ಕಡೆ ಕಂಸನ ಹನನ ಮಾಡುತಿಪ್ಪ ಒಂದು ರೂಪದಿ ಯಶೋದೆ ಮುಂದಾಡುತಿಪ್ಪ । ಒಂದು ಕಡೆ ಯಲಿ ಪಾಲು ಬೆಣ್ಣೆ ಕದ್ದು ತಿಂದು । ಇಂದು ಮುಖಿಯರ ಮುಂದೆ ಇಲ್ಲೆಂದಾಡುತಿಪ್ಪೆ । ಒಂದು ರೂಪದಲ್ಲಿ ಈ ಪರಿ ಪರಿರೂಪ । ಛಂದದಿ ತೋರುವ ಒಂದೆರಡು ಎನಸಲ್ಲ । ಕಂದರ್ಪ ಜನಕ ಗೋಪಾಲ ವಿಠ್ಠಲ ತನ್ನ ಹೊಂದಿದವರ ಮನಕೆ ಒಂದಾನಂತಾಗಿ ತೋರ್ಪಾ ॥೩॥

ಝಂಪಿತಾಳ

ಒಂದು ಕಡೆಯಲಿ ದ್ರೋಣ ಭೀಷ್ಮಾದಿಗಳನೆಲ್ಲ । ಕೊಂದು ಕೊಂದ ರ್ಜುನ ಕೊಲ್ಲೊ ನೀಯಂತಿಪ್ಪ । ಒಂದು ಕಡೆಯಲಿ ಅರಿ ಸೈನ್ಯಕೆ ಬಲವಾಗಿ। ಮುಂದರಿದು ಮತ್ತವರ ಮೋಹಗೊಳಿಸುತಲಿಪ್ಪ । ಒಂದು ರೂಪದಿ ಪಾರ್ಥ ನಿಗೆ ತತ್ವ ತಿಳಿಸುತ್ತ । ಬಂದ ಅರಿಗಳ ಅಸ್ತ್ರತಾನೆ ಧರಿಸುತಲಿಪ್ಪ । ಒಂದು ರೂಪದಲಿ ಅರ್ಜುನನ್ನ ಆಲಿಂಗಿಸಿ । ಬಂದ ಆಯಾಸಗಳ ಬಡಸದೆ ನಿಂತಿಪ್ಪ। ಒಂದು ರೂಪದಿ ದೇವದತ್ತ ಶಂಖವನೂದಿ । ತಂದೀವ ಬಲವ ಪ್ರತಿಕ್ಷಣಕೆ ಪಾರ್ಥನಿಗಿನ್ನು । ಮಂದ ಅಸುರರಿಗೆ ಇದೇ ಶಬ್ದದಿಂದ ಅವರ । ಕುಂದು ಮಾಡುವ ಬಲ ಒಂದು ರೂಪದಲ್ಲಿನ್ನು । ಒಂದೊಂದು ಅನಂತ ರೂಪನು ಆಗಿ । ಮುಂದರಿದು ಆ ಕುರು ಸೈನ್ಯ ಕೊಂದು ಕೊಂದ್ಹಾಕುತಿಹ । ಮಂದಾ ಕಿನಿಯ ಜನಕ ಗೋಪಾಲ ವಿಠಲಗೆ ಹೀ । ಗೆಂದು ತಿಳಿದರ್ಚಿಪಗೆ । ಬಂಧ ನವ ಕಡಿವಾ ॥೪॥

ತ್ರಿವಿಡಿತಾಳ

ಮತ್ಸ್ಯಾದಿ ಅಜಾದಿ ಕೇಶವಾದಿ ಚತುರಾದಿ ವಿಶ್ವಾದಿ ಹಯ ಶಿಂಶು ಮಾರ ಕಪಿಲ ವ್ಯಾಸ । ಸ್ವೇಚ್ಛವಾನಾನಂತ ರೂಪಂಗಳಲ್ಲವು । ನಿಚ್ಚ ನಿಚ್ಚ ಕೃಷ್ಣನಲ್ಲಿ ನಿತ್ಯವಾಗಿ । ಎಚ್ಚತ್ತಿಹವು ಕಾಣೊ ಲೇಶಸಂಶಯ ಸಲ್ಲಾ । ಅಚ್ಚ ನಿಟ್ಟಂತೆ ಮತ್ತೊಂದೆ ಪಟ್ಟದಲ್ಲಿನ್ನು । ಅಚ್ಯು ತನ್ನ ರೂಪ ಒಂದು ದುರ್ಲಭ ಪ್ರಬಲ । ನೀಚೋಚ ವಿಲ್ಲವೊ ನಿತ್ಯ ವ್ಯಕ್ತಾ । ಅಚ್ಚು ಬೆಲ್ಲವು ಒಂದು ಆನಕಡೆ ತಿಂದರು । ಹುಚ್ಚ ಒಂದು ಕಡೆ ಹುಳಿ ಸೀಯು ಎನಿಪದೇ । ಮಚ್ಚರ ಜನರಿಗೆ ಮರಳುಗೊಳಿಸಿ ಹೀಗೆ । ನಿಚ್ಚವಾದ ನಿರಯ

ಪ್ರೊಂದಿಸುವ । ಸ್ವಚ್ಛ ಮೂರುತಿ ನಮ್ಮ ಗೋಪಾಲ ವಿಠ್ಠಲ । ಅಚ್ಚ ಕರುಣಿಕಾಣೊ ಆರ್ತ ಜನಕೆ ನಿತ್ಯ ॥೫॥

ಅಟ್ಟತಾಳ

ಅಣು ಅಣು ಪರಮಾಣು ಅತ್ಯಣು ಬಲು ಅಣು । ಘನ ಘನ ಘನ ರೂಪ ಘನತಾನು ಘನತಾನು । ಅಣು ರೂಪಾದಾ(ದ್ರವ್ಯ) ಮನಸ್ಸಿಗೆ ಮಂದನ್ನ । ಎಣಿಕೆ ಹಿಡಿದೆ ನೆನಲು ಮನಕೆ ನಿಲ್ಲುವದಲ್ಲಾ । ಘನರೂಪದಾ ದ್ರವ್ಯ ಆಕಾರ ದೊಳಗಿನ್ನು । ಅಣುವಾಗಿ ತೋರೋದು ಅವ್ಯಾಕೃತ ದ್ರವ್ಯ ಘನ ವ್ಯಾಪ್ತಿವುಳ್ಳದಾದರು ಸರಿಯೆಮೆ । ಘನಹರಿ ದ್ರವ್ಯದಲ್ಲಿ ಅಣುವಾಗಿ ತೋರೋದು । ಚಿನುಮಯ ಹರಿತಾನು ಚಿದ್ರೂಪಕೆ ಬಿಂಬ । ಎನಸಲ್ಲಾ ಮನುಜಾ ಘನ ಸೋಜಿಗವುಂಟು । ಅನುವಾದ ಪಂಚ ಮಹಾಭೂತ ಅವ್ಯಕ್ತಕೆ । ಮನಸಿಜನಯ್ಯ ತಾ ಬಿಂಬನಾಗಿಪ್ಪನು । ಎಣಿಸಿ ಧೇನಿಸಿಪ್ಪಂಗೆ ಎಲ್ಲಿಕ್ಕೆ ಹರಿಬಿಂಬ । ಘನ ಜಾಗ್ರತನಯ್ಯಾ ಗಣನೆಮಾಡನು ಅನ್ಯ । ಸನಕಾದಿಗಳೊಡಿಯಾ ಗೋಪಾಲ ವಿಠ್ಠಲ । ಅನಿಮಿಷರಿಗೆ ತಿಳಿಯಾ ಅಗೋಚರನಯ್ಯಾ ॥೬॥

ಆದಿತಾಳ

ಚತುರ ವಿಂಶತಿ, ತತ್ವ ಸ್ವರೂಪ ಭೂತವು । ಪತಿತ ಪಾವನನಾದ ಪರಿಯಲ್ಲಿಯಿಪ್ಪುದು । ತತು ತತು ರೂಪ ತದ್ವರ್ಣ ತದಾಕಾರ । ಗತಿಗೆ ನಿಯಾಮಕ ಸತತ ಬಿಂಬನಾಗಿ । ಖತಿ ಗೊಳಗಾದದ ಖಂಡಾ ಖಂಡನಾಗಿ । ಜಿತವಾದ ತನ್ನ ಸ್ವರೂಪದಿಂದಲೇ । ಇತರಾ ಪೇಕ್ಷೆಯು ಇಲ್ಲ ಈರ್ವರಿಂದಲಿ ಬಂದ । ಅತಿಶಯ ಬೇಕಿಲ್ಲ ಆಶ್ರಿತ ಜನಪಾಲಾ । ಜಿತವಾದ ಜಡಕ್ಕೆ ಬಿಂಬನಾದ ಬಳಿಕಿನ್ನು । ತತುವ ಜೀವರಿಗೆಲ್ಲಿ । ಬಿಂಬನಾಗೋದಾಶ್ಚರ್ಯ ಇತರ ಜೀವರಿಗೆಲ್ಲ ನಿಶ್ಚಯ ನಿತ್ಯದಿ । ಗತಿ ಬೇಕಾದವನಿಗೆ ಇದೆ ಚಿಂತನೋಪಾಯ । ಇತರ ದೈವರ ಗಂಡ ಗೋಪಾಲ ವಿಠ್ಠಲ । ಚ್ಯುತ ದೂರ ನಿತ್ಯ ಆಶ್ರಿತ ಜನಪಾಲಾ ॥೭॥

ಜತೆ

ವಿಶ್ವರೂಪ ದರುದಶನಧಿಕಾರಿಗಳು ಅರಿದು । ವಿಶ್ವನಾಮಕ ಗೋಪಾಲ ವಿಠ್ಠಲ ಭಜಿಸಿ ॥೮॥

ಗೋಪಾಲ ವಿಠ್ಠಲರ ಸುಳಾದಿ ೪೯

ಧ್ಯಾನವೇ ಮುಖ್ಯ, ಬಿಂಬಮೂರ್ತಿ ಧ್ಯಾನಕ್ಕೆ ಒಲಿಯೆ ಪ್ರಾರ್ಥನಾ, ಧ್ಯಾನೋಪಾಸನೆ ಮುಖ್ಯ ಧ್ಯಾನದೊಳಗೆ ಎಲ್ಲವೂ ಅಡಕ, ಸರ್ವಜ್ಞ ಸರ್ವಶಕ್ತಿಪ್ರದ ಯಾವತ್ತು ನಿನ್ನಲ್ಲೆ ಉಂಟು, ನಾನಾಸ್ಥಾವರ ಜನುಮಗಳಲ್ಲಿ ಬಂದುದು ನಿನ್ನ ಪೂಜೆ ಮಾನವಜನುಮದಲ್ಲಿಯು ದಶೇಂದ್ರಿಯ ಪ್ರವರ್ತಕನಾದ ಹರಿಯೆ ಧ್ಯಾನಕ್ಕೆ ನಿಲ್ಲೆಂದು ಪ್ರಾರ್ಥನೆ

ರಾಗ ಭೈರವಿ ಧ್ರುವ ತಾಳ

ನಿಲ್ಲು ನಿಲ್ಲಯ್ಯಾ ದೇವಾ ನೀಲವರ್ನದ ಸ್ವಾಮಿ । ಎಲ್ಲಿ ಪೋಗುತಯಿದ್ದಿ ಎನ್ನ ಠಕ್ಕಿಸಿ ಮುಂದೆ । ಸಲ್ಲದವನೆ ನಾನು ಸಾಕದಿದ್ದರೆ ನೀನು । ಬಲ್ಲಿದನೆ ಬಡವ ಬಡವ ಬಲ್ಲಿದನಯ್ಯಾ । ಎಲ್ಲ ಸಾಧನಗಳು ನಿನ್ನ ಬಳಿಯಲ್ಲುಂಟು । ಇಲ್ಲದ್ದೊಂದಿಲ್ಲ ಎನಗೆ ಇತ್ತ ನೀವೊಲಿದ ಮೇಲೆ । ಎಲ್ಲ ನಿನ್ನೊಳಗಡಕ ಯೋಚಿಸಲಾಗಿ ಇನ್ನು । ಕಲ್ಲು ಮೃದುವಾಗುವದು ಕಂಡ ಆಗಲಿ ನಿನ್ನ । ಹುಲ್ಲು ಪರ್ವತಭಾರ ಹರಿ ನಿನ್ನ ಕಾಣದಾಗ । ಎಲ್ಲಿ ಕೆಲ್ಲಿಯೊ ಆಗಿ ಎನಗೆ ತೋರುವದಿನ್ನು । ಗಲ್ಲ ಗಲ್ಲವ ಬಡಿದು ಗಂಟಲನೆ ಸೆಳೆದುಕೊಂಡು । ಗುಲ್ಲು ಎಬ್ಬಿಸ ದೋಡಿ ಪೋದವನಂತೆ ನೀನು । ಮೆಲ್ಲ ಮೆಲ್ಲನೆ ಮನಕೆ ಬಂದು ಸುಳಿದು ಪೋದರೆ । ಎಲ್ಲ ಸಂಪತ್ತು ಪೋಗಲಾಡಿಸಿ ಕೊಂಡವನು । ಎಲ್ಲಿತನಕ ಅವಗೆ ಕ್ಲೇಶವು ಆಗುವದೊ । ಇಲ್ಲಿ ಸಾದೃಶ್ಯ ಸ್ವಲ್ಪ ಆ ವಿಷಯದಲಿನ್ನು । ಎಲ್ಲ ಸುರರೊಡಿಯ ಗೋಪಾಲ ವಿಠ್ಠಲ । ಬಲ್ಲಿದ ನಿನ್ನ ಧ್ಯಾನ ಬಲ್ಲವಗನುಭೋಗಾ ॥೧॥

ಮಟ್ಟ ತಾಳ

ಧ್ಯಾನ ಮಾಡಿದವ ಸ್ನಾನ ಮಾಡಿದವ । ಧ್ಯಾನ ಮಾಡಿದವ ದಾನ ಮಾಡಿದವ । ಧ್ಯಾನ ಮಾಡಿದವ ಮೌನ ಮಾಡಿದವ । ಧ್ಯಾನ ಮಾಡಿದವ ನಾನಾ ಕರ್ಮಗಳು । ತಾನು ಮಾಡಿದವ ನ್ಯೂನ ಒಂದು ಇಲ್ಲವು । ಧ್ಯಾನಕ್ಕೆ ಹರಿಯೆ ನೀನು ಬಾರದಿರೆ । ನಾನು ಕಂಡ ವಿಷಯುವನ್ನು (ವನು) ಧೇನಿಸುವೆ । ಜ್ಞಾನ ಪೂರ್ವಕವಾಗಿ ಧ್ಯಾನ ಮಾಡುವನಿಗೆ । ಕಾಣದೊಂದುಯಿಲ್ಲ ಕರ್ಮಆದರೊಳಡಕ । ದೀನ ಜನ ಬಂಧು ಗೋಪಾಲ ವಿಠ್ಠಲ । ಧ್ಯಾನಕ್ಕೆ ಎನಗೆ ನೀನು ವಿಷಯನಾಗು ॥೨॥

ರೂಪಕತಾಳ

ಆವಾವ ತೀರ್ಥವು ನಿನ್ನ ಬಳಿಯಲುಂಟು। ಆವಾವ ಕ್ಷೇತ್ರವು ನಿನ್ನ ಬಳಿಯಲುಂಟು। ಆವಾವ ತತ್ವವು ನಿನ್ನ ಬಳಿಯಲುಂಟು। ಆವಾವ ಸಜ್ಜನರು ನಿನ್ನ ಬಳಿಯಲುಂಟು। ಯಾವತ್ತು ನಿನ್ನಲ್ಲಿ ವುಂಟು ಯೋಚಿಸಲಾಗಿ। ಈ ವೇಳ್ಯ ಆ ವೇಳ್ಯ ಅನ್ನದೆ ಎಲೋ ದೇವಾ। ಪಾವನ ಪಾಪವು ಎಲ್ಲ ಶಕ್ತಿಗಳು। ದೇವಾ ನಿನ್ನಲ್ಲಿನ್ನು ತಾವಿಪ್ಪವು ನೋಡಾ। ಈ ವೇಳ್ಯಯಿತ್ತು ನೀ ನೋಡು ಯೋಚಿಸದೆ। ದೇವಾ ಒಬ್ಬರು ನಿಮಗೆ ಬೇಡವೆಂಬುವರಿಲ್ಲ। ದೇವಕ್ಕಿ ನಂದನ ಗೋಪಾಲ ವಿಠ್ಠಲ। ನೀ ವೊಲಿಯಲು ಎನಗಿಲ್ಲ ಒಂದಸಾಧ್ಯ ।೩॥

ಝಂಪೆತಾಳ

ಏನು ಬಗೆ ಪೂಜೆಗಳು ನಿನಗೆ ಮಾಡುವೆ ಎಂಬ್ಯಾ। ನೀನಿತ್ತು ಬಂದೆನಗೆ ವೊಂದ ಮೇಲಕೆ ದೇವಾ। ನಾನಾ ಜಾಲ(ಜಲ)ಗಳಲ್ಲಿ ನಾನಾ ಯೋನಿಗಳ್ಳದಿ। ನಾನು ಇದ್ದದನೆಲ್ಲ ಸ್ನಾನಂಗಳೂ ನಿನಗೆ। ನೀನು ಎನ್ನನು ಎಲ್ಲಿ ನಿಲಿಸಿದ ಸ್ಥಳವೆಲ್ಲ। ಶ್ರೀನಿವಾಸನೆ ನಿನಗ ಅದೆ ಪೀಠವು। ಧೇನು ಜನ್ಮಂಗಳಲಿ ಬಂದ ಕರದ ಪಾಲು। ಶ್ರೀ ನಾರಾಯಣಾ ನಿನಗೆ ಅಭಿಷೇಕವು। ನಾನಾ ಪರಿ ಪುಷ್ಪ ಸಿರಿ ತುಲಿಸಿ ಶಿರಿ ಗಂಧ ಮರ। ನಾನಾ ಜನುಮಗಳಾಗಿ ನಾನು ಬಂದುದುಯೆಲ್ಲ। ಶ್ರೀನಾಥ ನಿನಗೆ ಇವೆ ಪೂಜಿಗೆ ಆದೆನು। ನಾನಾ ವಸನವು ಜಡರೂಗ್ಮ(ರೂಹ)ಜನ್ಮಗಳಲ್ಲಿ । ನಾನು ಇದ್ದದೆನೆಲ್ಲ ನಿನಗೆ ಉಡಿಗಾಭರಣಾ। ಆನಿ ಕುದುರೆ ಅಂಡಜಾದಿಯೋನಿಗಳಲ್ಲಿ। ನಾನು ತಿರುಗಿದೆನೆಲ್ಲ ನಿನಗೆ ವಾಹನವಯ್ಯಾ। ನಾನಾ ಪದಾರ್ಥ ತಂಡುಲ ವೊದಲಾದವುಗಳು। ಏನು ಐದಿದವನೆಲ್ಲ ನಿನಗೆ ನೈವೇದ್ಯವು। ಭಾನು ಚಂದಿರ ಸಾಕ್ಷಿಯಾಗಿ ಮಾಡಿದ್ದೆ ದೀಪ। ನೀನು ಎನ್ನವನಾಗಿ ಇದ್ದು ಇದರೊಳಗೆಲ್ಲ। ಏನೇನು ಪರಿ ಪರಿ ಕರ್ಮ ಮಾಡಿಸಿದದ್ದು। ಹೇ ನಾರಸಿಂಹ ಕಪ್ಪವು ನಿನಗೆ ಕಾಣೊ। ನೀನು ಮಂಗಳ ಮೂರ್ತಿ ಡಿಂಗರಿಗೆ ಬಲು ಸಾರ್ಥಿ। ನೀನಾಗಿ ಮಾಡಿಸಿದುದೆಲ್ಲ ನಿನಗೆ ಆರ್ತಿ। ಜ್ಞಾನ ಮಯಕಾಯ ಗೋಪಾಲ ವಿಠ್ಠಲರೇಯ। ನೀನಿತ್ತು ಬಾರೊ ನಿಜ ಭಕ್ತಜನರೊಡಿಯಾ ॥೪॥

ತ್ರಿವಿಡಿತಾಳ

ಮಾನವಯೋನಿಗಳು ಏನೇನು ಐದಿದವೆಲ್ಲ। ನಾನಾ ಬಗೆಯು ಪೂಜೆ ನಿನಗೆ ಸ್ವಾಮಿ। ನಾನು ನಿನ್ನನ್ನು ಬಿಟ್ಟು ಒಂದು ಕಾಲದಲಿಯುನ್ನು। ಏನಿದ್ದನೇನೊ ಚಲ್ವಚಿತ್ರ ಮಹಿಮಾ। ಕಾಣದೆ ಕೆಟ್ಟೆ ನಿನ್ನ ನಾನು ನನ್ನದು ಯೆಂಬೊ। ಹೀನ ಬುದ್ಧಿಯು ಮಾಯವು ಎನಗೆ ಬಿಟ್ಟಿ। ನಾನು ನೀನು ಎಂತೆಂಬೊ ಜ್ಞಾನವ ತಿಳಿಯದೆ। ಮಾನಸ ಪಶು ಪೊ ನಾ ಏನಂ ಬಿನೊ। ನೀನೆ ಅಲ್ಲವೆ ಎನಗೀ ಮಂದ ಬುದ್ಧಿಯಿತ್ತವ। ಏನು ಎನಗೆ ಕೆಟ್ಟದೊಂದು ಇಲ್ಲ। ಏನಾದದೆಲ್ಲ ಹಿಂದೆ ನಾನಾ ಕರ್ಮಂಗಳೆಲ್ಲ। ಮಾನಸ ವಾಚಾ ಕಾಯಾ ಮಾಡಿದಷ್ಟು। ಶ್ರೀನಾಥ ನಿನಗೆ ಮತ್ತೀಗ ಪೊಪ್ಪಿಸುವೆನೊ ನಾನಲ್ಲ ಇದಕ್ಕೆ ಸ್ವಾತಂತ್ರನೆಂದು। ಏನು ಆದಷ್ಟು ಯೆಲ್ಲ ನೀನೆ ತೆಗೆದು ಕೊಂಡು। ಹೀನನಾ ನೀನು ಸಾರ್ಥಕನಮಾಡು। ಭಾನು ಶತ ತೇಜ ಗೋಪಾಲವಿಠ್ಠಲ। ಕಾಣಿಸಿಕೊಂಡು ಕರ್ಮ ಕಾನನ ದಾಟಿಸೆನ್ನ ॥೫॥

ಅಟ್ಟತಾಳ

ಎನ್ನ ದಶ ಇಂದ್ರಿಯಗಳು ನಿನ್ನ ವಿಷಯೀಕರಿಸಲಿ; ಎನ್ನ ಮನಸು ಬಂದು ನಿನ್ನಲ್ಲೆ ಎರಗಲಿ। ಅನ್ಯವೆಂದರೆ ಎನಗೆ ವಮನ ಸರಿ ಆಗಲಿ ನಿನ್ನನೆ ಹುಡುಕುತ ಎನ್ನ ಬುದ್ಧಿಯು ಇರಲಿ। ನಿನ್ನ ನೋಡಿ ನಲಿದಾಡ ಲೆನ್ನ ಚಿತ್ತ। ನಿನ್ನಲ್ಲ ದಿಲ್ಲೆಂಬೊ ಅಹಂಕಾರ ಎನಗಿರಲಿ। ಇನ್ನೇನು ಬೇಡುವದಿಲ್ಲವೊ ಹೇ ಸ್ವಾಮಿ। ನಿನ್ನದೆಲ್ಲ ಎಂಬುವದು ಪಾಲಿಸು। ಘನ್ನ ದಯಾನಿಧೆ ಗೋಪಾಲವಿಠ್ಠಲ। ನೀನಲ್ಲದರಿಯೆ ನಾ ಇನ್ನೊಂದು ಸುಖವ॥

ಆದಿತಾಳ

ಮೂರು ದಿನಕೆ ಒಮ್ಮೆ ಆಹಾರವನು ಕೊಂಡು। ನೀರು ಮಾತ್ರವ ಕೊಟ್ಟು ನಿಲ್ಲಿಸಿ ದೇಹವ। ಆರು ಎನಗೆ ಹತ್ತದಂತಲಾದರು ಏನು। ನಾರಿ ಸುತರು ಸೇರದಂತಲಾದರುಮಾಡು। ಅ(ಆ)ರಿವೆ ರಿವರನ್ಯತ್ರರ ಕೂಡಿಸ ಧೋಗು। ಊರನೆ ಹೊರಡಿಸಿ ಕಾನನ ಸೇರಿಸು। ನಾರಾಯಣಾ ನಿನ್ನ ನಾನು ಬಿಟ್ಟವನಲ್ಲ। ಈ ರೀತಿ ಎನಗೆ ನೀ ಮಾಡದಿರು ಇನ್ನು। ಆರಾ ಭಾರಕ್ಕೆ ಸರ್ವ ಕಾರಣ ನೀನೆಂದು। ಶಾರೀರ ಪೊಪ್ಪಿಸಿ ಕರವ ಮುಗಿದೆ। ಘೋರ ಸಂಸಾರದ ಬೇರು ಕಿತ್ತುವದಕ್ಕೆ। ಭಾರಿಭಾರಿಗೆ ನಿನ್ನ ಸ್ಮರಣೆ

ಬಲವಯ್ಯಾ। ಭಾರತೀಶನೊಡಿಯು ಗೋಪಾಲವಿಠ್ಠಲ। ದೂರನೋಡದೆ ಮನಕೆ ಬಾರೊ ಸರ್ವದ ಸ್ವಾಮಿ ॥೭॥

ಜತೆ

ನೀನು ಧ್ಯಾನಕೆ ನಿತ್ಯ ನಿಲಿಕುತಲಿರು ಯೆಂದೆ। ಏನು ಅನ್ಯವನೊಲ್ಲೆ ಗೋಪಾಲವಿಠ್ಠಲ ॥೮॥

ಗೋಪಾಲವಿಠ್ಠಲರ ಸುಳಾದಿ ೫೦

ಭಗವದಪರೋಕ್ಷವಾಗಲು ಉಪಾಯು ತತ್ ಸಾಧನೆ, ಖಂಡಾಖಂಡ ಧ್ಯಾನದ ವಿಚಾರ, ಸಕಲ ಮೂರ್ತಿಗಳ ಗುಣರೂಪಕ್ರಿಯಾದಿಗಳ ಬಿಂಬೈಕ್ಯ ಧ್ಯಾನ ಮುಖ್ಯ

ರಾಗ ಮಾರವಿ ಧ್ರುವತಾಳ

ಅಪರೋಕ್ಷವೆಂಬುವದು ಬಹುದೂರವಿಲ್ಲವಿನ್ನು। ಸ್ವಪರೋಕ್ಷ ದಾರಢ್ಯದಂತೀಲಿ ಯಿಪ್ಪುವದು। ಅಪವಾದದ ಮಾತಲ್ಲ ಆಲಿಸಿತಿಳಿವದು। ಕಪಟರಹಿತರಾದ ಕೋವಿದರೂ। ಶಪಥಮಾಡಲಿಬೇಕು ಸರ್ವೋತ್ತಮ ಹರಿಯೆಂದು। ಚಪಲ ಸಂದೇಹವನ್ನು ಬಿಟ್ಟು। ತಪಸು ಎಂದು ತಿಳಿದು ತ್ರಿವಿಧ। ತಾಪತ್ರಯವು ಅಪವರ್ಗಸುಪವರ್ಗ ದಾರಿ ಹಿಡಿದು। ಕುಪಿತ ವಾಗದೆ ದುಷ್ಟ ಉಕ್ತಿ ಸುವಚನಕ್ಕೆ। ಕ್ಲಿಪುತಕ್ಕೆ ಅಧಿಕ ಹ್ರಾಸ ಇಲ್ಲವೆಂದು। ಗುಪಿತಾದಲ್ಲಿ ಹರಿಯ ಗುಣಗಳ ಕೊಂಡಾಡಿ। ಸ್ವಪನ ಜಾಗ್ರತಿ ವ್ಯಾಪಾರಗಳ ತಿಳಿದು। ರಿಪು ಮಿತ್ರಗಳವ್ಯಾಪಾರ ಹರಿಯೆ ಎಂದು। ಸಪುತ ಧಾತುಗಳನ್ನಮಯಾದಿ ಕೋಶಗಳು। ಸಪುತ ದಶ ಸಹಸ್ರ ದ್ವಿನಾಡಿಯಲಿ। ಗುಪಿತನಾಗಿದ್ದ ಹರಿಯ ಗೂಣರೂಪಕ್ರೀಯೆಗಳು। ಜಪಿಸು ಏಕೀಭೂತ ಬಿಂಬದಲ್ಲಿ। ಕಪಿಲ ಮೊದಲಾದ ಭಗವದವತಾರ। ತಪಮಾಡಿ ಚಿಂತಿಸು ಬಿಂಬಕ್ರೀಯಾ। ಗುಪಿತ ವ್ಯಕುತ ನಿತ್ಯಾ ಗೋಪಾಲವಿಠ್ಠಲ। ತಪಸಿಗೆ ಲಭ್ಯನಾಹ ಈಪರಿ ಚಿಂತಿಸೆ ॥೧॥

ಮಟ್ಟತಾಳ

ಒಂದು ಮೂರುತಿ ಒಂದೆರಡು ಮೂರ್ತಿ। ಪೊಂದಿ ಲಿಂಗದೇಹ ಯಿಪ್ಪುವ ಮೂರ್ತಿ। ಒಂದು ಮೂರು ಮೂರ್ತಿ ಅನಿರುದ್ಧ ಕಾಯ। ದಿಂದ ಒಳಹೊರಗೆ ವ್ಯಾಪ್ತವಾದ ಮೂರುತಿ। ಛಂದವಾದ ಹೃದಯಸದನದಲ್ಲಿ

ಯಿಪ್ಪವ ಮೂರುತಿ | ಒಂದೇಳು ದಳದಿ ಬಿಡದೆ ತಿರುಗುವ ಮೂರ್ತಿ | ಒಂದು ಹತ್ತು ಮೂರ್ತಿ ಚತುರವಿಂಶತಿ ಮೂರ್ತಿ| ಅಂದವಾದ ಐವತ್ತೊಂದು ಮೂರುತಿಗಳು | ಒಂದು ನವ ಮೂರುತಿ ಮತ್ಸ್ಯಾದಿಗಳಿನ್ನು | ವಂದಿಸಿರೋ ಕೃದ್ಧ್ಯೋಲ್ಕಾದಿ ಮೂರುತಿಗಳು| ಒಂದು ಮೂರು ಮೂರ್ತಿ ವಟು ಜಾಮದಗ್ನಿ | ಸಂದಿಸಂದಿಗೆ ವ್ಯಾಪ್ತ ಮೂರುತಿಗಳ ತಿಳಿದು | ವಂದಿಸಿದರೆ ಎಲ್ಲ ಒಂದೇ ಮೂರುತಿ ಕಾಣೊ | ಇಂದಿರೆಯರಸ ಗೋಪಾಲವಿಠ್ಠಲ ರೇಯಾ | ವಂದಿಸಿದಂತೆ ತನ್ನ ವರ ಲಿಪ್ಪುವನು ಬಿಡದೆ ||೨||

ರೂಪಕತಾಳ

ಸಾಸಿರ ನಾಮಕ್ಕೆ ಸಾಸಿರ ಮೂರುತಿ | ಸಾಸಿರ ದಳದಲ್ಲಿ ವಾಸವಾದ ಮೂರ್ತಿ | ದಾಸೋಹಂ ಎಂದವಗೆ ಬಿಡದೆ ತೋರುವ ಮೂರ್ತಿ | ಲೇಸು ಹ್ರಾಸಗಳಿಗೆ ಹಿಗ್ಗಿ ಕುಗ್ಗದ ಮೂರ್ತಿ | ಕಾಶಿಗೆ ಬೆಲೆಯಾಗಿ ಕ್ರಯವಾಗದ ಮೂರುತಿ | ದೇಶದೇಶದಿ ವ್ಯಾಪ್ತವಾಗಿದ್ದ ಮೂರುತಿ | ನಾಶರಹಿತ ಸ್ವಪ್ರಕಾಶವಾದ ಮೂರುತಿ | ಶೇಷನ ಹಾಸಿಕೆಯಲಿ ಮಲಗಿಪ್ಪ ಮೂರುತಿ | ಈ ಸರ್ವ ಜಗವೆಲ್ಲ ವ್ಯಾಪಿಸಿದ ಮೂರ್ತಿ | ದೋಷರಹಿತ ಮೂರ್ತಿ ಗೋಪಾಲವಿಠ್ಠಲ | ವಾಸವಾಗಿ ಹೃದಯದೊಳಗಿಪ್ಪ ಮೂರುತಿ ||೩||

ಝಂಪೆತಾಳ

ಕಣ್ಣಿನೊಳಗೆ ಇದ್ದು ಕಾಣಿಸುವ ಮೂರುತಿ | ಕರ್ನಂಗಳಲ್ಲಿ ನಿಂತು ಭಿನ್ನಭಿನ್ನ ಮೂರ್ತಿ ಬೀಜವಾದ ಮೂರ್ತಿ| ಅನ್ಯೋನ್ಯ ಆಶ್ರಯ ಆಗಿದ್ದ ಮೂರುತಿ | ತನ್ನ ನೆನೆವರಿಗೆ ತಗಲಿ ತೊಲಗದ ಮೂರ್ತಿ| ನಿನ್ನವ ನೆಂದವಗೆ ನೆಲೆಯಾದ ಮೂರುತಿ | ಚಿನ್ಮಯ ಮೂರುತಿ ಗೋಪಾಲ ವಿಠ್ಠಲ | ಅನ್ಯಜನರಿಗೆ ಅವೇದ್ಯನಾದ ಮೂರ್ತಿ ||೪||

ತ್ರಿವಿಡಿತಾಳ

ಏಸು ಜನ್ಮದ ಉಪಾಸನೆ ಮಾಡಲು | ವಾಸನ ರೂಪದಿ ಪೊಲಿದು ತೋರಿದ ಮೂರ್ತಿ| ಕೇಶವ ಮತ್ಸ್ಯಾದಿ ಅವತಾರ ರೂಪದಿ | ದಾಸ ಜನರಿಗೆ ಪೊಲಿದು ತೋರುವ ಮೂರುತಿ | ಈ ಶರೀರ ಹೃದಯಾಕಾಶದಲ್ಲಿ ನಿಂದು | ಸುಷುಪ್ತಿಲಾತ್ಮಗೆ ಸುಖವ ಉಣಿಸುವ ಮೂರುತಿ | ಭಾಸುರ ಮೂರುತಿ ಭವಗಳ ಕಳೆದಿನ್ನು | ವಾಸವಾಗಿ ನಿತ್ಯ ನಲಿದು ಆಡುವ ಮೂರ್ತಿ |

ವಾಸುದೇವಾಚ್ಯುತ ಗೋಪಾಲವಿಠ್ಠಲ। ಶ್ರೀಶ ಕೃಷ್ಣ ಎನ್ನ ಪೋಷಿಪ ಮೂರುತಿ ॥೫॥

ಅಟ್ಟತಾಳ

ಸೃಷ್ಟಿಸ್ಥಿತಿಲಯ ಕಾರಣ ಮೂರುತಿ। ನಿಷ್ಟಾನಿಷ್ಟ ಪ್ರದವಾದ ಮೂರುತಿ। ಇಷ್ಟಾರಿಷ್ಟಕ್ಕೆ ತೊಡಕದ ಮೂರುತಿ। ಬಿಟ್ಟನೆಂದರು ಬಿಡಲೀಯದ ಮೂರುತಿ। ನಷ್ಟಜನರಿಗಿನ್ನು ವಂಚಿಸೊ ಮೂರುತಿ। ಮುಟ್ಟಿ ಭಜಿಸುವರಿಗೆ ಮುಂದೊಲಿದು। ಸ್ಪಷ್ಟವಾಗಿ ಸುಳಿದಾಡುವ ಮೂರುತಿ। ದಿಟ್ಟಿಸಿ ನೋಡಲು ಸರ್ವ ವಸ್ತುಗಳಿಗು। ಘಟ್ಟಿಯಾಗಿ ಬಿಂಬವಾಗಿದ್ದ ಮೂರುತಿ। ಇಷ್ಟ ದೈವವು ನಮ್ಮ ಗೋಪಾಲವಿಠ್ಠಲ। ಕಷ್ಟ ಸಂಸಾರದ ಕಡಲು ದಾಟಿಪ ಮೂರುತಿ ॥೬॥

ಆದಿತಾಳ

ತಾರಕ ಕಾರಣವಾದ ಮೂರುತಿ। ತಾರಕ ಮಂತ್ರ ಉಪದೇಶಕ ಮೂರುತಿ। ಅರಬ್ಧಾಂತ ಗಾಮಿನಿಯಾದ ಮೂರುತಿ। ಭಾರಕರ್ತ ಅನಿಮಿತ್ಯ ಬಂಧು ಮೂರುತಿ। ನಾರಿ ದ್ರೌಪದಿ ಅಭಿಮಾನಕಾಯ್ದ ಮೂರುತಿ। ನಾರಿಯರ ವ್ರತಕೊಲಿದಂಥ ಮೂರುತಿ। ಪೋರರ ಒಡಗೂಡಿ ಆಡಿದ ಮೂರುತಿ। ನಾರಾಯಣರೂಪವಾದ ಶ್ರೀ ಮೂರುತಿ। ವಾರಿಜೋದ್ಭವ ಪಿತ ಗೋಪಾಲ ವಿಠ್ಠಲ। ಕಾರಣನಾಗೆನ್ನ ಕಾಯ್ವಂಥ ಮೂರುತಿ ॥೭॥

ಜತೆ

ಖಂಡಾಖಂಡ ಧ್ಯಾನ ಬಿಡದೆ ನಿತ್ಯವು ಮಾಡಾ। (ಡಅ) ಖಂಡೇಶ ಗೋಪಾಲವಿಠ್ಠಲ ನಿನಗೆ ವೊಲಿವಾ ॥೮॥

ಗೋಪಾಲವಿಠ್ಠಲರ ಸುಳಾದಿ ೫೧

ಬಿಂಬನಾದ ಶ್ರೀಹರಿಯ ಭಕ್ತವಾತ್ಸಲ್ಯತೆ ಸ್ತೋತ್ರ ಪೂರ್ವಕ ಶ್ರೀಹರಿಯ ಕ್ರೀಯಾ ರೂಪೋಸನೆ ವಿವರಾದಿ

ರಾಗ ಭೈರವಿ ಧ್ರುವತಾಳ

ಸೃಷ್ಟಿಗೊಡಿಯ ಕೇಳೊಂದೆಷ್ಟು ನಾ ತುತಿಸಲು। ದೃಷ್ಟಿಯಿಂದಲಿ ಎನ್ನ ಕಡಿಯ ನೋಡಲಿವಲ್ಲಿ। ಅಷ್ಟ ಸೌಭಾಗ್ಯವೆಂಬೊ ಎಷ್ಟು ಮದವೊ ನಿನಗೆ। ಘಟ್ಟ್ಯಾಗಿ ನೀನಲ್ಲಾ ದನ್ಯರಿಂದ ವೆಂದರೆ। ಸೊಟ್ಟ ತಿರುವಿ ಮೊಗ

ಅಟ್ಟವೇರುತಲದೆ। ಎಷ್ಟಿಲ್ಲವೆಂದು ಬಿಟ್ಟರಂಜುವನಲ್ಲಾ। ಘಟ್ಟಿ ಭಕುತಿ ಪಾಶಲಿ ಕಟ್ಟಿ ಎನ್ನುದರ ದೊ। ಳಿಟ್ಟು ಕೊಂಬೆನಯ್ಯಾ ಜಿಷ್ಣುಸಖನೆ ಕೃಷ್ಣ ಭ್ರಷ್ಟ ಎಂತೆಂದು ದೂರ ದೃಷ್ಟಿಲಿ ನೋಡಿದರೆ। ಬಿಟ್ಟುಕೊಡೊ ನಿನ್ನ ಭಕುತವತ್ಸಲನೆಂಬೊ ಬಿರುದು। ಅಷ್ಟ ಸಂಪತ್ತು ಮತ್ತಿಷ್ಟುಕೊಡೊ ಎಂತೆಂದು। ಕಷ್ಟಬಡಿಸಿ ನಿನ್ನ ಕಾಡಿ ಬೇಡುವದಿಲ್ಲಾ। ಕಷ್ಟಸಂಸಾರ ವೆಂಬ ಸುಳಿಯ ಪೊಳಗೆ ಎನ್ನ। ಇಷ್ಟು ನೋಡೋದು ನಿನಗೆಷ್ಟು ಸುಖವೊ ಕಾಣೆೊ। ಮೆಟ್ಟಿ ತುಳಿಯೊ ಬೆನ್ನಟ್ಟಿ ಬಾಹೊ ದುರಿತಾ। ಕುಟ್ಟಿ ಬೀಸಾಡು ಬಲು ನಷ್ಟ ಸಂಸಾರ ಬೇರ। ಸೃಷ್ಟ್ಯಾದ್ಯಷ್ಟಕರ್ತಾ ಗೋಪಾಲ ವಿಠ್ಠಲರೇಯಾ। ಸ್ಪಷ್ಟರೂಪತೋರೊ ಮುಟ್ಟಿ ಭಜಿಸಲು ॥೧॥

ಮಟ್ಟತಾಳ

ಭಕುತರಗಾಗಿ ನೀ ಜಗವಪುಟ್ಟಿಸಿದಯ್ಯಾ। ಭಕುತರಿಗಾಗಿ ನೀ ಅವ ತಾರ ಮಾಡಿದಯ್ಯಾ। ಭಕುತರು ನಿನ್ನನ್ನು ಭಜಿಸದಿದ್ದರೆ ದೇವಾ। ಸಕಲ ಲೋಕರು ನಿನ್ನರಹುವರೆಂತೊ। ಮುಕುತಿ ದಾಯಕ ಮೂಲ ದೈವ ವೆಂಬೋದು। ಸಕಲ ಲೋಕಕ್ಕೆ ಕರಿರಾಜ ತೋರಿಸಿದನು। ಉಕುತಿ ಗಳಿಂದ ಅರಸಲು ಬಾಹೋದು। ಪ್ರಕಟಮಾಡಿದಳಯ್ಯಾ ಶಕತಳು ದ್ರೌಪದಿ ಸಕಲರಲ್ಲಿ ನೀನು ವ್ಯಾಪಕನೆಂಬೋದು। ಭಕುತ ಪ್ರಲ್ಹಾದ ಇರುವು ತೋರಿಸಿದನು। ಭಕುತರಿಂದ ನೀನು ಭಕುತರಾಧೀನದೇವಾ। ಭಕುತ ವತ್ಸಲ ನಮ್ಮ ಲಕುಮಿಯರಮಣಾ। ಉಕುತಿ ಪತಿ ನಾಭಾ ಗೋಪಾಲ ವಿಠ್ಠಲರೇಯಾ। ಭಕುತರ ಮುಂದೆ ನಿನ್ನ ಯುಕುತಿ ನಡಿಯದಯ್ಯಾ ॥೨॥

ತ್ರಿವಿಡಿತಾಳ

ಶೃಂಗಾರ ಗದ್ದುಗೆ ಬಂಗಾರಾಭರಣಿಟ್ಟು। ರಂಗ ಪೂಲಿಯೊ ಎಂದು ಅಂಗೀಕರಿಸಲರಿಯೆ। ಮಂಗಳನುಾರುತಿ ಮನವೆ ಕಳ್ಳಿರಪೀಠ। ಗಂಗಾ ಜನಕನೆಂದೆನಿಸಿ ಕೊಂಬೊದೆ ಸ್ನಾನ। ಅಂಗನೆ ದ್ರೌಪದಿ ಅಭಿಮಾನ ರಕ್ಷಕ ನೆಂಬ। ಶೃಂಗಾರ ಬಿರಿದೊ ವಸನಂಗಳು ನಿನಗೆ। ಅಂಗವೆ ಕೊರಡು ಶ್ರೀಗಂಧವೆ ತೇದಿಡುವೆನೊ। ಕಂಗಳೆರಡು ದೀಪ ಕರಉಭಯ ಚ್ಯಾಮರ। ಅಂಗದೊಳಿದ್ದಷ್ಟ ಕಮಲವು ಕುಸುಮವೊ। ಹಿಂಗದೆನ್ನ ಕಿಂಚಿತ್ತು ಭಕು ತಿಯೆ ನೈವೇದ್ಯ। ರಂಗಾ ದಿನದಿನದಿ ಮಾಡಿಸಿದ ಕರ್ಮವೆ ಕಪ್ಪವು।

ರಂಗ ಮಹಿಮನೆ ಜಠರಾಗ್ನಿಯೆ ಆರುತೀ ತು। ರಂಗವದನ ಸರ್ವಾಂಗ ಸಮರ್ಪಿಸಿ ಕ। ರಂಗಳು ಮುಗಿದೆ ಅಂತರಂಗದಿನಿಲ್ಲೊ ಸ್ವಾ। ಯಂಗಾಯನ ನಾಮಾ ಗೋಪಾಲ ವಿಠ್ಠಲರೇಯಾ । ಸಂಗವಿಡಿಸೊ ನಿನ್ನಡಿಂಗರಿಗ ರೊಡನೆ ॥೩॥

ಅಟ್ಟತಾಳ

ಒಡಿಯ ನಿನಗೆ ಮೊರೆಯಿಡುತಲಿಪ್ಪರೆ ಎನ್ನ । ಕಡಿಯ ನೋಡಲುವಲ್ಲಿ ಬಡಿವಾರ ನಿನಗೆಷ್ಟು । ತಡಿಯದೆ ನಾನೊಂದು ನುಡಿಯ ನುಡಿವೆನಯ್ಯಾ । ಕಡು ಕುಷ್ಟ ನಾರುತ ಮಡುವಿನೊಳಗೆ ಸೇರು । ಬಿಡದೆ ಬೆಟ್ಟವಪೊತ್ತು ಕಡಲೊಳಗಿರು ಇನ್ನು । ಅಡವಿ ಸೂಕರಜನ್ಮ ಬರಲಿ ನಿನಗೆ । ಕೆಡಲಿ ನಿನ್ನ ರೂಪ ಕಡುಘೋರನಾಗೆಲೊ । ಒಡಲಿಗಿಲ್ಲದೆ ನೀನು ತಿರಕಿಯುನೆ ಬೇಡು । ಕೊಡಲಿಯ ಪಿಡಿದಿನ್ನು ಅಡಿವಿಸಂಚಾರನಾಗೊ । ಮಡದಿಯ ಕಳಕೊಂಡು ಜಡಿಯಧರಿಸೊ ನೀನು । ತುಡುಗ ದನ ಕಾಯೆಂದು ನುಡಿ ಯಲಿ ಜನರೆಲ್ಲ । ಉಡೊ ವಸ್ತ್ರವಿಲ್ಲದೆ ಬತ್ತಲಾಗಿ ನಿಲ್ಲೊ । ಕಡು ವೇಗದಲಿ ನೀ ಕಲ್ಕಿರೂಪನಾಗೊ । ತಡಿಯದೆ ವರಗಳ ಕೊಡುವವನೆಂತೆಂದು । ನುಡಿ ದೆನೊ ನಾ ಇಂಥ ಬಿಡಿಮಾತುಗಳ । ಕಡು ದಯಾಸಾಗರ ಗೋಪಾಲ ವಿಠ್ಠಲ । ಒಡಿದು ಬಿಡೆನೊದೇವಾ ಬಡವರಾಧಾರಿ ॥೪॥

ಆದಿತಾಳ

ಈಪರಿ ನುಡಿದರೆ ಪಾಪವೆಂಬಿಯಾ ಹರಿಯೆ । ಪಾಪವೆಲ್ಲದೊಂದೊ ನಿನ್ನ ವ್ಯಾಪಾರ ಇಂಥದೊ । ಪಾಪಗರಳಿನ ಕೂಪಾದೊಳಗೆ ಬಿದ್ದು ತಾಪಾ ರಾಗದೆ ನಿನ್ನ ಕೋಪದಿಂದಲಿ ನುಡಿದೆ । ಪಾಪಿ ಎಂತೆಂದು ಎನ್ನ ಹೋಪಾ ನೂಕಿದರೆ । ನೀ ಪತಿತಪಾವನನೆಂಬೊ ಬಿರುದುಂಟೊ ದೇವಾ । ಮೋಪ ರಾಗಿಹೆ ನಾನು ಕಾಮಕ್ರೋಧದಕೆಳಗೆ । ರಾಪುಮಾಡದೆ ದೋಷ ಉಷ್ಣೆಂದು ಹಾರಿಸು । ಕುಪಥವ ತಪ್ಪಿಸು ಸುಪಥವತೋರಿಸು । ಶ್ರೀಪತಿ ಎನ್ನಮೇಲೆ ನೀ ಪ್ರೀತಿಯನೆ ಮಾಡು । ಅಪಾರ ನಾಮಂಗಳು ಲೇಪಿಸೆನ್ನ ಜಿಂಹೆಗೆ । ಪಾಪಗಳಕಳಿಯೊ ದ್ರೌಪದಿಯ ಮಾನದೊಡಿಯ । ಭಾಪುರೆ ನಮ್ಮ ಗೋಪಾಲವಿಠ್ಠಲರೇಯಾ । ನೀ ಪರದೈವವೆಂದು ನಾ ಪಾದಪಿಡಿವೆನೊ ॥೫॥

ಜತೆ

ಎಂದಿಗಾದರು ನಿನ್ನ ಬಳಿಗೆ ಬಾಹೊದೆ ಸತ್ಯಾ। ಇಂದೆ ಮುಂದಕೆ ಕರಿಯೊ ಗೋಪಾಲವಿಠ್ಠಲ ॥೬॥

ಗೋಪಾಲವಿಠ್ಠಲರ ಸುಳಾದಿ ೫೨

ಬಿಂಬನ ಗುಣೋತ್ಕರ್ಷಪೂರ್ವಕ, ಗುಣೋಪಾಸನೆ, ತತ್ಫಲ, ಹೃತ್ಕಮಲಸ್ಥ ಬಿಂಬಪೂಜಾ ಧ್ಯಾನಪ್ರಕಾರ ನಾನಾವತಾರ ಐಕ್ಯಚಿಂತನೆ

ರಾಗ ಭೈರವಿ ಧ್ರುವತಾಳ

ನಿನ್ನ ನಿರ್ದೋಷನೆಂದು ನಾ ನಿರ್ದೋಷಿ ಆಗುವೆ। ನಿನ್ನ ಸರ್ವಜ್ಞನೆಂದು ಜ್ಞಾನವಂತನಾಗುವೆ। ನಿನ್ನ ಬಲವು ಪೂರ್ಣನೆಂದು ನಾಬಲಿಷ್ಟನಾಗುವೆ। ನಿನ್ನ ಸುಖಪೂರ್ಣನೆಂದು ಇನ್ನು ನಾ ಸುಖಿಸುವೆ। ನಿನ್ನ ವ್ಯಾಪ್ತನೆಂತೆಂದು ಇನ್ನು ಶೋಕ ನೀಗುವೆ। ನಿನ್ನ ಸ್ವಾತಂತ್ರನೆಂದು ಎನ್ನ ಸ್ವಾತಂತ್ರಬಲಿಪೆ। ನಿನ್ನ ಅನಾದಿ ಎಂದು ಇನ್ನು ನಿತ್ಯ ನಾನಾಹೆ। ನಿನ್ನ ನಿರ್ಗುಣನೆಂದು ನಾ ನಿರ್ಗುಣನಾಗುವೆ। ಭಿನ್ನ ಕಾಮರಹಿತ ಗೋಪಾಲ ವಿಠ್ಠಲ। ನಿನ್ನಾಧೀನವು ದೇವಾ ಎನ್ನ ವಿಭವಾತಿಶಯಾ ॥೧॥

ಮಟ್ಟತಾಳ

ಸ್ವಾಮಿಯೆಂದು ನಿನ್ನುಪಾಸನಿಯನು ಮಾಡಿ। ಸ್ವಾಮಿಯಾಗುವೆ ಸಯ್ಯಾ ಎನಗಿಂದವರರಿಗೆ। ಪ್ರೇಮನೆಂದು ನಿನ್ನುಪಾಸನಿಯನುಮಾಡಿ। ಪ್ರೇಮಪಡಿವೆನಯ್ಯಾ ಎನ್ನಿಂದುತ್ತಮರ। ಕಾಮಪೂರ್ಣನೆಂದು ನಿನ್ನ ವಂದಿಸಿ ಭಿನ್ನ। ಕಾಮರಹಿತ ಆತ್ಮ ಕಾಮವುಳ್ಳವನಾಹೆ। ಸಾಮಜ ವರದನೆ ಗೋಪಾಲವಿಠ್ಠಲ। ತಾಮಸ ಜನ ವೈರಿ ಆ ಮಹಾಗುಣಪೂರ್ಣಾ ॥

ರೂಪಕತಾಳ

ಶುದ್ಧಾತ್ಮನೆಂದು ಅಶುದ್ಧ ಪದಾರ್ಥದಲಿ। ಇದ್ದವ ನಾನಿನ್ನ ಬುದ್ಧಿಂದ ಕೊಂಡಾಡಿ। ಅಧ್ಯಾತ್ಮ ಮೊದಲಾದ ತ್ರಿವಿಧ ತಾಪಂಗಳು। ಒದ್ದು ನಾ ಬಿಡುವೆನು ನಿನ್ನ ವಂದಿಸಿ। ಉದ್ಧಾರಕ ಸರ್ವ ಜಗಕೆ ನೀನೆಂತೆಂದು। ಉದ್ಧರಿತನಾಗುವೆ ದಿನದಿನ ನಿನ್ನಿಂದ। ಮಧ್ಯ ಆದಿ ಅಂತ್ಯ ರಹಿತನೆಂದು ನಿನ್ನ ತುತಿಸಿ। ಶುದ್ಧವಾದ ನಿನ್ನ ಲೋಕದಿ ಹೊಂದಿರುವೆ। ಛೇದ್ಯ ಭೇದ್ಯ ರಹಿತನೆಂದು ನಿನ್ನ ತುತಿಸಿ। ಛೇದಾ ಭೇದಗಳಿಗೆ ದೂರನಾನಾಗಿರುವೆ।

ಭದ್ರಮೂರುತಿ ಚಲುವ ಗೋಪಾಲವಿಠ್ಠಲ । ಸಾದ್ರುಶ್ಯ ರಹಿತನೆಂದು ಧನ್ಯನಾನಾಗುವೆ ॥೩॥

ಝುಂಪೆತಾಳ

ಜನನ ಮರಣ ರಹಿತನೆಂದು ನಿನ್ನನ್ನು ಭಜಿಸಿ । ಜನನ ಮರಣಗಳಿಂದ ದೂರನಾಗುವೆನಯ್ಯಾ । ತನವು ಅಪ್ರಾಕೃತನೆಂದು ನಿನ್ನ ತಿಳಿದೆನ್ನ । ತನುವಿನ ಭ್ರಮಣತ್ವನೆಲ್ಲ ನೀಗುವೆನಯ್ಯಾ । ನಿನಗೆ ನಿನ್ನವತಾರ ಕೈಕ್ಯವನು ಚಿಂತಿಸಿ । ತೊನಗದಾನಂದದಲ್ಲಿ ನಿನ್ನ ವಿಷಯಕರಿಸುವೆ । ನಿನಗೆ ನಿತ್ಯತೃಪ್ತ ಅನಿದ್ರನೆಂದರಿತು । ಎನಗಿಪ್ಪಹಸಿವಿ ತೃಷಿ ನಿದ್ರಿಗಳ ನೀಗುವೆ । ಅನಿಮಿಷರೊಡಿಯ ಗೋಪಾಲವಿಠ್ಠಲ ಎಂತು । ನೆನವುವರು ನಿನ್ನವರ ಗುಣದಂತೆ ಗುಣವೀವೆ ॥೪॥

ತ್ರಿವಿಡಿತಾಳ

ತನು ಹೃದಯಾಕಾಶ ವನಜಮುಂಡಲದಲ್ಲಿ । ದಿನಕರನಂತೆ ತಾ ಹರಿ ನಿಲ್ಲಿಸಿ । ಘನ ಜ್ಞಾನವೆಂಬ ಕಿರಣಗಳಲ್ಲಿ ಪಸರಿಸಿ । ಮನವೆಂಬ ರಥವೇರಿ ತಿರುಗಾಡುತಾ । ಅನುವಾದ ಬುದ್ಧಿಯನು ಅರುಣನ ಸಾರಥಿಮಾಡಿ । ಘನವಾದ ಭವಾಂಬುಧಿ ವಣಗಿಸುವ । ದಿನ ದಿನ ತನ್ನ ನೂತನ ಧ್ಯಾನವನ್ನೆ ನಿತ್ತು । ಜನನಿಯ ಮೊಲೆಹಾಲು ಉಣಿಸನಯ್ಯಾ । ತನು ಸಂಬಂಧಿಗಳಂತೆ ಬಂಧು ಅಲ್ಲವು ಕಾಣೋ । ಅನಿಮಿತ್ಯ ಬಾಂಧವ ಅಪ್ರೆಮೇಯಾ । ಸನಕಾದಿಗಳೊಡಿಯಾ ಗೋಪಾಲ ವಿಠ್ಠಲ । ಅನುವಾಗಿ ಅವರವರ ಗುಣದಂತೆ ಉಪಾಸ್ಯಾ ॥೫॥

ಅಟ್ಟತಾಳ

ದುಃಖಿಸ್ವರಿಗೆ ದುಃಖ ವ್ಯಕ್ತಿಮಾಡುವನಾಗಿ । ದುಃಖಿಯೇತೆಂದು ತಾ ಕರಿಸಿಕೊಂಬುವನಯ್ಯಾ । ರಕ್ಕಸರಿಗೆ ನೀಚರ ಮಾಡೋದರಿಂದ । ಚೊಕ್ಕ ತಾ ಅವರನೆಂತೆಂದು ಬಂಧನೆನಿಸಿಕೊಂಬ । ದಿಕ್ಕಾಗಿ ಅವರವರ ಸಾಧ್ಯ ಸಾಧನ ಕರ್ಮ । ವ್ಯಕ್ತಿ ಮಾಡೋದರಿಂದ ಬಾಧ್ಯ ಬಾಧಕನೆಂಬ । ಉಕ್ತಿಲಿ ಕರಿಸಿಕೊಂಬುವ ಹೇಯತ್ವಗಳಿಂದ । ಲಕ್ಕುಮಿ ಪತಿ ಆವ ದಾವಾ ನಿಷೇಧವಿಲ್ಲಾ । ಭಕ್ತವತ್ಸಲ ದೇವ ಗೋಪಾಲ ವಿಠ್ಠಲ । ಸಿಕ್ಕದೆ ಮನೆ ಮನೆ ತುಕ್ಕುತ ಚರಿಸುವ ॥೬॥

ಆದಿತಾಳ

ಕಾರಕ ಹರಿ ಮುಖ್ಯ ಕಾರಣ ಕರ್ತಾ। ಮಾರ(ಅರಿ)ರಾರಿಬೊಮ್ಮ ಕಾರಣ ನೆನದಿರಿ।ಆರಾರಿ ಗೊರಗಳು ನೀವರು ಇವರೆಲ್ಲ। ಬಾರದಿದ್ದರೆ ಸರಿ ಹರಿತರಿದೊ ಟ್ಟುವ। ಮೀರ ಶಕ್ಯರು ಅಲ್ಲ ಈ ಶಕ್ತಿಯು ಒಬ್ಬ। ರಾರಾದರು ವಿಚಾರಿಸೆ ನೋಡಲು।ಭಾರ ನಿಇಹೇ ಭೂದೇವಿಯಾ, ಗೇಳ್ಳೆವ।ತಾರ ಮಾಡುವ ಜೀವರ ಉದ್ಧರಿಸಲು ಈರೇಳು ಜಗವ ಸೃಷ್ಟಿಸಿ ಒಡನಿದ್ದು।ಆರ ಭಾರಕೆಯೆಲ್ಲ ಕಾರಣ ನಾಗಿಹ। ಈ ರೀತಿ ಸೃಷ್ಟಿ ಸ್ಥಿತಿಲಯ ವ್ಯಾಪಾರೆಲ್ಲ। ಮಾರನಯ್ಯಗೆ ಕ್ರೀಡಿ ನಾರಿಗೆ ಸಂಪತ್ತು । ಮೂರುವಿಧ ಜೀವರಗೆಲ್ಲ ಭೋಗ। ನಾರಾಯಣನ ವ್ಯಾಪಾರವಯ್ಯಾ। ವಾರಿಜ ಭವನಯ್ಯ ಗೋಪಾಲ ವಿಠ್ಠಲ। ದೂರಕೆ ದೂರತಿ ಸಾರೆಗೆ ಸಾರ್ಯಾ ॥೭॥

ಜತೆ

ಎಂತೆಂತು ತನ್ನನ್ನು ಭಜನಿಯ ಮಾಳ್ಪರಿಗೆ। ಅಂತಂತೆ ಆಗಿ ಪೊಳವಾ ಗೋಪಾಲ ವಿಠ್ಠಲ ॥೮॥

ರಾಮಚಂದ್ರ ವಿಠ್ಠಲರ ಸುಳಾದಿ ೫೩

ಪಿಂಡಾಂಡ ಬೊಮ್ಮಾಂಡದ ಸಮನ್ವಯ ಪೂರ್ವಕ ಅಧ್ಯಾತ್ಮ ಧ್ಯಾನೋ ಪಾಸನಾ ವಿವರ

ರಾಗ ಮಾರವಿ ಧ್ರುವ ತಾಳ

ಸುಜನರೆಲ್ಲರು ಹರಿಯ ಪೂಜೆಯ ವಿವರವ ಕೇಳಿ। ತ್ರಿಜಗದೊಡಿಯ ಹರಿ ಬೇಗ ಪೊಲಿವಾ। ಸೃಜಿಸಿ ಭೂಮಿಯ ಮೇಲೆ ದುಃಖ ಇನ್ನೆಲ್ಲಿದೂ, ನಿಜವಾಗಿ ಮುಕುತಿಯ ಕೊಡುವ ಬೇಗಾ। ಗಜರಾಜ ವರದನು ದೇಹಾಂಡ ದಲಿ ಸೃಷ್ಟಿ। ಅಜಾಂಡದಲಿದ್ದಷ್ಟು ಮಾಡಿಯಿಪ್ಪ । ದ್ವಿಜರನುಗ್ರಹದಿಂದ ಹರಿ ಪ್ರೇರಣೆಯಿಂದ । ನಿಜಗುರುಗಳ ಪ್ರಸಾದದಿಂದ। ಭುಜಗಾ ದ್ವಿಜ ರುದ್ರಾದಿ ಸಕಲ ವಿಭುಧರಿಗೆ। ನಿಜ ಗುರುವಾದ ಪೂರ್ಣ ಪ್ರಜ್ಞರೇ। ಸೃಜಿ ಸಿದ ಜ್ಞಾನದಿ ನುಡಿವೆ ನಲ್ಲದೆ ಎನಗೆ। ಭಜನೆ ಮಾಡಲು ಲೇಶ ಸ್ವಾತಂತ್ರವೇ । ಅಜನ ಜನಕರಾಮಚಂದ್ರ ವಿಠ್ಠಲನ್ನ । ಯಜಿಸುವ ಉಪಾಯ ನಾನರಿಯೆ ॥೧॥

ವರ ಓಂಕಾರ ಘಂಟಾನಾದವುಂಟು। ಸರಸಿಜನಾಭ ರಾಮಚಂದ್ರವಿಠಲಗೆ ।
ನಿರುತ ಸೇವಿಸುವರು ದೇಹದೊಳಗೆವುಂಟು ॥೫॥

ಧ್ರುವತಾಳ

ಮಡದಿ ಬುದ್ಧಿ ಭಕುತಿ ಎಂಬ ಸುತರನ್ನ । ಪಡದು ಪೂಜಿಸುವದು ಹರಿ ಪ್ರತಿಮೆ । ಪೊಡವೇಶ ಹರಿ ಎಂಬ ಜ್ಞಾನ । ಷಡುರಸ ಧೂಪಾದೀಪ ಪುಷ್ಪ ಸಮರ್ಪಿಸಿ । ಮಡದಿ ಮಕ್ಕಳಿಂದ ಅನಕೂಲ ಮಾಡಿಸಿ । ಮೃಡ ವಂದಿತನ ಪಾದ ಪೂಜಿಸಿರಿ । ಬಡವರಿಗೆ ವೊಲಿವ ರಾಮಚಂದ್ರ ವಿಠ್ಠಲ । ಕಡುಸುಖ ಪೂರ್ಣ ಕೊಟ್ಟಂತೆ ಕೊಂಬನಯ್ಯಾ ॥೬॥

ತ್ರಿವಿಡಿತಾಳ

ಮೈಲಿಗೆಯಿಂದ ಪೂಜಿಯು ಮಾಡಬಾರದು ಮಡಿವಂತನಾಗಿ ತಾ ಬಾಳಬೇಕು । ಭೂಲೋಕದೊಳಗೆ ಅಂತಿಜರನ ಮುಟ್ಟಬಾರದು ದೇಹ ದೊಳಗೆ ಹೊಲೆ ಕೋಪವಯ್ಯಾ । ವೇಳೆ ವೇಳೆದಲಿ ಕೋಪಕ್ಕೆ ದೂರಾಗಿ ಬಲು ಸಂತೋಷದ ಸ್ನಾನ ಮಾಡಬೇಕು । ಸೀಲಾ ಚಾರರಿಗೆ ವ್ಯಭಿಚಾರ ಸಲ್ಲದು ಈ ದೇಹದಲ್ಲಿ ವ್ಯಭಿಚಾರ ವುಂಟು । ಬಾಲ ತನದಿ ಅಂತಕಾಲ ಪರಿ ಪರಿಯಂತ । ಕಾಲರ ಘಳಿಗೆ ಬಯಕೆ ಸಲ್ಲದೊ । ನೀಲ ಮೇಘಶ್ಯಾಮ ರಾಮಚಂದ್ರ ವಿಠಲನ ಫಲ ಬೇಡದಲೆ ಭಜಿಸಬೇಕು ॥೭॥

ಅಟ್ಟತಾಳ

ಜ್ಞಾನಾನಂದ ಪೂರ್ಣನಿತ್ಯ ಸುಖಪೂರ್ಣ । ವೇಣು ಗೋಪಾಲ ಅಗ ಣಿತ ಗುಣ ಪರಿಪೂರ್ಣ । ವಾಣಿ ಜನಕ ಬೊಮ್ಮಾದಿಗಳಗಾಗಮ್ಯ । ಮಾನ ವರ ಪೂಜೆಯಿಂದಲಿ ತೃಪ್ತನೆ । ಶ್ರೀನಾಥ ಸ್ವರಮಣ ಚರಾ ಚರಾದಿಗಳಿಗೆ । ಪ್ರಾಣದೊಳು ನಿಯಾಮಕನು ತಾನು । ಹೀನರಿಗೆ ಅಲ್ಪರಿದು ಹರಿಯು ಪೂಜಿಪೆನೆಂದು । ನೀನು ತರಬೇಡ ಹರಿ ಬಡವನಲ್ಲಾ । ಧ್ಯಾನ ಮಾತ್ರ ದಿಂದ ತುಷ್ಟಿಬಡುವನು ಶ್ರೀಶ । ದೀನ ವತ್ಸಲ ರಾಮಚಂದ್ರ ವಿಠಲಾ ॥೮॥

ಆದಿತಾಳ

ಸಕಲ ಕರ್ಮಗಳನ್ನು ಮಾಡಿ । ಅಕುಟಿಲಾಗುವದೆಂತೊ । ಅಕುಟಿಲ ನಾಗಿ ಸಕಲ ಪರಿಯಲ್ಲಿ ಹರಿಯು । ಭಕುತರ ಪಾದವೆ ನಂಬೊ ಪರಿ ಪರಿ । ಲಕುಮಿ ವಲ್ಲಭನ ವರ ಕರುಣ । ಕಕುಲಾತಿ ಬಿಡಿಸುಧಯ್ಯಾ । ಮುಕುತ

ಕೊಡಿಯು ಪೊಲಿವನು ಬೇಗ। ಸುಖ ಪಡುವರೂ ಭೂಸುರರ ದೇಹವು। ಹರಿಗೆ ಕ್ಷೇತ್ರವೆಂದು ತಿಳಿದನುದಿನ। ಭಕುತಿಯಿಂದಲಿ ವಿಪ್ರರ ಪಾದಾಬ್ಜಕ್ಕೆ। ಮುಕುಟ ಚ್ಯಾಚಿ ಧನ್ಯನಾಗೊ ಮುಕುತಿ। ನಖದಿಂದಲಿ ನದಿ ಪಡದ ರಾಮಚಂದ್ರ ವಿಠಲ। ಬ್ರಾಹ್ಮರವಶನೊ ॥೯॥

ಜತೆ

ಬೊಮ್ಮಾಂಡದೊಳಗಿಪ್ಪ ಹರಿಯ ಕಾಂಬುವದೆಂತೊ। ನಮ್ಮೊಳಗಿಪ್ಪ ರಾಮಚಂದ್ರ ವಿಠಲಾ ॥೧೦॥

ಪ್ರಾಣೇಶವಿಠಲರ ಸುಳಾದಿ ೫೪

ಹೃದಯಸ್ಥ ಅಷ್ಟಪತ್ರ ಕಮಲ ವಿವರ ಅಲ್ಲಿಪ್ಪ ಅಗ್ರೇಶ ಪ್ರಾದೇಶ ಮೂಲೇಶನ ಕಾರ್ಯ, ಮುಖ್ಯ ಪ್ರಾಣಾಂತರ್ಗತ ಬಿಂಬಧ್ಯಾನ

ರಾಗ ಕಾಂಬೋದಿ ಧ್ರುವ ತಾಳ

ಧ್ಯಾನವ ಮಾಡು ಮನುಜಾ ದೇಹಾಂತರ್ಗತ ಹರಿಯ। ಭಾನು ಸನ್ನಿಭ ಭಕುತ ವತ್ಸಲ ದೇವಾ। ಜ್ಞಾನವಂತರು ಎಲ್ಲ ಈತನ ಮನದಲ್ಲಿ। ಧೇನಿಸಿ ಅಪವರ್ಗ ಐದುವರೂ। ದಾನವಾಂತಕ ರಂಗ ಅಪ್ತ ಜನನಿಯಂತೆ। ತಾನೆ ಕರುಣದಿಂದ ಕಡು ಪಾಲಿಪಾ। ಈ ನುಡಿ ಸಿದ್ಧವೆನ್ನು ಎಂದಿಗೂ ಪುಶಿ ಅಲ್ಲ। ಧೇನಿಪ ಮಾರ್ಗವ ಈಪರಿ ತಿಳಿವದು। ಈ ನವದ್ವಾರದಿಂದ ಬಲು ಪರಿ ಶೋಭಿಪ। ನಾನಾವರಣವುಳ್ಳ ದೇಹಾಖ್ಯ ನಗರದಿ। ಪ್ರಾಣಾನೆಂಬೊ ಮಂತ್ರಿಯಿಂದ ಲೊಪ್ಪುತದೇವಾ। ಆನಳಿನ ಭವರುದ್ರಾದಿಗಳಿಂದ। ತಾನು ಪೂಜೆಯುಗೊಳುತ ದಹರ ಹೃತ್ಪದ್ಮವೆಂಬ। ನಾನಾ ಶೃಂಗಾರ ಸಿಂಹಾಸನದಲ್ಲಿ ಕುಳಿತಿಪ್ಪಾ। ಜ್ಞಾನಾನಂದಪೂರ್ಣ ಬಿಂಬನೋಪಾದಿಯಲ್ಲಿ। ಆ ನಳಿನ ಕರ್ಣಿಕೆಯಲ್ಲಿ ಶ್ರೀದೇವಿಯು। ಆ ನಾಳದಲ್ಲಿ ವಾಸಾ ಭೂದೇವಿಯೂ। ಭಾನು ತೇಜದಲ್ಲಿ ದುರ್ಗಾದೇವಿಯೂ ನೀತಿ। ಯಾನು ತಿಳಿ ಕಮಲ ತ್ರಿ ಸ್ಥಳದಲ್ಲಿ। ಪ್ರಾಣನಿವಾಸ ನಮ್ಮ ಪ್ರಾಣೇಶ ವಿಠಲನ್ನ। ಮಾನಸದಲ್ಲಿ ನೋಡಿ ಸುಖಿಸು ಸತತ ॥೧॥

ಮಟ್ಟತಾಳ

ಕಮಲದಿ ಶೋಭಿಪ ಅಷ್ಟ ಪತ್ರಗಳು। ವಿಮಲ ಕಾಂತಿಯಿಂದ ವಿದಿಶ ದಿಶಗಳಲ್ಲಿ। ಸಮವಾಗಿಪ್ಪವು ಅದರೊಳು ಶಕ್ತ್ಯಾದಿ। ರಮೆಯರಸನ ನಿತ್ಯ

ಕೊಡಿಯು ಪೊಲಿವನು ಬೇಗ । ಸುಖ ಪಡುವರೂ ಭೂಸುರರ ದೇಹವು । ಹರಿಗೆ ಕ್ಷೇತ್ರವೆಂದು ತಿಳಿದನುದಿನ । ಭಕುತಿಯಿಂದಲಿ ವಿಪ್ರರ ಪಾದಾಬ್ಜಕ್ಕೆ । ಮುಕುಟ ಚ್ಯಾಚಿ ಧನ್ಯನಾಗೊ ಮುಕುತಿ । ನಖದಿಂದಲಿ ನದಿ ಪಡದ ರಾಮಚಂದ್ರ ವಿಠಲ । ಬ್ರಾಹ್ಮರವಶನೊ ॥೯।

ಜತೆ

ಬೊಮ್ಮಾಂಡದೊಳಗಿಪ್ಪ ಹರಿಯ ಕಾಂಬುವದೆಂತೊ । ನಮ್ಮೊಳಗಿಪ್ಪ ರಾಮಚಂದ್ರ ವಿಠಲಾ ॥೧೦॥

ಪ್ರಾಣೇಶವಿಠಲರ ಸುಳಾದಿ ೫೪

ಹೃದಯಸ್ಥ ಅಷ್ಟಪತ್ರ ಕಮಲ ವಿವರ ಅಲ್ಲಿಪ್ಪ ಅಗ್ರೇಶ ಪ್ರಾದೇಶ ಮೂಲೇಶನ ಕಾರ್ಯ, ಮುಖ್ಯ ಪ್ರಾಣಾಂತರ್ಗತ ಬಿಂಬಧ್ಯಾನ

ರಾಗ ಕಾಂಬೋದಿ ಧ್ರುವ ತಾಳ

ಧ್ಯಾನವ ಮಾಡು ಮನುಜಾ ದೇಹಾಂತರ್ಗತ ಹರಿಯ । ಭಾನು ಸನ್ನಿಭ ಭಕುತ ವತ್ಸಲ ದೇವಾ । ಜ್ಞಾನವಂತರು ಎಲ್ಲ ಈತನ ಮನದಲ್ಲಿ । ಧೇನಿಸಿ ಅಪವರ್ಗ ಐದುವರೂ । ದಾನವಾಂತಕ ರಂಗ ಅಪ್ತ ಜನಸಿಯಂತೆ । ತಾನೆ ಕರುಣದಿಂದ ಕಡು ಪಾಲಿಪಾ । ಈ ನುಡಿ ಸಿದ್ಧವೆನ್ನು ಎಂದಿಗೂ ಪ್ರುಶಿ ಅಲ್ಲ । ಧೇನಿಪ ಮಾರ್ಗವ ಈಪರಿ ತಿಳಿವದು । ಈ ನವದ್ವಾರದಿಂದ ಬಲು ಪರಿ ಶೋಭಿಪ । ನಾನಾವರಣವುಳ್ಳ ದೇಹಾಖ್ಯ ನಗರದಿ । ಪ್ರಾಣಾ ನೆಂಬೊ ಮಂತ್ರಿಯಿಂದ ಲೊಪ್ಪುತದೇವಾ । ಆನಳಿನ ಭವರುದ್ರಾದಿಗಳಿಂದ । ತಾನು ಪೂಜೆಸುಗೊಳುತ ದಹರ ಹೃತ್ಪದ್ಮವೆಂಬ । ನಾನಾ ಶೃಂಗಾರ ಸಿಂಹಾನದಲ್ಲಿ ಕುಳಿತಿಪ್ಪಾ । ಜ್ಞಾನಾನಂದಪೂರ್ಣ ಬಿಂಬನೋಪಾದಿಯಲ್ಲಿ । ಆ ನಳಿನ ಕರ್ಣಿಕೆಯಲ್ಲಿ ಶ್ರೀದೇವಿಯು । ಆ ನಾಳದಲ್ಲಿ ವಾಸಾ ಭೂ ದೇವಿಯೂ । ಭಾನು ತೇಜದಲ್ಲಿ ದುರ್ಗಾದೇವಿಯೂ ನೀತಿ । ಯಾನು ತಿಳಿ ಕಮಲ ತ್ರಿ ಸ್ಥಳದಲ್ಲಿ । ಪ್ರಾಣನಿವಾಸ ನಮ್ಮ ಪ್ರಾಣೇಶ ವಿಠಲನ್ನ । ಮಾನಸದಲ್ಲಿ ನೋಡಿ ಸುಖಿಸು ಸತತ ॥೧॥

ಮಟ್ಟತಾಳ

ಕಮಲದಿ ಶೋಭಿಪ ಅಷ್ಟ ಪತ್ರಗಳು । ವಿಮಲ ಕಾಂತಿಯಿಂದ ವಿದಿಶ ದಿಶಗಳಲ್ಲಿ । ಸಮವಾಗಿಪ್ಪವು ಅದರೊಳು ಶಕ್ತ್ಯಾದಿ । ರಮೆಯರಸನ ನಿತ್ಯ

ವಿಮಲ ಮೂರ್ತಿಗಳು । ಶಮಲ ನಾಶಕವಾಗಿ ಪೊಳೆವವು ಹನ್ನೆರಡು । ಕ್ರಮದಿಂದಲಿ ಪೂರ್ವ ಮೊದಲಾದ ದಿಶಗಳಲಿ । ರಮಿಸುತಿಪ್ಪವು ನೋಡು ಎರಡೆರಡು ಮೂರ್ತಿ । ಪ್ರಮತಿಯಿಂದಲಿ ಗುಣಿಸು ಎಂಟಾದವು ನೋಡು । ಭ್ರಮಿಸದೆ ತಿಳಿವದು ನಾಲ್ಕು ವಿದಿಶಗಳಲಿ । ಕ್ರಮ ಮೀರದಂತೆ ಪೊಳವು ತಿವೆ ನಾಲ್ಕು । ಸುಮನಸರಲ್ಲೆಲ್ಲಿ ದಿಕ್ಪಾಲಕರಾಗಿ । ನಮಿಸುತಿಪ್ಪರು ಕಾಣೊ ದ್ವಾದಶ(ರೂಪಗಳು)ಮೂರ್ತಿಗಳು । ಅಮಿತತೇಜದ ಶಕ್ತ್ಯಾದ್ಯೇಕಾದಶರೂಪಗಳು । ಪ್ರಮುದಾ ಕಾರಗಳು ತರುವಾಯದಿ ಒಂದು । ಪು(ಪ್ರ)ಮಾಕೃತಿ ಧರಿಸಿನ್ನು ಹೃದಯದಿ ಶೋಭಿಪವು । ಕಮಲಸಂಭವ ವಾಯು ಅಧಿಷ್ಠಾನದ್ವಯದಲ್ಲಿ । ಕುಮುದ ಪತಿಯು ತೇಜ ಪ್ರಾಣೇಶವಿಠ್ಠಲ । ಸುಮತಿಯಿಂದಲಿ ನೆನಿಯೆ ಮನದಲ್ಲಿ ಪೊಳೆವನು ॥೨॥

ರೂಪಕತಾಳ

ಹೃದಯಕಮಲದಲ್ಲಿಪ್ಪ ಕರ್ಣಿಕಾಗ್ರದಲ್ಲಿ । ಸದಮಲ ಅಗ್ರೇಶ ಸದಾ ವಾಸವಾಗೀ । ಅದುಭೂತ ಚರ್ಯನು ಆತನೆ ಪ್ರಾಜ್ಞನು ಕಾಣೊ । ತದುತದು ಜೀವರಿಗೆ ಸುಪ್ತಿದಾಯಕನೆನಿಸಿ । ಮುದದಿಂದ ಅಂಗುಷ್ಟ ಮಾತ್ರ ರೂಪವ ಧರಿಸಿ । ಮಧುಸೂದನ ಹರಿ ತಾನು ಅದುಭೂತ ಕಾರ್ಯವಮಾಳ್ಪ । ತದನಂತರದಲ್ಲಿ ಶ್ರೀ ಪದುಮನಾಭನೆ ಸರ್ವ । ಹೃದಯಾಕಾಸದಲ್ಲಿ ವೊದಗಿ ತಾ। ಪ್ರಾದೇಶಪರಿಮಿತರೂಪದಲಿ। ಸದಕಾಲದಲ್ಲಿದ್ದು ಪುರುಷನಾಮಕನಾಗಿ ಸುದರುಶನ ಧರನು ತಾನಲ್ಲಿಪ್ಪ ಬಿಡದಂತೆ । ಪದುಮ ಕರ್ಣಿಕೆಯ ಮೂಲದೇಶದಲ್ಲಿ ಶ್ರೀ । ಪದುಮೆಯರಸ ಹರಿ ಮೂಲೇಶ ನೆನಸುತಲಿ । ಮುದಭರಿತನಾಗಿ ಅಂಗುಷ್ಠಾಗ್ರ ರೂಪನಾಗಿ । ಮದನನ್ನ ಜನಕ ವಿಜ್ಞಾನಾತ್ಮಾ ಎಂಬ ನಾ । ಮದಲಿ ಶೋಭಿಸುತಿಪ್ಪ ಮುರವೈರಿ ಮುದದಿಂದ । ಉದಧಿಶಯನ ನಮ್ಮ ಪ್ರಾಣೇಶವಿಠ್ಠಲ । ಸದಧೇನಿಪರ ಮನ ಪದುಮಕೆ ತುಂಬಿ ಎನಿಪಾ ॥೩॥

ಝಂಪಿತಾಳ

ಮೂಲೇಶ ಹರಿಪದ ಕೀಲಾಲಜ ಯುಗಳ । ಮೂಲವೆನ್ನೆ ಕರದಿ ಮೇಲು ಭಕುತಿಯಿಂದ । ಶೀಲ ಗುಣ ಭಾರತಿಲೋಲ ತಾನಾದರದಿ । ಮೂಲೇಶಗಭಿಮುಖದಿ ಶ್ರೀ ಲಕುಮಿಪತಿಗುಣ । ಜಾಲನೆನಿಸುತ ಧರಿಸಿ

ಕಾಲವಂದರಘಳಿಗೆ। ಸೋಲದಲೆ ಇದ್ದು ಶಚಿಲೋಲ ದಿಶಗಭಿಮುಖಿಸಿ। ಲೀಲೆಯಿಂದಿರುತಿಪ್ಪ ಮೂಲೋಕಪತಿ ಮುಖ್ಯ। ಪ್ರಾಣನಲಿ ಶುಚಿಷತ್ ಮೇಲು ನಾಮದಲಿಂದ ಮೆರೆವ ಶ್ರೀಹರಿಯಿಪ್ಪ। ಗಾಳೂಕ ಪ್ರಾಜ್ಞ ಅಪರಾಜಿತ ವೈಕುಂಠ। ಶ್ರೀಲೋಲನಾದಂಥ ಇಂದ್ರನೆಂಬೊನಾಮ। ಮಾಲಿಕೀಯಲಿಂದ ಬಲು ಶೋಭಿಸುತಲೀ। ಪಾಲ ಸಾಗರಶಾಯಿ ಪ್ರಾಣೇಶ ವಿಠ್ಠಲ। ಮೂಲೇಶನಾಗಿ ತಾ ಲೀಲೆ ಈಪರಿಮಾಳ್ಪ ॥೪॥

ತ್ರಿವಿಡಿತಾಳ

ಶ್ರೀ ಮುಖ್ಯಪ್ರಾಣನು ಸರಸದಿಂದಲಿ ನಿತ್ಯ। ಈ ಮೂರು ವಿಧ ಜೀವರೊಳಗೆ ಇದ್ದೂ। ಯಾಮ ಯಾಮಕೆ ಬಿಡದೆ ತಾಮೇಲು ಕರುಣದಿ। ಶ್ರೀ ಮುಕುಂದನ ಹಂಸ ಮಂತ್ರಗಳ। ತಾಮರಸದಿ ಪೊಂದಿ ಮನವಿಡಿದು ತಿರುಗಿ। ಆ ಮುಹೂರ್ತ ಪರಿಯಂತ ಜಾಗ್ರತೆಯಿಂದ। ತಾ ಮೀರದಂತೆ ಇಪ್ಪತ್ತೊಂದುಸಾವಿರ ಮೇಲಾರುನೂರು ಶ್ವಾಸಂಗಳ। ಶ್ರೀ ಮಾಧವನ ಸಂಪ್ರೀತಿಗೋಸುಗ ಜಪಿಸಿ। ಈ ಮಹಿಯೊಳು ಯೋಗ್ಯಜೀವರಿಂದ। ಸಾಮಜವರದಗರ್ಪಣೆ ಮಾಡಿಸುವ। ಈ ಮಹಿಮುಸು ತನ್ನ ದ್ವಾರದಿಂದ। ಕಾಮಿತಪ್ರದ ನಮ್ಮ ಪ್ರಾಣೇಶವಿಠ್ಠಲ। ಕಾಮಿತಪ್ರದನಾಹ ಈ ಪರಿ ಧೇನಿಸೆ ॥೫॥

ಅಟ್ಟತಾಳ

ಕುದುರೆಬಾಲದ ತುದಿಯ ಕೂದಲು ಶತ। ವಿಧ ವಿಭಾಗವಮಾಡಿ ಅದರೊಳಗೊಂದನು। ಅದರಂತವೇ ನೂರು ವಿಧದಿ ವಿಭಾಗಿಸ। ಲದರೊಳಗುಳಿದ ಒಂದಂಶದ ಪರಿಮಿತ ಕಾಣೊ। ವಿಧಿ ಭವಾದಿಗಳ ವಿಡಿದು ತೃಣ ಪರಿಯಂತ। ಒದಗಿ ಜೀವರ ಮಿತಿ ಸದಕಾಲ ತಿಳಿವದು। ಇದೆ ಜೀವ ಪವನವ ಪದಕಂಜಗಳ ವಿಡಿದು ಬಲು ತಾ ಸಮೀ। ಪದಲಿ ನಿರುತಲಿದ್ದು ಸದಸತ್ಕರ್ಮವಮಾಳ್ಪ। ಅದುಭೂತ ಸಹಸ ಪ್ರಾಣೇಶವಿಠ್ಠಲ। ಸದಮಲನಾಗಿ ಸರ್ವದ ಕಾರ್ಯಗಳಮಾಳ್ಪ ॥೬॥

ಆದಿತಾಳ

ಹಂಸನಾಮಕನು ಹೃದಯಕಮಲದಲ್ಲಿ। ಹಂಸದಂತೆ ಸಂಚರಿಸುವ ದಳದಲ್ಲಿ। ಕಂಸಾರಿಯು ಅಷ್ಟಭುಜದಲ್ಲಿ। ಹಿಂಸೆ ಇಲ್ಲದೆ ಸದ ಧರಿಸಿ ಸುಂದರ

ಪದ। ಪಾಂಸುಗಳಿಂದಲಿ ಪರಿಹರಿಸುತಲಿ । ಸಂಸಾರಿಗೆ ದಳಭೇದದಿಂದ ಕರ್ಮಗಳನು ತಾ ಕೊಡುತಲಿಪ್ಪ ಹರಿ। ಭ್ರಂಶವಿಲ್ಲದಲೇ ಬಹುವಿಧ ಫಲ ವೀವ। ಸಂಸೃತಿನಾಶ ಪ್ರಾಣೇಶವಿಠ್ಠಲ ಸೀ। ತಾಂಶುವದನ ಪಾಲಿಪ ಪೊಳೆವುತಲಿ ॥೬॥

ಜತೆ

ಈಪರಿಯಲಿ ನಿತ್ಯ ಶ್ರೀಪತಿಯ ಧೇನಿಸು। ಅಪಾರಮಹಿಮ ಪ್ರಾಣೇಶ ವಿಠ್ಠಲ ಪೊಳೆವಾ ॥೮॥

॥ ಶ್ರೀಗುರು ಮಧ್ವೇಶ ಶ್ರೀ ಕೃಷ್ಣಾರ್ಪಣಮಸ್ತು ॥

ಧ್ಯಾನೋಪಾಸನಗಳನ್ನು ವಿವರಿಸುವ
ಕೆಲವು ಪದಗಳು
ಶ್ರೀ ಪುರಂದರ ವಿಠಲ ಪದ ೧

ಶ್ಲೋಕ

ಹೃದಿಸ್ಥಿತಂ ಪಂಕಜಮಷ್ಟಪತ್ರಂ। ಸಕೇಸರಂ ಕರ್ಣಿಕಪದ್ಮನಾಳಂ। ಅಂಗುಷ್ಟಮಾತ್ರಂ ಮುನಯೋವದಂತಿ । ಧ್ಯಾಯೇತವಿಷ್ಣುಂ ಪುರುಷಂ ಪುರಾಣಂ ॥೧॥

ಪದ

ಹೃದಯಕಮಲಾಷ್ಟದಳ ಹೃಷಿಕೇಶನಾರಾಯಣ ಹಂಸಗಮನಾ। ತುದಿತುದಿಲಿ ಕೇಸರದೊಳು ಮುಕ್ತಿನಾಳ ಕರ್ಣಿಕದೊಳು ॥೧॥

ಶ್ಲೋಕ

ನಾಭಿಸ್ಥಳಿಸ್ಥಿತಂ ಪದ್ಮಂ । ನಾಭ್ಯಾಂತರದಶಾಂಗುಲಂ । ಕಮಲಂ ತಸ್ಯತನ್ನಾಳಂ ನಿಮ್ನಪದ್ಮಮಧೋಮುಖಂ ॥ ಕದಳೀಪುಷ್ಪಸಂಕಾಶಂ ಚಂದ್ರಕಾಂತಿಸಮಪ್ರಭಂ। ವಿಶಾಲಂ ದಿಶಿಸಂಪೂರ್ಣಂ ಚಾರುಹಾಸಂ ಸುನಿರ್ಮಲಂ। ಪದ್ಮಕಿಂಜಲ್ಕಸದೃಶಂ। ತಪ್ತಕಾಂಚಸನ್ನಿಭಂ ॥೨॥

ಪದ

ಕಮಲಮೂಲನಾಭಿಗೆ ಹೃ। ತ್ಕಮಲಕೆ ಹತ್ತು ಅಂಗುಲ। ಕಮಲ ಕೋಮಲನಾಳ । ಕಮಲ ಅಧೋಮುಖ। ಕಮಲ ಕದಳಿಪುಷ್ಪದಂತೆ । ಕಮಲ ಚಂದ್ರ ಕಾಂತಿಯಂತೆ । ಕಮಲ ವಿಶಾಲ ಪೂರ್ಣ ದಶ ದಿಕ್ಕು । ಕಮಲ ಸ್ವರ್ಣದಂತಿಪ್ಪದು ॥೨॥

ಶ್ಲೋಕ

ಅಷ್ಟಪತ್ರಂ ತು ಹೃತ್ಪದ್ಮಂ ದ್ವಾತ್ರಿಂಶತ್ಕೇಸರಾನ್ವಿತಮ್। ತಸ್ಯ ಮಧ್ಯೇ ಸ್ಥಿತಂ ದೇವಂ ಇಂದ್ರಾದ್ಯೈಸ್ತು ಸುಸೇವಿತಮ್ ॥೩॥

ಪದ

ಅಷ್ಟದಳ ಹೃತ್ಕಮಲ ಅದಕೆ ಮೂವತ್ತೆರಡು ಕೇಸರಾ। ಅಷ್ಟರೊಳು ಕರ್ನಿಕೆ ನಾಳ ಅರಿಸಿ ಶ್ರೀ ಭೂದೇವಿಯು। ಅಷ್ಟಬಾಹು ಅಷ್ಟಾಯುಧ ಅಂಗುಷ್ಟಮಾತ್ರ ವಿಷ್ಣು। ಅಷ್ಟದಿಕ್ಪಾಲರಿಂಲು ಅಲ್ಲಿ ಬ್ರಹ್ಮಾದಿಗಳಿಂದ ॥೩॥

ಶ್ಲೋಕ

ಕೃತೇ ಶ್ವೇತಂ ಹರಿಂವಿಂದ್ಯಾ। ತ್ರೇತಾಯಾಂ ರಕ್ತವರ್ಣಕಂ। ದ್ವಾಪರೆ ಪೀತವರ್ಣಂತು। ಕೃಷ್ಣವರ್ಣಂ ಕಲೌ ಯುಗೇ। ಶಂಖಚಕ್ರಗದಾಪದ್ಮಂ ಮುಸಲಂ ಖಡ್ಗಮೇವ ಚ। ಧನುಃ ಸಹಿತ ಬಾಣಂ ಚ ಅಷ್ಟಬಾಹುಧರಂ ಹರಿಂ ॥೪॥

ಪದ

ಶ್ವೇತವರ್ನ ಕೃತಯುಗದಿ। ತ್ರೈತಾಯುಗದಿ ರಕ್ತವರ್ನಾ। ಪೀತ ವರ್ನ ದ್ವಾಪರದಿ। ಕಲಿಯುಗದಿ ಕೃಷ್ಣವರ್ನಾ। ಧೃತ ಧನು ನೇಣು ಬಾಣ ದರ ಚಕ್ರ ಗದಾ ಪದುಮ। ಅತುಂಪ್ರ(ಧನು) ಖಡ್ಗ ಮುಸುಲ ಅಷ್ಟ ಬಾಹುಗಳಲ್ಲಿ ಧರಿಸಿ ॥೪॥

ಶ್ಲೋಕ

ಪೂರ್ವದಲೇ ಪುಣ್ಯಬುದ್ಧಿ ಆಗ್ನೌ ನಿದ್ರಾಲಸ್ಯಾಧಿಕಮ್। ಯಾಮ್ಯ ದಲೇ ಕ್ರೂರಬುದ್ಧಿಃ ನೈರುತ್ಯಾಂ ಪಾಪಕರ್ಮಕೃತ್ ॥೫॥

ಪದ

ಪೂರ್ವದಳದಿ ವಿಷ್ಣುಬರಲು। ಪುಣ್ಯಮಯದಿ ಜೀವನಿರುವ। ಆರೂಢ ಆಗ್ನಿದಳದಿ ಆಲಸ್ಯ ನಿದ್ರಾರೋಗಣಿಗೆ। ಮನವೀವ ತೋರುತಿಹ

ಯಮದಿಕ್ಕಿನಲಿ ತುಂಬಿದ ಕ್ರೋಧವು ಮಿಗೆ । ಪರಿದೊಡನೆ ನೈರುತ್ಯ ಪಾಪಕೃತ್ಯಾ ॥೫॥

ಶ್ಲೋಕ

ವರುಣೇವ ಪರಿಕ್ರೀಡಾಂ ವಾಯವ್ಯಾಂ ಗಮನಾಗಮಮ್ । ನುತ್ತರೆ ರತಿಬುದ್ಧಿಸ್ಸ್ಯಾತ್ ಈಶಾನ್ಯೇ ದ್ರವ್ಯದಾನಕೃತು ॥೬॥

ಪದ

ವರುಣದಿಕ್ಕಿನಲ್ಲಿ ವಿನೋದ ವಾಯುವ್ಯದಿ ಗಮನಾಗಮನ । ಕುರುಹು ಕುಬೇರನದಿಕ್ಕಿಲಿ ಕೊಡುವ ರತಿಬುದ್ಧಿಯಾ । ತೆರಳಿ ಬಂದು ಈಶಾನ್ಯದಲಿ ದ್ರವ್ಯದಾನವಮಾಡಿಸುವ । ನೆರಡು ದಿಕ್ಪಾಲಕರಿರಲು ನಿಂತು ನಿಂತು ಬರುವಾ ॥೬॥

ಶ್ಲೋಕ

ಮಧ್ಯೆ ವೈರಾಗ್ಯಬುದ್ಧಿಸ್ತು ಜಾಗ್ರಾವಸ್ತಂತು ಕೇಸರೆ । ಸ್ವಪ್ನಾವಸ್ಥಂ ಕರ್ನಿಕಾಯಾಂ ಲಿಂಗೇತು ಸುಷುಪ್ತಿಕೃತ್ ॥೭॥

ಪದ

ಜೀವಕೀವ ವೈರಾಗ್ಯ ಜಗದೀಶನು ಮಧ್ಯನಿಂದು । ಮೂವತ್ತೆರಡು ಕೇಸರದಿ ಮುಕುಂದ ಬರಲು ಜಾಗ್ರತಿ । ಭಾವವಿತ್ತು ಕರ್ನಿಕೆಲಿ ಬಂದು ಸ್ವಪ್ನಂಗಳತೋರಿಹುನು । ಕರ್ನಿಕೆ ಬಿಂದುಮಣಿಗಳಿಹದಿ ಸುಷುಪ್ತಿನೀವಾ॥

ಶ್ಲೋಕ

ತಸ್ಯ ಮಧ್ಯೆ ಗತೋ ಭಾನುಃ ಭಾನುಮಧ್ಯೆ ಗತಃ ಶಶೀ । ಶಶೀ ಮಧ್ಯೆ ಗತೋವನ್ಹಿಃ ವನ್ಹಿಮಧ್ಯೆ ಗತಪ್ರಭಾಮ್ । ಪ್ರಭಾಮಧ್ಯೆ ಗತಂ ಪೀಠಂ ನಾಳರತ್ನೋಪಶೋಭಿತಂ । ಸಹಸ್ರಫಣಿಸಂಯುಕ್ತಂ ಮಧ್ಯೇ ದೇವಂ ಸ್ಥಿತಂ ಭಜೇತ್ ॥೮॥

ಪದ

ಮಧ್ಯಕಮಲದಿ ಸೂರ್ಯ ಮಧ್ಯಸೂರ್ಯನಲಿ ಚಂದ್ರ । ಮಧ್ಯ ಚಂದ್ರನಲಿ ಅಗ್ನಿ । ಮಧ್ಯ ತೇರು ಶೃಂಗಾರ ಮಧ್ಯ ಜಗುಲಿ । ಕಲ್ಪವೃಕ್ಷ ಮಧ್ಯ ಮಂಟಪ ಸ್ವರ್ಣಪೀಠ ಮಧ್ಯ ಮಂಟಪ । ಸಹಸ್ರಫಣಿಮಧ್ಯ ಶ್ರೀ ಭೂ ನಾರಾಯಣಾ ॥೮॥

ಶ್ಲೋಕ

ವಿದ್ರುಮಸ್ಫಟಿಕಾಕಾರಂ ಶತಸ್ತಂಭಸಮನ್ವಿತಂ । ಅನೇಕಸೂರ್ಯ ಸಂಕಾಶಂ ವಿಮಾನೇನ ವಿರಾಜಿತಂ । ಮುಕ್ತಾದಾಮಯುತಾ ನಾಢ್ಯಂ ಚಿತ್ರಧ್ವಜಪತಾಕಿನಂ ॥೯॥

ಪದ

ಹವಳಸ್ಫಟಿಕಸ್ತಂಭನೂರು ಹಾಟಕ ನವರತ್ನತೇರು । ಹವಣ ನಾಲ್ಕು ಮೂಲೆ ಜಗಲಿ ಹಲವುರತ್ನ ಶೃಂಗಾರ । ವಿವಿಧ ಮುತ್ತಿನಗೊಂಚಲು ವಿಚಿತ್ರ ಧ್ವಜಪತಾಕಿಗಳು । ರವಿಕೋಟಿಪ್ರಕಾಶದಲಿ ರಥ ಹೊಳಿಯು ತಿಹುದು ॥೯॥

ಶ್ಲೋಕ

ಮಲ್ಲಿಕಾಕುಂದಮಂದಾರಃ ಕೇತಕೈಶ್ಚಂಪಕಾದಿಭಿಃ । ಅನ್ಯೈಶ್ಚ ಗಂಧಪುಷ್ಪೈಶ್ಚ ಸಮಂತ್ಸದವಕೀರ್ತಿತಂ । ಮಹಸಾಲ್ವ್ಯಮಿದಂ ಪುಷ್ಪಂ ಕಲ್ಪವೃಕ್ಷಾಂತರೇ ಸ್ಥಿತಂ । ಏತನ್ಮಂಟಪಮಧ್ಯಸ್ಥಂ ಸ್ವರ್ಣಪೀಠೋಪರಿ ಸ್ಥಿತಂ । ಸಿಂಹಾಸನೇ ಸಮಾಸೀನಂ ಕೋಟಿಸೂರ್ಯಸಮಪ್ರಭಂ । ವಿಷ್ಣುಃ ಚತುರ್ಭುಜಂ ಲಕ್ಷ್ಮೀಭೂಮಿಭ್ಯಾಂ ಪಾರ್ಶ್ವಶೋಭಿತಂ ॥೧೦॥

ಪದ

ಮಲ್ಲಿಗೆ ಕುಂದ ಮಂದಾರ ಮರುಗ ಕೇತಕಿ ಸಂಪಿಗೆ । ಅಲ್ಲಿ ಮಂಟಪ ಶೃಂಗಾರ ಅನೇಕ ಹೂವಿಲಿ ಮಂದಿರಾ । ಸಲ್ಲುವ ಕಲ್ಪವೃಕ್ಷದಕೆಳಗೆ ಸ್ವರ್ಣ ಪೀಠ ಸಿಂಹಾಸನಪ್ರಭೆ । ಅಲ್ಲಿ ಕೋಟಿಸೂರ್ಯಪ್ರಕಾಶ ಇರುವ ವಿಷ್ಣು ಚತುರ್ಭುಜದಿ ॥೧೦॥

ಶ್ಲೋಕ

ಅನೇಕಸೂರ್ಯಸಂಕಾಶಂ ಮುಗುಟಾಟೋಪಮಸ್ತಕಂ । ಕಟಿ ಸೂತ್ರಂ ಬ್ರಹ್ಮಸೂತ್ರಂ ನೂಪುರೇಣ ವಿರಾಜಿತಂ । ಶ್ರೀವತ್ಸವನಮಾ ಲಾಢ್ಯಂ ತುಲಸೀದಾಮಭೂಷಿತಂ ॥೧೧॥

ಪದ

ಅನೇಕಕೋಟಿ ಸೂರ್ಯಸಂಕಾಶ ಅಲ್ಲಿ । ಮುಕುಟಾಟೋಪಮಸ್ತಕ ವನಜಾಕ್ಷ ಅಚ್ಯುತಗೆ । ಶ್ರೀವತ್ಸ ಕೌಸ್ತುಭ ಕೇಯೂರ ಕನಕಾಂಬರಹಾರ

ಕುಂಡಲ ಕಟಿಸೂತ್ರ ಯಜ್ಞೋಪವೀತ । ವನಜ ಗಂಧ ಪುಷ್ಪ ತುಲಸಿ ವೈಜಯಂತಿಮಾಲೆ ಧರಿಸಿಹಾ ॥೧೧॥

ಶ್ಲೋಕ

ಅನೇಕದಿವ್ಯಾಭರಣಂ ಕರಕಂಕಣ ಶೋಭಿತಂ । ವರದಭಯ ಹಸ್ತಾಭ್ಯಾಂ ಶಂಖಚಕ್ರಸ್ಫುರತ್ಕರಂ । ಪೀತಾಂಬರಮುದಾರಾಗಂ ವನ ಮಾಲಾ ವಿಭೂಷಿತಂ। ಮನೋಹರಂ ದಯಾಮೂರ್ತಿಂ ಮಂದಹಾಸ ಮುಖಾಂಬುಜಮ್ ॥೧೨॥

ಪದ

ಅನೇಕ ದಿವ್ಯಾಭರಣದಿ ಅಂಗನೇರು ತಾ ಅಲಂಕೃತದಿ। ವನಜ ನಾಭಗೆ ಕಡಗ ಕಂಕಣ ವರದಭಯ ಹಸ್ತದಿ । ಕನಕಾಂಬರ ಕಸ್ತುರಿ ನಾಮ ಕರುಣಿ ಪ್ರಸನ್ನವದನ ಶುಭಂ । ಮನೋಹರ ದಯಾಮೂರ್ತಿ ಮಂದಹಾಸ ಮುಖಾಂಬುಜದಿ ॥೧೨॥

ಶ್ಲೋಕ

ಅಣಿಮಾದ್ಯೈಃ ಮೂರ್ತಿಮದ್ಭಿರಷ್ಟೈಶ್ವರ್ಯಮುಪಾಸಿತಮ್ । ಬದ್ಧಾಂಜಲಿಸ್ಫುಟೆ ಭಕ್ತ್ಯಾ ಬ್ರಹ್ಮರುದ್ರಾದಿಭಿಸುರೈಃ । ಗಾಯದ್ಭಿನಾರದಾದ್ಯೈಶ್ಚ ಅಸ್ಯ ರಾಗೇಣ ಸೇವಿತಮ್ ॥೧೩॥

ಪದ

ಅಣಿಮಾದಿ ಅಷ್ಟೈಶ್ವರ್ಯ ಅಧೋಮುಖದಿಂ ಆರಾಧಿಸಲು। ಅಣಿಯಾಗಿ ಬ್ರಹ್ಮರುದ್ರಾದ್ಯರು ಅಂಜಲಿಮಾಡಲು। ಅಣಿಯಾಗಿ ನಾರದಾದ್ಯರು ಕೈ ಮುಗಿದು ಗಾನವಮಾಡಲು । ಕುಣಿವರೂರ್ವಸಿ ರಂಭೆ ಮೇನಕಿ ತಿಲೋತ್ತಮೆಯರು ॥೧೩॥

ಶ್ಲೋಕ

ಸನಕಾದ್ಯೈಃ ಸೇವ್ಯಮಾನೈಃ ಸೂತಮಾಗದಬಂದಿಭಿಃ। ಅನ್ಯೈಶ್ಚ ಕರಣಾಭರಣೈಃ ಕರಕಂಕಣಶೋಭಿತೈಃ । ದಿವ್ಯಸ್ತ್ರೀಕರಯುಗ್ಮಾಭ್ಯಾಂ ಚಾಮರಾಭ್ಯಾಂ ಸುಸೇವಿತಮ್। ಮಾಧವಂ ಪರಮಾತ್ಮಾನಂ ಭಕ್ತವತ್ಸಲ ಮೀಶ್ವರಂ। ಧ್ಯಾಯೇದ್ದೇವಂ ಹೃದಿ ಸೂರ್ಯಮಂಡಲೇನಂತ ರಂಜಯೇತು॥

ಪದ

ಸನಕಾದಿಯೋಗಿಯರು ಸ್ತೋತ್ರಗಳಮಾಡಲು । ಮನ ಮೆಚ್ಚಲು ಬಂದಿ ಸೂತ ಮಾಗಧರು ಹೊಗಳಲು । ಅನೇಕ ದಿವ್ಯಾಭರಣದಿ ಅಲ್ಲಿ ಕಂಕಣದುಭಯಪಾರ್ಶ್ವದಿ । ಕನಕ ಕಾಮಿನಿ ಛತ್ರ ಚಾಮರಕಾಂತೆರಿಬ್ಬರು ಢಾಳಿಸಲು ॥೧೪॥

ಶ್ಲೋಕ (ಅರ್ಜುನವಾಚ)

ದುರ್ವಿಜ್ಞೇಯಂ ದುರಾರಾಧ್ಯಂ ದುಷ್ಪ್ರಗಮ್ಯಂ ಜನಾರ್ದನಂ । ಅಧೋಮುಖಮಧೋಭೂತ್ವಾ ಹೃದಯಂಕೇನ ಗಚ್ಛತಿ ॥೧೫॥

ಪದ

ದುರ್ವಿಜ್ಞೇಯ ದುರಾರಾಧ್ಯ ದುಷ್ಪ್ರಗಮ್ಯ ಜನಾರ್ದನ । ನಿರ್ವಿತ್ಯಾದಿ ಅಧೋಮುಖದಿ ನೆಲಿಸಿ ನೆಟ್ಟಗಿಹನ । ಉರವಿಲಿ ಮಾನಸಾಂಬುಜೆ ಉಪಾಸ್ಯ ಅರ್ಜುನ ಕೇಳಲು । ಸರ್ವಾಂತರ್ಯಾಮಿ ಕೃಷ್ಣ ಉಪಾಯ ಪೇಳಿದನು ॥೧೫॥

ಶ್ಲೋಕ (ಶ್ರೀಭಗವಾನುವಾಚ)

ಅಧೋಮುಖಂತು ಹೃತ್ಪದ್ಮಮುಧೃತ್ಯ ಪ್ರಣವೇನ ತತ್ । ಗತ್ವಾತು ಪದ್ಮಕೋಶಂತು ವಿಕಸೇ ವ್ಯಾಹೃತಂ ಪುನಃ । ತತಃ ಪಶ್ಚಾದ್ಭವೇತ್ಪದ್ಮ ಸರ್ವ ಗಾತ್ರಸುಖಾವಹಂ । ಆವಾಹನಾಸನಪಾದ್ಯಮರ್ಘಮಾಚಮನಾದಿಕಂ ।

ಪದ

ಭಾವ ಪ್ರಣವ ವ್ಯಾಹೃತಿ ವಾಯುಬದ್ಧದಲಿ ಹೃತ್ಕಮಲ । ನೋವಿಲ್ಲದೇ ಅಧೋಮುಖದಿ ನೂಕುತ ಉನ್ನತದರಳುವದು । ಆವಾಹನವು ಆಸನವು ಅಂತರದಲಿ ಪಾದ್ಯವು । ದೇವಗರ್ಘ್ಯ ಆಚಮನಾದಿಗಳು ಉಪಚರಿಸೋ ॥೧೬॥

ಶ್ಲೋಕ

ಸ್ನಾನಂ ವಸ್ತ್ರೋಪವೀತಂಚ ಆಚಮ್ಯಂ ಚೋತ್ತರೀಯಕಂ । ಆಚಮ್ಯ ಗಂಧಪುಷ್ಪಂ ಚ ಧೂಪದೀಪಂ ನಿವೇದಯತುಃ । ನೈವೇದ್ಯಂ ಪುನರಾಚಮ್ಯಂ ತಾಂಬೂಲಂಚ ನಿವೇದಯೇತ್ । ಪ್ರದಕ್ಷಣಂ ನಮಸ್ಕಾರಂ ಕೃತ್ವಾ ಸ್ತುತ್ವಾ ಸಮರ್ಪಯೇತ್ ॥೧೭॥

ಪದ

ಅಭಿಷೇಕಂಗಳು ವಸ್ತ್ರವು ಅರ್ಪಿಸು ಯಜ್ಞೋಪವೀತವು। ಉಭಯಾಚಮನೋತ್ತರಿಯಾ ವೊಮ್ಮೆ ಮತ್ತೊಂದು ಆಚಮನ। ಪ್ರಭುವಿಗೆ ಗಂಧಪುಷ್ಪವಿಟ್ಟು ಧೂಪ ದೀಪ ನೈವೇದ್ಯ। ವಿಭುವಿಗೆ ಅಚಮನ ತಾಂಬೂಲ ಪ್ರದಕ್ಷಣ ನಮಸ್ಕಾರ ॥೧೭॥

ಶ್ಲೋಕ

ತೈಲಾಜ್ಯವರ್ತಿ ಸಂಯುಕ್ತಂ ದೀಪಂ ಚ ಜೋತಿರೂಪಕಂ। ತಾದೃಶಂ ಪರಮಾತ್ಮಾನಂ ಸ್ಮರೇತ್ಪಾರ್ಥಹ್ಯನನ್ಯಭಾಕ್। ಶುದ್ಧಂ ಸೂಕ್ಷ್ಮಂ ನಿರ್ವಿಕಾರಂ ಶ್ರೀನಿವಾಸಂ ನಿರಂಜನಂ। ಅಪ್ರಮೇಯಮಜಂ ದೇವಂ ತಂ ವಿಂದಾತ್ ಪುರುಷೋತ್ತಮಂ ॥೧೮॥

ಪದ

ತವಕದಿಂದಲಿ ಸ್ತುತಿಸಿ ತೈಲಾಜ್ಯಭತ್ತಿಯಲಿ। ಹವಣಿಸಿದ ಜ್ಯೋತಿಯಂತೆ ಹರಿಯ ಮೂರುತಿಕಾಣೊ। ಪವನೇಶನ ಇಂತು ಧ್ಯಾನಿಸಿ ಪರಮಾತ್ಮ ಶುದ್ಧ ಸೂಕ್ಷ್ಮ ಶ್ರೀ। ನಿವಾಸ ನಿರ್ವಿಕಾರ ನಿರಂಜನ ಅಪ್ರಮೇಯಾ॥

ಶ್ಲೋಕ

ಮಚ್ಛಕೂರ್ಮವರಾಹಂ ಚ ನಾರಸಿಂಹಂ ಚ ವಾಮನಂ। ಭಾರ್ಗವಂ ರಾಘವಂ ಕೃಷ್ಣಂ ಬುದ್ಧಂ ಕಲ್ಕಿನಮೇವಚ। ಅನಂತಂ ವಿಶ್ವರೂಪಂ ಚ ಈಶಾಂಚಾಗ್ರೆ ಪ್ರಪೂಜಯತು ॥೧೯॥

ಪದ

ಮಚ್ಛ ಕೂರ್ಮ ವರಹಾ ಮತ್ತೆ ಶ್ರೀನಾರಸಿಂಹ। ಹೆಚ್ಚಾಳು ವಾಮನ ಹಿರಿದ ಪರಶುರಾಮ। ಅಚ್ಚರಾಮಕೃಷ್ಣ ಬೌಧ್ಯ ಅಶ್ವವೇರಿದ ಕಲ್ಕಿಯು। ಅಚ್ಯುತ ದಶಾವತಾರದಿ ಅನಂತ ಅವತಾರ ಆದರೂಪಾ ॥೧೯॥

ಶ್ಲೋಕ

ಪದಾದಧಸ್ತಲಂ ವಿಂದ್ಯಾ ತ್ಪಾದೋರ್ಧ್ವಂ ವಿತಲಮ್ ಭವೇತ್। ಸುತಲಂ ಜಂಘದೇಶೇತು ಜಾನುದೇಶೆ ರಸಾತಲಮ್। ತಳಾತಳಂ ಊರು ದೇಶೇ ಗುಹ್ಯದೇಶೇ ಮಹಾತಲಂ। ಪಾತಾಲಂ ಕಟಿದೇಶೇತು ಸಪ್ತಮಂ ಪರಿಕಲ್ಪಿತಂ ॥೨೦॥

ಪದ

ಅತಳದಲಿ ಪಾದವಿಹುದು ಆಪಾದೂರ್ಧ್ವ । ವಿತಳದಲಿ ಸುತಳದಲಿ ಜಂಘೆಗಳು । ಚೋದ್ಯ ಜಾನು ರಸಾತಳದಿ ಇಹದು ತತ್ರಿ । ಲಿ ತೊಡೆ ತಳಾತಳದಿ ಮಹತಳದಿ ಗುಹ್ಯವಿಹದು । ಪ್ರತಿ ಇಲ್ಲದ ಕಟಿಭಾಗದಲಿ ಪಾತಾಳವಿಹದು ॥೨೦॥

ಶ್ಲೋಕ

ಭೂಲೋಕನಾಭಿ ಮಧ್ಯಸ್ಥಂ ಭುವರ್ಲೋಕಂತು ಕುಕ್ಷಿಸೀ । ಜನೋಲೋಕಂ ಕಂಠದೇಶೇ ತಪೋಲೋಕಂ ಲಲಾಟಕೇ । ವಕ್ಷಸ್ಥಲೇ ಸುವರ್ಲೋಕಂ ಕುಕ್ಷಸು ಮಹರ್ಲೋಕಂ । ಸತ್ಯಲೋಕಂತು ಮೂರ್ಧ್ನಿಸ್ತು ಭುವನಾನಿ ಚತುರ್ದಶಾ ॥೨೧॥

ಪದ

ಭೂಲೋಕ ನಾಭಿ ಮಧ್ಯ ಭೂರ್ಲೋಕದಲಿ ಕುಕ್ಷಿ । ಮೇಲು ಸುವರ್ಲೋಕದಲಿ ವ್ಯದು ಹೃದಯ ಶ್ರೀವತ್ಸ । ಶ್ರೀಲೋಲನ ಕುಕ್ಷಗಳು ಸೇರಿ ಇಹವು ಮಹರ್ಲೋಕದಿ । ಮಾಲೆ ಕೌಸ್ತುಭ ಜನೋಲೋಕದಿ ಮತ್ತೆ ಕೊರಳು ಇಹದು । ತಪೋಲೋಕ ಲಲಾಟವು ತಲೆ । ಸತ್ಯಲೋಕದಲಿ **ವಿಪರೀತವಿರಾಟ್‌ರೂಪ** ವಿಶ್ವ ತೈಜಸ ಪ್ರಾಜ್ಞತುರ್ಯ । ಉಪೇಂದ್ರ ಎಪ್ಪತ್ತೆರಡು ಸಾಸಿರ ಉಪನಾಡಿಯಲ್ಲಿಹ । ಉಪಾಸ್ಯನಾಗಿ ಇಹ ಕಾಣೊ ಶ್ರೀ ಹೃದಸ್ಥನಾಗಿ । ಕಪಟನಾಟಕ ಸೂತ್ರಧಾರಿ ಕಾಣೋ ಶ್ರೀ ಪುರಂದರ ವಿಠ್ಠಲ ॥೨೧॥

॥ ಶ್ರೀ ಗುರು ಮಧ್ವೇಶ ಶ್ರೀ ಕೃಷ್ಣಾರ್ಪಣಮಸ್ತು ॥

ಟೀಪು: ಇದು ಆಗ್ನೇಯಪುರಾಣೋಕ್ತ ಮಾನಸಪೂಜಾಕ್ರಮವನ್ನು ಶ್ರೀ ಪುರಂದರ ದಾಸರು ಆಧಾರಪೂರ್ವಕ ರಚಿಸಿದ್ದಾರೆ. ಇದರಲ್ಲಿ ೨೦–೨೧ ಶ್ಲೋಕದಲ್ಲಿ ಪರಮಾತ್ಮನ ವ್ಯಾಪ್ತಿ ಎಲ್ಲಕಡಿಯಲ್ಲಿಯೂ, ಮತ್ತು ಇದರ ವಿಪರೀತವಾಗಿ ಒಂದೊಂದವಯವದಲ್ಲಿಯೂ ಸಹ ಪಾತಾಳಾದಿ ಲೋಕಗಳು ಅವೆ. ಸರ್ವಾವಯವ ಪರಿಪೂರ್ಣನೆಂದು ಉಪಾಸನೆ ಒಂದರೊಳಗೊಂದು ಬೆರದಿಹ ಇಂದಿರೇಶನರೂಪಗಳು ಅಧಿಕಾರ ವಿವಿಕ್ಷತೆಯಿಂದ ಚಿಂತಿಸದು ವಿಪರೀತ ವಿರಾಟರೂಪ ಧ್ಯಾನ ಚಿಂತನೆ ಭಾಗವತಕ್ಕೆ ವಿರೋಧವಿಲ್ಲ.

ಶ್ರೀ ವಿಜಯವಿಠಲರ ಪದ ೨

ರಾಗ ಕೇತಾರಗೌಳ ಝಂಪಿತಾಳ

ಮನಸು ನಿಲ್ಲಿಸುವದು ಬಹಳ ಕಷ್ಟ । ಗುಣಿಸುವದು ನಿಮ್ಮೊಳಗೆ ನೀವು ನೆರೆಬಲ್ಲವರು ॥ಪಲ್ಲ॥ ಮುರದೋಡಿಬರುವ ರಣರಂಗ ನಿಲಿಸಬಹುದು ಹರುವ ನದಿಗಳ ತಿರುಹಿ ನಿಲಿಸಬಹುದು ॥ ಕರಿಸೊಕ್ಕಿಬರುತಿರಲು ತಡೆದು ನಿಲಿಸಲಿ ಬಹುದು । ದುರುಳಮನ ನಿಲಿಸುವದು ಸುರರಿಗಳವಲ್ಲಾ ॥೧॥ ಭೈರವನ ದಾಡಿಯನು ಬಡದು ನಿಲಿಸಲಿಬಹುದು । ಮಾರುತನ ತರುಬಿ ನಿಲ್ಲಿಸಲಿ ಬಹುದು ॥ ಮಾರಿಗಳ ಮುಂಜರಗುತುಡಕಿ ನಿಲಿಸಲಿ ಬಹುದು । ಹಾರಿ ಹಾರುವ ಮನಸು ನಿಲಿಸನೆಲೆನ್ನ ವಳಲ್ಲ ॥೨॥ ಶರಧಿಗಳ ಘೋರ್ಗರೆವಧ್ವನಿಯು ನಿಲಿಸಲಿಬಹುದು । ಸುರಿವ ಬಿರಿಮಳೆಯನ್ನು ನಿಲಿಸಬಹುದು ॥ ಹರಿದೋಡುವ ಮನಸ್ಸು ನಿಲಿಸಲೆನ್ನಾರಳವೇ । ಸಿರಿಯರಸ ವಿಜಯವಿಠಲ ತಾನೇ ಬಲ್ಲಾ ॥೩॥

ಪದ ೩

(ಐತಿಹಾಸಿಕ) ಬಿಂಬಾಹ್ವನೆ ಪ್ರಾರ್ಥನೆ.

ರಾಗ ತೋಡಿ ಅಟ್ಟತಾಳ

ಹರಿಮಣಿವರ್ಣ ವಿಠಲಾ ನಿನ್ನವನೋ । ಪರಮ ಪ್ರೀತಿಯಿಂದ ಪಾಲಿಸಬಾರಯ್ಯಾ ॥ಪಲ್ಲ॥ ಹೃದಯ ಪಂಕಜದಳ ಕೂಡಿತುನೋಡು । ಮುದರಿ ಕೊಂಡವು ಕುಮುದಾವೆಂಬೊ ಕಂಣು ॥ ಪದುಮನಾಭನೆ ನಿನ್ನ ನಖವೆಂಬೊ ರವಿವದನವೆಂಬೊ ಚಂದ್ರಮ ವುದಿಸಲಿ ॥೧॥ ಬಿರಿದಾಗಿ ಕಿವಿಯೆಂಬೋ ಮನೆಯಿಪ್ಪವು । ಸ್ಪರಿಶಾವಾಡುವೆನೆಂದು ಕಲಿಸುಳಿದಾ ॥ ಹರಿನಿನ್ನ ಗೆಜ್ಜೆಧ್ವನಿಯಿಂದಾ ಕರ್ನಮಂದಿರವೆ ತುಂಬಲಿ । ಕಲಿಅಡಿಗಿಪೋಪಾ ॥೨॥ ನಾಸ ದುರ್ವಾಸನೆಗೆ ಯಿಚ್ಛೆಮಾಡಿತು । ಹೇಸಿಕೆ ರಸಗಳಿಗೆ ಜಿಂಹ್ವೆ ಪೋಗುವದು ॥ ಪೂಸಿದಾ ದಿವ್ಯಗಂಧ ದಿವ್ಯವಾಸನೆ ಬರಲಿ । ಲೇಸು ನಿನ್ನ ನಾಮರಸ ಸುರಿಸುವಂತೆ ಮಾಡು ॥೩॥ ನೀನಿಲ್ಲದೆ ತುಲಾ ಕಾವೇರಿಯೊಳಗೆ । ಸ್ನಾನ ಜಪತಪಂಗಳು ಮಾಡುವದ್ಯಾಕೆ ॥ ಕಾಣದಿರೆ ನಿನ್ನ ಚರಣ ಸಿರಿ । ಪ್ರಾಣರಿಗೆ ಪ್ರಾಣನಾದ ಬಲು ಮೋಹನ್ನ ॥೪॥ ಈ ಕ್ರೋಧ

ನಾಬ್ದ ಆಶ್ವಿಜ ನಿನ್ನ ಪಕ್ಷ್ಮದ। ಯೇಕಾದಶಿ ರಾತ್ರಿಯೊಳು ಬಾ ಹೃದಯ ದೊಳಗೆ॥ ಯ್ಯಾಕೆ ಕೊಡದಯ್ಯಾ ಜೀಯಾ ಪೇಳೊ ಯನ್ನೊಡೆಯಾ। ಲೋಕಚರಿಸುವದೇನು ನಿನ್ನ ಪೋಗಾಡಿ॥೫॥ ಧವಳಗಂಗೆಯೊಳಂದ ಬಿದ್ದು ಬಂದಾಗ। ಕವಿ ವಾದಿರಾಜಗೊಲಿದೂ ಬರಲಿಲ್ಲವೇ॥ ಅವರ ದಾಸಾನು ದಾಸನು ಸತತ ನಾನು। ತವಕದಿಂದಪಿ ಬಾರೊ ಭಕ್ತವತ್ಸಲಾ॥೬॥ ಅರ್ಚಿಸಬಲ್ಲೆನೆ ದೇವಾ ನಿನ್ನನುದಿನಾ। ಗಚ್ಚರಿತವಂದಲ್ಲದೆ ಮತ್ತಾವದರಿಯೆ ಅಚ್ಚುತದಾಸರ ಪ್ರಿಯಾ ವಿಜಯುತಲಾ। ಬೆಚ್ಚಿಸಿದೋಪಾದಿಯಲ್ಲಿ ಪೊಂದಿ ಬಾರಯ್ಯಾ॥೭॥

ಪದ ೪

ರಾಗ ಭೈರವಿ ತ್ರಿವಿಡಿತಾಳ

ಆವಾವ ಬಗೆಯಿಂದ ಹರಿಗರ್ಪಿಸೋ। ಭಾವಶುದ್ಧನಾಗಿ ಮುಖ್ಯತ್ವ ವೊಹಿಸದೆ॥ಪಲ್ಲ॥ ನೋಡುವ ನೋಟಗಳು ಹರಿಯೇ ನೋಡಿದನೆನ್ನಿ। ವೋಡುವಾಟಗಳು ಹರಿಯೇ ವೋಡಿದನೆನ್ನಿ॥ ಆಡುವಾ ಮಾತುಗಳು ಹರಿನುಡಿದನೆನ್ನಿ॥೧॥ ನಡೆವ ನಡಿಗೆಯೆಲ್ಲ ಹರಿಯೇ ನಡೆದನೆನ್ನಿ। ಕೊಡುವ ದಾನಗಳು ಹರಿಯೇ ಕೊಟ್ಟನೆನ್ನಿ॥ ಒಡನಾಡುವಾ ಲೀಲೆ ಹರಿಯೇ ಆಡಿದ ನೆನ್ನಿ। ಪಿಡಿವಚೇಷ್ಟಿಗಳೆಲ್ಲ ಹರಿಯೇ ಪಿಡಿದನೆನ್ನಿ॥೨॥ ಕೇಳುವಶಬ್ದಗಳು ಹರಿಯೆ ಕೇಳಿದನೆನ್ನಿ। ಹೇಳುವ ವಿಧವನಿತ್ತುದು ಹರಿಯೇ ಎನ್ನಿ॥ ಮಾಲೆ ಧರಿಸುವಾದು ಹರಿಯೆ ಧರಿಸಿದನೆನ್ನಿ। ಮೇಲು ಸುಖಬಡುವದು ಹರಿಯೆ ಎನ್ನಿ॥೩॥ ವಾಸನೆಕೊಂಬುವದು ಹರಿಯೆಕೊಂಡದನೆನ್ನಿ। ಭೂಷಣ ವಿಡುವದು ಹರಿಯೇಯೆನ್ನಿ॥ ಲೇಸು ಬಯಸುವದು ಹರಿಯೇ ಬಯಿಸಾ। ಗ್ರಾಸಮೆಲ್ಲುವದೆಲ್ಲ ಹರಿಯೇಯೆನ್ನಿ॥೪॥ ಸತಿಯಕೂಡುವದೆಲ್ಲ ಹರಿಯೆ ಕೂಡಿದನೆನ್ನಿ। ಹಿತವಾಗಿಪ್ಪೋದು ಹರಿಯೇ ಎನ್ನಿ॥ ಸುತರ ಪಡದದ್ದೆಲ್ಲ ಹರಿಯೇ ಪಡದಾನೆನ್ನಿ। ಪ್ರತಿಕೂಲವಾಗುವದೇ ಹರಿಯೇ ಎನ್ನಿ॥೫॥ ಬಳಗಸಾಕುವದೆಲ್ಲ ಹರಿಯೆ ಸಾಕಿದನೆನ್ನಿ। ಸುಲಭರಾದರೆ ಹರಿಯಾದ ನೆನ್ನಿ॥ ಗಲಭೆಮಾಡುವದೆಲ್ಲ ಹರಿಯೆಮಾಡಿದನೆನ್ನಿ। ಸುಳಿದಾಡುವದೆಲ್ಲ ಹರಿಯೆ ಎನ್ನಿ॥೬॥ ಏನಂಬೆ ಹರಿ ಲೀಲೆ ನಿರ್ದೋಷ ನಿಸ್ಸಂಗಾ। ಅನಂತ

ಕಾಲಕಕ್ಕೆ ಯೆಲ್ಲಿದ್ದರೂ ॥ ಜ್ಞಾನಮಯ ಕಾಯ ವಿಜಯವಿಠ್ಠಲರೇಯಾ । ನಾನಾ ವ್ಯಾಪಾರಂಗಳಮಾಳ್ಪಾ ನೆನ್ನಿ ॥೭॥

ಪದ ೫

ಅಧ್ಯಾತ್ಮ ಉಪಾಸನಾ

ರಾಗ ರೇಗುಪ್ತಿ ಅಟ್ಟತಾಳ

ಅರ್ಚನೆ ಬಗೆ ಕೇಳಿ ಲೋಕ ॥ಪಲ್ಲ॥ ಕಣ್ಣು ಮುಚ್ಚಿ ಕುಳಿತರೆ ಕೊಡ ಹರಿ ಮುಕ್ತಿಲೋಕಾ ॥ಅ ಪಲ್ಲ॥ ಜಡವಪೂಜಿಸಿದರಲ್ಲೇನೂ ತಾನು । ಜಡ ತುಲ್ಯ । ನಾಗಿದ್ದದಕೆ ಸಮವೇನೋ ॥ ಕೆಡದಿರು ಇದರೊಳು ನೀನು । ತಿಳಿ ವಡನೆ ಕರ್ಮಂಗಳಲ್ಲೇನುಂಟು ಕಾಣೊ ॥೧॥ ಯೇಕಾಂತದಲ್ಲಿ ನಿನ್ನ ಮನಸ್ಸು । ಅನೇಕವಾಗುವದು ನಿರಂತರಗುಣಿಸು ॥ ನೀ ಕೇಳು ಯೋಚಿಸಿ ಗಣಿಸು ಸರ್ವ । ಆಕಾರದಲ್ಲಿ ಶ್ರೀಹರಿಯನ್ನೆ ನೆನಿಸು ॥೨॥ ತ್ರಿವಿಧ ಜೀವರು ಮಾಡುವಂಥ । ನಡತಿ । ಹವಣವ ನೋಡಿದು ಪಂಥ ॥ ಕವಿಗಳೊಡನೆ ಸುಪಂಥ ದಿಂದ । ಪವಮಾನಮತ ಪೊಂದಿ ಭಜಿಪದು ಯಿಂಥಾ ॥೩॥ ದ್ವ್ಯಣುಕವಿಡಿದು ಬಹುಕಾಲಾ । ತನಕ । ಎಣಿಕೆ ಮಾಡುತಲಿರು ನಿತ್ಯ ಸುಶೀಲ ॥ ಗುಣವಂತನಾಗೊ ನೀ ಬಹಳ ಸುಖ । ವನಧಿ ರಂಗನ್ನ ವ್ಯಾಪಾರ ವೆನ್ನು ಬಾಲಾ ॥೪॥ ಆವಾಗ ಮರಿಯದಿರು ಹರಿಯಾ । ಕಂಡ ಠಾವಿನಲಿ ಯೋಚಿಸು । ಅರಘಳಿಗೆ ಒಯಸದಿರು ಸಿರಿಯಾ ॥ ದೇವ ವಿಜಯವಿಠ್ಠಲ ಧೊರೆಯಾ । ನಿನ್ನ । ಭಾವದಲ್ಲಿ ತಿಳಿಯೊ ಆತನ ಚರಿಯಾ ॥೫॥

ಪದ ೬

ರಾಗ ಕಾಂಬೋದಿ ಝಂಪಿತಾಳ

ಅಂತರಂಗದ ಕದವು । ತೆಗೆಯಿತಿಂದು ॥ ಎಂತು ಪುಣ್ಯದ ಫಲಾ ಪ್ರಾಪ್ತಿ ಫಲಿಸಿತೊ ಎನಗೇ ॥ಪಲ್ಲ॥ ಯೇಸು ದಿನವಾಯಿತೊ ಬೀಗ ಮುದ್ರೆಯಮಾಡಿ । ವಾಸವಾಗಿದ್ದರು ದುರುಳರಲ್ಲೀ ॥ ಮೋಸವಾಗಿತ್ತು ಇಂದಿನ ತನಕ ಮಸಿನ । ರಾಶಿಪೊಳಗೆ ಹೊಳಿಕಾಣಿಸುತ್ತಿದ್ದಿಲ್ಲಾ ॥೧॥ ಗುರು ಕರುಣವೆಂಬಂಥ ಕೀಲಿ ಕೈದೊರಕಿತು । ಹರಿಕರುಣವೆಂಬಂಥ ಶಕ್ತಿಯಿಂದ ಪರಮಭಾಗವತರ ಸಹವಾಸದಲಿ ಪೋಗಿ । ಹರಿ ಸ್ಮರಣೆಯಿಂದಲಿ ಬೀಗವನು ತೆರದೆ ॥೨॥ ಸುತ್ತಲಿದ್ದವರೆಲ್ಲ ಪಲಾಯನರಾದರೂ । ಬತ್ತಿಕಕ್ಕಡಿಜ್ಞಾನ

ವೆಂಬ ದೀಪಾ ॥ ಜತ್ತಾಗಿ ಹಿಡಕೊಂಡು ದ್ವಾರವನು ಪೋಗಲು । ಎತ್ತ ನೋಡಿದರತ್ತ ಶ್ರಿಂಗಾರಸದನಾ ॥೩॥ ಹೊರಗೆ ದ್ವಾರವು ನಾಲ್ಕು ವೊಳಗೈದು ದ್ವಾರಗಳು। ಪುರದ ದ್ವಾರಾದಿಗೆ ಪ್ರಾಣಾದಿ ಜಯರೂ ॥ ಮಿರಗುವ ಮಧ್ಯ ಮಂಟಪ ಕೋಟಿ ರವಿಯಂತೆ। ಸರಸಿಜಾನಾಭನ ಅರಮನಿಯಸೊಬಗೂ ॥೪॥ ಸ್ವಮೂರ್ತಿ ಗಣ ಮಧ್ಯ ಸಚ್ಚಿದಾನಂದೈಕ। ರಮೆಯಧರದಿಂದಲಾ ಲಿಂಗತ್ವದೀ ॥ ಕಮಲಜಾದಿಗಳಿಂದ ನುತಿಸಿಕೊಳ್ಳುತ ಹೃದಯ। ಕಮಲ ದೊಳಗಿರ್ದ ವಿಜಯವಿಠ್ಠಲನ್ನ ಕಂಡೇ ॥೫॥

ಪದ ೭

ರಾಗ ಭೈರವಿ ತ್ರಿವಿಡಿತಾಳ

ವಿಗ್ರಹವನೆ ನಿಲ್ಲಿಸೊ ವೆಂಕಟ ನಿನ್ನ ಗಗ। ನಾಗ್ರಕೆ ಬೆಳೆದು ಗಂಗೆಯ ಪಡೆದ ನಿನ್ನ ॥ಪಲ್ಲ॥ ರನ್ನದ ಮುಕುಟ ಸುವರ್ಣ ಕುಂಡಲತೇಜ। ಚನ್ನ ಗಂಡಸ್ಥಳದಿ ತೂಗಿ ಪೊಳೆವ ನಿನ್ನ ॥೧॥ ಕೊರಳು ತ್ರಿರೇಖೆಯುಕ್ತ ಕೌಸ್ತುಭ ಹಾರಾ। ಉರದಲ್ಲಿ ಸಿರಿವತ್ಸ ಧರಿಸಿ ಮೆರೆವ ನಿನ್ನ ॥೨॥ ಕುಕ್ಷಿಯೊಳಗೆ ಅಕ್ಷಲೋಕವನು ಅಡಗಿಸಿ। ಪೇಕ್ಷೆಯಿಂದಲಿ ಸುರರ ರಕ್ಷಿಸಿ ನಗುವ ನಿನ್ನ ॥೩॥ ನಖದೊಳಾನಂತ ಬ್ರಹ್ಮಾಂಡವನಡಗಿಸಿ। ಮುಕ್ಕಳಾಟಿಕೆಯಿಂದ ಮುರಳು ಮಾಡುವ ನಿನ್ನ ॥೪॥ ಉತ್ಪತ್ತಿ ಸ್ಥಿತಿಲಯ ಕಾರಣಕರ್ತ ಜಗ। ತ್ಪತಿ ವಿಜಯವಿಠ್ಠಲ ವೆಂಕಟ ನಿನ್ನ ॥೫॥

ಪದ ೮

ರಾಗ ಶಂಕರಾಭರಣ ಅಟ್ಟತಾಳ

ಮಾನಸ ಪೂಜೆಯನು ಮಾಡು। ಧ್ಯಾನಪೂರ್ವಕದಿಂದ ಕುಳಿತು। ಜ್ಞಾನ ಭಕುತಿಯ ವಿಡಿದು। ಲಕುಮಿ ಪ್ರಾಣನಾಥನ್ನ ಪ್ರೇರಣೆಯಿಂದ ॥ಪಲ್ಲ॥ ಕಾಮಕ್ರೋಧವ ಹಳಿದು ವಿಷಾದ। ಸ್ತೋಮಗಳನು ತೊರೆದು। ರಜೋ ತಾಮಸ ಬುದ್ಧಿಯಬಿಟ್ಟು। ನೇಮನಿತ್ಯ ತೀರಿಸಿ ॥ ಶ್ರೀಮದಾನಂದ ತೀರ್ಥರ। ಕೋಮಲಾಂಘ್ರಿಯ ಕಮಲದಲ್ಲಿ ಈ ಮನಸು ಇಟ್ಟು ನೀ ನಿಷ್ಕಾಮದಲಿ ಬಗೆಯ ತಿಳಿದು ॥೧॥ ಹೃದಯ ಪದುಮದೊಳಗೆ ಹರಿಯ ಪದುಮಗಳಿಟ್ಟು। ದೇಹ। ಕದಲದಂತೆ ಇಟ್ಟು ಜ್ಞಾನ। ಉದಿತವಾದ

ದೃಷ್ಟಿಯಾ ॥ ಹದುಳದಿಂದಲಿ ತಿಳಿದು ಅಂತರಂಗದಲಿವ್ರುಳ್ಳವೆಲ್ಲ ನೋಡಿ । ಕದವ ತೆರದಕೊಟ್ಟ ತೆರದಿ । ಮುದದಿ ಧೃಡವಸಂಪಾದಿಸಿ ॥೨॥ ನೀಲ ರತುನದಂತೆ ಹೊಳೆವ ಪಾಲಸಾಗರ ತನುಜೆ । ಅಲುಮೇಲು ಮಂಗರಮಣ ನಾದ ಮೇಲುಗಿರಿಯ ತಿಮ್ಮನ ॥ ಲಾಲಣೆಯಿಂದ ತುತಿಸಿ ತವಕ । ಬೀಳದಲೆ ಪೂಜಾವಿಧ । ಸಾಲುಗಳನ ತಿಳಿದು ವಿಶಾಲಬುದ್ಧಿ ಯುಕುತಿ ಯಿಂದ ॥೩॥ ವೇದಮಂತ್ರಗಳನ್ನು ಪೇಳಿ ಆದಿಯಲ್ಲಿ ಪೀಠಪೂಜೆ । ಯಾದ ತರುವಾಯ ವಿ । ನೋದದಿಂದಲಾವರಣಾ ॥ ಆದಣೆಯಾದ ಬಳಿಕ । ಮಾಧವಂಗೆ ಸಕಲ ಭೂಷ । ಣಾದಿಗಳನು ರಚಿಸಿ ನೀ ಪುಣ್ಯ । ಹಾದಿಯನು ತಪ್ಪದೆ ॥೪॥ ದೋಷರಾಶಿಗೆ ದ್ವೇಷನಾಗಿ । ಈ ಶರೀರವ ಘಾಸಿಮಾಡದೆ । ನಾಶರಹಿತನಾದ ಹರಿಯ । ಆ ಶಿರಸು ಪಾದಾ ॥ ಲೇಸಿನಿಂದ ಭಜನೆಗೈದು । ವಾಸವಾಗುವ ಪದವಿಯಲ್ಲಿ । ಶ್ರೀಶ ವಿಜಯವಿಠಲರನ್ನ । ದಾಸದಾಸರ ದಾಸನೆಂದು ॥೫॥

ಪದ ೯

ರಾಗ ಶಂಕರಾಭರಣ ಅಟ್ಟತಾಳ

ಭಜಿಸಿದ್ಯಾ ಈ ಭಾಗ್ಯನಿಧಿಯಾ । ಭಜಿಸಿದ್ಯಾ ಈ ಭಾಗ್ಯಸಿಧಿಯಾ । ನೋಡು । ತ್ರಿಜಗವಂದಿತ ಗುಣಾಂಬುಧಿಯಾ ॥ ಹಾಹಾ ॥ ಸುಜನರ ಹೃದಯಪಂಕಜ ಕರ್ನಿಕೆವಾಸ । ಅಜ ಸುರಾರ್ಚಿತಪಾದ । ರಜತಮೋ ದೂರನ್ನ ॥ಪಲ್ಲ॥ ಮಣಿಮಯ ಖಚಿತ ಕಿರೀಟ । ಚಂದ್ರ । ಮನ ಸೋಲಿ ಸುವ ಲಲಾಟ । ಸಣ್ಣ ಫಣಿ ಕಸ್ತೂರಿನಾಮಮಾಟ ನ । ಮ್ಮನು ನೋಡುವ ವಾರೆ ನೋಟ ॥ ಹಾಹಾ ॥ ಕನಕ ಮಕರ ಮೋಹನ ಕುಂಡಲ ಕರ್ನ । ಮಿನುಗುವ ಕದಪು ಅವಿನ ಸೋಲಿಸೆ ನಿತ್ಯಾ ॥೧॥ ಭೃಂಗಕುಂತಳ ನೀಲ ಕೇಶಾ । ಪುಬ್ಬು ಅಂಗಜ ಚಾಪವಿಲಾಸ ಉ । ತ್ತುಂಗ ಚಂಪಕ ಕೋಶನಾಸ ರಸಾ । ರಂಗುದುಟಿ ಮಂದಹಾಸ ॥ ಹಾಹಾ ॥ ತಿಂಗಳ ಎಳೆಬೆಳದಿಂಗಳ ಮಿಗೆ । ಭೂ । ಮಂಗಳಾಕೃತಿ ತಿರುವೆಂಗಳ ಸ್ವಾಮಿಯ ॥೨॥ ಪರಿಮಳವೀಳ್ಯೆ ಕರ್ಪುರ । ವಿಟ್ಟ । ಕರಡಿಗೆ ಬಾಯ ಮಧುರ । ವಾಣಿ । ಸ್ವರನಾದಾ ಜಲಧಿ ಗಂಭೀರ । ದಂತ । ಪರಿ ಪಂಕ್ತಿ ಸಮವಿಸ್ತಾರ ॥ ಹಾಹಾ ॥ ಮಿರಗುವಾನಂತ ಚಂದಿರ ತೇಜಾಧಿಕ ಮುಖ । ಪರಿಪರಿ ವೇದ ಉಚ್ಚರಿಸುವ ಚತುರನ್ನ ॥೩॥

ಬಕುಳಾರವಿಂದ ಮಲ್ಲಿಗೆ ಕುರು। ವಂಕ ಪನ್ನೀರು ಸಂಪಿಗೆ। ಪೊಂಗೇ । ತಕಿ ಮರುಗು ಶಾವಂತಿಗೆ । ಭೂಚಂ। ಪಕ ಜಾಜಿ ಇರವಂತಿಗೆ ॥ ಹಾಹಾ ॥ ಸಕಳವು ತುರುಬಿರೆ(ಗೆ) ಮುಕುಳಿತಾ ವಿಕಶಿತ। ಮಕರಂದ ಮಾರಂದೋ। ದಕ ಸುರಿಯುಲಿಂದು ॥೪॥ ಕಡಗ ಕಂಕಣಮುದ್ರೆ ಬೆರಳಾ। ಪಾಣಿ। ನಿಡಿದೋಳು ಕಕುಭುಜ ಕೊರಳಾ। ಸ್ಕಂಧ ಪಡಿ ಸಪ್ತಪರ್ನಾದಿ ಸರಳಾ ಬೆನ್ನು। ಮುಡಿಯಲ್ಲಿಟ್ಟಾ ಮಣಿ ಹರಳ ॥ ಹಾಹಾ ॥ ಜಡಿತಾದಪವಿ ಅಳವಡಿಸಿದ ಕೇಯೂರ। ಒಡ್ಡನೆ ತಾಯಿತ ಕೀರ್ತಿ। ವಡವೆಲಿ ಮೆರೆವನ್ನ ॥೫॥ ಕರತಳ ರೇಖೋಪರೇಖಾ। ಕಾಂತಿ। ಅರುಣ ಸುರವಿ ಮಯೂಖ। ಬ್ಯಾರೆ। ಪರಿಶೋಭಿಸುವ ಹಿಸ್ತಶಾಖಿ। ಮೇಲು। ಧರಿಸಿದ ಚಕ್ರಾದಿಶಂಖ॥ ಹಾಹಾ॥ ಸರಿಗೆ ಕೌಸ್ತುಭಮಣಿ ಸಿರಿವತ್ಸ ವನಮಾಲಾ। ಉರ ವೈಜಯಂತಿ ಮಂದಾರ ಹೀರ ಹಾರನ್ನ ॥೬॥ ಮುತ್ತು ವೈಡೂರ್ಯ ಪ್ರವಾಳಾ। ಪಚ್ಚಾ ಕೆತ್ತಿದ ಪದಕ ನ್ಯಾವಳ ಸುತ್ತ। ಸುತ್ತಿದ ಸನ್ಮುಡಿವಾಳ। ಈತಾ ಸ್ತುತ್ತಿಪ ಜನಕೆ ಜೀವಾಳ॥ ಹಾಹಾ ॥ ಪ್ರತ್ಯೇಕವಾಗಿ ತೂಗುತಿಹ ಸರಗಳು। ತತ್ತುಲಸಿ ದಾಮ ಚಿತ್ರವಾಗಿರೆ ಬಲು ॥೭॥ ಪುಣಗು ಕೇಸರ ಗಂಬೂರ। ಗೋರೋ। ಚನ ನಖ ಚಂದನ ಅಗರ। ಪಚ್ಚೆ। ನೆನೆ (ತೆನೆ) ಮೃಗನಾಭಿ ಪನ್ನೀರ । ವ್ಯಾಳ। ಘನ ಪರಿಮಳಗಂಧ ಸಾರ ॥ ಹಾಹಾ ॥ ತನುವಿಗೆ ತನುವು ಲೇಪನ ವಾದ ಸೊಗಸು ವಾ। ಸನೆ ಸುತ್ತ ಘಮುಘಮ ತನುರುಹಾವಳಿ ತಿಳಿ ॥೮॥ ತ್ರಿವಳಿ ಉಪಗೂಢ ಜಠರ । ಅಖಿಳವನಿ ಧರಿಸಿದ ಧೀರ। ನಾಭಿ। ಸೂವರ್ನ ಕುಸುಮ ಮಂಜೀರ। ವ್ಯಗ। ದೆವವುಡಿ ಉಡಧಾರ॥ ಹಾಹಾ॥ ಭವಕಿಂಕಿಣಿತಳಲಾವಿ ವಸನ ಬಿರಿ। ದಾವಳಿ ತೊಡರು ದೈತ್ಯಾವಳಿ ಹರನನ್ನ ॥೯॥ ಊರು ಜಾನು ಜಂಘೆ ಗುಲ್ಫಾವಿ। ಚಾರಿಸೆ ಕ್ರಮಾತು ಅಲ್ಪ। ಗುಣ। ಸಾರ ಮಾಡಿಪ್ಪ ಸಂಕಲ್ಪ ॥ ಹಾಹಾ॥ ವಾರಣಕರದಂತೆ ಹಾರೈಸು ಇಂತು। ನೂಪುರ ಕಡಗ ಗೆಜ್ಜೆ ಚಾರು ಚರಣ ಪೆಂಡೆ ॥೧೦ ಮೃದುದಳಾಂಗುಲಿ ನಖ ಭಾಸ। ರಕ್ತ। ಪದತಳ ಧ್ವಜ ವಜ್ರಾಂಕುಶ । ಚಕ್ರ। ಪದುಮಾದಿ ಚಿನ್ಹೆ ಸಿದ್ಧೋರ್ವೀಷ। ಹೊಹೊ। ಸುಧಿಯಾಸುರಿವ ಪೀಠ ಸರಸ॥ ಶಹಾ ॥ ತ್ರಿದಶನಾಯಕ ಶಿವ। ವಿಧಿಗಳ ಮಕುಟ । ವಾದದಲಿ ಮೃರ್ದವಾದದು ನೋಡಿ ತರುವಾಯು ॥೧೧॥ ಭಾನು ಶಶಿವರ್ನ ಪಾದ

ಪಾಪ । ಕಾನನ ದಹಿಸುವ ಪಾದ । ಕಾಮ । ಧೇನು ಚಿಂತಾಮಣಿ ಪಾದ ॥ ಬಲು ಜ್ಞಾನಾನಂದಪ್ರದ ಪಾದ ॥ ಹಾಹಾ ॥ ಅನಂತ ದಿನಕೊಮ್ಮೆ ನೀನೆ ಗತಿಯೆಂದಾ । ಮಾನವಗೆ ಬಂದು ಕಾಣಿಸಿಕೊಂಬನ್ನ ॥೧೨॥ ಅಪದಕ್ಷ ಸಾರಾಧ್ಯಕ್ಷ ಸರ್ವ । ವ್ಯಾಪಕ ಕರುಣಿ ಕಟಾಕ್ಷ ಜಾಗ್ರ । ಸ್ವಾಪದಲ್ಲಿ ಪ್ರಾಜ್ಞಾದಕ್ಷಾ । ನಿಜ । ಆಪನ್ನರಿಗೆ ದಾವಾವೃಕ್ಷ ॥ ಹಾಹಾ ॥ ರೂಪ ರೂಪಾಂತ ವ್ಯಾಪಾರವಾಳ್ವನ್ನ । ಆಪಾದ ರತುನ ಮೌಳಿ ಪರಿಯಂತರ ॥೧೩॥ ಹಿಂದಣ ಅನುಭವ ಧ್ಯಾನಾ ವೇಗಾ । ತಂದು ಸಂಪಾದಿಸು ಜ್ಞಾನ ಭಕ್ತಿ । ಯಿಂದ ಮುಂದಕೆ ನಿದಾನ ಚಿತ್ತಾ । ಯಿಂದ ಕೊಂಡಾಡು ಮುನ್ನಿೀನ ॥ ಹಾಹಾ ॥ ಬಂಧಾನಾ ಹರಿಸಿ ಆನಂದವ ಕೊಡುವ । ಮುಕುಂದ ಅನಿಮಿತ್ಯಬಂಧು ವೆಂಕಟನ್ನ ॥೧೪॥ ಭುಜಗಾದ್ರಿ ನಿಲಯ ಗೋಪಾಲ । ನಿತ್ಯ । ಭಜಿಸುವ ಜನರಿಗೆ ಶೀಲ । ಪುಣ್ಯ । ವೃಜ ಪಾಲಿಸುವ ವಿಶಾಲ । ಯಿತ್ತು । ನಿಜರೊಳಗಿಡುವ ಈ ಕೋಲ ॥ ಹಾಹಾ ॥ ವೃಜದಲಿ ಪುಟ್ಟಿದ ಸುಜನಾಂಬುಧಿ ಸೋಮ । ವಿಜಯವಿಠಲರೇಯ ಗಜರಾಜ ವರದನ್ನ ॥೧೫॥

ಶ್ರೀ ಗೋಪಾಲವಿಠ್ಠಲರ ಪದ ೧೦

ರಾಗ ಶಂಕರಾಭರಣ ಅಟ್ಟತಾಳ

ಪೂಜಿಸು ಪೂರ್ಣಾನಂದನ್ನ ಮಹ । ರಾಜಾಧಿರಾಜೇಶ್ವರನ್ನ । ರಾಜಸ ತಾಮಸತ್ವ ದೂರ ಸಾಕಾರನ್ನ । ವ್ಯಾಜವಿಲ್ಲದಲೆ ನಿರ್ವ್ಯಾಜದಿಂದಲಿ ನಿತ್ಯ ॥ಪಲ್ಲ॥ ನಾರಾಯಣ ಗುಣಪೂರ್ಣ ದೋಷ । ದೂರ ಜಗದೇಕ ಕಾರಣ ಸರ್ವ । ಸಾರ ಭೋಕ್ತ ಸ್ವರಮಣ । ಜ್ಞಾನ ವಾರಿಧಿ ಚಲ್ವ ಶ್ರೀ ರಮಣ ॥ ಹಾಹಾ ॥ ಆರಬ್ಧಾಂತಗಾಮಿ ನೀರಜದಳನೇತ್ರ । ಸಾರ ಹೃದಯನ ಸನ್ನಿೋದದಿ ಮಾಡಿನ್ನು ॥೧॥ ಅಕಾರ ರೂಕಾರ ಮಕಾರಯಿದೆ । ಓಂಕಾರದಾಗ ವಿಸ್ತಾರ ಪುರುಷಸೂಕ್ತ ಗಾಯತ್ರಿ ವಿಸ್ತಾರ ಅದು । ನಾಲ್ಕು ವೇದಗಳಿಂದ್ವಿಚಾರ ॥ ಹಾಹಾ ॥ ಅ ಉ ಮ ಕಾರವಾಚ್ಯ ಬ್ರಹ್ಮ ಶಿವ ವಿಷ್ಣು । ಏಕೋ ನಾರಾಯಣಾನೇಕ ಪೂಜ್ಯನೆಂದು ॥೨॥ ಮೂಲ ಪ್ರಕೃತಿಯ ಮಂದಿರ ನೋಡು । ಮೇಲಾದವ್ಯಕ್ತ ಗೋಪುರ । ಯಿದಕೆ ಯೇಳು ಧಾತುಗಳ ಪ್ರಾಕಾರಾ । ಹೃದಯಾ ಮೂಲ ಪದುಮ ಪೀಠಾಧಾರಾ ದಲ್ಲಿ॥

ಸ್ತ್ಯಾಗ ಚಿಂತಿಸಿ ಅಹಂ ಮಮ । ತ್ಯಾಗಮಾಡಿ ಬಿಡದೆ ॥೧೧॥ ಸ್ವರವರಣ ಉಚ್ಚಾರಣಮಂತ್ರ ಮರದು ಮತಿಯಾದ (?) ಸ್ಮರಣ । ದೇಹ ಧರುವು ಮುಂತಾದ ಈ ಕರಣ ದಿಂದು । ಸುರುಪೋಪದಕೆ ಹರಿಸ್ಮರಣ ॥ ಹಾಹಾ ॥ ಬರಿದೆ ಉಚ್ಚರಿಸದೆ ವರಣಂಗಳಲಿ ಹರಿ । ವರಣ ಬಿಂಬಾರೂಪ ಅರಿದು ಸಮರ್ಪಿಸಿ ॥೧೨॥ ಮರವಾಗು ಮನೆಯಾಗು ಹರಿಗೆ ನೋಡು । ತರುವಾಗು ಅಶ್ವಾಗು ಹರಿಗೆ ಕೇಳೊ । ಕರಿಯಾಗು ಹರಿಯಾಗು ಹರಿಗೆ ಇನ್ನು ಗಿರಿ ಯಾಗು ಧರಿಯಾಗು ಹರಿಗೆ ॥ ಹಾಹಾ ॥ ಪರಿಪರಿ ಏನಿಲ್ಲಿ ಪರಿಣಾಮಿಸಿದ ದೆಲ್ಲಾ । ಬರಿದಾಗಗೊಡದಲೆ ಎರಗಿ ಸಮರ್ಪಿಸಿ ॥೧೩॥ ಎಂಭತ್ತುನಾಲುಕು ಲಕ್ಷ ಯೋನಿ ಲಿಂಬಾಗೀವ ಕಮಲಾಕ್ಷ । ಅಲ್ಲಿ । ಬಿಂಬನಾಗೀವನು ಮೋಕ್ಷ । ನಿನ್ನ । ಬಿಂಬಾನೆ ನೋಡು ಪ್ರತ್ಯಕ್ಷ ॥ ಹಾಹಾ ॥ ಹಂಬಲಿಸಿ ಹಲವು ಯೋನಿಗಳಲಿನ್ನು । ಉಂಬೋದುಟ್ಟದ್ದೆಲ್ಲಾ ಬಿಂಬಾ ಈತನೆ ಯೆಂದು ॥೧೪॥ ಹೊರಗೆ ಈ ಬಗೆ ಪೂಜೆಮಾಡಿ ನಿನ್ನಂ । ತರದಲ್ಲೀ ಬಗೆ ನೋಡಿ ಉಪ । ಚರಿಸಿ ಭಕ್ತಿಲಿ ಕೊಂಡಾಡಿ ನಿಜ । ಗುರು ಕೈಯ್ಯಾಗೀಫಲ ನೀಡಿ ॥ ಹಾಹಾ ॥ ಮರುದಂತರ್ಯಾಮಿ ಶ್ರೀಗೋಪಾಲವಿಠಲನ್ನ । ಚರಣಕಮಲ ಮತ್ತೆ ಮರಿಯದೆ ಮನದಲ್ಲಿ ॥೧೫॥

ಪದ ೧೧

ರಾಗ ಅಟ್ಟತಾಳ

ಮೋಸಹೋದೆನಲ್ಲ ಕಾಣದೆ ಮೋಸಹೋದೆನಲ್ಲ । ವಾಸುದೇವ ನಿತ್ಯ ವಾಸವಾಗೆನ್ನಲ್ಲಿ । ಪೋಷಿಸುತಿಪ್ಪ ವಿಶೇಷನ ಕಾಣದೆ ॥ಪಲ್ಲ॥ ಸ್ಥೂಲ ದೇಹದೊಳು ಏಳುಪರಿ ಧಾತು । ಗಳಿಪ್ಪವು ವಂದಾ । ರೊಳಗೆ ವಂದಿನ್ನು । ಕೇಳು ತ್ವಕು ಚರ್ಮ ಮಾಂಸ । ಮೇಲು ರುಧಿರ ಮ್ಯಾಲೆ ಮೇದೋ ಮಜ್ಜಾಸ್ಥಿ । ಯೊಳಿನ್ನು ಹರಿ ಇಪ್ಪ ॥೧॥ ಪ್ರಸ್ತಾವನಾಮಕನಿರುದ್ಧ ತ್ವಕ್ಕಿನಲಿ । ಪ್ರತಿಹಾರನಾಮಸಂಕರುಷಣ ಚರ್ಮ ॥ ಮತ್ತೆ ಮಾಂಸ ಉದ್ಗೀಥ ವಾಸುದೇವ । ಇತ್ಥಂಡದಿ ಇವರಿಬ್ಬರು ಇಪ್ಪರು ॥೨॥ ಈ ದಾವ ರುಧಿರದಿ ನಿಧನನಾಮಕ । ಮೇದಸ್ಸಿನಲ್ಲಿಪ್ಪ ವಷಟ್ಕಾರನು ॥ ಆದಿ ನಾರಾ ಯಣ ರೂಪ ಮಜ್ಜಾದಲ್ಲಿ । ಸ್ವಾದಗ್ರಹಿಸು ಸರ್ವದ ಇಪ್ಪರ ॥೩॥ ಅಸ್ಥಿ ಗಳಲ್ಲಿ ಉಪೇಂದ್ರನಾಮಕನು । ಸುತ್ತ ತನ್ನ ಪರಿವಾರಸಹಿತ ಯಾ । ವತ್ತು

ನ್ನಾಗ ಚಿಂತಿಸಿ ಅಹಂ ಮಮ । ತ್ಯಾಗಮಾಡಿ ಬಿಡದೆ ॥೧೧॥ ಸ್ವರವರಣ ಉಚ್ಚಾರಣಮಂತ್ರ ಮರದು ಮತಿಯಾದ (?) ಸ್ಮರಣ । ದೇಹ ಧರುವು ಮುಂತಾದ ಈ ಕರಣ ದಿಂದು । ಸುರುಪ್ರೋಪದಕೆ ಹರಿಸ್ಮರಣ ॥ ಹಾಹಾ ॥ ಬರಿದೆ ಉಚ್ಚರಿಸದೆ ವರಣಂಗಳಲಿ ಹರಿ । ವರಣ ಬಿಂಬಾರೂಪ ಅರಿದು ಸಮರ್ಪಿಸಿ ॥೧೨॥ ಮರವಾಗು ಮನೆಯಾಗು ಹರಿಗೆ ನೋಡು । ತರುವಾಗು ಅಶ್ವಾಗು ಹರಿಗೆ ಕೇಳೊ । ಕರಿಯಾಗು ಹರಿಯಾಗು ಹರಿಗೆ ಇನ್ನು ಗಿರಿಯಾಗು ಧರಿಯಾಗು ಹರಿಗೆ ॥ ಹಾಹಾ ॥ ಪರಿಪರಿ ಏನಿಲ್ಲಿ ಪರಿಣಾಮಿಸಿದದೆಲ್ಲಾ । ಬರಿದಾಗಗೊಡದಲೆ ಎರಗಿ ಸಮರ್ಪಿಸಿ ॥೧೩॥ ಎಂಭತ್ತುನಾಲುಕು ಲಕ್ಷ ಯೋನಿ ಲಿಂಬಾಗೀವ ಕಮಲಾಕ್ಷ । ಅಲ್ಲಿ । ಬಿಂಬನಾಗೀವನು ಮೋಕ್ಷ । ನಿನ್ನ । ಬಿಂಬಾನೆ ನೋಡು ಪ್ರತ್ಯಕ್ಷ ॥ ಹಾಹಾ ॥ ಹಂಬಲಿಸಿ ಹಲವು ಯೋನಿಗಳಲಿನ್ನು । ಉಂಬೋದುಟ್ಟಿದ್ದೆಲ್ಲಾ ಬಿಂಬಾ ಈತನೆ ಯೆಂದು ॥೧೪॥ ಹೊರಗೆ ಈ ಬಗೆ ಪೂಜೆಮಾಡಿ ನಿನ್ನಂ । ತರದಲ್ಲೀ ಬಗೆ ನೋಡಿ ಉಪ । ಚರಿಸಿ ಭಕ್ತಿಲಿ ಕೊಂಡಾಡಿ ನಿಜ । ಗುರು ಕೈಯ್ಯಾಗೀಫಲ ನೀಡಿ ॥ ಹಾಹಾ ॥ ಮರುದಂತರ್ಯಾಮಿ ಶ್ರೀಗೋಪಾಲವಿಠಲನ್ನ । ಚರಣಕಮಲ ಮತ್ತೆ ಮರಿಯದೆ ಮನದಲ್ಲಿ ॥೧೫॥

ಪದ ೧೧

ರಾಗ ಅಟ್ಟತಾಳ

ಮೋಸಹೋದೆನಲ್ಲ ಕಾಣದೆ ಮೋಸಹೋದೆನಲ್ಲ । ವಾಸುದೇವ ನಿತ್ಯ ವಾಸವಾಗೆನ್ನಲ್ಲಿ । ಪೋಷಿಸುತಿಪ್ಪ ವಿಶೇಷನ ಕಾಣದೆ ॥ಪಲ್ಲ॥ ಸ್ಥೂಲ ದೇಹದೊಳು ಏಳುಪರಿ ಧಾತು । ಗಳಿಪ್ಪವು ವಂದಾ । ರೊಳಗೆ ವಂದಿನ್ನು । ಕೇಳು ತ್ವಕು ಚರ್ಮ ಮಾಂಸ । ಮೇಲು ರುಧಿರ ವ್ಯಾಲೆ ಮೇದೋ ಮಜ್ಜಾಸ್ಥಿ । ಯೊಳಿನ್ನು ಹರಿ ಇಪ್ಪ ॥೧॥ ಪ್ರಸ್ತಾವನಾಮಕನಿರುದ್ಧ ತ್ವಕ್ಕಿನಲಿ । ಪ್ರತಿಹಾರನಾಮಸಂಕರುಷಣ ಚರ್ಮ ॥ ಮತ್ತೆ ಮಾಂಸ ಉದ್ಗೀಥ ವಾಸುದೇವ । ಇತ್ಥಂಡದಿ ಇವರಿಬ್ಬರು ಇಪ್ಪರು ॥೨॥ ಈ ದಾವ ರುಧಿರದಿ ನಿಧನನಾಮಕ । ಮೇದಸ್ಸಿನಲ್ಲಿಪ್ಪ ವಷಟ್ಕಾರನು ॥ ಆದಿ ನಾರಾಯಣ ರೂಪ ಮಜ್ಜಾದಲ್ಲಿ । ಸ್ವಾದಗ್ರಹಿಸು ಸರ್ವದ ಇಪ್ಪರ ॥೩॥ ಅಸ್ಥಿಗಳಲ್ಲಿ ಉಪೇಂದ್ರನಾಮಕನು । ಸುತ್ತ ತನ್ನ ಪರಿವಾರಸಹಿತ ಯಾ । ವತ್ತು

ಧಾತಿನಲ್ಲಿ ಯೇಣಿಕೆತಟ್ಟಲಾಗಿ । ಮತ್ತೆ ಬಹು ಬಹು ರೂಪಗಳಿಂದಿಪ್ಪ ॥೪॥ ಮುನ್ನೂರಾ ಅರವತ್ತುರೂಪ ಮಜ್ಜದಲ್ಲಿ । ಮುನ್ನೂರಾ ಅರವತ್ತುರೂಪ ಅಸ್ಥಿಯಲ್ಲಿ । ಮುನ್ನೂರಾ ಅರವತ್ತುರೂಪ ಅಂಗುಲಿಪರ್ವದಲಿಪ್ಪವೆಂಬಂಥ ವಿವರನನಯದೆ ॥೫॥ ಯಾವತ್ತು ಕೂಡಲೀ ಏಳು ಧಾತುಗಳೊಳು । ಸಾವಿರವೆಂಭತ್ತು ರೂಪಂಗಳು ॥ ತಾವಿಪ್ಪವಿನ್ನು ತತ್ತ್ರಧಾರವಾಗಿ । ಜೀವ ದೇಹದಲ್ಲಿ ನಿಲಿಸಿಪ್ಪನ ಕಾಣದೆ ॥೬॥ ಅನ್ನಮಯ ಪ್ರಾಣಮಯಗಳು ಯೆಂತೆಂಬೊ । ಮನೋಮಯಾದಿ ಪಂಚ ಕೋಶಂಗಳು। ಇನ್ನಿದರೊಳಿದ್ದು ಲಿಂಗದೇಹಕಿನ್ನು । ಚನ್ನಾಗಿ ಕವಚದಂತಿಪ್ಪವೆಂದರಿಯದೆ ॥೭॥ ಅನ್ನಮಯದಲ್ಲಿ ಅನಿರುದ್ಧನಾಮಕ । ಇನ್ನು ಪ್ರಾಣದಲ್ಲಿ ಪ್ರದ್ಯುಮ್ನನೂ । ಮನೋಮಯದಲ್ಲಿ ಸಂಕರುಷಣನಾಗಿ । ಚನ್ನ ವಿಜ್ಞಾನದಿ ವಾಸುದೇವನು ಇಪ್ಪ ॥೮॥ ಷೋಡಶಕಳೆವುಳ್ಳ ಲಿಂಗದೇಹವನು ಇನ್ನು । ಕೂಡಿಪ್ಪದಿನ್ನು ಅನಾದಿಯಿಂದ ಜೀವಕ್ಕೆ ॥ ಮೂಢಬುದ್ಧಿಯಲಿಂದ ತಿಳಿಯಗೊಡದೆ ಅಲ್ಲಿ । ಮಾಡಿಪ್ಪರು ವಾಸ ಮೂರು ಮೂರ್ತಿಗಳಿನ್ನು ॥೯॥ ಜೀವನ ಪ್ರಮಾಣವಾಲಾಗ್ರ ಶತ ಭಾ । ಗವನು ಮಾಡಲು ತಾನು ಉಳಿದಷ್ಟು । ಈ ವಿಧಸ್ವರೂಪದೊಳಗೆ ಪುರುಷನಾಮಕದೇವನಿಪ್ಪನು ಜೀವಸ್ವರೂಪದಿ ॥೧೦॥ ಜೀವನ ಹೃತ್ಕಮಲಕರಣಿಕೆಯಲ್ಲಿ । ಜೀವಾಂಗುಲಿಪ್ರಮಾಣದಿಂದಾತ್ಮನೂ ॥ ದೇವ ಬಿಂಬರೂಪನಾಗಿ ವೊಳಗೆ ಯಿಪ್ಪು । ಅವ ಅನಾದ್ಯನಂತಕಾಲದಿ ಬಿಡದಿಪ್ಪ ॥೧೧॥ ಜ್ಞಾನಾನಂದಾತ್ಮಕಾಂಗೇಯ ಭಕುತರಿಂದ । ಅನೇಕರೂಪ ಅಘಟಿತಾಘಟಿತಾ । ಜ್ಞಾನಿಗಳಿಗೆ ಪ್ರೀಯ ಗುಣಗಣಪೂರ್ಣ । ಆ ನಾರಿಸಹಿತದಿ ತಾಸಿರುತಿಪ್ಪ ॥೧೨॥ ಧೋರ ದೇಹದೊಳಗೆ ನಾಭಿಯಾ ಕೆಳಗೆ । ಆರಂಗುಲಿ ಪರಿಮಿತಾ ಆರಂಭಿಸಿ ॥ ಚಾರು ಶಿರಸಿನ ಪರಿಯಂತ ಬ್ರಹ್ಮನಾಡಿ । ಮೂರೆರಡು ಭೇದವುಳ್ಳದಾಗಿಪ್ಪದು ॥೧೩॥ ಪಂಚಭೇದವುಳ್ಳ ಬ್ರಹ್ಮನಾಡಿ ಇನ್ನು । ಪಂಚವಿಧರೂಪ ರೂಪದಿಂದೊಪ್ಪುದು ॥ ಪಂಚವಿಧ ಭಗದ್ರೂಪ ಅಲ್ಲಿದ್ದು । ಕೊಂಚವಿಲ್ಲದೆ ವ್ಯಾಪಾರಮಾಡಿಸುವರು ॥೧೪॥ ಧೀರ ವಜ್ರಕ ಹರಿದ್ವರಣ ಪ್ರದ್ಯುಮ್ನನಾ । ಆರ್ಯನಾಡಿ ನೀಲವರ್ನ ಅನಿರುದ್ಧ ॥ ತೋರುವ ಪ್ರಕಾಶಿನಿ ಶುಕ್ಲ ವಾಸೇದೇವ। ಶೂರ ಸಂಕರುಷಣ ಪಿಂಗಳ ವೈದ್ಯುತಿಲಿಪ್ಪ ॥೧೫॥

ಆವ ಬ್ರಹ್ಮನಾಡಿ (ಶುಭ್ರ) ಅರುಣ ನಾರಾಯಣ । ಈವದು ಅದಕೆ ಹಿಂಭಾಗದಿ ವಜ್ರಕಾ ॥ ಆವ ಆರೂಢದಲಿ

ನೋಟ್:— ಮುಂದೆ ನುಡಿ ೧೬ ರಿಂದ ೨೬ ನುಡಿ ಪೂರ್ತಿ ದೊರೆತಿಲ್ಲ. ನಡುವಿನ ಹಳೆ ಕಾಗದವೇ ಹೋಗಿವೆ. ಈ ೧೧ ನುಡಿಗಳ ಪ್ರಮೇಯವು ಸಪ್ತಾವರಣದೇಹ, ಎಂಬ ಸುಳಾದಿಯಲ್ಲಿಯೂ ಮತ್ತು ಮಾನಸಸ್ಮೃತಿಯಲ್ಲಿಯೂ, ನಾಡಿ ವಿವರ ಸುಷುಮ್ನಾನಾಡಿಗತ ೬೨ ಕಮಲಗಳವಿಚಾರ ಹೇಳಿದ್ದಾರೆ. ಅದನ್ನು ನೋಡಿ ಚನ್ನಾಗಿ ಮನವರಿದು ಧ್ಯಾನಮಾಡಬೇಕು

ತಾ ಆಲಿಸಿ ಕೊಳುತಲಿಕ್ತ್ತ ನಿಪ್ಪವರು ಸರ್ವದಾ ಬಿಡದೆ ಇನ್ನು ॥೨೬॥ ಎಪ್ಪತ್ತೆರಡು ಸಾವಿರ ನಾಡಿಗಳು । ಇಪ್ಪವು ಈ ಕಾಯದೊಳಗೆ ಇನ್ನು ನೋಡು ॥ ತಪ್ಪದೇ ಅಲ್ಲೆಲ್ಲಿ ಭಗವದ್ರೂಪಗಳು । ಒಪ್ಪುತಲಿಪ್ಪರು ಒಂದಾನಂತವಾಗಿ ॥೨೭॥ ಬಲದಿಂದ ಎಡಕ್ಕೆ ಮೂವತ್ತಾರು ಸಹಸ್ರ । ಚಲುವ ಭಗವತ್ ಸ್ವರೂಪ ಋಷಿಗಳು ॥ ಕಲಕಾಲ ಪುರುಷನಾ ಆಯುಷ್ಯವರಿತು । ಸಲಹೋರು(ಹುವರು) ಹಗಲೆ ನಿಯಾಮಕರಾಗೆಲ್ಲಿ ॥೨೮॥ ತಾವದ್ವರಣ ಸ್ವರವ್ಯಂಜನಗಳಿಂದ । ಆವ ಪ್ರತಿಪಾದ್ಯ ಶ್ರೀರೂಪಗಳು ರಾತ್ರಿ ॥ ತಾವು ನಿಯಾಮಕರು ವಾಮಭಾಗಸ್ಥದಿ । ಈವಾರು ಈ ನಾಡಿಯಲ್ಲಿ ಬಿಡದೆ ಇನ್ನು ॥೨೯॥ ಶಿರಸಿನಲ್ಲಿ ಮೋಕ್ಷ(ದಾ)ದಾತನ ಸರ್ವೇಶ್ವರಾ । ಇರುತಿಪ್ಪನು ವಾಸುದೇವನು ಆತನು ನಿತ್ಯ ॥ ಪರಿಪರಿ ಕರ್ಮವೇ ಜೀವಮಾಡುವದು ಇದರ । ಇರವನೋಡುತ ಯಿಪ್ಪ ತುರಿಯನಾಮಕನಾಗಿ ॥೩೦॥ ಶಿಖಿಯಲ್ಲಿ ಬ್ರಹ್ಮಾತ್ಮಕಾ ನಾರಾಯಣನಿಪ್ಪ । ಇಕೊ ಕೇಶದಲ್ಲಿ ಪ್ರದ್ಯುಮ್ನನಾಮಕನಿಪ್ಪ ॥ ಮುಖ ಲಲಾಟದಿ ತದಭಿಮಾನಿ ರುದ್ರನು । ಸುಖಪ್ರದಾತೃನಾಗಿ ಕೇಶವ ಇರುತಿಪ್ಪ ॥೩೧॥ ದಕ್ಷಣಾಕ್ಷಿಯಲ್ಲಿ ನಾರಾಯಣನು ತಾ ಪ್ರ । ತ್ಯಕ್ಷಸ್ತಂಭರೂಪನಾಗಿನ್ನು ಇರುತಿಪ್ಪ ॥ ಲಕ್ಷುಮಿದೇವಿ ತಾ ದಾಮರೂಪಗಳಲ್ಲಿ । ಸಾಕ್ಷಾತು ವಾಯು ತಾ ವತ್ಸರೂಪದಿ ಇಪ್ಪ ॥೩೨॥ ಏವಂ ಭೂತಾ ವಾಯುದೇವರನ್ನು ಮತ್ತೆ । ದೇವತೆಗಳು ಎಲ್ಲ ಬಿಡದೆ ನಿತ್ಯದಲ್ಲಿ ॥ ತಾ ಉಪಾಸನಿಯ ಮಾಡುತಲಿಪ್ಪವರಿನ್ನು । ಆವಾಗ ಬಿಡದಲೆ ಹರುಷದಿಂದಲಿ ಇನ್ನು ॥೩೩॥ ರಕ್ತರೇಖಿಯಲಿ ಗೌತುಮನಾಮಕ ರುದ್ರ । ಶುಕ್ಲರೇಖಿಯಲ್ಲಿ ವಶಿಷ್ಟನಾಮಕ ಇಂದ್ರ ॥ ಮತ್ತೆ ನೀಲದಿ ವಿಶ್ವಾಮಿತ್ರನಾಮಕ ಸೂರ್ಯ ।

ನಿತ್ಯದಿ ಇವರಿನ್ನು ಇಪ್ಪರು ಬಿಡದಲೆ ॥೩೪॥ ನೀರು ಬರೋಸ್ಥಾನದಲಿ ಪರ್ಜನ್ಯನೂ । ಭಾರದ್ವಾಜನಾಮಕನಾಗಿ ಇಪ್ಪ ॥ ಮೀರದೆ ಅತ್ರಿನಾಮದ್ಯು ಭಾರತಿ ವಿ । ಹರಿಸುತ್ತ ಯಾವದ್ವ್ಯಾಪಾರ ಮಾಡಿಸುವರು ॥೩೫॥ ಅಧೊ ಯವಿಯಲಿ ಇಪ್ಪ ಕಶ್ಯಪನಾಮಕನಿನ್ನು । ಅದರಲ್ಲೆ ಪೃಥ್ವಿಕ ಜೋತಿಷ ಕಪಿಲರಿನ್ನೂ ॥ ಒದಗಿ ಮುಚ್ಚಿ ತೆರಿಸುತಾ ಒಳಗೆ ಇದ್ದು । ಪದಕಾಲದಲ್ಲಿ ವಾಸಮಾಡಿಪ್ಪರು ॥೩೬॥ ಸಂಭ್ರಮಾದಿಂಥತ್ತು ಒಂಭತ್ತು ಮುಖನಾಗಿ । ಕಂಭಾನಿ ದಕ್ಷಣದಲ್ಲಿ ವಿಶ್ವನಿಪ್ಪನು ॥ ಒಂಭತ್ತೆರಡುಮುಖ (೧೮) ಮನುಷ್ಯ ಮುಖವು ಇನ್ನು । ಇಂಬಾಗಿ ಗಜಮುಖದಿ ಮಧ್ಯ ಇಪ್ಪನು ॥೩೭॥ ಎರಡು ಹಸ್ತವು ಇನ್ನು ಚರಣನಾಲಕು ನೋಡು । ಇರುತಿಹರಷ್ಟದಿಕ್ಪಾಲಕರು ಸುತ್ತಾ ॥ ಪೊರೆವ ವಿಶ್ವನು ಜಾಗ್ರವಸ್ಥಾಪ್ರದನಾಗಿ । ಧರಿಯ ಪದಾರ್ಥವ ತೋರಿಸಿಕೊಡತಲಿ ॥೩೮॥ ವಾಮಾಕ್ಷಿಯಲ್ಲಿ ವಾಮನ ಚಕ್ಷುದ್ವಯ ಸೂರ್ಯ । ಆ ಮಾತೃಕಾವರಣ ಪ್ರತಿಪಾದ್ಯ ಅಜಾದಿ ॥ ಶ್ರೀಮೂರ್ತಿಗಳು ಮಸ್ತಕಾದಿ ಯಲ್ಲಿ ಇಪ್ಪರು । ಆ ಮಹಾಪ್ರಭೆಯಿಂದ ಶೋಭಿಸುತ ನಿತ್ಯ ॥೩೯॥ ಘ್ರಾಣ ದಲ್ಲಿನ್ನು ಅಶ್ವಿನಿಯ ದೇವತೆಗಳು । ತಾನಲ್ಲಿ ಧನ್ವಂತ್ರಿನಾಮ ನಾರಾಯಣ॥ ಪ್ರಾಣದೇವನು ಇಪ್ಪ ಶ್ವಾಸದಲ್ಲಿನ್ನೂ । ಕಾಣು ಉಚ್ಛ್ವಾಸದಿ ಭಾರತಿ ಇಪ್ಪಳು ॥೪೦॥ ಉತ್ತುಮಾ ವಿಪ್ರನಾ ಶ್ರೋತ್ರಗಳಲ್ಲಿನ್ನು । ಮತ್ತೆ ಭಾಗಿ ರಥ್ಯಾದಿ ನದಿಗಳು ಇನ್ನು ॥ ಮೂರ್ತಿಮಂತನಾಗಿ ತ್ರಿವಿಕ್ರಮನು ಇಪ್ಪನು । ಸುತ್ತ ಸಕಲದೇವತಿಗಳು ಇಪ್ಪವರಿನ್ನು ॥೪೧॥ ಗಂಡಸ್ಥಾನದಿ ತ್ರಿವಿಕ್ರಮ ಮಧುಸೂದನ । ಕಂಡ್ಯಾ ಓಷ್ಠದಲ್ಲಿ ವಾಮನಾ ಶ್ರೀಧರ ॥ ಥಂಡಥಂಡದಂತ ಪಂಕ್ತಿಗಳಲ್ಲಿನ್ನು । ಕಂಡು ತಿಳಿಯೊ ಓಜೋಭೃತ ಐರಸರೂಪ ॥೪೨॥ ವರುಣ ಜಿಂಹ್ವೇಂದ್ರಿಯಲ್ಲಿ ಅಭಿಮಾನಿಯೂ । ಇರುತಿಪ್ಪನಲ್ಲಿ ಮಚ್ಛಮೂರ್ತಿ ಭಗವಂತ ॥ ಪರಶುರಾಮಾ ವನ್ಹಿ ವಾಗೇಂದ್ರಿಯಲ್ಲಿನ್ನು । ಸರಸ್ವತೀ ನಾರಾಯಣನು ವಾಕ್ಯದಲ್ಲಿಪ್ಪ ॥೪೩॥ ಕಿರಿನಾಲಿಗಿಯಲಿ ಇಂದ್ರನಾಮ ದಾಮೋದರ । ವರಕಂಠದಲ್ಲಿ ಉದಾನ ತೈಜಸಮೂರ್ತಿ ॥ ಯರಡೊಂಭತ್ತು ಮುಖ ವುಭಯಪಾರ್ಶ್ವದಲ್ಲಿ ಇರುತಿಪ್ಪ ಮಧ್ಯದಿ ಗಜಮುಖನಾಗಿನ್ನು ॥೪೪॥ ಅವನು ಪಂಚವೃತ್ತಿ ಮನೊವುಳ್ಳ ವ್ಯಾಪಾರ । ತವಕದಿಂದಲಿ ಮಾಡಿಸುತ ಯೀವೊನು ॥ ಸವನಾಗಿ ಇಂದ್ರಕಾಮರು ಮನಸಿನಲ್ಲಿ ಇದ್ದು ।

ಸುವ(ಸ್ಥಿರ)ಬುದ್ಧಿಯಲ್ಲಿನ್ನು ಉಮಾದೇವಿ ಇಪ್ಪಳು ॥೪೫॥ ಮತ್ತೆ ಅಹಂ ಕಾರಿಕದಿ ರುದ್ರದೇವನು ಇಪ್ಪ। ಚಿತ್ತದಲ್ಲಿ ಗರುಡದೇವನಿಪ್ಪ ॥ ಮತ್ತಾವ ಚೈತನ್ಯದಲ್ಲಿ ಶೇಷನು ಇಪ್ಪ। ನಿತ್ಯ ತೈಜಸ ಸ್ವಪ್ನಾವಸ್ಥಿಪ್ರದನಾಗಿಹ ॥೪೬॥ ಆವ ಬಿಂಬಗೇವೆ ಸುಷುಪ್ತಿಕಾಲದಿ। ಜೀವದೇಹವು ಬಿಡೋ ಉತ್ಕ್ರಾಮ ಣಾಂತರಾ। ಈವ ಬಿಂಬಮೂರ್ತಿಗೇವೆ ಪ್ರಜ್ಞಾನರೂ। ಆವಾಗ ಒಪ್ಪದು ಅರಿದು ನೋಡಲಾಗಿ ॥೪೭॥ ದೇವ ವಿಶ್ವನು ಜೀವನ ಪ್ರಕಾಶವ್ರಕೊಂಡು। ಆವ ಪ್ರಾಜ್ಞನಲ್ಲಿ ತಾ ಬಂದರೆ ॥ ಜೀವಗೆ ಸುಷುಪ್ತಿಯಾವಸ್ಥಿ ಬಂದಿನ್ನು। ಆವ ಬಾಹ್ಯಜ್ಞಾನ ಇಲ್ಲದೆ ಇರುತಿಪ್ಪ ॥೪೮॥ ದೇವ ಮುಖ್ಯಪ್ರಾಣ ಜೀವ ನ್ನನು ನುಂಗಿ। ದೇವಿಲಕುಮಿಯಲ್ಲಿ ತಾ ಪೋದರೆ ॥ ದೇವಿಲಕುಮಿ ತನ್ನ ಉದರದಲ್ಲಿಟ್ಟಿನ್ನು। ಆವ ಪ್ರಾಜ್ಞನ್ನ ಆಲಿಂಗನೆ ಮಾಡೋಳು ॥೪೯॥ ಆಗ ಪ್ರಾಜ್ಞನು ಸ್ವರೂಪ ಜೀವನ ಸುಖ। ಬ್ಯಾಗನೆ ಅಭಿವ್ಯಕ್ತಿಯನುಮಾಡುವ ॥ ಹಾಗೆ ತಾಮಸರಿಗೆ ತನ್ನ ಸಂಬಂಧದಿಂದ। ಭೋಗ ಅನಿತ್ಯಸುಖ ಹುಟ್ಟಿಸುವ ಇನ್ನು ॥೫೦॥ ವಿಶ್ವನು ತೈಜಸನಕೂಡಿ ಕಂಠಕೆ। ಮತ್ತೆ ಪೋದರೆ ಸ್ವಪ್ನಾ ವಸ್ಥಿ ಆಗಾ ॥ ವಿಶ್ವನು ತೈಜಸನಬಿಟ್ಟು ಪೋದರೆ। ಮತ್ತೆ ಪುನಹ ಜಾಗ್ರ ವಸ್ಥಿ ಬಾಹುವದಾಗ ॥೫೧॥ ಶಾರೀರ ಹೃದಯಾಖ್ಯವೆಂಬೊ ಪಟ್ಟಣಕೆ। ದ್ವಾರಗಳು ನಾಲ್ಕು ತೋರುತಿವೆ ॥ ದ್ವಾರ ಪ್ರಥಮದಲ್ಲಿ ಮಹಾಲಕುಮಿ ಇನ್ನು। ದ್ವಾರ ದ್ವಿತಿಯಾದ್ಯು ಶಬ್ದವಾಚ್ಯ ಭಾರತಿಯೂ ॥೫೨॥ ತೃತಿಯ ದ್ವಾರದಲ್ಲಿ ಸೂರ್ಯ ಪ್ರಾಣಚಕ್ಷು। ರಿತಿ ರೂಪತ್ರಯದಿಂದ ಸೂರ್ಯ ನಿಪ್ಪವನು ॥ ಚತುರ ದ್ವಾರದಲ್ಲಿ ಜಯವಿಜಯರೂ ಇನ್ನು। ಸತತ ಶ್ರೀ ಮೂರ್ತಿಯಾ ಪೂಜಿಸುತಿಪ್ಪರು ॥೫೩॥ ಪ್ರಥಮ ಮಹಲಕ್ಷ್ಮಿ ದ್ರಿಜವಾಚ್ಯ ಭಾರತೀ ವ್ಯಾನಶೋತ್ರ। ತೃತಿಯರೂಪತ್ರಯದಿಂ ಚಂದ್ರನು ಇಪ್ಪ ॥ ಸತತ ಕಡೆಯಲಿ ಬಲಪ್ರಬಲರು ಇಪ್ಪರು ॥೫೪॥ ಮತ್ತೆ ಪಶ್ಚಿಮದ್ವಾರದಿ ಮಹ ಲಕುಮಿ। ದ್ವಿತಿಯ ಪೃಥಿವಿಶಬ್ದವಾಚ್ಯ ಭಾರತೀ ॥ ತೃತಿಯ ಅಪಾನನಾಮ ಅಗ್ನಿ। ಚತುರ್ಥದಿ ಕುಮುದ ಕುಮುದಾಕ್ಷರು ಇಪ್ಪರು ॥೫೫॥ ಉತ್ತರ ದಿಶಿಗೆ ಪ್ರಥಮದ್ವಾರದಿ ಮಹಲಕುಮಿ। ಮತ್ತೆ ದ್ವಿತಿಯ ವಿದ್ಯುನಾಮಕೆ ಭಾರತೀ। ತೃತಿಯ ಸಮಾನನಾಮಕ ಇಂದ್ರ। ಚತುರ್ಥದಲಿ ನಂದ ಸುನಂದನರು ಇಪ್ಪರು ॥೫೬॥ ಸತತ ಊರ್ಧ್ವದ್ವಾರ ಒಂದರಲ್ಲಿನ್ನು।

ಹಿತ ಮಹಲಕ್ಷ್ಮಿ ಆಕಾಶ ಶಬ್ದ ಸರ । ಸ್ಮೃತಿ ನಾಂಜನಾನು ಭಾ । ರತಿಯು ಉಪಾಸನಾಮಕ ವಾಯು । ಅತಿ ಭಕುತಿಯಿಂ ಸೇವೆಯ ಮಾಳ್ಪರು ॥೫೭॥ ಆವ ಪೂರ್ವೋಕ್ತ ಹೃತ್ಕಮಲ ಮಧ್ಯದಿ । ಈವ (ಇರುವ) ಸ್ಥೂಲಾಂಗುಲಿ ಪ್ರಮಾಣದಿಂದಲಿ ॥ ದೇವ ಬಿಂಬಮೂರ್ತಿ ಆವಾಗ ಬಿಡದಲೆ । ಕಾವುತಾ ಅನಾದಿನ ಕರುಣಿ ಅಲ್ಲಿ ಯಿಪ್ಪಾ ॥೫೮॥ ಆವನಾ ಹಿಂಭಾಗದಿ ಪ್ರಾದೇಶ ಪರಿಮಿತಾ । ಜೀವ ಹರಣದಿ ಪುರುಷನಾಮಕ ನಾರಾಯಣನಿಪ್ಪ ॥ ಆವನು ಮೂಲೇಶನ ಪಾದ ಸಮೀಪದಿ । ಪವನದೇವನು ಯಿಪ್ಪ ಪೂರ್ನಾಭಿ ಮುಖವಾಗಿ ॥೫೯॥ ಮೂಲೇಶನಾ ಪಾದಗಳಿಗೆ ದೂರಾಗದಿಪ್ಪಂಥ । ಶೀಲ ಮೂರ್ತಿ ಮುಖ್ಯಪ್ರಾಣನ್ನ ಪಾದಬಳಿ ॥ ಯಲಿ ಜೀವನು ಇನ್ನು ಇದೇ ಪ್ರಕಾರದಿ । ವಾಲಯಾ ಅಲ್ಲಿನ್ನು ವಾಸವಮಾಡಿಪ್ಪ ॥೬೦॥ ಹೃದಯಾಕಾಶ ದಲ್ಲಿ ವಾಸುದೇವನು ಇಪ್ಪ । ಸದಾ ಅಲ್ಲಿ ಬಿಡದಲಿಪ್ಪ ಪ್ರಾಣವಾಯೂ ॥ ಮಧುಸೂದನನು ಇಪ್ಪ ದಕ್ಷಣ ಹಸ್ತದಿ । ಸದಮಲ ಕಪಿಲಾದಿ ಪಂಚ ಸಂಧಿಗಳಲ್ಲಿ ॥೬೧॥ ಚಂದದಿ ವಾಮಹಸ್ತದಲ್ಲಿ ಶ್ರೀಧರ । ಸಂಧಿಗಳಲ್ಲಿ ಚಾರ್ವಾಂಗಾದಿ ಪಂಚವು ॥ ಪೊಂದಿ ಇಪ್ಪವು ಆ ರೂಪಗಳಲ್ಲಿನ್ನು । ಒಂದು ಕ್ಷಣವನ್ನ ಬಿಡದೆ ಮತ್ತಿಲ್ಲಿನ್ನು ॥೬೨॥ ಪಾಣಿಗಳಲ್ಲಿನ್ನು ದಕ್ಷನು ಇಪ್ಪನು । ಪಾಣಿ ಕುಕ್ಷಿಯಲ್ಲಿ ನಾರಾಯಣಾ । ಕಾಣೊ ಪಶ್ಚಿಮದಲ್ಲಿ ವಿಷ್ಣುನೆ ಇರುತಿಪ್ಪ । ಯೇನೊ ವಾಮನ ಪಾರ್ಶ್ವದಲ್ಲಿಪ್ಪವ ॥೬೩॥ ಪೃಷ್ಠಭಾಗದಿ ಇನ್ನು ಪದ್ಮನಾಭನು ಇಪ್ಪ । ಧಿಟ್ಟಾ ಸಮಾನ ವಾಯು ನಾಭಿಯಲಿನ್ನು । ಪ್ಪಷ್ಟಂ ಗುದದಲ್ಲಿ ಅಪಾನನಿರುತಿಪ್ಪ । ನಿಷ್ಟ ಅನಿಷ್ಟಕೆ ತೊಡಕದಲೆ ॥೬೪॥ ಇಂದ್ರಿಯಲ್ಲಿ ಇನ್ನು ಮಿತ್ರನೆಂಬೊ ಸೂರ್ಯ । ಚಂದಾದಿ ಸ್ವಾಯಂಭುವನು ಗುಹ್ಯದಲ್ಲಿ ॥ ಪೊಂದಿ ಕಟಿಯಲ್ಲಿ ಅನಿರುದ್ಧ ಇಪ್ಪನು । ಎಂದೆಂದು ಬಿಡದೆ ತಾ ವಾಸವಾಗಿ ಇಪ್ಪ ॥೬೫॥ ದಕ್ಷಣ ಕಾಲಲ್ಲಿ ಗರುಡ ಶೇಷ ರುದ್ರ । ಸಾಕ್ಷಾತುವಾಗಿ ಮೂರುಮಂದಿ ಇಪ್ಪರು ॥ ಸೂಕ್ಷ್ಮವು ಸಂಧಿಗಳಲ್ಲಿ ಟಂಕೆ ಮೊದಲಾ । ದಕ್ಷವಾಗಿ ಐದು ರೂಪಾ ಇಪ್ಪವು ॥೬೬॥ ಎಡದಕಾಲಿನಲ್ಲಿ ಸ್ಕಂದೇಂದ್ರರು ಇನ್ನು । ಬಿಡದೆ ಸಂಧಿಗಳಲ್ಲಿ ತಾರಾಪ್ಯೈದು ರೂಪ । ನಡುವ ಪಾದಗಳಲ್ಲಿ ಜಯಂತನಿರುತಿಪ್ಪ । ದೃಢವಾಗಿ ಯಜ್ಞನಾಮಕ ನಾರಾಯಣ ನಿಪ್ಪ ॥೬೭॥ ದಕ್ಷಣಾಂಗುಷ್ಠದಿ ದೇಹಧಾರನಾಗಿ । ಸಾಕ್ಷಾತು ವಾಯು

ಅಧಿಷ್ಠಾನದಿಂದಲ್ಲಿ ॥ ಲಕ್ಷ್ಮೀಶಾ ತೀರ್ಥಪಾದನಾರಾಯಣ ತಾನು । ಸೂಕ್ಷ್ಮರೂಪನಾಗಿ ಅಲ್ಲಿ ಇಪ್ಪನ ಇನ್ನು ॥೬೮॥ ಆನ ಈ ದೇಹದಿ ತತ್ವಾಭಿಮಾನಿಯರು । ದೇವತೆಗಳಿನ್ನು ನವಕೋಟಿಯು । ಅವರ ಕರ್ಮಕ್ಕೆ ನಿಯಾಮಕರು ಆಗಿ । ತಾವಿಪ್ಪರು ಸರ್ವದ ಬಿಡದೆ ಇನ್ನು ॥೬೯॥ ಇನ್ನಾವ ತತ್ವಾಭಿಮಾನಿಗಳಿಗೆ ಇನ್ನು । ಇನ್ನಂತನಂತ ಕರ್ಮಗಳಿಗೆ ಎಲ್ಲ ॥ ಇನ್ನು ನಿಯಾಮಕನಾಗಿ ನಾರಾಯಣ । ಎನ್ನ ಅಂತರ್ಯಾಮಿಯುವನೆ ಮಾಡಿಸುತಿಪ್ಪ ॥೭೦॥ ನಮೊನಮೊ ಕೇಶವಾದಿ ಮೂರುತಿಯೆ ಬಾ । ನಮೋನಮೊ ಮತ್ಸ್ಯಾದಿ ಮೂರುತಿಯೆ ನೀ ಬಾ ॥ ನಮೊನಮೊ ಅಜಾದಿ ಮೂರುತಿಯೆ ನೀ ಬಾ । ನಮೊನಮೊ ಸರ್ವೇಶಾ ಎನ್ನ ಹೃದಯವಾಸ ॥೭೧॥ ಜಯ ಜಯ ಶುಕಪಿತ ವೇದವ್ಯಾಸ ನೀನು । ಜಯ ಜಯ ಆನಂದ ತೀರ್ಥೇಶಾ ಮೂಲೇಶ ॥ ಜಯ ಜಯ ಲಕುಮೀಶಾ ವಿಜದಾಸರ ಪೋಷ್ಯಾ । ಜಯ ಜಯ ಗೋಪಾಲವಿಠಲ ಸರ್ವೇಶಾ ॥೭೨॥

ಪದ ೧೨

ಬಿಂಬಾಪರೋಕ್ಷ ವಿಷಯ ನಾಮಯುವ ಸಾಲಂಕಾರ ಬಿಂಬಮೂರ್ತಿ ಪ್ರಾರ್ಥನೆ.

ರಾಗ ಸೌರಾಷ್ಟ್ರ ಅಟ್ಟತಾಳ

ತೋರೊ ತೋರೋ ನಿನ್ನ ಮೂರ್ತಿಯಾ । ವಾರಿಜದಳ ನಯನನೆ । ಶ್ರೀ ರಮಣನೆ ನಿನ್ನ ಚಾರುಚರಣದ । ಆರಾಧನೆಕೊಡು ಸರ್ವದ ॥ಪಲ್ಲ॥ ಮಂಧರಧರ ಮನ್ಮಥಪಿತ । ಮಂದಹಾಸ ಮಾಧವ ಹರಿ । ಇಂದುವದನ ಅಮರೇಂದ್ರ ವಂದಿತ । ಬಂದು ಎನ್ನ ಹೃದಯಕೊದಗಿ ನೀ ॥೧॥ ಕಂಬು ಕಂಠಾ ಕೌಸ್ತುಭಹಾರಾ । ಶಂಭುಪ್ರದ ಶುಭಾಂಗನೆ । ಹಂಬಲಿಕೆ ಹತ್ತಿಲಿಸು ಹೃದ । ಯಾಂಬರದಿ ನಿಂದು ಪ್ರಕಾಶಿಸುತ ॥೨॥ ಶಂಖ ಚಕ್ರ ಶಾರಙ್ಗಧರ ಅಕಳಂಕ ಗದೆ ಪದುಮಾಂಕಿತಾ ॥ ಕಿಂಕಿಣಿ ಕಿರಿಗಂಟೆ ತೂಗುತಾ । ಟೊಂಕದಾಭರಣಾ ಎಸೆವುತ ॥೩॥ ಶೂರಾ ಪೀತಾಂಬರಧರ ಮಂ । ದಾರ ಮಾಲಿಕಾ ಭೂಷಿತಾ । ಕೀರುತಿ ಭುಜತೋಳು ಬಂದಿಯು । ವಾರಿಜಕರ ತಿರುವುತಾ ॥೪॥ ಊರು ಜಾನು ಜಂಘೆ ಗುಲ್ಫಾ । ಚಾರು ಸುಂದರ ವಿಗ್ರಹ । ಘೋರ ಸಂಸಾರವನಧಿ ದಾಟಲು ವೂರು ಮನಕೆ ನಾವಿಚಾರಣವ ॥೫॥ ಅಸಮ ಅನನ್ಯ ಅಸಹಾಯ ಸರ್ವವಶ । ವಿಶೇಷಾ ನಿಷೇಧಾಶೇಷಾ ॥ ಅಸುಳ

ಸಿರಿ ಅಜಭವರೊಡಿಯಾ। ಏಕಾದಶ ಇಂದ್ರಿಯಗಳಿಗೆ ವಿಷಯನಾಗಿ ನಿತ್ಯ ॥೬॥ ಹಾಟಕಾ ನೀನು ಕರ್ಕೋಟಕನಾ । ನೀಟುಮಾಡು ಶುಭ ನೋಟದಿ ॥ ಕೋಟಿ ರವಿತೇಜಾ ಗೋಪಾಲವಿಠ್ಠಲ। ನೇಟಾಗಿ ಮನಕೆ ನಾಟಿ ನಿಲಕುತ್ತ ॥

ಪದ ೧೩

ಅಂತರಂಗದಿಪ್ಪ ಬಿಂಬಮೂರ್ತಿಯ ಅನಂತ ಗುಣ ಕ್ರೀಯೋಪಾಸನೆ,
ಶ್ರೀ ಹರಿ ಗುಣ ಮಹಿಮೆ.

ರಾಗ ಕಾಂಬೋದಿ ಝಂಪಿತಾಳ

ಇಂತು ತಿಳಿದ ಜನರಲಿ ಶ್ರೀಹರಿಯಾ। ಅಂತರಂಗದಿ ನಿಂತು ಸಾಕುವ ॥ ಶ್ರೀಹರಿಯಾ ॥ಪಲ್ಲ॥ ಅಣುವೆಂದು ಧೇನಿಸಲು ಅಣುವೆ ಮಹತ್ತು । ಘನ ನೆಂದು ಧೇನಿಸಲು ಅಣುವು ಆಹ। ಅಣುವು ಘನವು ಮತ್ತೆ ಮನಕೆ ಸಾರಿಲಿ ದೂರ। ಅನಿಮಿಷರಿಗೆ ಈಶ ಅಗೋಚರನ್ನ ॥೧॥ ಜಡಗಳಲಿ ಇಪ್ಪ ಚೇತನಗಳಲಿ ಇಪ್ಪ। ನುಡಿ ಮೊದಲಾದ ಕ್ರೀಯವ ಮಾಡುತಾ ॥ ಕೊಡುತಿಪ್ಪ ಕೊಳುತಿಪ್ಪ ಪಿಡಿದು ಚೇತನಕಾಗಿ। ಬಡವನಲ್ಲನು ಕಾಣೋ ಬಲು ಧೈರ್ಯನಾ ॥೨॥ ಖಂಡನಾಗಿಪ್ಪ ಅಖಂಡನಾಗಿಪ್ಪ। ಪಿಂಡಾಂಡ ಬ್ರಹ್ಮಾಂಡದೊಳಗೆ ಇಪ್ಪ। ಅಂಡಜಾ ಸ್ವೇದಜಾ ಅಖಿಳ ಜಾತಿಯೊಳಿಪ್ಪ। ಪುಂಡರೀಕಾಕ್ಷ ಶ್ರೀಪುರುಷೋತ್ತಮನ್ನ ॥೩॥ ಕಣ್ಣಿಂದ ಕೇಳುವಾ ಕರ್ಣದಲಿ ನೋಡುವಾ। ಬೆನ್ನಿಂದ ನಡಿವಾ ನಾಶಿಕದಿ ನುಡಿವಾ। ಇನ್ನು ಕರಗಳಿಂದ ತಿರುಗಿ ತಿರಿಗಾಡುವಾ। ತನ್ನ ಚರಣಗಳಿಂದ ಸಕಲ ಕ್ರೀಯವುಮಾಳ್ಪ ॥೪॥ ಒಂದೊಂದ್ರಿಯದಲಿ ದಶೇಂದ್ರಿಯ ಕರ್ಮಗಳ ಮಾಳ್ಪ। ನಿಂದು ಮಲಗು ವನು ಮಲಗೇ ನಿಂದ್ರುವ॥ ಒಂದೆ ಅನಂತಾಹ ಅನಂತ ವಂದಾಹ। ಬಾಂಧವಾ ಅನಿಮಿತ್ತ ಭಕತವತ್ಸಲನ್ನ ॥೫॥ ಸ್ತ್ರೀ ಅಲ್ಲ ಪುರಷಲ್ಲ ತ್ರಿವಿಧ ರೊಳಗೆ ಅಲ್ಲ। ಕೈಯ್ಯೊಡ್ಡಿ ಕಾಸು ಬೇಡುವವನಲ್ಲ॥ ಮಯ್ಯ ಆಯಾಸ ಕರ್ಮವು ಮಾಡೆ ವಲಿವವನಲ್ಲ। ಕ್ರೀಯ ಮಾಡಿದಮ್ಯಾಲೆ ಬಿಡುವವನಲ್ಲ ॥೬॥ ಜಾತಿ ನೀತಿಗಳಿಲ್ಲ ಜನನಿ ಜನಕರು ಇಲ್ಲ। ಗೋತುರವಿಲ್ಲ। ಗೋ ಪ್ರತಿಪಾದ್ಯನೊ। ಶೀತೋಷ್ಣಗಳು ತಾಕೆ ಸವದು ಪೋಗುವನಲ್ಲ। ಗಾತುರ ಹಸಿದು ಅನ್ನ ಬೇಡುವನಲ್ಲ ॥೭॥ ಗುಣಕೆ ಅಂತಿ ಇಲ್ಲ ಕ್ರೀಯಕೆ ಅಂತಿ ಇಲ್ಲ। ಕ್ಷಣಕೆಮಾಡುವ ಕರ್ಮಕಂತ್ಯೆ ಇಲ್ಲ॥ ದಣಿದೆನೆಂಬುವನಲ್ಲ ರಣದಿ

ಮಡಿವವನಲ್ಲ । ಎಣಕೆ ತಟ್ಟುವನಲ್ಲ ಒಂದಾದರನ್ನ ॥೮॥ ಸರಿಯಿಲ್ಲ ಅಧಿಕಿಲ್ಲ ತರುಪಾಯದೊಳಗಿಲ್ಲ । ಪರಿಪೂರ್ಣ ನಿರ್ದೋಷ ಸರ್ವವ್ಯಾಪ್ತ । ಗುರುಮಧ್ವರಮಣ ಗೋಪಾಲವಿಠ್ಠಲ ತನ್ನ । ಶರಣನೆಂದುಗೊಳಿದು ಪೊರೆವುತಿಪ್ಪವನ ॥೯॥

ಪದ ೧೪

ಹೃತ್ಕಮಲ ಮೂಲೇಶ, ಮುಖ್ಯಪ್ರಾಣನಂತರ್ಗತ ಮಹಿಮೆ ಸ್ತೋತ್ರ ಪ್ರಾರ್ಥನಾ.

ರಾಗ ಮೋಹನಕಲ್ಯಾಣಿ ತ್ರಿವಿಡಿತಾಳ

ಅಂಜನೆ ಗಿರಿರಾಯ ಪಿಡಿಯುಸ್ವ ಕೈಯ್ಯಾ। ಅಂಜನೆಸುತ ಪ್ರಿಯಾ। ಆರ್ಜುಜನ ಧ್ಯೇಯಾ। ಕುಂಜರ ರಿಪುಮದ (ಮದಕರಿ) ಭಂಜನ ಅನಘ ಧನಂಜಯು ಸಾರಥಿ ಮಂಜುಳ ಮೂರ್ತೆ ॥ಪ॥ ಮೂಲೇಶನಗ್ರೇಶಾ ಪ್ರಾದೇಶ ಶ್ರೀಶಾ। ಮೂಲಾ ಪ್ರಕೃತಿ ಅವ್ಯಾಕೃತ ಮಹಾಕಾಶ। ಕಾಲ ನಿಗಮ ತ್ರಿವಿಧ ಜೀವರ ಕೋಶಾ। ಶ್ರೀಲಕ್ಷ್ಮಿ ಸರ್ವಧಿಷ್ಠಾನ ನಿವಾಸ॥ ಕಾಲ ಮುನ್ನೀರಲಿ ಆಲಯ ರಚಿಸಿದ। ಆಲದೆಲೆಯಲಿಪ್ಪ ಎಳೆಕೋಟಿ ಮಿತ। ಬಾಲಕ ಭೂಜಲ (ಭುಂಜಾಲ)। ತ್ರೈಲೋಕ್ಯಮಸ್ಥಿತ। ಪಾಲಿಸೊ ಹೃದಯಸ್ಥ ಮೂಲಕಾರಣನೆ ॥೧॥ ಜಲಜಾತ। ಜಾತನೆ ಜಾತನೈಯ್ಯಾ ಜಯ ಜಯ ಮಾರುತಿ। ಮೂರ್ತಿ॥ ಜಲಜಭವಾಂಡಕರ್ತ ವಿಭು ಕ್ಷೇತ್ರ ಮೂರ್ತಿ। ಜಲಜಾಕ್ಷನೆ ಜಾನ್ಹವಿಪಿತ ತೀರ್ಥಮೂರ್ತಿ ಮ। ತ್ಕುಲ ಸ್ವಾಮಿ ಶ್ರೀನಿವಾಸ ನೀನೆ ಸತ್ಕೀರ್ತಿ। ಕಳೆವರ ಸ್ಥಿತ ಹೃಜ್ಜಲಜ ಕರ್ಣಿಕೆಯಲ್ಲಿ। ಜಲಜಬಾಂಧವದ್ಯುತಿ। ಸುಳಿದು ಹೊಳೆದು ನಿನ್ನ ಲಲನೆ ಸಹಿತವಾಗಿ। ಸುಳಿದು ಪೊಳೆದು ಎನ್ನ ಸಲಹೊ ಸದ್ಗುಣಜ್ಞಾನ। ಬಲ ಸುಖ ಪೂರ್ಣ ॥೨॥ ಮಮ ಸ್ವಾಮಿ ಶ್ರೀನಿವಾಸ ಸರ್ವಾಂತರ್ಯಾಮಿ। ಕಮಲಾಪ್ತ ಅಂತರಿಕ್ಷಾದ್ಯ ಲೋಕಾ ಭೂಮಿ। ಕ್ರಮ ಶ್ವೇತದ್ವೀಪ ಋತು ಮಾಸಪಕ್ಷ ಸಾನು ಪ್ರೇಮೀ। ಅಮರವಂದ್ಯ ಗೋಪಾಲವಿಠ್ಠಲ ಸಪ್ತಸ್ವಾಮಿ॥ ನಮೊ ಸುಮಹಿಮ ರಮಾರಮಣ ರಾಘವ ಭವ। ಭ್ರುಭು ಶಮಲತಮಕೆ ದ್ಯುಮಣಿ। ಅಮಮ ಸಮನಮಗೆಮನೊಳು। ವಿಮಲಾಗಮ ನಿಯಮವ। ಯಮ ದಮ ದಮೆಗಳನು ಕೊಡು ನಮೊ ॥೩॥

ಪದ ೧೫

ಬಿಂಬನಾದ ಹರಿಯ ಮಹಿಮೆ ಗುಣಕ್ರಿಯಾ ಉಪಾಸನೆ.

ರಾಗ ಕಾಂಬೋಧಿ ಝುಂಪಿತಾಳ

ನಂಬು ಮನವೇ ಹಲವು ಹಂಬಲಿಸದೇ ಹೃದಯ ಅಂಬರದಲಿಪ್ಪ ಶ್ರೀಹರಿಯಾ। ಕೊಂಬ ಕೊಡು ಕಡಿಗೆ ಇಂಬು ತೋರಿಸಿ ಭವ। ಅಂಬುಧಿಯ ದಾಟಿಸುವ ದೈವವ ॥ಪಲ್ಲ॥ ನಿನ್ನ ಒಳಗೆ ಇಪ್ಪ ನಿತ್ಯವಾಗಿ ಬಿಡದೆ। ನಿನ್ನಾಗತಿ ಅರಿತು ಸಂಚರಿಸುವ। ಪುಣ್ಯಪಾಪಂಗಳು ಚನ್ನಾಗಿಮಾಡಿಸುತ। ಭಿನ್ನನಾಗಿ ತನ್ನ ಮನಕೆ ಬಂದದಿಯಿಪ್ಪ ॥೧॥ ಆದಿಯಲ್ಲಿ ಪೂರ್ಣ ಅವತಾರದಲಿ ಪೂರ್ಣ। ಶೋಧಿಸಲು ಜಡಜೀವ ವಿಲಕ್ಷಣಾ॥ ಕ್ರೋಧರಹಿತ ಸ್ವಗತ ಭೇದವರ್ಜಿತ ಹರಿ। ಆದರನಾಗಿ ನಿನಗನುದಿನವು ಪೊರೆವುತಿಹ ॥೨॥ ನಡಿದು ನಡಿಸುತಲಿನ್ನು ನುಡಿದು ನುಡಿಸುತಲಿನ್ನು। ಪಿಡಿದು ಪಿಡಿಸುತ್ತ ನಿನ್ನ। ಒಡನೆ ಇದ್ದೂ ಬಡವ ಬಲ್ಲಿದನೆನದೆ। ಬಿಡದೆ ಸರ್ವರಲ್ಲಿ ಧೃಡವಾಗಿ ಇಪ್ಪ ಬಲು ಕಡು ದಯಾಸಾಗರನ ॥೩॥ ಗುಣಪೂರ್ಣ ಸುಖಪೂರ್ಣ ಅಣುಮಹಾಪರಿಪೂರ್ಣ। ಘನಜ್ಞಾನಪೂರ್ಣ ನಿರ್ದೋಷ ತೃಪ್ತಾ॥ ಕನಸು ಜಾಗ್ರಗಳಲ್ಲಿ ಬಂದು ನಾನಾ ಜನ್ಮ। ದನುಭೋಗ ಸುಖದುಃಖ ಉಣಿಸಿ ನೋಡುವ ನಿತ್ಯ ॥೪॥ ಆಪ್ತ ಅನಿಮಿತ್ತ ಬಂಧು ವ್ಯಾಪ್ತ ಸರ್ವತ್ರವೂ। ಗುಪ್ತನಾಗಿ ಹೃದಯಗುಹದಲಿಪ್ಪ॥ ಪ್ರಾಪ್ತ ಸರ್ವಜ್ಞ ಗೋಪಾಲವಿಠ್ಠಲ ಕಮ। ಲಾಪ್ತನಂದದಿ ನಿನ್ನ ಒಳಗೆ ಪೊಳೆದು ಪೊರೆವ ॥೫॥

ಪದ ೧೬

ಧ್ಯಾನೋಪಾಸನೆ ಮಾಳ್ಪ ಕ್ರಮ.

ರಾಗ ಕಾಂಬೋದಿ ಝುಂಪಿತಾಳ

ಧ್ಯಾನವನೆಮಾಡು ಬಿಂಬಮೂರುತಿಯ ॥ಪಲ್ಲ॥ ಆನಂದದಲಿಕುಳಿತು ಅಂತರಂಗದಲಿ ॥ಅ ಪ.॥ ಸದಾಚಾರನಾಗಿ ದ್ವಾದಶಗುರುಗಳಿಗೆರಗಿ। ಮೊದಲಿಂದ ಮೂಲಮಂತ್ರವನು ಜಪಿಸಿ॥ ಸದಮಲಾಭಕುತಿಲಿ ದೇಹಸ್ಥನ ತಿಳಿದು ಪದುಮಾಸನಹಾಕಿ ಪರಮ ವಿಶ್ವಾಸದಲಿ ॥೧॥ ಅಂಗವನು ಚಲಿಸದೇ ಚಂದಾಗಿ ಧೃಡದಿಂದ। ಕಂಗಳನು ಮುಚ್ಚಿ ಇಂದ್ರಿಯಂಗಳತೊರೆದು॥ ಮಂಗಳಶೋಭಿತದಿ ಅಖಂಡ ಧ್ಯಾನ ನು ಅಂತ। ರಂಗದಿ ನಿಲಿಸಿ ಎಲ್ಲವನು

ಕಾಣೊ ॥೨॥ ಭಗವದ್ರೂಪಗಳೆಲ್ಲ ಒಂದು ಸಾರಿ ಸ್ಮರಿಸಿ । ಮಗುಳೆ ಪರಮ ಗುರುವಿನ ಮೂರ್ತಿಯನು ॥ ತೆಗೆದು ಆಹ್ವಾನವೆ ಮಾಡಿ ಅಲ್ಲಿಂದಲೇ । ಸ್ವಗುರು ಬಿಂಬಮೂರುತಿಯಲಿ ಐಕ್ಯವನೆ ಮಾಡೊ ॥೩॥ ತಿರುಗಿ ಮೆಲ್ಲಗೆ ಮೂರು ವೇಗದಿಂದಲಿ ನಿನ್ನ ನಿನ್ನ । ವರ ಮೂರುತಿಯಲಿ ಚಿಂತನೆಯ ಮಾಡೊ ॥ ಭರದಿಂದ ಎಲ್ಲವನು ತಂದು ಹೃದಯಾದಕ್ಷ । ಸ್ಥಿರವಾಗಿ ಇಪ್ಪ ಮೂರುತಿಯೊಡನೆ ಕೂಡಿಕೊ ॥೪॥ ಆತನೇ ಬಿಂಬಮೂರುತಿಯೆಂದು ತಿಳಿದುಕೋ । ಆ ತರುವಾಯ ನಾಡಿಗಳ ಗ್ರಹಿಸಿ ॥ ಆ ತೈಜಸನ ತಂದು ವಿಶ್ವಮೂರುತಿಯಲ್ಲಿ । ಪ್ರೀತಿಯುಳ್ಳವನಾಗಿ ಪ್ರೀತಿಕರಿಸು ಮರುಳೆ ॥೫॥ ಜ್ಞಾನಪ್ರಕಾಶದಲಿ ನಿನ್ನ ಹೃದಯಸ್ಥಾನ ಚನ್ನಾಗಿ ಅಷ್ಟದಳಕಮಲಮಧ್ಯ ॥ ಶ್ರೀನಿವಾಸನಮೂರ್ತಿ ನಿಲ್ಲಿಸಿ ಬಾಹ್ಯದಲಿ । ಏನೇನು ಪೂಜೆಗಳ ಅದನೆ ತಿಳಿದು ಮಾಡೊ ॥೬॥ ಗುಣ ನಾಲ್ಕರಿಂದ ಉಪಾಸನೆಯನು ಮಾಡು । ಕ್ಷಣಕ್ಷಣಕೆ ಹರಿ ರೂಪ ನೀ ನೋಡುತ ॥ ಅಣುರೇಣು ಚೇತನಕೆ ತಾನೆ ನಿಯಾಮಕ । ಫಣಿರಾಯ ಅಲ್ಲದೇ ಮತ್ತೊಬ್ಬರಿಲ್ಲವೆಂದು ॥೭॥ ಮಮತೆಯನು ತೊರೆದು ನೀ ಬೊಂದಪೇಕ್ಷಿಸದೆ । ಸಮ ವಿಷಮ(ಯ)ವ ತಿಳಿದು ಒಂದೆ ಭಕುತಿಯಲಿ ॥ ಸರ್ವಾಧಿಗೊಳಗಾಗಿ ದಿವ್ಯದೃಷ್ಟಿಯಲಿ ಕ್ರಮದಿಂದ ಭರಿತಭಾವವನು ಕಾಣೊ ॥೮॥ ಈ ಪರಿ ಧೇನಿಸಲು ದೇವ ಕರುಣವ ಮಾಳ್ಪ । ಪಾಪಸಂಚಿತವು ಆಗಾಮಿನಾಶ ॥ ಆ ಪರೋಕ್ಷಿತನಾಗಿ ನಿನ ಯೋಗ್ಯತೇ ಇಷ್ಟಷ್ಟು । ಗೋಪಾಲವಿಠ್ಠಲನೊಲಿವನಾಗ ॥೯॥

ಪದ ೧೭

ರಾಗ ಕಾಂಬೋದಿ ಝಂಪಿತಾಳ

ಅಭಿವಂದಿಪೆ ಎನಗಭಿಮುಖನಾಗಿಹ್ಯ । ನಭ್ಜವನದಕ್ಷ ವೊಪ್ಪುವ ಶುಭ ಮುಕುತಿ ಪ್ರಬಲಾ ನೀ । ಅಬಲನಾ ಶುಭಗುಣಪೂರ್ಣ ವಿಭುದೇಶ । ಇಭವರ ಶುಭದಾತಾ ॥ಪಲ್ಲ॥ ತಿಳಿಸು ಎನಗೆ ನೀ ತಿಳಿದು ತಿಳಿಯದಂತೆ । ತಿಳಿದೆನೆಂಬುವ ತಿಳಿವಿಕೆ ಬ್ಯಾಡ ॥ ತಿಳಿದರೂ ಪೂರ್ಣ(ರ) ತಿಳಿದಿಲ್ಲನೆಂಬುವಂಥ ತಿಳಿವಿಕೆ ಕೊಡುವದು ತಿಳಿವಲ್ಲಿ । ತಿಳಿದು ತಾರತಮ್ಯ ತಿಳಿಪಲ್ಲಿ ತಿಳಿವಲ್ಲಿ ತಿಳಿದಷ್ಟೆ ಪುನಹ ತಿಳಿಪುವದು । ತಿಳಿದಷ್ಟು ಎನ್ನಿಂದ ತಿಳಿಯದಾ ಜನರಿಗೆ ತಿಳಿದು ತಿಳಿಸುವಂಥ ತಿಳಿವಿಕೆಯಾ ॥೧॥ ಮನವಕೊಡು ಅನ್ಯ

ಮನಸ್ಕನಮಾಡದೇ । ಮನವ ನಿಲ್ಲಿಸು ಸುಕಥಾ ಮನನದಲ್ಲಿ । ಮನಕೆ ಬಂದದು ಜನ್ಮರಾಶಿ ಒಪ್ಪದರ ಸುಮನಸರೊಡಿಯೆನಗೆ ಪ್ರೇಮನವಾಗಿ । ಮನವಶಕಾರರಲಿ ಮನನಕೊಡದೆಂದು । ಮನವನೇ ತ್ಯಜಿಸೇಕ ಮನದಲ್ಲಿ । ಮನಸಿಜನಯ್ಯ ಎನ್ನ ಮನಸಿಗೆ ವಿಷಯನಾಗಿ ಮನಕೆಡಿಸದೇ ದೀನಮನ ಮಾಡಿಸೊ ॥೨॥ ಧ್ಯಾನವಮಾಡಿಸೊ ಏಕ ಪಾದವುಪಿಡಿಯೆ ನಿ। ದಾನ ನೆಂಬಲ್ಲಿ ನೀ ನಿಲುಕುತಲಿ । ಜ್ಞಾನಗುಣಾನಂದನನ ಸರ್ವಾಂಗವು ಆನಂದ ಮಯನೆಂಬೊ ಅನುಭವದಿ ॥ ಸಾನನಂದದೊಳಗೆ ಮುಣುಗಿಸಿ ಅನ್ಯ ವಿಷಯ । ಕಾಣದೆ ಕಣ್ಣಿಗೆ ಕಡಿಯಾಗಿ ಏನು ಕಂಡಲ್ಲಿ ನಾ ನಿಂತೆ ವಿಷಯಾ ನಾಗಿ । ಕಾಣಿಸಿಕೊಡು ಕಾಯೊ ಗೋಪಾಲವಿಠ್ಠಲ ॥೩॥

ಪದ ೧೮

ಬಿಂಬಾಪರೋಕ್ಷ ವಿಷಯ ಪ್ರಾರ್ಥನೆ.

ರಾಗ ಕಲ್ಯಾಣಿ ಝಂಪಿತಾಳ

ಕರುಣಾಳು ಎಂಬುವದು ಕಂಡೆ ನಾ ನಿನ್ನಲ್ಲಿ । ಶರಣಜನರ ಪಾಲಕ, ನೆರೆನಂಬಿದವರನ ಹಲವು ಪರಿಯಿಂದ ಸಂರಕ್ಷಿಸುವ ಸ್ವಾಮಿ ಪ್ರೇಮಿ ॥ಪಲ್ಲ॥ ನಿಂದಲ್ಲಿ ಕುಳಿತಲ್ಲಿ ಬಂದಲ್ಲಿ ಪೋದಲ್ಲಿ । ಬಂಧುಜನರುಗಳಿಂದಲಿ ಕುಂದಲಿಸದೆ ಸರ್ವರಿಂವಲಿ ಕರದೊಯ್ದು । ಸಂದರುಶನವಮಾಡಿಸಿ । ಮುಂದರಿಂದಾದರೂ ಕೊರತೆ ಎನಿಸದೆ ಸರ್ವ। ದಿಂದಲಿ ಸಂರಕ್ಷಿಸಿ ॥ ಚಂದದಿಂದಲಿ ಕರೆದು ತಂದು ಸೇವಿಯೊಳಿಟ್ಟೆ ಬಂಧು ಅನಿಮಿತ್ಯ ಮುಕ್ಕುಂದ ಹರಿಯೇ ॥೧॥ ಕರದು ವೈವಾನೀನೆ ವೈಯ್ಯದದಕ್ಕ ಫಲ ನೀನೆ । ತಿರಗಿ ತಂದವನು ನೀನೆ । ಅರುಹು ಕೊಟ್ಟವ ನೀನೆ ಅರಿದದಕೆ ಫಲನೀನೆ। ವರ ಅಭಯಪ್ರದನು ನೀನೆ॥ ಗುರುತು ಗುರುತಿಗೆ ಗುರುಗಳಾ ಗುರು ನೀನೆ ಪರಿಪೂರ್ಣ ನಿರ್ದೋಷನೆ। ಮರಿಯದೇ ನಿನ್ನ ಕುರುಹು ಮನಸಿಗೆ ತೋರಿ ಸ್ಥಿರವಾಗಿ ಇರುಸರ್ವದಾ ದೇವ॥೨॥ ಉಂ ಬಲ್ಲಿ ಉಡುವಲ್ಲಿ ಕೊಂಬಲ್ಲಿ ಕೊಡುವಲ್ಲಿ ಬಿಂಬಕ್ರಿಯವನು ತಿಳಿಸಿ ಹಂಬಲಕ್ಕೆ ನೀನೆ ನಿಜವಾಗಿ ಹಗಲಿರಳೆನ್ನ। ಅಂಬಕಕೆ ಶಿಲುಕುವದು । ನಂಬಿದೆನು ನಿನ್ನ ಪಾದಾಂಬುಜ ಸರ್ವರಿಗೆ ಬಿಂಬ ನೀನೆಂದು ಧೃಡದಿ । ಬಿಂಬಮೂರುತಿಯೆ ಗೋಪಾಲವಿಠ್ಠಲ ಕೃಷ್ಣ ಸಂಭ್ರಮವೆ ನೀಡುವದು ಸರ್ವರೊಳು ನಿಂದು ॥೩॥

ಪದ ೧೯

ಬಿಂಬರೂಪಿ ಹರಿಯ ನಖಶಿಖಾಂತ ವರ್ಣನೆ,
ವ್ಯಂಗಸ್ತೋತ್ರ ರೂಪ ಗುಣಕ್ರಿಯೋಪಾಸನೆ.

ರಾಗ ಪಾಡಿ ತ್ರಿವಿಡಿತಾಳ

ಲಜ್ಜೆ ಬರುತದೊ ಹ್ಯಾಗೆ ನಿರ್ಜರೇಶಾ। ಅರ್ಜುನಸಾರಥಿ ನಿನ್ನ ಆಜ್ಞಾ ಅರಿತರೆಂದು ॥ಪಲ್ಲ॥ ನಖವು ಕಂಡರೆ ಇದೇ ಸಕಲ ಪೂರ್ಣವುಯೆಂದು, ಲಕುಮಿ ತುತಿಸಿ ನಾಕಲ್ಯಾದಿ ಕಾಣದೆ ॥ ಸುಖ ಅಂಬುಧಿಯೊಳಗೆ ಸೂಸಿ ಇಪ್ಪವಳೆಂದು। ಭಕುತ ಕಂಡರೆ ನಿನ್ನ ಬಚ್ಚಿಡುವ್ರೊನೆಂದು ॥೧॥ ಬೆರಳು ಕಂಡರೆ ಮಹಾಪ್ರಳಯಾ ವಟದ ಮೇಲೆ। ಒರಗಿ ಚಪ್ಪರಿಸಿದಾ ತರುಳನಾಗಿ॥ ಪರಮಾಭೀಷ್ಟವುಯೆಂದು ಪರಿಪೆ ಮಾಡದಲೆ ನೀ। ಕರಿಸೋರು ಕಂಡರೆ ಹರಿಯು ಬೆರಳು ಎಂದು ॥೨॥ ಪಾದ ಕಂಡರೆ ಇದೆ ಸಾಧಿಸಿ ಬಲಿಯಿಂದ। ಭೇದಿಸಿತು ಜಗವೆಲ್ಲಾಯೆಂದು ॥ ಆದರಿಸರು ಅಂಜಿ ಇದು ಭೂತವೆಂತೆಂದು। ಈದಾವ ಸೋಜಿಗ ಕಂಡು ಭಕುತರುಯೆಂದು ॥೩॥ ಗುಲ್ಫ ಕಂಡರೆ ಗೋಪಿ ಸ್ವಲ್ಪ ವಿಷಯಕ್ಕೆ ವರಳಾ। ಶಿಲ್ಪಿಗೆ ಕಟ್ಟೆ ಕೆಡಹಿ ಯೇಳೆಂದು। ಅಲ್ಪವೆಂದು ಶರಣರಾಡುವರೆಂದೊಂದು। ಬಲ್ಪಂಥರಲ್ಲಿ ಇಂಬಚ್ಚಿಕೊಂಡಿಪ್ಪೊನು ॥೪॥ ಜಾನುಜಂಘೆಗಳೆಯುಮುಳಾರ್ಜುನರ ಸೋಂಕಲಾ। ತಾನು ನಿಜವು ಗತಿಯಾನ್ಯೈದೆ। ಖೂನ ಕಂಡರ ಬಾಲಾ ಏನಿದಾಶ್ಚರ್ಯವೆಂದು। ಕಾಣಿಸಿದರೆ ಬಲುತ್ರಾಣಿಯೆಂಬುವರೆಂದು ॥೫॥ ಊರುಕಂಡರೆ ಇದೆ ದೂರೋರು ಜಗವೆಲ್ಲ। ಕೀರುತಿ ಕೈಟಭಾಸುರ ನನ್ನ ॥ ಹೀರಿ ಅಸುವ ಪೇರ್ದೊಡೆಯನುಗ್ಗೊತ್ತಿದ। ಮಾರುತಿ ಕೇಳಿ ವಂದಿಸರು ಬಕುತರು ಎಂದು ॥೬॥ ಕಟಿಯು ಕಂಡರೆ ಕಷ್ಟು ಮೆಲಹೋದಲ್ಲಿ ಜನರು। ಕಟಕಟಾಯೆಂದು ಕಟ್ಟಿದ ॥ ಘಟಧ್ವನಿಯಾ ಘಟನ್ಯಾದಿತೆಂದು। ಘಟ್ಟಿಸಿ ಹುಲ್ಲುಸರವಿಯು। ಕಟಿಗೆ ಸುತ್ತಿದುದಾ ಕಂಡಾರು ಸರ್ವರು ಎಂದು ॥೭॥ ಹೊಕ್ಕಳು ಕಂಡರೆ ಲೆಕ್ಕಿಸದ ರಾಶಿಯಾ। ಮಕ್ಕಳೊಳಗೆಲ್ಲ ಮಾಣಿಕ್ಯದಂಥ ॥ ಚೊಕ್ಕಟ ಮಗನನ್ನ ಪೊಕ್ಕಳಿಂದಲಿ ಪೆತ್ತ। ಅಕ್ಕೋಜವನು ಕಂಡು ನಕ್ಕರೆಲ್ಲರು ಎಂದು ॥೮॥ ಉದರ ಕಂಡರೆ ಎಲ್ಲ ಹದಿನಾಲ್ಕು ಲೋಕವು। ಹುದುಗಿಪ್ಪದೆಂದು ನಿನ್ನೊಳ ಕಂಡು ॥ ಸದಮಲರಲ್ಲ ಹೆಪ್ಪೈಸವಿದೆಂತೆಂದ। ಒದಗದೆ ಕಣ್ಣಿಗೆ ಒಳಗೆ

ಪದ ೧೯

ಬಿಂಬರೂಪಿ ಹರಿಯ ನಖಶಿಖಾಂತ ವರ್ಣನ, ವ್ಯಂಗಸ್ತೋತ್ರ ರೂಪ ಗುಣಕ್ರಿಯೋಪಾಸನೆ.

ರಾಗ ಪಾಡಿ ತ್ರಿವಿಡಿತಾಳ

ಲಜ್ಜೆ ಬರುತದೊ ಹ್ಯಾಗೆ ನಿರ್ಜರೇಶಾ। ಅರ್ಜುನಸಾರಥಿ ನಿನ್ನ ಆಜ್ಞಕರೆಂದು ॥ಪಲ್ಲ॥ ನಖವು ಕಂಡರೆ ಇದೇ ಸಕಲ ಪೂರ್ಣವುಯೆಂದು। ಮಿ ತುತಿಸಿ ಸಾಕಲ್ಯದಿ ಕಾಣದೆ ॥ ಸುಖ ಅಂಬುಧಿಯೊಳಗೆ ಸೂಸಿ ಇಪ್ಪವಳೆಂದು। ಭಕುತ ಕಂಡರೆ ನಿನ್ನ ಬಚ್ಚಿಡುವ್ರೊನೆಂದು ॥೧॥ ಬೆರಳು ಕಂಡರೆ ಮಹಾಪ್ರಳಯಾ ಪಟದ ಮೇಲೆ। ಒರಗಿ ಚಪ್ಪರಿಸಿದಾ ತರುಳನಾಗಿ॥ ಪರಮಾಭೀಷ್ಟವುಯೆಂದು ಪರಿವೆ ಮಾಡದಲೆ ನೀ। ಕರಿಸೋರು ಕಂಡರೆ ಹರಿಯ ಬೆರಳು ಎಂದು ॥೨॥ ಪಾದ ಕಂಡರೆ ಇದೆ ಸಾಧಿಸಿ ಬಲಿಯಿಂದ। ಭೇದಿಸಿತು ಜಗವೆಲ್ಲಾಯೆಂದು ॥ ಆದರಿಸರು ಅಂಜಿ ಆದು ಭೂತವೆಂತೆಂದು। ಈದಾವ ಸೋಜಿಗ ಕಂಡು ಭಕುತರುಯೆಂದು ॥೩॥ ಗುಲ್ಫ ಕಂಡರೆ ಗೋಪಿ ಸ್ವಲ್ಪ ವಿಷಯಕ್ಕೆ ವರಳಾ। ಶಿಲ್ಪಿಗೆ ಕಟ್ಟಿ ಕೆಡಹಿ ಯೇಳೆಂದು। ಅಲ್ಪವೆಂದು ಶರಣರಾಡುವರೆಂದೊಂದು। ಬಲ್ಪಂಥರಲ್ಲಿ ಇಂಬಚ್ಚಿಕೊಂಡಿಪ್ಪೊನು ॥೪॥ ಜಾನುಜಂಘೆಗಳೆಯುವುಳಾರ್ಜುನರ ಸೋಂಕಲಾ। ತಾನು ನಿಜವು ಗತಿಯಾನ್ಯದೆ। ಖೂನ ಕಂಡರೆ ಬಾಲಾ ಏನಿದಾಶ್ಚರ್ಯವೆಂದು। ಕಾಣಿಸಿದರೆ ಬಲುತ್ರಾಣಿಯೆಂಬುವರೆಂದು ॥೫॥ ಊರುಕಂಡರೆ ಇದೆ ದೂರೋರು ಜಗವೆಲ್ಲ। ಕೀರುತಿ ಕೈಟಭಾಸುರ ನನ್ನ ॥ ಹೀರಿ ಅಸುವ ಪೇರ್ದೊಡೆಯನುಗ್ಗೊತ್ತಿದ। ವಾರುತಿ ಕೇಳಿ ವಂದಿಸರು ಬಕುತರು ಎಂದು ॥೬॥ ಕಟಿಯು ಕಂಡರೆ ಕದ್ದು ಮೆಲಹೋದಲ್ಲಿ ಜನರು। ಕಟಕಟಾಯೆಂದು ಕಟ್ಟಿದ ॥ ಘಟಿಧ್ವನಿಯಾ ಘಟನ್ಯಾದಿತೆಂದು। ಘಟ್ಟಿಸಿ ಹುಲ್ಲುಸರವಿಯು। ಕಟಿಗೆ ಸುತ್ತಿದುದಾ ಕಂಡಾರು ಸರ್ವರು ಎಂದು ॥೭॥ ಹೊಕ್ಕಳು ಕಂಡರೆ ಲೆಕ್ಕಿಸದ ರಾಶಿಯಾ। ಮಕ್ಕಳೊಳಗೆಲ್ಲ ಮಾಣಿಕ್ಯದಂಥ ॥ ಚೊಕ್ಕಟ ಮಗನನ್ನ ಪೊ ಳಿಂದಲಿ ಪೆತ್ತ। ಅಕ್ಕೋಜವನು ಕಂಡು ನಕ್ಕರೆಲ್ಲರು ಎಂದು ॥೮॥ ಉದರ ಕಂಡರೆ ಎಲ್ಲ ಹದಿನಾಲ್ಕು ಲೋಕವು। ಹುದುಗಿಪ್ಪದೆಂದು ನಿನ್ನೊಳ ಕಂಡು ॥ ಹೆದರುಪರೆಲ್ಲ ಹೆದ್ದೈವವಿದೆಂತೆಂದ.। ಒದಗದೆ ಕಣ್ಣಿಗೆ ಒಳಗೆ

ಕುತಾ ತಿರಗೊವುತ್ಸ್ಯನುಯಂದು । ಇನ್ನೆಲ್ಲಿ ಕಂಡಾರೆ ಹರಿದಾರು ಯೆಂದು ॥೨೦॥ ಕರ್ನ ನೋಡಿದರೆ ಸ್ಫುರ್ನವಾಗಿದೆಂಬ। ಸ್ವರ್ನಾಕ್ಷನಾ ಸಂಹಾರ ಮಾಡಿದೆ ॥ ಕರ್ನಕಿ (ರೆ) ರಥವ ಸುಪರ್ನವಾಹನನೆಂಬೊ। ವರ್ನ್ನಿದು ಘನಘನ್ನವಲ್ಲಾವೆಂತೆಂದು ॥೨೧॥ ಫಣಿಯು ನೋಡಿದರಿನ್ನು ರಣದವೊಳಗೆ ನೋಡು । ಹೆಣಿಗಾಡುತಿರಲು ಅರ್ಜುನನು ಭೀಷ್ಮಾ॥ ಮಣಿದು ಬಾರದ್ದು ನೋಡಿ ರಣಕೆ ನೀನೆದುರಾಗೆ । ಹಣೆಯು ಬಡುದಿಹ್ಯ ಭೀಷ್ಮನು ಎಂದು ॥೨೨॥ ಶಿರವನೋಡಲು ಇನ್ನು ಧರೆಯುಲ್ಲಾ ಹೊತ್ತಿನ್ನು। ಹರಿಯೇ ನೀ ವಿಷ್ಣು ಕೂರ್ಮನು ಎನಿಸಿ ॥ ಧರಿಸಿದಾ ಶಿರದಲ್ಲಿ ಪರಿ ಪರಿ। ಮರಳ। ಹರಿದು ತೊಪ್ಪಲು ನಾನಾ । ಶಿರಕೆ ಸುತ್ತಿದನೋಡೆ ॥೨೩॥ ಎತ್ತ ನೋಡಲು ಸರ್ವತ್ರ ಪೂರ್ಣ। ಭೃತ್ಯನು ನಾನು ಹುಡುಕುತ್ತ ನಿನ್ನ॥ ಸುತ್ತ ನೋಡಿ ನೋಡಿ ಮತ್ತೆ ಕಾಣದೆ ಪೋಗಿ । ಈ ತೆರದಾಡುವೆ ಚಿತ್ತಜ ನೈಯ್ಯನೆ ॥೨೪॥ ಕಾಣದೆ ನಿನ್ನನು ನಾನಾಕು ಅವಯುವಗಳ। ಇನಿತು ಪರಿಯಾ ಅನಿಸಬೇಕೆ ॥ ಮಾನಪೂರ್ಣನು ಆಗಿ ನಾನ್ಯಾಕಾಡಿಸಲೆಂದಾ। ಜಾಣ ಗೋಪಾಲವಿಠ್ಠಲ ಕಾಣಿಸಿಕೋ ನೀ ಬ್ಯಾಗ ॥೨೫॥

ಪದ ೨೦

ಬಿಂಬರೂಪನಾದ ಶ್ರೀಹರಿಯ ವ್ಯಾಪ್ತಗುಣ ಮಹಿಮೆ,
ಆ ಮೌಳಿ ನಖಾಂತ ಏಕೇಕ ಅವಯುವ ಧ್ಯಾನೋಪಾಸನೆ ಕ್ರಮ.

ರಾಗ ಶಂಕರಾಭರಣ ಅಟ್ಟತಾಳ

ಧೇನಿಸುಮನವೆ ನೀ ಧೇನಿಸು। ಧೇನಿಸುಮನವೆ ಶ್ರೀಹರಿಯಾ ಪಾದ। ಧ್ಯಾನಮಾಡು ಈ ಪರಿಯಾ ॥ ಹಾ ಹಾ ॥ ಪ್ರಾಣೋಪಾನ ವ್ಯಾನೋದಾನ ಸಮಾನರ್ಗೆ। ಪ್ರಾಣರಾಗಿಹ ಮುಖ್ಯ ಪ್ರಾಣಾಂತರ್ಗತನ ನೀ ॥ಪಲ್ಲ॥ ಪರಮಾಣು ಪ್ರದೇಶದಲ್ಲಿ ಪ್ರಾಣಿರಾಶಿ ಅನಂತ ಉಂಟಲ್ಲಿ ಹೀಗೆ। ವರಲು ತಿವೆ ವೇದಾವಳಿ ದೃಷ್ಟಾಂ। ತರ ಪೇಳ್ವೆ ಕೇಳು ಧೃಡದಲ್ಲಿ ॥ ಹಾ ಹಾ ॥ ಪರಮ ಸೂಕ್ಷ್ಮವಾದ ವಟಮರವಾಗಿ ಅದರಲ್ಲಿ। ಪರಿಮಿತಿಲ್ಲದೆ ಫಲದು ಬೀಜವರಿತು ನೀ ॥೧॥ ನಿರುತ ಸಾವರಣ ಬ್ರಹ್ಮಾಂಡದಲ್ಲಿ। ಹರಿಪೂರ್ಣ ವ್ಯಾಪ್ತ ಅಖಂಡ। ನಾಗಿ। ಮೆರವುತಲಿಪ್ಪ ಮಾರ್ತಾಂಡನಾ। ಕಿರುಣದಂತಿ ರುವ ಪ್ರಚಂಡ ॥ಹಾ ಹಾ॥ ಹೊರಗೆ ಒಳಗೆ ಸರ್ವಾಂತರದಲ್ಲಿ ಹರಿ

ಮಾಯಾ । ವರಿತು ನಿನಗೆಯೆಲ್ಲಿ ದೊರಕಿದ ಸ್ಥಳದಿಂದ ॥೨॥ ಸಲಿಲಭೂಗಿರಿ ಲತೆ ನಾನಾ ವೃಕ್ಷ । ಫಲ ಖಗಮೃಗಕಾನನ ಮುಕ್ತ । ಸ್ಥಳ ಅವ್ಯಾಕೃತಗಾ ನಾನಾ ತ್ರಿಣ । ಪ್ರೋಳಿವಕ ತರು ಪವನಾ ॥ಹಾ ಹಾ॥ ಒಳಗೆ ಹೊರಗೆ ಹರಿ ಚಲಿಸದೆ ಇರುತಿಪ್ಪ । ಸ್ಥಳದ ನಿಲಿವಿನಂತೆ ತಿಳಿದು ನೀ ಅದರಂತೆ ॥೩॥ ಕೇಶವವಿಶ್ವಮಚ್ಛ್ಯಾದಿ ತೈ । ಜಸ ಶ್ರೀಹಯಗ್ರೀವಾದಿ ಜೀವಾ । ರಾಶಿಯು ಲಿದ್ದ ಅನಾದಿ ಸರ್ವ । ದೇಶ ವ್ಯಾಪಿಸಿದಂತ ಭೇದಿ ॥ ಹಾ ಹಾ ॥ ಈ ಸಮಸ್ತ ಮೂರ್ತಿ ಶ್ರೀಶರಂಗನೆ ಎಂದು । ವಾಸನ ಮಯದಿಂದ ನೀ ಸೇವಿಸು ನಿತ್ಯ ॥೪॥ ಜೀವಾರಿಂದತ್ಯಂತ ಭೇದ ಪ್ರತಿ ಜೀವಾಂತರದಲ್ಲಿ ಮೋದ । ನಾಗಿ ಆವಾಗ ಚರಿಸುವವೇದ ಪೇಳು । ವಾದು ಸತ್ಯಂಧಿದಾ ॥ ಹಾ ಹಾ ॥ ಈ ವೇದದರ್ಥವು ಸಾವಧಾನದಿ ತಿಳಿದು । ಶ್ರೀವಾಯು ಮತದ ಸುಕೋವಿದರೊಡಗೂಡಿ ॥೫॥ ಸಪ್ತಾವರಣ ಶರೀರದಲ್ಲಿ ದಶ । ಸಪ್ತ ದ್ವಿಸಹಸ್ರ ನಾಡಿಯಲ್ಲಿ ದಶ । ಸಪ್ತ ದ್ವಿಸಸ್ರ ರೂಪದಲ್ಲಿ ಹರಿ ವ್ಯಾಪ್ತ ನಿರ್ಲಿಪ್ತ ಸ್ಥಾನದಲ್ಲಿ ॥ ಹಾ ಹಾ ॥ ಆಪ್ತನಂತಿರುವ ಸುಷುಪ್ತ ಸ್ವಪ್ನ ಜಾಗ್ರದಿ । ತಪ್ತಕಾಂಚನದಂತೆ ದೀಪ್ತಿಸುತಿಪ್ಪನ ॥೬॥ ಶ್ರೀ ಕೇಶವನೆ ಮೂಲರಾಶಿ ಶ್ರುತಿ ಏಕೋ ನಾರಾಯಣ ಆಶಿ । ನಾನಾ । ಲೋಕ ಸೃಷ್ಟಿಪ ಧಾತ(ನು) ಶಿವತಾರಕ ಮಂತ್ರೋಪದೇಶಿ ॥ ಹಾ ಹಾ ॥ ನೀ ಕೇಳು ನಿಗ ಮಾರ್ಥ ನೀ ಕರಿಸು ಸಂಶಯ ; ಯೇಕೋಮೇವ ದ್ವಿತಿಯೆಂಬ ಕೃಷ್ಣ ನಂಘ್ರಿಯ ॥೭॥ ಗಂಗಾಜನಕ ಸಿರಿರಂಗ ನು । ತ್ತುಂಗ ಗುಣ ಗಣಾಂತ ರಂಗ ಕಾ । ಳಿಂಗ ಸರ್ಪನ ಮದಭಂಗ ಭು । ಜಂಗ ಶಯನ ಅಮಲಾಂಗಾ ॥ಹಾ ಹಾ॥ ಪಿಂಗಳ ಇಡಾ ಮಂಗಳ ಸುಷುಮ್ನ ಸಂಗಮಮಧ್ಯದಿ ತಿಂಗಳಂ ತಿಪ್ಪನೆ॥೮॥ ಹೃದಯಸ್ಥಾನದಲಿದ್ದ ಮೂರ್ತಿ ಬಲು । ಅದು ಭೂತಾವನ ದಿವ್ಯ ಕೀರ್ತಿ ಅದೆ । ಪದುಮಜಾಂಡದಿ ಪರಿಪೂರ್ತಿ ದೊರೆ । ವದಕೆಬೇಕು ವಾಯು ಸಾರ್ಥಿ ॥ಹಾ ಹಾ॥ ಅದೆ ಬಿಂಬಮೂರುತಿ ಜೀವಾದಾಕಾರವಾಗಿ । ಪದುಮ ಕೇಶರದಿಪ್ಪ ಸದಮಲಾತ್ಮಕನಾ॥೯॥ ಧರಿಯುನಳದ ದಿವ್ಯಚರಣ ಅಂದು। ಮೆರೆ ವುತಿಪ್ಪದು ಕೋಟಿ ಅರುಣ । ನಂತೆ ಪರಿಪೂರ್ಣಭರಿತವು ಕಿರಣ । ತನ್ನ । ಸ್ಮರಿ ಸುವರಿಗೆ ಮಾಳ್ಪ ಕರುಣ ॥ ಹಾಹಾ ॥ ತರುಣಿಯೆಂದವಿ ನಖದಿ ಸುರ ನದಿ ಪೆತ್ತನೂ । ಪುರಗೆಜ್ಜೆಪೆಂಡೆಯು ಯರಡ್ಡೆದು ಬೆರಳನು ॥೧೦॥

ಪರಡು ಜಂಘೆಯುಗ ಜಘನರು । ಚಿರರೇಖಾಧ್ವಜ ವಜ್ರ ನಾನಾ ದಿವ್ಯ । ವರ ರೇಖದಿಂದವೊಪ್ಪುವನ । ಜಾನು । ಪರಮ ಶೋಭಿಸುವ ಸುಂದರನ, ॥ ಹಾ ಹಾ ॥ ಸುರುಟು ಕದಳಿಯಸ್ತಂಭ ಇರಹು ಊರುದ್ವಯ । ಸರಿಗಾಣೆ ಹರಿಯುಟ್ಟವರ ಪೀತಾಂಬರವನ್ನು ॥೧೧॥ ಗಜನಾಶ (ಸಿಂಹ) ದಂತಿಪ್ಪ ಮಧ್ಯ ಬಲು । ವಿಜಯುವಧ್ಯಾಣ ಅಭೇದ್ಯ । ಭೇದ್ಯ । ನಿಜ ಘಂಟಿ ಝುಣರೆಂಬೋವಾದ್ಯ ಕು । ಬುಜಿಯು ಡೊಂಕು ಕಿಪ್ಪಿದಾನಾದ್ಯ ॥ಹಾಹಾ॥ ಅಜಜನಿಸಿದ ನಾಭ್ಯಂಬುಜ ಚತುರ್ದಶ । ತ್ರಿಜಗಭರಿತ ಕುಕ್ಷಿ ನಿಜ ಪೂರ್ಣ ಸುಖಮಯನ ॥೧೨॥ ಉದರ ತ್ರಿವಳಿ ನಾನಾಹಾರ । ದಿವ್ಯ । ಪದಕ ಪಚ್ಛೆಗಳ ವಿಸ್ತಾರ ಬಲು । ಚದುರ ವೈಜಯಂತಿ ಮಂದಾರ । ವನ್ನು ಮುದದಿಂದ ಧರಿಸಿದ ಧೀರ ॥ ಹಾ ಹಾ ॥ ಪದುಮಜ ಭವದಿಂದ ತ್ರಿದಶಾಗು ತಿಳಿದಿನ್ನು । ಪದುಮು ಕೇಶರದಿಪ್ಪ (ಕೋಶದಲಿಪ್ಪ) ಸದಮಲಾತ್ಮಕನ ॥೧೩॥ ಶಿರಿವತ್ಸ ಕೌಸ್ತುಭಹಾರಾ । ವ್ಯಾಲೆ । ಸರಿಗಿನ್ಯಾವಳದ ಶೃಂಗಾರ ಸುಂ । ದರವಾದ ಕಂಬುಕಂಧರ ಅತಿ ಗುರುತರ ಭುಜವು ಚತುರಾ ॥ ಹಾ ಹಾ ॥ ಮರ(ದ)ದಾನೆ ಸೊಂಡಿಲು ಇರಹು ಬಾಹುಕೆತ್ತಿಗೆ । ಬೆರಳು ನಕ್ಷತ್ರ ಅರಸ ನಂದದಿ ನಖ ॥೧೪॥ ಕರಚತುಷ್ಟಗಳಲ್ಲಿ ಶಂಖ, ಚಕ್ರ । ವರಗದೆ ಪದುಮ ನಿಃಶಂಕಾ ನಾಗಿ । ಮೆರೆವುತಲಿಪ್ಪ ಕಳಂಕ । ದುರುಳಾರಾತರಿದ ಛಲದಂಕಾ ॥ ಹಾ ಹಾ ॥ ಬೆರಳು (ಹರಳು) ಮಾಣಿಕ ಉಂಗುರ ಕಡಗ ಕಂಕಣ । ಬಿರದಿನ ತೋಳ್ಬಂದಿ ಶಿರಿ ಭುಜಕೀರ್ತಿಯು ॥೧೫॥ ಅಗರು ಚಂದನ ಗಂಧ ಲೇಪ ಕಂಠು । ಸೊಗಸಾದ ಚುಂಬಕು ಪ್ರತಾಪ ಮಾವು । ಚಿಗರಿದ ಚಂದ್ರ ಕಿದುಟಿ ಭೂಪಾ । ನಸು । ನಗುವವದನಸಲ್ಲಾಪ ॥ ಹಾ ಹಾ ॥ ಮಗನಾಗಿ ತಾನು ಗೋಪಿಗೆ ವದನದೊಳಗೆ । ಜಗವೆಲ್ಲ ತೋರಿದ ಅಗಣಿತ ಮಹಿಮನ್ನ ॥೧೬॥ ಮುಗುಳು ಮಲ್ಲಿಗೆ ಮೊಗ್ಗೆದಂತಾಪಿಂಕ್ತಿ । ಜಗವ ಮೋಹಿಸುವ ಸುಕಾಂತ । ಜಿಂಹ್ವೆ । ನಿಗಮಕೆವೇದ್ಯವಾದಂಥ । ಬಹು । ಬಗೆಯಲ್ಲಿ ಮೆರೆವಸು ಪಂಥ ॥ಹಾ ಹಾ॥ ನಗುವದನ ಝಗಝಗಿಸ ಕುಂಡಲಕಾಂತಿ । ಮಿಗೆ ಕೂರ್ಮಕದಪು ಸಂಪಿಗೆಯು ನಾಶಿಕವನ್ನು ॥೧೭॥ ಕರುಣಶಾಂತ ಶುಭನೋಟಾ ಕಂಗಳ (ಕದಪು) । ಡರ ಚಲ್ವಿಕೆಮಾಟ । ಇನ್ನು । ಅರವಿಂದ ದಳವನ್ನು ಧಿಟ್ಟಾ । ಅಲ್ಲಿ । ತರುಣಿ ಚಂದ್ರಾಮರಕೂಟಾ ॥ಹಾಹಾ॥

ಶರಣಜನರ ಮನೋಹರುಷವಾರ್ಧಿಗೆ ಚಂದ್ರ । ದುರುಳದಿತಿಜ ತಿಮಿರಕೆ ಭಾಸ್ಕರನ್ನ ॥೧೮॥ ಪೊಳೆವ ಪುರ್ಬುದ್ವಯ ಸ್ಮರನಾ ಚಾಪಾ । ತಲೆಯ ತಗ್ಗಿಸುವಂಥ ರಚನ । ಫಾಲಾ । ದಲ್ಲಿಟ್ಟ ತಿಲಕಸುಂದರನ । ಲೋಕ । ಕಳವಳಗೊಳಿಸುವ ಸುಗುಣ ॥ ಹಾಹಾ ॥ ನಳಿನವದನದಲ್ಲಿ ಅಳಿಗಳಂತೊಪ್ಪುವ । ಸುಳಿಗುರುಳಿನ ಮೇಲೆ ನಲಿವ ಅಂಕಲೆಯನ್ನು ॥೧೯॥ ಕೋಟಿ ಸೂರ್ಯಪ್ರಕಾಶ ಕಿ । ರೀಟಸಮಾ ಆವಾದೇಶ । ದಲ್ಲಿ । ಸಾಟಿಗಾಣೆನು ವಿಶೇಷ ಕ । ಪಟನಾಟಕ ನಿತ್ಯರಮೇಶ ॥ಹಾಹಾ॥ ನೀಟಾಗಿ ನಖ ಲಲಾಟದ ಪರಿಯಂತ । ನೋಟದಿಂದಲಿ ಈಶ । ಕೋಟಿ ಸಹಿತನಾಗಿ ॥೨೦॥ ಕಾಮಾದಿಗಳನೆಲ್ಲಜರಿದು । ಭೂಮಿ ಹೇಮ ಕಾಮಿನಿಯರ ತೊರೆದು । ಅತಿ । ಪ್ರೇಮದಿ ಗುರುಗಳ ಬೆರೆದು । ಮುಕ್ತಿ । ಯಾ ಮಾರ್ಗದ ಹಾದಿ ಅರಿದು ॥ಹಾಹಾ॥ ಶ್ರಾಮಜವರದ ಶ್ರೀಗೋಪಾಲವಿಠ್ಠಲನ್ನ । ಯಾಮ ಯಾಮಕೆ ನಲಿದಾಡುತ್ತ ನೀನಿತ್ಯ ॥೨೧॥

ಶ್ರೀಪ್ರಾಣೇಶ ವಿಠಲರ ಪದ ೨೧

ಮಾನಸಪೂಜಾ ಕ್ರಮ

ರಾಗ ಕಾಂಬೋದಿ ಝಂಪೆತಾಳ

ಹೃದಯಮಂದಿರ ವಿವರ ಈ ಪರಿಯಲಿಂತಿಳಿದು । ಮಧುವೈರಿ ಪೂಜಿಮಾಳ್ಪದು ಸುಜನರೂ ॥ಪಲ್ಲ॥ ಉದಯದಲಿ ಮೂರು ಬಾಗಿಲು ಪ್ರಥಮದಲಿ ರಮಾ । ಆದರ ತರುವಾಯ ರವಿನಾಮ ಪ್ರಾಣಾ ॥ ಪದುಮಾಕ್ಷ ಭಾರತಿದ್ಯುನಾಮದಿಂದಿಹಳಲ್ಲಿ । ತುದಿಯ ಬಾಗಿಲಿಗಿಗೆ ಜಯವಿಜಯರೂ ॥೧॥ ಯಮದಿಸಿಗೆ ಮೂರು ಕದ ಮೊದಲು ಶ್ರೀಯರಡರೊಳು । ತಿಮಿಪಾಖ್ಯವ್ಯಾನದಿಜ್ಞಾನ್ನಾಂ ಭಾರತೀ ॥ ಅಮಲ ಬಲಪ್ರಬಲ ಮೂರನೇ ದ್ವಾರಕಿಹರು ಪ । ಶ್ಚಮ ದ್ವಾರ ಮೂರರೊಳಿಹರ ಪೇಳ್ವೆ ॥೨॥ ಪ್ರಥಮ ಮಾ ದ್ವಿತಿಯದಲಿ ಶಿಖಿನಾಮಕ ಪಾನ । ಪೃಥಿವಿನಾಮಕ ಭಾರತೀ ಕುಮುದರೂ ॥ ತೃತಿಯದಲ್ಲಿಹ್ಯರುತ್ತರಕೆ ಮೂರು ದ್ವಾರಗಳು । ಸತತಲ್ಲಿ ನೆಲೆಸಿಹರ ಪೆಸರು ಕೇಳೀ ॥೩॥ ಒಂದರೊಳು ಶ್ರೀ ದ್ವಿತಿಯ ಸುರಪನಾಮ ಸಮಾನ । ಇಂದುಮುಖಿ ಭಾರತಿಯು ವಿಧ್ಯುನ್ನಾಮ್ನೀ ॥ ನಂದನ ಸುನಂದ ಮೂರನೇ ಬಾಗಿಲಲ್ಲಿಹರು । ಒಂದು ಕದ ಮೇಲೂ ಭಾಗದಲೀಹದೂ ॥೪॥

ಅಲ್ಲಿ ಆಕಾಶ ನಾಮಕಳು ಲಕ್ಷ್ಮಿ ಉದಾನ। ಚಲ್ವಿಭಾರತಿಯು ವಾಙ್
ನಾಮದಲಿಹಳೂ ॥ ಮಲ್ಲರಿಪು ಅಷ್ಟಪತ್ರದೊಳಗೆ ದ್ವಿಷಡ್ರೂಪ। ದಲ್ಲಿಹ್ಯ
ವಿವರ ಕೇಳಿ ಆದರದಲೀ ॥೫॥ ಎರಡೆರಡು ದಿಕ್ಕಿನಲಿ ಒಂದೊಂದು ದಿಕ್ಕಿನಲ್ಲಿ
ಎರಡೈದು ಒಂದು ಸ್ತ್ರೀ ಒಂದು ಪುರುಷಾ ॥ಪರಮ ಪಾವನವಾದ ಈ ಹನ್ನೆ
ರಡು ರೂಪ। ಗುರುಮಧ್ವಮುನಿರಾಯರೊರಣಿಸಿಹರೂ ॥೬॥ ಮನಕಂಜ
ಮೂಲದಲಿ ದುರ್ಗ ಭೂಮಧ್ಯದಲಿ। ಕೊನಿನಳ ಶ್ರೀಭಾಗಭೇದಗಳಿವೂ॥
ಮನುಜನಂಗುಟ ಮಿತಿ ತುದಿಯಲಿ ಹರಿಯುಗ್ರೇಶ। ನೆನಿಸಿ ಜೀವರಿಗೆ
ಸುಸುಪ್ತಿಯನೀವನೂ ॥೭॥ ತಾವರಿಯ ಮಧ್ಯದಲಿ ಇಹನಷ್ಟ ಪ್ರಾದೇಶ।
ಆವಾಗ ದೇಹಿಗಾಧಾರ ಪುರುಷಾ ॥ ಭಾವಿಸುವದಿನಿತೆಮಿತೆ ಮೂಲೇಶ
ಈತಗೇ। ಕೋವಿದರು ವಿಜ್ಞಾನವವು ಎಂಬರೂ ॥೮॥ ಮೂಲೇಶನಂಘ್ರಿ
ಆಶ್ರೈಸಿ ಮುಖ್ಯಪ್ರಾಣ। ವಾಲಗವ ಮಾಳ್ಪ ಕೈಮುಗಿದು ನಿರುತಾ॥ಕಾಳೇಶ
ನಂತರ್ಗತನು ವಿಷ್ಣುವಿಗೆ ನಾಮ। ಲಾಳೂಕ ವೈಕುಂಠಶೇನಕೇಂದ್ರಾ ॥೯॥
ಹಂಸ ಸೋಹಂಸ್ವಹಾ ಎಂಬ ಜಪ ಸರ್ವರೊಳು। ಶ್ವಾಸರೂಪದಿ ಮಾಳ್ಪ
ಇದನು ತಿಳಿದೂ ಶ್ರೀಶಗರ್ಪಿಸಿದವನೆ ಜ್ಞಾನಿ ಎಂದಿಗ್ಯು ಬಂಧ। ಪಾಶದೊಳು
ಶಿಲ್ಕಲಾಲಿಪುದು ಬುಧರೂ ॥೧೦॥ಈ ವಾಯುದೇವನಡಿ ಆಶ್ರೈಸಿ ಸರ್ವದಾ।
ಜೀವನಿಹ ಅವಸಿರವು ಎಂತು ಕೇಳೀ ॥ ಆವ ಕೇಶಸಹಸ್ರ ಭಾಗದೊಳು
ಮಂದಂಶ। ದೀ ವಪ್ಪುವನು ಸರ್ವವಯವಗಳಿಂದ ॥೧೧॥ ವಾಸುದೇವನೆ
ಹರಿಗೆ ಶಿರವೆನಿಪ ನಾಶಿರವು। ಈ ಶರೀರಗೆ ಶಿರವು ನಾರಾಯಣಾ॥ ಭಾಸಿ
ಸುವ ಮಧ್ಯಮಧ್ಯದೊಳಿಹದು ಪ್ರದ್ಯುಮ್ನ। ಶ್ರೀಶನಾ ಬಲಭಾಗ ಬಲ
ದೊಳಿಹದೂ ॥೧೨॥ ವಾಮಹರಿಗನಿರುದ್ಧ ಜೀವನೆಡದಲ್ಲಿಹದು। ಸ್ವಾಮಿ
ಪದ ಸಂಕರಷಣಿದರೊಳಿಹದೂ ॥ ರಾಮವಾಗೇಂದ್ರಿ ದೇವಗೆ ವಾಗ್ದೊಳಿಹ
ನೃಹರಿ। ಶ್ರೀ ಮನೊರಮಗೆ ಘ್ರಾಣ ಜೀವಘ್ರಾಣಾ ॥೧೩॥ ಹರಿನೇತ್ರ
ಕಪಿಲಜೀವನ ಕಂಣಿನಲ್ಲ ಹವಿ। ವರ ತಿಳಿವದೀ ಜೀವನಂಗಧವಣೀ ॥ ವರ
ರಮ್ಯವಾದ ಜೀವನ ಹೃತ್ಕಮಲ ಶ್ವೇತ। ವರಣಷ್ಟ ಪತ್ರ ಉಳ್ಳದು ತಿಳಿ
ವದೂ ॥೧೪॥ ಅಲ್ಲಿಪ್ಪ ಹರಿಗಾತ್ಮಜೀವ ಹೃದಯುಂಬುವರು। ಬಲ್ಲವರು
ಸ್ಥೂಲಾಂಗ ಹೃತ್ಸರಸಿಜಾ ॥ ದಲ್ಲಿಷ್ಟದಳ ಮಧ್ಯ ರತ್ನಮೌಕ್ತಿಕ ಕಾಂತಿ।
ಯಲ್ಲಿಹದು ಹೇಮಮಂಟಪವಾತ್ಮಕಾ ॥೧೫॥ ಆ ಮಂಟಪದಲಿ ಹನ್ನೆರಡು

ಮೂಲ್ಯಾಳ್ಳ ಭಾ । ನೂ ಮಂಡಲದಲಿ ಬಡುವಾಗೀಹದೂ ॥ ಸೋಮ ಮಂಡಲದಲಿ ತ್ರಿಕೋಣಾಗ್ನಿ ಮಂಡಲದಿ । ಭೂಮಿಧರ ಶೇಷಪರಿಯಂಕ ದಲ್ಲೀ ॥೧೬॥ ಮುತ್ತುರತ್ನಗಳಿಂದ ದಟಿತವಾದಾಸನ ವಿ । ಚಿತ್ರ ರತ್ನಖಚಿತದ ಉಪಬರ್ಹಣಾ ॥ ಉತ್ತುಮಶಿತ ದ್ವೀಪಗತ ವಿಷ್ಣು ಅಲ್ಲಿಹನು । ನಿತ್ಯ ಪರಮಾತ್ಮನೆಂಬರು ಆತಗೇ ॥೧೭॥ ಬಿಂಬನಾಮನರೂಪವೇನು ವರ್ಣಿಪೆನು ದಿತ । ಅಂಬುಜಾಪ್ತಾಭಚಿತ್ ಸುಖವಿಗ್ರಹಾ ॥ ಕಂಬುರವಿಗದ ಕಂಜಶಿರಿ ಧರಣಿ ಸಹಿತ । ಹೇಮಾಂಬರದಿ ವಧ್ಯಾಣದಿಂದೊಪ್ಪುವಾ ॥೧೮॥ ಕಟಿ ಪ್ರದೇಶನು ಗುಂಭನಾಭಿ ಕೌಂಸ್ತುಭ ವಕ್ಷ । ಪಟುತರ ಭುಜದಿ ಭೂಷಣ ದಲೊಪ್ಪುವಾ ॥ ದಟಿತ ರತ್ನದ ಮುಕುಟ ನೀಲಾಳಕನು ಬ್ರಹ್ಮ । ನಿಟಿಲಾಕ್ಷ ಮುಖಸ್ಸೈನ್ಯ ಶೃತಿಭೂಷಣಾ ॥೧೯॥ ಪವಳ ಮೌಕ್ತಿಕ ರತ್ನಹಾರ ಅರವಿಂದಾಕ್ಷ । ಸುವಿಶಾಲ ಹೃದಯ ಮಂದಸ್ಮಿತ ಮುಖಾ ॥ ಸುವರಣ್ಣ ಕಡೆಯನೂ ಪುರಗೆಜ್ಜೆಯುಕ್ತ ಪದ । ದಿ ವಿಷತ್ಪತಿಯ ಪೊಗಳಲಾಶಕ್ತನೇ ॥೨೦॥ ಸ್ಥಾನತ್ರಯದೊಳಿದ್ದ ಹೃತ್ಪದ್ಮದೊಳಗಿದ್ದ । ನಾನಾ ಜೀವಜಡರೊಳ ಹೊರಗಿರುತಿಹ್ಯಾ ॥ ಶ್ರೀನಿವಾಸನ ರೂಪಕತ್ಯಂತ ಐಕ್ಯವನು । ಸಾನುರಾಗದಲಿ ಚಿಂತಿಪುದೇ ಪೂಜೀ ॥೨೧॥ ಧನರೂಪ ಬಲಯುಕ್ತನಾದ ಕಾಲಕು ತನ್ನ । ತನಯ ಪಂಡಿತನಾಗದೆಂತ ಸಂಹ್ಯಾ ॥ ಜನಕಗಾಗುವಧಾಂಗೆ ಬಾಹ್ಯ ವಸ್ತುಗಳಿಂದ । ಘನ ಪೂಜಿಸಿದರು ಶ್ರೀನಾಥ ಮೆಚ್ಚಾ ॥೨೨॥ ತನ್ನ ಮನಿಯೊಳಗಿನ ವಿಚಾರವನು ಬಿಟ್ಟು ಮ । ತ್ತನ್ಯರಪರಾಧವೆಣಿಸುವನ ತೆರದೀ ॥ ಚನ್ನಾಗಿ ಈ ಮರ್ಮ ತಿಳಕೊಳ್ಳದೆ ಬಲ್ಲೆನೆಂ । ದಿನ್ನೊಂದು ಪ್ರಶ್ನೆ ಮಾಡುವನೆ ಮೂರ್ಖಾ ॥೨೩॥ ಹದಿಮೂರು ದ್ವಾರಷ್ಟು ಪತ್ರಧೋಮುಖವಾದ । ಹೃದಯದ ವಿಚಾರಗಣಿತೆನ್ನಮತಿಗೇ ॥ ವದಗಿದಷ್ಟೇಳಿಹೆನು ತುಷ್ಟನಾಗನೇ ಶ್ರೀಶ । ವಿದುರಿತ್ತಪಾಲಿಗೊಲಿದವನಲ್ಲವೇ ॥೨೪॥ ಹೃದಯು ಜೀವನ ಶರೀರಹಂಕಾರ ಅಂತರಾತ್ಮ । ಮೊದಲು ಹರಿನಾಮ ಜೀವನೊಳು ತಿಳಿದೂ ॥ ಮದನನೈಯನ ಪೂಜಿ ಮನದಲ್ಲಿ ಮಾಡಲು ಬಿ । ಡದೆ ಕಾಯ್ವ ಇಹಪರದಿ ಕರುಣಸಾಂದ್ರಾ ॥೨೫॥ ಏನು ಕೊಟ್ಟಿರುವಲ್ಲ ಈ ವಿಚಾರಕೆ ಪ್ರಿಯ । ಧೇನುವಂದದಲೀವ ಬೇಡಿದಿಷ್ಟಾ ॥ ನಾನರಿಯೆ ನಿದನಪದ್ಧವ ಕ್ಷಮಿಸುವರು ಬುಧರು । ಶ್ರೀನಾಥನುಡಿಸಿದಂದದಿ ಪೇಳಿಹೇ ॥೨೬॥ ಶಚಿ

ಗಾಂಗೇಯ ಕಾಳಿಂಗ ಶಿಶುಪಾಲ ಭೃಗು। ಅಬುಜ ಪ್ರಥಮಾಂಗ ಅಜಮಿಳ ತಾರಾ ॥ ವಿಬುಧೇಶ ಪ್ರಮುಖರಪರಾಧ ಕ್ಷಮಿಸಿದ ಕೃಪಾ। ಅಂಬುಧಿಯ ನ್ನಯ ಅಪದ್ಧಗಳೆಣಿಸೊನೇ ॥೨೭॥ ಸೂಜಯಿಂ ರಣ ಜೈಸಿದಂತೆ ಯನ್ನೀಮತಿಗೆ। ರಾಜೀವನಯನೊಲಿದು ಪೇಳಿಸಿದನೇ ॥ ಶ್ರೀ ಜಗನ್ನಾಥ ರಾಯರ ದಾಸರವನೆಂದು । ಸೋಜಿಗವ ಮಾಡ್ದ ಪ್ರಾಣೇಶವಿಠಲಾ ॥೨೮॥ ಮಂಗಳಂ ಶಫರ ಕೂರ್ಮ ಕಿಟನೃಹರಿ ವಟುರಾಮ।ಮಂಗಳ ಧರಿಜರಮಣ ಕೃಷ್ಣಬುದ್ಧಾ ॥ ಮಂಗಳಹಯುವಹನ ಅನಂತ ಸುಗುಣಾರ್ಣವಗೆ। ಮಂಗಳಂ ಪ್ರಾಣೇಶವಿಠ್ಠಲನಿಗೇ ॥೨೯॥

॥ ಶ್ರೀಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು ॥

ಈ ಉಪಾಸನಾಧ್ಯಾನ ಸುಳಾದಿ ಪದಗಳಿಗೆ ಆಧಾರವಾದ ಕೆಲ ಪ್ರಮಾಣ ಗ್ರಂಥಗಳು

॥ ಶ್ರೀ ಗುರುರಾಜೋವಿಜಯತೇ ॥

ವಾಮನ ಪುರಾಣೋಕ್ತ ಧ್ಯಾನ ಸ್ನಾನಸ್ತೋತ್ರ ೧

ಯೋಗಿನಾಂ ಸ್ನಾನ ಮಾಖ್ಯಾನಂ ಯೋಗೋವಿಷ್ಣುವಿಚಿಂತನಮ್॥ ಆತ್ಮತೀರ್ಥಮಿಧಿಃಪ್ರೋಕ್ತಂ ಸೇವಿತಂ ಬ್ರಹ್ಮವಾದಿಭಿಃ ॥೧॥ ಅಶೇಷಾಘಹರಂ ಬ್ರಹ್ಮರುದ್ರೇಂದ್ರಾದ್ಯೈರನುಷ್ಠಿತಮ್ ॥ (ಮನಸಾತ್ರಿವೇಣಿ ಸ್ನಾನಂಕರಿಷ್ಯೇ ಇತಿಸಂಕಲ್ಪ್ಯ) (ಖ) ಸ್ವಸ್ಥಿತಂ ಪುಂಡರೀಕಾಕ್ಷಂ ಮಂತ್ರಮೂರ್ತಿಂ ಹರಿಂ ಸ್ಮರೇತ್ ॥ ಅನೇಕಾದಿತ್ಯ ಸಂಕಾಶಂ ವಾಸುದೇವಂ ಚತುರ್ಭುಜಂ ॥ ಶಂಖ ಚಕ್ರಧರಂದೇವಂ ಪೀತಾಂಬರಧರಂ ಹರಿಂ ॥ ಶಾಮಂ ಪ್ರಶಾಂತಹೃದಯಂ ಪ್ರಸನ್ನವದನಂ ಶುಭಮ್ ॥ ದಿವ್ಯಚಂದನಲಿಪ್ತಾಂಗಮ್ ಚಾರುಹಾಸಂ ಶುಭೇಕ್ಷಣಮ್ ॥ ವನಮಾಲಾ ಪರಿವೃತಂ ನಾರದಾದಿಭಿರರ್ಚಿತಮ್ ॥ ಸುವರ್ಣಕಂಕಣೈರ್ಯುಕ್ತಂ ಕಿಂಕಿಣೀಭಿರ್ವಿರಾಜಿತಮ್ ॥ ಕೇಯೂರ ಧಾರಿಣಂ ದೇವಂ ಸ್ಫುರನ್ ಮಕರಕುಂಡಲಮ್ ॥ ಧ್ವಜವಜ್ರಾಂಕುಶಧರಂ

ಪಾದಪದ್ಮಸುನಿರ್ಮಲಮಂ॥ತತ್ಪಾದಪದ್ಮಜಾಗಂಗಾಂ ನಿಪತಂತೀ ಸ್ವಮೂರ್ಧನೀಂ ॥ ಚಿಂತಯೇದ್ಬ್ರಹ್ಮರಂಧ್ರೇಣ ಪ್ರವಿಶಂತಿಸ್ವಕಾಂತನುಂ ॥ ಇಳಾ ಭಾಗೀರಥೀಪ್ರೋಕ್ತಾ ಪಿಂಗಳಾಯಮುನಾಸ್ಮೃತಾ ॥ ತಯೋರ್ಮಧ್ಯಾಗತಾನಾಡೀ ಸುಷುಮ್ನಾಖ್ಯಾ ಸರಸ್ವತೀ ॥ ತಯಾ ಸಂಕ್ಷಾಲ ಯೇದ್ದೇಹಂ ಬಾಹ್ಯಮಂತರ್ಗತಂ ಮಲಮ್ ॥ ತತ್ಕ್ಷಣಾದ್ವಿರಜಾ ಭೂತ್ವಾ ಜಾಯತೇ ಸ್ಫಟಿಕೋಪಮಃ ॥ ಇದಂ ಮಾನಸಿಕಸ್ನಾನಂ ಪ್ರೋಕ್ತಂ ಹರಿಹರಾದಿಭಿಃ ॥ ಇದಂ ಸ್ನಾನಂ ಪರಂ ಮಂತ್ರಂ ಸಹಸ್ರಮಧಿಕಂ ಸ್ಮೃತಂ॥ ಸಾರ್ಧತ್ರಿಕೋಟಿ ತ್ರಿಕೋಟಿತೀರ್ಥೇಷು ಸ್ನಾನಾತ್ಕೋಟಿ ಗುಣಾಧಿಕಂ ॥ ಯೋನಿತ್ಯಮರ್ಚಯೇದ್ದೇವಂ ಸತ್ಯೈನಾರಾಯಣಸ್ಮೃತಾ ॥ ಜ್ಞಾನಹೃದಯೇ ಧ್ಯಾನಸಲಿಲೇ (ಜಲೇ) ರಾಗದ್ವೇಷ ಮಲಾಪಹೇ ॥ ಯಃಸ್ನಾತಿ ಮಾನಸೀ ತೀರ್ಥೇ ಸಯಾತಿ ಪರಮಾಂ ಗತಿಂ ॥

॥ ಇತಿ ವಾಮನಪುರಾಣೇ ಮಾನಸಿಕಸ್ನಾನ ಸ್ತೋತ್ರಂ ಸಂಪೂರ್ಣಂ ॥

॥ ಶ್ರೀಗುರುಮಧ್ವೇಶಾರ್ಪಣಮಸ್ತು ॥

ಅಥ ಪಂಚರಾತ್ರಾಗಮಸ್ಥ ಮಾನಸಪೂಜಾ ಕ್ರಮ ೨

ಹರಿಃ ಓಂ

॥ ಶ್ರೀಗುರು ರಾಘವೇಂದ್ರ ಶ್ರೀಗುರುವರದೇಂದ್ರ ಗುರುಭ್ಯೋನಮಃ ॥

ಅಷ್ಟೈಶ್ವರ್ಯ ಸಮಾಯುಕ್ತಂ ರಮಯಾ ಸಹಿತಂ ಪ್ರಭುಂ ॥ ಶ್ವೇತಾಬ್ಜಸ್ಥಂ ಕರೇಪದ್ಮಂ ಗದಿನಂ ಶಂಖಚಕ್ರಿಣಮ್ ॥೧॥ ಶುದ್ಧ ಸ್ಫಟಿಕ ಸಂಕಾಶಂ ಸರ್ವಾಭರಣ ಭೂಷಿತಂ ॥ ವನಮಾಲಾ ಧರಂ ದೇವಂ ಧ್ಯಾಯೇನ್ನಾರಾಯಣಂ ಹರಿಂ ॥೨॥ ಮಾನಸೈರುಪಚಾರೈಶ್ಚ ಪೂಜಾಂ ಸಮ್ಯಕ್ ಸಮಾಚರೇತ್ ॥ ಬಹಿರ್ಯಾಗ ಪ್ರಸಿದ್ಧ್ಯರ್ಥಂ ಉಚ್ಚರನ್ ಪ್ರಣವಂತಥಾ ॥೩॥ ಓಂಕಾರೇಣ ಸ್ಫುಟೀಕೃತ್ಯ ಹೃದಂಬುಜ ಮಧೋಮುಖಂ ॥ ತಸ್ಮಿನ್ ರತ್ನಾಸನಂ ದಿವ್ಯ ಧ್ಯಾಯೇತ್ಕಲ್ಪತರೋಸ್ಥಳ ॥೪॥ ದೇವಂ ಸುಷುಮ್ನಾ ಮಾರ್ಗೇಣಾನೀಯ ಬ್ರಹ್ಮರಂಧ್ರಕೇ ॥ ವಾಮನಾ ಸಾಪುಟೇಧ್ಯಾತ್ವಾ ನಿರ್ಗತ ಸ್ವಾಂಜಲಿಸ್ಥಿತಂ ॥೫॥ ಸಾನ್ನಿಧ್ಯಂ ಕುರು ದೇವೇಶ ಸರ್ವಸಂಪತ್ಕರೋ ಮಮ ॥ ವಿಭೋಸಕಲ ಲೋಕೇಶ ವಿಷ್ಣೋ ಜಿಷ್ಣೋ ಹರೇಪ್ರಭೋ ॥೬॥

ತ್ವಾಂಭಕ್ತ್ಯಾ ಪೂಜಯಾಮ್ಯದ್ಯ ಭೋಗೈರರ್ಘ್ಯಾದಿಭಿಃಕ್ರಮಾತ್ ॥ ಯಾಗಾವಸಾನ ಪರ್ಯಂತಂ ಅತ್ರಸ್ಥಿತ್ವಾ ಜನಾರ್ದನ ॥೭॥ ಭಕ್ತ್ಯಾಮಮ ಪೂಜಾಂ ಹಿ ಗೃಹೀತ್ವಾ ಪಾಹಿಮಾಂ ಪ್ರಭೋ ॥೮॥ ಪೀತಾಂಬರಂತುಗರುಡಃ ಆಸನಂ ಶೇಷ ಏವಚ ॥ ರುದ್ರಸ್ತು ಕಲಶಂದದ್ಯಾತ್ ಗೋಪೀಚಂದನ ಮನ್ಮಥಃ ॥೯॥ ಇಂದ್ರಸ್ತು ಶಂಖ ಚಕ್ರಾದೀನ್ ಧಾರಣಾಯ ಜಗತ್ಪತೇಃ ॥ ದದತಃಸೂರ್ಯ ಚಂದ್ರೌತು ಆದರ್ಶಂ ತು ರಮಾಪತೇಃ ॥೧೦॥ ಕಸ್ತೂರಿ ತಿಲಕಂ ದದ್ಯಾತ್ ಕಿರೀಟಂ ಮಾರುತಾತ್ಮಜಃ ॥ ಶ್ರೀದೇವೀ ವನಮಾಲಾಂಯಾಂ ವೈಜಂತ್ಯಾಂ ಸದಾಶಿವಃ ॥೧೧॥ ಪಾದುಕೇವೀಂದ್ರ ಮುದ್ದಿಷ್ಟಃಕೌಸ್ತುಭಂತುವಿಧಿಸ್ಮೃತಃ॥ ಚೂಡಾರತ್ನೇಮರುದ್ದೇವಃ ಕುಂಡಲೇಷ ಏವಚ ॥೧೨॥ ಮಲಯಾದ್ವಾಯುರಾನೀಯ ಗಂಧಂ ವಿಷ್ಣೌ ಸಮರ್ಪಯೇತ್ ॥ ತೌನ್ನದಾಮಸುದಾಮಾನೌ ದದತಃ ಪುಷ್ಪಮಾಲಿಕಾಂ ॥೧೩॥ ವೇದಾಭಿಮಾನಿನೋ ದೇವಾಃ ಉಪವೀತಸ್ಯದಾಯಿನಃ ॥ ಬ್ರಹ್ಮಾವೇದೋಕ್ತಕರ್ಮಾಣಿ ಕಾರಯೇಚ್ಚರಮಾಪತೇಃ ॥೧೪॥ ಅಪ್ರಾಕೃತ ಷಡ್ರಸಾನ್ನಂ ಬ್ರಾಹ್ಮೀ ಭಾರತಿರರ್ಪಯೇತ್ ॥ ನೀವೇದಯನ್ ಮಹಾಲಕ್ಷ್ಮೀ ತಾಂಬೂಲಂ ಉದಕಂತಥಾ॥೧೫॥ ವೈಶ್ವಾನರೋಧೂಪದೀಪೌ ಪುಷ್ಪಾಂಜಲಿ ಮುಮಾಪತಿಃ ॥ ವಿಷ್ವಕ್ ಸೇನೋ ಗಣಪತೀ ಸ್ತೋತ್ರಾರಾಧನ ತತ್ಪರೌ ॥೧೬॥ ಛತ್ರಂಚ ಚಾಮರಂಗೀತಂ ವ್ಯಜನಂ ವಾದ್ಯನರ್ತನೇ ॥ ಸನಕಾದ್ಯೈಶ್ಚ ದಿಕ್ಪಾಲೈ ಗಂಧರ್ವ ಋಷಿಚಾರಣೈಃ ॥೧೭॥ ಮರ್ಹಾ ವಿಶ್ವಾಸ ನಿರತೈಃ ಸೇವ್ಯಮಾನಂ ಸದಾ ಹರಿಃ ॥ ಸಾಲಿಗ್ರಾಮೇ ವಿಶೇಷಸ್ತು ಸ್ವಯಂವ್ಯಕ್ತ ಸ್ತಥೈವಚ ॥೧೮॥ ಬಿಂಬಮೂರ್ತ್ಯಾಸಹೈಕ್ಯೇನ ತತ್ರಸ್ಥಂ ಭಾವಯೆದ್ಧರಿಮ್ ॥ ಯದಿ ವಿಸ್ತರತಃ ಪುಂಸಃ ಪೂಜಾಂಕರ್ತುಂ ನಶಕ್ಯತೇ ॥೧೯॥ ಜಲಂ ದಳಂ ತುಲಸ್ಯಾಂ ವಾಽವಶ್ಯಂ ವಿಷ್ಣೌ ಸಮರ್ಪಯೇತ್ ॥ ಪಶ್ಯೇದ್ವಾ ಅನ್ಯಕೃತಾಂ ಪೂಜಾಂಸೋಪಿಸ್ಯಾತ್ ಕೃತಪೂಜನಃ ॥೨೦॥

ಪೂಜಾಕಾಲೇತು ದೇವಸ್ಯ ಇತಿಧ್ಯಾತವ್ಯಮಂಜಸಾ ॥

ಇತಿಪಂಚರಾತ್ರಾಗಮೇ ಚತುರ್ಥಾಧ್ಯಾಯೇ ಕ್ರಿಯಾಪಾದೇ ಮಾನಸಪೂಜಾಂ

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

ಹರಿಃ ಓಂ

॥ ಶ್ರೀಗುರುರಾಜೋವಿಜಯತೇ ॥

ಶ್ರೀವ್ಯಾಸರಾಜಕೃತ ಧ್ಯಾನಪ್ರಕರಣ ೩

॥ ಶ್ರೀ ವೇದವ್ಯಾಸಾಯನಮಃ ॥

ಶ್ರೀದೇವಿಗೆ ಪತಿಯಾದಂಥಾ ಶ್ರೀನಿವಾಸನ ಪಾದಯುಗಳನ್ನು, ತಥಾ ಗುರುಗಳನ್ನು ಗ್ರಂಥಾರಂಭದಲ್ಲಿ ನಮಸ್ಕರಿಸಿ, ಮಾನಸೀಕ ಧ್ಯಾನ ವೆಂಬುಂಥಾ ಸ್ನಾನವನ್ನು ತಥಾ ಜಪಾನುಷ್ಠಾನ ಮಾನಸಪೂಜಾ ನಿಜ ಧ್ಯಾನಚಿಂತನಸ್ಮೃತಿ, ಇತ್ಯಾದಿ ವಿಧಿಗಳನ್ನು ಬುದ್ಧ್ಯಾನುಸಾರವಾಗಿ ಹೇಳು ತ್ತೇವೆ.

ಈ ಮುಂದೆ ಹೇಳುವಂಥ ವಿವರವನ್ನು ತಿಳಿಯಲಿಕ್ಕೆ ಆತ್ಮಸ್ವರೂಪ ಜ್ಞಾನವುಳ್ಳ ಗುರುಗಳಲ್ಲಿ ಶರಣಾಗತನಾಗಿ ಅನುಗ್ರಹ ಪಡಕೊಂಡು, ಅವರಲ್ಲಿ ಪರಮಭಕ್ತಿಯುಳ್ಳವನಾಗಬೇಕು. ಹೇಗೆಂದರೆ, "ತೇನಯತ್ಸ ಫಲಂಪ್ರೋಕ್ತಂ ಅನ್ಯಥಾನಿಷ್ಫಲಂ ಭವೇತ್ ॥ ಶರೀರಂ ವಚನಂ ಜ್ಞಾನಂ ವಾ ಸಕರ್ಮಗುಣಾನುಗುರುವರ್ಯಧಾರಯೇ ॥ ಯದ್ವಸ್ತು ಸಶಿಷ್ಯೋ ನೈತರಸ್ಮೃತಃ ॥ಇತಿಸ್ಕಾಂದೆ॥

ಈ ಪ್ರಕಾರ ತಿಳಿದು ಸಚ್ಛಿಷ್ಯನಾಗಿ, ಏಕಾಂತ ಸ್ಥಳದಲ್ಲಿ ಭೂಶುದ್ಧಿ ಮಂತ್ರದಿಂದ ಉದಕ ಪ್ರೋಕ್ಷಣಮಾಡಿ ಅನಂತರದಲ್ಲಿ, "ಉಪವಿಶ್ಯಾಸನೇ ರಮ್ಯೇ ಕೃಷ್ಣಾಜಿನ ಕುಶೋತ್ತರೇ ॥ ಸಮುಗ್ ಪದ್ಮಾಸನಾನಿನೋಭೂತ್ ಶುದ್ಧಿಂ ಸಮಾಚರೇತ್ " ॥ ಈ ವಿಧಿಯುಕ್ತ ಆಸನದಲ್ಲಿ ಕುಳಿತು, ಆಚ ಮನಮಾಡಿ ಪ್ರಾಣಾಯಾಮನಂತರದಲ್ಲಿ " ಮಮ ಶರೀರಸ್ಯ ಅಂತರ್ಯಾ ಮಿಃಖುಷಿ " ಇತ್ಯಾದಿ ಮಂತ್ರೇಣ ಭೂಶುದ್ಧಿ ಭೂತಶುದ್ಧಿ ಸಮಾಚರೇತ್॥

ಆಚಮ್ಯ ಪ್ರಾಣಾಯಾಮ ಸಂಕಲ್ಪ ಶುಭಾಭ್ಯಾಂ ಶುಭತಿಥೌ, ಶ್ರೀವಿಷ್ಣು ಪ್ರೇರಣಯಾ ಶ್ರೀವಿಷ್ಣು ಪ್ರೀತ್ಯರ್ಥಂ (ಉಪದೇಶ ಗುರು ಜಪಾದಿ) ಗುರೂಪದೇಶಮಂತ್ರ ಯಥಾಶಕ್ತಿಜಪ ಮಹಂಕರಿಷ್ಯೆ ॥ ತರು ವಾಯ ಈ ಜಪಮಾಡಲಿಕ್ಕೆ ಪರಮಶುದ್ಧ ಆಗೋದಕ್ಕೋಸ್ಕರ.

ಮಾನಸಿಕ ಧ್ಯಾನವೆಂಬುವಂಥಾ ಮಾನಸಿಕ ಸ್ನಾನವನ್ನು ಮಾಡಬೇಕು. ಅದು ಹ್ಯಾಗಂದರೆ, ನೇತ್ರಗಳು ಮುಚ್ಚಿ ಏಕಾಗ್ರಚಿತ್ತ ವೃತ್ತಿಯಿಂದ ಭ್ರೂಮಧ್ಯದಲ್ಲಿ ದೃಷ್ಟಿ ಇಟ್ಟು, ಶ್ರೀಲಕ್ಷ್ಮೀಪತಿ ಪಾದಾಸಕ್ತನಾಗಿ, ತನ್ನ ದೇಹದಲ್ಲಿ ಇದ್ದಂಥಾ ಮುಖ್ಯ ಮೂರು ನಾಡಿಗಳು. ಅವು ಯಾವವೆಂದರೆ, ಪಿಂಗಳ, ಇಡಾ, ಸುಷುಮ್ನಾ, ಈ ನಾಡಿಗಳಲ್ಲಿ ಪಿಂಗಳಾ ನಾಡಿಯು ಯಮುನಾಯಂತೆ ಕರಿಸುತ್ತದೆ. ಇಡಾ ನಾಡಿ ಭಾಗೀರಥಿಯಂತೆ ಕರೆಸಿಕೊಳ್ಳುತ್ತದೆ. ಇವೆರಡರ ಮಧ್ಯದಲ್ಲಿ ಸುಷುಮ್ನಾನಾಡಿ ಸರಸ್ವತಿಯಂತೆ ಕರೆಸಿಕೊಳ್ಳುತ್ತದೆ. ಈ ಸುಷುಮ್ನಾನಾಡಿಯಲ್ಲಿ ಇದ್ದಂಥಾ ವಿವರ, ಸಜ್ಜನರು ಚಂದಾಗಿ ತಿಳಿಯತಕ್ಕಂಥಾದ್ದು. ತತ್ಪ್ರಯುಕ್ತ ಮೂರಾವರ್ತಿ ಮೂರುನಾಡಿಗಳು ಹೀಗಿವೆ, ಆ ನಾಡಿಗಳಲ್ಲಿದ್ದಂಥಾ ತೀರ್ಥಗಳು (ನದಿ) ಚಿಂತಿಸಬೇಕು. ಅದು ಹೇಗೆಂದರೆ, ಪಿಂಗಳಾಖ್ಯ ಯಮುನಾಯೈ ನಮಃ। ಇಡಾಖ್ಯ ಭಾಗೀರಥ್ಯೈನಮಃ, ಉಭಯೋರ್ಮಧ್ಯೇ ಸುಷುಮ್ನಾಖ್ಯ ಸರಸ್ವತ್ಯೈನಮಃ, ಹೀಗೆ ಮೂರು ಸಾರೆ ಸ್ಮರಣೆಪೂರ್ವಕ ಧ್ಯಾನ ಸ್ನಾನಮಾಡಿ, ತನ್ನ ದೇಹದಲ್ಲಿದ್ದ ಮೂರುವರಿ ಕೋಟಿ ರೋಮಕೂಪಗಳು ಚಿಂತಿಸಬೇಕು. ಅದು ಹ್ಯಾಗಂದರೆ "ಮದ್ದೇಹೇಸಾರ್ಧ ತ್ರಿಕೋಟಿ ರೋಮಕೂಪಾಃ" ಎಂದು ಚಿಂತನಾಮಾಡಿ ಆ ರೋಮಕೂಪಗಳಲ್ಲಿ ನದಿಗಳನ್ನು ತನ್ನಿಯಾಮಕವಾದಂಥ ತನ್ನಾಮ ಭಗವದ್ರೂಪಗಳು ಚಿಂತಿಸಬೇಕು. "ಓಂ ಓಂ ಇತಿ ಬೀಜಂ ಸ್ವಾರ್ದತ್ರಿಕೋಟಿ ತೀರ್ಥೇಷು ತನ್ನಾಮ ಭಗವದ್ರೂಪೇಭ್ಯೋನಮಃ"

ಅಥ ಹೃತ್ಕಮಲವೆಂಬ ಮಡುವಿನಲ್ಲಿ ವಾಸವಾಗಿ ಪ್ರೇರಕ ರೂಪದಿಂದ ಇದ್ದಂಥ ಶ್ರೀಹರಿಧ್ಯಾನ ಮೂಲಮಂತ್ರದಿಂದ ದ್ವಾದಶಾವರ್ತಿ ಚಿಂತಿಸಬೇಕು. ಹ್ಯಾಗಂದರೆ "ಓಂ ನಮೋ ನಾರಾಯಣಾಯ ಓಂ" ಉತ್ತಮವಾದಂಥ ಧ್ಯಾನವು ಮಾನಸಾಖ್ಯ ತೀರ್ಥಸ್ನಾನವು, ಇಂಥ ಧ್ಯಾನತೀರ್ಥ ಸ್ನಾನದಿಂದ ಪರಮಶುದ್ಧನಾಗಿ ಜಾಗ್ರತದಿಂದ, ಗುರುಗಳು ಹೇಳದಂಥ ಪೂರ್ವೋಕ್ತ ಸಂಕಲ್ಪಾನುಸಾರ ಜಪಗಳನ್ನು ಮಾಡಿ ಉಪದೇಶ ಮಂತ್ರ ನೂರಾಯೆಂಟು ಬಾರೆ ಯಥಾನುಶಕ್ತಿ ಜಪಮಾಡಬೇಕು.

ತರುವಾಯ ಅಚಲವಾದಂಥ ಆಸನದಲ್ಲಿದ್ದು, ಪರಮಾತ್ಮನಲ್ಲಿ ಏಕಾಗ್ರ ಮನಸ್ಕನಾಗಿ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಈ ಪಂಚ ಭೂತಾತ್ಮಕವಾದ ದೇಹಕ್ಕೆ ತ್ವಕು, ಚರ್ಮ, ಮಜ್ಜ, ರುಧಿರ, ಮಾಂಸ, ಮೇಧ ಅಸ್ತಿ ಈ ಸಪ್ತಧಾತುಗಳುಳ್ಳ ದೇಹಕ್ಕೆ ದಶೇಂದ್ರಿಯಗಳು, ಚಕ್ಷು, ಶ್ರೋತ್ರ, ತ್ವಕು, ಜಿಂಹಾ, ಘ್ರಾಣ, ಪಂಚ ಜ್ಞಾನೇಂದ್ರಿಯಗಳು ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಈ ಪಂಚ ಕರ್ಮೇಂದ್ರಿಯಗಳು, ಇವುಗಳ ಮಧ್ಯದಲ್ಲಿ ವ್ಯಾಪ್ತವಾದ ಮನಸ್ಸು ಮುಖ್ಯೇಂದ್ರಿಯವು. ಇಂಥಾ ಮನಸ್ಸು ಸ್ವಾಧೀನ ಮಾಡಿಕೊಂಡು, ತನ್ನ ಸಂಬಂಧಿಯಾದಂಥ ಭಗವದನುಗ್ರಹಕ್ಕೆ ಮುಖ್ಯ ಸಾಧನವಾದಂಥ ಈಶಾಧಿಷ್ಠಾನವನ್ನು ಚಿಂತಿಸಬೇಕು.

ಅದು ಹೇಗಂದರೆ ಪಾಠವಾದನಂತರದಲ್ಲಿ ಏಕಾಗ್ರಚಿತ್ತವುಳ್ಳವನಾಗಿ ನೇತ್ರಗಳು ಮುಚ್ಚಿ ಭೂಮಧ್ಯದಲ್ಲಿ ದೃಷ್ಟಿಬೆಳಿಸಿ, ತನ್ನ ದೇಹದಲ್ಲಿದ್ದಂಥಾ ಭಗದ್ರೂಪಗಳನ್ನೂ, ಹಾಗೇನೆ ದೇವತೆಗಳನ್ನೂ ಚಿಂತಿಸಬೇಕು. "ಹರಿಃ ಓಂ" ಪಂಚಭೂತಾತ್ಮಕ ದೇಹೆ ಸ್ವಸಪ್ತಧಾತೂನಾಂ ಮಧ್ಯೆ, ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ, ಪಂಚ ಕೋಶೇಷು ತನ್ನಾಮ ಭಗವದ್ರೂಪಾನಾಂ ಚಿಂತಯೇತ್, ಓಂ ಅನ್ನಮಯ ಓಂ ಪ್ರಾಣಮಯ, ಓಂ ಮನೋಮಯ, ಓಂ ವಿಜ್ಞಾನಮಯ, ಓಂ ಆನಂದಮಯ, ಓಂ ಅನಿರುದ್ಧಾಯ, ಓಂ ಪ್ರದ್ಯುಮ್ನಾಯ, ಓಂ ಸಂಕರುಷಣಾಯ, ಓಂ ವಾಸುದೇವಾಯ, ಓಂ ನಾರಾಯಣಾಯ, ಓಂ ಚಕ್ಷುರ್ಮಯಾಯ, ಓಂ ಶ್ರೋತ್ರಮಯಾಯ, ಓಂ ವಾಙ್ಮಯಾಯ, ತಕ್ ಪ್ರಸ್ತಾವಾಚ್ಯ ಅನಿರುದ್ಧಾಯ, ಓಂ ಲಾವಣ್ಯಪ್ರದ ರಾಮಾಯ, **ಚರ್ಮಾಯ** ಉದ್ಗೀಥಾಖ್ಯ ಪ್ರದ್ಯುಮ್ನಾಯ ಮಹಾವ್ರಣ ನಿವಾರಣ ಲಕ್ಷ್ಮಿಪತಯೇ, **ಮಾಂಸೆ** ಓಂ ಪ್ರತಿಹಾರಾಖ್ಯ ಸಂಕರುಷಣಾಯ, ಓಂ ವರಹರೂಪಿವಿಷ್ಣವೇ ನಮಃ **ರುಧಿರೇ** ಓಂ ಉಪದ್ರವಾಖ್ಯ ವಾಸುದೇವಾಯ, ಓಂ ಬಲಪ್ರದ ಶಾಂತ ಸಂವಿದೇನಮಃ, **ಮೇದಿಸಿ** ಓಂ ನಿಧನಾಖ್ಯ ನಾರಾಯಣಾಯ, ಐಶ್ವರ್ಯಾದಿಗುಣಪ್ರದ ಷಡ್ಗುಣಾಖ್ಯ ವಿಷ್ಣವೇನಮಃ **ಮಜ್ಜಾಯಾಂ** ಓಂ ವಷಟ್ಕಾರಾಖ್ಯಸಾರಾತ್ಮಾಯ ತತ್ರಷಟ್ ತ್ರಿಂಶತ (೩೬೦) ಭಗವದ್ರೂಪೇಭ್ಯೋನಮಃ ॥ **ರೇತಸಿ** ಮುಖ್ಯಪ್ರಾಣಾಯ ಓಂ ನಾರಾಯಣಾಯ,

ಅಸ್ಥಿತು, ಓಂ ಆದಿಶಬ್ಧವಾಚ್ಯ ಹಂಸಾಯ, ಓಂ ಷಟ್‌ತ್ರಿಂಶತ್ (೩೬೦) ದೇವತಾಭ್ಯೋನಮಃ ॥

ಮತ್ ಶರೀರೆ ನವಕೋಟಿ ದೇವತಾಭ್ಯೋನಮಃ । ಮುಖ್ಯ ಚತು ರ್ವಿಂಶತಿ ತತ್ವ ತತ್ವಾಭಿಮಾನಿ ನಿಯಾಮಕ ಕೇಶವಾದಿ ೨೪ ನಾಮಗಳನ್ನು ಸ್ಮರಣಮಾಡಿ, ತ್ವಗಭಿಮಾನಿ ಅಹಂಕಾರಿಕಪ್ರಾಣೇ ಓಂ ಅನಿರುದ್ಧಾಯ ಅಜಾಖ್ಯಾಯನಮಃ ಶಿರಸಿ ಓಂ ಆನಂದಾಯ ಮುಖೇಶೋತ್ರಾಭಿಮಾನಿ ದಿಗ್ದೇವತಾಭ್ಯೋ ಓಂ ಚಂದ್ರಾದಿಭ್ಯೋನಮಃ ಚಂದ್ರೆ ಬೃಹತ್ ಪಾಂಡು ವಾಸ ಓಂ ಸೋಮರಾಜಾಯಾ ಓಂ ಧನ್ವಂತರಯೇಹಯಗ್ರೀವಾಯ ನಮಃ ಓಂ ಚಿಂತಾಮಣಿನೇ ಓಂ ಅಜಾದಿಭ್ಯೋ ಹಂಸವಾಮನಾದಿಭ್ಯೋ ಉಭಯಕರಣೇ ಓಂ ಉಗ್ರಾಯ ಊರ್ಚಾಯ ಓಂ ದಿಂ ಓಂ ನಿಯಾ ಮಕ ದಿಂ ಓಂ ವ್ಯಾಪ್ತಹಯಗ್ರೀವಾಯ ಓಂ ವಿದಿಂಙ್ಣನಿಯಾಮಕ ವಿದಿಂಙ್ಣವ್ಯಾಪ್ತ ಪ್ರದ್ಯುಮ್ನಾಯ ಉಭಯನೇತ್ರೇ ಓಂ ಇಂದ್ರಾಯ ಈಶಾಯ ಚಕ್ಷುರ್ದ್ವಯಾಭಿಮಾನಿ ಓಂ ಸೂರ್ಯಾಯ ತನ್ನಿಯಾಮಕ ಓಂ ಅತ್ರಿಸ್ವಭಾಯ ಓಂ ನಾರಾಯಣಾಯ ಓಂ ಮೂರ್ಧ್ನರಾಜಾಯ ವಾಜಿನೆ ವಸುದೇವಾಯ ಓಂ ಅಜಾದಿಭ್ಯೋನಮಃ ಓಂ ಕಪಿಲಾಯ ಪುನ್ನಾಮಾದಿರೂಪನಿಯಾಮಕ ರೂಪೇಭ್ಯೋ ದಕ್ಷಿಣನೇತ್ರೇ ಓಂ ಸ್ತಂಭ ರೂಪವಿಷ್ಣುವೇ ರಜ್ಜುರೂಪಿರಮಾಯ್ಯೆ ತದ್ಬಂಧಂ ಓಂ ಗೋವತ್ಸರೂಪ ವಾಯುವೇ ಉಭಯನೇತ್ರಯೋ ರಕ್ತರಾಜ ಗೌತಮಾಖ್ಯರುದ್ರಾಯ ಶ್ವೇತರಾಜ ಓಂ ವಶಿಷ್ಠಾಖ್ಯ ಇಂದ್ರಾಯ ಕೃಷ್ಣತಾರೇ ಓಂ ಜಮದಗ್ನಾ ಖ್ಯವನ್ಹೋ ಅಗ್ರೇ ಕನೀನಿಕಾ ವಿಶ್ವಾಮಿತ್ರಾಖ್ಯ ಆದಿತ್ಯಾಯ ಉಧಕೇ ಭಾರದ್ವಾಜಾಖ್ಯ ವರುಣಾಯ ಅಥರೇಕಶ್ಯ ಪಾಖ್ಯಪೃಥವೀ ಊರ್ಧ್ವೇ ಅತ್ರಿನಾಮಕದ್ಯುನಾಮ್ನೇ ಭಾರತೀ ದಕ್ಷಣನೇತ್ರೇ ಓಂ ವಿಶ್ವಾಖ್ಯ ಅನಿರು ದ್ಧಾಯ ಕಂಠೇ ತೈಜಸನಾಮಾಖ್ಯ ಪ್ರದ್ಯುಮ್ನಾಯ ಹೃತ್ಪದ್ಮಕರಣಿಕಾಗ್ರೇ ಓಂ ಪ್ರಾಜ್ಞೇ ಅಗ್ರೇಶಾಖ್ಯ ಸಂಕರುಷಣಾಯ ಓಂ ಭೂತಿನೇನಮಃ

ಶಿರೋರ್ಧ್ವಭಾಗೇ ತುರ್ಯಾಖ್ಯವಾಸುದೇವಾಯ ಬ್ರಹ್ಮರಂಧ್ರಸ್ಥ ಬ್ರಹ್ಮನಾಡೀಮಧ್ಯೇ ಓಂ ಶ್ರೀನಾರಾಯಣಾಯ ಸೂರ್ಯಮಂಡಲಮಧ್ಯಸ್ಥ

ವಾಸ ದೇವಾಖ್ಯ ವಿಷ್ಣುವೇನಮಃ ಓಂ ನೇತ್ರಾಂತಸ್ಥ ವಾಮಿ-ಭಾಮಿನೇನಮಃ

ನಾಸಾಭಿಮಾನಿಸ್ವರ್ಗವೈದ್ಯ ಅಶ್ವಿನೀದೇವೇಭ್ಯೋನಮಃ ತನ್ನಿಯಾಮಕ ಸರ್ವ ವ್ಯಾಧಿನಿವಾರಕ ಧನ್ವಂತರಿನಾಮಕ ಪರಮಾತ್ಮನೇನಮಃ ನಾಸಿಕಾಪುಟಯೋಃ ಓಂ ಋತುಂಭರಾಯ ಓಂ ಋಘಾಯನಮಃ ಓಂ ಹೃದಯಾಮ ನಾಸಿಕಾಗ್ರೆ ಓಂ ಸ್ವರ್ಲೋಕಾಭಿಮಾನಿ ದೇವತಾಯೈ ತನ್ನಿಯಾಮಕ ಆದಿತ್ಯಾಂತರ್ಗತ ಓಂ ವಿಷ್ಣುನಾಮಾಖ್ಯರಾಮಾಯ ಓಂ ಹಿರಣ್ಮಯಾಯ ಊರ್ಧ್ವಶ್ವಾಸೇ ಓಂ ಭಾರತೀ ಅಧೋಶ್ವಾಸೇ ಓಂ ಮುಖ್ಯಪ್ರಾಣಾಯನಮಃ ದಕ್ಷಣಶ್ವಾಸೇ ಓಂ ಸೂರ್ಯಾಯ ವಾಮಶ್ವಾಸೇ ಓಂ ಚಂದ್ರಾಯ ಸರ್ವಶ್ವಾಸೇ ಓಂ ಹಂಸಾಯ ಧಕ್ಷಣಗಂಡಸ್ಥಳೇ ಓಂ ಈಶಾಯ ವಾಮಗಂಡಸ್ಥಳೇ ಓಂ ಐರ್ಭಾಯ ಊರ್ಧ್ವೋಷ್ಠೇ ಓಂ ಏಕಾತ್ಮನೇ ಅಧರೋಷ್ಠ್ರೇ ಓಂ ಐರಸಾಯ ಊರ್ಧ್ವದಂತಪಂಙ್ತ ಓಂ ಓಜಭೃತೇ ಅಧೋದಂತಪಂಕ್ತಾ ಓಂ ಔರಸಾಯ.

ಜಿಂಹ್ವಾಭಿಮಾನಿ ವರುಣಾಯ ತನ್ನಿಯಾಮಕ ಓಂ ಮಚ್ಛಾಯ ವಾಗೇಂದ್ರಿಯಾಭಿಮಾನಿವಹ್ನೇ ತನ್ನಿಯಾಮಕ ಓಂ ವಿಷಾಸಹನೇ ನಾರಾಯಣರೂಪಿಣೇ ಮೂರ್ಧ್ನಿ ಓಂ ಅನಂತಾಯ ವಾಚಿ ಓಂ ಅರ್ಥಗರ್ಭಾಯ ವಾಕ್ಯಾಭಿಮಾನಿ ಸರಸ್ವತ್ತೈ ತನ್ನಿಯಾಮಕ ಓಂ ವಾಗೀಶ್ವರಾಯ ಓಂ ಪವಿನಿ ಓಂ ಕುಲಿನಿ ಓಂ ಹಯಗ್ರೀನಾತ್ಮಕ ಸ್ತ್ರೀರೂಪಿಣಿ.

ಉಭಯ ಹಸ್ತಾಭಿಮಾನಿ ಓಂ ದಕ್ಷಪ್ರಜೇಶ್ವರಾಯ ದಕ್ಷಿಣಹಸ್ತೇ ಓಂ ಮಧುಸೂದನಾಯ ಹಸ್ತಸಂಧಿಷು ಓಂ ಕಪಿಲಾಯ ಖಪತೇ ಗರುಡಾಸನಾಯ ಓಂ. ಘರ್ಮಾಯ ಓಂ ಜಂಸಾರಾಯ ವಾಮಹಸ್ತೇ ಓಂ ಓಂಶ್ರೀಧರಾಯ ಹಸ್ತಸಂಧಿಷು ಓಂ ಚಾವಾಂಗಾಯ ಓಂ ಛಂದೋಗವ್ಯಾಯ ಓಂ ಜನಾರ್ದನಾಯ ಓಂ ಝಾಟಕಾರಾಯ ಓಂ ಞಮಾಯ.

ಓಂ ಫ್ರೀಂ ಮನವೇ ದಕ್ಷಣಪಾರ್ಶ್ವೇ ಓಂ ಪರಾಯ ವಾಮಪಾರ್ಶ್ವೇ ಓಂ ಫಲಿಸೇ ಹೃದಯೇ ಓಂ ಯಜ್ಞಾಯ ಕಟಿಪೃಷ್ಠೇ ಓಂ ಬಲಿನೇ ಓಂ ಅನಿರುದ್ಧಾಯ ಗುಹ್ಯೇ ಸ್ವಾಯಂಭು ಮನವೇ ತದಧಿಮಾನಿ ತನ್ನಿಯಾ

ಮಕ ಓಂ ಭಗಣವಾಚ್ಯ ಭಗವತೇ ಓಂ ಪ್ರಜಾಪತೇ ರೇತಸ್ಸ್ಥಾಭಿಮಾನಿ ಓಂ ಸೂರ್ಯಾಯ ತನ್ನಿಯಾಮಕ ಆದಿತ್ಯಾಖ್ಯಭಗವತೇ ಪುಮಾತ್ಮ ರೇತಸೇ ಪುರುಷಾಖ್ಯಭಗವತೇ ಪಾಯುಸ್ಥ ಮಿತ್ರನಾಮಕ ಸೂರ್ಯಾಯ ಅಪಾನ ನಾಮಾಖ್ಯವಾಯವೇ ತನ್ನಿಯಾಮಕ ಓಂ ಪ್ರದ್ಯುಮ್ನಾಖ್ಯ ಭಗವತೇ.

ದಕ್ಷಿಣ ಪಾದ ಪಂಚಸಂಧಿಷು ಓಂ ಟಂಕಿನೆ ಓಂ ಠಳಕಾಯ ಓಂ ಡರಕಾಯ ಓಂ ಢರಿಣೇ ಓಂ ಣಾತ್ಮನೇ **ವಾನುಪಾದ ಪಂಚಸಂಧಿಷು** ಓಂ ತಾರಾಯ ಓಂ ಥಪತೇ ಓಂ ದಂಡಿನೇ ಓಂ ಧನ್ವಿನೇ ಓಂ ನಮ್ಯಾಯ **ಉಭಯಪಾದಾಭಿಮಾನಿಜಯಂತಾಯ** ತನ್ನಿಯಾಮಕಯಜ್ಞ ನಾರಾಯಣಾಯ **ದಕ್ಷಿಣ ಪಾದಾಂಗುಷ್ಠಾಧಿಷ್ಠಾನ** ಓಂ ವಾಯವೇ ತತ್ರ ತೀರ್ಥರೂಪ ಶ್ರೀನಾರಾಯಣಾಯ ತ್ವಚಿ ಅಹಂಪ್ರಾಣೆ ಶ್ರೋತ್ರೆ ಮನಸಿ ನೇತ್ರಯೋಃ ಹೃದಿಸ್ಥಾನೇ ಓಂ ಆಕಾಶಾಖ್ಯರಮಾಯೈತಥಾ ಭಗವದ್ರೂಪ ಓಂ ಪ್ರಾಜ್ಞಾಯ ಓಂ ಪ್ರಿಯಾಮ ಓಂ ಸತ್ಯಾಯ ಓಂ ಅನಂತಾಯ ಓಂ ನಂದಾಯ ಓಂ ಸ್ಥಿತಿನೇ ಹೃದಯಾಕಾಶವ್ಯಾಪ್ತ ಪುರುಷಾಖ್ಯ ಅನಿರುದ್ಧಾಯ ತಾಲುದೇಶೆ ಪ್ರದ್ಯುಮ್ನಾಯ ಓಂ ಇಂದ್ರಯೋನಿನೆ ಶಿರಸ್ಯಾಂತ ಭಾಗ ಕೇಶಮೂಲೇ ಓಂ ಬೀಜನಾಮಾಖ್ಯ ಸಂಕರುಷಣಾಯ ಶಿರಸಿ ಕಪೋಲೋರ್ಧ್ವಭಾಗೇ ಓಂ ವ್ಯಾಪಕ (ವೀತ) ನಾಮಾಖ್ಯವಾಸುದೇವಾಯ ಹೃದಯಾಂತರಸ್ಥಾನೇ ಓಂ ನಾರಾಯಣನಾಮಾಖ್ಯವಿಷ್ಣು ವಾಮನಾಯ ಹೃತ್ಪದ್ಮೇ ಓಂ ವೇದಪ್ರತಿಪಾದ್ಯ ಗಾಯತ್ರೀನಾಮಕ ಭಗದ್ರೂಪಾಯ ಗಾಯತ್ರಿನಾಮಕ ಸಪ್ರಾಣಾಯ ಓಂ ಪಂಚಪ್ರಾಣಾತ್ಮಕ ಯಜ್ಞನಾಮಾತ್ಮಕ ವಾಯವೇ.

ದೇಹಾಖ್ಯರಥಾಶ್ರಯ ಓಂ ಮುಖ್ಯ ಪ್ರಾಣಾಂತರ್ಗತ ಜ್ಞಾನಾನಂದಾತ್ಮಕ ಓಂ ಯಜ್ಞ ಶಬ್ದವಾಚ್ಯಾಯ **ಅಥಕೆವಚವತ್** ಪಾದಾದಿ ಶಿರಪರಿಯಂತ ಓಂ ನಾರಾಯಣಾಯ ಓಂ ವಾಸುದೇವಾಯ ಓಂ ಸಂಕರುಷಣಾಯ ಓಂ ಪ್ರದ್ಯುಮ್ನಾಯ ಓಂ ಅನಿರುದ್ಧಾಯ, ಆ ಮೌಳಿಪಾದ ಪರ್ಯಂತ ಓಂ ನಾರಾಯಣಾಯ ಓಂ ವಾಸುದೇವಾಯ ಓಂ ಸಂಕರುಷಣಾಯ ಓಂ ಪ್ರದ್ಯುಮ್ನಾಯ ಓಂ ಅನಿರುದ್ಧಾಯ.

ಈ ಪ್ರಕಾರ ನಿರಂತರದಲ್ಲಿ ಇತರ ವಿಷಯಾದಿಗಳಬಿಟ್ಟು, ಈಶಾಧಿಷ್ಠಾನವನ್ನು ಏಕಾಂತಸ್ಥಳದಲ್ಲಿ ಏಕಾಗ್ರಚಿತ್ತವೃತ್ತಿಉಳ್ಳವನಾಗಿ ಚಿಂತಿಸುತ್ತಿರಲು, ಬಹುಜನ್ಮಪೂರ್ವದಲ್ಲಿ ಕ್ರಮಾನುಸಾಧನವಾಗಿ ಬಂದಂಥಾ ಪರಿಪೂರ್ಣಪಕ್ವವಾದ ಪ್ರಾರಬ್ಧಭೋಗಗಳುಳ್ಳಂಥಾ, ಸತ್ವಜೀವರುಗಳಿಗೆ ಸಹಸ್ರ ದಿವಸದಮೇಲೆ ಹೃತ್ಪದ್ಮಕರ್ಣಿಕೆಯಲ್ಲಿ ಇದ್ದಂಥಾ, ಬಿಂಬನಾಮಕ ಕರುಣಾರ್ಣವ ಪರಮಾತ್ಮನು, ಎತ್ಕಿಂಚಿತು ಮಿಂಚಿನೋಪಾದಿಯಲಿ ಅಥವಾ ದೀಪತೇಜೋಪಾದಿಯಲಿ ಸ್ವಯಂತೇಜ ತೋರಿ ತೋರಿ ಅಡಗಿಸುತಿಪ್ಪನು. ಪೂರ್ವೋಕ್ತ ಜೀವರುಗಳಾದವರಿಗೆ ಸಹಸ್ರ ದಿವಸದಮೇಲೆ ಬಹುದಿವಸವಾದರೂ ತೋರದಿರಲು ನಿಶ್ಚಯಾತ್ಮಕನಾಗಿ, ದಶಾಧಿಕ ಅನುಷ್ಠಾನ ಮಾಡಬೇಕು. ಅಂದರೇನು ? ಹತ್ತುಸಹಸ್ರ ದಿವಸ ಮಾಡಬೇಕು. ಮಾಡಿದರೆ, ರಜೋಗುಣಮಿಶ್ರರಿಗಾದ (ಮುಕ್ತಿಯೋಗ್ಯರಿಗೆ) ರೂ ಸಿದ್ಧಿಯಾಗುವದು. ಇದರಂತೆ ಬಹು ಋಷಿಗಳಿಂದ ಮಾಡಲ್ಪಟ್ಟಂಥಾದ್ದು ತಮೋಗುಣದವರಿಗೆ ಅಸಾಧ್ಯವು.

ಈ ಪ್ರಕಾರ ಘನವಾಗಿ ಬಿಂಬದರ್ಶನ (ವಾಸನಾಮಯ) ತೋರಿಅಡಗುವಂಥ ಚಿನ್ಹ ತಿಳಿದು ಜ್ಞಾನಿಯಾದಂಥವನು, ಈಶಾಧಿಷ್ಠಾನಚಿಂತನ ಮುಗಿದ ಮೇಲೆ **ಗುರುಗಳಿಂದ ವಿಧಿಪೂರ್ವಕವಾಗಿ ತಿಳಿಸಿಕೊಂಡು** ತ್ರಿವಿಧ ಪ್ರಾಣಾಯಾಮದಿಂದ ವಾಯುನಿರೋಧ ಮಾಡಬೇಕು. ಅದರಲ್ಲಿ ಬಿಂಬದರ್ಶನ ಸ್ಪಷ್ಟಕಾಣಿಸುತಿಹ್ಯನು.

ಪ್ರಾಣಾಯಾಮ ಕ್ರಮ ಹೇಗಂದರೆ :– " ಪ್ರಾಣಾಯಾಮಕ್ರಮ ಮಾಹ ಬೃಹಸ್ಪತಿಃ । ರೇಚಕೋನ್ಯಜೇವಾಯುಂ ಪೂರಕಸ್ಥನಿರೋಧಕಾಃ । ನಮೇನ ಸಂಸಿದ್ಧತೋಯೋನೌ ಕುಂಭಕಸ್ಸಮುದೀರ್ಯತೇ ॥"

ಅತ್ರಕುಂಭಕೇ ವಿಷ್ಣುರ್ದೇವತಾ। ಇತರಯೋಸ್ತು ಬ್ರಹ್ಮರುದ್ರದೇವತೇ ಪ್ರಾಣಾಯಾಮ ತ್ರಿಧಾಪ್ರೋಕ್ತಾ ಪೂರಕೋ ರೇಚಕಸ್ತಥಾ । ಕುಂಭಕೋರೇಚಕಸ್ತತ್ರ ನಾಸಾರಂಧ್ರ ದಕ್ಷಣಾತ್ । ನಿರೋಧ ವಾಮರಂಧ್ರೇವಾ ಯುನಿಕಾ ವಿಸರ್ಜನಂ । ನಿರುದ್ಧ ದಕ್ಷಿಣರಂಧ್ರೇ ವಾಮರಂಧ್ರೇ ಪ್ರಪೂರಣಂ । ತಥಾ ವಾಯುರಂಗುಲ್ಯಾನಿ ಪೂರಕಂತು ತದುಚ್ಯತೇ ॥"

" ರೇಚಕಾತ್ಪೂರಕಾತ್ಪಶ್ಚಾತ್‌ದ್ವೇಪುಟೇನಾಸಯೋಸ್ಥಿತಃ । ಸನ್ನಿರುದ್ಧ್ಯ ಹೃದಿಸ್ಥಾಪ್ಯವಾಯುಃಸ್ಥಿಷ್ಟೇಸಕುಂಭಕಃ ॥ ಅಗರ್ಭಶ್ಚ ಪ್ರಾಣಾಯಾಮೋದ್ವಿಧಾಪುನಃ । ಅಗರ್ಭಃ ಧ್ಯಾನಹೀನಸ್ತು ಸನರ್ಭಧ್ಯಾನ ಸಂಯುತಃ ॥ ಅಗರ್ಭರಿಕ್ತೋದಿತಃ ಪ್ರಾಣಾಯಾಮ ಸಗರ್ಭಕಃ ॥" ಪ್ರಾಣಾಯಾಮದ್ವಿಧಾ ವಾಯುಪುರಾಣೇ.

ಇಷ್ಟುಕ್ರಮ ಬಹುಪ್ರಕಾರ ತಿಳಿದುಕೊಂಡು ಅನಂತರ ಕುಂಭಕದಲ್ಲಿ ಬಿಂಬಮೂರ್ತಿಧ್ಯಾನ ಜಪಾಮಾಡಬೇಕು.

" ತಸ್ಮಿನ್‌ಮೃದುಲಕ್ಷಣ ತರಬಾಲಾರ್ಕ ಸಹಸ್ರದ್ಯುತಿಂ । ಅಷ್ಟೈಶ್ವರ್ಯದಳಂ ಪದ್ಮಂ ಮಂತ್ರಾಕ್ಷರ(ಣ)ಮಯಂನ್ಯಸೇತ್ ॥ ತಸ್ಮಿನ್‌ದೇವ್ಯಾಸಹಾಸೀನಂ ಕೋಟಿಶೀತಾಂಶು ಸನ್ನಿಭಂ ॥ ಪದ್ಮಪತ್ರ ವಿಶಾಲಾಕ್ಷಂ ಸರ್ವಲಕ್ಷಣ ಲಕ್ಷಿತಂ । ಶ್ರೀವತ್ಸಕೌಸ್ತುಭೋರಸ್ಕಪೀತವಸ್ತ್ರಧರಂಹರಿಂ । ವಿಚಿತ್ರಾಭರಣೈರ್ಯುಕ್ತಂ ದಿವ್ಯಮಂಡಲ ಮಂಡಿತಮ್ । ದಿವ್ಯಚಂದನ ಲಿಪ್ತಾಂಗಂ ದಿವ್ಯಪುಷ್ಪ ಸುಶೋಭಿತಮ್ ॥ ತುಳಸೀ ಕೋಮಲದಳಂ । ವನಮಾಲಾ ವಿಭೂಷಿತಂ । ಬಾಲಾರ್ಕಕೋಟಿಸದೃಶಂ । ಶಾಂತಾದೇವ್ಯಾ ಶ್ರಿಯಾ ಸಹ । ಸರ್ವಲಕ್ಷಣ ಲಕ್ಷಣ್ಯಾಸಮಾಶ್ಲಿಷ್ಟತನುಂಶಿವಂ ॥ ಸನ್ಮುಖೋಭವ ವರದೋಭವ ॥"

ಈ ಪ್ರಕಾರ ಜಪ. ಇದರಂತೆ ಇಂಥ ಒಂದೊಂದು ಜಪವನ್ನು ಶಕ್ತ್ಯಾನುಸಾರವಾಗಿ ಕ್ಷಣ ಕ್ಷಣ, ಮಾಸಕ್ಕೆ ಅಧಿಕ ಮಾಡುವದು. ಶತಾವರ್ತಿನಿ ಅಥವಾ ತದರ್ಧವಾದರೂ ನಿರಾಯಾಸದಿಂದ ಆ ಶ್ರೀಹರಿಯ ಅನುಗ್ರಹವಾಯಿತು ಅಂದರೆ, ಆ ಮೇಲೆ ದಿವಸ ಮುಹೂರ್ತನೋಡಿ ಒಂದೇ ಆವರ್ತಿ ಜಪವಾದ ಮೇಲೆ, ಶ್ರೀಹರಿಗುರುಗಳಿಗೆ ನಮಸ್ಕರಿಸಿ, ಆ ಕುಂಭಕಾನಂದದಲ್ಲೇನೆ ನಾಶಿಕಾಗ್ರ ದೃಷ್ಟಿಬೆಳಿಸಿ, ಹೃದಯಾಖ್ಯ ಪಟ್ಟಣದ್ವಾರದಲ್ಲಿ ಶೋಭಿಸುವಂಥ ದ್ವಾರಪಾಲಕಾದಿ ಧ್ಯಾನಮಾಡುವಂಥಾ ಪ್ರಕರ್ಣ.

ಓಂ ಪೂರ್ವಭಾಗತ್ರಯದ್ವಾರೇಷು ೧ ಪ್ರಥಮ ಸನ್ನಿಧದ್ವಾರೆ ಓಂ ಶ್ರೀಭೂಮ್ಯೈನಮಃ ೨ ದ್ವಿತಿಯದ್ವಾರೆ ಪ್ರಾಣಾಖ್ಯಸೂರ್ಯಾಯ, ದ್ಯುನಾಮ್ನೇಭಾರತೀ. ೩ ತೃತೀಯದ್ವಾರೆ ಜಯವಿಜಯಾಯ. ೨ ದಕ್ಷಣ ಭಾಗತ್ರಯದ್ವಾರೆಷು, ೧ ಪ್ರಥಮ ಸನ್ನಿಧದ್ವಾರೆ ಓಂ ಶ್ರಿಭೂಮ್ಯೈನಮಃ

೨ ದ್ವಿತಿಯದ್ವಾರೆ ಓಂ ಪ್ರಾಣವ್ಯಾನನಾಮಕ ಚಂದ್ರಾಯ ದಿಂಜ್ಞನಾಮಕ ಭಾರತ್ಯೈನಮಃ ೩ ತೃತಿಯದ್ವಾರೆ ಬಲಪ್ರಬಲಾಯನಮಃ ೩ ಪಶ್ಚಿಮ ಭಾಗತ್ರಯದ್ವಾರೇಷು, ೧ ಪ್ರಥಮದ್ವಾರೆ ಶ್ರೀರಮಾ ಭೂಮ್ಯೈನಮಃ ೨ ದ್ವಿತಿಯೇ ಅಪಾನ ಅಗ್ನಿನಾಮಕವಾಯು ಪೃಥ್ವಿನಾಮ್ನೀಭಾರತ್ರೈ ನಮಃ ೩ ತೃತಿಯದ್ವಾರೆ ಕುಮುದ ಕುಮುದಾಕ್ಷಾಯನಮಃ ೪ ಉತ್ತ ರಭಾಗತ್ರಯದ್ವಾರೇಷು, ೧ ಪ್ರಥಮ ಸನ್ನಿಧದ್ವಾರೆ ಶ್ರೀರಮಾಶ್ರಿಯೆ ಭೂಮ್ಯೈನಮಃ ೨ ದ್ವಿತಿಯದ್ವಾರೆ ಸಮಾನ ಇಂದ್ರನಾಮಕವಾಯು, ವಿದ್ಯುನ್ನಾಮ್ನಿ ಭಾರತ್ಯೈನಮಃ ೩ ತೃತಿಯದ್ವಾರೆ ನಂದಸುನಂದಾಯ ನಮಃ ೫ ಊರ್ಧ್ವೇಕದ್ವಾರೆ ಶ್ರೀರಮಾಯೈ ಉದಾನನಾಮಕವಾಯು, ವಾಂಙ್ಮನಾಮ್ನೀ ಭಾರತ್ಯೈನಮಃ.

ಅಥಸ್ಥೂಲಶರೀರ ಹೃತ್ಕಮಲ ಮಂದಿರೆ ಮೌಕ್ತಿಕಾದಿ ನಾನಾರತ್ನ ಪ್ರಕಾಶಲಕ್ಷಣ, ಲಕ್ಷ್ಮ್ಯಾಸಮಾಶ್ಲಿಷ್ಟ ತನುಂ, ಶಿವಂ; ಸನ್ಮುಖೋಭವ ಪ್ರಸನ್ನೋಭವ, ವರದೋಭವ.

ಈ ಪ್ರಕಾರ ಜಪ. ಇಂಥಾ ಒಂದೊಂದು ಜಪವನ್ನು ಶಕ್ತ್ಯಾನುಸಾರ ಕ್ಷಣಕ್ಷಣಕ್ಕೆ ಮಾಸಕ್ಕೆ ಅಧಿಕ ಮಾಡೋದು. ಶತಾವರ್ತಿ ಅಥವಾ ತದ ರ್ಧವಾದರೂ ನಿರಾಯಾಸದಿಂದ ಶ್ರೀಹರಿ ಅನುಗ್ರಹವಾಯಿತು ಅಂದರೆ, ಆ ಮೇಲೆ ದಿವಸ ಮುಹೂರ್ತ ನೋಡಿ ಒಂದೇ ಆವರ್ತಿ ಜಪವಾದಮೇಲೆ, ಶ್ರೀಹರಿಗುರುಗಳಿಗೆ ನಮಸ್ಕರಿಸಿ, ಆ ಕುಂಭಕಾನಂದದಲ್ಲೇನೆ ನಾಶಿಕಾಗ್ರ ದೃಷ್ಟಿ ಬೆಳಸಿ ಹೃದಯಾಖ್ಯವಿರಾಜಿತ ಹೇಮಾತ್ಮಕ (ಶತಸ್ತಂಭಯುಕ್ತ) ಹೇಮಮಂಟಪಚಿಂತನೆ ಮಾಡಬೇಕು.

ಹೃತ್ಕಮಲ ಕರ್ಣಿಕಾಂತೆ ತ್ರಿಕೋಣಾಗ್ನಿಮಂಡಲೇ ಶೇಷಪರ್ಯಂಕ ಚಿಂತಯೇತ್ ॥ ತತ್ಪರ್ಯಂಕರಮಾತ್ಮಕತಲ್ಪಂ ಚಿಂತಯೇತ್, ರತ್ನ ಮಯ ಉಪಬರ್ಹಣ ಚಿಂತಯೇತ್ ತಸ್ಮಿನ್‌ದಿವಸೇ ರತ್ನಾದ್ಯಶೋಭಿತ ಆಸನೇ ಬಿಂಬಮೂರ್ತಿ ನಾರಾಯಣಸ್ಯ ನಾನಾ ರತ್ನಮಯಂಪೀಠ, ತೇನಾ ಮುಪರಿ ಚಿಂತಯೇತ್.

ಅಥ ಜ್ಞಾನವೆಂಬುವಂಥ ಸೂರ್ಯ ಉದಯದಿಂದ ಅಷ್ಟಪತ್ರಕಮಲ ವಿಕಸಿತ ಮಾಡಬೇಕು. “ ವಿಕಾಸಂ ತಸ್ಯಕುರ್ವೀತ್ ವಿಜ್ಞಾನರವಿಣಾ

ಹೃದಿ ವಿತತ್ಕರ್ಣಿಕಾಯಾಂ ವನ್ಹ್ಯರ್ಕ ಶಶಿಬಿಂಬಾಸನ ಕ್ರಮಾತ್ತ್ರಯಂ ತ್ರಯೀಮಯೀಸ್ಥಾನಂ ಚಿಂತಯೇದ್ವೈಷ್ಣವೋತ್ತಮಃ ಇತಿ ಸ್ಕಾಂದೇ ".

ಸುಷುಮ್ನಾ ನಾಡಿಮಧ್ಯೆ ಹೃತ್ಪದ್ಮ ಕರ್ಣಿಕಾಲಯಪತ್ರೇ ಓಂ ಶ್ರೀದೇವ್ಯೈನಮಃ ನಾಳೇಭೂದೇವ್ಯೈನಮಃ ಮೂಲೇ ದುರ್ಗಾಯ್ಯೈನಮಃ । ಕಮಲಾಷ್ಟ ಪತ್ರೇಷು ಶಕ್ತ್ಯಾದಿದ್ವಾದಶಮೂರ್ತಿ ಚಿಂತಯೇತ್ । ಹೃತ್ಪದ್ಮ ಪೂರ್ವದಿಗ್ದಳೇ ಓಂ ಶಕ್ತ್ಯಾತ್ಮನೇ ಓಂ ಪ್ರತಿಷ್ಠಾತ್ಮನೇ ಅಗ್ನಿ । ದಿಗ್ದಳೇ ಸಂವಿದಾತ್ಮನೇ ದಕ್ಷಿಣದಿಗ್ದಳೇ ಓಂ ಸ್ಫೂರ್ತ್ಯಾತ್ಮನೇ ಓಂ ಪ್ರವರ್ತಾತ್ಮನೇ ನೈರುತ್ಯ । ದಿಗ್ದಳೇ ಓಂ ಕಾಂತಾತ್ಮನೇ ಪಶ್ಚಿಮದಿಗ್ದಳೇ ಓಂ ವಿದ್ಯಾತ್ಮನೇ ಓಂ ಮತ್ಯಾತ್ಮನೇ ವಾಯುದಿಗ್ದಳೇ ಓಂ ನೀತಾತ್ಮನೇ ಉತ್ತರದಿಗ್ದಳೇ ಓಂ ಮಾಯಾತ್ಮನೇ ಓಂ ಕಾಲಾತ್ಮನೇ ಈಶಾನ್ಯದಿಗ್ದಳೇ ಓಂ ಪುರುಷಾತ್ಮನೇ.

ಹೃತ್ಪದ್ಮ ಕರ್ಣಿಕಾಗ್ರೇಶ ಜೀವಾಂಗುಷ್ಠಪ್ರಮಾಣ ಓಂ ಪ್ರಾಜ್ಞನಾಮಾಖ್ಯ ಅಗ್ರೇಶಾಯ ಹೃತ್ಪದ್ಮ ಮಧ್ಯೆ ಪ್ರಾದೇಶಪ್ರಮಾಣ ಪುರುಷನಾಮ ಪ್ರಾದೇಶಾಯ ಹೃತ್ಪದ್ಮಮೂಲೇ ಅಂಗುಷ್ಠಪ್ರಮಾಣ ಓಂ ವಿಜ್ಞಾನ ನಾಮಾಖ್ಯ ಮೂಲೇಶಾಯ ತಸ್ಯ ಪಾದಾಶ್ರಯ ಮುಖ್ಯಪ್ರಾಣಾಯ ತಸ್ಮಿನ್ ಶುಚಿಷತ್ನಾಮಾಖ್ಯ ವಿಷ್ಣವೇ ಓಂ ಲಾಳೂಕಾಯ ಓಂ ಪ್ರಾಣಾಯ ಓಂ ಅಪರಾಜಿತಾಯ ಓಂ ಶೇಷಕಾಯ ಓಂ ಇಂದ್ರಾಯ ವೈಕುಂಠಾಯ.

ಅಷ್ಟಪತ್ರಶ್ವೇತವರ್ಣಜೀವ ಹೃತ್ಪದ್ಮಕರ್ಣಿಕಾವಿಷ್ಟ ಆತ್ಮನಾಮಕ ಓಂ ಶ್ರೀನಾರಾಯಣಾಯ ಜೀವಹೃನ್ಮಂಡಲಸ್ಥ ಜೀವನಾಮಕ ನೃಸಿಂಹಾಯ ಜೀವಾಂತಸ್ಥ ಶರೀರವ್ಯಾಪ್ತ ಶಬಲವರಣ ಶ್ರೀಅನಿರುದ್ಧಾಯ ಓಂ ಅಹಂಕಾರಾತ್ಮನೇ ಜೀವನಾಂತರಾತ್ಮಕ ಓಂ ವಿಷ್ಣುವೇ.

ಅಥತಸ್ಮಿನ್ನಾಸನಸ್ಥ ಬಿಂಬಮೂರ್ತಿಧ್ಯಾನಂ

ಶ್ರೀಹರಿಯ ದಿವ್ಯಪಾದಕಮಲಗಳು ರಮಾಬ್ರಹ್ಮಾದಿಗಳಿಂದ ಸೇವಿತನಾದಂಥ, ಯೋಗಿಗಳಿಂದ ಧ್ಯಾನಮಾಡಲ್ಪಟ್ಟ ಅಂಘ್ರಿಪಂಕಜಗಳಲ್ಲಿ, ಹೇಮ ಹಂಸಕಮಂಜೀರ ಕಿಂಕಿಣಿಗಳುಳ್ಳ ದಿವ್ಯ ಪೀತಾಂಬರ ಧರಿಸಿದ,

ಸುವರ್ಣ ವರ್ಣದಿಂದ ಪೊಪ್ಪುವಂಥ, ವಧ್ಯಾಣದಿಂದ ಪ್ರಕಾಶಮಾನವಾದ ಕಟಿತಟೋದರವುಳ್ಳ, ಮುಕ್ತಾರತ್ನಪ್ರವಳಾ ಭರಣವರಣಗ್ರೈವ ವಕ್ಷಸ್ಥಳ ವುಳ್ಳ, ಶ್ರೀವತ್ಸಕೌಸ್ತುಭಗಳಿಂದ ಪೊಪ್ಪುವಂಥ ಉರುಸ್ಥಳವುಳ್ಳ ಹೇಮಕಂಕ ಣಕೇಯೂರ, ಮುದ್ರಿಕಾ, ಬಾಹುಭಾವಿತನಾದ ಶಂಖಚಕ್ರಗದಾಪದ್ಮಧಾರಿ ಯಾದ ಮಂದಸ್ಮಿತದಿಂದ ಮುಖಪಂಕಜವುಳ್ಳಂಥ ಕಮಲೋಪಾದಿ ವಿಸ್ತೃತ ವಾದ ನೇತ್ರಗಳುಳ್ಳ, ಕರಣಗಳಲ್ಲಿ ಮಹಾಪ್ರಕಾಶಮಾನವಾದ ಮಕರಕುಂಡ ಲುಗಳುಳ್ಳ, ನಾನಾಭೂಷಣಗಳಿಂದ ಭೂಷಿತವಾದ, ನೀಲವಾದ ಕೂದಲ್ಲ ಗಳಿಂದಪೊಪ್ಪುವಂಥ, ಸುವರ್ಣಾತ್ಮಕ ಅಮೌಲಿಕ ರತ್ನಗಳಿಂದಯುಕ್ತ ವಾದ ಮುಕುಟವುಳ್ಳಂಥ, ಅನಂತಾನಂತ ಕ್ರಿಯಾತ್ಮಕನಾದ ಅಘಟಾಘಟ ಕನಾದ ಅತ್ಯದ್ಭುತ ಆಶ್ಚರ್ಯೋಪೇತನಾದ, ಅದ್ವಿತೀಯನಾದ ಅಂತರ್ಬಹಿ ರ್ವ್ಯಾಪ್ತನಾದ, ಅವ್ಯಾಹತ ಐಶ್ವರ್ಯಗುಣಸಂಪನ್ನನಾದ, ಆದಿಮಧ್ಯಾಂತ ರಹಿತನಾದ, ಉದಿತವಾದಂಥ ಸೂರ್ಯರುಗಳ ಪ್ರಕಾಶಮಾನದಿಂದ ಕ್ರೀಡಾ ದಿಗುಣವಿಶಿಷ್ಟವಾದ ಗುಣಗಳಿಂದ ಪೂರ್ಣನಾದ, ಪರಬ್ರಹ್ಮನಾಮಕನಾದ, ಮಹಾರಾಜಾಧಿರಾಜನಾದ, ಪುರಾಣಪುರುಷನಾದ ಮಹಾಮಹಿಮೋಪೇತ ನಾದ, ಸನಾತನನಾದ ಸಮಾಭ್ಯಧಿಕ ರಹಿತನಾದ ಸಚ್ಚಿದಾನಂದಮೂರ್ತಿ ಶ್ರೀಹರಯೇನಮಃ ॥

ಎಂತೆಂದು ಶ್ರೀಹರಿ ತಾನೇನುಡಿದು ನುಡಿಸಿದಂಥ ಪ್ರಾಕೃತ ಭಾಷಣ ದಿಂದ ಆಪಾದಮೌಳಿಪರಿಯಂತ ಏಕಾಗ್ರಚಿತ್ತದಿಂದ ಗೌಪ್ಯದಲ್ಲಿ ಚಿಂತಿ ಸುತ್ತಿರಲು, ವಾಯುಯಿಲ್ಲದ ದೀಪದೋಪಾದಿಯಲ್ಲಿ ಅನಂತರೂಪದಲ್ಲಿ ಒಂದುರೂಪ ನಿಲ್ಲುತಿಹದು. ಮನಸ್ಸು ಚಂಚಲವಾದರೆ ಅದೃಶ್ಯನಾಗು ವನು. ಮತ್ತೆ ನಾಶಿಕಾದೃಷ್ಟಿ ಬೆಳಸಿ ಮುಂಭಾಗದಲ್ಲಿ ಒಳಿತಾಗಿ ಪ್ರತಿಮಾ ನೋಡಿ, ನೇತ್ರಮುಚ್ಚಿ ಅಲ್ಲಿ ಅದೇರೂಪ ಅಲ್ಲಿ ತನ್ನ ಉಪಾಸನಾಮೂರ್ತಿ ಧ್ಯಾನಿಸಿ, ಇತರ ವಿಷಯಾದಿಗಳಿಂದ ಮನದಲ್ಲಿ ರಹಿತನಾಗಿ ಪರಮಬುದ್ಧಿ ಯುಳ್ಳವನಾಗಿ, ಸಮಾಧಿರೂಢನಾಗಲು ಜ್ಞಾನಿಯಾದಂಥವನು ಅಖಂಡ ಧ್ಯಾನಯೋಗದಿಂದ, ಅಪ್ರಾಕೃತವಾದಂಥಾ ವಿಷ್ಣುರೂಪಾತ್ಮಕವಾದಂಥಾ ಗ್ರಹದಲ್ಲಿ ಆವಾಹನಾದಿ ಷೋಡಶೋಪಚಾರಗಳಿಂದ ನಿರ್ದುಷ್ಟವಾದ ಮನ ಸ್ಸಿನಿಂದ ಅಲೌಕಿಕವಾದಂಥ ಮಹಾರಾಜೋಪಚಾರಗಳಿಂದ ಹೃತ್ಪದ್ಮ

ಕರುಣಿಕಾಧಿಷ್ಠಿತನಾದ ಜಗದೀಶಗೆ ತನ್ನ ಭಕ್ತಿಯಿಂದಲೇ ಅನನ್ಯ ಮನಸ್ಕನಾಗಿ ಬಾಹ್ಯಾರ್ಚನೆಯೋಪಾದಿಯಲಿ ಅರ್ಚಿಸಲಿಕ್ಕೆ ಅಲ್ಲಿ ಚಿಂತನ ಮಾಡಿದಹಾಗೆ, ಆ ಪ್ರಾಕೃತ ಪದಾರ್ಥಗಳಿಂದ ಪೂಜಾಕೊಂಬುವನು.

"ನಮೋನಮೋಽಶೇಷದೋಷದೂರ ಪೂರ್ಣಗುಣಾತ್ಮನೇ ॥ ವಿರಿಂಚಶರ್ವಪೂರ್ವೇಡ್ಯ ವಂದ್ಯಾಯ ಶ್ರೀವರಾಯತೇ ॥ ಇತಿ ಅಣುಭಾಷ್ಯೆ ಕಾಯೇನವಾಚಾ ಮನಸೇಂದ್ರಿಯೇರ್ವಾ ಬುದ್ಧ್ಯಾತ್ಮನಾವಾ ಪ್ರಕೃತಿಸ್ವಭಾವಾತ್ಕರೋಮಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ ॥ ಶ್ರೀಲಕ್ಷ್ಮೀವೆಂಕಟೇಶವಿಠ್ಠಲಾಯ ನಮೋನಮಃ ॥"

ತರುವಾಯ ಪುನಃ ತತ್‌ಸ್ಥಾನಗಳಲ್ಲಿ ತಧಾನಾಡಿಗಳಲ್ಲಿದ್ದಂಥಾ ಭಗದ್ರೂಪಗಳನ್ನು, ಈಶಾಧಿಷ್ಠಾನವನ್ನು ಚಿಂತಿಸಬೇಕು ಪೂರ್ವೋಕ್ತಪ್ರಕಾರ ಯಾವ ಪುರುಷನು ಅಪ್ರಮತ್ತನಾಗಿ ನಿರಂತರದಲ್ಲಿ ಮಾನಸಪೂಜಾನಂತರ ಕಾಯಿಕವಾಚಿಕಗಳಿಂದ ಯಥಾಮತಿಯುಳ್ಳವನಾಗಿ, ಸಂಚಾರವೇ ಪ್ರದಕ್ಷಣವು, ವಾಕ್ಯವೃತ್ತಿಯೇ ಪರಮಾತ್ಮನ ಸ್ತೋತ್ರರೂಪವಾದಂಥಾದ್ದು, ಅಹರ್ನಿಶಿಯಲ್ಲಿ ಮಾಡುವಂಥ ಸಮಸ್ತ ಸತ್ಕಾರ್ಯಗಳು ಪರಮಾತ್ಮನ ಸೇವಾರೂಪವಾದಂಥವು. ಶಯನವೇ ಪರಮಾತ್ಮನಿಗೆ ನಮಸ್ಕಾರವು ಎಂದು ಬಿಂಬರೂಪನಾದ ಪರಮಾತ್ಮನಲ್ಲಿ ಸಮರ್ಪಣ ಮಾಡುತ್ತಾನೋ, ಆ ಪುರುಷ ಜೀವನ್ಮುಕ್ತನಾದ ಕಾರಣ ಅವನೇ ಪುರುಷಾಯೆಂತ ಕರೆಸಿಕೊಳ್ಳುತ್ತಾನೆ. ಏತಾದಿ ವಿಷಯದಲ್ಲಿ ಸಂದೇಹವಿಲ್ಲವು. ಜ್ಞಾನಪೂರ್ವಕವಾಗಿ ವಿಧಿಯುಕ್ತವಾಗಿ ಅನುಷ್ಠಾನ ಮಾಡೋಣದರಿಂದ ಶಾಶ್ವತವಾದ ಮುಕ್ತಿಯೆಂದು ಹೇಳುವದು ಶ್ರೀಕೃಷ್ಣಾರ್ಪಣಮಸ್ತು.

ಮಾನಸೀಕ ಪೂಜಾನಂತರದಲ್ಲಿ ಕುಂಭಕ ಇಳಿಸಿ, ಶ್ರೀಲಕ್ಷ್ಮೀಪತಿ ಪಾದಕಮಲಾಸಕ್ತದಿಂದ ಧ್ಯಾನಸ್ಥನಾಗಿ ಮೂಲಾಧಾರದಲ್ಲಿ ಅಧೋದೃಷ್ಟಿ ಬೆಳಸಿಕೊಂಡು ಕೆಲವು ದಿವಸ ಸಾಧನಮಾಡುತ್ತಾ ಇರಲಿಕ್ಕೆ ಇವನ ಜ್ಞಾನ ಭಕ್ತಿ ವೈರಾಗ್ಯದಿಂದ ಪಕ್ವವಾದಂಥ, ಪ್ರಾರಬ್ಧ ವ್ಯಕ್ತವಾಗಿ ಬಹುದಿವಸದ ಮೇಲೆ ಶ್ರೀನಾರಾಯಣನು ದಿವ್ಯತೇಜಸ್ಸು ಕೊಡುವನು. ಆ ದಿವ್ಯ ತೇಜದಿಂದ ಅವಲೋಕನ ಮಾಡತಿರಲಿಕ್ಕೆ ಸುಷುಮ್ನಾನಾಡಿಯಲ್ಲಿದ್ದಂಥ ಕಮಲಗಳು ತೋರುತಿಹವು. ಅಲ್ಲಿ ಮಾಡುವಂಥಾ ಧ್ಯಾನಪ್ರಕರಣವು—

ಶ್ರೀಗುರುಭ್ಯೋನಮಃ ॥ ಹರಿಂ ಓಂ ॥ ಸುಷುಮ್ನಾನಾಡ್ಯಾದಿ ದಕ್ಷಣ ಪಾರ್ಶ್ವಸಂಧಿ ಷಟ್‌ತ್ರಿಂಶತ ಸಹಸ್ರ (೩೬೦೦೦) ನಾಡ್ಯೇಷು ಷಟ್‌ತ್ರಿಂಶತ್ ಸಹಸ್ರ ಪುರುಷರೂಪೇಭ್ಯೋನಮಃ ॥ ಸುಷುಮ್ನಾ ವಾಮಪಾರ್ಶ್ವೇ ಷಟ್ ತ್ರಿಂಶತ್ ಸಹಸ್ರ ನಾಡ್ಯೇಷು ಷಟ್‌ತ್ರಿಂಶತ ಸಹಸ್ರ (೩೬೦೦೦) ಸ್ತ್ರೀರೂಪಿ ಪರಮಾತ್ಮನೇಭ್ಯೋನಮಃ ತತ್‌ನಾಡ್ಯೇಷು ಪ್ರವಿಷ್ಟ ಓಂ ಚಂದ್ರಾಯ ಓಂ ವೈರಾಟನೆ.

೧ ಸುಷುಮ್ನಾ ಪೂರ್ವಭಾಗೇ ಪ್ರಕಾಶಿನೀ ನಾಡಿಮಧ್ಯೆ ಶ್ವೇತ ವರ್ಣ ಓಂ ವಾಸುದೇವಾಯ
೨ ಸುಷುಮ್ನಾ ದಕ್ಷಣಭಾಗೇ ವೈದ್ಯುತೀ ನಾಡೀಮಧ್ಯೆ ಪಿಂಗಳ ವರ್ಣ ಓಂ ಸಂಕರುಷಣಾಯ
೩ ಸುಷುಮ್ನಾ ಪೃಷ್ಠಭಾಗೆ ವಜ್ರಿಕಾ ನಾಡೀಮಧ್ಯೆ ಹರಿದ್ವರ್ಣ ಓಂ ಪ್ರದ್ಯುಮ್ನಾಯ
೪ ಸುಷುಮ್ನಾ ವಾಮಬಾಗೇ ಆರ್ಯ ನಾಡೀಮಧ್ಯೆ ನೀಲವರ್ಣ ಓಂ ಅನಿರುದ್ಧಾಯ
೫ ಸುಷುಮ್ನಾ ಮಧ್ಯಭಾಗೇ ಬ್ರಹ್ಮನಾಡೀಮಧ್ಯೆ ರಕ್ತವರ್ಣ ಓಂ ನಾರಾಯಣಾಯ

೧ ಸುಷುಮ್ನಾ ಮೂಲ ಚತುರ್ದಳಕಮಲ ಪೂರ್ವಭಾಗ ದಳ ದ್ವಯ ಶ್ವೇತವರ್ಣ ಪದ್ಮೆ ಓಂ ಪ್ರದ್ಯುಮ್ನಾಯ
೨ ಸುಷುಮ್ನಾ ಮೂಲದ ಚತುರ್ದಳಕಮಲ ದಕ್ಷಣಭಾಗೇ ದಳ ದ್ವಯೆ ಶ್ವೇತವರ್ಣ ಪದ್ಮೆ ಓಂ ಪ್ರದ್ಯುಮ್ನಾಯ
೩ ಸುಷುಮ್ನಾ ಮೂಲ ಚತುರ್ದಳಕಮಲ ಪಶ್ಚಿಮಭಾಗೇ ದಳ ದ್ವಯು ಶ್ವೇತವರ್ಣ ಪದ್ಮೆ ಓಂ ಸಂಕರುಷಣಾಯ
೪ ಸುಷುಮ್ನಾ ಮೂಲ ಚತುರ್ದಳಕಮಲ ಉತ್ತರಭಾಗೇ ದಳ ದ್ವಯ ಶ್ವೇತವರ್ಣ ಪದ್ಮೆ ಓಂ ವಾಸುದೇವಾಯ
೫ ಸುಷುಮ್ನಾ ಮೂಲ ಚತುರ್ದಳಕಮಲ ಮಧ್ಯಭಾಗೇ ದಳ ದ್ವಯ ಶ್ವೇತವರ್ಣ ಪದ್ಮೇ ಓಂ ನಾರಾಯಣಾಯ

೧ ಓಂ ನಾಭಿಪ್ರದೇಶೇಷು ಸುಷುಮ್ನಾ ಪೂರ್ವಭಾಗೆ ಷಡ್ದಳ ರಕ್ತವರ್ಣ ಪದ್ಮೆ ಓಂ ಅನಿರುದ್ಧಾಯ

೨ ಓಂ ನಾಭಿಪ್ರದೇಶೇಷು ಸುಷುಮ್ನಾ ದಕ್ಷಿಣಭಾಗೇ ಷಡ್ದಳ ರಕ್ತವರ್ಣ ಪದ್ಮೆ ಓಂ ಪ್ರದ್ಯುಮ್ನಾಯ

೩ ಓಂ ನಾಭಿಪ್ರದೇಶೇಷು ಸುಷುಮ್ನಾ ಪಶ್ಚಿಮಭಾಗೇ ಷಟ್ದಳ ರಕ್ತವರ್ಣ ಪದ್ಮೆ ಓಂ ಸಂಕರುಷಣಾಯ

೪ ಓಂ ನಾಭಿಪ್ರದೇಶೇಷು ಸುಷುಮ್ನಾ ಉತ್ತರಭಾಗೇ ಷಡ್ದಳ ರಕ್ತವರ್ಣ ಪದ್ಮೆ ಓಂ ವಾಸುದೇವಾಯ

೫ ಓಂ ನಾಭಿಪ್ರದೇಶೇಷು ಸುಷುಮ್ನಾ ಮಧ್ಯಭಾಗೇ ಷಡ್ದಳ ರಕ್ತವರ್ಣ ಪದ್ಮೆ ಓಂ ನಾರಾಯಣಾಯ

೧ ಸುಷುಮ್ನಾ ಮಧ್ಯಪ್ರದೇಶ ಹೃದಯಸ್ಥಾನ ಪೂರ್ವಭಾಗೇ ಅಷ್ಟದಳ ಪದ್ಮೆ ಓಂ ಅನಿರುದ್ಧಾಯ

೨ ಸುಷುಮ್ನಾ ಮಧ್ಯಪ್ರದೇಶ ಹೃದಸ್ಥಾನ ಅಷ್ಟದಳ ಪದ್ಮೆ ದಕ್ಷಿಣಭಾಗೇ ಓಂ ಪ್ರದ್ಯುಮ್ನಾಯ

೩ ಸುಷುಮ್ನಾ ಮಧ್ಯಪ್ರದೇಶ ಹೃದಯಸ್ಥಾನ ಪಶ್ಚಿಮಭಾಗೇ ಅಷ್ಟದಳ ಪದ್ಮೆ ಓಂ ಸಂಕರುಷಣಾಯ

೪ ಸುಷುಮ್ನಾ ಮಧ್ಯಪ್ರದೇಶ ಹೃದಯಸ್ಥಾನ ಅಷ್ಟದಳ ಪದ್ಮೆ ಉತ್ತರಭಾಗೇ ಓಂ ವಾಸುದೇವಾಯ

೫ ಸುಷುಮ್ನಾ ಮಧ್ಯಪ್ರದೇಶ ಹೃದಯಸ್ಥಾನ ಮಧ್ಯಭಾಗೇ ಅಷ್ಟದಳ ಪದ್ಮೆ ಮಧ್ಯೇ ಬಿಂಬಮೂರ್ತೇ ಓಂ ನಾರಾಯಣಾಯನಮಃ

ಹೃದಯೋರ್ಧ್ವದೇಶೇಷು ಉರುಸ್ಥಳೇ ಸುಷುಮ್ನಾ ಮಧ್ಯಭಾಗೆ ದ್ವಾದಶದಳ ರಕ್ತವರ್ಣ ಪದ್ಮೇ ಓಂ ಅನಿರುದ್ಧಾದಿ ಪಂಚರೂಪಾತ್ಮಕ ವಿಷ್ಣವೇನಮಃ

ಕಂಠಸ್ಥ ತಾಲುಸ್ಥಾನೇ ದ್ವಿದಳ ಮೌಕ್ತಿಕವರ್ಣ ಪದ್ಮೆ ಸುಷುಮ್ನಾ ಗತ ಪೂರ್ವಾಪಂಚಪದ್ಮೇ ಓಂ ಅನಿರುದ್ಧಾದಿ ಪಂಚರೂಪಾತ್ಮನೇನಮಃ

ಸುಷುಮ್ನಾ ಭ್ರೂಮಧ್ಯ ಪೂರ್ವಭಾಗ ಚತುರ್ದಳ ಶ್ವೇತವರ್ಣ ಪದ್ಮೆ ಓಂ ಅನಿರುದ್ಧಾಯ

ಸುಷುಮ್ನಾ ಭ್ರೂಮಧ್ಯ ಪ್ರಾದೇಶ ದಕ್ಷಿಣಭಾಗೇ ಚತುರದಳ ಶ್ವೇತ ವರ್ಣಪದ್ಮೆ ಓಂ ಪ್ರದ್ಯುಮ್ನಾಯ

ಸುಷುಮ್ನಾ ಭ್ರೂಮಧ್ಯ ಪ್ರದೇಶೆ ಪಶ್ಚಿಮಭಾಗೇ ಚತುರದಳ ಶ್ವೇತ ವರ್ಣಪದ್ಮೆ ಓಂ ಸಂಕರುಷಣಾಯ

ಸುಷುಮ್ನಾ ಭ್ರೂಮಧ್ಯ ಪ್ರದೇಶೆ ಉತ್ತರಭಾಗೇ ಚತುರದಳ ಶ್ವೇತ ವರ್ಣಪದ್ಮೆ ಓಂ ವಾಸುದೇವಾಯ

ಸುಷುಮ್ನಾ ಭ್ರೂಮಧ್ಯ ಪ್ರದೇಶೆ ಮಧ್ಯಭಾಗೇ ಚತುರದಳ ಶ್ವೇತ ವರ್ಣಪದ್ಮೆ ಓಂ ನಾರಾಯಣಾಯ

ಶಿರಸ್ಯಾಂತದೇಶೇಷು ಸುಷುಮ್ನಾ ಪೂರ್ವಭಾಗೇ ದ್ವಾದಶದಳ ಶ್ವೇತ ವರ್ಣಪದ್ಮೆ ಓಂ ಅನಿರುದ್ಧಾಯ, ಶಿರಶ್ಯಾಂತದೇಶೇಷು ಸುಷುಮ್ನಾ ದಕ್ಷಣ ಭಾಗೇ ದ್ವಾದಶದಳ ಶ್ವೇತವರ್ಣ ಪದ್ಮೆ ಓಂ ಪ್ರದ್ಯುಮ್ನಾಯ, ಶಿರಶ್ಯಾಂತ ದೇಶೇಷು ಸುಷುಮ್ನಾ ಪಶ್ಚಿಮಭಾಗೇ ದ್ವಾದಶದಳ ಶ್ವೇತವರಣ ಪದ್ಮೆ ಓಂ ಸಂಕರುಷಣಾಯ, ಶಿರಸ್ಯಾಂತದೇಶ ಸುಷುಮ್ನಾ ಉತ್ತರಭಾಗೇ ದ್ವಾದಶದಳ ಶ್ವೇತವರ್ಣಪದ್ಮೆ ಓಂ ವಾಸುದೇವಾಯ, ಶಿರಶ್ಯಾಂತದೇಶ ಸುಷುಮ್ನಾ ಮಧ್ಯಭಾಗೇ ದ್ವಾದಶದಳ ಶ್ವೇತವರ್ಣಪದ್ಮೆ ಓಂ ನಾರಾಯಣಾಯನಮಃ

ಶಿರಸ್ಯಾಂತ್ಯೋರ್ಧಭಾಗೇ ದ್ವಾದಶಾಂಗುಲಾಂತೇ ಷಕ್ರೋಪಮ, ಶ್ವೇತವರ್ಣ ದ್ವಾದಶದಳ ಏಕ ಪದ್ಮೆ ತುರ್ಯನಾಮಾಖ್ಯ ಅಶೇಷಕರ್ಮ ಸಾಕ್ಷಿಣೇ ಮೋಕ್ಷಪ್ರದ ವಾಸುದೇವಾಯನಮೋನಮಃ

ಈ ಪ್ರಕಾರ ಚಿಂತನಮಾಡಿ ಮಹಾಸುಖಬಡಬೇಕು. ಇಂಥಾ ಅನುಷ್ಠಾನ ಮುಗಿದ ಮೇಲೆ ಮಧ್ಯಮಾಂಗುಷ್ಠದಿಂದ ನೇತ್ರಗಳಿಗೆ ಉದಕವನ್ನು ಸ್ಪರ್ಶಮಾಡಿ, ಪುನಃ ಆಚಮನಮಾಡಿಕೊಂಡು ಆಸನ ಕೆಳಭಾಗದಲ್ಲಿ ಉದಕ ಪ್ರೋಕ್ಷಣಮಾಡಿ ವಿಧಿವತ್ ಬಾಹ್ಯಾರ್ಚನೆ ಮಾಡಬೇಕು.

ದೇಹದಲ್ಲಿ ಪಿಂಗಳಾ ಇಡಾ ಸುಷುಮ್ನಾ ಎಂದು ಮೂರು ನಾಡಿಗಳು. ದಕ್ಷಣಭಾಗದವು ಪಿಂಗಳಾನಾಡಿ, ಉತ್ತರಭಾಗದವು ಇಡಾನಾಡಿ, ಮಧ್ಯ

ಭಾಗದಲ್ಲಿ ಇರುವದು ಸುಷುಮ್ನಾ ಎಂತ ವೇದಪಾರಂಗತರಾದ ಜ್ಞಾನಿಗಳಿಂದ ಕರೆಸಿಕೊಳ್ಳುತ್ತವೆ. ೫೦೦ ಪಿಂಗಳಾಂಶಗಳು ದಕ್ಷಿಣಾಯನ ನಾಡಿಗಳೆಂದು ಕರೆಸಿಕೊಳ್ಳುತ್ತವೆ ಅನ್ಯವಾದ ಇಡಾಂಶ ೫೦೦ ನಾಡಿಗಳು ಉತ್ತರಾಯಣ ನಾಡಿಗಳೆಂದು, ಸುಷುಮ್ನಾ ಬ್ರಹ್ಮಯಾನವೆಂದು ಕರೆಸಿಕೊಳ್ಳುತ್ತವೆ. ಹೀಗೆ ತಿಳಿದು ಧ್ಯಾನಮಾಡಿದರೆ ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ. ಪೂರ್ವೋಕ್ತ ಮಾನಸಾ ಧ್ಯಾನದಲ್ಲಿ ಇಂದ್ರಿಯಗಳು ಇತರ ವಿಷಯದಲ್ಲಿ ಪ್ರವರ್ತಿಸಿ ಮನಸ್ಸು ಚಂಚಲವಾಗಿ ತೋರಿ ಧ್ಯಾನಂಗತವಾದ, ಮೂರ್ತಿ ಅದೃಶ್ಯವಾಗುತ್ತಿರಲು ಮುಂದೆ ಹೇಳುವ ಪ್ರಕಾರ ತಿಳಿದು ಆಚರಿಸಬೇಕು.

ಪ್ರಾಣಾಯಾಮಕ್ರಮದಿಂದ ತನ್ನ ಶಕ್ತಿ ಇದ್ದಷ್ಟು ಕುಂಭಕದಲ್ಲಿ ವಾಯು ನಿರೋಧಮಾಡಿ ನಾಸಾಗ್ರದೃಷ್ಟಿ ಬೆಳಸಿ, ಹೃದಯದಲ್ಲಿ ಹರಿಮೂರ್ತಿ ನಿಲ್ಲಿಸಿ ಚಿತ್ತೈಕಾಗ್ರದಿಂದ ವಿಷ್ಣುವಿನ ಧ್ಯಾನಮಾಡಬೇಕು.

ಸಾಮಾನ್ಯವಾಗಿ ಇಂದ್ರಿಯಗಳು ಸ್ವಭಾವತಾ ವಿಷಯದಲ್ಲೇ ಪ್ರವರ್ತಿಸುತ್ತವೆ. ಕಾರಣ ಪ್ರಯತ್ನದಿಂದ ಮನಸ್ಸು ವಿಷಯಾದಿಗಳಿಂದ ನಿಗ್ರಹಿಸಿ ಪುನಃ ಧ್ಯೇಯವಸ್ತುವಿನಲ್ಲಿಡಬೇಕು. ಇದಕ್ಕೆ ಪ್ರತ್ಯಾಹಾರವೆಂದೆನ್ನುತ್ತಾರೆ.

ಶ್ರೀವಿಷ್ಣುವಿನ ಅನಂತರೂಪಗಳು ಇದರಲ್ಲಿ ಇಷ್ಟವಾದ ಒಂದು ರೂಪವನ್ನು ಗುರುಗಳು ಪೇಳಿದಂತೆ ಧ್ಯಾನಮಾಡಲು ಶ್ರೀಹರಿಯು ಪ್ರೀತನಾಗುತ್ತಾನೆ. ಪುನಃ ಚಿತ್ತಚಂಚಲವಾಗಲು ಬಿಡದೇ ಧಾರಣಯೋಗದಿಂದ ಧ್ಯಾನಮಾಡುವದು, ಷೋಡಶೋಪಚಾರ ಪೂಜಾ ಪುಷ್ಪಾ ಸುದಕ್ಷಣಾದಿಗಳಿಂದ ಮನೋಮಯ ವಸ್ತುಗಳಿಂದ ಹರಿಗೆ ಅರ್ಪಿಸಬೇಕು

ಪುನಃ ಇಂತಹ ಧಾರಣದಿಂದಲೂ ಮನಸ್ಸು ಚಂಚಲವಾದರೆ, ಏಕಾಗ್ರಚಿತ್ತದಿಂದ ನಾಸಾಗ್ರದೃಷ್ಟಿ ಬೆಳಸಿ, ಎದುರಿಗಿದ್ದ ಪ್ರತಿಮಾ ಚೆನ್ನಾಗಿ ನೋಡಿ, ಧಾರಣ ಧ್ಯಾನಬೆಳಸುವದು. ಸಾವಧಾನವಾಗಿ ಮೊದಲಿಗೆ ಶ್ರೀಹರಿಯ ಒಂದೊಂದು ಅಂಗವನ್ನು ಧ್ಯಾನಗೈಯ್ಯುತ್ತಾ ಆ ಅಂಗ ಧ್ಯಾನಕ್ಕೆ ನಿಲ್ಲಲು, ಪುನಃ ಎರಡನೇ ಅಂಗವನ್ನು ಧ್ಯಾನಮಾಡಲು

ಪ್ರಾರಂಭಿಸಿ ಧ್ಯಾನಗೈದು ಹೃದಯದಲ್ಲಿ ನಿಲ್ಲಿಸುತ್ತಾ ಸುಲಕ್ಷಣ ಸರ್ವಾಂಗ ಸಂಪೂರ್ಣನಾದ ವಿಚಕ್ಷಣನಾದ, ಭಗವಾನ್ ಹರಿಯಧ್ಯಾನ ಮಾಡುತ್ತಿರಲು ಮನಸ್ಸು ಧ್ಯಾನದಿಂದ ಚಲಿಸಿದರೇ ಪುನಃ ಪುನಃ ಪ್ರತಿಮಾವನ್ನು ನೋಡುತ್ತ ನಾಸಾಗ್ರದೃಷ್ಟಿ ಒಂದೇ ಮನಸ್ಸಿನಿಂದ ಅಧೋಕ್ಷಜನನ್ನು ನೋಡುತ್ತ ನೋಡುತ್ತ ಎಡಬಿಡದೇ ತನ್ನ ಯೋಗ್ಯತಾಕಾಲಪರಿಯಂತವಾಗಿ ಹರಿಯನ್ನು ನೋಡುವದು, ಧಾರಣವೆಂದು ಕರಿಸಿಕೊಳ್ಳುತ್ತದೆ. ಜನ್ಮಾಂತರಕ್ಕೆ ಫಲಪ್ರದವಾಗುತ್ತದೆ. ಹಿಂದಿನ ವಾಸನಾ ಸಂಸ್ಕಾರ ಬಲದಿಂದ ಮುಂದಿನ ಜನುಮದಲ್ಲಿ ಧ್ಯಾನಾನುಕೂಲಫಲ ಒದಗುತ್ತದೆ.

ಹಿಂದಿನ ಜನ್ಮದಲ್ಲಿ ಧಾರಣಧ್ಯಾನ ಮಾಡಿದವನು, ಜನ್ಮಾಂತರದಲ್ಲಿ ಧರ್ಮವಾನ್ ಸದಾಚಾರನು, ಬಹುಶ್ರುತನು ಸುತಪಸ್ವಿಯಾಗಿ ಶಾಂತರಾದ ಜ್ಞಾನಿಗಳಾದ ಗುರುಗಳಿಂದ ಅಚಂಚಲವಾದ ಧಾರಣಯೋಗವನ್ನು ಸಂಪಾದಿಸುವನು.

ಯಾವ ಪುರುಷನು ಧಾರಣಯೋಗ ಹೀನನಾಗಿ, ಸದಾದುಷ್ಟ ಕಾಮದಲ್ಲಿ ನಿರತನಾಗಿರುವನೋ ಅವನು ಜನ್ಮಾಂತರದಲ್ಲಿ ದುಷ್ಟಜನ್ಮವನ್ನು ಹೊಂದಿ ಹೀನಗತಿ ಐದುತ್ತಾನೆ. ಕಾರಣ ಹಿತವನ್ನು ಬಯಸತಕ್ಕ ಪುರುಷನು ಬಹು ಎಚ್ಚರದಿಂದ, ಮಹಾ ಆಯಾಸ ಪ್ರಯತ್ನಪೂರ್ವಕವಾಗಿ ಶ್ರವಣ ಮನನದಿಂದ ಜ್ಞಾನಸಂಪಾದಿಸಿ ಧ್ಯಾನಮಾಡಲೇಬೇಕು. ಇಂಥ ವಾಸನಾತ್ಮಕ ಪ್ರತಿಮಾಧಾರಣ ಧ್ಯಾನಕ್ಕೆ ಕಾರಣವಾದ ಅಭ್ಯಸ್ಥಮನಸ್ಕನಾಗಬೇಕು. ಹೀಗೆ ಎಷ್ಟೋ ಜನುಮಗಳಲ್ಲಿ ಧಾರಣಧ್ಯಾನಯೋಗದಿಂದ ಸಂತುಷ್ಟನಾದ ಹರಿಯು ಕರುಣಾಮಾಡಿ, ಜೀವಸ್ವರೂಪಗತ ಬಿಂಬಸಂಜ್ಞನಾದ ಹರಿಯು ಕೃಪೆಮಾಡಿ ಯಥಾಯೋಗ್ಯವಾದ ಮನೋರಮದಿಂದ ದರ್ಶನ ಕೊಡುತ್ತಾನೆ. ನಿರ್ದೋಷನು, ಸ್ವಪ್ರಕಾಶನು, ಸಚ್ಚಿದಾನಂದ ವಿಗ್ರಹನು, ಸೂರ್ಯಕೋಟಿ ಪ್ರಭಾ ಉಳ್ಳವನು, ಸಸ್ಮಿತಾನನ ಸುಂದರ ಸೂಕ್ಷ್ಮನಾದ ಹರಿಯು ಬಿಂಬದರ್ಶನ ಮಾಡುತ್ತ ಪ್ರಕೃಷ್ಟವಾದ, ಸಮೀಚೀನವಾದ ತಪಸ್ಸಿನಿಂದ ಮುನಿಯಾದವನು ಆನಂದಬಾಷ್ಪಗಳಿಂದ ಆನಂದಮಗ್ನನಾಗಿ ಪುಷ್ಟಾಂಗನಾಗಿ ಶೀಘ್ರದೃಷ್ಟಿಯುಳ್ಳವನಾಗಿ ರೋಮಾಂಚನದಿಂದ ಪೂರ್ಣಸಂತೋಷ ಸಂಭೃತನಾಗಬೇಕು.

ಈ ಪ್ರಕಾರ ಧ್ಯಾನಯೋಗದಿಂದ ಬಿಂಬದರ್ಶನವಾಗಲು ತಕ್ಷಣಿ ಸಂಚಿತಾಗಾಮಿ ಕರ್ಮನಾಶವಾಗಿ, ಪ್ರಾರಬ್ಧಕರ್ಮವಾದರೂ ಕಿಂಚಿತ್ ಅನುಭೋಗದಿಂದ ಉಪಮರ್ದನಮಾಡಿ ಅಪುನರಾವರ್ತಿಯಾದ ಮೋಕ್ಷ ವನ್ನು ಹೊಂದುತ್ತಾನೆ. ಹೀಗೆ ವಾಯುಪುರಾಣದಲ್ಲಿ ಹೇಳಿದೆ.

ಇದು ಯಾವಾಗಲೂ ಮಹಾಗೌಪ್ಯವಾಗಿಡತಕ್ಕದ್ದು. ಮಂದಬುದ್ಧಿ ಗಳಿಗೆ, ದುರ್ಮತಿಗಳಿಗೆ, ಪಿಶುನರಿಗೆ, ಶ್ರದ್ಧಾಹೀನರಿಗೆ ಸರ್ವಥಾ ಹೇಳ ಕೂಡದು. ಭಕ್ತಿಯುತನಾದ ಸತ್ಪುತ್ರನಿಗೆ, ಸಚ್ಛಿಷ್ಯನಿಗೆ ಚಿಂಜ್ಞಾನವುಳ್ಳ ಸ್ವರೂಪಿಗಳಿಗೆ ಉಪದೇಶಮಾಡುವದು.

ಇಂಥ ಉತ್ತಮವಾದ ಗೌಪ್ಯಸಾರಭೂತವಾದದ್ದು ಮನೋರಮವಾ ದದ್ದು; ಸರ್ವಶಾಸ್ತ್ರಸಾರಭೂತವಾದದ್ದು. ಸಕಲ ಶಾಸ್ತ್ರಗಳನ್ನು ಸಾಂಗ ವಾಗಿ ಅಧ್ಯಯನಮಾಡಿ, ಸಾರಭೂತವಾದ ಜ್ಞಾನ ಧ್ಯಾನಯೋಗವನ್ನು ನಿಶ್ಚಯವಾಗಿ ಕೈಕೊಳ್ಳಲು ಮೋಕ್ಷವಾಗುತ್ತದೆ. ಈ ಧ್ಯಾನಯೋಗವು ವಿಷ್ಣುವಿಗೆ ಪ್ರೀತಿಕರವಾದದ್ದು, ಮಂಗಳವಾದದ್ದು, ಶುಭಕರವಾದದ್ದು.

(ಇಲ್ಲಿ ಕೆಲವು ಸಂಸ್ಕೃತ ಶ್ಲೋಕಗಳು ಮೂಲ ಪ್ರತಿಯಲ್ಲಿ ಹರಿದಿವೆ.)

ಈ ಪ್ರಕಾರ ಮಾನಸೀಕ ಧ್ಯಾನಪೂಜಾ ವಿಧಿಯನ್ನು ವ್ಯಾಸರಾಯರ ಜಿಹ್ವಾದಿಂದ ಶ್ರೀನಾರಾಯಣನು, ತಾನೇ ಹೇಳಿಸಿದಂಥಾ ಕ್ರಮಾನುಸಾರ ವನ್ನು, ಆತ್ಮಜ್ಞಾನಿ ಗುರುಗಳಿಗೆ ಶರಣಾಗತನಾಗಿ, ಉಪದೇಶಕೊಂಡು ನಿರಂತರದಲ್ಲಿ ಅನುಷ್ಠಾನ ಮಾಡಲು ಅವನೇ ಜೀವನ್ಮುಕ್ತನೆನಿಸುತ್ತಾನೆ. ಶಾಶ್ವತ ಪದವಿ ಐದುತ್ತಾನೆ. (ಉತ್ತಮ ಮಧ್ಯಮಾಧಿಕಾರಿಗಳ ಸಾಧನ.)

ಅಧಮಾಧಿಕಾರಿಗಳಿಗೆ ಸಾಧಿಸದಿದ್ದರೆ ಉಪದೇಶಕ್ಕೆ ಪಾತ್ರನಾಗಿ ಆ ಉಪದೇಶವನ್ನು ಸಹಸ್ರವಾಗಲಿ ಅಥವಾ ಅಷ್ಟೋತ್ತರ ಶತವಾಗಲಿ, ಯಥಾ ಶಕ್ತಿ ಜಪಮಾಡಬೇಕು. ಉಪದೇಶವಿಲ್ಲದ ದೇಹ ದೀಪವಿಲ್ಲದ ಮನೆ ಯಂತೆ ತಿಳಿಯಬೇಕು. ಪ್ರಪಂಚಾಸಕ್ತರಿಗಾದರೂ ಉಪದೇಶ ಮುಖ್ಯ ಹೇಳುವದು, ಪರಲೋಕ ಸೌಖ್ಯಪ್ರದವಾಗಿ, ಇಹಲೋಕದಲ್ಲಿ ದೋಷ ರಹಿತರಾಗಿ, ಭಗವದನುಗ್ರಹಕ್ಕೆ ಪಾತ್ರರಾಗುವರು.

ಇತಿಶ್ರೀ ವ್ಯಾಸರಾಜ ಅನುಭವಕೃತ ಮಾನಸಪೂಜಾಸಾಧನ ಸಮಾಪ್ತ.

॥ ಶ್ರೀಗುರುಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು ಶ್ರೀಹರಯೇನಮಃ ॥

॥ ಹರಿಃ ಓಂ ॥

ಶ್ರೀರಾಘವೇಂದ್ರ ಶ್ರೀವರದೇಂದ್ರ ಗುರುಭ್ಯೋನಮಃ

ಶ್ರೀಮದ್ರಾಘವೇಂದ್ರತೀರ್ಥ ಗುರುವರ್ಯ ವಿರಚಿತ ಭಗವಧ್ಯಾನ ಪ್ರಕರಣಮ್ ॥ ೪

ಓಂ ರೇಚಕ ಪೂರಕ ಕುಂಭಕ ಕ್ರಮೇಣ ವಾಯುಧಾರಣಾನಂತರಂ, ಧ್ಯಾನಂ ಕುರ್ಯಾದಿತ್ಯುಕ್ತಂಭವತಿ । ಹೃದಯೇ ಅಧೋಮುಖಂ ಹೃತ್ಕಮಲಂ ಅಷ್ಟಪತ್ರಂ ಪ್ರಣವೇನೋರ್ಧ್ವಮುಖಂ ಕೃತ್ವಾ ತೇನೈವವಿಕಾಶ್ಯ ತತ್ಕರ್ಣಿಕಾಯಾಂ ಸೂರ್ಯಮಂಡಲಂ ತದುಪರಿ ಚಂದ್ರಮಂಡಲಂ ತದುಪರಿ ಅಗ್ನಿಮಂಡಲಂ ಧ್ಯಾತ್ವಾ ತಜ್ವಾಲಾಯಾಂ ರಮಾರೂಪದಿವ್ಯರತ್ನ ಮಂಟಪಮಧ್ಯೇ ದಿವ್ಯ ರತ್ನ ಖಚಿತ ಸುವರ್ಣಮಯ ಪೀಠಂ ಧ್ಯಾತ್ವಾ ತತ್ರ ಪೀಠದೇವತಾಃ ಪರದೇವತಾದ್ಯಾಃ ಆವಾಹ್ಯಂ ಪಿಠೋಪರಿ ಷಟ್‌ಕೋಣ ಪದ್ಮ ಭೂಮಿಂ ಧ್ಯಾತ್ವಾ ಕೋಣೇಷು ದೇವಸ್ಯಾಗ್ರೇ ಅಗ್ನಿಂ, ದಕ್ಷಿಣೇ ಸೂರ್ಯಂ, ಸವ್ಯೆ ಚಂದ್ರಮಸಮ್, ದೇವಸ್ಯ ಸವ್ಯೇಶ್ರಿಯಂ, ದಕ್ಷಿಣೇಭುವಂ ಪೃಷ್ಠಭಾಗೇ ದುರ್ಗಾಂ ಧ್ಯಾತ್ವಾ ತತ್ರ ಷಟ್‌ಕೋಣ ಭೂಮೌ ಅಷ್ಟದಳ ಪದ್ಮ ರಮಾರೂಪಂ ಧ್ಯಾತ್ವಾ ತತ್ರ ಪದ್ಮದಳೇಸೂರ್ಯಂ, ಕೇಶರೇಷು ಸೋಮಂ, ಕರ್ಣಿಕಾಯಾಂ ಹುತಾಶನಂ ಧ್ಯಾತ್ವಾ ಪ್ರತ್ಯೇಕಂ ಪದ್ಮಾಷ್ಟ ದಳೇಷು ಮಧ್ಯೇ ಕರ್ಣಿಕಾಯಾಂಚ "ವಿಮಲೋತ್ಕರ್ಷಣೀಜ್ಞಾನಾ ಕ್ರಿಯಾಯೋಗಾ ತಥೈವಚ॥ ಪೃಹ್ವೀಸತ್ಯಾತಥೇಶಾನಾನುಗ್ರಹಾಶ್ಚೇತಿ ಶಕ್ತಯಃ॥" ಇತಿಪರಮಾತ್ಮಮೂರ್ತಿಧಾತ್ವಾ ಕರ್ಣಿಕೋಪರಿ ತಮೋರಜಸತ್ವ ಮಿತಿ ಕ್ರಮೇಣ ತ್ರಿಗುಣಾಭಿಮಾನಿನೀಂ ಲಕ್ಷ್ಮೀಂ ತಲ್ಪಾಕಾರಂ ಛತ್ರಕಾರಂ ಫಣಂ ಶೇಷಂ ಧ್ಯಾತ್ವಾ ತದುಪರಿ ಗುಣತ್ರಯಾಭಿಮಾನಿನೀಂ ಚಿತ್ರಾಸನ ರೂಪಂ ಲಕ್ಷ್ಮೀಂ ಧ್ಯಾತ್ವಾ ತತ್ರ ಸ್ವರೂಪಹೃದಯೇ ಬಾಹ್ಯಾಂಗುಷ್ಟ ಪರಿಮಿತಂ ತತ್ಪೃಷ್ಠಭಾಗೇ ಹೃತ್ಕಮಲಮಧ್ಯ ವ್ಯಾಪಿನಿಂ ಪ್ರಾದೇಶಪರಿಮಿತಂ ತದಧಃ ಕರ್ಣಿಕಾಮೂಲೇ ಅಂಗುಷ್ಟಾಗ್ರ ಪ್ರಮಾಣಂಚ ಪರಮಾತ್ಮಾನಂ ನಾರಾಯಣನಾಮಮಯಂ ಇತ್ಯಾದ್ಯುಕ್ತ ಪ್ರಕಾರೇಣ ಲಕ್ಷ್ಮೀಧರಾಭ್ಯಾಮಿತ್ಯಾದಿ ತಂತ್ರಸಾರೋಕ್ತ ಆವರಣದೇವತಾಸಹಿತಂ ಉದ್ಯದಾದಿತ್ಯವರ್ಣ

ಮೇಘಶ್ಯಾಮಂವಾಧ್ಯಾಯೇತ್" ॥ ತದುಕ್ತಂ॥ "ಏಕಾಂತೇತು ಶುಚೌ ದೇಶೆ ಜನಸಮ್ಮರ್ದವರ್ಜಿತೇ ॥ ಕುಶಾಽಜಿನಾದ್ಯಾಸನಗಃ ಸ್ವಸ್ಥಚಿತ್ತಸ್ಥಿರಃ ಶುಚಿಃ ॥ ಸಮಂ ಕಾಯಶಿರೋಗ್ರೀವಂ ಧಾರಯನ್ನ ಚಲಂಮನಃ ॥ ಸಂಪ್ರೇಕ್ಷ್ಯನಾಶಿಕಾಗ್ರಂ ಸ್ವದಿಶಶ್ಚಾನವಲೋಕಯೇತ್ ॥ ಅಷ್ಟಪತ್ರಂ ತಥೃದಯೇ ಪದ್ಮಮಧ್ಯೇ ಸೂರ್ಯೇಂದುವಹ್ನಿಗಮ್ ॥ ಪೀಠ ತನ್ಮಧ್ಯ ಮಧ್ಯಸ್ಥಂ ನಾರಾಯಣನಾಮಮಯಂ ॥ ಉದ್ಯದಾದಿತ್ಯಸಂಕಾಶ ತೇಜಸಾ ನುಪಸಂಪದಾ ॥ ಸಹಸ್ರಾಮಿತ ಸೂರ್ಯಾಣಾಂ ಸರ್ವದಾನಂದರೂಪಿಣಂ॥ ಅತಿರಕ್ತತಲಂಭಾಸ್ವನ್ ಸ್ವವ್ರಾತವಿಭೂಷಿತಮ್ ॥ ವೃತ್ತಜಂಘಂ ವೃತ್ತ ಜಾನುಂ ಹಸ್ತಿ ಹಸ್ತೋರುಮಿಶ್ವರಂ ॥ ಮಹಾಕಟಿತಟನ್ನದ್ಧ ಕಾಂಚೀ ಪೀತಾಂಬರೋಜ್ವಲಮ್ ॥ ನಿಮ್ನನಾಭಿಂಚ ತ್ರಿವಳಿಂ ಸುವೃತ್ತೋದರ ಬಂಧನಮ್ ॥ ವಿಸ್ತಾರ ವಕ್ಷಸಂಭ್ರಾಜತ್ಕೌಸ್ತುಭಾ ಮುಕ್ತಕಂದರಮ್ ॥ ವನಮಾಲಾಧರಂಹಾರ ಭುಜಕೇಯೂರಭೂಷಿತಮ್ ॥ ಪೃಥುದೀರ್ಘಚತು ರ್ಬಾಹುಂ ಶಂಖಚಕ್ರಗದಾಂಬುಜಮ್ ॥ ರಕ್ತಮುನ್ನಿದ್ರಪದ್ಮಾಕ್ಷಂ ಸ್ಫುರನ್ಮಕರಕುಂಡಲಮ್ ॥ ಪೂರ್ಣಚಂದ್ರಾಯುತೋದ್ರಿಕ್ತ ಕಾಂತಿ ಸನ್ಮುಖಪಂಕಜಮ್ ॥ ಸುಭ್ರುವಂ ಸುಲಲಾಟಂತಂ ಕಿರೀಟಾಬದ್ಧ ಮೂರ್ಧಜಮ್ ॥ ನಿಃಶೇಷ ದುಃಖಶಯನಂ ನಿತ್ಯಾನಂದಂ ಶುಚಿಸ್ಮಿತಮ್॥ ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ॥ ಬ್ರಹ್ಮವಾಯು ಶಿವಾಹೀಶವಿಪ್ಯೈಃಶಕ್ರಾದಿಕೈರಪಿ ॥ ಸೇವ್ಯಮಾನೋಧಿಕಂಭಕ್ತ್ಯಾ ನಿತ್ಯ ನಿಃಶೇಷಶಕ್ತಿಮಾನ್ ॥

ಅಥದ್ವಾತ್ರಿಂಶಲ್ಲಕ್ಷಣಾನಿಜ್ಞೇಯಾನಿ

ಭುಜ ನೇತ್ರ ಹಸ್ತ ಜಾನುನಾಶಿಕ ಪಂಚಪಂಚ ಸ್ಥಾನೇಷು ದೈರ್ಘ್ಯಾಣಿ ॥ ಪಾಣಿ ಪಾದ ನೇತ್ರಾಂತ ತಾಲು ಜಿಂಹ್ವಾಧರೋಷ್ಠ ನಖ ಸಪ್ತಸ್ಥಾನೇಷು ರಕ್ತಾನಿ ॥ ಕಕ್ಷ ಕುಕ್ಷಿ ವಕ್ಷೋಘ್ರಾಣ ಸ್ಕಂದಲಲಾಟೇಷು ಔನ್ನತ್ಯಂ ॥ ಲಲಾಟ ಕುಕ್ಷಿ ಚಕ್ಷುಷಿ ಪೃಥುತ್ವಂ ॥ ಗ್ರೀವ ಪ್ರತನು ಪೃಷ್ಠ ಜಂಘೇಷು ಲಘುತ್ವಂ ॥ ಸ್ವರ ರಸನಾನಾಭಿಃ ತ್ರಿಷು ಸ್ಥಾನೇಷು ಗಂಭೀರತ್ವಂ ಚಿಂತಯೇತ್ ॥ ತದುಕ್ತಂ "ಪಂಚದೀರ್ಘಾ ಪಂಚಸೂಕ್ಷ್ಮಃ ಸಪ್ತರಕ್ತ ಷಡು ನ್ನತಃ ॥ ತ್ರಿಪೃಥು ತ್ರಿಲಘು ತ್ರಿಗಂಭೀರಃ" ॥ ಏವಂದ್ವಾತ್ರಿಂಶನ್

ಲ್ಲಕ್ಷಣಾನಿಸತ್ (ಅತ್ರಲಘುಶಬ್ದೋಹ್ಯಸ್ವಾನಿರ್ವಿಜ್ಞೇಯಃ) ತಥಾ ದಣಕ್ಷ ಕರೇ ಸಹಸ್ರಾರಂ ಚಕ್ರಂ ಅಷ್ಟಾಸ್ತ್ರಾ ಗದಾ ॥ ಶತಾವರ್ತಶಂಖಂ ಲಕ್ಷ ಣಂಜ್ಞೇಯಂ ॥ ವಾಮಕರೇ ಸಹಸ್ರದಳಂಪದ್ಮಂ ಚಕ್ರಲಕ್ಷಣೇನಜ್ಞೇಯಂ॥ ಪಾದತಲಯೋಃ ವಜ್ರಾಂಕುಶಧ್ವಜ ಪದ್ಮರೇಖಾಃಧ್ಯೇಯಾಃ ॥ ತಜ್ಜ್ಯೋಕ್ತಂ ॥

ಹೃದಯೇ ಧ್ಯೇಯ ಮೂರ್ತಯಸ್ತ್ರಿಸ್ರಃ ಸರ್ವೇಶೋ ಹೃದಯೇ ವ್ಯಾಪ್ತಃಪ್ರಾದೇಶ ಪುರುಷೋತ್ತಮಃ ॥ ಜೀವಾನಾಂ ಸ್ಥಾನಮುದ್ದಿಷ್ಟಂ ಸರ್ವದೈವಸನಾತನಃ ॥ ಹೃತ್ಕರ್ಣಿಕಾ ಮೂಲಗಃಸ್ವಾಂಗುಷ್ಠಾಗ್ರ ಪ್ರಮಾ ಣಕಃ ॥ ಮೂಲೇಶ ಇತಿನಾಮಾಸ್ಮಿನ್ ಸರ್ವೇಜಿವಾಃ ಪ್ರತಿಷ್ಠಿತಾಃ ಅಂಗು ಷ್ಠಮಾತ್ರ ಪುರುಷೇ ಕರ್ಣಿಕಾಗ್ರಸ್ಥಿತೇಹರೌ ॥ ಪ್ರವಿಶಂತಿ ಸುಷುಪ್ತೌತು ಪ್ರಬುದ್ಧ್ಯಂತೇ ತತಃಪರಂ ॥ ಸೋಯಂಪುರುಷೋ ತ್ರಿರೂಪೋ ಭಗ ವಾನ್ ಹೃದಯಾಖ್ಯೆ ಪ್ರವರ್ತಿತಃ ॥

ಇದಂಚ ಯಾವತ್ಕಾಲಂ ಧ್ಯಾನವಶಾತ್ ಹೃದಯೇ ವಾಸನಾಮಯ ಮೂರ್ತಿಃ ಪ್ರತೀಯೇತ್ । ತಾವತ್ಕಾಲಂ ಧ್ಯಾನಾಭ್ಯಾಸಂ ಕುರ್ಯಾತ್ ವಾಸನಾಮಯ ಪ್ರತೀತ್ಯನಂತರಂ (ವಾಸನಾಮಯಮೂರ್ತಿ ಕಂಡಮೇಲೆ) ತಸ್ಯಾಂ ಪ್ರತಿಮಾಯಾಂ ವಾಸನಾಮಯಾಯಾಂ ಅನವದ್ಯೋದಕ (ಪರಿ ಶುದ್ಧೋದಕೇಸ್ನಾನಂ) ಗಂಧ ಪುಷ್ಪಾದಿಭಿಃ ಮನಸಾ ಸಂಕಲ್ಪಿತಾಂ ಪೂಜಾಂಕೃತ್ವಾ ತತ್ಪ್ರತಿಮಾಂತರ್ಗತವಿಷ್ಣೌ ಪೂರ್ಣನಿರ್ದೋಷ ಪೂರ್ಣಾ ನಂದಾತ್ಮಕಃ ಪೂರ್ಣಸ್ವಾಮಿಃ ಪೂರ್ಣಗುಣಃ ಇತಿ ಧ್ಯಾನಂ ಕುರ್ಯಾತ್॥

ಇದಂ ಚ ಧ್ಯಾನಂ ಯಾವತ್ ಸ್ವರೂಪಜ್ಞ ಗುರುದರ್ಶನಂ ತಾವತ್ಕು ರ್ಯಾತ್ ಪಶ್ಚಾತ್ತಾದೃಶಗುರೂಕ್ತ ಪ್ರಕಾರೇಣ ಯಾವದಪರೋಕ್ಷಂ ಧ್ಯಾನಂ ಕುರ್ಯಾತ್ ॥

ಧ್ಯಾನಸಮಾಪ್ತ್ಯನಂತರಂ ಸಂಪುಟಾ ಕಾರೇಣ ಮಾತೃಕಾನ್ಯಾಸ ತತ್ವನ್ಯಾಸೌ ಕೃತ್ವಾ ಧ್ಯಾನಂ ಹರೌ ಸಮರ್ಪಯೇತ್॥

ಇತಿ ಶ್ರೀ ರಾಘವೇಂದ್ರಯತಿ ಕೃತ ಧ್ಯಾನ ಪ್ರಕರಣಂ ಸಂಪೂರ್ಣಂ ॥

ಶ್ರೀಗುರು ಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು

ಶ್ರೀಮಧ್ವೇಶಾಯಮಂಗಳಂ ಶ್ರೀಗುರುರಾಜೋವಿಜಯತೇ

ಶ್ರೀ ವ್ಯಾಸತತ್ವಜ್ಞ (ಐಜಿ ಸ್ವಾಮಿಗಳವರು ರಚಿಸಿದ) ಕನ್ನಡ ಗದ್ಯರೂಪ ಮಾನಸಸ್ಮೃತಿ ೫

॥ ಹರಿಃ ಓಂ ಶ್ರೀಗುರುಭ್ಯೋನಮಃ ॥

ಶ್ರೀಹರಿಯಾದಂಥ ಶ್ರೀನಿವಾಸನ ಪಾದಗಳಿಗೆರಗಿ, ಗುರುಪರಂಪರೆಯಿಂದ ಎಲ್ಲ ಗುರುಗಳಿಗೆ ನಮಸ್ಕರಿಸಿ ಮಾನಸಿಕಧ್ಯಾನೋಪಾಸನೆಯ ವಿಧಿಯನ್ನು ಯಥಾಮತಿ ತಿಳಿದಷ್ಟು ಹೇಳುತ್ತೇವೆ ಶ್ರೀಶಪಾದಾಂಬುಜ ಆಸಕ್ತನಾಗಿ, ಹೃದಯದಲ್ಲಿ ಮನದಿ ಶ್ರೀಹರಿಯಪಾದ ಆಸಕ್ತನಾಗಿ ಮನಸಾ ಸ್ನಾನವನ್ನು ಮಾಡಬೇಕು. ತನ್ನ ದೇಹಾಂತರ್ಗತವಾದ ನಾಡಿಗಳು ಪಿಂಗಳ, ಇಡಾ, ಸುಷುಮ್ನವೆಂಬ ಮೂರು ನಾಡಿಗಳು. ಪಿಂಗಳಾನಾಡಿ ಯಮುನಾನದಿಯೆಂತ ಕರೆಸಿಕೊಳ್ಳುತ್ತದೆ. ಇಡಾನಾಡಿ ಗಂಗಾ-ಭಾಗೀರಥೀನದಿಯೆಂದು ಕರೆಸಿಕೊಳ್ಳುತ್ತದೆ. ಈ ಉಭಯ ನಾಡಿಗಳಿಗೆ ಅಂತಸ್ಥಿತವಾದ ಎಂದರೆ ಮೂಲಕಾರಣವಾದ ಸುಷುಮ್ನಾನಾಡಿ ಸರಸ್ವತಿನದಿಯೆಂತ ಕರಿಸುತ್ತದೆ.

ಇಂಥ ಸುಷುಮ್ನಾನಾಡಿ ಸ್ಥಿತವಾದ ಹೃತ್ಪದ್ಮನಿವಾಸಿಯಾದ ಶ್ರೀಹರಿ ಬಿಂಬನಾದ ಧ್ಯಾನವೆಂಬೋ (ಜಲ) ಉತ್ತಮ ತೀರ್ಥದಲ್ಲಿ ಮಾನಸಿಕ ಸ್ನಾನವನ್ನು ಮಾಡಬೇಕು. ಇಂಥ ಶ್ರೀಹರಿ ಧ್ಯಾನರೂಪವಾದ ತೀರ್ಥದಲ್ಲಿ ಗಂಗಾ, ಯಮುನಾ, ಸರಸ್ವತೀ ತ್ರಿವೇಣಿಯಲ್ಲಿ ಸ್ನಾನಮಾಡಿ, ಶುದ್ಧಾತ್ಮನಾಗಿ ಮನೋಮೈಲಿಗೆ ಕಳೆದು ಶುದ್ಧಮನಸ್ಕನಾಗಬೇಕೆಂದು ವಾಮನಪುರಾಣದಲ್ಲಿ ಹೇಳಿದೆ. ಹೀಗೆ ಶ್ರೀಹರಿಧ್ಯಾನ ಸಲಿಲದಲ್ಲಿ ಸ್ನಾನ ಮಾಚರಿಸಿ ಶುದ್ಧಮನಸ್ಕನಾಗಿ, ಶುದ್ಧಶುಚಿಯಾದ ಏಕಾಂತಸ್ಥಳದಲ್ಲಿ ಅತಿ ಉನ್ನತವಾಗದೆ, ಅತಿ ತಗ್ಗಾಗದೆ ಇದ್ದ ಸಮವಾದ ಸ್ಥಳದಿ ಚೈಲಾಜಿನ ಕುಶೋತ್ತರವಾದ, ಸಮವಾದ ಆಸನದಲ್ಲಿ ಕುಳಿತು ಏಕಾಗ್ರಚಿತ್ತನಾಗಬೇಕು. ಹೀಗೆ ಗೀತಾದಲ್ಲಿ ಹೇಳಿದೆ.

ಶುದ್ಧವಾದ ಸ್ಥಳ ಸಮಾನವಾದ ಆಸನದಲ್ಲಿ ಕುಳಿತು ಏಕಾಗ್ರಚಿತ್ತದಿಂದ, ಶ್ರೀಹರಿಯಾದ ಪರಮಾತ್ಮನ ಅದ್ಭುತವಾದ ಅಧಿಷ್ಠಾನವನ್ನು ತನ್ನ ದೇಹದಲ್ಲಿ ಚಿಂತಿಸಬೇಕು. ಈ ಪಂಚಭೂತಾತ್ಮಕವಾದ ಪೃಥಿವಿ, ಅಪ್ಪು, ತೇಜ, ವಾಯು, ಆಕಾಶ ಈ ಐದುಭೂತ ಪಂಚೀಕೃತಿಯಿಂದಿರುವ ಪಂಚಭೂತವಾದ ಸ್ಥೂಲದೇಹದಲ್ಲಿ ತ್ವಕ್, ಚರ್ಮ, ಮಾಂಸ, ರುಧಿರ, ಮೇದಸ್ಸು, ಮಜ್ಜಾ, ಅಸ್ಥಿ ಈ ಏಳು ಧಾತುಗಳು ಪಂಚಭೂತಾತ್ಮವೆಂದೇ ಚಿಂತಿಸಬೇಕು. ಮನಸ್ಸೇನೇ ಮೊದಲಾಗಿ ಸಕಲೇಂದ್ರಿಯಗಳು ತತ್ವಾತ್ಮಕವೆಂದು ಕರೆಸುತ್ತವೆ ಕ್ರಮಾತ್ ಸಪ್ತಧಾತುಗಳಲ್ಲಿ ಕ್ರಮವಾಗಿ ತತ್ವ ಚರ್ಮ ಮಾಂಸ ನಡುವೆ, ಅನ್ನಮಯ, ಕೋಶ, ಮಾಂಸರುಧಿರದಲ್ಲಿ ಪ್ರಾಣಮಯ ಕೋಶ, ರುಧಿರಮೇದಸ್ಸಿನಲ್ಲಿ ಮನೋಮಯ, ಮೇದಸ್ಸು ಮಜ್ಜಾನಡುವೆ ವಿಜ್ಞಾನಮಯ, ಮಜ್ಜಾ ಅಸ್ಥಿ ನಡುವೆ ಆನಂದಮಯಕೋಶ ಹೀಗೆ ಐದು ಕೋಶಗಳಿವೆ. ಅವುಗಳಲ್ಲಿ ಅನಿರುದ್ಧಾದಿ ಪಂಚರೂಪಗಳು ಚಿಂತಿಸಬೇಕು. ಐತರೇಯದಲ್ಲಿ ಹೇಳಿದೆ. ಸಪ್ತದಾತುಗಳ ಒಳಗ, ಅನ್ನಮಯ ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯರೂಪಗಳು, ಗುಣತ್ರಯವಾದ ಅವ್ಯಕ್ತ ತತ್ವದಲ್ಲಿ ಆನಂದಮಯರೂಪ, ಮಹತ್ತತ್ವದಲ್ಲಿ ವಿಜ್ಞಾನಮಯರೂಪ ಚಿಂತಿಸಬೇಕು. ಅಹಂಕಾರ ತತ್ವದಲ್ಲಿ ಮನೋಮಯರೂಪ. ಆಕಾಶ, ವಾಯು, ತೇಜಸ್ಸು, ಈ ಮೂರುಗಳಲ್ಲಿ ಪ್ರಾಣಮಯರೂಪ. ಅಪ್ಪು ಪೃಥಿವಿ ಈ ಎರಡರಲ್ಲಿ ಅನ್ನಮಯರೂಪ, ಈ ಪ್ರಕಾರ ಐದು ಕೋಶಗಳು ಇದ್ದಂಥಾವು. ಆ ಕೋಶಗಳಲ್ಲಿ ಇದ್ದಂಥಾ ಚಕ್ಷುರ್ಮಯ, ಶ್ರೋತ್ರಮಯ, ವಾಙ್ಮಯ ಈ ಮೂರು ರಮಾಪತಿರೂಪಗಳು. ಆ ಕೋಶಗಳಿಗೆ ವ್ಯಾಪ್ತವಾದಂಥವು ಚಿಂತಿಸಬೇಕು. ಈ ರೂಪಗಳು ತೈತರೇಯದಲ್ಲಿ ಹೇಳಿದೆ. ಜ್ಞಾನಸ್ವರೂಪನಾದಕಾರಣ, ವಿಜ್ಞಾನಮಯ ಎಂತ ಕರೆಸಿಕೊಂಡ. ಸರ್ವವನ್ನೂ ತಿಳಿಯೋಸ್ವರೂಪವಾದಕಾರಣ ಮನೋಮಯ. ಬಲಪೂರ್ಣ ಸ್ವರೂಪಜ್ಞಾನಕಾರಣ ಶ್ರೋತ್ರಮಯ. ಸರ್ವಾಧಾರಕನಾದಕಾರಣ ಸುಗಂಧರೂಪನಾದಕಾರಣ ಪೃಥಿವಿಮಯ. ಸರ್ವರಿಗೆ ತೃಪ್ತಿಕರನಾದಕಾರಣ ಅಮ್ಮಯ. ಸರ್ವಕರ್ಷಕನಾದಕಾರಣ ವಾಯುಮಯ, ಅವಕಾಶಪ್ರದನಾದಕಾರಣ ಆಕಾಶಮಯ, ಪೂರ್ಣತೇ

ಜೋಮಯನಾದಕಾರಣ ತೇಜೋಮಯ, ಸೃಷ್ಟ್ಯಾದಿ ಇಚ್ಛಾಕರ್ತೃನಾದ ಕಾರಣ ಕಾಮಮಯ, ಸರ್ವದುಷ್ಟನಾಶಕನಾದಕಾರಣ ಕ್ರೋಧಮಯ, ಸುಖಸಾಧನವಾದ ಧರ್ಮರೂಪನಾದಕಾರಣ ಧರ್ಮಮಯನೆಂತ ದೇವರಿಗೆ ನಾಮಗಳು, ಬೃಹದಾರಣ್ಯದಲ್ಲಿ ಆರನೇ ಅಧ್ಯಾಯದಲ್ಲಿ ಹೇಳಿದೆ

ಸಪ್ತದಾತುಗಳ ಮೇಲೆ ಕವಚದೋಪಾದೇಲಿ, ಪಾದ ಆರಂಭಿಸಿ ಶಿರಸ್ಸಿನ ಪರಿಯಂತರ ವಾಸುದೇವಾಖ್ಯರೂಪವನ್ನು ಚಿಂತಿಸಬೇಕು ಈ ಪ್ರಕಾರ ಶಿರಸ್ಸು ಆರಂಭಿಸಿ ಪಾದಪರಿಯಂತರ, ನಾರಾಯಣರೂಪ ಚಿಂತಿಸಬೇಕು. ಬೃಹದಾರಣ್ಯಕದಲ್ಲಿ ಐತರೇಯದಲ್ಲ ಹೇಳಿದೆ.

ಈ ದೇಹದಲ್ಲಿ ಮೂರುವರಿಕೋಟಿ ರೋಮಕೂಪಗಳು ಉಳ್ಳಂಥಾವು ಅವುಗಳಲ್ಲಿ ವ್ಯಾಪ್ತವಾಗಿದ್ದಂಥಾ ಹಿಂ ಕಾರನಾದಂಥ ಪ್ರದ್ಯುಮ್ನರೂಪ ಚಿಂತಿಸಬೇಕು. ಛಾಂದೋಗ್ಯದಲ್ಲಿ ಹೇಳಿದೆ ಆ ರೋಮಕೂಪಗಳಲ್ಲಿ ಮೂರುವರಿಕೋಟಿ ತೀರ್ಥಗಳು ಅವೆ. ಆ ತೀರ್ಥಗಳಲ್ಲಿ ತನ್ನಿಯಾಮಕ ಭಗವದ್ರೂಪಗಳು ಮೂರುವರಿಕೋಟಿರೂಪ ಚಿಂತಿಸಬೇಕು.

ಸಪ್ತಧಾತುಗಳಲ್ಲಿದ್ದ ಭಗವದ್ರೂಪಗಳ ವಿವರ

ತ್ವಕ್ಕಿನಲ್ಲಿ ಅನಿರುದ್ಧ ಪ್ರಸ್ತಾವನಾಮಕ ಮತ್ತು ಲಾವಣ್ಯಪ್ರದ ರಾಮರೂಪವು, ಚರ್ಮದಲ್ಲಿ ಉದ್ಗೀಥನಾಮಕ ಪ್ರದ್ಯುಮ್ನ ಮತ್ತು ಮಹಾವ್ರಣನಿವಾರಕವಾದಂಥ ಲಕ್ಷ್ಮೀಪತಿ ಎಂಬೋರೂಪ, ಮಾಂಸದಲ್ಲಿ ಪ್ರತಿ ಹಾರಾಖ್ಯ ಸಂಕರುಷಣ ಮತ್ತು ವರರೂಪಿಯಾದಂಥಾ ವಿಷ್ಣು ಪುಷ್ಟಿ ಅಭಿವೃದ್ಧಿಪ್ರದನಾಗಿ ಇದ್ದಾನೆಯಂತ ತಿಳಿಯಬೇಕು. ರುಧಿರದಲ್ಲಿ ಉಪದ್ರವನಾಮಕ ವಾಸುದೇವರೂಪ ಮತ್ತು ಶರೀರಕ ಬಲವಾದಂಥ 'ಶಾಂತಸಂವಿತ್' ಎಂಬೋರೂಪ, ಮೇದಸ್ಸಿನಲ್ಲಿ 'ನಿಧನನಾಮಕ ನಾರಾಯಣರೂಪ' ಅಲ್ಲೇವೇ ಐಶ್ವರ್ಯಾದಿ ಗುಣಪ್ರದನಾದಂಥ ಷಡ್ಗುಣನಾಮಕನಾದಂಥ ವಿಷ್ಣುರೂಪವು. ಮಜ್ಜಾದಲ್ಲಿ ವಷಟ್‌ಕಾರ ನಾಮಕರೂಪ, ಅಲ್ಲೇವೆ ಸಾರಾತ್ಮಎಂಬೋರೂಪ, ಮದವನ್ನು ಹುಟ್ಟಿಸುತ್ತಾನೆ ಎಂಬೋ ಕಾರಣ ಮಜ್ಜಾಯೆಂತ ಹೆಸರುಳ್ಳಂಥಾತನು. ಮತ್ತು ಮುನ್ನೂರಾಅರವತ್ತು ಭಗವದ್ರೂಪಗಳು ಚಿಂತಿಸಲಿಕ್ಕೆ ಯೋಗ್ಯವಾದಂಥಾವು. ಆ ರೂಪ

ಗಳು ಮುನ್ನೂರಾಅರವತ್ತು ದಿವಸ ಸಂಧಿಕಾಲಗಳಿಗೆ ದೇವತೆಗಳು ಆದಂಥಾವು. ಆ ಮಜ್ಜಾದಿಂದ ರೇತಸ್ಸು ಹುಟ್ಟುತ್ತದೆ. ಆ ರೇತಸ್ಸಿನಲ್ಲಿ ಪ್ರಾಣನು ಇರುತ್ತಾನೆ ಆ ಪ್ರಾಣನಲ್ಲಿ ಶ್ರೀ ನಾರಾಯಣನು ಇರುತ್ತಾನೆ. ಆದಕಾರಣ ಆ ರೇತಸ್ಸು ಗರ್ಭತ್ವವನ್ನು ಐದುತ್ತದೆ ಅಸ್ಥಿಗಳಲ್ಲಿ ಆದಿಶಬ್ದ ವಾಚ್ಯವಾದಂಥ ಹಂಸರೂಪ. ಆ ಮುನ್ನೂರಾಅರವತ್ತು ಅಸ್ಥಿಗಳಲ್ಲಿ ಆಶ್ಚರ್ಯಕ ಕಾರಣವಾದಂಥ ಅಸ್ಥಿಶಬ್ದವಾಚ್ಯವಾದಂಥ ವ್ಯಾಪ್ತವಾದಂಥಾ ರೂಪಗಳು, ಮುನ್ನೂರಾಅರವತ್ತು ರೂಪಗಳು ರಾತ್ರಿಗಳಿಗೆ ದೇವತೆಗಳಾದಂಥಾವು ಎಂತ ಚಿಂತಿಸಬೇಕು.

ಪಾದಹಸ್ತಾಂಗುಲಿಗಳಲ್ಲಿ ಏಸುವರ್ಪಗಳವ್ಯೋ ಆ ಪರ್ವ (ಸಂಧಿ) ಗಳಲ್ಲಿ ಪರ್ವಶಬ್ದವಾಚ್ಯವಾದಂಥಾ ರೂಪಗಳು ಚನ್ನಾಗಿ ತಿಳಿಯಬೇಕು. ಆ ಪರ್ವಗಳಲ್ಲಿ ಮುನ್ನೂರಾಅರವತ್ತು ಭಗವದ್ರೂಪಗಳು (ದಿನ) ಅಹಸ್ಸಿಗೆ ದೇವತೆಗಳಾದಂಥವು. ಪೂರ್ವೋಕ್ತ ಪ್ರಕಾರ ಸಾವಿರದಾಎಂಭತ್ತು ಭಗವದ್ರೂಪಗಳನ್ನು ದಾವಾತ ತಿಳಿಯುತ್ತಾನೋ ಆತನಿಗೆ ನಿತ್ಯದಲ್ಲಿ ಆಯುಷ್ಯಾಭಿವೃದ್ಧಿ ಆಗೋಅಂಥಾವು, ಹೀಗೆ ಐತರೇಯದಲ್ಲಿ ಹೇಳಿದೆ.

ದೇಹದಲ್ಲಿ ತತ್ವಾಭಿಮಾನಿ ದೇವತೆಗಳು ಒಂಭತ್ತುಕೋಟಿ ಮಂದಿ, ಆ ದೇವತೆಗಳು ಭಗವಂತನ ಆಜ್ಞಾದಿಂದ ಆ ಆ ತತ್ವಗಳಲ್ಲಿ ಬೋಧಕರಾಗಿಯಿರುಧಾರ. ಆ ತತ್ವಾಭಿಮಾನಿ ದೇವತೆಗಳವ್ಯೊಳಗೆ ಮುಖ್ಯರಾದಂಥಾವರು ಇಪ್ಪತ್ತುನಾಲ್ಕುಮಂದಿ. ಅವರಲ್ಲಿ ನಿಯಾಮಕರಾದಂಥ, ಕೇಶವಾದಿ ಇಪ್ಪತ್ತುನಾಲ್ಕು ಭಗವನ್ಮೂರ್ತಿಗಳು, ಇವುಗಳ ವಿವರ ತಂತ್ರಸಾರದಲ್ಲಿ ಐತರೇಯದಲ್ಲಿ ಹೇಳಿದೆ. ತತ್ವಾಭಿಮಾನಿಯಾದಂಥ ಅಹಂಕಾರಿಕ ಪ್ರಾಣನಲ್ಲಿ ಅನಿರುದ್ಧನ್ನ ಚಿಂತಿಸಬೇಕು.

ಅಜನಾಮಕ ಅಂತನಾಮಕ ಎರಡು ಭಗವದ್ರೂಪಗಳು. ಶಿರಸ್ಸಿನಲ್ಲಿ ಆನಂದಮೂರ್ತಿ ಮುಖದಲ್ಲಿ ಶ್ರೋತ್ರಾಭಿಮಾನಿಗಳಾದಂಥಾ ದಿಗ್ದೇವತೆಗಳು ಚಂದ್ರನೇವೆ ಮೊದಲಾದವರು, ಆ ಚಂದ್ರನಲ್ಲಿ ಬ್ರಹತ್ಪಾಂಡುವಾಸ ಸೋಮರಾಜಾ ಎಂಬ ಭಗವದ್ರೂಪ ಚಿಂತಿಸಬೇಕು, ಹೀಗೆ ಐತರೇಯದಲ್ಲಿ ಹೇಳಿದೆ. ತನ್ನ ಹೃದಯದಲ್ಲಿದ್ದ ಭಗವದ್ರೂಪಕ್ಕ, ತನ್ನಲ್ಲಿ ವಿಶೇಷ ಸಂಬಂಧವನ್ನು ಜ್ಞಾನಾರ್ಥವಾಗಿ, ಪನಾರ್ಥವಾಗಿ, ಬ್ರಹತ್ಪಾಂಡುವಾಸಯೆಂತ

ಅಂದರು; ಯೆಂತ ಬೃಹದಾರಣ್ಯದಲ್ಲಿ ಹೇಳಿದೆ. ಹೀಗೆ ಶ್ರೋತ್ರೇಂದ್ರಿಯ ದಲ್ಲಿ ಧನ್ವಂತರೀ ಹಯಗ್ರೀವ ಚಿಂತಾಮಣಿ ಆಜಾದಿಗಳು ಹಂಸಮೂರ್ತಿ ಯನ್ನು ಚಿಂತಿಸಬೇಕು. ಈ ಎರಡೂ ಕರಣಗಳಲ್ಲಿ ಉಗ್ರ ಊರ್ಜ ಹೀಗೆ ಹಯಗ್ರೀವನು ದಿಕ್ಕುಗಳಲ್ಲಿ ನಿಯಾಮಕನಾದಂಥಾತ ಏದಿಂಜ ಓಂ ನಿಯಾ ಮಕವಾದಂಥ, ವ್ಯಾಪ್ತನಾದಂಥ ಪ್ರದ್ಯುಮ್ನರೂಪ ಬ್ರಾಹ್ಮಣನ ಬಲದ ಕಿವಿಯಲ್ಲಿ, ಭಾಗೀರಥ್ಯಾದಿ ಸಮಸ್ತ ತೀರ್ಥಗಳು ಇವೆ ಅಂಥಾವು, ಆ ಕಾರ ಣದಿಂದ, ಸ್ವಕರ್ಣ ಸ್ಪರುಶದಿಂದ ಶುಚಿ ಹೀಗೆ ಪರಾಶರ ಹೇಳಿದ್ದಾನೆ. ವಿಷ್ಣುರಹಸ್ಯವೆಂಬೋ ಗ್ರಂಥದಲ್ಲಿ ಉತ್ತಮರಿಗೆ ತಾನು ಪ್ರೇರಣಾ ಮಾಡೋಣ, ತಾನು ನೀಚರಿಂದ ಪ್ರೇರಿತನಾಗೋಣಾ, ಇಂಥಾವುಗಳು ಮಾಡಿದರೆ ತನ್ನ ಬಲದಕಿವಿ ಮುಟ್ಟಬೇಕು ಈತಪ್ಪು ಮಾಡಿದರೆ ಜಲ ಸ್ಪರುಶ ಮಾಡಬೇಕು ಎಂತ ಹೇಳಿದೆ. ಪದ್ಮಪುರಾಣದಲ್ಲಿ ಸೀನೋಣ, ಅಪಾನವಾಯು ಬಿಡೋಣ, ಉಗುಳು ಸಿಡಿಯೋಣ, ಹಿರೇರಸಂಗಡ ಸುಳ್ಳು ಆಡೋಣ, ಅನುಷ್ಠಾನ ಕಾಲದಲ್ಲಿ ಅಯೋಗ್ಯರ ಸಂಗಡ ಮಾತನಾಡೋಣ ಇದಿಷ್ಟು ಮಾಡಿದರೆ ಬಲಕಿವಿ ಮುಟ್ಟಬೇಕುಯೆಂತ ಹೇಳಿದೆ

ಎರಡೂ ನೇತ್ರಗಳಲ್ಲಿ ಇಂದ್ರ ಈಶರೂಪಗಳು, ಚಕ್ಷುರಿಂದ್ರಿಯಕ್ಕೆ ಸೂರ್ಯ ಅಭಿಮಾನಿ, ಸೂರ್ಯನಲ್ಲಿ ಅತಿಷ್ಠಾಖ್ಯ ನಾರಾಯಣ, ಮೂರ್ಧ್ನಿ ರಾಜಾ, ವಾಜೀಸೀವಸು, ಅಜಾದಿಗಳು ಕಪಿಲ–ಉನ್ಮಾಮುಕ ಇವೆ ಮೊದ ಲಾದಂಥ ನಿಯಾಮಕ ರೂಪಗಳು. ಹೀಗೆ ತೈತರೇಯದಲ್ಲಿ ಐತರೇಯದಲ್ಲಿ ಹೇಳಿದೆ. ಬಲಗಣ್ಣಿನಲ್ಲಿ ಸ್ತಂಭದೋಪಾದೇಲಿ ಭಗವದ್ರೂಪ ಚಿಂತಿಸ ಬೇಕು. ಅಲ್ಲಿ ರಜ್ಜುವೋಪಾದೇಲಿ ರಮಾರೂಪ, ಅದಕ ಬದ್ಧವಾದಂಥ ಕರುವಿನೋಪಾದೇಲಿ ವಾಯುರೂಪ, ಎರಡೂ ನೇತ್ರಗಳಲ್ಲಿ ಇಪ್ಪಂಥಾ ರಕ್ತ ಗೆರೆಯಲ್ಲಿ ಗೌತಮನಾಮಕ ರುದ್ರನು, ಬಿಳಿಗೆರೆಯಲ್ಲಿ ವಶಿಷ್ಠನಾಮಕ ಇಂದ್ರ, ಕೃಷ್ಣತಾರಾದಲ್ಲಿ ಜಮದಗ್ನಿ ನಾಮಕವಹ್ನಿ, ಕೊನಿಕಣ್ಣಗಳಲ್ಲಿ (ಕನೀನಿಕಾ) ವಿಶ್ವಾಮಿತ್ರನಾಮಕ ಸೂರ್ಯ, ಕನೀನಿಕಾ ಎಂದ ಕೃಷ್ಣ ತಾರಾದಲ್ಲಿ ಆಡೋಅಂಥಾವು. ಕಣ್ಣಿನ ಉದಕದಲ್ಲಿ ಭಾರದ್ವಾಜನಾಮಕ ವರುಣ, ಕೆಳಗಿನ ರೆಪ್ಪೆಯಲ್ಲಿ ಕಸ್ಯಪನಾಮಕಳಾದಂಥ ಪೃಥ್ವಿ. ಮೇಲಿನ ರೆಪ್ಪೆಯಲ್ಲಿ ದ್ಯುನಾಮಕಳಾದಂಥ ಭಾರತೀದೇವಿ; ಹೀಗೆ ಏಳುಮಂದಿ ದೇವ

ತಿಗಳು, ಕ್ಷೀಣರಹಿತವಾದಂಥ ಮನಸ್ಸಿನಿಂದ ಭಗವಂತನನ್ನು ಉಪಾಸನಾ ಮಾಡುತ್ತಾರೆ. ಪ್ರಮಾಣ ಬೃಹದಾರಣ್ಯಕದಲ್ಲಿ ಹೇಳಿದೆ.

ಇನ್ನು ಅವಸ್ಥಾತ್ರಯ ವಿಚಾರ

ದಕ್ಷಣಾಕ್ಷಿಯಲ್ಲಿ ವಿಶ್ವನಾಮಕ ಅನಿರುದ್ಧನು, ಆತಗ ಎರಡು ಪಾದ ಐದುಹಸ್ತ, ಆಸಿನೆಗೊಂಡಿಲ್ರೋಸಾವಿಯಲಿ ಮಧ್ಯದಲ್ಲಿ ಇದ್ದಮ್ನು. ಆತಗೆ ಹತ್ತೊಂಭತ್ತು ಮುಖ; ಆ ಮುಖಗಳ ಮಧ್ಯದಲ್ಲಿ ಗಜಮುಖ ಒಂದು. ಉಭಯ ಪಾರ್ಶ್ವಗಳಲ್ಲಿ ಹದಿನೆಂಟು, ಅಂತೂಕೂಡಿ ಹತ್ತೊಂಭತ್ತು ಮುಖ. ಹೀಗೆ ಮಾಂಡೂಕದಲ್ಲಿ ಹೇಳಿದೆ. ಇಂಥಾ ಅದ್ಭುತವಾದಂಥ ವಿಶ್ವನ ರೂಪವು ಅಷ್ಟದಿಕ್ಪಾಲಕರಿಂದ ಸೇವಿತವಾದಂಥಾದ್ದು. ಈತನೇವೆ ಅಶೇಷ ಜೀವರಿಗೆ ಜಾಗ್ರತಾವಸ್ಥಿ ಪ್ರೇರಕನಾದಂಥಾತನು ಹೀಗೆ ಬೃಹದಾರಣ್ಯದಲ್ಲಿ ಹೇಳಿದೆ.

ತರುವಾಯ ಕಂಠದಲ್ಲಿ ಉಪಾನನಾಮಕ ವಾಯುನಿಂದ ಸೇವಿತನಾದಂಥಾ ತೈಜಸನಾಮಕ ಪ್ರದ್ಯುಮ್ನು, ಆತನು ವಿಶ್ವನೋಪಾದಿ ಮುಖ ಹಸ್ತಾದಿಗಳಿಂದ ಯುಕ್ತನಾದಂಥಾತನು. ಆ ತೈಜಸನೇವೆ ಸರ್ವಜೀವರಿಗೆ ಸ್ವಪ್ನಾವಸ್ಥಿ ಪ್ರೇರಕನಾದಂಥಾತನು. ಮಾಂಡುಕದಲ್ಲಿ ಹೇಳಿದೆ.

ಹೃತ್ಪದ್ಮಕರ್ಣಿಕಾಗ್ರದಲ್ಲಿ ಅಗ್ರೇಶನಾಮಕ ಸಂಕರುಷಣನು. ಪ್ರಾಜ್ಞನೆಯಂತ ಚಿಂತಿಸಬೇಕು. ಹೀಗೆ ಬೃಹದಾರಣ್ಯದಲ್ಲಿ ಹೇಳಿದೆ. ಈ ಪ್ರಾಜ್ಞನೇ ಸುಷುಪ್ತ್ಯವಸ್ಥಿಯಲ್ಲಿ ಪ್ರೇರಕನಾದಂಥಾತನನ್ನು ಚಿಂತಿಸಬೇಕು. ವಿಶ್ವನು ಜಾಗ್ರತಾವಸ್ಥಿಯಲ್ಲಿ ಇಷ್ಟಂಥಾ ಪದಾರ್ಥಗಳನ್ನು ತೈಜಸನು ಸ್ವಪ್ನದಲ್ಲಿರುವ ಪದಾರ್ಥಗಳನ್ನು ತೋರಿಸಧಾನೆ. ಪ್ರಾಜ್ಞನು ಸುಷುಪ್ತಿಯಲ್ಲಿ ಸುಖವನ್ನು ಕೊಡುತ್ತಾನೆ. ಹೀಗೆ ಸ್ವಪ್ನಾವಸ್ಥಾದಲ್ಲಿ ಪದಾರ್ಥಗಳನ್ನು ಸೃಜಿಸಿ, ಪರನು ಸಮರ್ಥನಾದ ಸ್ವಾಮಿ ತಾನು ಸ್ವೀಕಾರ ಮಾಡುಥಾನೆ. ಅವಸ್ಥಾತ್ರಯಗಳು ಕ್ರಮಾತ್ ತಿಳಿಯಲಿಕ್ಕೆ ಯೋಗ್ಯವಾದಂಥಾವು. ವಿಶ್ವನು ಜೀವನ ವಿಶೇಷವಾದ ಪ್ರಕಾಶವನ್ನು ತೆಗೆದುಕೊಂಡು ಕಂಠದೇಶ ಕುರಿತು ಬಂದು, ಯಾವಾಗ ತೈಜಸನಿಂದ ಸಂಸೃಷ್ಟನಾಗತಾನೋ ಆ ಕಾಲದಲ್ಲಿ ತೈಜನು ಸಾಕ್ಷಾತ್ಕಾರವಾಗಿ ವಾಸನಾಮಯ

ಪದಾರ್ಥಗಳನ್ನು ಸೃಜಿಸಿ, ಜೀವನಗೋಸ್ಕರ ತೋರಸಥಾನೆ ಅದು ಸ್ವಪ್ನಾವಸ್ಥೆಯಂತ ಕರೆಸಿಕೊಳತದೆ. ತರುವಾಯು ಆ ತೈಜಸನು, ಕಂಠದ ದಶೆಯಿಂದ ವಿಶ್ವನಿಂದ ಕೂಡಿ, ಲೀಲೆಯಿಂದ ಜೀವನ ಪ್ರಕಾಶವನ್ನು ತೆಗದುಕೊಂಡು, ಹೃತ್ಪದ್ಮಕ್ಕೆ ಬಂದು ಪ್ರಾಜ್ಞನಿಂದಾ ಆಲಿಂಗಿತನಾಗುತಾನೆ. ಆ ಕಾಲದಲ್ಲಿ ಹೃತ್ಪದ್ಮಲ್ಲಿದ್ದಂಥಾ ಪ್ರಾಣನು ಜೀವನನ್ನು ನುಂಗಿ, ರಮಾದೇವರನ್ನ ಪ್ರವೇಶಮಾಡಥಾನೆ. ಆ ರಮಾದೇವಿಯು ಪ್ರಾಣನ್ನ ಉದರದಲ್ಲಿಟ್ಟುಕೊಂಡು, ಪ್ರಾಜ್ಞನಾಮಕ ಭಗವಂತನ ಆಲಿಂಗನ ಮಾಡುತಾಳೆ. ಆ ಪ್ರಾಜ್ಞನು ಆಗ ಜೀವನಸ್ವರೂಪ ಭೂತಸುಖವು ಎತ್ಕಿಂಚತ್ ಬಿಂದುಮಾತ್ರ ಯೋಗ್ಯಜೀವರಿಗೆ ತೋರಸಥಾನೆ ತಮೋಯೋಗ್ಯರಾದಂಥಾ ಜೀವರಿಗೆ ಆನಿತ್ಯವಾದಂಥ ಸುಖವು ಸೃಜಿಸಿ ಕೊಡಥಾನೆ. ಈ ಪ್ರಕಾರ ಸುಷುಪ್ತ್ಯಾವಸ್ಥೆಯಲ್ಲಿ ಜೀವರು ಹೊರಗಿನ ಸ್ಥಿತಿ ವೊಳಗಿನ ಸ್ಥಿತಿ ವಂದೂ ತಿಳಿಯುವಂಥಾವನಾಗೋದಿಲ್ಲ. ಆ ಕಾಲದಲ್ಲಿ ಪರಮಾತ್ಮನು, ಸ್ವಪ್ನ ಪದಾರ್ಥಗಳು ನಿರ್ಮಾಣಮಾಡುವಂಥವನಾಗುತ್ತಾನೆ. ಆತನೇ ಸುಪ್ತಿ ಜೀವರ ಹೃದಯು ಇದ್ದಂಥಾತನು ಆತನು ತಾನ್ಯೈಶ್ವರ್ಯ ಕೊಡತಾನಾದ್ದರಿಂದ ಭೂತಿಯೆಂತ ಕರಿಸಿಕೋತಾನೆ. ಈ ಪ್ರಕಾರ ಯೋಗ್ಯ ಜೀವನು ಸುಪ್ತನಾಗಿರಲಾಗಿ, ವಾಯುದೇವರು 'ಭೂ,ಯೆಂದು ಶ್ವಾಸರೂಪದಿಂದ, ಭೂತಿ ಶಬ್ದವಾಚ್ಯನಾದಂಥ, ಭಗವಂತನನ್ನು ನಿರಂತರ ಕೊಂಡಾಡುತಾನೆ. ದುರ್ಜೀವನಲ್ಲಿ ವಾಯುವ್ಯಾದಿಗಳು, ಅಭೂಯೆಂತೆಂದು ಅಭೂತಿ ಶಬ್ದ ವಾಚ್ಯನಾದಂಥ ಭಗವಂತನನ್ನು. ಕೊಂಡಾಡತಾರೆ ಭೂ ಶಬ್ದ ಭೂತಿ ವಾಚಕವಾದಂಥಾದ್ದು. ದಾವಪುರುಷನು ಭೂತಿ ಶಬ್ದ ವಾಚ್ಯನಾದ ಭಗವಂತನನ್ನು ತಿಳಿಯುತ್ತಾನೋ, ಆತನು ಶೀಘ್ರ್ರದಿಂದ ಐಶ್ವರ್ಯವನ್ನು ಐದುತಾನೆ

ಪುನಃ ವಿಶ್ವನು ಜೀವನಪ್ರಕಾಶದಿಂದ ಯುಕ್ತನಾಗಿ ತೈಜಸನಿಂದ ಕೂಡಿ ಕಂಠದಿಂದ ಕುರಿತು ಬರಲಿಕ್ಕಾಗಿ ಅಲ್ಲಿ ಪುನಃ ಸ್ವಪ್ನವಾಗುತ್ತದೆ. ಆ ವಿಶ್ವನು ತೈಜಸನ ಬಿಟ್ಟು ನೇತ್ರವನ್ನು ಕುರಿತು ಬರಲಿಕ್ಕಾಗಿ ಜಾಗ್ರತಾವಸ್ಥೆಯಾಗತದೆ. ಈ ಪ್ರಕಾರ ಸಮೀಚಿನವಾಗಿ ಅವಸ್ಥಾತ್ರಯವು ತಿಳಿಯಲಿಕ್ಕೆ ತಕ್ಕದ್ದು ಹೀಗೆ ಗ್ರಂಥಾಂತರಗಳಲ್ಲಿ ಮಾಂಡುಕ ಮೊದಲಾದ ಉಪನಿಷತ್ತುಗಳಲ್ಲಿ ಹೇಳಿದೆ.

ತುರ್ಯಾಖ್ಯ (ನಾಮಕ) ವಾಸುದೇವನು ಶಿರಸ್ಸಿನ ಮೇಲಭಾಗದಲ್ಲಿ ಇದ್ದಂಥಾತನೆಂದು ಹೀಗೆ ಚಿಂತಿಸಬೇಕು. ಮಾಂಡೂಕದಲ್ಲಿ ಹೇಳಿದೆ

ಬ್ರಹ್ಮರಂಧ್ರದಲ್ಲಿ ಇದ್ದ ಬ್ರಹ್ಮನಾಡಿಯಲ್ಲಿ, ನಾರಾಯಣ ಇಹೋ ಅಂಥಾತಯಂತ ಚಿಂತಿಸಬೇಕು. ಹೀಗೆ ಐತರೇಯದಲ್ಲಿ ಹೇಳಿದೆ. ವಾಸುದೇವಕ ನಾಮಕ ವಿಷ್ಣು, ಸೂರ್ಯಮಂಡದಲ್ಲಿ ಇಹೋ ಅಂಥಾತನು ಆತನೇವೆ ಪುರುಷರ ಆಯುಷ್ಯವನ್ನು ತೆಗೆದುಕೊಳತಾನೆ. ಎಂಬೋ ಕಾರಣದಿ ಆದಿತ್ಯಾಯಂತ ಕರಿಸಿಕೊಳತಾನೆ. ಆ ವಾಸುದೇವನೇವೆ ಮನುಷ್ಯರ ದಕ್ಷಣಾಕ್ಷಿಯಲ್ಲಿ ಇದ್ದಂಥಾತನು. ಆ ವಾಸುದೇವನು ಚಕ್ಷುಮಂಡಲದಶೆಯಿಂದ, ಯಾವಾಗೆ ಹೊರಡಥಾನೋ ಆಗ ಜೀವನು ರಶ್ಮಿರಹಿತವಾದಂಥ ಸೂರ್ಯ ಮಂಡಲವನ್ನು ಕಾಣಥಾನೆ. ಆದಕಾರಣ ಪುರುಷ ಸಪ್ತ ರಾತ್ರಿಯಿಂದ ಅಧಿಕವಾಗಿ ಬದುಕುವದಿಲ್ಲ ಹೀಗೆ ಬ್ರಹದಾರಣ್ಯದಲ್ಲಿ ಹೇಳಿದೆ. ಚಕ್ಷುಸ್ಸಿನಲ್ಲಿ ಪೊಳಗಿದ್ದ, ವಾಮನ ನಾಮಕ ಭಗವಂತನು ಯಾವ ಕಾರಣ ದೆಸೆಯಿಂದ ಸಂಗರಹಿತನಾಗಿದ್ದಾನೋ, ಆ ಕಾರಣ ವಸ್ತುಗಳಿಂದ ಅಸಂಗನಾದ್ದಾನೆ ಎಂಬೋ ಕಾರಣ ವಾಮನಾಯೆಂತ ಕರೆಸಿಕೊಳತಾನೆ. ಹೀಗೆ ಬ್ರಹದಾರಣ್ಯದಲ್ಲಿ ಹೇಳಿದೆ.

ಸ್ವರ್ಗವೈದ್ಯರಾದಂಥಾ ಅಶ್ವಿನೀದೇವತೆಗಳು ನಾಸಾಭಿಮಾನಿಗಳು. ಅವರಲ್ಲಿ ಸರ್ವವ್ಯಾಧಿನಿವಾರಕವಾದಂಥಾ ಧನ್ವಂತರೀರೂಪ ಚಿಂತಿಸಬೇಕು. ಋತುಂಭರ ಋಥಾ ಎರಡು ರೂಪಗಳು ನಾಶಿಕಾಪುಟದಲ್ಲಿ ಇದ್ದಂಥಾವರು. ನಾಶಿಕಾಗ್ರದಲ್ಲಿ ಸೂರ್ಯಲೋಕವಿದೆ. ಅಲ್ಲಿ ಸೂರ್ಯನೇವೆ ಅಭಿಮಾನಿ ದೇವತಿ, ಆ ಸೂರ್ಯನಲ್ಲಿ ಸೂರ್ಯಾಂತರ್ಗನಾದ ವಿಷ್ಣುನು 'ಇರಾಮಯಾ'ಯೆಂತ ಕರಸಿಕೊಳತಾನೆ. ಈನುಸಾರಿ ಆದಂಥ ಸುಖವು ಇರಾ ಎಂತ ಕರಸಿಕೊಳತದೆ. ಹೀಗೆ ತಿಳಿದಂಥಾವನು ಪರಮಾತ್ಮನ ಲೋಕವನ್ನು ಐದುಥಾನೆ. ಹೀಗೆ ಐತರೇಯದಲ್ಲಿ ಹೇಳಿದೆ. ಊರ್ಧ್ವಶ್ವಾಸದಲ್ಲಿ ಭಾರತೀದೇವಿಯನ್ನು ಚಿಂತಿಸಬೇಕು. ಅಧಃಶ್ವಾಸದಲ್ಲಿ ಮುಖ್ಯ ಪ್ರಾಣನ್ನ ಚಿಂತಿಸಬೇಕು. ದಕ್ಷಣಶ್ವಾಸದಲ್ಲಿ ಸೂರ್ಯನು, ವಾಮಶ್ವಾಸದಲ್ಲಿ ಚಂದನನ್ನು ಚಿಂತಿಸಬೇಕು. ಈ ಶ್ವಾಸವು ಹಂಸದೇವತಾಕವಾದಂಥಾದ್ದು. ಪ್ರಾಣನಲ್ಲಿ ಪರಮಾತ್ಮನು 'ಹಂಸಾ'ಯೆಂತ ಕರೆಸಿಕೊಳತಾನೆ. ಆ ಕಾರಣ

ರೇಚಕಪೂರಕ ಕುಂಭಕಗಳಿಂದ ಮಾಡಿದ ಪ್ರಾಣಾಯಾಮವು ಪಾಪಪರಿಹಾ ರಕವಾದಂಥಾವು. ಹೀಗೆ ಬ್ರಹದಾರಣ್ಯದಲ್ಲಿ ಹೇಳಿದೆ. ಲೃ ಲೄ ಶ ಜ ಎರಡೂ ರೂಪಗಳು ಗಂಡಸ್ಥಳಗಳಲ್ಲಿ ಏಕಾತ್ಮ ಐರಸ ಎರಡೂ ರೂಪಗಳು ತುಟಿಗಳಲ್ಲಿ ಚಿಂತಿಸಬೇಕು. ಓಜೋಭೃತ ಔರಸ ಈ ಎರಡೂ ರೂಪಗಳು ದಂತಪಂಕ್ತಿಗಳಲ್ಲಿ ಚಿಂತಿಸಬೇಕು.

ಜಿಂಹದಲ್ಲಿ ವರುಣ ಅಲ್ಲಿ ಮಚ್ಛರೂಪನಿಯಾಮಕಯಂತ ಚಿಂತಿಸ ಬೇಕು.

ವಾಗೇಂದ್ರಿಯಾಭಿಮಾನಿ ವಹ್ನಿ ಆತನಲ್ಲಿ ವೃಷಾ ಸಹಿನಾಮಕರೂಪ ನಿಯಾಮಕ, ಹೀಗೆ ಬ್ರಹದಾರಣ್ಯದಲ್ಲಿ ಹೇಳಿದೆ. ಹಾಗೇ ರಾತ್ರೀಸೂಕ್ತಕ್ಕೆ ಅಧಿದೇವತಿ ನಾರಾಯಣೀರೂಪ ಚಿಂತಿಸಬೇಕು

ವಾಚಿಯಲ್ಲಿ ಅರ್ಥಗರ್ಭನಾಮಕರೂಪ, ವಾಕ್ಯಗಳಲ್ಲಿ ಸರಸ್ವತೀ ಅಭಿಮಾನಿ ಎಂತ ಬ್ರಹದಾರಣ್ಯದಲ್ಲಿ ಹೇಳಿದೆ. ಸರಸ್ವತಿಯಲ್ಲಿ ವಾಗೀಶ್ವರನಾಮಕ ಭಗವದ್ರೂಪ, ನಿಯಾಮಕರೂಪ ಚಿಂತಿಸಬೇಕು. ಆತಗೆ ಫಲಿಕುಲಿಯೆಂತ ಹೆಸರುಗಳುಂಟು. ವಾಕ್ಯಗಳಲ್ಲಿ ಇವರಲ್ಲದೇ ಹಯಗ್ರೀವ ನಾಮಕವಾದಂಥ ಸಾಕ್ಷಾತ್ ಸ್ತ್ರೀರೂಪ, ಈ ಸ್ತ್ರೀರೂಪವನ್ನು ದಾರು ಉಪಾಸನಾಮಾಡುತ್ತಾರೋ ಅವರಿಗೆ ಜ್ಞಾನಪ್ರಾಪ್ತಿಯಾಗುತ್ತದೆ. ಹೀಗೆ ಐತರೇಯ ಮತ್ತು ಛಾಂದೋಗ್ಯದಲ್ಲಿ ಹೇಳಿದೆ.

ಎರಡೂ ಹಸ್ತಗಳಿಗೆ ದಕ್ಷಪ್ರಜೇಶ್ವರನು ಅಭಿಮಾನಿ. ಆತನಲ್ಲಿ ಮಧುಸೂದನನಾಮಕ ಭಗವದ್ರೂಪ, ಹಸ್ತಸಂಧಿಗಳಲ್ಲಿ ಕಪಿಲಾದಿ ಐದುರೂಪಗಳ ಚಿಂತಿಸಬೇಕು. ಐದುರೂಪಗಳು ಮಾತೃಕಾವರಣದೇವತೆಗಳು. ಅಂಗುಷ್ಟಮೂಲ ಪ್ರದೇಶದಲ್ಲಿ ಬ್ರಹ್ಮತೀರ್ಥಯೆಂತ ಕರೆಸಿಕೊಳತದೆ. ಕನಿಷ್ಟಕಾ ಮೂಲಪ್ರದೇಶದಲ್ಲಿ ಪ್ರಜಾಪತಿನಾಮಕ ಋಷಿತೀರ್ಥವು. ತರ್ಜನೀ ಮೂಲದೇಶದಲ್ಲಿ ಪೈತೃಕ ತೀರ್ಥವು; ನಾಲ್ಕು ಅಂಗುಲಿ ಅಗ್ರಭಾಗದಲ್ಲಿ ದೇವತೀರ್ಥವು; ಕರಮಧ್ಯದಲ್ಲಿ ಅಗ್ನಿತೀರ್ಥವು. ಈ ಪ್ರಕಾರ ಪಂಚತೀರ್ಥವು ತಿಳಿದು, ಆ ತೀರ್ಥ ತೀರ್ಥಾಭಿಮಾನಿಗಳ ದ್ವಾರಾಮಾಡಿದ ಕರ್ಮವು ಅಕ್ಷಯವಾಗೋದು. ಹೀಗೆ ಮಾರ್ಕಾಂಡೇಯ ಪುರಾಣದಲ್ಲಿ ಹೇಳಿದೆ.

ವಾಮಹಸ್ತದಲ್ಲಿ ಶ್ರೀಧರನಾಮಕ ಭಗವದ್ರೂಪ ಹಸ್ತಸಂಧಿಗಳಲ್ಲಿ ಶಾರ್ಙ್ಗಾದಿ ಐದುರೂಪಗಳು.

ಬೊಜ್ಜೆಯಲ್ಲಿ ಮನುನಾಮಕರೂಪ ಚಿಂತಿಸಬೇಕು. ಪರಾಯಂಬೋರೂಪ ದಕ್ಷಣಪಾರ್ಶ್ವದಲ್ಲಿ, ವಾಮಪಾರ್ಶ್ವದಲ್ಲಿ ಫಲೀಯಂಬೋರೂಪ ಚಿಂತಿಸಬೇಕು. ಯಜ್ಞನಾಮಕ ಹೃದಯಲ್ಲಿ ಬಲಿನಾಮಕ ಪೃಷ್ಠದಲ್ಲಿ, ಕಟಿದೇಶದಲ್ಲಿ ಅನಿರುದ್ಧನಾಮಕರೂಪ ಚಿಂತಿಸಬೇಕು. ಗುಹ್ಯದಲ್ಲಿ ಸ್ವಾಯಂಭುವನು ಅಭಿಮಾನಿ ಅಲ್ಲಿ' 'ಭಗ'ವನ್ನಾಮಕ ಭಗವದ್ರೂಪ ಚಿಂತಿಸಬೇಕು. ಆ ಭಗವನ್ನಾಮಕ ಪ್ರಜಾಪತಿಯೆಂತ ಕರಿಸಿಕೋತಾನೆ. ರೇತಸ್ಸಿನಲ್ಲಿ ಸೂರ್ಯ ಅಭಿಮಾನಿ ಅಲ್ಲಿ ಆದಿತ್ಯನಾಮಕ ಭಗವದ್ರೂಪ ಚಿಂತಿಸಬೇಕು. ಪೂರ್ಣಾತ್ಮಕವಾದಂಥಾ ರೇತಸ್ಸಿನಲ್ಲಿ ಪುನ್ನಾಮಕ ಭಗವದ್ರೂಪ ಆದಕಾರಣವಾಗಿ, ಪತ್ನಿಯು ಆ ಶುಕ್ಲನ ಗರ್ಭದ ದಶೆಯಿಂದ ಅಸಹ್ಯಬಡಬಾರದು ಇದೇ ಪ್ರಕಾರ ಸ್ತ್ರೀಲೋಹಿತದಲ್ಲಿ ಅಗ್ನಿದೇವರು ಅಭಿಮಾನಿ, ಆತನಲ್ಲಿ ಅಗ್ನಿನಾಮಕ ಭಗವದ್ರೂಪ ಚಿಂತಿಸಬೇಕು. ಸ್ತ್ರೀಲೋಹಿತದ ಸ್ತ್ರೀರೂಪವು, ಅಂಥ ಸ್ತ್ರೀಲೋಹಿತ ದಶೆಯಿಂದ ಪುರುಷ ಅಹಸ್ಯಬಡಬಾರದು. ಪುರುಷ ಸಂಯೋಗದಿಂದ ಪಿತೃನಲ್ಲಿ ಇದ್ದಂಥಾ ಭಗವಂತನು ಪುತ್ರತ್ವವನ್ನು ಐದುತ್ತಾನೆ. ಅಂಶಾಂಶಿ ಇಚ್ಛೇ ಇತ್ತೇ ಪುತ್ರವನ್ನು ಐದುತಾನೆ. ಅಂಶಾಂಶಿತ್ವ ಇಲ್ಲದೇ ಹೋದರೆ ಸಂತತಿ ಐದೋದಿಲ್ಲ. ಹೀಗೆ ಐತರೇಯದಲ್ಲಿ ಹೇಳಿದೆ.

ಮಿತ್ರನಾಮಕ ಸೂರ್ಯ ಅಪಾನನಾಮಕ ವಾಯು ಇವರಿಬ್ಬರು, ವಾಯುನಲ್ಲಿ ಇದ್ದಂಥಾವರು. ಅವರಲ್ಲಿ ಪ್ರದ್ಯುಮ್ನನಾಮಕ ಭಗವಂತನನ್ನು ಚಿಂತಿಸಬೇಕು.

ದಕ್ಷಿಣ (ತೊಡಿ) ಕಾಲು ಸಂಧಿಗಳಲ್ಲಿ, ಟಂಕಾದ್ಯಾದಿ ಐದು ಭಗವದ್ರೂಪಗಳು. ವಾಮ (ತೊಡಿ) ಕಾಲು ಸಂಧಿಗಳಲ್ಲಿ ತಾರಾದಿ ಐದು ಭಗವದ್ರೂಪಗಳು, ಎರಡೂ ಪಾದಗಳಲ್ಲಿ ಜಯಂತನು ಅಭಿಮಾನಿ ಆತನಲ್ಲಿ ಯಜ್ಞನಾಮಕ ನಾರಾಯಣ ನಿಯಾಮಕರೂಪ ಚಿಂತಿಸಬೇಕು.

ದಕ್ಷಿಣ ಪಾದಾಂಗುಷ್ಠದಲ್ಲಿ ವಾಯುದೇವರ ಅಧಿಷ್ಠಾನದಲ್ಲಿ, ದೇಹ ಧಾರಣತ್ವದಿಂದ ನಾರಾಯಣನು ತೀರ್ಥರೂಪನಾಗಿ ಇದ್ದಾನೆಯಂತ ಚಿಂತಿಸಬೇಕು. ಅಲ್ಲಿ ಸಮಸ್ತವಾದಂಥ ತೀರ್ಥಗಳು, ಭಗವಂತನ ಆಜ್ಞದಿಂದ ಅವೆ. ಆದಕಾರಣವಾಗಿ ವಿಪ್ರಪಾದಪ್ರಕ್ಷಾಲನೋದಕವು ಅತ್ಯಂತ ಪಾವನವಾದಂಥವು

ವಾಕ್, ಪ್ರಾಣ, ಪ್ರಕ್ (ನೇತ್ರ) ಶ್ರೋತ್ರ ಮನೋಹೃದಯ ಈ ಆರುಸ್ಥಾನದಲ್ಲಿ ಆಕಾಶಾಖ್ಯ ರಮಾರೂಪ ಚಿಂತಿಸಬೇಕು. ಪ್ರಾಜ್ಞ, ಪ್ರಿಯ, ಸತ್ಯ, ಆನಂದ, ಅನಂತಾ, ಸ್ಥಿತೀ ಈ ಆರು ವಿಷ್ಣುರೂಪಗಳನ್ನು ಕ್ರಮಾತ್ ಚಿಂತಿಸಬೇಕು. ಈ ರೂಪಗಳನ್ನು ದಾವ ಜ್ಞಾನಿಯು ತಿಳಿಯುತ್ತಾನೋ ಅವನು ಅರಿಷಡ್ವರ್ಗಗಳಿಂದ ಜೈಸುತ್ತಾನೆ ಹೀಗೆ ಬ್ರಹದಾರಣ್ಯದಲ್ಲಿ ಹೇಳಿದೆ.

ಹೃದಯಾಕಾಶದಲ್ಲಿ ವ್ಯಾಪ್ತವಾದಂಥ, ಪುರುಷಾಖ್ಯವಾದಂಥ ಅನಿರುದ್ಧನನ್ನು ಚಿಂತಿಸಬೇಕು. ಈತನೇ ಇಂದ್ರಯೋನಿಯಂತ ಕರೆಸಿಕೊಳಥಾನೆ. ಶಿರಸ್ಸಿನಾ ಅಂತ್ಯಭಾಗದಲ್ಲಿ 'ವೀತಿ' ಎಂಬೋ ಸಂಕರುಷಣ ನಾಮಕ, ಶಿರಸ್ಸಿನಘಾಲ ಊರ್ಧ್ವಭಾಗದಲ್ಲಿ 'ವ್ಯಯಃ' ನಾಮಕ ವಾಸುದೇವನು ಇರತಾನೆ. ಹೃದಯಾಂತದಲ್ಲಿ ಇದ್ದಂಥಾ ವಿಷ್ಣುನು ವಾಮನಾ ಯೆಂತ ಕರೆಸಿಕೊಳ್ಳುತ್ತಾನೆ. ವಾಮನನಾಮಕ ವಿಷ್ಣು ಪ್ರಾಣಾಪಾನಾದಿಗಳಿಗೆ ಚೇಷ್ಟಕನಾಗಿ ಸಮಸ್ತ ದೇವತೆಗಳಿಂದ ಉಪಾಸ್ಯನಾಗಿರುತ್ತಾನೆ ಹೀಗೆ ತೈತರೇಯದಲ್ಲಿ ಹೇಳಿದೆ.

ತತ್ವಾಭಿಮಾನಿ ದೇವತೆಗಳಲ್ಲಿ ಪ್ರಾಣಪಂಚಾಶನ್ ಭಗವದ್ರೂಪಗಳು ತಂತ್ರಸಾರ ಮೂರನೇ ಅಧ್ಯಾಯದಲ್ಲಿ ಹೇಳಿದೆ.

ಹೃತ್ಪದ್ಮದಲ್ಲಿ ಇಪ್ಪಂಥಾ ಉಪಾಸ್ಯನಾದಂಥ, ವೇದಪ್ರತಿಪಾದ್ಯನಾದಂಥ ಗಾಯತ್ರೀ ಶಬ್ದವಾಚ್ಯ ಭಗವದ್ರೂಪ, ಆ ಗಾಯತ್ರಿ ಅಂತ್ಯದಲ್ಲಿ ಇದ್ದ ಕಾರಣ, ಗಾಯತ್ರಿಯೆಂತ ಕರಿಸಿಕೊಳ್ಳುತ್ತಾನೆ. ದಾವ ಕಾರಣದಶೆಯಿಂದ ಗಾನಮಾಡೋ ಅಂಥಾ ವರಗಳನ್ನು, ರಕ್ಷಿಸುತ್ತಾನೆ ಎಂಬೋ ಕಾರಣ, ಗಾಯಿತ್ರಿ ಶಬ್ದವಾಚ್ಯನಾಗಿ ಇದ್ದಾನೆ. ಆ ಗಾಯಿತ್ರಿ ಎಂಬೋ ವಿಷ್ಣುಃ ಸಪ್ರಾಣಾ ಯೆಂತ ಕರಸಿಕೊಳತಾನೆ.

೧. ಆತನು ಪ್ರಾಣಾಗ್ನಿಯಲ್ಲಿದ್ದ ಪ್ರಾಣನಾಮಕ ಸೂರ್ಯನಾದ ದ್ವಾರಪಾಲಕರಿಂದ ಉಪಾಸ್ಯನು ಮುಖದಲ್ಲಿದ್ದಂಥಾ ಆಹವನೀಯಾಗ್ನಿ ಯಲ್ಲಿ ಹೃದಯದಲ್ಲಿದ್ದಂಥಾ ಪ್ರಾಣನು ಹೋತೃ, ಪ್ರಾಣಾಗ್ನಿಯಲ್ಲಿದ್ದಂಥಾ ಪ್ರಾಣನಾಮಕಸೂರ್ಯನು. ಪೂರ್ವದ್ವಾರಪಾಲಕ, ಪ್ರಾಣಾದಿಗಳ ಅಧಿಷ್ಠಾನ ತಿಳಿದು ಕ್ರಮದಿಂದ ಆಹುತಿಗಳಕೊಡೋಣದರಿಂದ ಪ್ರಾಣನಾಮಕ ನಾದಂಥ ಅನಿರುದ್ಧಾತ್ಮಕ ವೈಶ್ವಾನರ ಭಗವಂತನು ತೃಪ್ತಿ ಐದುತ್ತಾನೆ. ೨. ನಾಭಿಯಲ್ಲಿದ್ದ ದಕ್ಷಣಾಗ್ನಿಯಲ್ಲಿದ್ದ ದಕ್ಷಣಾಗ್ನಿಯಲ್ಲಿ, ಸರ್ವ ಶರೀರ ಗತನಾದಂಥ ವ್ಯಾನನಾಮಕವಾಯು, ಋತ್ವಿಕ ಅಗ್ನ್ಯಂತರ್ಗತ ಪರಮಾತ್ಮಗೆ, ವ್ಯಾನನಾಮಕಚಂದ್ರ, ದಕ್ಷಣದ್ವಾರಪಾಲಕ, ವ್ಯಾನನಾಮಕಚಂದ್ರನ ಅಧಿಷ್ಠಾನ ತಿಳಿದು, ಕ್ರಮದಿಂದ ಆಹುತಿಕೊಡೋಣ ಇದರಿಂದ ವ್ಯಾನನಾಮಕನಾದಂಥ ಪ್ರದ್ಯುಮ್ನಾತ್ಮಕ ವೈಶ್ವಾನರನು ತೃಪ್ತಿಯಾಗುತ್ತಾನೆ. ೩. ಹೃದಯದಲ್ಲಿದ್ದಂಥಾ ಗಾರ್ಹಸ್ಪತ್ಯಾಗ್ನಿಯಲ್ಲಿ ಅಪಾನನಾಮಕವಾಯು ಉದ್ಗಾತೃ, ಅಪಾನಾಗ್ನಿ ಅಂತರ್ಗತನಾದಂಥ ಪರಮಾತ್ಮಗೆ, ಪಶ್ಚಿಮ ದ್ವಾರ ಪಾಲಕನಾದ ಅಪಾನಾಗ್ನಿ ಆತನ ದ್ವಾರದಿಂದ ಆಹುತಿ ಕೊಡೋಣದ್ದರಿಂದ ಅಪಾನನಾಮಕನಾದಂಥ ಸಂಕರುಷಣಾತ್ಮಕ ವೈಶ್ವಾನರ ತೃಪ್ತನಾಗುತ್ತಾನೆ. ೪. ನಾಭಿಯು ಉತ್ತರಭಾಗದಲ್ಲಿ ಇದ್ದಂಥಾ ಅವಸಭ್ಯಾಗ್ನಿಯಲ್ಲಿ ಸಮಾನ ವಾಯುನು ಎಜಮಾನನು. ಸಮಾಗ್ನಿಗತನಾದಂಥಾ ಪರಮಾತ್ಮಗೆ ಸಮಾನ ನಾಮಕ ವರುಣನು, ಉತ್ತರದ್ವಾರಪಾಲಕನು ಸಮಾನಾಗ್ನಿ ದ್ವಾರದಿಂದ ಆಹುತಿಕೊಡೋಣದರಿಂದ, ಸಮಾನನಾಮಕ ವಾಸುದೇವಾತ್ಮಕ ವೈಶ್ವಾನರ ತೃಪ್ತನಾಗುತ್ತಾನೆ. ೫. ನಾಭಿ ದಕ್ಷಣ ಭಾಗದಲ್ಲಿ ಇದ್ದಂಥಾ ಸಭ್ಯಾಗ್ನಿಯಲ್ಲಿ, ಕಂಠಗತನಾದಂಥ ಉದಾನನಾಮಕ ವಾಯುನೇ ಅಧ್ವರ್ಯನು. ಆಕಾಶನಾಮಿಕಳಾದ ರಮಾದೇವಿಯಿಂದ, ಆವಿಷ್ಟನಾದಂಥ ಉದಾನ ವಾಯು, ಊರ್ಧ್ವಶ್ವಾಸಉಳ್ಳಾತನು. ಆ ಉದಾನವಾಯು ಅಧಿಷ್ಠಾನ ಕ್ರಮದಿಂದ, ಆಹುತಿ ಕೊಡೋಣದರ ದಶೆಯಿಂದ, ಉದಾನಾಖ್ಯ ನಾರಾಯಣಾತ್ಮಕ, ವೈಶ್ವಾನರ ತೃಪ್ತನಾಗುತ್ತಾನೆ. ಪಂಚಪ್ರಾಣಾತ್ಮಕನಾದಂಥಾ ವಾಯು ಯಜ್ಞದಲ್ಲಿ ಇದ್ದಂಥಾತನು. ಆದಕಾರಣ ವಾಯುದೇವರು ಯಜ್ಞನಾಮಕಾ ಎಂತ ಕರೆಸಿಕೊಳತಾನೆ. ಆ ಯಜ್ಞನಾಮಕ ವಾಯು

ನೇವೆ ಅಗ್ನಿ ಅಂತರ್ಗತನಾದಂಥ ವೈಶ್ವಾನರನಾಮಕ ಪರಮಾತ್ಮನ ಯಾಗ ಮಾಡಥಾನೆ. ಆದಕಾರಣ ಆ ಜೀವನಿಂದ ಕೊಡಲ್ಪಟ್ಟಂಥಾ ಉತ್ತಮ ವಾದಂಥ ಅನ್ನವನ್ನು ಪಂಚಪ್ರಾಣಾದಿಗಳಿಂದ ಯುಕ್ತನಾದಂಥಾ ಪರ ಮಾತ್ಮನು ಪಚನಮಾಡುತ್ತಾನೆ. ಈತನು ಶುಭಸಾರವನ್ನು ಸ್ವೀಕರಿಸು ತ್ತಾನೆ ಅಶುಭರಸವನ್ನು ಸ್ವೀಕರಿಸುವದಿಲ್ಲ. ಹೀಗೆ ಐತರೇಯದಲ್ಲಿ ಹೇಳಿದೆ.

ಪೂರ್ವೋಕ್ತ ಪ್ರಕಾರದಿಂದ ಪ್ರಾಣಾಗ್ನಿಹೋತ್ರ ಮಾಡುವದರಿಂದ ವೈಶ್ವಾನರನಾಮಕ ಭಗವಂತನು ತೃಪ್ತನಾಗುತ್ತಾನೆ ಹಾಗೆ ದ್ವಾರಪಾಲಕ ದೇವತೆಗಳು ತೃಪ್ತರಾಗುತ್ತಾರೆ. ಇಂಥ ಪ್ರಾಣಾಗ್ನಿ ವಿಧಿಯನ್ನು ಸಾಧಕ ಮಾಡೋ ಅಂಥ ಪುರುಷನು ನಾಶರಹಿತವಾದಂಥ ಪದವನ್ನು ಐದುಥಾನೆ. ಕೆಲವರು ಪ್ರಾಣಾಗ್ನಿಖಂಡೋಕ್ತ ಪ್ರಕಾರದಿಂದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಹೀಗೆ ಕ್ರಮದಿಂದ ಅವಸ್ಥಾಭೇದವನ್ನು ಅಂಗಿಕರಿಸಿ, ಪ್ರಾಣಪಂಚವನ್ನು ಹೋಮಿಸುತ್ತಾರೆ. ಜಠರಾಗ್ನಿಯಲ್ಲಿದ್ದಂಥ ಅಗ್ನಿನಾ ಮಕ ಪರಮಾತ್ಮನ್ನ ವಾಯುದೇವರು ಸರ್ವದಾ, ಅವಿಚ್ಛಿನ್ನವಾಗಿ ಘೋಷ ರೂಪದಿಂದ ಸ್ತೋತ್ರಮಾಡುತ್ತಾರೆ. ಇದಕ್ಕೆ ದೃಷ್ಟಾಂತ ಏನುಯೆಂದರೆ, ಎರಡು ಕಿವಿಯಲ್ಲಿ ಬೆರಳು ಇಟ್ಟರೆ, ಸರ್ವರಿಗೆ ಪರಮಮಂಗಳಕರವಾದಂಥ ಶಬ್ದವನ್ನು ಅದ್ಯಾಪಿ ಕೇಳಥಾರೆ. ಇಂಥ ಘೋಷರೂಪವಾದಂಥ ಪರಮ ಮಂಗಳಕರವಾದ ಸ್ತುತಿಯು ದಾವಪ್ರಾಣಿಯಿಂದ ಕೇಳಲ್ಪಡುವದಿಲ್ಲ. ಆ ಪ್ರಾಣಿಯು ದೇಹದಡಶಿಯಿಂದ ಶೀಘ್ರದಿಂದ ಉತ್ಕ್ರಮಣವನ್ನು ಐದು ತಾನೆ. ದಾವಾತನು ಈ ಪ್ರಕಾರದಿಂದ ತಿಳಿಯುತ್ತಾನೆಯೋ, ಭಗವಂತನು ಆತನಿಂದ ಸ್ತುತ್ಯನಾಗತಾನೆ. ಪಂಚಾಗ್ನಿ ವಿಷಯದಲ್ಲಿ ಛಾಂದೋಗ್ಯದಲ್ಲಿ ಭಗವದ್ಗೀತೆಯಲ್ಲಿ ಹೇಳದೆ.

ದೇಹಾಖ್ಯರಥ ಪ್ರಕರಣವು

ದಿವ್ಯವಾದಂಥಾ ವೈಷ್ಣವ ದೇಹಾಖ್ಯರಥವು ಪರಮಾತ್ಮಗೆ ಆಶ್ರಯ ವಾದವು. ಸೂರ್ಯನು ಸೂರ್ಯನ ಪತ್ನಿ ಸಂಜ್ಞಾ ಇವರಿಬ್ಬರೂ, ವಾಜಿ ರೂಪದಿಂದ ಚಕ್ಷುರ್ದ್ವಯಗಳಲ್ಲಿ ಆಶ್ರಿತರಾಗಿ ಇದ್ದಂಥಾವರು. ಅದೇ ಪ್ರಕಾರ ಚಂದ್ರನು, ಚಂದ್ರಪತ್ನಿ ರೋಹಿಣಿ ಇವರಿಬ್ಬರು ಹಯಾಕಾರರಾಗಿ,

ಹೊತ್ತಂಥವರು ಎರಡು ಕರಣಗಳಲ್ಲಿ ಈ ಪ್ರಕಾರ ನಾಲ್ವರು ರಥವನ್ನು ವಹಿಸಿದ್ದಾರೆ. ಆ ಅಶ್ವಗಳಿಗೆ ಬದ್ಧವಾದಂಥ ವಾಚಿಸ್ಥಿತವಾದಂಥ ಉಮಾ ದೇವಿಯು ರಜ್ಜುರೂಪಗಳಾಗಿ ಇದ್ದಾಳೆ ಮನಸ್ಥಿತನಾದಂಥ ಉಮಾ ಪತಿಯು ಆ ರಥಕ್ಕೆ ಸಾರಥಿಯಾಗಿದ್ದಾನೆ ಆ ರಥದಲ್ಲಿ ಮುಖ್ಯ ಪ್ರಾಣ ದೇವರು ಇದ್ದಾರೆ ಆ ಮುಖ್ಯ ಪ್ರಾಣನಲ್ಲಿ ಉತ್ಕೃಷ್ಟನಾದಂಥ, ಜ್ಞಾನ ರೂಪದದಕ್ಷಿಯಿಂದ ಪ್ರಾಣನಾಮಕ ಭಗವಂತನು ಅಶ್ವ (ರಥಿಕ) ಶಬ್ದ ವಾಚ್ಯನಾಗಿ ಇರತಾನೆ ಆದ ಕಾರಣ ವೈಷ್ಣವರಾದಂಥವರು ಸರ್ವದಾ ಈ ದೇಹವನ್ನು ಊರ್ಧ್ವಪುಂಡ್ರಗಳಿಂದ ಅಲಂಕರಿಸಬೇಕು. ಹೀಗೆ ಐತ ರೇಯದಲ್ಲಿ ಹೇಳಿದೆ.

ಇಂಥ ದೇಹ ವೃಷಣಾಸನ ಮಧ್ಯದಲ್ಲಿ ಗಡ್ಡೆ ಇದೆ. ಇದು ಎಂಥಾದು ಎಂದರೆ ಒಟುವಾದಂಥಾದ್ದು, ಎರಡು ಅಂಗುಲಿ ಉದ್ದವಾದಂಥಾದ್ದು. ನಾಲ್ಕು ಅಂಗುಲಿ (ಬೆಳು) ವಿಸ್ತಾರವಾದಂಥ ಅತ್ಯಂತವಾಗಿ ದೇಹಕ್ಕ ಆಧಾರರೂಪವಾದಂಥಾದ್ದು ಸರ್ವನಾಡಿಗಳಿಗೆ ಮೂಲಾಧಾರವಾಗಿ, ಸ್ಥಾನಯಂತ ಕರೆಸಿಕೊಳ್ಳತದೆ ಆ ಕಂದ ಮಧ್ಯದೇಶ ಆರಂಭಿಸಿ ಶಿರಸ್ಸಿನ ಕಡಿಪರ್ಯಂತರದಲ್ಲಿ ಹೋದು. ಬಿದರಿನೋಪಾದೇಲಿ ನೆಟ್ಟಕವಾಗಿ ಸೂಕ್ಷ್ಮವಾದಂಥಾ ಸುಷುಮ್ನಾನಾಮ್ನಿ ನಾಡಿ ತಿಳಿಯುಲಿಕ್ಕೆತಕ್ಕದ್ದು. ಆದಕ್ಕೆ ಐದು ಅಂಶಗಳು ವಜ್ರಿಕಾ, ಆರ್ಯಾ. ಪ್ರಕಾಶಿನೀ, ವೈದ್ಯುತಾ, ಬ್ರಹ್ಮನಾಡಿ ಎಂತ ಪಂಚಾಂಶವುಳ್ಳದ್ದು

ಸುಷುಮ್ನಾನಾಡಿ, ಪೃಷ್ಟಭಾಗದಲ್ಲಿ ಪಶ್ಚಿಮಕೆ, ವಜ್ರಿಕಾ ಎಂಬ ನಾಡಿಯಲ್ಲಿ ಹರಿದ್ವರ್ಣ ಉಳ್ಳಂತಾ ಪ್ರದ್ಯುಮ್ನನು ಇದ್ದಾನೆಯೆಂತ ಚಿಂತಿಸ ಬೇಕು. ಸುಷುಮ್ನಾವಾಮಭಾಗದಲ್ಲಿ ಆರ್ಯಾ ನೀಲವರ್ಣನಾದ ಅನಿ ರುದ್ಧ ಇದ್ದಾನೆಯಂತ ಚಿಂತಿಸಬೇಕು. ಸುಷುಮ್ನಾ ಮುಂಭಾಗದಲ್ಲಿ ಪ್ರಕಾಶಿನಿ ಎಂಬೋ ನಾಡಿಯಲ್ಲಿ ಶ್ವೇತವರ್ಣನಾದಂಥ ವಾಸುದೇವ ಇದ್ದಾನೆ. ಸುಷುಮ್ನಾ ದಕ್ಷಣಭಾಗದಲ್ಲಿ ವೈದ್ಯುತಾ ಎಂಬೋ ನಾಡಿ ಯಲ್ಲಿ, ಪಿಂಗಳವರ್ಣನಾದ ಸಂಕರುಷಣನು ಇದ್ದಾನೆ. ಸುಷುಮ್ನಾ ಮಧ್ಯಭಾಗದಲ್ಲಿ ಬ್ರಹ್ಮಾಎಂಬೋ ನಾಡಿ, ಅಲ್ಲಿ ರಕ್ತವರಣನಾದಂಥ ಶ್ರೀ

ನಾರಾಯಣನು ಇದ್ದಾನೆಂತ ಹೀಗೆ ಚಿಂತಿಸಬೇಕು. ಹೀಗ ತಂತ್ರಸಾ ದಲ್ಲಿ ಹೇಳಿದೆ.

ಸುಷುಮ್ನಾನಾಡಿಯಲ್ಲಿದ್ದ ಕಮಲಗಳ ವಿವರ

೧. ಸುಷುಮ್ನಾ ಮೂಲದೇಶ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಧ್ಯದಲ್ಲಿ ಒಂದು ನಾಲ್ಕುದಳವುಳ್ಳ ಐದುಕಮಲವುಳ್ಳಂಥವುಯೆಂ ಪ್ರಕಾಶ ಸಂಹಿತೆಯಲ್ಲಿ ಹೇಳಿದೆ. ಅವುಗಳಲ್ಲಿ ಅನಿರುದ್ಧಾದಿ ಐದುರೂಪ ಚಿಂತಿಸಬೇಕು. (ಮತ್ತು ನಾಲ್ಕುದಳಗಳಲ್ಲಿ ಬುಧ, ಬೃಹಸ್ಪತಿ, ಚಂದ್ರ, ಶನಿ ಈ ನಾಲ್ಕು ದೇವತೆಗಳು ದಳಾಭಿಮಾನಿಗಳು. ಈ ಚತುರ್ದಳ ಕಮಲಕ್ಕೆ ಸ್ವಾಯಂಭು ಮನು ಅಭಿಮಾನಿ ಭೂಲೋಕವೆನಿಸಿಕೊಳ್ಳುತ್ತದೆ.)

೨. ತರುವಾಯ ಸುಷುಮ್ನಾ ಸಂಸಕ್ತವಾದಂಥ ನಾಭಿಯಲ್ಲಿ ಐದು ಕಮಲಗಳು, ರಕ್ತವರ್ಣವುಳ್ಳಂಥ ಷಡ್ದಳವುಳ್ಳಂಥಾವು. ಅವುಗಳಲ್ಲಿ ಪ್ರದ್ಯುಮ್ನಾದಿ ಐದುರೂಪಗಳನ್ನು ಚಿಂತಿಸಬೇಕು. (ಈ ಆರುದಳ ಕಮಲಕ್ಕೆ ಗಣಪತಿ ಅಭಿಮಾನಿ ಕಮಲದಳಗಳಲ್ಲಿ ಶ್ರೀಹರಿಯ ರಾಣಿಯರು, ನೀಲ, ಭದ್ರಾ, ಮಿತ್ರವಿಂದ, ಜಾಂಬವತಿ, ಕಾಳಿಂದಿ, ಲಕ್ಷಣ ಆರು ಜನ ದಳಾಭಿಮಾನಿಗಳು.)

೩. ಸುಷುಮ್ನಾ ಹೃತ್ಪದ್ಮದಲ್ಲಿ ಅಷ್ಟಪತ್ರವುಳ್ಳ ಕಮಲ ರಕ್ತವರ್ಣವುಳ್ಳದ್ದು. ಮೂವತ್ತೆರಡು ಕೇಶರವುಳ್ಳಂಥಾದ್ದು ನಿರ್ದುಷ್ಟವಾದಂಥ ರಕ್ತವರ್ಣವುಳ್ಳಂಥಾ ಒಂದು ಕಮಲ ಆ ಹೃತ್ಪದ್ಮಕಮಲದಳ ಒಳಭಾಗಕ್ಕೆ ಕಿಂಚಿತು ಬಾಗಿದಕಾರಣ ಅಧೋಮುಖ ಎಂತ ಕರೆಸಿಕೊಳ್ಳುತ್ತದೆ ಆ ಕಮಲವು ನಾಡಿದೆಸೆಯಿಂದ ಹೊರಟ ಕಾರಣ ಊರ್ಧ್ವನಾಳಾಯೆಂತ ಕರಿಕೊಳ್ಳುತ್ತದೆ. ಇಂಥಾ ಪದ್ಮವುಳ್ಳಂಥಾ ಉರಸಂಪುಟಯೆಂತ ಕರೆಸಿಕೊಳ್ಳುತ್ತದೆ ಆ ಹೃತ್ಪದ್ಮ ನಾಲ್ಕು ಪಾರ್ಶ್ವಗಳಲ್ಲಿ ಇದ್ದಂಥಾ, ಅಷ್ಟಪತ್ರವುಳ್ಳಂಥಾ ನಾಲ್ಕು ಕಮಲಗಳು. ಸಂಕರುಷಣಾದಿ ಐದು ರೂಪಗಳು. ಒಟ್ಟು ಅವುಗಳಲ್ಲಿ ಚಿಂತಿಸಬೇಕು. ಹೀಗೆ ಹೃತ್ಪದ್ಮ ಸಹಿತ ಐದು ಕಮಲಗಳು, ಆ ಕರ್ಣಿಕಾಬಿಂಬದಲ್ಲಿದ್ದಂಥಾ ನಾರಾಯಣರೂಪವನ್ನು ಚಿಂತಿಸಬೇಕು. (ಈ ಅಷ್ಟದಳಗಳಲ್ಲಿ ಪೂರ್ವವಿವಿಡಿದು ಇಂದ್ರ, ಅಗ್ನಿ, ಯಮ, ನೈರುತಿ, ವರುಣ,

ಪ್ರವಾಹ, ವಾಯು, ಕುಬೇರ, ರುದ್ರ, ಹೀಗೆ ಎಂಟುಜನರು ಅಭಿಮಾನಿಗಳು, ಮುಖ್ಯ ಕಮಲಾಭಿಮಾನಿ ಇಂದ್ರ. ಇದೇ ಸ್ವರ್ಗಲೋಕವೆಂತ ಕರಿಸಿಕೊಳ್ಳುತ್ತದೆ.)

೪. ಹೃದಯದ ಮೇಲ್‌ಭಾಗ ಉರಸ್ಸಿನಲ್ಲಿ, ಹನ್ನೆರಡು ದಳವುಳ್ಳ, ರಕ್ತವರ್ಣವುಳ್ಳಂಥಾ ಒಂದೇ ಕಮಲ. ಆ ಕಮಲದಲ್ಲಿ ಅನಿರುದ್ಧಾದಿ ಐದು ರೂಪಾತ್ಮಕನಾದಂಥ ವಿಷ್ಣು ಸಿದ್ಧಿಯನ್ನು ಅಪೇಕ್ಷವುಳ್ಳಂಥವರುಗಳಿಂದ, ಧ್ಯೇಯನಾದಂಥಾತನು (ಈ ಹನ್ನೆರಡು ದಳಕ್ಕೆ, ೧೨ ಜನ ಸೂರ್ಯರು ಅಭಿಮಾನಿ ದೇವತೆಗಳು, ಇದಕ್ಕೆ ಮಹರುದ್ರ ಅಭಿಮಾನಿ, ಮಹರ್ಲೋಕವೆಂದು ಕರೆಸಿಕೊಳ್ಳುತ್ತದೆ.) ೧ ಧಾತ, ೨ ಅರ್ಯಮ, ೩ ಮಿತ್ರ, ೪ ವರುಣ, ೫ ಪುರುಹೂತ, ೬ ವಿವಸ್ವಾನ್, ೭ ತ್ವಷ್ಟ್ರ, ೮ ಹರಿ, ೯ ಸವಿತೃ, ೧೦ ಭಗ, ೧೧ ಪೂಷಾ, ೧೨ ಪರ್ಜನ್ಯ. ಸೂರ್ಯ ಕಲೆಗಳು. ೧ ತಪಿನಿ, ೨ ತ್ರಾಪಿನಿ, ೩ ಧೂಮ್ರ, ೪ ಮರೀಚಿ, ೫ ಜ್ವಾಲಿನಿ, ೬ ಖುಚಿ, ೭ ಸುಷ್ಮನ್, ೮ ಭೋಗದ, ೯ ವಿಶ್ವ, ೧೦ ಬೋಧಿನಿ, ೧೧ ಧಾರಿಣಿ, ೧೨ ಕ್ಷಮಾ.

೫. ಸುಷುಮ್ನಾ ನಾಡಿಯಲ್ಲಿ ಸಂಬಂಧವಾದಂಥ ತಾಲು ಮಧ್ಯದಲ್ಲಿ ಶ್ವೇತವರ್ಣವಾದಂಥ ಎರಡು ದಳವುಳ್ಳಂಥಾ ನಾಲ್ಕು ದಿಕ್ಕಿನಲ್ಲಿ ನಾಲ್ಕು ಕಮಲ, ಮಧ್ಯದಲ್ಲಿ ವಂದು ಹೀಗೆ ಐದು ಕಮಲಗಳು ಆ ಐದುಕಮಲಗಳಲ್ಲಿ ಅನಿರುದ್ಧಾದಿ ಐದುರೂಪಗಳು ಚಿಂತಿಸಬೇಕು. ಹೀಗೆ ತಂತ್ರಸಾರದಲ್ಲಿ ಹೇಳಿದೆ. (ಶ್ರೀ ವಿಜಯದಾಸರು ಉಪಾಸನಾಭಾಗ ಸುಳಾದಿಯಲ್ಲಿ ಸುಳಾದಿ ೧೫, ಮೂಲಾಧಾರದಲ್ಲಿ ಚತುರದಳಕಮಲ, ಎಂಬೋ ಸುಳಾದಿಯಲ್ಲಿ ಝಂಪಿತಾಳ ೫ ರಲ್ಲಿ ಇಂದ್ರಯೋನಿಯಲ್ಲಿ ಷೋಡಶದಳವುಳ್ಳ ಅರವಿಂದ ಧವಳವರ್ಣದಿಂತಿಪ್ಪದು. ಚಂದ್ರಕಲಾಭಿಮಾನಿಗಳು ಅಲ್ಲಿ ವಾಸವೆಂದು ಹೇಳಿದ್ದಾರೆ. ತಂತ್ರಸಾರಕ್ಕೂ ಇದಕ್ಕೂ ವ್ಯತ್ಯಾಸ ತೋರುತ್ತದೆ. ಇದು ಬಲ್ಲ ಜ್ಞಾನಿಗಳಿಂದ ತಿಳಿದು ಸರಿಪಡಿಸಿಕೊಳ್ಳತಕ್ಕದ್ದು. ಹೊರ್ತಾಗಿ ಜ್ಞಾನಿಗಳ ವಚನದಲ್ಲಿ ಎಂದಿಗೂ ವ್ಯತ್ಯಾಸವಿಲ್ಲ. ಚಂದ್ರನ ಕಲಾಭಿಮಾನಿಗಳು. ೧ ಅಮೃತ, ೨ ಮಾನವ, ೩ ಪೂಷಾ, ೪ ತುಷ್ಟಿ, ೫ ಪುಷ್ಟ,

೬ ರತಿ, ೭ ಧೃತಿ, ೮ ಶಶಿನಿ, ೯ ಚಂದ್ರಿಕಾ, ೧೦ ಜ್ಯೋತ್ಸ್ನಾ, ೧೧ ಶ್ರೀಃ ೧೨ ಕಾಂತಿ, ೧೩ ಪ್ರೀತಿ, ೧೪ ಅಂಗದಾ, ೧೫ ಪೂರ್ಣ, ೧೬ ಪೂರ್ಣರಾಕಾ. ಹೀಗೆ ಚಂದ್ರಕಲೆಗಳು ತನ್ನಾಮ ಕಲಾಭಿಮಾನಿ ದೇವತೆಗಳು. ಕಮಲಪತ್ರಾಭಿಮಾನಿಗಳು, ದಧಿವಾಮನ ದೇವರ ಉಪಾಸ್ಯ ಚಂದ್ರನು ಮಾಡುತ್ತಾನೆ. ಫಣೀಂದ್ರ ಕಮಲಾಭಿಮಾನಿ ಲಕ್ಷ್ಮೀನಾರಾಯಣನ್ನ ಪೂಜಿಸುತ್ತಾನೆ.) ಇದು ಜನೋಲೋಕವೆಂದು ಹೇಳುತ್ತಾರೆ.

೬. ಭ್ರೂಮಧ್ಯದಲ್ಲಿ ಸುಷುಮ್ನಾನಾಡಿಗೆ, ನಾಲ್ಕು ಪಾರ್ಶ್ವಗಳಲ್ಲಿ ನಾಲ್ಕು ಮಧ್ಯ ವಂದು ಕಮಲ ಹೀಗೆ ೫ ಕಮಲ ಶ್ವೇತವರ್ಣವುಳ್ಳಂಥಾ, ಚತುರ್ದಳವುಳ್ಳಂಥಾ ಐದು ಕಮಲಗಳಲ್ಲಿ ಅನಿರುದ್ಧಾದಿ ೫ ರೂಪಗಳನ್ನು ಚಿಂತಿಸಬೇಕು. (ಶ್ರೀ ವಿಜಯದಾಸರ ಸುಳಾದಿ ಮೇಲೆ ಅಟ್ಟತಾಳದಲ್ಲಿ ಭ್ರೂಮಧ್ಯದಲ್ಲಿ ದ್ವಿದಳ ಕಮಲವುಂಟು. ದಳಾಭಿಮಾನಿ ಬ್ರಹ್ಮ ವಾಯು, ಗರುಡದೇವರು ಕಮಲಾಭಿಮಾನಿ ಶ್ರೀಕೃಷ್ಣನ್ನ ಉಪಾಸನಾ ಮಾಡುತ್ತಾನೆ. ಇದೇ ತಪೋಲೋಕ.) ಇಲ್ಲಿಯೂ ಕಮಲಗಳಲ್ಲಿ ವ್ಯತ್ಯಾಸವಿದೆ. ಮೇಲಿನಂತೆ ಇದು ಜ್ಞಾನಿಗಳಿಂದ ಸರಿಯಾಗಿ ತಿಳಿಯುವದು ಅತ್ಯಾವಶ್ಯ

೭. ಶಿರಸ್ಸಿನ ಕಡೆಯಲ್ಲಿ ಸುಷುಮ್ನಾನಾಡಿಯು ನಾಲ್ಕುಭಾಗದಲ್ಲಿ ೪ ಮಧ್ಯದಲ್ಲಿ ವಂದು ಹೀಗೆ ೫ ಶ್ವೇತವರ್ಣವಾದ ದ್ವಾದಶದಳವುಳ್ಳಂಥ ಐದು ಕಮಲಗಳಲ್ಲಿ ಅನಿರುದ್ಧಾದಿ (೫) ರೂಪ ಚಿಂತಿಸಬೇಕು. (ಸುಳಾದಿ ಆದಿತಾಳದಲ್ಲಿ ಸಾಸಿರದಳವುಳ್ಳ ಕಮಲ ಶಿರಸ್ಸಿನಲ್ಲಿ, ಲೇಸಾಗಿಪ್ಪೊಪ್ಪುತಿದೆ ವಜ್ರ ಪ್ರಕಾಶದಂತೆ. ವಿಶ್ವಾದಿಸಾವಿರರೂಪಗಳು ಬ್ರಹ್ಮದೇವರು ಕಮಲಾಭಿಮಾನಿ, ಶ್ರೀರಂಗಮೂರ್ತಿ ಧ್ಯಾನಮಾಡುತ್ತಾನೆ ಇದೇ ಸತ್ಯಲೋಕವೆಂದು ಹೇಳಿದ್ದಾರೆ. ವಾಸುದೇವನಿಯಾಮಕ)

೮. ಶಿರಸ್ಸಿನ ಊರ್ಧ್ವಭಾಗದಲ್ಲಿ ದ್ವಾದಶಾಂಗುಲಿ ಮೇಲೆ ಛತ್ರದೋಪಾದಲಿ ಶ್ವೇತವರ್ಣವುಳ್ಳಂಥಾ ದ್ವಾದಶದಳವುಳ್ಳ ಒಂದು ಕಮಲ ಚಿಂತಿಸಬೇಕು. ಆ ಕಮಲದಲ್ಲಿ ತುರ್ಯನಾಮಕನಾದ, ಕರ್ಮಗಳಿಗೆ ಸಾಕ್ಷೀಭೂತನಾದ, ಮೋಕ್ಷಪ್ರದನಾದಂಥ, ವಾಸುದೇವನ್ನ ಚಿಂತಿಸಬೇಕು. ಇದೇ ವೈಕುಂಠ.

ದ್ವಾತ್ರಿಂಶತಿ (೩೨) ಕಮಲಗಳ ವಿವರ

(೧) ಸುಷುಮ್ನಾ ಮೂಲದಲ್ಲಿ ೫ ಕಮಲ, (೨) ನಾಭಿದೇಶದಲ್ಲಿ ೫ ಕಮಲ (೩) ಹೃದಯದಲ್ಲಿ ೫, (೪) ಕಂಠದಲ್ಲಿ ೫, (೫) ಭ್ರೂಮಧ್ಯೆದಲ್ಲಿ ೫, (೬) ಶಿರಸ್ಸಿನಲ್ಲಿ ೫, ೬×೫=೩೦, ಉದರದಲ್ಲಿ ೧, ಶಿರೋರ್ಧ್ವ ದಕ್ಷಿಣ ಭಾಗದಲ್ಲಿ ೧, ಹೀಗೆ ೩೨ ಕಮಲಗಳಲ್ಲಿ ಇದ್ದಂಥ ಭಗವಂತನನ್ನು ಚಿಂತಿಸಬೇಕು. ಇಂಥ ಭಗವಂತನಧ್ಯಾನ ಮಾಡೋಪ್ರಭಾವದಿಂದ ಮುಕ್ತನಾಗುತ್ತಾನೆ. ಹೀಗೆ ತಂತ್ರಸಾರದಲ್ಲಿ ಹೇಳಿದೆ.

ಸುಷುಮ್ನಾನಾಡಿಗೆ ಚತುರ್ದಿಕ್ಕುಗಳಲ್ಲಿ ನಾಲ್ಕು ನಾಡಿಗಳು. ಧಾರುಣಿ, ಪಿಂಗಳಾ, ವಜ್ರಿಕಾ, ಇಡಾ, ಸುಷುಮ್ನಾನಾಡಿಗೆ ಬ್ರಹ್ಮ ಅಭಿಮಾನಿ; ಪಿಂಗಳಾನಾಡಿಗೆ ಸೂರ್ಯಾಭಿಮಾನಿ; ಇಳಾನಾಡಿಗೆ ಚಂದ್ರ, ಯಥಾಕ್ರಮದಿಂದ ಮೂರುಮಂದಿನ್ನ ತಿಳಿಯಬೇಕು. ಸುಷುಮ್ನಾ ಪೂರ್ವಭಾಗ ಧಾರುಣಿನಾಮಕ ನಾಡಿಯಲ್ಲಿ ಸ್ಫಟಿಕದೋಪಾದೇಲಿ ನಿರ್ದುಷ್ಟವಾದ ಕಾಂತಿಯುಳ್ಳಂತಾ ವಾಸುದೇವನಾಮಕನನ್ನು ಚಿಂತಿಸಬೇಕು. ಬಲಭಾಗದಲ್ಲಿದ್ದ ಪಿಂಗಳಾನಾಡಿಯಲ್ಲಿ ಪಿಂಗಳವರ್ಣಉಳ್ಳಂಥಾ ಸಂಕರುಷಣನಾಮಕನನ್ನು ಚಿಂತಿಸಬೇಕು ಹಿಂದೆಡೆ ಪಶ್ಚಿಮದಲ್ಲಿದ್ದ ವಜ್ರಿಕಾನಾಡಿಯಲ್ಲಿ ಪೀತವರ್ಣಉಳ್ಳಂಥಾ ಪ್ರದ್ಯುಮ್ನನನ್ನು ಚಿಂತಿಸಬೇಕು. ಎಡಗಡೇ ಇದ್ದ ಇಳಾನಾಡಿಯಲ್ಲಿ ಶ್ಯಾಮವರ್ಣವುಳ್ಳ ಅನಿರುದ್ಧನ್ನ ಚಿಂತಿಸಬೇಕು. ಮಧ್ಯದಲ್ಲಿದ್ದಂಥಾ ಸುಷುಮ್ನಾನಾಡಿಯಲ್ಲಿ ಬಾಲಸೂರ್ಯನೋಪಾದೆಲಿ ಕಾಂತಿಯುಳ್ಳಂಥಾ ನಾರಾಯಣನನ್ನು ಚಿಂತಿಸಬೇಕು. ಈ ರೂಪಗಳು ಸೂರ್ಯಮಂಡಲದಲ್ಲಿ ಇದ್ದಂಥಾವು. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ.

ಆ ಸೂರ್ಯಮಂಡಲದಲ್ಲಿ ನಾಲ್ಕು ದಿಕ್ಕುಗಳಲ್ಲಿ ೨೦೦–೨೦೦ ಕಿರುಣ ಮಧ್ಯದಲ್ಲಿ ೨೦೦ ಕಿರುಣ, ಹೀಗ ಸಹಸ್ರ ಕಿರಣಗಳು ಸೂರ್ಯಮಂಡಲದಲ್ಲಿ ಉಳ್ಳಂಥಾವು ಯೆಂತ ಚಿಂತಿಸಬೇಕು.

ಈ ಪ್ರಕಾರವೇ ಸುಷುಮ್ನಾನಾಡಿಯ ನಾಲ್ಕು ದಿಕ್ಕಿನಲ್ಲಿ ತಥಾ ಮಧ್ಯಭಾಗದಲ್ಲಿ ಕೂಡಿಸಿ, ಸಹಸ್ರಶಾಖಾ(ಕಿರಣ)ವುಳ್ಳಂಥಾವು. ಸೂರ್ಯ ಪ್ರಾಚೀದಿಕ್ಕಿನಲ್ಲಿ ರಕ್ತವರ್ಣವುಳ್ಳಂಥಾ, ಇನ್ನೂರು ಕಿರಣಗಳು. ಆ ಕಿರಣ

ಗಳಲ್ಲಿ ಮಧುನಾಮಕನಾದಂಥಾ ಋಗ್ವೇದ ಪ್ರತಿಪಾದ್ಯನಾದಂಥ ಅಗ್ನಿಯೋಪಾದೆಲಿ ಕಾಂತಿವುಳ್ಳಂಥ ವಾಸುದೇವನು, ಅಗ್ನಿ ವಸುಗಳಿಂದ ಉಪಾಸ್ಯನಾಗಿದ್ದಾನೆ. ಸೂರ್ಯನ ದಕ್ಷಣಭಾಗದಲ್ಲಿ ಗೌರವರ್ಣವುಳ್ಳಂಥ ೨೦೦ ಕಿರಣಗಳಲ್ಲಿ ಶುಕ್ಲವರ್ಣವುಳ್ಳಂಥ ಸಂಕರ್ಷಣನು, ಮಧುವಿದ್ಯಾವುಳ್ಳಂಥ ವಾಯುದೇವರು ಮೊದಲಾದಂಥ ರುದ್ರಾದಿಗಳಿಂದ ಉಪಾಸ್ಯನು ಸೂರ್ಯನ ಪಶ್ಚಿಮಭಾಗದಲ್ಲಿ ಶ್ಯಾಮವರ್ಣವುಳ್ಳಂಥಾ, ಇನ್ನೂರು ಕಿರಣಗಳಲ್ಲಿ ಶ್ಯಾಮವರ್ಣವುಳ್ಳಂಥಾ ಸಾಮವೇದ ಮೊದಲಾದಂಥ, ವೇದಗಳಿಂದ ಪ್ರತಿಪಾದ್ಯನಾದಂಥ ಪ್ರದ್ಯುಮ್ನನನ್ನು, ಆತನ ಸಾಮಾಭಿಮಾನಿಗಳಾದಂಥ, ಸಾಮಕರಾದಂಥ ಸೂರ್ಯರುಗಳಿಂದ ಉಪಾಸ್ಯನು. ಸೂರ್ಯನ ಉತ್ತರಭಾಗದಲ್ಲಿ ನೀಲವರ್ಣವುಳ್ಳಂಥ ಇನ್ನೂರು ಕಿರಣಗಳು ಆ ಕಿರಣಗಳಲ್ಲಿ ನೀಲವರ್ಣವುಳ್ಳಂಥ ಅಥರ್ವಣವೇದ ಇತಿಹಾಸ ಪುರಾಣ ಪ್ರತಿಪಾದ್ಯನಾದಂಥ ಮಧುನಾಮಕ ಅನಿರುದ್ಧನು, ಆತನು ಚಂದ್ರಮೊದಲಾದಂಥ ಮರುತಗಳಿಂದ ಉಪಾಸ್ಯನು ಯೆಂತ ಚಿಂತಿಸಬೇಕು. ಸೂರ್ಯಮಂಡಲ ಮಧ್ಯದಲ್ಲಿ ಊರ್ಧ್ವಭಾಗಕ್ಕೆ ಪೀತವರ್ಣವುಳ್ಳಥಾ ಇನ್ನೂರು ಕಿರಣಗಳು ಆ ಕಿರಣಗಳಲ್ಲಿ ಉದಿತ ಸೂರ್ಯನೋಪಾದೆಲಿ ಕಾಂತಿವುಳ್ಳಂಥಾ, ಅನಂತ ವೇದಪ್ರತಿಪಾದ್ಯನಾದಂಥ ಮಧುನಾಮಕ ನಾರಾಯಣನು. ಆತನು ವೇದಾಭಿಮಾನಿಗಳಾದಂಥ ಬ್ರಹ್ಮ, ಸರಸ್ವತೀ, ಶೇಷ, ವಾರುಣೀ, ಗರುಡ, ಸೌಪರ್ಣೀನೇ ಮೊದಲಾಗಿವುಳ್ಳಂಥವರಿಂದ ಸರ್ವದಾ ಉಪಾಸ್ಯನು. ಈ ಪೂರ್ವೋಕ್ತ ಪ್ರಕಾರ ಸೂರ್ಯನಲ್ಲಿ ಐದುರೂಪದಿಂದ ಭಗವಂತನು ಇದ್ದಾನೆ ಈ ಪ್ರಕಾರ ಐದುರೂಪಗಳು, ಸುಷುಮ್ನಾನಾಡಿ ನಾಲ್ಕು ಪಾರ್ಶ್ವಗಳಲ್ಲಿ ತಥಾ ಮಧ್ಯದಲ್ಲಿದ್ದ ಕಾರಣ ಸೂರ್ಯನೋಪಾದೆಲಿ ಸಹಸ್ರ ಕಿರಣಗಳ ಸ್ಥಿತಿ ತಿಳಿಯಬೇಕು. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ.

ಪಿಂಗಳಾ ದಕ್ಷಣ ನಾಡಿಯೆಂತ ಕರಸಿಕೊಳ್ಳುತ್ತದೆ. ಇಡಾನಾಡಿಯು ವಾಮನಾಡಿಯೆಂತ ಕರಸಿಕೊಳ್ಳುತ್ತದೆ. ಪಿಂಗಳಾನಾಡಿಯು ಅಂಶಗಳು ಪಂಚಾಶತ (೫೦೦) ಅವು ದಕ್ಷಣಾಯನೀಯೆಂತ ಕರೆಸಿಕೊಳ್ಳುತ್ತದೆ. ಇಂಥಾ ದಕ್ಷಣನಾಡಿ ಕಿಂಚಿತ ಡೊಂಕಾಗಿ ವಾಮಭಾಗಕ್ಕೆ ಪಸರಿದಂಥಾವು. ಇವುಗಳಲ್ಲಿ ಸೂರ್ಯನ ದಕ್ಷಣಾಯನ ಐನೂರು ರಶ್ಮಿಗಳು ವ್ಯಾಪ್ತವಾ

ದಂಥಾವು. ಇದು ದಕ್ಷಣಾಯನಮಾರ್ಗ ತಥಾ ಧೂಮ್ರಾದಿ ಮಾರ್ಗ ಯೆಂದು ಕರಸಿಕೊಳ್ಳುತ್ತದೆ ಅದಕ್ಕೇವೆ ಪಿತೃಯಾನಾಯೆಂದು ಹೇಳುತ್ತಾರೆ. ಈ ಮಾರ್ಗದಿಂದ ದಾನಜೀವರು ಉತ್ಕ್ರಮಣವನ್ನು ಐದುತಾರೋ ಆ ಜೀವರು ಪುನಃ ಸಂಸಾರಕ್ಕ ಬಾಹೋ ಅಂಥವರು.

ಇಳಾ (ಡಾ) ನಾಡಿ ಅಂಶಗಳು ಐನೂರು, ಅವು ಉತ್ತರಾಯಣ ಯೆಂತ ಕರಸಿಕೊಳ್ಳುತ್ತದೆ. ಆ ಉತ್ತರಾಯಣನಾಡಿಗಳು ಸ್ವಲ್ಪ ಡೊಂಕಾಗಿ ದಕ್ಷಣಕ್ಕೆ ಬಂದಂಥಾವು ಆ ನಾಡಿಗಳಲ್ಲಿ ಸೂರ್ಯನ ಸಂಬಂಧಿ ಯಾದಂಥ ಐನೂರು ಉತ್ತರಾಯಣ ರಶ್ಮಿಗಳು ವ್ಯಾಪ್ತವಾಗಿ ಅವೆ. ಇದು ಉತ್ತರಾಯಣಮಾರ್ಗ, ಅರ್ಚಿರಾದಿಮಾರ್ಗಯೆಂತ ಕರೆಸಿಕೊಳ್ಳುತ್ತದೆ. ಇದಕೆ ದೇವಯಾನಯೆಂತೆಂದು ಜ್ಞಾನಿಗಳು ಹೇಳುತ್ತಾರೆ. ಮಧ್ಯ ಸುಷು ಮ್ನಾನಾಡಿ ಬ್ರಹ್ಮಯಾನಯೆಂತ ಕರೆಸಿಕೊಳ್ಳುತ್ತದೆ. ಹೀಗೆ ದ್ವಿತಿಯಸ್ಕಂದ ಭಾಗವತದಲ್ಲಿ ಹೇಳಿದೆ. ತಥಾಸೂತ್ರ ಭಾಷ್ಯದಲ್ಲಿಯೂ ಹೇಳಿದ್ದಾರೆ.

ದಾವಪ್ರಾಣಿಗಳು ಧೂಮ್ರಾದಿ ಮಾರ್ಗದಿಂದ ತನ್ನ ದೇಹದಲ್ಲಿದ್ದ ಪಿಂಗಳಾನಾಡಿಯಲ್ಲಿ ಇದ್ದಂಥ ಕಿರಣಗಳಿಂದ ಸಹಿತವಾಗಿ ವಾಮಕರ್ಣದ ದೆಶೆಯಿಂದ ಉತ್ಕ್ರಮಣವನ್ನು ಐದುತಾರೋ ಅವರು ಪಿತೃಯಾನಮಾರ್ಗ ವುಳ್ಳಂಥವರು. ಅವರೇವೇ ಅಧಮಾಧಿಕಾರಿ (ತಮೊ) ಅಧಿಕಾರಿಗಳು.

ಅರ್ಚಿರಾದಿ ಮಾರ್ಗಸ್ಥರಾದಂಥ, ಮುಕ್ತಿಯೋಗ್ಯರಾದಂಥ ಮುಮು ಷ್ಯೋತ್ತರು, ಅವರು ತಮ್ಮ ದೇಹದಲ್ಲಿ ಇಪ್ಪ ಇಡಾನಾಡಿ ತಥಾ ರಶ್ಮಿಗಳಿಂದ ಸಹಿತವಾಗಿ ದೇವಯಾನ ಮಾರ್ಗಸ್ಥರಾಗಿ ದಕ್ಷಿಣಕರ್ಣದ ದೆಶೆಯಿಂದ ಉತ್ಕ್ರಮಣಿವನ್ನು ಐದುತಾರೋ, ದಾವಯೋಗ್ಯ ಜೀವರು ತಮ್ಮ ತಮ್ಮ ಯೋಗ್ಯತಾನುಸಾರ ಸಾಧನ ಪರಿಪೂರ್ಣರಾದಂಥ, ಪಕ್ವವಾದಂಥ ಪ್ರಾರಬ್ಧ ಭೋಗವುಳ್ಳವರು. ಅನಾದಿಯಾದಂಥ ಲಿಂಗದೇಹಕ್ಕೆ, ಭಂಗಕಾಲ ಪ್ರಾಪ್ತ ವಾಗತಿರಲಿಕ್ಕೆ ಯೋಗಪ್ರಭಾವದಿಂದ ತಮ್ಮ ಮನಸ್ಸು ಪರಮಾತ್ಮನಲ್ಲಿಟ್ಟು ಪೃಥಿವ್ಯಾದಿ ಪಂಚಮಹಾಭೂತ ಕ್ರಮದಿಂದ, ಅವ್ಯಕ್ತ ತತ್ವ ಪರಿಯಂತ ಲಯವನ್ನು ಚಿಂತಿಸಿ ಹಾಗೆ ತತ್ವಾಭಿಮಾನಿ ದೇವತೆಗಳನ್ನು ಕ್ರಮದಿಂದ ನಿಯೋಜಿಸಿ, ಆ ತತ್ವದೇವತೆಯಿಂದ ಕೂಡಿ, ತನ್ನ ದೇಹದೊಳಗೆ ಇದ್ದಂಥಾ ಪರಮಾತ್ಮನಿಂದ ಸಹಿತನಾಗಿ ಸುಷುಮ್ನಾ ಮಾರ್ಗದದಶಿಯಿಂದ, ವಾಯು

ದೇವರಿಂದ ಕೂಡಿ, ಬ್ರಹ್ಮರಂಧ್ರ ದೆಶೆಯಿಂದ ಉತ್ಕ್ರಮಣ ಐದುತ್ತಾ. ಅವರು ಚತುರ್ಮುಖ ಬ್ರಹ್ಮನಿಂದ ಕೂಡಿ, ಸ್ವ ಸ್ವಯೋಗ್ಯ (ಮುಕ್ತಿ ಯನ್ನು) ಮೋಕ್ಷವನ್ನು ಐದುತ್ತಾರೆ. ಇದು ಬ್ರಹ್ಮಯಾನ

ಈ ಪೂರ್ವೋಕ್ತವಾದಂಥ ಮಾರ್ಗತ್ರಯವನ್ನು ದಾವತಿಳಿತಾನೋ ಅವನು ಮುಕ್ತಿಯನ್ನು ಐದುತ್ತಾನೆ ಹೀಗೆ ಭಾಷ್ಯದಲ್ಲಿ ಹೇಳಿದೆ.

ಇನ್ನು ಮುಕ್ತಿಯೋಗ್ಯರು ಮುಕ್ತಿಯನ್ನು ಐದಬೇಕಾದರೆ ಶೇಷ ಮಾರ್ಗ, ಗರುಡಮಾರ್ಗ ಇವು ಎರಡು ದೇವತೆಗಳ ಲಯಮಾರ್ಗಗಳು ಹೇಳುತ್ತಾರೆ. ಗಂಧರ್ವರೇ ಮೊದಲಾದಂಥ ಸಮಸ್ತರು ಕುಬೇರನ್ನ ಪ್ರವೇಶಿಸುತ್ತಾರೆ. ಕುಬೇರನು ವರುಣನಿಂದ ಕೂಡಿ ಚಂದ್ರದೇವರನ್ನು ಪ್ರವೇಶ ಮಾಡುತ್ತಾನೆ. ಚಂದ್ರನು ವಿಷ್ವಕ್ಸೇನ ಮೊದಲಾದ ಪಾರ್ಷದ ರಿಂದ ಕೂಡಿ, ಕಾಮಪುತ್ರ ಅನಿರುದ್ಧನನ್ನು ಪ್ರವೇಶಿಸುತ್ತಾನೆ. ಅನಿರು ದ್ಧನು ಸನಕನೇವೆ ಮೊದಲಾದಂಥ ಯೋಗಿಗಳಿಂದ ಕೂಡಿ, ಕಾಮದೇವ ರನ್ನು, ಕಾಮದೇವರು, ವಾರುಣಿಯನ್ನು, ವಾರುಣೀದೇವಿಯರು ತನ್ನ ಗಂಡನಾದಂಥ ಶೇಷದೇವರನ್ನು, ಶೇಷದೇವರು ಸರಸ್ವತೀದೇವಿಯನ್ನು, ಸರಸ್ವತೀದೇವಿ ಬ್ರಹ್ಮದೇವರನ್ನ ಪ್ರವೇಶಿಸುತ್ತಾಳೆ. ಆ ಬ್ರಹ್ಮದೇವರು ತೇಜಃ ಯೆಂತ ಹೆಸರು ಉಳ್ಳಂಥ ರಮಾದೇವಿಯನ್ನು ಪ್ರವೇಶಿಸುತ್ತಾನೆ. ರಮಾದೇವೇರು ಪರಮಾತ್ಮನ ಸಾಮಿಪ್ಯ ಲಕ್ಷಣವಾದಂಥ ಸಂಗವನ್ನು ಐದು ತ್ತಾರೆ. ಈ ಉಕ್ತವಾದಂಥ ದೇವತಿಗಳಿಗೆ ಇದು ಶೇಷಮಾರ್ಗ.

ಇನ್ನು ಗರುಡಮಾರ್ಗದಾವುದೆಂದರೆ

೧ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಈ ನಾಲ್ಕೂವರ್ಣ ಬ್ರಹ್ಮ ಚಾರಿ ಮೊದಲಾದ ಚತುರಾಶ್ರಮ ಉಳ್ಳಂಥ ಮನುಷ್ಯೋತ್ತಮರು. ನಿರು ಋತಿ, ಸಮಸ್ತ ಪಿತೃಗಳು, ವೈವಸ್ವತ ಮೊದಲಾದ ಮನುಗಳು ಪೃಥು ರಾಯನೇ ಮೊದಲಾದ ಅರಸ ಶ್ರೇಷ್ಠರು ಇವರಿಷ್ಟು ಮಂದಿ, ಯಮದೇವ ರನ್ನು ಪ್ರವೇಶಿಸುತ್ತಾರೆ. ಯಮದೇವರು ಇವರು ಸರ್ವರು ಸ್ವಾಯಂಭುವ ಮನುವಿನನ್ನು, ಸ್ವಾಯಂಭುವಮನು ಇಂದ್ರದೇವರನ್ನು ಪ್ರವೇಶಿಸುತ್ತಾನೆ.

೨ ಪ್ರವಾಹ ವಾಯುದೇವರೆ ಮೊದಲಾದಂಥ ಮರುದ್ಗಣದವರು. ಆಹಂಕಾರಿಕ ಪ್ರಾಣನನ್ನು. ಅಹಂಕಾರಿಕ ಪ್ರಾಣದೇವರು ಇಂದ್ರನನ್ನು ಪ್ರವೇಶಿಸುತ್ತಾರೆ

೩ ಇನ್ನು ವಿನಾಯಕ ಸಾಧ್ಯಗಣದವರು ಆಕಾಶಾಭಿಮಾನಿ ಗಣೇಶನನ್ನು ಪ್ರವೇಶಿಮಾಡಿ ಆಕಾಶದಲ್ಲಿ ಇರುತ್ತಾರೆ (೨)ಮೃತ್ಯುಋಭುಗಳು ಸಮಸ್ತರೂ ಪೃಥಿವಿಯನ್ನು ಕ್ರಮದಿಂದ ಪ್ರವೇಶಿಸುತ್ತಾರೆ.

ಸಮಸ್ತ ಅಗ್ನಿ ಪುತ್ರನೇ ಮೊದಲಾದ ಉಕ್ತೇತರ ದೇವತೆಗಳು ಇವರು ಸರ್ವರು ಅಗ್ನಿದೇವರನ್ನು ಪ್ರವೇಶಿಸುತ್ತಾರೆ ಅಗ್ನಿದೇವರು ಸೂರ್ಯದೇವರನ್ನು ಪ್ರವೇಶಿಸುತ್ತಾರೆ. ಮೇಲೆ ಹೇಳಿದಂಥ, ಆಕಾಶ ಪೃಥಿವಿ, ಆದಿತ್ಯ ಇವರು ಗುರುಗಳಾದ ಬೃಹಸ್ಪತ್ಯಾಚಾರ್ಯರನ್ನು ಪ್ರವೇಶಿಸುತ್ತಾರೆ. ದೇವತೆಗಳಿಗೆ ಗುರುಗಳಾದಂಥ ಬೃಹಸ್ಪತ್ಯಾಚಾರ್ಯರು ಇಂದ್ರ ದೇವರನ್ನು ಪ್ರವೇಶಿಸುತ್ತಾರೆ

೪ ಭೃಗುಋಷಿ ಅತ್ರಿ ಮೊದಲಾದ ಬ್ರಹ್ಮ ಪುತ್ರರು ದಕ್ಷಪ್ರಜೇಶ್ವರನನ್ನು. ದಕ್ಷನು ಇಂದ್ರನನ್ನು ಪ್ರವೇಶಿಸುತ್ತಾನೆ.

ಇಂದ್ರದೇವರು ಸೌಪರಣಿ ದೇವೇರನ್ನು, ಸೌಪರಣಿ ದೇವಿಯರು ಸ್ವಪತಿಯಾದ ಗರುಡದೇವರನ್ನು, ಗರುಡನು ಸರಸ್ವತೀದೇವಿಯರನ್ನು, ಸರಸ್ವತೀದೇವಿಯರು ಬ್ರಹ್ಮದೇವರನ್ನು. ಪ್ರವೇಶಿಸುತ್ತಾರೆ. ಬ್ರಹ್ಮದೇವರು ತೇಜೋಯಂತ ಹೆಸರುಳ್ಳಂಥಾ ತನ್ನ ತಾಯಿಯಾದಂಥಾ ರಮಾದೇವಿಯನ್ನು ಪ್ರವೇಶಿಸುತ್ತಾರೆ. ನಿತ್ಯಾವಿಯೋಗಿನಿಯಾದಂಥಾ ರಮಾದೇವಿಯರು ಶ್ರೀಪರಮಾತ್ಮನ ಅತಿಸಾಮೀಪ್ಯವನ್ನು ಐದುತ್ತಾಳೆ. ಮುಕ್ತಿಗೋಸುಗವಾಗಿ ದೇವತೆಗಳ **ಗರುಡಮಾರ್ಗ** ಹೇಳಲ್ಪಟ್ಟಿತು. ಈ ಎರಡೂ ಮಾರ್ಗ ದಾವಾತನು ತಿಳಿಯೋದಿಲ್ಲವೋ ಅವನು ಯಮನ ಸಂಬಂಧಿಕವಾದ ಪದವಿ (ನರಕ) ಯನ್ನು ಐದುತ್ತಾನೆ. ಇದಕ್ಕೆ ಪ್ರಮಾಣಾ ಅಧ್ಯಾತ್ಮಗ್ರಂಥದಲ್ಲಿ ಹೇಳಿದೆ.

ಇನ್ನು ಮೇಲೆ ಸುಷುಮ್ನಾನಾಡಿ ಮೊದಲು ಮಾಡಿಕೊಂಡು ದಕ್ಷಣ ಪಾರ್ಶ್ವದಲ್ಲಿ ಇಪ್ಪಂಥ, ಮೂವತ್ತಾರುಸಾವಿರ ನಾಡಿಗಳಲ್ಲಿ ಭಗವಂತನ ಪುರು

ಷರೂಪಗಳು, ಮೂವತ್ತಾರುಸಾವಿರ ಚಿಂತಿಸಬೇಕು. ಈ ರೂಪಗಳು ಪುರುಷನ ಆಯುಃಪ್ರಮಾಣ ಲೆಖ್ಖ ಮುನ್ನೂರಾಅರವತ್ತು ದಿವಸ ಆ ಲೆಖ್ಖದಿಂದ ಮೂವತ್ತಾರುಸಾವಿರ ದಿವಸ ಅಹಸ್ಸಿಗೆ ನಿಯಾಮಕವಾದಂಥಾವುಯೆಂದು ಚಿಂತಿಸಬೇಕು.

ಸುಷುಮ್ನಾ ವಾಮಪಾರ್ಶ್ವದಲ್ಲಿದ್ದ ಮೂವತ್ತಾರುಸಾವಿರ ನಾಡಿಗಳಲ್ಲಿ, ಪರಮಾತ್ಮನ ಸ್ತ್ರೀರೂಪ ಮೂವತ್ತಾರುಸಾವಿರ ಚಿಂತಿಸಬೇಕು. ಈ ರೂಪಗಳು ಮನುಷ್ಯನೇ ಮೊದಲಾಗಿ ಉಳ್ಳಂಥವರ ಆಯುಃಪ್ರಮಾಣದ ಮೂವತ್ತಾರುಸಾವಿರ ರಾತ್ರಿಗೆ ನಿಯಾಮಕವಾದಂಥವು. ಈ ಪುರುಷ ಸ್ತ್ರೀರೂಪಗಳು ಬ್ರಹಸತೀಸ್ತುತಿ (ಬ್ರಹತೀಸಹಸ್ರ ಛಂದಸ್ಸಿನ ಋಕ್ಕುಗಳಲ್ಲಿ) ಹೇಳಿದೆ. ಈ ಬ್ರಹತೀಸಹಸ್ರ ಛಂದಸ್ಸು, ಸ್ವರ, ವ್ಯಂಜನ ಭೇದದ ದಶಿಯಿಂದ ಎಪ್ಪತ್ತೆರಡುಸಾವಿರ, ವರ್ಣಗಳಾಗುತ್ತವೆ. ಸ್ವರ ವರಣ ಪ್ರತಿಪಾದ್ಯವಾದಂಥ ಮೂವತ್ತಾರುಸಾವಿರ. ಪರಮಾತ್ಮನ ಪುರುಷರೂಪಗಳು ಹಾಗೆ ಪರಮಾತ್ಮನ ಮೂವತ್ತಾರುಸಾವಿರ ವ್ಯಂಜನವರ್ಣ ಪ್ರತಿಪಾದ್ಯವಾದಂಥಾವು. ಅಲ್ಲಿ ಸ್ತ್ರೀರೂಪಗಳು ಮೂವತ್ತಾರುಸಾವಿರ ಚಿಂತಿಸಬೇಕು. ಇಂಥಾ ಪುರುಷ ಸ್ತ್ರೀರೂಪಗಳು ಮನುಷ್ಯನಾದವನು ಯಾವನು ತಿಳಿಯುವನೋ ಅವನು ಪೂರ್ಣಾಯುಷ್ಯವನ್ನು ಐದುತ್ತಾನೆ. ಹೀಗೆ ಐತರೇಯದಲ್ಲಿ ಹೇಳಿದೆ.

ವಿಚಿತ್ರವಾದಂಥ ಭಗವನ್ಮೂರ್ತಿಗಳು ದಾವನಾಡಿಯಲ್ಲಿದ್ದ ಕಾರಣ ಹಿತನಾಡಿಗಳೆಂದು ಕರಸಿಕೊಳ್ಳುವವು. ರಮಾಪತಿಯು ಆ ನಾಡಿಗಳಲ್ಲಿ ಪ್ರವೇಶನಾಗಿ, ಚಂದ್ರಯೆಂತ ಕರೆಸಿಕೊಂಬೊ ಅಂಥವನು ಆಗಿ, ಸಮಸ್ತವಾದಂಥ ಸಾರರೂಪಗಳನ್ನು ಭೋಜನ ಮಾಡುತ್ತಾನೆ. ಪೂರ್ವೋಕ್ತವಾದಂಥಾ ಭಗವದ್ರೂಗಳು, ತಥಾ ನಾಮಗಳು ತಿಳಿಯಲಿಕ್ಕೆ ಶಕ್ಯವಲ್ಲ. ಹೀಗೆ ಬ್ರಹದಾರಣ್ಯದಲ್ಲಿ ಹೇಳಿದೆ

ಮೇಲೆ ವಿವರಿಸಿದ ೧೩ ದ್ವಾರಗಳಿಂದ ಶೋಭಿಸುವಂಥ ಹೃದಯಾಖ್ಯ ಬ್ರಹ್ಮಪಟ್ಟಣ, ಆ ಪಟ್ಟಣದ ಪೂರ್ವಭಾಗಕ್ಕೆ ಮೂರು ದ್ವಾರಗಳು ಕ್ರಮದಿಂದ ಅವೆ. ಮೊದಲನೇ ದ್ವಾರದಲ್ಲಿ ರಮಾ (ಶ್ರೀಭೂ) ರೂಪ ಚಿಂತಿಸಬೇಕು. ದ್ವಿತಿಯದ್ವಾರದಲ್ಲಿ ಪ್ರಾಣನಾಮಕಸೂರ್ಯ, ಹಾಗೆ ದ್ಯುನಾಮ

ಕಳಾದಂಥ ಭಾರತೀದೇವಿ, ತೃತೀಯದ್ವಾರದಲ್ಲಿ ಜಯವಿಜಯರಿಬ್ಬರನ್ನು ಚಿಂತಿಸಬೇಕು. ದಕ್ಷಿಣ ದಿಕ್ಕಿನಲ್ಲಿ ಮೂರು ದ್ವಾರಗಳು. ಪ್ರಥಮದಲ್ಲಿ ರಮಾ (ಶ್ರೀಭೂ) ರೂಪವನ್ನು ಚಿಂತಿಸಬೇಕು. ದ್ವಿತಿಯದ್ವಾರದಲ್ಲಿ ವ್ಯಾನ ನಾಮಕಚಂದ್ರ ಮತ್ತು ದಿಂಙ್ಞನಾಮಕ ಭಾರತೀದೇವಿಯನ್ನು ಚಿಂತಿಸಬೇಕು. ತೃತೀಯದ್ವಾರದಲ್ಲಿ ಬಲ-ಪ್ರಬಲರನ್ನು ಚಿಂತಿಸಬೇಕು.

ಪಶ್ಚಿಮದಲ್ಲಿ ಮೂರು ದ್ವಾರಗಳು ಪ್ರಥಮದಲ್ಲಿ ರಮಾದೇವಿ (ಶ್ರೀಭೂ) ದ್ವಿತಿಯದ್ವಾರದಲ್ಲಿ ಅಪಾನನಾಮಕವನ್ಹಿ, ಪೃಥ್ವಿನಾಮಕಳಾದ ಭಾರತೀದೇವಿಯನ್ನು ಚಿಂತಿಸಬೇಕು. ತೃತೀಯದ್ವಾರದಲ್ಲಿ ಕುಮುದ ಕುಮುದಾಕ್ಷ ಇವರಿಬ್ಬರನ್ನೂ ಚಿಂತಿಸಬೇಕು

ಉತ್ತರ ದಿಕ್ಕಿನಲ್ಲಿ ಮೂರುದ್ವಾರಗಳು. ಪ್ರಥಮದ್ವಾರದಲ್ಲಿ ರಮಾ ದೇವಿ (ಶ್ರೀಭೂ) ದ್ವಿತಿಯದ್ವಾರದಲ್ಲಿ ಸಮಾನವಾಯು, ಇಂದ್ರನಾಮಕ, ವಿದ್ಯುನ್ನಾಮಕಳಾದಂಥ ಭಾರತೀದೇವಿಯನ್ನು ಚಿಂತಿಸಬೇಕು. ಮೂರನೇ ದ್ವಾರದಲ್ಲಿ ನಂದ–ಸುನಂದ ಇವರನ್ನು ಚಿಂತಿಸಬೇಕು. ಊರ್ಧ್ವದಲ್ಲಿ ಒಂದುದ್ವಾರ, ಅಲ್ಲಿ ಆಕಾಶನಾಮಕಳಾದಂಥ ರಮಾದೇವಿಯನ್ನು ಚಿಂತಿಸಬೇಕು. ಎಡಪಾರ್ಶ್ವದಲ್ಲಿ, ಉದಾನನಾಮಕ ವಾಯುದೇವರನ್ನು ವಾಂಙ್ಞನಾಮಕಳಾದ ಭಾರತಿಯನ್ನು ಜ್ಞಾನಿಗಳಾದವರು ಈ ಪ್ರಕಾರ ದ್ವಾರದಲ್ಲಿ ಚಿಂತಿಸಬೇಕು.

ಇಂಥ ಪಟ್ಟಣ ಮಧ್ಯದಲ್ಲಿ ಮನೋಹರವಾದಂಥ, ಸುಷುಮ್ನಾನಾಡಿ ಉಪ್ಪರಿಗಿಯೊಳಗ ಪೂರ್ಣನಾದಂಥ ಪರಬ್ರಹ್ಮನಾಮಕ ಮಹಾರಾಜನು ಇದ್ದಾನೆ. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ.

ಆ ಬ್ರಹ್ಮನು ಪುರದಲ್ಲಿ ಹರಾಖ್ಯವಾದಂಥ ಹೃತ್ಪದ್ಮದಿಂದ ಒಪ್ಪುವಂಥ ಕರ್ಣಿಕಾಲಯದಲ್ಲಿ ಶ್ರೀ ದೇವಿಯನ್ನು ಚಿಂತಿಸಬೇಕು. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ. ಹೃತ್ಕಮಲ ಅಷ್ಟಪತ್ರದಲ್ಲಿ ಶಕ್ತಿ, ಪ್ರತಿಷ್ಠಾ, ಸವಿತ್, ಸ್ಫೂರ್ತಿ, ಪ್ರಕೃತಿ, ಕಳಾ, ವಿದ್ಯಾ. ಮತಿ, ನಿಯತಿ, ಮಾಯಾ. ಕಾಲ, ಪುರುಷ ಹೀಗೆ ಹನ್ನೆರಡು ರೂಪಗಳು ಚಿಂತಿಸಬೇಕು. ಅದರೊಳಗೆ ಭಗವಂತನ ಸ್ತ್ರೀರೂಪಗಳು ಹನ್ನೊಂದು. ಬ್ರಹ್ಮ ವಾಯು ಅಧಿಷ್ಠಾನದಲ್ಲಿ ಇಪ್ಪಂಥ ಪುರುಷರೂಪ ಹನ್ನೆರಡನೇದು. ಈ ಕಮಲದ ಎಂಟುದಳದಲಿ

ಇಹೋ ಪ್ರಕಾರ, ದಿಗ್‌ದಳಗಲ್ಲಿ ಎರಡೆರಡು ರೂಪಗಳು, ವಿದಿಗ್‌ದಳಗಳಲ್ಲಿ ಒಂದೊಂದು, ಈ ಪ್ರಕಾರ ಹನ್ನೆರಡು ರೂಪಗಳು ಅಷ್ಟಪತ್ರಗಳಲ್ಲಿ ತಿಳಿಯ ಬೇಕು. ಹೀಗೆ ತಂತ್ರಸಾರದಲ್ಲಿ ಹೇಳಿದೆ.

ಹೃತ್ಪದ್ಮ ಕರ್ಣಿಕಾಗ್ರದಲ್ಲಿ ಇದ್ದಂಥ ಅಂಗುಷ್ಟ ಪ್ರಮಾಣವುಳ್ಳಂಥ ಅಗ್ರೇಶನಾದಂಥ ಪ್ರಾಜ್ಞನು ಜೀವರುಗಳಿಗೆ ಸುಷುಪ್ತಿಯನ್ನು ಕೊಡೊ ಅಂಥಾತನು. ಸರ್ವಗ ಹೃದಯಾಕಾಶದಲ್ಲಿ ಪ್ರಾದೇಶ ಪರಿಮಿತಉಳ್ಳಂಥ ವ್ಯಾಪ್ತನಾಗಿ ಇದ್ದಂಥಾತನು. ಜೀವರಿಗೆ ಆಧಾರಭೂತನಾದಂಥಾತನು, ಪುರುಷನಾಮಕನುಯೆಂತ ಕರೆಸಿಕೊಳ್ಳುತ್ತಾನೆ

ಕರ್ಣಿಕಾ ಮೂಲದಲ್ಲಿ ಅಂಗುಷ್ಠಾಗ್ರ ಪ್ರಮಾಣಉಳ್ಳಂಥಾ ಮೂಲೇಶನು, ವಿಜ್ಞಾನಾತ್ಮಾಯೆಂದು ಕರಸಿಕೊಳ್ಳುತ್ತಾನೆ. ಹೀಗೆ ಬೃಹದಾರಣ್ಯದಲ್ಲಿ ಹೇಳಿದೆ ಹೀಗೆ ಅಗ್ರೇಶ, ಪ್ರಾದೇಶ, ಮೂಲೇಶ ಈ ರೂಪಗಳು ಹೃದಯಾಖ್ಯವಾದಂಥ ವಿಷ್ಣುರೂಪ ಚಿಂತಿಸಬೇಕು

ಮೂಲೇಶನ ಪಾದವನ್ನು ಆಶ್ರೈಸಿ ಮುಖ್ಯ ಪ್ರಾಣನು ಕೃತಾಂಜಲಿ ಪುಟನಾಗಿ ನಿರಂತರದಲ್ಲಿ ಇರುತ್ತಾನೆ. ಆ ಮುಖ್ಯ ಪ್ರಾಣನಲ್ಲಿ ಶುಚಿಷತ್ ಎಂಬೋ ಹೆಸರು ಉಳ್ಳಂಥವನಾಗಿ ವಿಷ್ಣು ಇದ್ದಾನೆ ಆ ತ ನಿ ಗೇ ಪೆ 'ಲಾಳೂಕ' ಎಂತ ಹೆಸರು. 'ಲಾಳೂಕನ' ಉಪಾಸನಾ ಮಾಡೋ ಅಂಥವರು, ಅಪರಾಜಿತಃ ಸೇನಕಃ ಇಂದ್ರವೈಕುಂಠಯೆಂತ ಈ ನಾಮಗಳು ಆತನಿಗೆ ಉಂಟೆಂದು ತಿಳಿಯಬೇಕು. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ.

ಮುಖ್ಯ ಪ್ರಾಣದೇವರು ಶ್ವಾಸರೂಪವಾದಂಥ ಹಂಸ ಮಂತ್ರವನ್ನು ಜಪಿಸುತ್ತಾರೆ. ಹರಿತುಷ್ಟ್ಯರ್ಥವಾಗಿ ಜೀವನ ಕೈಯಿಂದ ಮಾಡಿಸುತ್ತಾರೆ. ಶ್ವಾಸಗಳಸಂಖ್ಯ ಹಗಲು ರಾತ್ರಿ ಕೂಡಿ, ಇಪ್ಪತ್ತೊಂದುಸಾವಿರದಾ ಆರು ನೂರು ಆಗುತ್ತವೆ. ಇಂಥ ಶ್ವಾಸರೂಪವಾದ ಜಪವು ತಿಳಿದು, ಭಕ್ತಿಯಿಂದ ನಿರಂತರದಲಿ ಪರಮಾತ್ಮಗೆ ಸಮರ್ಪಣೆ ಮಾಡಬೇಕು. ಹೀಗೆ ತಂತ್ರಸಾರದಲ್ಲಿಯೂ ವರಾಹ ಪುರಾಣದಲ್ಲಿಯೂ ಹೇಳಿದೆ.

ಜೀವನ ಪರಿಮಿತಿ ವಿಚಾರವನ್ನು ಹೇಳಲ್ಪಡುತ್ತದೆ. ಅಶ್ವಬಾಲಾಗ್ರ ಸಹಸ್ರ ವಿಭಾಗ ಮಾಡಿದರೆ ಎಷ್ಟು ಉಳಿಯುತ್ತದೋ ಅಷ್ಟು ಪರಿಮಿತಿ ಉಳ್ಳಂಥಾ ಜೀವನು, ಶಶ್ವತೇಕ ಪ್ರಕಾರವಾಗಿ ಪ್ರಕಾಶಮಾನ ಚಿದಾನಂದಾ

ತ್ಮಕನಾಗಿ ಇರೋ ಅಂಥಾತನು. ಹೀಗೆ ಸೂತ್ರಭಾಷ್ಯದಲ್ಲಿ ಹೇಳಿದೆ. ಮತ್ತು ಪರಮಾಣು ಲಕ್ಷಣ ತೃತೀಯಸ್ಕಂಧದಲ್ಲಿ ಹೇಳಿದೆ.

ಇಂಥ ಜೀವನು ಮುಖ್ಯಪ್ರಾಣದೇವರ ಪಾದ ಸಮೀಪವನ್ನಾಶ್ರೈಸಿ ನಿರಂತರದಲ್ಲಿ ಕರ್ಮ ಮಾಡೋ ಅಂಥವನಾಗಿರುತ್ತಾನೆ. ಹೀಗೆ ವಿಷ್ಣು ರಹಸ್ಯದಲ್ಲಿ ಹೇಳಿದೆ. ಜೀವನ ಸ್ವದೇಹ ಅಂಗಾಂಗಗಳಲ್ಲಿ, ಪರಮಾತ್ಮನ ಅಂಗಾಂಗಗಳು ಅವಿಚ್ಛನ್ನವಾಗಿ, ಶಶ್ವದೇಕ ಪ್ರಕಾರವಾಗಿ ಪರಮಾತ್ಮನ ದಶೆಯಿಂದ ಅತ್ಯಂತ ಭಿನ್ನವಾಗಿರುತ್ತವೆ.

ವಾಸುದೇವನೆ ಪರಮಾತ್ಮನ ಶಿರಸ್ಸು, ಜೀವನ ಶಿರಸ್ಸಿನಲ್ಲಿರುತ್ತದೆ. ನಾರಾಯಣನೇವೆ ಪರಮಾತ್ಮನ ಮಧ್ಯಸ್ಥಾನವು ಅದು ಜೀವನ ಮಧ್ಯದಲ್ಲಿ ಇಹೋ ಅಂಥಾದ್ದು ಪ್ರದ್ಯುಮ್ನನೇವೆ ಪರಮಾತ್ಮನ ದಕ್ಷಣಪಕ್ಷ, ಅದು ಜೀವನ ದಕ್ಷಣಪಕ್ಷದಲ್ಲಿ ಇದ್ದಂಥಾದ್ದು. ಅನಿರುದ್ಧನೇವೆ ಪರಮಾತ್ಮನ ವಾಮ ಪಕ್ಷ, ಅದು ಜೀವನ ವಾಮಪಕ್ಷದಲ್ಲಿ ಇದ್ದಂಥಾದ್ದು. ಸಂಕರುಷಣನೇವೆ ಪರಮಾತ್ಮನ ಪಾದಗಳು, ಅದು ಜೀವನ ಪಾದಗಳಲ್ಲಿ ಇದ್ದಂಥಾದ್ದು. ವಿಷ್ಣು ಪರಮಾತ್ಮನ ವಾಗೇಂದ್ರಿಯವು, ಆ ವಾಗೇಂದ್ರಿಯವು ಜೀವನ ವಾಚಿಯಲ್ಲಿ ಇದ್ದಂಥಾದ್ದು. ನರಸಿಂಹನೇವೆ ಪರಮಾತ್ಮನ ಪ್ರಾಣನು, (ಘ್ರಾಣನು) ಆ ಪ್ರಾಣ (ಘ್ರಾಣ) ನು ಜೀವನ ಪ್ರಾಣ (ಘ್ರಾಣ) ದಲ್ಲಿ ಇದ್ದಂಥಾತನು. ಕಪಿಲನಾಮಕ ಪರಮಾತ್ಮನೇವೆ ಪರಮಾತ್ಮನ ಚಕ್ಷುಸ್ಸುಗಳು, ಜೀವನ ಚಕ್ಷುಸ್ಸುಗಳಲ್ಲಿ ಇಹೋ ಅಂಥಾವು. ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದೆ.

ಅನಿರುದ್ಧಾದಿಗಳಿಂದ ಸೂಕ್ಷ್ಮಸೃಷ್ಟಿಯಲ್ಲಿ ಸೂಕ್ಷ್ಮ ದೇಹಗಳು ನಿರ್ಮಾಣಮಾಡಿದಂಥಾವು, ಕೋಶಗಳು. ನಾಲ್ಕರಲ್ಲಿ ಅನಿರುದ್ಧಾದಿ ನಾಲ್ಕು ರೂಪಗಳು ಇಹೋ ಅಂಥಾವು. ಷೋಡಶಕಳಾತ್ಮಕವಾದಂಥ ಲಿಂಗ ದೇಹಕ್ಕೆ ಇಹೋ ಅಂಥಾವು. ಹೀಗೆ ವಿಷ್ಣುರಹಸ್ಯ ತೃತಿಯಸ್ಕಂದ ಭಾಗ ವತ ತಾತ್ಪರ್ಯದಲ್ಲಿ ಹೇಳಿದೆ. ಅನಾದಿ ಭೂತವಾದಂಥ ಅನಿತ್ಯವಾದ ಲಿಂಗದೇಹದಲ್ಲಿ ಜೀವನು ಇರುತ್ತಾನೆ. ದೇವತೆಗಳಿಗೆ ಅಂಶತಾವ್ಯಾಪ್ತಿ, ನಿರಂಶರಾದ ಮನುಷ್ಯಾದಿಗಳಿಗೆ ದೇಹದಲ್ಲಿ ಪ್ರಕಾಶವ್ಯಾಪ್ತಿ, ಸ್ವರೂಪೇಂದ್ರಿ ಯಗಳಿಂದ ಬಾಹ್ಯೇಂದ್ರಿಗಳು ಸಂಬಂಧವಾಗಿ, ಇರತಿರಲಿಕ್ಕಾಗಿ ವಿಷಯ ಜ್ಞಾನವುಳ್ಳಂಥವನಾಗುತ್ತಾನೆ. ಹೀಗೆ ಪ್ರಕಾಶಸಂಹಿತಾದಲ್ಲಿ ಹೇಳಿದೆ.

ಆದಕಾರಣ ನಾನು ಭಕ್ಷಿಸುತ್ತೇನೆ, ನಾನು ಮಾಡುತ್ತೇನೆ, ಇದು ನನ್ನದ ಇವೇ ಮೊದಲಾದಂಥ ಅಜ್ಞಾನದಿಂದ ಮೋಹಿತನಾದವನಾಗಿರುವಕಾರ ಕರ್ಮದಿಂದ ಪತನನಾಗುತ್ತಾನೆ. ಇಂಥಾ ವಿಷಯದಿಂದ ಜನ್ಯವಾದ ನಾನು ನನ್ನದು ಎಂಬೋದು ಬಿಟ್ಟರೆ, ಬಂಧದದಶೆಯಿಂದ ಮುಕ್ತನಾಗ ತ್ತಾನೆ. ಹೀಗೆ ವಿಷ್ಣುರಹಸ್ಯದಲ್ಲಿ ಹೇಳಿದೆ.

ಜೀವನ ಹೃತ್ಕಮಲದಲ್ಲಿದ್ದ ಭಗವಂತನ ವಿಚಾರ

ಕರಣಿಕಾದಿಂದ ಯುಕ್ತವಾದಂಥ, ಅಷ್ಟಪತ್ರಉಳ್ಳಂಥ, ಶ್ವೇತವರ್ಣ ಉಳ್ಳಂಥಾ ಜೀವನ ಹೃತ್ಕಮಲವನ್ನು ಚಿಂತಿಸಬೇಕು. ಆ ಶ್ವೇತವರ್ಣ ಹೃತ್ಕರ್ಣಿಕೆಯಲ್ಲಿ ಆವಿಷ್ಟನಾದಂಥ ಆತ್ಮನಾಮಕ ನಾರಾಯಣನು. ಹೀಗೆ ದ್ವಿತಿಯಸ್ಕಂದ ತಾತ್ಪರ್ಯದಲ್ಲಿ ಹೇಳಿದೆ.

ಜೀವನ ಹೃನ್ಮಂಡಲದಲ್ಲಿ ಇರುತ್ತಾನೆಂಬ ಕಾರಣ ಹೃದಯನಾಮಕ ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ. ನರ ಸಿಂಹನಾಮಕ ಭಗವಂತನು ಸರ್ವದಾ ಜೀವನಲ್ಲಿ ಇರುತ್ತಾನೆ, ಎಂಬೋ ಕಾರಣ ಜೀವನಾಮಕಯೆಂದು ಕರಿಸಿಕೊಳ್ಳುತ್ತಾನೆ. ಅನಿರುದ್ಧನು ಜೀವನ ಅಂತಃಶರೀರದಲ್ಲಿ ವ್ಯಾಪ್ತನಾಗುತ್ತಾನೆ. (ಛಾಂದೋಗ್ಯ) ಸರ್ವ ಅಹಂಕಾ ರಗಳಿಗೆ ಭಂಜಕನಾಗಿ ಇದ್ದಾನೆಂಬ ಕಾರಣ ಅಹಂಕಾರಯಂತ ಕರಿಸಿಕೊ ಳ್ಳುತ್ತಾನೆ. ಜೀವನ ಅಂತಃಪ್ರೇರಕನಾದ ವಿಷ್ಣು, ಅಂತರಾತ್ಮ ಎಂದು ಕರೆಸಿಕೊಳ್ಳುತ್ತಾನೆ. ಈತನೇ ಜೀವನಿಂದ ಉಪಾಸ್ಯನು. ಸರ್ವದಾ ಇಷ್ಟವಾದಂಥಾತನು. ಸರ್ವದಾ ಜೀವನಲ್ಲಿ ಪರಮಾತ್ಮ ಸಂಚರಿಸುವಂಥಾ ತನು. (ಐತರೇಯದಲ್ಲಿ ಹೇಳಿದೆ) ಮಚ್ಛಾದಿ ಸಮಸ್ತವಾದಂಥ ವಿಷ್ಣು ವಿನ ಅವತಾರಗಳು ತತ್‌ಶಕ್ತಿಯಿಂದ ಯುಕ್ತವಾಗಿ ಜೀವನಸ್ವರೂಪ ದೇಹದವೊಳಗೆ ಉಪಾಸ್ಯನಾಗಿ ಇರುವಂಥಾವು ಎಂದು ಚಿಂತಿಸಬೇಕು. (ಛಾಂದೊಗ್ಯದಲ್ಲಿ ಹೇಳಿದೆ)

ಹೀಗೆ ಜೀವನಸ್ವರೂಪ ಶ್ವೇತವರ್ಣ ಅಷ್ಟಪತ್ರದಲ್ಲಿ ಜೀವನಸ್ವರೂಪ, ದೇಹದೊಳಗೆ ಉಪಾಸ್ಯಕನಾಗಿ ಇರುವಂಥಾ ರೂಪಗಳನ್ನು ಚಿಂತಿಸಿ, ತರು ವಾಯ ಇದೇ ಪ್ರಕಾರ ಜ್ಞಾನಿಯಾದಂಥವನು, ಸ್ಥೂಲ ಶರೀರ ರಕ್ತವರ್ಣದ ಹೃತ್ಕಮಲದಲ್ಲ ಧ್ಯಾನಮಾಡಬೇಕು.

ಸ್ಥೂಲಶರೀರ ರಕ್ತವರ್ಣ ಹೃತ್ಪದ್ಮ ಅಷ್ಟಪತ್ರದಲ್ಲಿ ಒಪ್ಪುವಂಥಾ, ಶತಸ್ತಂಭಮಂಟಪವು. ಮುತ್ತುಗಳಿಂದ ಒಪ್ಪುವಂಥ ನಾನಾ ರತ್ನಗಳಿಂದ ಪ್ರಕಾಶವಾದಂಥ ರಮಾತ್ಮಕವಾದಂಥ ಹೇಮಮಂಟಪವನ್ನು ಚಿಂತಿಸಬೇಕು. ಆ ಮಂಟಪದಲ್ಲಿ, ಹನ್ನೆರಡು ಮೂಲೆಯುಳ್ಳ ರವಿಮಂಡಲ, ಅದರ ಮೇಲೆ ಬಟುವಾದಂಥಾ ಚಂದ್ರಮಂಡಲವು ಆ ಚಂದ್ರಮಂಡಲದಿ ತ್ರಿಕೋಣ ಅಗ್ನಿಮಂಡಲವು ಪ್ರಕಾಶವಾದಂಥಾದ್ದು. ಅಲ್ಲಿ ಶೋಭಿತವಾದಂಥ ಶೇಷಪರಿಯಂಕವು ಆ ಪರಿಯಂಕದಲ್ಲಿ ರಮಾತ್ಮಕವಾದಂಥ ತಲ್ಪವನ್ನು ಚಿಂತಿಸಬೇಕು. ಅಲ್ಲಿ ವಿಚಿತ್ರವಾದಂಥ ರತ್ನಗಳಿಂದ ದಟಿತವಾದಂಥ ಆಸನವು, ಹಾಗೆ ರತ್ನಮಯವಾದಂಥ ತಲೆದಿಂಬವನ್ನು ಚಿಂತಿಸಬೇಕು. ಹೀಗೆ ತಂತ್ರಸಾರದಲ್ಲಿ ಹೇಳಿದೆ.

ಅಂಥಾದರಲ್ಲಿ ಇದ್ದ ಭಗವಂತನು, ಪರಮಾತ್ಮಯೆಂತ ಕರಿಸಿಕೊಳ್ಳುತ್ತಾನೆ. ಆತನೇವೇ ಸರ್ವಯೋಗ್ಯ ಜೀವರಿಂದ ಉಪಾಸ್ಯನಾದಂಥ ಬಿಂಬನಾದಂಥ ಸಾಕ್ಷಾತ್ ನಾರಾಯಣನು ಯೆಂತ ತಿಳಿಯಬೇಕು. ಹೀಗೆ ಛಾಂದೋಗ್ಯದಲ್ಲಿ ಹೇಳಿದೆ.

ಅಂಥ ನಾರಾಯಣನು, ಅನಾದಿಯಾದಂಥ ಸೃತಿಸಂಸ್ಥರಾದ ಲೋಕರುಗಳನ್ನು, ಕೃಪೆಯಿಂದ ನೋಡಿ ಇಂಥ ಸಂಸಾರ ಬಂಧನದಿಂದ ಮುಕ್ತರನ್ನ ಮಾಡಬೇಕುಯೆಂತೆಂದು, ತತ್ತದ್ಯೋಗ್ಯಪದವಿಯನ್ನು ಕೊಡೋದರಗೋಸ್ಕರ ಪರಮಸಮರ್ಥನಾದಂಥ ಪರಮಾತ್ಮನು, ಅವರ ಹೃದ್ಗುಹದಲ್ಲಿ ವ್ಯಕ್ತತಯಾ ಪ್ರವೇಶಮಾಡಿ ಅವರ ಯೋಗ್ಯತಾನುಸಾರ ಮಾಡಲ್ಪಟ್ಟಂಥ, ಶುಭಾಶುಭ ಕರ್ಮಗಳನ್ನು ಬಿಡಿಸಿ ಪಂಚಭೂತಾತ್ಮಕವಾದಂಥ, ಬಂಧನದಶೆಯಿಂದ ಮುಕ್ತನಮಾಡಿ ಅಂಥ ಜೀವರುಗಳಿಗೆ ಸ್ವರೂಪಾನಂದವನ್ನು ಕೊಡುತ್ತಾನೆ.

ಶ್ವೇತದ್ವೀಪದಲ್ಲಿ ಇದ್ದಂಥ ಪರಮಾತ್ಮನು ಜೀವನ ಹೃತ್ಕಮಲದಲ್ಲಿ ಇದ್ದಂಥಾತನು. ಶ್ವೇತದ್ವೀಪದಲ್ಲಿ ಇದ್ದಂಥ ಪರಮಾತ್ಮಗೆ, ಜೀವರುಗಳ ಹೃತ್ಕಮಲದಲ್ಲಿ ಇದ್ದಂಥಾ ಪರಮಾತ್ಮಗೆ, ಶರೀರದಲ್ಲಿ ಇದ್ದಂಥ ಪರಮಾತ್ಮಗೆ ಶರೀರದಲ್ಲಿದ್ದ ಸರ್ವನಾಡಿಗತ ಭಗವದ್ರೂಪಗಳಿಗೆ, ಬ್ರಹ್ಮಾಂಡದ ಹೊರಗೆ ಒಳಗೆ ಇದ್ದಂಥ ಸಮಸ್ತರೂಪಗಳಿಗೆ, ಜೀವನ ಹೃತ್ಕಮಲದಲ್ಲಿ ಇದ್ದಂಥಾ

ಆತ್ಮನಾಮಕ ಪರಮಾತ್ಮಗೆ, ಐಕ್ಯಚಿಂತಿಸೋಣವೆ ಉತ್ತಮವಾದಂಥ ಪೂಜೆಯೆಂದು ಅನಿಸಿಕೊಳ್ಳುತ್ತದೆ. ಹೀಗೆ ದ್ವಿತಿಯಸ್ಕಂದ ತಾತ್ಪರ್ಯದಲ್ಲಿ ಹೇಳಿದೆ.

ಹೃತ್ಪದ್ಮ ಕರ್ಣಿಕಾವಿಷ್ಟನಾದಂಥ ಬಿಂಬನಾಮಕ ಪರಮಾತ್ಮನಧ್ಯಾನ ಪ್ರಕಾರ-ಉದಯಿಸುವಂಥ ಸೂರ್ಯನ ಪ್ರಕಾಶವುಳ್ಳಂಥ ಸಚ್ಚಿದಾನಂದ ವಿಗ್ರಹನಾದಂಥಾತನು. ಪೀತಾಂಬರ ಧರಿಸಿದಂಥ, ಕ್ರೀಡಾದಿಗುಣವಿಶಿಷ್ಟನಾದಂಥ, ಶಂಖ-ಚಕ್ರ ಧರಿಸಿದಂಥ, ಬಂಗಾರದ (ಹಂಸ) ಪಕ್ಷಿವುಳ್ಳಂಥ, ಚಿಕ್ಕ ಚಿಕ್ಕ ಗಂಟೆಗಳುಳ್ಳಂಥ, ಕಾಲಂದಿಗಿವುಳ್ಳಂಥ, ಸುವರ್ಣಾಂಬರದಿಂದ ಒಪ್ಪುವಂಥ, ಉಡದಾರದಿಂದ ಪ್ರಕಾಶಿಸುವಂಥ, ಕಟಿತಟವುಳ್ಳಂಥ, ಬಂಗಾರದ ಕಡಗಗಳು, ಶಿರೋರತ್ನ, ಉಗ್ರಗಳು ಬಾಹುಪುರೀಯುವಗಳಿಂದ ಭೂಷಿತನಾದಂಥಾತನು. ಮುತ್ತು, ರತ್ನ, ಹವಳ ಇವುಗಳಿಂದ ಕೆತ್ತಿದ, ಬಂಗಾರ ಕವಚವುಳ್ಳಂಥಾತನು. ಶ್ರೀವತ್ಸಕೌಸ್ತುಭಗಳಿಂದ ಒಪ್ಪುವಂಥ ಉರಸ್ಥಳವುಳ್ಳಂಥಾ, ನಾನಾ ಭೂಷಣಗಳಿಂದ ಅಲಂಕೃತನಾದಂಥಾತನು. ಮುಗುಳುನಗಿಯಿಂದ ಯುಕ್ತನಾದಂಥಾತನು. ಮುಖಕಮಲವುಳ್ಳಂಥ, ಕಮಲದೋಪಾದಿ ವಿಸ್ತೃತವಾದಂಥ ಕಣ್ಣುಗಳುವುಳ್ಳಂಥ, ನೀಲವಾದಂಥ ಉಂಗುರು ಕೂದಲಗಳಿಂದ ಒಪ್ಪುವಂಥ, ಸುವರ್ಣ ಕಟಕವುಳ್ಳಂಥ, ಕರ್ಣಕುಂಡಲುವುಳ್ಳಂಥಾತನು. ಬ್ರಹ್ಮರುದ್ರಾದಿಗಳಿಂದ ಸೇವಿತನಾದಂಥ, ಸ್ವರೂಪಗಣ ಮಧ್ಯದಲ್ಲಿ ಇದ್ದಂಥ ಸರ್ವೋತ್ತಮನಾದಂಥ ಶ್ರೀ ನಾರಾಯಣನನ್ನು, ಆಪಾದ ಮೌಳಿಪರಿಯಂತರವಾಗಿ ಧ್ಯಾನಮಾಡಬೇಕು. ಹೀಗೆ ಪ್ರಣವ ಕಲ್ಪವೆಂಬೋ ಗ್ರಂಥದಲ್ಲಿ ಮತ್ತು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಲ್ಪಟ್ಟಿದೆ.

ಧ್ಯಾನ ಎರಡು ಪ್ರಕಾರ. ಖಂಡ ಅಖಂಡ ಭೇದದಿಂದ, ಒಂದು ಅವಯವಗಳನ್ನು ಬುದ್ಧಿಯಿಂದ ಧ್ಯಾನಮಾಡೋಣವು ಖಂಡ ಎಂದು ಕರೆಸಿಕೊಳ್ಳುತ್ತದೆ. ವಿಶಿಷ್ಟವಾದಂಥ ಪರಮಾತ್ಮನ ಸರ್ವಾಂಗಧ್ಯಾನ ಮಾಡೋಣ ಅಖಂಡವೆಂದು ಕರೆಸಿಕೊಳ್ಳುತ್ತದೆ. ಹೀಗೆ ದ್ವಿತಿಯಸ್ಕಂದದಲ್ಲಿ ಹೇಳಿದೆ.

ನಿರಂತರ ಧ್ಯಾನಯೋಗದಿಂದ ನಿಷ್ಪ್ರತ್ನ ಸಮಾಧಿಯೋಗವುಳ್ಳವನಾಗಿ ಅಥವಾ ಸಮಾಧಿರೂಢನಾಗಲಿ, ಜ್ಞಾನಿಯಾದಂಥಾವನು ಏಕಾಗ್ರ ಮನಸ್ಸು

ಜ್ಞವನಾಗಿ, ಆವಾಹನಾದಿ ಷೋಡಶೋಪಚಾರ ಪೂಜಾ, ಪ್ರಾಕೃತವಾದ ಅಥವಾ ಅಪ್ರಾಕೃತವಾದ, ಪೂಜಾಗಳಿಂದ ಚಿದಾನಂದನಾದ, ವಿಷ್ಣುರೂಪಾತ್ಮಕನಾದ ಪರಮಾತ್ಮನು ಹೃತ್ಕಮಲದಲ್ಲಿಪ್ಪಹರಿಯು ನಿರ್ದುಷ್ಟವಾದಂಥ ಮನಸ್ಸಿನಿಂದ ಲೌಕಿಕ ಅಲೌಕಿಕವಾದಂಥ ಮಹಾರಾಜೋಪಚಾರಗಳಿಂದ ಭಕ್ತಿಯಿಂದ ಅನ್ಯಮನಸ್ಕನಾಗದೇ ಪೂಜಿಸಬೇಕು. ಇದರಂತೆ ಬಹಿರದಲ್ಲಾದರು ಅರ್ಚಿಸಬೇಕು. ಪ್ರಣವಕಲ್ಪದಲ್ಲಿ ಹೇಳಿದೆ.

ಹೀಗೆ ಮಾನಸ ಪೂಜಾ ಮುಗಿದ ತರುವಾಯದಲ್ಲಿ ಕಾಯಿಕ ವಾಚಿಕದೀವ ಶಕ್ತ್ಯಾನುಸಾರವಾಗಿ ನಮಸ್ಕರಿಸಬೇಕು. ಹಾಗೆ ವಾಗೇಂದ್ರಿಯುಗಳಿಂದ ತನ್ನ ಶಕ್ತ್ಯಾನುಸಾರ ಬುದ್ಧ್ಯಾನುಸಾರವಾಗಿ, ಪರಮಾತ್ಮನ್ನ ಸ್ತೋತ್ರ ಮಾಡಬೇಕು. ಸಂಚಾರವೇ ಪರಮಾತ್ಮಗೆ ಪ್ರದಕ್ಷಣವು, ಶಯನವೇ ಪರಮಾತ್ಮಗೆ ನಮಸ್ಕಾರವು ಮಾತುಗಳಾಡುವದೇ ಪರಮಾತ್ಮನ ಸ್ತೋತ್ರ ರೂಪವಂಥಾದ್ದು. ಇಂಥ ಮಾನಸರೂಪವಾದಂಥ ಪೂಜೆಯು ಬಿಂಬರೂಪನಾದಂಥಾ ಪರಮಾತ್ಮನಲ್ಲಿ ಮುಖ್ಯ ಪ್ರಾಣನದ್ವಾರಾ ಸಮರ್ಪಣೆ ಮಾಡಬೇಕು ಮತ್ತು ಆ ಆ ಸ್ಥಾನಗಳಲ್ಲಿ ಹಾಗು ಆ ಆ ನಾಡಿಗಳಲ್ಲಿದ್ದಂಥಾ ಭಗವದ್ರೂಪಗಳನ್ನು ಉಪಸಂಹಾರ ರೂಪದಿಂದ ಚಿಂತಿಸಬೇಕು.

ಈ ಪ್ರಕಾರ ದಾವ ಪುರುಷನು ಅಪ್ರಮತ್ತನಾಗಿ ನಿರಂತರದಲ್ಲಿ ಪರಮಾತ್ಮನನ್ನು ಮನದಲ್ಲಿಟ್ಟು ಮಾನಸ ಪೂಜೆಯನ್ನು ಮಾಡುತ್ತಾನೋ ಅವನು ಜೀವನ್ಮುಕ್ತ ಯಂತ ಕರೆಸಿಕೊಳ್ಳುತ್ತಾನೆ ಸಂಶಯುವಿಲ್ಲವು. ಈ ಪ್ರಮೇಯಗಳು ಅಪರಿಮಿತವಾದಂಥವು. ಅವು ಗ್ರಂಥ ಬಾಹುಲ್ಯ ಭಯದಿಂದ ಹೇಳಲ್ಪಡಲಿಲ್ಲ. ಸರ್ವದಾ ಧ್ಯಾನ ಮಾಡಲಿಕ್ಕೆ ಬಾಹೋ ಕಾರಣ ಸಂಕೋಚವಾಗಿ ಸಂಗ್ರಹ ಮಾಡಿ ಹೇಳಲ್ಪಟ್ಟಿತು. ಜ್ಞಾನದಿಂದ ಆಗಲಿ ಅಜ್ಞಾನದಿಂದ ಆಗಲಿ ನನ್ನಿಂದ ಹೇಳಲ್ಪಟ್ಟಂಥಾದ್ದು. ಯುಕ್ತವೋ ಅಯುಕ್ತವೋ ಸಜ್ಜನರಾದಂಥವರು ಸ್ವೀಕಾರ ಮಾಡಲಿ, ಹೀಗೆ ತಿಳಕೊಂಡು ಸರ್ವದಾ ಧ್ಯಾನನುಷ್ಠಾನ ಮಾಡೋಣದರಿಂದ ಮೋಕ್ಷಾದಿ ಚತುರ್ವಿಧ ಪುರುಷಾರ್ಥವಾಗುತ್ತದೆ. ಇತಿ ಮಂಗಳಂ.

ಐಜಿ ವೆಂಕಟ ಕುಮಾರಾರ್ಯರ ರಾಮಾರ್ಯರು ಮಾಡಿದರು.

ಇತಿಮಾನಸಪೂಜಾ ಸಮಾಪ್ತ. ಶ್ರೀಮಧ್ವೇಶಾರ್ಪಣಮಸ್ತು ಗಾಲವಪುರಿ,

ತಿದ್ದುಪಡಿ

ಪುಟ	ಸಾಲು	ತಪ್ಪು	ಒಪ್ಪು
೯	೧೧	ಆದಕ	ಆದರ
೧೨	೧೦	ಕನಯಲಿ	ಕನ್ಯೆಯಲಿ
೩೦	೫	ಒಲಿಮೂರುತಿ	ಬಲಿಮೂರುತಿ
೩೫	೨೧	ಪದು ಸ್ವಲ್ಪ	ಪದುಮ ಸ್ವಲ್ಪ
೩೬	೨೬	ದಾರಕ್ಕೆ	ದ್ವಾರಕ್ಕೆ
೩೭	೨೬	ಸಪುತ್ರಋಷಿ	ಸಪುತಋಷಿ
೩೮	೧೧	ಸತ್ಕಾರಾಚರಿಸಿದರು	ಸತ್ಕರ್ಮಾಚರಿಸಿದರು
೭೪	೨೭	ಬಿದಬಿಡು	ಬಿಡುಬಿಡು
೭೪	೧೩	ಗಳೈಶರ್ಯ	ಗಳೈಶ್ವರ್ಯ
೧೦೨	೨೬	ವಿಸಕದೆ	ಮಿಸುಕದೆ
೧೦೫	೧೮	ಲಿಲೇ	ಲೀಲೆ
೧೩೭	೭	ಯದು:ಕುಲೋತ್ತಮು	ಯದುಕುಲೋತ್ತಮ
೧೯೭	೧೩	ಶ್ರೀಥರ	ಶ್ರೀಧರ
೨೦೦	೨೫	ಭ್ರಭು	ಭ್ರಮೆ
೨೦೩	೧೮	ಬಿಂಧು	ಬಂಧು
೨೧೦	೩	ದಿಕ್ಕಿಸಲಿ	ದ್ವಿದಿಕ್ಕಿನಲಿ
೨೧೧	೧೯	ಪ್ತನ್ನೆ	ಪ್ರಶ್ನೆ
೨೧೪	೯	ಕುಂಡಲೇಷ	ಕುಂಡಲೇಶೇಷ
೨೧೬	೧೮	ಸ್ವಾರ್ದ	ಸ್ವಾರ್ಥ
೨೧೭	೧೯	ತರ್ಕ	ತ್ವರ್ಕ
೨೧೮	೧೦	ಊರ್ಚಾಯ	ಊರ್ಜಾಯ
೨೧೮	೨೦	ಉಧಕೇ	ಉದಕೇ
೨೧೮	೨೧	ಅಥರೇ	ಅಧರೇ
೨೧೯	೬	ಹೃದಯಾಮ	ಹೃದಯಾಯ
೨೧೯	೧೧	ಈಶಾಯ	ಏಕಾತ್ಮನೆ

ಪುಟ	ಸಾಲು	ತಪ್ಪು	ಒಪ್ಪು
೨೧೯	೧೧	ಐರ್ಷ್ರಾಯು	ಐರಸಾಯು
೨೨೧	೨೫	ನಾಸಿಕಾ	ನಾಶಿಕಾ
೨೨೨	೩	ಸನರ್ಭ	ಸಗರ್ಭ
೨೨೬	೧೪	ಆಹರ್ನಿಯಲ್ಲಿ	ಆಹರ್ನಿಸಿಯಲ್ಲಿ
೨೩೩	೧೯	ಧಾತ್ವಾ	ಧ್ಯಾತ್ವಾ
೨೩೩	೨೫	ನಾರಾಯಣನಾಮಯಂ	ನಾರಾಯಣಮನಾಮಯಂ
೨೩೪	೭	ತೇಜಸಾನುಪಸಂಪದಾ	ತೇಜಸಾನುಪಮಂ ಸದಾ
೨೩೪	೧೧	ಕಂದರಮ್	ಕಂಧರಮ್
೨೩೪	೧೬	ದುಃಖಶಯನಂ	ದುಃಖಶನುನಂ
೨೩೭	೨೬	ಸರ್ವಕ್ರ್ಯನಾದ	ಸರ್ವಕರ್ತೃನಾದ
೨೩೯	೯	ಏಸು ವರ್ವ	ಏಸು ಪರ್ವ
೨೩೯	೨೭	ಪನಾರ್ಥವಾಗಿ	ಜ್ಞಾಪನಾರ್ಥವಾಗಿ
೨೪೩	೨೧	ಈನುಸಾರಿ	ಇಚ್ಛಾನುಸಾರಿ
೨೪೩	೨೫	ಚಂದ	ಚಂದ್ರ
೨೪೫	೨೦	ವಾಯುನಲ್ಲಿ	ಪಾಯುನಲ್ಲಿ
೨೪೯	೬	ಅಸ್ವ	ಅಶ್ವ
೨೪೯	೧೧	ಒಟು	ಬಟು
೨೫೦	೨೬	ಪೂರ್ವದಿ	ಪೂರ್ವಾದಿ
೨೫೧	೨೬	ಮಾನವ	ಮಾನದ
೨೫೯	೨೧	ಹರಾಖ್ಯ	ದಹರಾಖ್ಯ
೨೬೪	೨೬	ನಿಷ್ಪ್ರತ್ನ	ನಿಷ್ಪ್ರಯತ್ನ
೨೬೪	೨೭	ಜ್ಞಾ ಯಾದಂಥಾತ	ಜ್ಞಾನಿಯಾದಂಥಾತ

ಸುಮಾರು ೧॥ ತಿಂಗಳು ಪ್ರೆಸಿನಲ್ಲಿ ಕುಳಿತು ಪ್ರೂಫ ನೋಡಲು ೨೦೦ ಪುಟದಲ್ಲಿ ೧೩ ತಪ್ಪುಗಳಾದವು. ಮುಂದೆ ಎಲ್ಲ ಭಾರ ಪ್ರೆಸಿನವರಿಗೊಪ್ಪಿಸಲು, ೬೫ ಪುಟದಲ್ಲಿ ಬಹು ತಪ್ಪು ಹೊರಟಿರುವವು. ಇದು ದೃಷ್ಟಿದೋಷ ಕ್ಷಮಿಸಿ ಈ ಒಪ್ಪೋಲೆಯಂತೆ ತಿದ್ದಿ ಓದುವದಾಗಿ ವಿನಂತಿ.

ಶ್ರೀ ವಿಜಯದಾಸರ ಗುಟ್ಟಿನ ವಿವರ.

ಹಿಂದೆ ಪ್ರಕಟಿಸಿದಂತೆ ಒಬ್ಬರೂ ಉತ್ತರ ಬರೆಯಲಿಲ್ಲ ಸಾಧನ ೨ನೇ ಭಾಗ ಸುಳಾದಿ ೭೫, ಆರಾದರೂ ಹಳಿಯಲಿ, ಎಂಬುವ ಸುಳಾದಿ [ಹರಿಭಕ್ತರ ನಿಂದಾವರ್ಜಕ] ಈ ಸುಳಾದಿ ಅಟ್ಟತಾಳದಲ್ಲಿ ಹರಿ ಭಕ್ತರ ನಿಂದಾವರ್ಜನ ಕೆಲವು ಅಪವಾದಗಳನ್ನು ಹೇಳಿರುತ್ತಾರೆ ಆ ಜೀವರು ಎಂಥವರೆಂದರೆ, ಮುಂದೆ ಆದಿತಾಳದಲ್ಲಿ ಶ್ರೀ ಹನುಮದವತಾರವಾದ ಮಧ್ವ ಮತದಲಿ ಪುಟ್ಟಿ, ಎಲ್ಲ ಕಾಲದಲ್ಲಿ ಉತ್ತಮರ ದ್ರೋಹವನು ಮಾಡುತ್ತ ತಿರುಗುತ್ತಿರುವರು. ಇವರು ಉತ್ತಮರೇನು ? ಅಲ್ಲ. ಕುಹಕ ತಾಮಸಿಗ ಳಾದ ದೈತ್ಯರಿಗೆ ಪೂರ್ವಜನ್ಮದ ಪುಣ್ಯದಿಂದ, ಉತ್ತಮರ ನಿಜ ಗೃಹದಲಿ ಪುಟ್ಟಿ ವೈಷ್ಣವರೆಂದೆನಿಸಿ "ರೂಹ ತೋರಿಸಿ" ಮೇಲೆ ವೈಷ್ಣವಾಭಾಸಕ ಚಿನ್ಹ ತೋರುತ್ತ ತಮ್ಮ ನಿಜವಾದ ದುಷ್ಟಸ್ವಭಾವ ತೊಲಗದಲೇ, ಉತ್ತಮರ ದ್ರೋಹಮಾಡುವರು ಈ ದ್ರೋಹಿಗಳಿಗೆ ಎಂದಿಗಾದರೂ ಉತ್ತಮಗತಿ ಯಾಗಬಲ್ಲದೆ ? ಎಂದಿಗೂ ಇಲ್ಲ. ಹೇಗೆಂದರೆ, ಕಬ್ಬಿಣಕ್ಕೆ ಬಂಗಾರ ಕಾಸಿ ಬಂಗಾರ ವರಿಕೊಟ್ಟರೆ, ಬಹುದಿವಸನಿಲ್ಲದೆ ಕೆಲಕಾಲ ಮೇಲೆ ಹಾರು ವದು. ದೂರದಿಂದ ನೋಡುವವರಿಗೆ ಬಂಗಾರದಂತೆ ಮೋಹಪುಟ್ಟಿಸುತ್ತದೆ ಹೊರ್ತಾಗಿ, ಆ ಲೋಹ ಎಂದಿಗಾದರೂ ಬಂಗಾರವಾದೀತೆ ? ಕೆಲ ದಿನದ ಮೇಲೆ ಮೇಲಿನ ಬಂಗಾರ ನಿಲ್ಲದೇ ಹೋಗಿ ಕಬ್ಬಿಣಕ್ಕೆ ಕಬ್ಬಿಣವೇ ಉಳಿ ಯುವದು. ಈ ಲೋಹದಂತೆ ಕುಹಕರ ಸ್ವಭಾವ. ಪೂರ್ವಪುಣ್ಯದಿಂದ ಬ್ರಾಹ್ಮಣ ಜನ್ಮ ಬಂದರೆ ನಿಜಸ್ವಭಾವ ಎಂದಿಗೂ ತೊಲಗಬಲ್ಲದೇ? ಈ ಕಾರಣ ಈ ದ್ರೋಹಿಗಳು ಉತ್ತಮ ಚಿನ್ಹ ಧರಿಸಿ ವೈಷ್ಣವರಾದಾಗ್ಯೂ ಅವರ ನಿಜವಾಗಿ ಅನ್ಯಥಾ ಮತಿಗಳು. ೧. ಮಿಥ್ಯಾಜ್ಞಾನಿಗಳು ೨. ಕಾಮಚಾರಿಗಳು ೩. ನಿಂದಕರು ೪. ಕ್ರೋಧಯುಕ್ತವಾದ ವರು ೫. ಬಚ್ಚಲ ಗುಂಡಿಯ ನೀರಿನಂತೆ ದುರ್ಗಂಧವಾಸನೆ ಅರಸಿಕರು ೬. ವಿಷಯಗಳನ್ನು ತಿಳಿಯದೇ ಮನಬಂದಂತೆ ತೋಡುವರು ೭. ವಂಚ ಕರು ೮ ದಾಸಿಯ ಮಕ್ಕಳೆಂದು ವರ್ಣಿಸಿರುವರು. ಹೇಗೆಂದರೆ,

೧ ತೊಗಲ ತಿತ್ತಿಯಲ್ಲಿ ತರಲಾಗದು ಉದಕ, "ಪತಿತನ ಕಪಾ ಲದೊಳು ಭಾಗೀರಥಿಯ ಜಲವಿರೆ ಪೇಯವೆನಿಪುದೆ" ಎಂಬಂತೆ ಅನ್ಯಥಾ ಮತಿಯುಳ್ಳ ಮಿಥ್ಯಾಜ್ಞಾನಿಗಳಿಂದ, ಉದಕ ದ್ರವರೂಪ ಹರಿಯುವಂಥಾದು.

ಜ್ಞಾನವು ಪ್ರವಾಹತ್ವೇನ ದ್ರವಿಸುವಂಥಾ ಚಲನವಸ್ತು. ಇಂಥ ಜ್ಞಾನವನ್ನು ಮಿಥ್ಯಾಜ್ಞಾನಿಗಳಿಂದ ಸಂಪಾದನೆ ಮಾಡಬಾರದು. "ತೃತೀಯ ಅಪರಾಧ ಅಯೋಗ್ಯರಲ್ಲ್ಯುಪದೇಶ" ವ್ಯಾಸರಾಜರ ವಚನದಂತೆ ಅಯೋಗ್ಯರಲ್ಲಿ ಉಪದೇಶಕೊಳಬಾರದು.

೨ **ಬೊಗಳಲಾಗದು ನಮ್ಮ ನಾಯಿಯ ಸಂಗಡ,** ನಮ್ಮಮನೆಯ ಮುಂದೆ ಬಿದ್ದಿರುವದು. ಕಾಮಚಾರಿ, [ಬೆದೆಯಾಗಿ] ಸ್ವೇಚ್ಛಾಮನಬಂದಂತೆ ಹೆಣ್ಣುನಾಯಿಯು ಸಂಗಡ ಲಜ್ಜೆ ಇಲ್ಲದೆ ವಿಹಾರ ಮಾಡುವ ನಾಯಿಯು ಇನ್ನೊಂದು ನಾಯಿಯ ಸಂಗಡ ಬಗಳುವಂತೆ "ಶಾಸ್ತ್ರಮರ್ಯಾದಾ ಜ್ಞಾನವಿಲ್ಲದೆ ಮನಬಂದಂತೆ ಪ್ರವರ್ತಿಸುವ ಸ್ವೇರಣಿಯಂತಿರುವ, ಅನ್ಯಥಾ ಮತಿಗಳ ಸಂಗಡ ಅವರಂತೆ ಬೊಗಳಾಡಿದರೆ ತತ್ವಜ್ಞಾನಕ್ಕೆ ದಾರ್ಢ್ಯ, ಸಾರ್ಥಕ್ಯವಾಗುವದೆ ?

೩ **ಹಗೆ ತಾಳಲಾಗದು ನಮ್ಮ ಹಂದಿಯ ಕೂಡ,** ಹಂದಿಯು, ಊರಲ್ಲಿ ಮನೆಯ ಮುಂದಿರುವ ಕಶ್ಮಲಮಲಾದಿಗಳನ್ನು ತಿಂದು ಸ್ವಚ್ಛ ಮಾಡುವದು. ಇಂಥ ಹಂದಿಸಮಾನ ನಿಂದಕನು, ಸಜ್ಜನರ ದೋಷಗಳನ್ನು ತನ್ನ ನಾಲಿಗೆಯಿಂದ ನೆಕ್ಕಿ ದೋಷಗಳನ್ನು ಕಳೆಯುವನು. ಇಂತಹ ನಿಂದಕನ ಸಂಗಡ ವೈರತ್ವ [ಹಗೆ] ತಾಳಲಾಗದು. ಏಕೆಂದರೆ "ನಿಂದಕಾಚೇ ಘರಿ ಅಸಾವೆ ಸೇಜಾರಿ" ಮತ್ತು ನಿಂದಕರು ಇರಬೇಕು ಸಜ್ಜನರಿಗೆ ಎಂದು ಜ್ಞಾನಿಗಳ ವಚನ.

೪ **ಜಗಳಾಡಲಾಗದು ಊರ ಕತ್ತೆಯಕೂಡ,** ಕತ್ತೆಯಂದರೆ ಕ್ರೋಧವೆಂದು, ಅನೇಕ ಕಡಿಗೆ ಪುರಾಣಾದಿಗಳಲ್ಲಿ ಬಂದದೆ. ಕಾಮಚಾರಿ ಸ್ವೇರಣಿ ಮನಬಂದಂತೆ ವರ್ತಿಪ ಅನ್ಯಥಾಮತಿಗಳ ಕೂಡ ವಾದ ಮಾಡಿದರೇನು ? ತಿಳಿಯದೇ ಅವರ ಕೂಡ ಜಗಳಾಡಿದಂತಾಗುವದು. ಕೊನೆಗೆ ಉತ್ತರ ಸರಿಯಾಗಿ ತಿಳಿಯದ, ಮೂಢಮತಿ ಕತ್ತೆ "ಶೇಷಂಕೋಪೇನ ಪೂರಯೇತ್" ಸಿಟ್ಟಿಗೆದ್ದು ಮತ್ತು ಹೆಚ್ಚಿಗೆ ಕ್ರೋಧವಶವಾಗಿ ಜಗಳಾಡುವರು. ಇಂಥ ಜಡಮತಿಗಳಾದ ಕ್ರೋಧಯುಕ್ತ ಊರ ಕತ್ತೆಯ ಸಂಗಡ ಜಗಳಾಡಬಾರದು.

೫ ತಗೆಯಲಾಗದು ನಮ್ಮ ಹಿತ್ತಲೊಳಿದ್ದದ್ದು, [ಅ] ಮನೆಯ ಹಿಂಭಾಗದಲ್ಲಿ ಇರುವದೇನು ? ಬಚ್ಚಲಮೋರಿಯ ನೀರು ನಿಲ್ಲುವ ಸ್ಥಳ, ಬಚ್ಚಲಗುಂಡಿ ಅಥವಾ ಕಸಕುಪ್ಪಿ ಹಾಕುವ ತಿಪ್ಪಿ, ಇವೆರಡು ಪ್ರತಿನಿತ್ಯ ತೆಗದು ಸ್ವಚ್ಛಮಾಡಿದರೂ ಮರುದಿನ, ಆ ಕೊಳಚುನೀರು, ಕಸ ಪುನಃ ಹೇಗೆ ಸೇರುತ್ತ ತಗೆಯಲು ಸಾಧ್ಯವಿಲ್ಲವೋ, ಅದರಂತೆ ನಮ್ಮ [ಹಿತ್ತಲ] ಸ್ಥೂಲ ಎಡ ಪೃಷ್ಟಭಾಗದಲ್ಲಿ ದೈತ್ಯಾದಿಗಳು ಸೇರಿ ವಾಸಮಾಡಿ ಕುಹಕ ಬುದ್ಧಿ ಪ್ರೇರಕರನ್ನು ಸರ್ವಥಾ ಹೊರಗೆ ತೆಗೆದು ಬಿಸಾಡಿ ನೂಕಲಾಗದು. ಪ್ರತಿನಿತ್ಯ ಪ್ರತಿಕಾಲ ಪಾಪಪುರುಷ ವಿಸರ್ಜನೆಯಂತೆ, [ಬ] ಮತ್ತು ತಮೋಯೋಗ್ಯರಾದ ಅವರ ಮಿಥ್ಯಾಜ್ಞಾನವು ಸರ್ವಥಾ ವಿಚ್ಛೇದಮಾಡಲಾಗದು. ಜೀವನ ತ್ರೈವಿಧ್ಯ ಅವರ ಮತಿಯು ಪ್ರವಾಹತಃ ನಿತ್ಯವಾದುದರಿಂದ ಸರ್ವಥಾ ಉಚ್ಛೇದಿಸಲಿಕ್ಕೆ ಅಶಕ್ಯ. ಈ ನಿರಾಕರಣ ವ್ಯರ್ಥವೇ ಹೇಗೆಂದರೆ, ಸಾಂಖ್ಯಾದಿ ವಿಧ್ಯಾಸಮಯಗಳನ್ನು ಉಚ್ಛೇದಿಸಲು ಪ್ರಯತ್ನವಿಲ್ಲ. ಕೆಲ ಪುರುಷರಿಗೆ, ಆಗಮಸಹಿತವಾದ ಯುಕ್ತಿಗಳಿಂದ ನಿಜವಾದ ತತ್ವಜ್ಞಾನ ಪುಟ್ಟಿಸಿ, ಆ ಕುಶಾಸ್ತ್ರಗಳಿಂದುಂಟಾದ ಅಜ್ಞಾನ, ಸಂಶಯ ವಿಷಯಗಳನ್ನು ತೆಗೆಯಲಿಕ್ಕೆ ಕುಸಮಯಗಳ ದೂರ ಮಾಡಲು ಪ್ರಯತ್ನವು. (ಅನುವ್ಯಾಖ್ಯಾನ ಸುಧಾದಲ್ಲಿ ಈ ವಿಷಯ ತಿಳಿದವರು ನೋಡಿ ಆನಂದಪಡಬಹುದು.)

ಆ ಕುಬುದ್ಧಿಗರ ನೈಜವಾದ ಮಿಥ್ಯಾಜ್ಞಾನವು ನೈಜವಾದುದು ತೆಗೆಯಲು ಶಕ್ಯವಿಲ್ಲ. ತಿಪ್ಪಿಯು ಮತ್ತು ಬಚ್ಚಲ ಗುಂಡಿಯ ನೀರು, ಕಶ್ಮಲ ದುರ್ವಾಸನೆಯು ಹೋಗಲು ಆಗಾಗ್ಗ ತೆಗೆದು ಶುದ್ಧಪಡಿಸಿ ನಮಗೆ ಆ ದುರ್ವಾಸನೆ ಬಾರದಂತೆ ಮಾಡುವದು ನಮ್ಮ ಧರ್ಮ. ಕಾರಣ ನಮ್ಮ ಹಿತ್ತಲೊಳಿದ್ದ ಇಂಥ ಕಶ್ಮಲವನ್ನು ಸರ್ವಥಾ ತೆಗೆಯಲಾಗದು.

೬ ಅಗಳಲಾಗದು ನಮ್ಮ ಹೆಗ್ಗಣಸಕೊಡ, ಮನೆಯಲ್ಲಿ ಹೆಗ್ಗಣ ಸೇರಿ ರಾತ್ರಿ ಗುರು ಗುರು ಎನ್ನುತ್ತ, ಏನೂ ಕಾರಣವಿಲ್ಲದೆ ನಿರರ್ಥಕವಾಗಿ ತೋಡಿ ತೋಡಿ ಮಣ್ಣೊಟ್ಟಿ ಮನೆ ಹಾಳುಮಾಡಿ ಬಿಟ್ಟರೆ ಆ ಹೆಗ್ಗಣದ ಸಂಗಡ ಮನೆಯ ಎಜಮಾನ ತೋಡಿ ಮತ್ತು ಹೆಚ್ಚಿಗೆ ಮಣ್ಣುಕುಪ್ಪೆ ಏರಿಸುವರೇನು ? ಇಲ್ಲ. ಆದರ ನಿವಾರಣಾರ್ಥವಾಗಿ ಬಲೆಯನ್ನಿಟ್ಟು, ಹೆಗ್ಗಣ

ವನ್ನು ಹಿಡಿದು ಪ್ರಾಣದಿಂದೇ ಹೊಡಿಯುವರು. ತೆಗೆದುಕೊಂಡು ದೂರ ಬಿಸಾಟುವರು. ಇದರಂತೆ ಪಂಚಭೇದ ತರತಮುವನ್ನರಿಯದ ಅನ್ಯಥಾ ಮತಿಗಳ ಗಣವು ಸೃಷ್ಟಿಯಲ್ಲಿ ಬಹಳವಾಗಿರುವದು. "ಅಸುರ ಜನರೇ ಬಹಳ ವಶವಲ್ಲ ಕಲಿಯಬಾಧೆ" ಎಂಬುವ ಆರ್ಯರ ವಚನದಂತೆ 'ಹೆಗ್ಗಣ, ದೈತ್ಯಾದಿಗಳ ಗಣವು ದೊಡ್ಡದಾಗಿರುವ ಕಾರಣ ಅವರ ಗಣಕ್ಕೆ 'ಹೆಗ್ಗಣ, ವೆಂದು ಮತ್ತು ಪ್ರಸಿದ್ಧಪ್ರಾಣಿಯಾದ ಹೆಗ್ಗಣದಂತೆ ಅವರ ನೈಜಗುಣವು ಶಾಸ್ತ್ರಮರ್ಮ ವಿಷಯ ಸಂಬಂಧ ಪ್ರಯೋಜನಗಳನ್ನರಿಯದೇ, ದೊಡ್ಡ ದೊಡ್ಡ ಪ್ರಮೇಯಗಳಿಂದ ಜನರನ್ನು ಮೋಸಗೊಳಿಸುತ್ತ, ಗುರು ಗುರು ಗುಟ್ಟುತ್ತ ಸಿಟ್ಟಿನಿಂದ ಪರರನ್ನು ಲೆಕ್ಕಿಸದೆ ಅಜ್ಞಾನವೆಂಬ (ರಾತ್ರಿ) ಅನ್ಯಥಾ ಮತಿಯುಳ್ಳವರಾಗಿ ತಮ್ಮ ಪೂರ್ವಜರ ಸಿರಾಧಾರವಾದ ದೊಡ್ಡ ವಾಕ್ಯ ಗಳೆಂಬ ಹೊತ್ತಿಗೆಗಳ ವಿಷಯುವನ್ನೇ ಪುನಃಪುನಃ ಅದನ್ನೇ ತೋಡಿ ಅಗ ಳುವರು. ಹೆಗ್ಗಣ ಗುಣವುಳ್ಳವರು. ಇಂಥ ನಮ್ಮ ಮನೆಯಲ್ಲಿ ತೋಡುವ ಹೆಗ್ಗಣನ ಕೂಡ ನಿರರ್ಥಕವಾಗಿ ಶಾಸ್ತ್ರಾದಿ ವಿಷಯಗಳಲ್ಲಿ ವಾದಮಾಡುತ್ತ ಅಗಳಿ ತೋಡಬಾರದು.

೭ **ನಗಲಾಗದು ನಮ್ಮ ಕಾಗೆಯ ಸಂಗಡ,** ಕಾಗೆ ಪಕ್ಷಿಗಳಲ್ಲಿ ನಿಂದ್ಯವಾದ ಪ್ರಾಣಿ, ಅದಕ್ಕೆ ಒಂದೇ ಕಣ್ಣು, ಏಕದೃಷ್ಟಿಯುಳ್ಳದ್ದು. ಮೇಲಾಗಿ ವಂಚಕತನ, ಕಪಟಗುಣವು ಕಾಗೆಯ ಕರ್ರನ ಕಪ್ಪು ತಮೋ ಗುಣ ಮೇಲೆ ತೋರುತ್ತದೆ. ಹೀಗೆ ಅಂತಃ ಬಹಿಃ ಏಕ ದೃಷ್ಟಿಯುಳ್ಳ ಅನ್ಯಥಾಮತಿಗಳು ಮಿಥ್ಯಾಜ್ಞಾನವುಳ್ಳವರು, ಜೀವ ಪರಮಾತ್ಮನೆಂಬ ಏಕ ದೃಷ್ಟಿ, ಒಳಗೊಂದು ಹೊರಗೊಂದು ಮಾತು, ವಂಚಕತ್ವ, ದುಷ್ಟ ಸ್ವಭಾವ ಗುಣ, ಪ್ರಪಂಚವಾದ ಬಹಿರಂಗದಲ್ಲಿ ವ್ಯವಹಾರಿಕ ಭೇದ, ಪರಮಾರ್ಥಿಕ, ಸಕಲಮಿಥ್ಯಾ, ಜೀವ ಈಶನು ಒಂದೆಂಬ ಈ ವಂಚಕತ್ವ ಅಲ್ಲದೆ ಶಾಸ್ತ್ರಾ ದಿಗಳಲ್ಲಿ ವಿಪ್ರಲಂಭತ್ವಾದಿ ಗುಣವು. ಇಂಥ ಕಾಗೆ ಗುಣವುಳ್ಳವರ ಸಂಗಡ ಸತ್ತತ್ವವಾದ ತರತಮ ಪಂಚಭೇದ ಭಾವವುಳ್ಳ ಅನೇಕ ಪ್ರಮೇಯಗಳನ್ನು ಪೇಳುತ್ತ ಆನಂದದಿಂದ ನಗೆ ಕೆಲೆದರೆ ವಿರಸವೆ ಸರಿ. ಕಾರಣ ನಮ್ಮ ಕಾಗೆಯ ಸಂಗಡ ನಗಬಾರದೆಂದು ಪೇಳಿದ್ದಾರೆ.

೮ **ಪೊಗಳಲಾಗದು ನಮ್ಮ ತೊತ್ತಿನ ಮಕ್ಕಳ.** ತೊತ್ತು=ದಾಸಿ, ಸೇವಕಳು. ವೇಶ್ಯಾ ಮಕ್ಕಳನ್ನು ಯಾರಾದರೂ ಹೊಗಳಿ, ಮಾನಮಾಡುವರೇನು ? ಇಲ್ಲ. ದುಷ್ಟದೈತ್ಯಾದಿಗಳ ಉತ್ಪತ್ತಿ ಸಹ ವಿವಶಾ ನಾರಿಯರಲ್ಲಿ ಜನಿಸಿದಂತೆ ಪುರಾಣ ವಾಕ್ಯಗಳುಂಟು.

೧ ಕಲಿ ಸಂಕರನ ಪುಟ್ಟು ಕುಂಬಳಕಾಯಿಯೆ ಗುರುತು |
ಕಲಿಯುಗದೊಳಗೆ ಸೋಽಹಂ ಎಂದು ತಿರುಗಿ ||

೨ ಚರಣಾಡಿ ಎಂದೆಂಬೊ ಪುರದೊಳಗೆ ಸಂಕರ ಜನಿಸಿದ |
ಪರಿಯನು ಎಲ್ಲ ಅರಿತದೆ ಕಾಣೊ ಮರೆಪದೆ ಇಲ್ಲ ||

೩ ಚರಣಾಡಿ ಎಂಬೋ ಗ್ರಾಮದಲಿ ವಿವಶಳಾಗಿ ಚರಿಸುವ ಸ್ತ್ರೀಯಳಲ್ಲಿ ಜನಿಸಿ ಬಂದು ದುರುಳಸಂಕರನೆಂಬ ನಾಮದಲ್ಲಿ | ಧರೆಯೊಳಗೆ ಮೆರೆದು ||

ಇಂಥ ದಾಸಿ ಮಕ್ಕಳು ಅಜ್ಞಾನ ಸಂತತಿಯುಳ್ಳ ಮಕ್ಕಳನ್ನು ಸ್ತೋತ್ರ ಮಾಡಕೂಡದು.

" ಆದ್ಯ ಅಪರಾಧ ಮಿಥ್ಯಾಜ್ಞಾನ | ದ್ವಿತಿಯ ಅಪರಾಧ ಹರಿಯ ವಿಸ್ಮರಣೆ | ತೃತಿಯ ಅಪರಾಧ ಅಯೋಗ್ಯರಲ್ಲ್ಯುಪದೇಶ | ಚತುರ್ಥ ಅಪರಾಧ ಸೋತ್ತ್ರಮರ ದ್ರೋಹ | ಇನಿತೀಪರಾಧ ಕ್ಷಮಿಸೋ ಸಿರಿಕೃಷ್ಣ ||

ಉಗಾಭೋಗವಲ್ಲದೇ, ಇದೇ ಸುಳಾದಿ ಆದಿತಾಳದಲ್ಲಿ ಆ ಜನರು ಯಾರು ಎಂಬುದನ್ನು ದಾಸರೆ ಚನ್ನಾಗಿ ವಿವರಿಸಿರುವರು. ಆದರ ಮೇಲಿಂದಲೇ ಈ ಅಟ್ಟತಾಳದ ಅರ್ಥವಿವರಣೆಯಾಗುತ್ತದೆ. ಜ್ಞಾನಿಗಳಾದವರು ಇದರಕಿಂತಲೂ ಬೇರೆ ಅರ್ಥವನ್ನು ತಿಳಿಸಿದರೆ ಉಪಕಾರವಾಗುತ್ತದೆ.

ತೀರ್ಥಕ್ಷೇತ್ರಾದಿ ಸುಳಾದಿಯಲ್ಲಿ ಪ್ರಕಟಿಸಿದಂತೆ, " ಭೇದ ಪೇಳುವನೇ ತಮೋಯೋಗ್ಯ ಈ ಪದದ ಅರ್ಥ, ಕೆಲವರು ಪ್ರಶ್ನಾರ್ಥಕವಾಗಿಯೂ ಮತ್ತು ಶ್ರೀ. ವೇ. ಮೋಕಾ ಸುಬ್ಬಣಾಚಾರ್ಯ (ಪಾಪಲಗಿರಿ) ಬಳ್ಳಾರಿ ಇವರು ವಿಶದವಾಗಿ ಬರೆದು ಕಳಿಸಿರುವರು. ಅದನ್ನು ಮುಂದೆ ಯಥಾನುಕೂಲ ಪ್ರಕಟಿಸುವೆವು.

ಸಂಚಾಲಕ ಮಂಡಲ,

ಹನುಮಂತರಾವ ಗೊರಾಬಾಳ